# ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ

ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾ ಪ್ರಬಂಧ

ಸಂಶೋಧಕರು
**ರಾಧಾಮಣಿ ಟಿ ಆರ್**

ಮಾರ್ಗದರ್ಶಕರು
**ಡಾ ಕೆ ಎಂ ಮೇತ್ರಿ**
ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಫೆಬ್ರವರಿ ೨೦೧೭

# ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ

ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾ ಪ್ರಬಂಧ



ಸಂಶೋಧಕರು

ರಾಧಾಮಣಿ ಟಿ ಆರ್

ಮಾರ್ಗದರ್ಶಕರು

ಡಾ ಕೆ ಎಂ ಮೇತ್ರಿ

ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

ಫೆಬ್ರವರಿ ೨೦೧೭

# ಪ್ರಮಾಣ ಪತ್ರ

**ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ** ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಬುಡಕಟ್ಟು ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ ಕೆ ಎಂ ಮೇತ್ರಿ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 09.02.2017

ಸ್ಥಳ : ವಿದ್ಯಾರಣ್ಯ

Radhamani TR

**(ರಾಧಾಮಣಿ ಟಿ ಆರ್)**

ಸಂಶೋಧಕರು

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

# ದೃಢೀಕರಣ ಪತ್ರ

ರಾಧಾಮಣಿ ಟಿ ಆರ್ ಅವರು ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : 09. 02. 2017

ಸ್ಥಳ : ವಿದ್ಯಾರಣ್ಯ

ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

# ಕೃತಜ್ಞತೆಗಳು

ಘನತೆವೆತ್ತ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ಸಂಶೋಧನೆ ಮಾಡಲು ಅವಕಾಶ ದೊರಕಿಸಿದ ಕನ್ನಡ ವಿಶ್ವವಿದ್ಯಾಲಯಕ್ಕೆ ಮೊದಲು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನಾ ಮಾರ್ಗದರ್ಶಕರು, ಸದಾ ಕ್ರಿಯಾಶೀಲರೂ ಆಗಿ ಸಂಶೋಧನೆಯ ಎಲ್ಲಾ ಹಂತದಲ್ಲಿಯೂ ಉತ್ತಮ ಮಾರ್ಗದರ್ಶನ ನೀಡುತ್ತಾ, ಬರವಣಿಗೆಯನ್ನು ತಿದ್ದುತ್ತಾ, ಸಂಪ್ರಬಂಧದ ರಚನೆಗೆ ನನಗೆ ಸಂಪೂರ್ಣ ಸಹಕಾರವನ್ನು ನೀಡಿದ ಡಾ ಕೆ ಎಂ ಮೇತ್ರಿ ರವರಿಗೆ ಗೌರವ ಪೂರ್ವಕ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಬುಡಕಟ್ಟು ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕರು, ಮಾಜಿ ಉಪ ಕುಲಪತಿಗಳಾಗಿದ್ದ ಡಾ ಹಿ ಚಿ ಬೋರಲಿಂಗಯ್ಯ, ಡಾ ಚಲುವರಾಜು, ಡಾ ಕೇಶವನ್ ಪ್ರಸಾದ್, ಡಾ ಗಂಗಾಧರ ದೈವಜ್ಞ, ಡಾ ಪ್ರಭಾಕರ್‌ರವರಿಗೆ ಕೃತಜ್ಞಳಾಗಿದ್ದೇನೆ.

ಸಂಶೋಧನೆಗೆ ಸಾಹಿತ್ಯವನ್ನು ಪರಿಶೀಲಿಸುವ ಸಂದರ್ಭದಲ್ಲಿ ಸಾಹಿತ್ಯದ ಜೀವಾಳವಾಗಿರುವ ಗ್ರಂಥಾಲಯ ಸೌಲಭ್ಯಗಳನ್ನು ಬಳಸಿಕೊಳ್ಳಲು ನೆರವಾದ ಕನ್ನಡ ವಿಶ್ವವಿದ್ಯಾಲಯದ 'ಅಕ್ಷರ', 'ಸಿರಿಗನ್ನಡ' ಗ್ರಂಥಾಲಯಗಳು, ನಗರ ಕೇಂದ್ರ ಗ್ರಂಥಾಲಯ ಮೈಸೂರು, ಭಾರತೀಯ ಭಾಷಾ ಸಂಸ್ಥಾನ (ಸಿ.ಐ.ಐ.ಎಲ್), ಆಂಥ್ರೋಪಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಮೈಸೂರು, ಗಿರಿಜನ ಸಂಶೋಧನಾ ಸಂಸ್ಥೆ ಮೈಸೂರು, ಮಾನಸ ಗಂಗೋತ್ರಿ ಗ್ರಂಥಾಲಯ ಸಿಬ್ಬಂದಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಹಿರಿಯ ಸ್ವತಂತ್ರ ಹೋರಾಟಗಾರರಾದ ಪೂಜ್ಯನೀಯ ತಾತನವರಾದ ದಿವಂಗತ ಡಿ ಕೆಂಪಯ್ಯ ಇವರ ಪಾದಗಳಿಗೆ ನಮಸ್ಕಾರವನ್ನು ಸಲ್ಲಿಸುತ್ತಾ, ಬಾಲ್ಯದಿಂದಲೂ ನನ್ನ ವಿದ್ಯಾಭ್ಯಾಸ ಮತ್ತು ವಯಕ್ತಿಕ ಅಭಿರುಚಿಗೆ ತಕ್ಕಂತೆ ನನ್ನನ್ನು ಪೋಷಿಸಿ, ಸರ್ವತೋಮುಖ ಏಳಿಗೆಗೆ ಬೆನ್ನೆಲುಬಾಗಿ ಸಹಕರಿಸಿದ ನನ್ನ ತಂದೆಯವರಾದ ದಿವಂಗತ ಕೆ ರಂಗಶಾಮಯ್ಯ ನವರು, ತಾಯಿ ಶ್ರೀಮತಿ ಗಂಗಮ್ಮ ನವರು, ಸಹೋದರರಾದ ಶ್ರೀ ಟಿ ಆರ್ ರಂಗನಾಥ ರವರಿಗೆ ಚಿರಋಣಿಯಾಗಿರುತ್ತೇನೆ.

ಪ್ರಾಥಮಿಕ ಹಂತದಿಂದ ಇಲ್ಲಿಯವರೆಗೂ ನನಗೆ ವಿದ್ಯಾದಾನ ಮಾಡಿದ ನನ್ನ ಎಲ್ಲಾ ಗುರು ವೃಂದದವರಿಗೂ ಕೃತಜ್ಞನಾಗಿದ್ದೇನೆ.

ಸಂಶೋಧನಾ ಸಮಯದಲ್ಲಿ ನನಗೆ ಸಲಹೆ ಸೂಚನೆ ನೀಡುತ್ತಾ, ಕರಡು ಪ್ರತಿಯನ್ನು ತಿದ್ದಿಕೊಟ್ಟಂತಹ ನನ್ನ ನೆಚ್ಚಿನ ಗುರುಗಳಾದ ಪ್ರೊ ಕೆ ವಿ ಕೃಷ್ಣಮೂರ್ತಿಯವರಿಗೆ ನಾನು ಆಭಾರಿಯಾಗಿದ್ದೇನೆ.

ಸಂಶೋಧನೆ ಮಾಡಲು ಕನ್ನಡ ವಿಶ್ವವಿದ್ಯಾಲಯದವರೆಗೂ ನನ್ನನ್ನು ಕರೆತಂದ ಹಿರಿಯ ಸ್ನೇಹಿತರೂ, ಸದಾ ನನ್ನ ಏಳಿಗೆಯನ್ನು ಬಯಸುವ ಹಿತೈಷಿಗಳಾದ ಜಿ ನೀಲಕಂಠ ನವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.

ಜೇನುಕುರುಬ ಸಮುದಾಯದ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದು, ಅವರ ಬಗ್ಗೆ ಅನೇಕ ಕೃತಿಗಳನ್ನು ರಚಿಸಿದ ಅನುಭವವನ್ನು ಹೊಂದಿರುವ ಪ್ರೊ ಕಿಕ್ಕೇರಿ ನಾರಾಯಣ, ಪ್ರೊ ಜಕ್ಕ ಪಾರ್ಥಸಾರಥಿಯವರ ಸಹ ಮಾರ್ಗದರ್ಶನಕ್ಕೆ ಕೃತಜ್ಞನಾಗಿದ್ದೇನೆ.

ಕ್ಷೇತ್ರ ಕಾರ್ಯ ಮತ್ತು ಕರಡು ಪ್ರತಿ ಸಿದ್ದಗೊಳಿಸಲು ಹೆಗಲು ಕೊಟ್ಟು ಸಹಕರಿಸಿದ ಜಗದೀಶ್ ಕೆ ಕೆ, ಲಕ್ಷ್ಮಣ ಕೆ ಕೆ, ಮಂಗಲ್, ಬಂಧು, ಕುಮಾರ್, ಚಂದ್ರಶೇಖರ್ ಹೆಚ್ ಪಿ ಇವರಿಗೆ ಆಭಾರಿಯಾಗಿದ್ದೇನೆ.

ನನ್ನ ಸಂಶೋಧನೆಗೆ ಸಹಕರಿಸಿದ ವೃತ್ತಿ ಸ್ಥಳವಾದ ಸರ್ಕಾರಿ ಪ್ರೌಢ ಶಾಲೆ, ಜಕ್ಕೇನಹಳ್ಳಿಯ ಮುಖ್ಯೋಪಾಧ್ಯಾಯರಾದ ದಿವಂಗತ ಚಿಕ್ಕಹನುಮಯ್ಯ ನವರು ಮತ್ತು ಸಹೋದ್ಯೋಗಿಗಳು ಹಾಗೂ ತುಮಕೂರು ತಾಲ್ಲೂಕಿನ ಎಲ್ಲಾ ನನ್ನ ವೃತ್ತಿ ಬಾಂದವರಿಗೂ ಕೃತಜ್ಞನಾಗಿದ್ದೇನೆ.

ಸಂಶೋಧನೆಗೆ ಸಹಕರಿಸಿದ ಡಾ ಅಜ್ಜಪ್ಪ, ಡಾ ವೆಂಕಟೇಶ್, ಡಾ ಸುಜ್ಞಾನ ಮೂರ್ತಿ ಮತ್ತು ರೇವಣ್ಣ ನವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸೂಕ್ತ ಮಾಹಿತಿಯನ್ನು ಪಡೆಯಲು ಸಹಕರಿಸಿದ ಜೇನುಕುರುಬ ಸಮುದಾಯದ ಕಾಳಪ್ಪ, ಪ್ರಭು, ಎಂ ಟಿ ಕುಮಾರ್, ಗುಲಾಬಿ, ವಾಸಂತಿ, ಇಂದಿರಾ, ರಾಮಕೃಷ್ಣ, ಜಾಜಿ, ರಮೇಶ, ಜೆ ಕೆ ತಿಮ್ಮಣ್ಣ, ಜೆ ಪಿ ರಾಜು, ಚಿಕ್ಕಯ್ಯ, ಧರ್ಮಣ್ಣ, ಸೋಮಣ್ಣ, ಗೌರಮ್ಮ, ಅಕ್ಕಮ್ಮ ನವರಿಗೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಸಂಶೋಧನಾ ಕಾರ್ಯದಲ್ಲಿ ಅಗತ್ಯವಿದ್ದಾಗ ಸಂಶೋಧನೆಗೆ ಸಂಬಂಧಿಸಿದಂತೆ ಸಲಹೆಯನ್ನು ನೀಡಿದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಸಮತಾ ಬಿ ದೇಶಮಾನೆ, ಕುವೆಂಪು ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಡಾ ಜೋಗನ್ ಶಂಕರ್, ಡಾ ಗುರುಲಿಂಗಯ್ಯ, ಡಾ ಪೂರ್ವಾಚಾರ್, ಎಸ್ ಎ ಎ ಸಾಹೇಬ್, ತುಮಕೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ಡಾ ನಾಗರಾಜು ರವರಿಗೂ ಕೃತಜ್ಞಳಾಗಿದ್ದೇನೆ.

ಕುಟುಂಬದವರಾದ ಅಜ್ಜಿ ಗಂಗಮ್ಮ, ರತ್ನಮ್ಮ, ವೆಂಕಟೇಶ, ಕೃಷ್ಣಮೂರ್ತಿ, ಸರೋಜಮ್ಮ, ಗೋಪಿ, ಲಿಂಗರಾಜು, ಪವಿತ್ರ, ಕಿರಣ್, ಕಾವ್ಯ, ತನುಷ, ಧನು, ಸಂಗೀತಾ, ಸ್ನೇಹ, ಭಗತ್, ಕಿಶನ್, ರೇಷ್ಮಾ, ಚಾಂಗುಬಾಯಿ ಇವರಿಗೂ ಋಣಿಯಾಗಿದ್ದೇನೆ.

ನನ್ನ ಸಂಶೋಧನೆಗೆ ಪ್ರೇರೇಪಿಸಿ, ಸದಾ ನನಗೆ ಸಹಕರಿಸಿದ ಡಾ ಕೆ ಸವಿತಾ, ಶೋಭ, ಮಾಲಿನಿ ಕೆ, ನಮಿತಾ, ವೀಣಾ, ಸಬೀಹಾ, ಮಂಜು, ಮಲ್ಲಿಕಾರ್ಜುನ ಬಿ ಮಾನ್ಪಡೆ ಮತ್ತು ಗಿರೀಶ್‌ರವರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ.

ಆಗಾಗ್ಗೆ ನನ್ನ ಸಂಶೋಧನಾ ಪ್ರಗತಿಯನ್ನು ವಿಚಾರಿಸಿ ಪ್ರೋತ್ಸಾಹಿಸಿದ ಡಾ ದಾಕ್ಷಾಯಿಣಿ ಮೇತ್ರಿ, ಡಾ ಅನ್ನಪೂರ್ಣ ಗೋಸ್ಬಾಳ ಮತ್ತು ಕು ಸಹನ ರವರಿಗೂ ಕೃತಜ್ಞತೆ ತಿಳಿಸುತ್ತೇನೆ.

ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞಳಾಗಿದ್ದೇನೆ. ಡಾಟಾ ಮಾಹಿತಿಯನ್ನು ಅಂದವಾಗಿ ಜೋಡಿಸಿ ಕೊಟ್ಟ ಡಾ ಆರ್ ಬಿ ಕುಮಾರ್, ಸಂಪ್ರಬಂಧದ ಅಕ್ಷರ ಜೋಡಣೆ ಮಾಡಿದ ಶ್ರೀನಿವಾಸ ಕೆ ಕಲಾಲ್, ಮುದ್ರಣ ಮಾಡಿಕೊಟ್ಟ ಮಧು ಕಂಪ್ಯೂಟರ್ಸ್ ರವರಿಗೂ ಕೃತಜ್ಞಳಾಗಿದ್ದೇನೆ.

**ರಾಧಾಮಣಿ ಟಿ ಆರ್**

# ಪರಿಶಿಷ್ಟಗಳು

## ೧. ಕೋಷ್ಟಕಗಳು

## ೨. ವೃತ್ತ ಚಿತ್ರಗಳು

## ೩. ಲಂಬಚಿತ್ರಗಳು

## ೪. ಭೂಪಟಗಳು

# ಪರಿವಿಡಿ

## ಅಧ್ಯಾಯ ಮೂರು

## ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನ

ಅಧ್ಯಾಯ ನಾಲ್ಕು

ಜೇನುಕುರುಬರ ಪಾರಂಪರಿಕ ಸಾಂಸ್ಕೃತಿ ಕಜೀವನ



ಅಧ್ಯಾಯ ಐದು

ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನ

## ಅಧ್ಯಾಯ ಆರು

## ಜೇನುಕುರುಬರ ಪಾರಂಪರಿಕ ಜ್ಞಾನ ಮತ್ತು ಆಧುನಿಕತೆ

ಅಧ್ಯಾಯ ಏಳು

ಉಪಸಂಹಾರ

ಅನುಬಂಧಗಳು

ಅಧ್ಯಾಯ ಒಂದು.........

# ಪ್ರವೇಶ

# ಅಧ್ಯಾಯ ಒಂದು

## ಪ್ರವೇಶ

೧. ೧ ಬುಡಕಟ್ಟುಗಳು

೧. ೨. ಪದನಿಷ್ಪತ್ತಿ

೧. ೩. ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು

೧. ೪. ಪ್ರಮೇಯಗಳು

೧. ೫. ಅಧ್ಯಯನದ ಉದ್ದೇಶಗಳು

೧. ೬. ಅಧ್ಯಯನದ ವ್ಯಾಪ್ತಿ

೧. ೭. ಅಧ್ಯಯನ ವಿಧಾನ

೧. ೮. ಅಧ್ಯಯನದ ಮಹತ್ವ

೧. ೯. ಅಧ್ಯಯನದ ಅಧ್ಯಾಯಗಳ ವಿನ್ಯಾಸ

# ಅಧ್ಯಾಯ ಒಂದು

# ಪ್ರವೇಶ

## ಪೀಠಿಕೆ

ಎರಡು ಶತಮಾನಗಳ ಈಚೆಗೆ ಸಾಮಾಜಿಕ ಮಾನವಶಾಸ್ತ್ರ ವಿಷಯದ ಉಗಮದ ನಂತರ ನಾಗರೀಕ ಜಗತ್ತಿನ ಮನುಷ್ಯನ ಜೀವನ ಕ್ರಮವನ್ನು ಅರಿಯಲು ಅವರು ವಾಸಿಸುವ ನೆಲೆಗಳಿಗೆ ಹೋಗಬೇಕು ಎಂಬುದು ಮಾನವಶಾಸ್ತ್ರಜ್ಞರ ಮನಸ್ಸಿಗೆ ಬಂತು. ಹೀಗೆ ಭಾರತದ ಆದಿವಾಸಿಗಳ ಜೀವನ ಕ್ರಮದ ಅಧ್ಯಯನ ಆರಂಭವಾಯಿತು. ಇದರಿಂದ ಭಾರತ ಅಲ್ಲದೇ, ಪ್ರಪಂಚದ ಎಲ್ಲಾ ಬುಡಕಟ್ಟುಗಳ ನಡುವೆ ಅನೇಕಾನೇಕ ವ್ಯತ್ಯಾಸಗಳು ಕಂಡು ಬಂದವು. ಜೆ ಹೆಚ್ ಹಟ್ಟನ್, ಜೆ ಪಿ ವಿಟ್ಸ್, ಸ್ಮಿತ್, ಹೈಮನ್ ಡಾರ್ಫ್, ಧೀರೇಂದ್ರನಾಥ ಮಜುಂದಾರ್, ಮ್ಯಾಲಿನೋವಸ್ಕಿ, ರ್‍ಯಾಡ್‌ಕ್ಲಿಫ್ ಬ್ರೌನ್, ಮತ್ತು ಇವಾನ್ಸ್ ಪ್ರಿಚರ್ಡ್ ಇನ್ನೂ ಮುಂತಾದವರು ಆದಿವಾಸಿಗಳನ್ನು ಕುರಿತು ಅಧ್ಯಯನ ಮಾಡಿರುವರು.

ಎಡ್ಗರ್ ಥರ್ಸ್ಟನ್ ಅವರು ದಕ್ಷಿಣ ಭಾರತದ ಬುಡಕಟ್ಟುಗಳ ಕುರಿತು ಮತ್ತು ಕರ್ನಾಟಕದಲ್ಲಿ ಇಂಥದ್ದೇ ಒಂದು ಕಾರ್ಯ ಅನಂತಕೃಷ್ಣ ಅಯ್ಯರ್ ಅವರು ಮಾಡಿರುವರು. ಹೆಚ್ ಡಬ್ಲ್ಯು ನಂಜುಂಡಯ್ಯ ಅವರು "The Mysore Castes and Tribes" ಕೃತಿಯನ್ನು ರಚಿಸಿರುವರು. ಭಾರತದ ನೆಲವನ್ನು ಬಹುಪಾಲು ಅರಣ್ಯ ಆಕ್ರಮಿಸಿಕೊಂಡಿದೆ. ಬುಡಕಟ್ಟುಗಳ ವಾಸ ಅರಣ್ಯದಲ್ಲಿಯೇ ಅಥವಾ ಅರಣ್ಯದ ಸರಹದ್ದಿನಲ್ಲಿಯೇ ಬೆಳೆದುಕೊಂಡು ಬಂದಿದೆ.

೨೧ನೇ ಶತಮಾನಕ್ಕೆ ಕಾಲಿಟ್ಟಿರುವ ಪ್ರಸ್ತುತ ಕಾಲದಲ್ಲಿ ಜಗತ್ತಿನಾದ್ಯಂತ ಜಾಗತೀಕರಣ ವ್ಯಾಪಿಸುತ್ತಿದೆ. ಜಾಗತೀಕರಣವೆಂಬುದು ಮೂಲ ಕಸುಬುಗಳ ಮೇಲೆ ಅವಲಂಬಿತವಾದ ಬಹುತೇಕ ಎಲ್ಲಾ ಬುಡಕಟ್ಟುಗಳನ್ನು ಅತಂತ್ರಗೊಳಿಸುವ ಕಾರ್ಯದಲ್ಲಿ ತೊಡಗಿದೆ. ಔದ್ಯೋಗಿಕರಣ, ಜಾಗತೀಕರಣಗಳು ಇಂತಹ ಬುಡಕಟ್ಟುಗಳನ್ನು ಇನ್ನಷ್ಟು ತಳಕ್ಕೆ ತಳ್ಳುತ್ತಿವೆ. ಇದಕ್ಕೆ ಆದಿಮ ಬುಡಕಟ್ಟೆಂದು ಗುರುತಿಸಲ್ಪಟ್ಟಿರುವ ಜೇನುಕುರುಬ ಬುಡಕಟ್ಟು ಹೊರತಾಗಿಲ್ಲ. ಮೂಲತಃ ಕಾಡನ್ನೇ ಅವಲಂಬಿಸಿದ್ದ ಜೇನುಕುರುಬ ಬುಡಕಟ್ಟು ಇಂದು ಕಾಡಿನಿಂದ ದೂರವಾಗಬೇಕಾದ ಆತಂಕವನ್ನು ಎದುರಿಸುತ್ತಿದೆ. ಕಾಡನ್ನೇ ನಂಬಿ ಬದುಕನ್ನು ಸಾಗಿಸುತ್ತಿದ್ದ ಜೇನುಕುರುಬರು ತಮ್ಮ ಮೂಲ ಪರಂಪರೆಗೆ ಸಂಬಂಧಿಸಿದ ಆಚರಣೆಗಳು ಮರೆಯಾಗುತ್ತಿವೆ ಎಂಬ ಆತಂಕದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಸಮಾಜವೆಂಬುದು ನದಿಯಿದ್ದಂತೆ. ಅದು ನಿರಂತರವಾಗಿ ಚಲಿಸುತ್ತಲೇ ಇರುತ್ತದೆ. ದೀರ್ಘವಾದ ಚಲನೆಯಲ್ಲಿ ಒಮ್ಮೊಮ್ಮೆ ಪಥವನ್ನು ಬದಲಿಸುವ ಸಾಧ್ಯತೆಯೂ ಉಂಟು. ಇಂತಹ ಸಾಮಾಜಿಕ ಸಂರಚನೆಗಳು ಬುಡಕಟ್ಟುಗಳ ಮೇಲೆ ಪ್ರಭಾವವನ್ನು ಬೀರುತ್ತವೆಂಬುದು ಸತ್ಯ.

ಬುಡಕಟ್ಟು ಲಕ್ಷಣಗಳನ್ನೆಲ್ಲಾ ಇಂದಿಗೂ ಜೀವಂತವಾಗಿ ಉಳಿಸಿಕೊಂಡಿರುವ ಕೆಲವೇ ಕೆಲವು ಬುಡಕಟ್ಟುಗಳಲ್ಲಿ ಜೇನುಕುರುಬ ಸಮುದಾಯವು ಒಂದಾಗಿದೆ. ಹಿಂದಿನ ಕಾಲದ ಬೇಟೆಯ ಸಂಸ್ಕೃತಿ, ಆಹಾರ ಪದ್ಧತಿ, ಉಡುಗೆ ತೊಡುಗೆ, ಹುಟ್ಟು, ಮದುವೆ ಮುಂತಾದ ಆಚರಣೆಗಳು, ಕೊನೆಗೆ ಅವರು ಪೂಜಿಸುವ ದೈವಗಳು ಹೀಗೆ ಪ್ರತಿಯೊಂದು ಬದಲಾವಣೆಯತ್ತ ನಿಧಾನವಾಗಿ ಸಾಗುತ್ತಿವೆ ಎಂದು ತಿಳಿಯುತ್ತದೆ. ಕರ್ನಾಟಕದಲ್ಲಿ ಕಡಿಮೆ ಜನಸಂಖ್ಯೆ ಯನ್ನು ಹೊಂದಿದ ಈ ಬುಡಕಟ್ಟು ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಕಾಡುಗಳಲ್ಲಿ ಮಾತ್ರ ನೆಲಸಿದೆ. ಭಾರತದಲ್ಲಿ ಬೆರಳೆಣಿಕೆಯಷ್ಟು ಪ್ರಮಾಣದಲ್ಲಿ ಆದಿಮ ಬುಡಕಟ್ಟು ಗಳಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಇಂತಹ ಬುಡಕಟ್ಟುಗಳಲ್ಲಿ ಜೇನುಕುರುಬ ಬುಡಕಟ್ಟು ಒಂದಾಗಿದೆ. ತುಂಬಾ ಸಂಕೀರ್ಣವಾದ ಸಂಸ್ಕೃತಿಯನ್ನು ಹೊಂದಿರುವ ಬುಡಕಟ್ಟುಗಳಲ್ಲಿ ಜೇನುಕುರುಬ ಬುಡಕಟ್ಟು ಒಂದಾಗಿದೆ. ಈ ಬುಡಕಟ್ಟಿನೊಳಗೆ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಸಂಸ್ಕೃತಿ ಕಾಪಾಡಿಕೊಂಡು ಬರುತ್ತಿದ್ದಾರೆ. ಪುರುಷರಿಗಿಂತ ಮಹಿಳೆಯರಲ್ಲಿ ಪಾರಂಪರಿಕ ಜ್ಞಾನ ಹೇಗೆ ಇನ್ನೂ ಜೀವಂತವಾಗಿ ಉಳಿದಿದೆ ಎಂಬುದನ್ನು ಗಮನಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ೧. ೧. ಬುಡಕಟ್ಟುಗಳು

ಬೆಟ್ಟ ಗುಡ್ಡ, ಕಣಿವೆ, ಅರಣ್ಯ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಗುಂಪುಗಳಾಗಿ ನೆಲೆಸಿರುವ ತಮ್ಮದೇ ವಿಶಿಷ್ಟ ಭಾಷೆಯನ್ನು ಹೊಂದಿರುವ ಅರಣ್ಯ ಮೂಲದ ಉತ್ಪನ್ನಗಳನ್ನೇ ಜೀವನಾಧಾರಕ್ಕೆ ಬಳಕೆ ಮಾಡಿಕೊಳ್ಳುವ, ಪ್ರತ್ಯೇಕ ನೆಲೆಗಳಲ್ಲಿ ಒಟ್ಟಾಗಿ ವಾಸಿಸುವ ಸಮುದಾಯಗಳೇ ಬುಡಕಟ್ಟುಗಳು. ಇವರನ್ನು ವನವಾಸಿ, ಗಿರಿಜನ, ಅರಣ್ಯವಾಸಿ ಮುಂತಾದ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಇವರ ಸಾಮಾಜಿಕ ಬದುಕು ರಕ್ತ ಸಂಬಂಧದ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮುದಾಯದ ಎಲ್ಲರನ್ನೂ ತಿಳಿದಿರುತ್ತಾನೆ. ಸರ್ವಚೇತನವಾದಿಗಳಾದ ಇವರು ತಮ್ಮ ರೂಢಿ ಸಂಪ್ರದಾಯಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ. ಸಂವಿಧಾನದಲ್ಲಿ ೩೪೨ನೇ ಅನುಚ್ಛೇದದಲ್ಲಿ ಪರಿಶಿಷ್ಟ ಪಂಗಡಗಳ ಕುರಿತು ವಿವರಣೆ ನೀಡಲಾಗಿದೆ.

"**ಆದಿವಾಸಿ**"[Adivasi] ಎಂಬುದು ಭಾರತೀಯ ಮೂಲದ ಶಬ್ದವಾಗಿದ್ದು ಅದಕ್ಕೆ "ಮೂಲನಿವಾಸಿಗಳು" ಎಂಬ ಅರ್ಥವಿದೆ. **ರಿಸ್ಲೆ, ಎಲ್ವಿನ್**[Risley, Elwin]ಮುಂತಾದವರು ಆದಿವಾಸಿಗಳನ್ನು "ಎಬೊರಿಜಿನಲ್ಸ್" (aboriginal – ಮೂಲನಿವಾಸಿಗಳು) ಎಂದೇ ಕರೆದಿದ್ದಾರೆ. **ಸರ್ ಬೈನ್ಸ್**[Sir Bains] ಎಂಬ ಜನಗಣತಿಯ ಅಧಿಕಾರಿಯು ಈ ಸಮುದಾಯವನ್ನು "ಹಿಲ್ ಟ್ರೈಬ್ಸ್" ಎಂದು ಕರೆದಿದ್ದರೆ, **ಡಾ ಹಟ್ಟನ್**[Dr. Hutton] "ಪ್ರಿಮಿಟಿವ್ ಟ್ರೈಬ್ಸ್" [primitive tribes] ಎಂದು ಕರೆದಿದ್ದಾನೆ. **ಠಕ್ಕರ್ ಬಾಪಾ** ಎಂಬ ಸಮಾಜ ಸುಧಾರಕರು ಆದಿವಾಸಿಗಳನ್ನು "ಆದಿಪ್ರಜಾ" ಎಂದು

ಕರೆದಿದ್ದಾರೆ. ಡಾ ಘುರ್ಯೆರವರ ಪ್ರಕಾರ ಅವರುಗಳು "ಹಿಂದುಳಿದ ಹಿಂದುಗಳು" ["Backward Hindus"] "ಅಂತಾರಾಷ್ಟ್ರೀಯ ಕಾರ್ಮಿಕ ಸಂಘ"ವು ILO (International Labour Organisation] ಆದಿವಾಸಿಗಳನ್ನು "ಇಂಡೀಜಿನಸ್ ಪೀಪಲ್" [Indigeneous People: "ದೇಶೀಯ ಜನವರ್ಗ"] ಎಂದು ಕರೆದಿದೆ" (ಶಂಕರರಾವ್ ಚ ನ: ೨೦೧೧:೮೧೬).

"ಈ ಮೇಲಿನ ಶಬ್ದಗಳ ಜೊತೆಗೆ ಆದಿವಾಸಿಗಳನ್ನು "ವನ್ಯ ಜಾತಿಗಳು", "ವನವಾಸಿಗಳು", "ಅರಣ್ಯವಾಸಿಗಳು" ಅಥವಾ "ಕಾಡು ಜನಾಂಗ" [jungle people or forest tribes] ಎಂದು ಮುಂತಾಗಿಯೂ ಕರೆದಿರುವುದುಂಟು. ಗಾಂಧೀಜಿಯವರು ಈ ಸಮುದಾಯವನ್ನು "ಗಿರಿಜನರು" – ಎಂಬ ಹೆಸರಿನಲ್ಲಿ ಜನಪ್ರಿಯಗೊಳಿಸಿದರು. ಭಾರತದ ಸಂವಿಧಾನದ ೩೪೨ನೇ ಕಲಮಿನಲ್ಲಿ ಆದಿವಾಸಿಗಳನ್ನು "ಪರಿಶಿಷ್ಟ ಪಂಗಡಗಳು" ಎಂಬರ್ಥದಲ್ಲಿ "ಶೆಡ್ಯೂಲ್ಡ್ ಟ್ರೈಬ್ಸ್" ಎಂದು ಕರೆದಿದ್ದು ಆ ಹೆಸರೇ ಇಂದು ಹೆಚ್ಚಾಗಿ ಬಳಕೆಯಲ್ಲಿದೆ" (ಅದೇ: ೮೧೬).

**"ಒಂದು ಸಮುದಾಯವು ತನ್ನ ಉಡುಗೆ-ತೊಡುಗೆ, ಆಚರಣೆ, ಆಹಾರಾಭ್ಯಾಸ, ಭಾಷೆ, ಜೀವನ ನಿರ್ವಾಹಣೆಗೆ ತನ್ನ ಪೂರ್ವಿಕರನ್ನು ಅನುಸರಿಸುವುದೇ ಪಾರಂಪರಿಕ ಜ್ಞಾನ"** ಎಂದು ಹೇಳಬಹುದು.

**"ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ನೈಸರ್ಗಿಕವಾಗಿ ಬದುಕುವ ಕಲೆಯೇ ಪಾರಂಪರಿಕ ಜ್ಞಾನ"**ಎಂದೂ ಸಹ ಹೇಳಬಹುದು.

## ೧. ೨. ಪದನಿಷ್ಪತ್ತಿ

ಮೈಸೂರು, ಚಾಮರಾಜನಗರ, ಕೊಡಗು ಭಾಗದ ಕಾಡುಗಳಲ್ಲಿ ನೆಲೆಸಿರುವ ಜೇನುಕುರುಬರನ್ನು ಕರ್ನಾಟಕದ ಮೂಲ ಬುಡಕಟ್ಟುಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತದೆ. ಇದಕ್ಕೆ ಪುಷ್ಟಿ ದೊರೆಯುವಂತೆ ಜೇನುಕುರುಬರು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಕನ್ನಡಕ್ಕೆ ಹತ್ತಿರವಾದ ಸ್ವತಂತ್ರ ಭಾಷೆಯನ್ನು ಮಾತನಾಡುವುದು.

"'ಕುರು' ಎಂಬ ಪದದಿಂದ 'ಕುರುಬ' ಎಂಬ ಪದ ನಿಷ್ಪತ್ತಿಯಾದಂತಿದೆ. ತಮಿಳಿನ ಕೊ(KO) ಅಥವಾ ಕು(KU) ಎಂಬ ಪದದ ವಿಸ್ತೃತ ರೂಪವೇ 'ಕುರು'. ಹಾಗೆಂದರೆ ಬೆಟ್ಟ ಎಂದರ್ಥ. ಕಾಲಾಂತರದಲ್ಲಿ ಹಲವರು ತಮ್ಮ ಬದುಕನ್ನು ಜೇನಿನ ಸಂಗ್ರಹಣೆಯಿಂದ ನಡೆಸುವವರಾದುದರಿಂದ ಇವರಿಗೆ ಜೇನುಕುರುಬ ಎಂಬ ಹೆಸರು ಬಂದಂತಿದೆ. ಕೇರಳದ ಎತ್ತರದ ಬೆಟ್ಟಗಳಲ್ಲಿಯೂ ಜೇನುಕುರುಬರಿದ್ದಾರೆ. ಅವರನ್ನು ಅಲ್ಲಿ ಕಾಟ್ಟುನಾಯಕನ್ (Kattunanyakan), ಶೋಲ ನಾಯಕನ್ (Shola Nayakan), ತೀನ್ ಕುರುಮನ್ (Teen Kuruman), ಕುರುಮನ್ (Kuruman), ಜೇನ

ಕೋಯಶೋಲ (Jenu Koyya Shola) ಎಂಬೀ ಹೆಸರುಗಳಿಂದಲೂ ಗುರುತಿಸಲಾಗುತ್ತದೆ" (ಮೈತ್ರಿ ಕೆ ಎಂ: ೨೦೦೨: ೯೮-೯೯).

"ಕರ್ನಾಟಕದ ಕುರುಬ, ಕೇರಳದ ಕುರುಮನ್ ಪದಗಳು ತಮಿಳುನಾಡಿನ ಕುರುಂಬಾ ಪದಗಳಿಗೆ ಸಮಾನವಾಗಿದ್ದು, ಅವೆಲ್ಲವೂ ಒಂದೇ ಬುಡಕಟ್ಟಿಗೆ ಕರೆಯುವ ಪದಗಳಾಗಿವೆ. ಜೇನುಕುರುಬ, ಬೆಟ್ಟಕುರುಬ ಮತ್ತು ಕುರಿಗಾಹಿ ಕುರುಬ ಎಂಬ ವೈವಿಧ್ಯಮಯವಾದ ಕುರುಬರು ತಮ್ಮನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತಾರೆ. ಅವರಲ್ಲಿಯ ಪರಸ್ಪರ ರಕ್ತ ಸಂಬಂಧ ಸ್ಥಗಿತಗೊಂಡ ಮೇಲೆ ಅವು ಪ್ರತ್ಯೇಕ ಬುಡಕಟ್ಟುಗಳೆಂದು ಪರಿಗಣಿಸಲ್ಪಡುತ್ತಿವೆ" (ಅದೇ: ೯೯).

"ಕೆಲವು ಬರವಣಿಗೆಗಳಲ್ಲಿ 'ಕುರುಬರು' 'ಊರು ಕುರುಬರು', 'ಕಾಡು ಕುರುಬರು' 'ಜೇನು ಕುರುಬರು' ಹೆಸರಿನ ಭಿನ್ನತೆಗಳಾಗಿದ್ದು ಪ್ರಾದೇಶಿಕವಾಗಿ ಮಾತ್ರವಷ್ಟೆ ಭಿನ್ನವಾಗಿದ್ದಾರೆ ಮೂಲತಃ ಇವರೆಲ್ಲರೂ ಒಂದೇ ಗುಂಪಿಗೆ ಸೇರಿದವರೆನ್ನಲಾಗಿದೆ" (ಲಲಿತ ಎ ಸಿ: ೧೯೯೩: ೨೯). ಇದೇ ಅಭಿಪ್ರಾಯವನ್ನು ಲೂಯಿಸ್ ರೈಸ್ ಮತ್ತು ಸರ್ ಡಬ್ಲ್ಯು ಇಲಿಯಟ್‌ರವರು ಕೂಡ ವ್ಯಕ್ತಪಡಿಸಿದ್ದಾರೆ.

## ೧. ೩. ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು

ಇತರ ಬುಡಕಟ್ಟುಗಳಿಗೆ ಹೋಲಿಸಿದರೆ ಜೇನುಕುರುಬ ಸಮುದಾಯದ ಕುರಿತು ಕೆಲವಷ್ಟೇ ಕೃತಿಗಳು ಕನ್ನಡದಲ್ಲಿ ಬಂದಿವೆ. ನಿರ್ದಿಷ್ಟವಾಗಿ ಜೇನುಕುರುಬ ಮಹಿಳಾ ಪಾರಂಪರಿಕ ಜ್ಞಾನವನ್ನು ತಿಳಿಸುವ ಪ್ರಯತ್ನಗಳು ಆಗಿರುವುದಿಲ್ಲ ಎಂಬುದು ತಿಳಿಯುತ್ತದೆ. ಈಗಿರುವ ಕೃತಿಗಳಲ್ಲಿ ಎಲ್ಲಾ ಬುಡಕಟ್ಟುಗಳನ್ನು ಸಮೀಕರಿಸಿ ಅಧ್ಯಯನ ಮಾಡಲಾಗಿದೆ. ಅವುಗಳು ಈ ಕೆಳಗಿನಂತಿವೆ.

ಎಡ್ಗರ್ ಥರ್ಸ್ಟನ್ ಅವರ ದ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ (೧೯೦೯) ಎನ್ನುವ ಕೃತಿಯಲ್ಲಿ ಜೇನುಕುರುಬರ ಕುರಿತು ಮಾಹಿತಿ ನೀಡಿದ್ದಾರೆ.

ನಂಜುಂಡಯ್ಯ ಎಲ್ ಅವರು ತಾವು ಮೈಸೂರಿನ ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ (೧೯೮೮) ಸಂದರ್ಭದಲ್ಲಿ ಹೆಗ್ಗಡದೇವನ ಕೋಟೆ ತಾಲೂಕಿನ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಬುಡಕಟ್ಟುಗಳ ಕುರಿತಾಗಿ ವರದಿಯನ್ನು ನೀಡಿದ್ದಾರೆ. ಇದರಲ್ಲಿ ಆ ಬುಡಕಟ್ಟುಗಳ ಒಟ್ಟಾರೆ ಸ್ಥಿತಿಗತಿಗಳ ವಿವರವನ್ನು ನೀಡಿದ್ದಾರೆ.

ಎಚ್ ವಿ ನಂಜುಂಡಯ್ಯ ಮತ್ತು ಎಲ್ ಕೆ ಎ ಅಯ್ಯರ್ ಅವರ ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್ (೧೯೨೯) ಎನ್ನುವ ಕೃತಿಯಲ್ಲಿ ಮೈಸೂರು ಪ್ರಾಂತ್ಯದಲ್ಲಿ ನೆಲೆಸಿರುವ ಜೇನು ಕುರುಬ ಬುಡಕಟ್ಟಿನ ದೇವರು, ಜೆಡಗು, ಜೀವನ ಕ್ರಮ, ಮದುವೆ, ಸಾವು ಮುಂತಾದ ಜೀವನಾವರ್ತನ ಆಚರಣೆಗಳು, ಜೇನುಕುರುಬರ ಮೂಲ ವೃತ್ತಿ ಇತ್ಯಾದಿ ವಿವರಗಳು ದೊರೆಯುತ್ತವೆ.

ಮೈಸೂರು ಮತ್ತು ಕೊಡಗು ಜಿಲ್ಲಾ ಗ್ಯಾಜೆಟಿಯರ್‌ನಲ್ಲಿ ಆ ಜಿಲ್ಲೆಯಲ್ಲಿ ಜೇನುಕುರುಬರ ಕುರಿತ ವಿವರಗಳೊಂದಿಗೆ ಅವರ ನೆಲೆಗಳ ಕುರಿತ ವಿವರಗಳು ದೊರೆಯುತ್ತದೆ.

ಜೇನುಕುರುಬರ ಕುರಿತು ವಿಶೇಷವಾಗಿ ಜೇನುಕುರುಬರ ಭಾಷೆಯ ಕುರಿತು ಆಳವಾಗಿ ಅಧ್ಯಯನ ಮಾಡಿರುವ ಕಿಕ್ಕೇರಿ ನಾರಾಯಣ ಅವರು ಜೇನುಕುರುಬರ ಭಾಷಾ ಪದಕೋಶ 'ಜೇನು ನುಡಿ'ಯನ್ನು ಪ್ರಕಟಿಸಿದ್ದಾರೆ. ಜೇನುಕುರುಬರ ಭಾಷೆಯ ಕುರಿತಾಗಿ ಪ್ರಕಟಗೊಂಡ ಮಹತ್ವದ ಕೃತಿ ಇದಾಗಿದೆ. ಹಾಗೆಯೇ ಇದೇ ಲೇಖಕರು ಜೇನುಕುರುಬ ಬುಡಕಟ್ಟಿನ ಕುರಿತಾಗಿ ಹಲವಾರು ಲೇಖನ, ಕೃತಿಗಳನ್ನು ಪ್ರಕಟಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ ಲಲಿತ ಎ ಸಿ ಅವರ ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ (೧೯೯೩) ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಎರಡು ಬುಡಕಟ್ಟುಗಳು ಮೂಲತಃ ಪಲ್ಲವ ರಾಜರ ವಂಶಕ್ಕೆ ಸೇರಿದ ಕುರುಬ ಸಮುದಾಯದ ಕಳ್ಳುಬಳ್ಳಿ ಈ ಬುಡಕಟ್ಟುಗಳಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ. ಹಾಗೆಯೇ ಅವರ ಆಚರಣೆಗಳ ಕುರಿತ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

ಕಿಕ್ಕೇರಿ ನಾರಾಯಣ ಅವರ ಜೇನು ನುಡಿ (೨೦೧೦) ಎಂಬ ಕೃತಿಯು ಜೇನುಕುರುಬರ ಭಾಷೆಯ ಶಬ್ಧಕೋಶವಾಗಿದೆ. ಜೇನುಕುರುಬ-ಕನ್ನಡ-ಇಂಗ್ಲಿಷ್ ಭಾಷೆಯಲ್ಲಿ ಇರುವ ಈ ಶಬ್ಧಕೋಶದಲ್ಲಿ ಜೇನುಕುರುಬ ಭಾಷೆಯ ಶಬ್ಧಕ್ಕೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ವಿವರಗಳಿವೆ.

ಕಿಕ್ಕೇರಿ ನಾರಾಯಣ ಅವರ ಜೇನುಕುರುಬ ಬುಡಕಟ್ಟು ಜನಾಂಗದ ಅವ್ಯಕ್ತ ಸಾಂಸ್ಕೃತಿಕ ಪರಂಪರೆ (೨೦೧೧) ಎನ್ನುವ ಕೃತಿಯಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ದಿನ ನಿತ್ಯದ ಬದುಕು, ಹುಟ್ಟು ಮದುವೆ ಸಾವು, ಜೇನುಕುರುಬರಲ್ಲಿ ಸ್ಥಳ ಹಾಗೂ ಬ್ರಹ್ಮಾಂಡದ ಪರಿಕಲ್ಪನೆ, ಕೊಂತ ಪೂಜೆ, ದೇವರಗುಡ್ಡದ ವಿವರಗಳಿದ್ದರೆ ಎರಡನೇ ಭಾಗದಲ್ಲಿ ಜೇನುಕುರುಬರ ಜನಪದ ಕಥೆಗಳು, ಜೇನುಕುರುಬರ ಮಹಾಕಾವ್ಯಗಳನ್ನು ಕೊಡಲಾಗಿದೆ.

ಕಿಕ್ಕೇರಿ ನಾರಾಯಣ ಅವರ ಸಂಪಾದನೆಯ ಬುಡಕಟ್ಟು ಸಂಸ್ಕೃತಿ (೨೦೧೧) ಇದರಲ್ಲಿ ವಿವಿಧ ಲೇಖಕರ ಲೇಖನಗಳಿದ್ದು ಅದರಲ್ಲಿ ಜೇನು ನುಡಿಯ ಮಹತ್ವವನ್ನು ತಿಳಿಸುವ ಲೇಖನವೊಂದಿದೆ.

ಮಧು ಗುಂಡ್ಲುಪೇಟೆ ಅವರ ಬುಡಕಟ್ಟು ಜನಾಂಗಗಳ ಒಂದು ಅವಲೋಕನ (೨೦೦೯) ವಿವಿಧ ಲೇಖನಗಳನ್ನು ಒಳಗೊಂಡ ಕೃತಿಯಾಗಿದೆ. ಒಟ್ಟು ಹನ್ನೆರಡು ಲೇಖನಗಳಿದ್ದು ಕಾಡುಕುರುಬ, ಸೋಲಿಗ, ಬೆಟ್ಟಕುರುಬ, ಜೇನುಕುರುಬರ ಕುರಿತಾದ ವಿವಿಧ ಲೇಖನಗಳಿವೆ. ಮುಖ್ಯವಾಗಿ ಜೇನುಕುರುಬರ ಕುರಿತು ನಮ್ಮ ನಾಡಿನ ಜೇನು ಕುಡಿಗಳು ಎಂಬ ಲೇಖನವು ಜೇನುಕುರುಬರ

ಕುರಿತಾಗಿರುವ ಲೇಖನವಾಗಿದೆ. ಇದಲ್ಲದೆ ಇತರೆ ಲೇಖನಗಳಲ್ಲಿಯೂ ಸಾಂದರ್ಭಿಕವಾಗಿ ಜೇನುಕುರುಬರ ಕುರಿತಾಗಿ ಉಲ್ಲೇಖಗಳು ದೊರೆಯುತ್ತವೆ.

ಕ್ಷೀರಸಾಗರ ಅವರ ಜೇನು ಆಕಾಶದ ಅರಮನೆಯೊ (೨೦೦೮) ಬುಡಕಟ್ಟು ಸಂಸ್ಕೃತಿಯನ್ನಾಧರಿಸಿದ ಪುಸ್ತಕವಾಗಿದೆ. ಈ ಕಾದಂಬರಿಯಲ್ಲಿ ಬುಡಕಟ್ಟು ಬದುಕಿನ ವಿವಿಧ ಮಜಲುಗಳ ಪರಿಚಯವಾಗುತ್ತದೆ.

ಕ್ಷೀರಸಾಗರ ಅವರ ಕಾಡಿನ ನಾಡಿ ಮಿಡಿದವರು (೨೦೧೩)ಕೃತಿಯು ಲೇಖಕರ ವಿವಿಧ ಲೇಖನಗಳ ಸಂಗ್ರಹದ ಕೃತಿಯಾಗಿದೆ. ಮುಖ್ಯವಾಗಿ ಗಿರಿಜನರ ಕುರಿತಾದ ಲೇಖನಗಳೇ ಈ ಕೃತಿಯಲ್ಲಿ ಕಂಡು ಬರುತ್ತವೆ. ಜೇನುಕುರುಬರು ನೆರಳು ಕರೆಯುವ ಪ್ರಸಂಗದ ಲೇಖನವಿದ್ದು ಆ ಆಚರಣೆಯ ಅಮೂಲಾಗ್ರ ಪರಿಚಯ ದೊರೆಯುತ್ತದೆ.

ಎ ಎಸ್ ಪ್ರಭಾಕರ ಸಂಪಾದನೆಯ ಆದಿವಾಸಿ ಆಖ್ಯಾನ (೨೦೦೬) ಕೃತಿಯಲ್ಲಿ ಬೇರೆ ಬೇರೆ ಲೇಖಕರು ವಿವಿಧ ಬುಡಕಟ್ಟುಗಳ ಮೇಲೆ ಬರೆದ ಹಲವು ಲೇಖನಗಳಿವೆ. ಬುಡಕಟ್ಟು ಧರ್ಮ, ಬುಡಕಟ್ಟು ದೈವಾರಾಧನೆ, ವೈದ್ಯ ಆರ್ಥಿಕತೆ ಮುಂತಾದ ವಿಷಯಗಳನ್ನು ಕೇಂದ್ರ ವಾಗಿರಿಸಿಕೊಂಡು ಬರೆಯಲಾದ ಲೇಖನಗಳು ಇಲ್ಲಿವೆ. ಈ ಕೃತಿಯಲ್ಲಿ ಜೇನುಕುರುಬರ ಕುರಿತು ಕಿಕ್ಕೇರಿ ನಾರಾಯಣರು ಜೇನುಕುರುಬರಲ್ಲಿ ಸ್ಥಳ ಹಾಗೂ ವಿಶ್ವದ ಪರಿಕಲ್ಪನೆ ಎಂಬ ಲೇಖನವಿದ್ದು ಜೇನುಕುರುಬರ ಜೀವನದ ಒಳಪದರವನ್ನು ಓದುಗನ ಕಣ್ಣಿಗೆ ತೆರೆದಿಡುತ್ತದೆ.

ಕೆ ಎಂ ಮೇತ್ರಿಯವರ ಬುಡಕಟ್ಟು ಕುಲಕಸುಬುಗಳು (೨೦೦೨) ಕೃತಿಯಲ್ಲಿ ಮುಖ್ಯವಾಗಿ ಬುಡಕಟ್ಟುಗಳ ಕುಲಕಸುಬುಗಳ ಕುರಿತಾದ ಮಾಹಿತಿ ದೊರೆಯುತ್ತದೆ. ಜೇನುಕುರುಬರ ಕುರಿತಾದ ಮಾಹಿತಿಯೂ ಈ ಕೃತಿಯಲ್ಲಿದೆ.

ವೀರಭದ್ರನಾಯ್ಕ ಎನ್ನುವವರ ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು (೨೦೧೦) ಎನ್ನುವ ಚಿಕ್ಕ ಕೃತಿಯಲ್ಲಿ ಚಾಮರಾಜನಗರ ಜಿಲ್ಲೆಯನ್ನು ಕೇಂದ್ರವಾಗಿರಿಸಿಕೊಂಡು ನಡೆಸಿದ ಅಧ್ಯಯನದ ವಿವರಗಳು ಈ ಕೃತಿಯಲ್ಲಿ ದೊರೆಯುತ್ತದೆ. ಮುಖ್ಯವಾಗಿ ಶಿಕ್ಷಣ ವಂಚಿತ ಜೇನುಕುರುಬ ಮಕ್ಕಳ ವಿವರಗಳೂ ಈ ಕೃತಿಯಲ್ಲಿ ದೊರೆಯುತ್ತದೆ.

ಬುಡಕಟ್ಟು ಅಧ್ಯಯನ ಸಂಚಿಕೆಯಲ್ಲಿ (ಸಂಪುಟ-೫, ಸಂಚಿಕೆ-೧, ಜನವರಿ-ಜೂನ್, ೨೦೦೯) ಮಹಾದೇವಯ್ಯನವರು ಜೇನು ನುಡಿ ಉಳಿಸುವ ಬಗೆ ಎಂಬ ಲೇಖನವೊಂದಿದೆ. ಪ್ರಸ್ತುತ ಅಳಿವಿನಂಚಿನಲ್ಲಿರುವ ಜೇನುಕುರುಬರ ಭಾಷೆಯನ್ನು ಉಳಿಸಲು ವಹಿಸಬೇಕಾದ ಮುಂಜಾಗ್ರತೆಯ ಕುರಿತಾದ ಲೇಖನ ಇದಾಗಿದೆ.

ಬುಡಕಟ್ಟು ಅಧ್ಯಯನ ಸಂಚಿಕೆಯಲ್ಲಿ (ಸಂಪುಟ-೫, ಸಂಚಿಕೆ-೨, ಜುಲೈ-ಡಿಸೆಂಬರ್, ೨೦೦೮) ಶ್ರೀಕಾಂತ ನಾಯಕ ಜಿ, ಎಚ್ ಆರ್ ಉಮಾ ರವರ ಮೈಸೂರು ಜಿಲ್ಲೆಯ ಜೇನುಕುರುಬರ ಆರ್ಥಿಕ ಜೀವನ ಮತ್ತು ರಾಜ್ಯ ಅಭಿವೃದ್ಧಿ ಯೋಜನೆಗಳು ಎಂಬ ಲೇಖನವಿದ್ದು ಜೇನುಕುರುಬರ ಅಭಿವೃದ್ಧಿಯ ಕುರಿತು ರೂಪಿತಗೊಂಡ ಯೋಜನೆಗಳು ಆ ಬುಡಕಟ್ಟನ್ನು ಎಷ್ಟರಮಟ್ಟಿಗೆ ತಲುಪಲು ಸಾಧ್ಯವಾಗಿದೆ ಎಂಬ ಕುರಿತಾದ ಲೇಖನ ಇದಾಗಿದೆ.

ಬುಡಕಟ್ಟು ಅಧ್ಯಯನ ಸಂಚಿಕೆಯಲ್ಲಿ (ಸಂಪುಟ-೬, ಸಂಚಿಕೆ-೧, ಜನವರಿ-ಜೂನ್, ೨೦೦೯) ಮಹಾದೇವಯ್ಯನವರು ಅವ್ಯಕ್ತ ಸಾಂಸ್ಕೃತಿಕ ನುಡಿ ಚಹರೆ ಎಂಬ ಲೇಖನವಿದ್ದು ಜೇನುಕುರುಬರ ಭಾಷೆಯನ್ನು ಕುರಿತಾದ ಲೇಖನ ಇದಾಗಿದೆ.

## ೧. ೪. ಪ್ರಮೇಯಗಳು

- ಜೇನುಕುರುಬ ಆದಿಮ ಬುಡಕಟ್ಟು ಮಹಿಳೆಯರಲ್ಲಿ ಅಪಾರವಾದ ಪಾರಂಪರಿಕ ಜ್ಞಾನವಿರುವುದು.
- ಜೇನುಕುರುಬ ಆದಿಮ ಬುಡಕಟ್ಟು ಮಹಿಳೆಯರಲ್ಲಿ ಆಧುನಿಕತೆಯ ಕಾರಣ ಅವರ ಪಾರಂಪರಿಕ ಜ್ಞಾನ ಕ್ಷೀಣಿಸುತ್ತಿರಬಹುದು.

## ೧. ೫. ಅಧ್ಯಯನದ ಉದ್ದೇಶಗಳು

ಕರ್ನಾಟಕ ಪರಿಶಿಷ್ಟ ಪಂಗಡಗಳಲ್ಲಿ ಸೀಮಿತ ವಲಯದಲ್ಲಿ ನೆಲೆಸಿದ ಬುಡಕಟ್ಟು ಜೇನುಕುರುಬ ಬುಡಕಟ್ಟಾಗಿದೆ. ಸಾಂಸ್ಕೃತಿಕವಾಗಿ ಸಮೃದ್ಧತೆಯನ್ನು ಹೊಂದಿರುವ ಈ ಬುಡಕಟ್ಟು ಸಾಮಾಜಿಕವಾಗಿ ಹೇಗೆ ಬೆಳವಣಿಗೆಗೆ ಒಳಗಾಗಿದೆ ಹಾಗೂ ಪಾರಂಪರಿಕ ಜ್ಞಾನವನ್ನು ಕಾಪಾಡುವಲ್ಲಿ ಪುರುಷರಿಗಿಂತ ಮಹಿಳೆಯರು ಹೇಗೆ ಭಿನ್ನವಾಗಿದ್ದಾರೆ ಎಂಬುದನ್ನು ತಿಳಿಯುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

**ಉದ್ದೇಶಗಳು**

- ಜೇನುಕುರುಬ ಮಹಿಳೆಯರಲ್ಲಿ ಇರುವ ಪಾರಂಪರಿಕ ಜ್ಞಾನವನ್ನು ಅರಿಯುವುದು.
- ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಮಹಿಳೆಯರ ಪಾರಂಪರಿಕ ಜ್ಞಾನವನ್ನು ತಿಳಿಯುವುದು.
- ವೈದ್ಯಕೀಯ ಪದ್ಧತಿಯಲ್ಲಿ ಮಹಿಳೆಯರು ಅನುಸರಿಸುವ ಪಾರಂಪರಿಕ ವಿಧಾನಗಳನ್ನು ವಿಶ್ಲೇಷಿಸುವುದು.

- ಸಮುದಾಯದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಮತ್ತು ಅವರ ಕೊಡುಗೆಯನ್ನು ಅರಿಯುವುದು.
- ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಮತ್ತು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ವಿಶ್ಲೇಷಿಸುವುದು.

## ೧. ೬. ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಜೇನು ಕುರುಬರು ಮೈಸೂರು, ಚಾಮರಾಜನಗರ, ಮತ್ತು ಕೊಡಗು ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಜೇನುಕುರುಬ ಮಹಿಳೆಯರ ಪಾರಂಪರಿಕ ಜ್ಞಾನದ ಅಧ್ಯಯನದ ಅವಶ್ಯಕತೆಯನ್ನು ಮನಗಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಜೇನುಕುರುಬ ಮಹಿಳೆಯರು ಹೊಂದಿರುವ ಪಾರಂಪರಿಕ ಜ್ಞಾನದ ಅಧ್ಯಯನವನ್ನು ಪ್ರೌಢ ಪ್ರಬಂಧವು ಒಳಗೊಂಡಿದೆ. ಕರ್ನಾಟಕದ ಮೈಸೂರು, ಚಾಮರಾಜನಗರ, ಮತ್ತು ಕೊಡಗು ಜಿಲ್ಲೆಗಳಲ್ಲಿ ನೆಲೆಸಿರುವ ಜೇನುಕುರುಬರ ನೆಲೆಗಳನ್ನು ಅಧ್ಯಯನಕ್ಕಾಗಿ ವೈಜ್ಞಾನಿಕವಾಗಿ ಆಯ್ಕೆ ಮಾಡಿಕೊಂಡು ಉದ್ದೇಶಿತ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

## ೧.೭. ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವನ್ನು ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೆ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನದಲ್ಲಿ ಜೇನುಕುರುಬರ ಕುರಿತು ಇಲ್ಲಿಯವರೆಗೆ ಬಂದಿರುವ ಕೃತಿಗಳು, ಗೆಜೆಟಿಯರ್‌ಗಳು, ಪತ್ರಿಕೆಗಳು, ಬಿಡಿ ಲೇಖನಗಳು, ಜನಗಣತಿ ವರದಿಗಳು, ಮಾನವಾಭಿವೃದ್ಧಿ ವರದಿ, ಪರಿಶಿಷ್ಟ ಪಂಗಡಗಳ ಕುರಿತಾಗಿ ಬಂದಿರುವ ವರದಿಗಳು, ಆಯೋಗಗಳ ವರದಿಗಳು ಹಾಗೂ ಇತರ ಮೂಲಗಳಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಜೇನುಕುರುಬ ಹಾಡಿಗಳ ಬಹುತೇಕ ಪ್ರತಿಯೊಂದು ಕುಟುಂಬವನ್ನು ಸಂದರ್ಶಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ. ಮುಖ್ಯವಾಗಿ ಪರಂಪರೆಯನ್ನು ಕುರಿತು ಗಮನಿಸುವ ಉದ್ದೇಶದಿಂದ ಹಳೆ ತಲೆಮಾರಿನ ಹಿರಿಯರು, ಮಧ್ಯ ವಯಸ್ಕರು ಹಾಗೂ ಇತ್ತೀಚಿನ ಯುವಕರನ್ನು ಅದರಲ್ಲೂ ಪುರುಷರು ಹಾಗೂ ಮಹಿಳೆಯರನ್ನು ತುಲನಾತ್ಮಕವಾಗಿ ಅಧ್ಯಯನಿಸಿಯಾಗಿದೆ.

**ಪ್ರಶ್ನಾವಳಿಯ ಮಾದರಿ**

ಅಧ್ಯಯನದಲ್ಲಿ ಜೇನುಕುರುಬ ಬುಡಕಟ್ಟಿನವರ ಪರಂಪರೆಯ ಕುರಿತು ಮಾಹಿತಿ ಪಡೆಯುವುದು ಹಾಗೂ ಅವರ ಸ್ಥಿತಿಗತಿಗಳ ಕುರಿತು ಅರಿಯುವ ಉದ್ದೇಶದಿಂದ ಪ್ರಶ್ನಾವಳಿ ಮಾದರಿಗಳನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಪ್ರಶ್ನಾವಳಿಯಲ್ಲಿ ಎರಡು ವಿಧದ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಲಾಗಿದೆ. ಜೇನು ಕುರುಬ ಸಮುದಾಯದ ಸಮಗ್ರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಬದುಕಿನ ಬಗೆಗೆ ಅಧ್ಯಯನಿಸಲಿಕ್ಕಾಗಿ ಒಂದು ಸವಿಸ್ತಾರವಾದ ಪ್ರಶ್ನಾವಳಿಯನ್ನು (Questionnaire) ರೂಪಿಸಿ ಸಂದರ್ಶನ ವಿಧಾನದ (Interview Methods) ಮುಖಾಂತರ ಸಮೀಕ್ಷೆ ನಡೆಸಲಾಗಿದೆ. ಮತ್ತೊಂದು ಅವರ ಜೀವನ ವಿಧಾನವನ್ನು ಅರಿಯಲು ರೂಪಿಸಿದ ಮಾದರಿ ಪ್ರಶ್ನಾವಳಿಯಾಗಿದೆ.

**ಸಂದರ್ಶನ ವಿಧಾನ**

ಕ್ಷೇತ್ರ ಕಾರ್ಯದಲ್ಲಿ ಕುಟುಂಬದ ಸ್ಥಿತಿಗತಿಗಳನ್ನು, ಅವರ ಪರಂಪರೆಯಲ್ಲಾದ ಪಲ್ಲಟಗಳು ಮತ್ತು ಅದಕ್ಕೆ ಕಾರಣಗಳನ್ನು ಅರಿಯುವ ಉದ್ದೇಶದಿಂದ ಪ್ರತಿ ಕುಟುಂಬದ ಸದಸ್ಯನೊಬ್ಬನನ್ನು ಸಂದರ್ಶನಕ್ಕೆ ಒಳಪಡಿಸಿ ಮಾಹಿತಿಯನ್ನು ಪಡೆಯಲಾಗಿದೆ. ಅದೇ ರೀತಿ ಬೇರೆ ಬೇರೆ ಜೇನುಕುರುಬ ಬುಡಕಟ್ಟಿನ ಸದಸ್ಯರನ್ನು ಸ್ಯಾಂಪಲಿಂಗ್ ಸರ್ವೆಗೆ ಒಳಪಡಿಸಿ ಮಾಹಿತಿಯನ್ನು ಕ್ರೋಢೀಕರಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಚಾರಿತ್ರಿಕ ವಿಧಾನ**

ಜೇನುಕುರುಬ ಬುಡಕಟ್ಟಿನ ಮೂಲ ತಿಳಿಯುವ ಉದ್ದೇಶದಿಂದ ಅವರ ಚರಿತ್ರೆಯನ್ನು ಪ್ರತಿಬಿಂಬಿಸುವ ಗ್ರಂಥಗಳಿಂದ, ಮಾನವಾಭಿವೃದ್ಧಿ ವರದಿ, ಜನಸಂಖ್ಯಾ ವರದಿ, ಪತ್ರಿಕೆಯ ಲೇಖನಗಳು ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

**ಸಂಖ್ಯಾಶಾಸ್ತ್ರೀಯ ವಿಧಾನ**

ಜನಸಂಖ್ಯಾ ವರದಿ, ಮಾನವಾಭಿವೃದ್ಧಿ ವರದಿ ಹಾಗೂ ಸಂದರ್ಶನದಲ್ಲಿ ಕಲೆಹಾಕಿದ ಮಾಹಿತಿಗಳನ್ನು ಸಂಖ್ಯಾ ಶಾಸ್ತ್ರೀಯ ವಿಧಾನದಲ್ಲಿ ವಿಶ್ಲೇಷಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ತುಲನಾತ್ಮಕ ವಿಧಾನ**

ಜೇನುಕುರುಬ ಬುಡಕಟ್ಟಿನ ಹಿರಿಯ ಮಹಿಳೆಯರು, ಮಧ್ಯವಯಸ್ಕ ಮಹಿಳೆಯರು ಹಾಗೂ ಯುವತಿಯರು ಹೀಗೆ ಮೂರು ತಲೆಮಾರಿನವರನ್ನು ಅಧ್ಯಯನಕ್ಕೆ ಒಳಪಡಿಸಿ ಅವರ ಮಧ್ಯೆ ಇರುವ ಅಂತರಗಳನ್ನು ತುಲನಾತ್ಮಕವಾಗಿ ಅಧ್ಯಯನ ನಡೆಸಲಾಗಿದೆ.

**ಸಹಭಾಗಿತ್ವ ವಿಧಾನ**

ಬುಡಕಟ್ಟಿಗೆ ಸಂಬಂಧಿಸಿದಂತೆ ಇವರಲ್ಲಿರುವ ಆಚರಣೆಗಳು, ನಂಬಿಕೆಗಳನ್ನು ಅರಿಯುವುದು ಹಾಗೂ ಇವರ ಹಬ್ಬ ಹರಿದಿನಗಳು ಜೀವನಾವರ್ತನ ಆಚರಣೆಗಳನ್ನು ಅರಿಯುವ ಉದ್ದೇಶದಿಂದ ಅವರ ಆಚರಣೆಗಳಲ್ಲಿ ಪಾಲ್ಗೊಂಡು ಮಾಹಿತಿಗಳನ್ನು ಪಡೆಯಲಾಗಿದೆ. ಹೀಗೆ ಒಟ್ಟಾಗಿ ಎಲ್ಲಾ ವಿಧಾನಗಳಿಂದಲೂ ಮಾಹಿತಿ ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

## ೧. ೮. ಅಧ್ಯಯನದ ಮಹತ್ವ

ಜೇನುಕುರುಬ ಬುಡಕಟ್ಟಿನ ಕುರಿತು ಹಲವಾರು ಅಧ್ಯಯನಗಳು ನಡೆದಿವೆಯಾದರೂ ಇಲ್ಲಿಯವರೆಗೆ ಜೇನುಕುರುಬ ಮಹಿಳೆಯರ ಪಾರಂಪರಿಕ ಜ್ಞಾನದ ಕುರಿತು ಕನ್ನಡದಲ್ಲಿ ಯಾವುದೇ ತರಹದ ಅಧ್ಯಯನಗಳು ನಡೆದಿರುವುದಿಲ್ಲ. ಹೀಗಾಗಿ ಜೇನುಕುರುಬ ಬುಡಕಟ್ಟಿನ ಮಹಿಳೆಯರ ಪಾರಂಪರಿಕ ಜ್ಞಾನವನ್ನು ತಿಳಿಸುವ ಅಧ್ಯಯನಗಳಲ್ಲಿ ಈ ಅಧ್ಯಯನವು ಮೊದಲ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಬುಡಕಟ್ಟುಗಳು ಆಧುನಿಕತೆ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಹೇಗೆ ಬದಲಾವಣೆಗೆ ಒಳಗಾಗುತ್ತಿದ್ದಾರೆ ಎಂದು ತಿಳಿದು ಬರುತ್ತದೆ. ಮುಖ್ಯವಾಗಿ ಜೇನುಕುರುಬ ಬುಡಕಟ್ಟು ತನ್ನ ಮೂಲ ಪರಂಪರೆಯನ್ನು ಕಳಚಿಕೊಂಡು ವಿವಿಧ ಪಲ್ಲಟಗಳಿಗೆ ಒಳಗಾಗುತ್ತ ಸಾಮಾಜಿಕ ಅನುಸಂಧಾನಕ್ಕೆ ಒಳಗಾಗಿದೆ ಎಂಬುದು ತಿಳಿದುಬರುತ್ತದೆ.

ಜೇನುಕುರುಬರಿಗೆ ಸಂಬಂಧಿಸಿದಂತೆ ಇದೊಂದು ಆದಿಮ ಆದಿವಾಸಿ ಬುಡಕಟ್ಟಾಗಿರುವುದರಿಂದ ಈ ಬುಡಕಟ್ಟಿನ ಮೂಲದಿಂದ ಹಿಡಿದು ಇಲ್ಲಿಯವರೆಗಿನ ಬೆಳವಣಿಗೆಯಲ್ಲಿನ ಎಲ್ಲಾ ಚಟುವಟಿಕೆಯಲ್ಲಿ ಮಹಿಳೆಯರು ಹೊಂದಿರುವ ಸರ್ವತೋಮುಖ ಜ್ಞಾನವು ಮುಂದಿನ ಪೀಳಿಗೆಯ ಅಧ್ಯಯನಕ್ಕೆ ಮಾರ್ಗಸೂಚಿಯಾಗುವುದಲ್ಲದೇ ಹಿಂದಿನ ಅಧ್ಯಯನದ ಲೋಪದೋಷಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಕಾರಣವಾಗುತ್ತದೆ. ಜೇನುಕುರುಬ ಆದಿವಾಸಿ ಬುಡಕಟ್ಟಿನ ಜೀವನ ಶೈಲಿಯ ಚಿತ್ರಣವನ್ನು ಹಾಗೂ ಮಹಿಳೆಯರ ಸಮಸ್ಯೆಯನ್ನು ಮತ್ತು ಅದಕ್ಕೆ ನಿವಾರಣೆಯನ್ನು ಕಂಡುಕೊಳ್ಳುವುದು.

ಮುಖ್ಯವಾಗಿ ಜೇನುಕುರುಬ ಬುಡಕಟ್ಟಿನ ಪುರುಷರಲ್ಲಿ ಉಂಟಾದ ಬದಲಾವಣೆಗಳಿಗೂ ಮಹಿಳೆಯರಲ್ಲಿ ಉಂಟಾದ ಬದಲಾವಣೆಗಳು ಯಾವ ಸ್ವರೂಪದಲ್ಲಿವೆ ಎಂಬುದನ್ನು ಅರಿಯುತ್ತೇವೆ. ಹಾಗೇ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಜೇನುಕುರುಬ ಬುಡಕಟ್ಟಿನ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತಿಗತಿಗಳನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಈ ಎಲ್ಲಾ ದೃಷ್ಟಿಯಿಂದ ಈ ಅಧ್ಯಯನವು ಮಹತ್ವವನ್ನು ಹೊಂದಿದೆಯೆಂದು ಹೇಳಬಹುದು.

## ೧. ೯. ಅಧ್ಯಯನದ ಅಧ್ಯಾಯಗಳ ವಿನ್ಯಾಸ

ಈ ಅಧ್ಯಯನವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಳ ವಿವರ ಈ ಕೆಳಗಿನಂತಿದೆ.

**ಅಧ್ಯಾಯ ಒಂದು** : ಅಧ್ಯಾಯ ಒಂದು ಪ್ರವೇಶವಾಗಿದ್ದು, ಇದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅದರ ಮಹತ್ವ, ಪದನಿಷ್ಪತ್ತಿ, ಅಧ್ಯಯನಕ್ಕೆ ಕೈಗೊಂಡ ವಿಧಾನಗಳು ಮತ್ತು ಅಧ್ಯಯನದ ರೂಪುರೇಷೆಗಳು ಹಾಗೂ ಇಲ್ಲಿಯವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಈ ಸಮೀಕ್ಷೆಯಲ್ಲಿ ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಪ್ರಕಟಣೆಗೊಂಡ ಕೃತಿಗಳು, ವಿವಿಧ ಪತ್ರಿಕೆಗಳಲ್ಲಿ ಬಂದ ಲೇಖನಗಳು, ವಿವಿಧ ವರದಿಗಳು ಮುಂತಾದವುಗಳ ಕುರಿತು ಅವಲೋಕಿಸಲಾಗಿದೆ.

**ಅಧ್ಯಾಯ ಎರಡು** : ಅಧ್ಯಾಯ ಎರಡು ಜೇನುಕುರುಬರ ಹಿನ್ನೆಲೆ ಎಂದಿದ್ದು, ಇದರಲ್ಲಿ ಮುಖ್ಯವಾಗಿ ಜೇನು ಕುರುಬರ ಮೂಲ ಮತ್ತು ಇತಿಹಾಸ, ಭೌತಿಕ ಲಕ್ಷಣ, ಭೌಗೋಳಿಕ ಹಂಚಿಕೆ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಭೌಗೋಳಿಕ ಸ್ವರೂಪ, ಜನಸಂಖ್ಯೆ, ಗುಡ್ಡಗಾಡು ಪ್ರದೇಶ, ಜೇನುಕುರುಬರ ಹಾಡಿಗಳು, ನೈಸರ್ಗಿಕ ಪರಿಸರ ಮುಂತಾದವುಗಳ ಕುರಿತು ವಿವರಿಸಲಾಗಿದೆ.

**ಅಧ್ಯಾಯ ಮೂರು** : ಅಧ್ಯಾಯ ಮೂರು ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನ ಎಂದಿದ್ದು, ಇದರಲ್ಲಿ ಕುಟುಂಬ, ಜೇನುಕುರುಬರ ಕುಲ/ಬೆಡಗುಗಳು, ಸಾಮಾಜಿಕ ಸಂರಚನೆ, ವಿವಾಹ, ಸಾವು, ಹುಟ್ಟು, ಋತುಮತಿ, ಅವರ ವಾರ್ಷಿಕಾವರ್ತನ ಆಚರಣೆಗಳು, ಜಾತ್ರೆಗಳು, ಉಡುಗೆ ತೊಡುಗೆ, ನಾಯಕತ್ವ, ಕುಲಪಂಚಾಯತಿಗಳು, ರಾಜಕೀಯ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ, ಆಧುನಿಕ ಶಿಕ್ಷಣ ವಿಧಾನವನ್ನು ತಿಳಿಸಲಾಗಿದೆ.

**ಅಧ್ಯಾಯ ನಾಲ್ಕು** : ಅಧ್ಯಾಯ ನಾಲ್ಕು ಜೇನುಕುರುಬರ ಪಾರಂಪರಿಕ ಸಾಂಸ್ಕೃತಿಕ ಜೀವನ ಎಂದಿದ್ದು, ಇದರಲ್ಲಿ ಜೇನುಕುರುಬರು ಅನುಸರಿಸುತ್ತ ಬಂದಿರುವ ಧಾರ್ಮಿಕ ಆಚರಣೆ, ದೈವಗಳು, ಭಾಷೆ, ಕುಶಲ ಕಲೆ, ಜನಪದ ಸಾಹಿತ್ಯ, ಜನಪದ ಕಲೆಗಳು, ಕ್ರೀಡೆಗಳು, ಕೋಲಾಟ, ಮತಾಂತರ ಮುಖ್ಯವಾಗಿ ಇವುಗಳಲ್ಲಿ ಮಹಿಳೆಯರ ಪಾತ್ರದ ಕುರಿತು ವಿವರಿಸಲಾಗಿದೆ.

**ಅಧ್ಯಾಯ ಐದು** : ಅಧ್ಯಾಯ ಐದು ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನವೆಂದಿದ್ದು, ಇದರಲ್ಲಿ ಜೇನುಕುರುಬರ ಮೂಲವೃತ್ತಿ ಯೊಂದಿಗೆ ಅವರ ಆಧುನಿಕ ವೃತ್ತಿಗಳ ಕುರಿತು ಮುಖ್ಯವಾಗಿ ಪಾರಂಪರಿಕ ವೃತ್ತಿ ಮತ್ತು ಆಧುನಿಕ ವೃತ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ, ಕುಮ್ರಿ ಬೇಸಾಯ, ಯೋಜನೆಗಳು, ಭೂ ಹಿಡುವಳಿ ಕುರಿತು ಅವಲೋಕಿಸಲಾಗಿದೆ.

**ಅಧ್ಯಾಯ ಆರು** : ಅಧ್ಯಾಯ ಆರು ಜೇನುಕುರುಬರ ಪಾರಂಪರಿಕ ಜ್ಞಾನ ಮತ್ತು ಆಧುನಿಕತೆ ಎಂದಿದ್ದು, ಇದರಲ್ಲಿ ಬೆಂಕಿ ಉತ್ಪಾದಿಸಿಕೊಳ್ಳುವ ಜ್ಞಾನ, ಬೆಂಕಿ ನಂದಿಸುವ ವಿಧಾನ, ಸಮಯವನ್ನು

ತಿಳಿಯುವ ವಿಧಾನ, ನೀರು ಕಂಡುಹಿಡಿಯುವ ವಿಧಾನ, ಮಳೆ, ಅರಣ್ಯ ಜ್ಞಾನ, ಮರಗಳು, ಪ್ರಾಣಿ ಜ್ಞಾನ, ಸಾಕು ಪ್ರಾಣಿ ಪಕ್ಷಿಗಳು, ಹಾವುಗಳು, ಪಾರಂಪರಿಕ ಹಾಡಿಗಳು, ಪಾರಂಪರಿಕ ವಸತಿ, ವಸ್ತು ಕಳುವಾದಾಗ ಕಂಡುಕೊಳ್ಳುವ ಬಗೆ, ಪಾರಂಪರಿಕ ಆಹಾರ ಪದ್ಧತಿ, ಜೇನು ಸಂಗ್ರಹಣೆ, ಬೇಟೆ, ಆಹಾರ ಸಂಸ್ಕರಣೆ, ಆಧುನಿಕ ಆಹಾರ ಪದ್ಧತಿ, ಔಷಧಿಯ ಜ್ಞಾನ, ಆನೆ ಮತ್ತು ಜೇನುಕುರುಬರು, ಪ್ರಾಣಿ ವೈದ್ಯ, ಮಾಂತ್ರಿಕ ವಿದ್ಯೆ, ರೋಗ ರುಜಿನಗಳಿಗೆ ಬಳಕೆಯಾಗುವ ಮಾಂತ್ರಿಕ ವಿದ್ಯೆ ಹಾಗೂ ಆಧುನಿಕ ಸವಾಲು, ಸಂಘರ್ಷಗಳನ್ನು ತಿಳಿಯಲಾಗಿದೆ.

**ಅಧ್ಯಾಯ ಏಳು** : ಅಧ್ಯಾಯ ಏಳು ಉಪಸಂಹಾರ ಎಂದಿದ್ದು, ಈ ಅಧ್ಯಯನದಲ್ಲಿ ಕಂಡು ಬಂದ ಜೇನುಕುರುಬರ ಸಮಸ್ಯೆಗಳು, ಅಧ್ಯಯನದ ಫಲಿತಗಳು, ಪರಿಹಾರೋಪಾಯಗಳು, ಅಧ್ಯಯನದ ಮುಂದಿನ ಸಾಧ್ಯತೆಗಳನ್ನು ತಿಳಿಸಲಾಗಿದೆ.

ಕೊನೆಯಲ್ಲಿ ಅನುಬಂಧಗಳಿದ್ದು, ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ವಕ್ತೃ ಮಾಹಿತಿ, ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ, ವ್ಯಕ್ತಿ ಸಂದರ್ಶನ ಪ್ರಶ್ನಾವಳಿ ಮಾದರಿ, ಸಮೀಕ್ಷೆಗೊಳಪಟ್ಟ ಅಂಕಿ ಅಂಶಗಳು, ಛಾಯಾಚಿತ್ರಗಳನ್ನು ಕೊಡಲಾಗಿದೆ.

**ಆಧಾರಗಳು**


ಎಡ್ಗರ್ ಥರ್ಸ್ಟನ್, ೧೯೦೯, *ದ ಕಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯ*.

ನಾರಾಯಣ ಕಿಕ್ಕೇರಿ, ೨೦೧೧, *ಜೇನು ನುಡಿ*, ನ್ಯಾಷನಲ್ ಫಕ್‌ಲೋರ್ ಸಪೋರ್ಟ್ ಸೆಂಟರ್, ಚೆನ್ನೈ

ನಾರಾಯಣ ಕಿಕ್ಕೇರಿ, ೨೦೧೧, *ಬುಡಕಟ್ಟು ಸಂಸ್ಕೃತಿ*, ಅರಹು ಕುರುಹು, ಮೈಸೂರು.

ನಾರಾಯಣ ಕಿಕ್ಕೇರಿ, ೨೦೧೧, *ಜೇನುಕುರುಬ ಬುಡಕಟ್ಟು ಜನಾಂಗದ ಅವ್ಯಕ್ತ ಪರಂಪರೆ*, ನ್ಯಾಷನಲ್ ಫಕ್‌ಲೋರ್ ಸಪೋರ್ಟ್ ಸೆಂಟರ್, ಚೆನ್ನೈ

ಕ್ಷೀರಸಾಗರ, ೨೦೦೮, *ಜೇನು ಆಕಾಶದ ಅರಮನೆಯೊ*, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

ಕ್ಷೀರಸಾಗರ, ೨೦೧೩, *ಕಾಡಿನ ನಾಡಿ ಮಿಡಿದವರು*, ಆದಿವಾಸಿ ಜೀವನ ಶಿಕ್ಷಣ ಕೇಂದ್ರ, ಶಿರ್ವಾ, ಉಡುಪಿ.

ನಂಜುಂಡಯ್ಯ ಎಚ್ ವಿ, ಮತ್ತು ಎಲ್ ಕೆ ಎ ಅಯ್ಯರ್, ೧೯೨೯,*ದ ಮೈಸೂರ್ ಟ್ರೈಬ್ಸ್ ಅಂಡ್ ಕಾಸ್ಟ್*,

ನಂಜುಂಡಯ್ಯ ಎಲ್ ಮೈಸೂರಿನ ವಿಶೇಷ ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ ಹೆಗ್ಗಡೆದೇವನ ಕೋಟೆ ತಾಲೂಕಿನ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಬುಡಕಟ್ಟುಗಳ ಕುರಿತಾಗಿ ವರದಿ, ೧೯೮೮

ಪ್ರಭಾಕರ ಎ ಎಸ್, ೨೦೦೬, *ಆದಿವಾಸಿ ಆಖ್ಯಾನ*, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

ಮಧು ಗುಂಡ್ಲುಪೇಟೆ, ೨೦೦೯, *ಬುಡಕಟ್ಟು ಜನಾಂಗಗಳ ಒಂದು ಅವಲೋಕನ*, ಚಾಮರ ಪ್ರಕಾಶನ, ಮೈಸೂರು.

ಮಹಾದೇವಯ್ಯ, ೨೦೦೯, *ಅವ್ಯಕ್ತ ಸಾಂಸ್ಕೃತಿಕ ನುಡಿ ಚಹರೆ*,ಬುಡಕಟ್ಟು ಅಧ್ಯಯನ,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,ಸಂಪುಟ-೬, ಸಂಚಿಕೆ-೧, ಪು.ಸ. ೮೮-೯೧.

ಮೇತ್ರಿ ಕೆ ಎಂ., ೨೦೦೨, *ಬುಡಕಟ್ಟು ಕುಲಕಸುಬುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸ. ೯೮-೯೯

ಲಲಿತ ಎ ಸಿ, ೧೯೯೩, *ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.ಸ. ೨೯

ವೀರಭದ್ರ ನಾಯ್ಕ ಪಿ. ೨೦೧೦, *ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರ ರಾವ್ ಚ ನ. ೨೦೧೧, *ಸಮಾಜ ಶಾಸ್ತ್ರ ದರ್ಶನ, ಭಾಗ ೨*, ಜೈ ಭಾರತ್ ಪ್ರಕಾಶನ, ಮಂಗಳೂರು, ಪು.ಸ. ೮೧೬

ಮೈಸೂರು ಮತ್ತು ಕೊಡಗು ಜಿಲ್ಲಾ ಗೆಜೆಟಿಯರ್

ಅಧ್ಯಾಯ ಎರಡು..........

# ಜೇನುಕುರುಬರ ಪಾರಂಪರಿಕ ಹಿನ್ನೆಲೆ

# ಅಧ್ಯಾಯ ಎರಡು

## ಜೇನುಕುರುಬರ ಪಾರಂಪರಿಕ ಹಿನ್ನೆಲೆ

# ಅಧ್ಯಾಯ ಎರಡು

# ಜೇನುಕುರುಬರ ಪಾರಂಪರಿಕ ಹಿನ್ನೆಲೆ

ಜಗತ್ತಿನ ಬುಡಕಟ್ಟುಗಳ ಇತಿಹಾಸದ ಪುಟಗಳನ್ನೊಮ್ಮೆ ತಿರುಗಿಸಿ ನೋಡಿದರೆ ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಪುಟ್ಟ ಇತಿಹಾಸವನ್ನು ನಿರ್ಮಿಸಿಕೊಂಡೇ ಬದುಕಿ, ಜೀವಂತಿಕೆಯನ್ನು ಉಳಿಸಿಕೊಂಡಿರುತ್ತದೆ. ಅಂತಹ ಮಾಹಿತಿಯನ್ನು ಆಯಾ ಬುಡಕಟ್ಟಿಗೆ ಸಂಬಂಧಿಸಿದ ಮೂಲ ಗ್ರಂಥಗಳಿಂದಲೂ, ಹಿರಿಯರ ಅನುಭವವನ್ನು ಮುಂದಿನ ಪೀಳಿಗೆಯವರಿಗೆ ತಿಳಿಸಿದ ಮಾಹಿತಿಯನ್ನು ದಂತ ಕಥೆಯ ರೂಪವನ್ನು ಪಡೆದು ಇತಿಹಾಸದ ವಿಷಯಕ್ಕೆ ನೀರೆರೆದಿರುತ್ತವೆ. ಆ ಸಮುದಾಯದ ಜನರು ಅಂತಹ ವಿಷಯಗಳನ್ನು ಅವರ ಹಬ್ಬ ಆಚರಣೆ, ಪೂಜೆಗಳಲ್ಲಿ, ಜಾತ್ರೆಗಳಲ್ಲಿ, ನೃತ್ಯದಲ್ಲಿ, ಹಾಡುಗಾರಿಕೆಯಲ್ಲಿ ಮೂಲದ ಸತ್ವವನ್ನು ಉಳಿಸಿಕೊಂಡೇ ಇರುತ್ತವೆ.

ಪ್ರತಿಯೊಂದು ಬುಡಕಟ್ಟು ತನ್ನದೇ ಆದ ಸೃಷ್ಟಿ ಪುರಾಣವನ್ನು ಹೊಂದಿರುವುದನ್ನು ಕಾಣುತ್ತೇವೆ. ಜೇನುಕುರುಬರಲ್ಲಿಯೂ ತಮ್ಮ ಸೃಷ್ಟಿಯ ಬಗ್ಗೆ ಹಲವಾರು ಬಗೆಗಳಲ್ಲಿ ತಿಳಿಸುತ್ತಾರೆ. ಅಂತಹ ಒಂದು ಮೂಲ ಶ್ರೀಮಂತ ಇತಿಹಾಸವನ್ನು ಜೇನುಕುರುಬ ಸಮುದಾಯವೂ ಹೊಂದಿದೆ. ಕ್ಷೇತ್ರ ಕಾರ್ಯದಲ್ಲಿ ವಕ್ತೃಗಳಿಂದ ಮಾಹಿತಿಯನ್ನು ಪಡೆಯುವ ಸಂದರ್ಭದಲ್ಲಿ ಇಂತಹ ಅನೇಕ ವಿಷಯಗಳು ಬೆಳಕಿಗೆ ಬಂದಿವೆ.

ಈ ಅಧ್ಯಾಯವು ಜೇನುಕುರುಬರ ಮೂಲ ಇತಿಹಾಸ, ಭೌಗೋಳಿಕವಾಗಿ ಅವರು ವಾಸಿಸುವ ನೆಲೆಗಳು, ಕುಟುಂಬ, ಜನಸಂಖ್ಯೆಯ ಮಾಹಿತಿಯನ್ನು ಒಳಗೊಂಡಿದೆ.

## ೨. ೧. ಮೂಲ ಮತ್ತು ಇತಿಹಾಸ

ಬಹಳ ಹಿಂದೆ ಇಡೀ ಪ್ರಪಂಚದಲ್ಲಿ ಪ್ರಳಯ ಸಂಭವಿಸಿತ್ತು. ಆಗ ಗಂಡ ಹೆಂಡತಿಯರಿಬ್ಬರು ಮತ್ತು ಅವರ ಮಕ್ಕಳು ಪ್ರಳಯದಲ್ಲಿ ಸಿಲುಕಿದರು. ಇಡೀ ಸೃಷ್ಟಿಯೇ ಸರ್ವನಾಶವಾಗುವಂತಹ ಪ್ರಳಯದಲ್ಲಿ ಗಂಡ ಹೆಂಡತಿಯರು ದೈವವನ್ನು ಬೇಡಿಕೊಂಡರು. ಹೇಗಾದರೂ ಮಾಡಿ ನಮ್ಮ ಸಂತತಿಯನ್ನು ಉಳಿಸಿಕೊಡು ದೇವರೇ. ಎಂದು ಆಗ ದೈವವು ತೋರಿದ ಮಾರ್ಗವೆಂದರೆ ನೀವು ನಿಮ್ಮ ಮಕ್ಕಳನ್ನು ಹೀಗೆ ರಕ್ಷಿಸಬಹುದು ದೊಡ್ಡ ಸೋರೆಬುರಡೆಯನ್ನು ಸೀಳಿ ಅದರ ತಿರುಳು ತೆಗೆದು ಅವರಲ್ಲಿ ಮಕ್ಕಳನ್ನು ಇರಿಸಿ ಸಸರೇ ಜೇನಿನ ಮೇಣವನ್ನು ಮೆತ್ತಿ ನೀರಿನಲ್ಲಿ ತೇಲಿ ಬಿಡಿ ಎಂದು ಹೇಳಿದಂತೆ ಭಾಸವಾಯಿತು. ಅದರಂತೆ ಆ ಗಂಡ ಹೆಂಡತಿ ಮಾಡಿದರು. ಅವರು ಪ್ರಳಯದಲ್ಲಿ

ಮುಳುಗಿ ಸತ್ತರು. ಇತ್ತ ಸೋರೆಬುರುಡೆಯಲ್ಲಿ ಮಕ್ಕಳಿಬ್ಬರು ತೇಲುತ್ತಾ ಸಾಗಿದ್ದರು. ಮುಂದೆ ಪ್ರಳಯ ನಿಂತ ಮೇಲೆ ಬದುಕುಳಿದ ಈ ಮಕ್ಕಳೇ ಮುಂದೆ ಜೇನುಕುರುಬರಾದರು ಎಂದು ದಂತಕತೆಯ ರೂಪದಲ್ಲಿ ಸಮುದಾಯದ ಹಿರಿಯರು ತಿಳಿಸುತ್ತಾರೆ.

ಭೂಮಿಯ ಮೇಲೆ ಜೀವರಾಶಿ ಹುಟ್ಟುವ ಪೂರ್ವದಲ್ಲಿ ತಮ್ಮ ಬುಡಕಟ್ಟಿನ ಎರಡು ಗೊಂಬೆಗಳನ್ನು ಆದಿ ಅಯ್ಯನು ಮಣ್ಣಿನಲ್ಲಿ ಸೃಷ್ಟಿಸಿ ಜೀವ ತುಂಬಿ ಬುರುಡೆಯಲ್ಲಿರಿಸಿ ನೀರಿನಲ್ಲಿ ತೇಲಿಬಿಟ್ಟನು. ಆ ಎರಡು ಮಣ್ಣಿನ ಗೊಂಬೆಗಳು ಜೀವ ಪಡೆದು ಅಣ್ಣ ತಂಗಿಯರಾದರು. ಇವರ ಸಂತತಿಯೇ ಮುಂದೆ ಈ ಬುಡಕಟ್ಟಿನ ಮೂಲ ಪುರುಷರಾದರು. ಅವರಿಂದಾಗಿಯೇ ಈ ಭೂಮಿಯ ಮೇಲೆ ಸೃಷ್ಟಿ ಕಾರ್ಯ ಪ್ರಾರಂಭವಾಗಿ ಎಲ್ಲಾ ಜೀವಿಗಳನ್ನು ಸೃಷ್ಟಿಸಿದರು ಎಂಬ ಕಥೆಯನ್ನು ಜೇನುಕುರುಬರು ಹೇಳುತ್ತಾರೆ. ಹೀಗೆ ಇವರಲ್ಲಿ ನಿಸರ್ಗ, ಪ್ರಾಣಿ, ಪಕ್ಷಿಗಳ ಕುರಿತು ನೂರೆಂಟು ಕಥೆಗಳು ಪ್ರಚಲಿತವಿವೆ. ಈ ಕಥೆಗಳೆಲ್ಲಾ ಆ ಬುಡಕಟ್ಟಿನ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತವೆ (ಮಾ: ಶ್ರೀಮತಿ ಅಕ್ಕಮ್ಮ, ಆಲದಕಟ್ಟೆ ಹಾಡಿ).

"ಜೇನುಕುರುಬರೆ ಹೇಳುವಂತೆ, ಅವರ ಮೂಲ ಪ್ರಪಂಚದ ಆರಂಭದ ದಿನಗಳಲ್ಲಿ ಇಡೀ ಭೂಮಂಡಲ ನೀರಿನಿಂದ ಆವೃತವಾಗಿದ್ದು ಒಂದು ಬಾಟಲಿಯ ತುದಿಯಷ್ಟು ಜಾಗ ಕಂಡು ಬಂತು, ಆನಂತರ ಒಂದು ಅಂಗೈಯಷ್ಟು ಜಾಗ ಕಂಡುಬಂದು ಅಲ್ಲಿ ಅಣ್ಣ ತಂಗಿಯರ ಜನನವಾಗಿ ಅವರು ಅಲ್ಲಿಯ ಮಣ್ಣನ್ನು ತೆಗೆದುಕೊಂಡು ಎರಡು ಗೊಂಬೆಗಳನ್ನು ಮಾಡಿ ಅವಕ್ಕೆ ಕೊಂತ ಮತ್ತು ಕೊಂತಿ ಎಂದು ಹೆಸರಿಟ್ಟು ಅವರೇ ತಮ್ಮ ಪೂರ್ವಜರೆಂದು ನಂಬಿದರು. ಅವರು ವಸಂತಕಾಲದಲ್ಲಿ ಜನಿಸಿದ್ದರಿಂದ ಇಂದಿಗೂ ಜೇನು ಕುರುಬರು ಪ್ರತಿವರ್ಷ ಇದೇ ಅವಧಿಯಲ್ಲಿ ಕೊಂತ ಪೂಜೆಯನ್ನು ಮಾಡುತ್ತಾರೆ" (ಮಾ: ಶ್ರೀಮತಿ ನೂರಾಳಿ, ಕೆರೆ ಹಾಡಿ).

ಪ್ರಪಂಚದ ಹುಟ್ಟಿನ ಬಗ್ಗೆ ಜೇನುಕುರುಬರಲ್ಲಿನ ಕಲ್ಪನೆ ಎಂದರೆ, ಒಮ್ಮೆ ಈ ಭೂಮಿ ಪ್ರವಾಹದಲ್ಲಿ ನೀರಿನಲ್ಲಿ ತೇಲಿ ಹೋಗುತ್ತಿತ್ತು. ಶಿವನ ಕೃಪೆಯಿಂದ ಆ ನೀರಿನಲ್ಲಿ ತೇಲಿ ಬಂದ ಒಂದು ಬುರುಡೆಯಲ್ಲಿದ್ದ ಹೆಣ್ಣು ಗಂಡುಗಳಿಬ್ಬರಿಂದ ವಂಶಾಭಿವೃದ್ಧಿಯಾಗಿ ಬಂದವರು ಜೇನುಕುರುಬರು ಎಂಬ ಕಲ್ಪನೆ ಹಲವರಲ್ಲಿದೆ.

ಮದುಮಲೆ. ಜೇನುಮಲೆ. ಇಪ್ಪಿಮಲೆ ಎಂಬ ಬೆಟ್ಟಗಳಿದ್ದವು. ಮದುಮಲೆಯಲ್ಲಿ 'ಸೋಮಜ್ಜ ಬೆಟ್ಟಕುರುಬ' ವಾಸಿಸುತ್ತಿದ್ದ. ಜೇನುಮಲೆಯಲ್ಲಿ 'ಬೈರಜ್ಜ ಜೇನುಕುರುಬ' ವಾಸಿಸುತ್ತಿದ್ದ. ಇಪ್ಪಿಮಲೆಯಲ್ಲಿ 'ವಾಮೆಕೂಟ'ನೆಂಬ ಪಣಿಯ ಬುಡಕಟ್ಟಿನ ಹಿರಿಯ ವಾಸಿಸುತ್ತಿದ್ದ, ಬೆಟ್ಟಕುರುಬರ ಸೋಮಜ್ಜ, ಜೇನುಕುರುಬರ ಬೈರಜ್ಜ. ಒಂದೇ ದಿನ ಒಂದೇ ಗಳಿಗೆಯಲ್ಲಿ ಜನಿಸಿದ್ದರಿಂದ ಒಬ್ಬರಿಗೊಬ್ಬರು 'ಅಣ್ಣಾ' ಎಂದು ಸಂಬೋಧಿಸಿಕೊಳ್ಳಲು ಆರಂಭಿಸಿದರು (ಮಾ: ಶ್ರೀ ವಿಠಲ ನಾಣಜ್ಜಿ).

ಮುದುಮಲೆ ಎಂದರೆ ತಾಯಿ ಜೇನುಸ್ಮೃತಿಯಾದ ಮೂಲನೆಲೆ.ಈಗಿನ ಹೆಚ್ ಡಿ ಕೋಟೆಯ ಬಳ್ಳೆಹಾಡಿಯಿಂದ ಕೇರಳದ ಗಡಿಭಾಗದವರೆಗೂ ಹರಡಿರುವ ಪ್ರದೇಶವನ್ನು ಮುದುಮಲೆ ಎಂದು ಕರೆಯಲಾಗುತ್ತದೆ. ಈ ಪ್ರದೇಶಲ್ಲಿ ಜೇನು ಕುರುಬರು, ಬೆಟ್ಟ ಕುರುಬರು ದಟ್ಟವಾಗಿ ಹರಡಿಕೊಂಡಿರುವರು.

**ಜೇನುಮಲೆ** : ಜೇನು ಹೆಚ್ಚಾಗಿ ಈ ಬೆಟ್ಟದಲ್ಲಿ ಸಿಗುತ್ತಿದ್ದುದರಿಂದ ಹಾಗೂ ಇಲ್ಲಿ ಜೇನುಕುರುಬರು ವಾಸಿಸುತ್ತಿದ್ದುದರಿಂದ ಇದನ್ನು ಜೇನುಮಲೆ ಎಂದು ಕರೆಯುತ್ತಿದ್ದರು.

**ಇಪ್ಪಿಮಲೆ** : 'ಇಪ್ಪಿ' ಎಂಬುದು ಯರವ ಭಾಷೆಯಲ್ಲಿ ಬಳಸಲ್ಪಡುವ ಪದ. ಯರವ ಭಾಷೆಯಲ್ಲಿ 'ಇಪ್ಪಿ' ಎಂದರೆ 'ಭಯ ಬೀಳುವುದು' ಅಥವಾ 'ಬೆಚ್ಚಿ ಬೀಳುವುದು' ಎಂದು ಅರ್ಥ

ಒಂದು ಸಲ ಜೇನುಕುರುಬರ 'ಬೈರಜ್ಜ' ಬೆಟ್ಟ ಕುರುಬರ 'ಸೋಮಜ್ಜ' ಒಂದು ಗೂಡಿ ಮಾತನಾಡುತ್ತಿರುವಾಗ ಅಲ್ಲಿಗೆ ಯರವರ 'ವಾಮೇಕೂಟ' ನೆಂಬುವನು ಬರುತ್ತಾನೆ. ಅವನ್ನು ಅಲ್ಲಿಯೇ ಕುಳಿತು ಇವರು ಮಾತನಾಡುವುದನ್ನು ಆಲಿಸುತ್ತಿರುತ್ತಾನೆ, ವಾಮೇಕೂಟನಿಗೆ ಕಾಣಿಸದಂತೆ ಹಿಂದೆಗಡೆಯಿಂದ ಒಬ್ಬ ವ್ಯಕ್ತಿ ಬಂದು, ವಾಮೇಕೂಟನ ಭುಜಗಳನ್ನು ಎರಡು ಕೈಯಿಂದ ಎರಡೂ ಕಡೆ ಒತ್ತುತ್ತಾನೆ ಆಗ ವಾಮೆಕೂಟ ಬೆಚ್ಚಿ ಬಿದ್ದು ಓಡಿಹೋಗಿ ಒಂದು ಬೆಟ್ಟವನ್ನು ಸೇರಿ ಅವಿತು ಕೊಳ್ಳುತ್ತಾನೆ. ಅವನನ್ನು ಕರೆ ತಂದು ಇವರ ಗುಂಪಿನಲ್ಲಿಯೇ ಸೇರಿಸಿಕೊಳ್ಳುತ್ತಾರೆ. ಹೀಗೆ ಹೆದರಿ ಓಡಿ ಹೋಗಿ ಬೆಟ್ಟ ಸೇರಿದ್ದರಿಂದ ವಾಮೆಕೂಟನನ್ನು ಇಪ್ಪಿಮಲೆಯವರೆಂದು ಗುರುತಿಸಲಾಯಿತು.

ಬೈರಜ್ಜ, ಸೋಮಜ್ಜ ಜೊತೆ ಜೊತೆಯಲ್ಲಿಯೇ ಬೆಳೆದರು. ವಾಮೆಕೂಟ ಬೇರೆಯವನು. ವಾಮೆಕೂಟ ಒಂದು ಸಲ ಬೈರಜ್ಜ ಮತ್ತು ಸೋಮಜ್ಜರನ್ನು ಒಂದು ಕಡೆ ಇರುವುದನ್ನು ನೋಡಿ ಓಡಿಹೋಗುತ್ತಿದ್ದ. ಆಗ ವಾಮೆಕೂಟ 'ಅಚ್ಚ ನನ್ನ ಬಿಡಿ' ಎಂದು ಸಂಬೋಧಿಸಿದನು. 'ಅಚ್ಚ' ಎಂದರೆ ಕನ್ನಡದಲ್ಲಿ ಅಪ್ಪ ಎಂದರ್ಥ. ಹೆದರಿ ಓಡುತ್ತಿದ ವಾಮೆಕೂಟನನ್ನು ತಡೆದು ನೀನು ಓಡುವುದೇಕೆ? ನೀನು ನಮ್ಮ ಗುಂಪಿನಲ್ಲಿ ಒಬ್ಬನಾಗಿರು ಎಂದು ತಮ್ಮ ಕೂಟಕ್ಕೆ ಸೇರಿಸಿಕೊಂಡರು. ಅಂದಿನಿಂದ ಎಲ್ಲರೂ ಒಟ್ಟಾಗಿ ಪಕ್ಕ-ಪಕ್ಕದಲ್ಲಿ ಗುಡಿಸಲು ನಿರ್ಮಿಸಿಕೊಂಡು ಜೀವಿಸಲಾರಂಭಿಸಿದರು. ಈಗಲೂ ಮೈಸೂರು, ಚಾಮರಾಜ ನಗರ, ಕೊಡಗು ಜಿಲ್ಲೆಗಳ ಆದಿವಾಸಿ ನೆಲೆಗಳಲ್ಲಿ ಜೇನುಕುರುಬ, ಬೆಟ್ಟಕುರುಬ ಮತ್ತು ಪಣಿಯ ಬುಡಕಟ್ಟಿನವರು ಒಟ್ಟಿಗೆ ವಾಸವಾಗಿರುವುದನ್ನು ಕಾಣುತ್ತೇವೆ (ಮಾ: ಗೋಪಾಲ, ಶ್ರೀಮತಿ ಹೊನ್ನಿ).

ಜೇನು ಕುರುಬರ ಹಳೆಯ ತಲೆಮಾರಿನವರು ಬಾಳಿ ಬದುಕಿದ್ದ ವಾಸಸ್ಥಾನಗಳನ್ನು ಇವರು "ಜಮ್ಮ" ಎಂದು ಕರೆಯುತ್ತಾರೆ.

## ೨. ೨. ಭೌತಿಕ ಲಕ್ಷಣ

ಜೇನುಕುರುಬ ಬುಡಕಟ್ಟಿನ ಜನರಿಗೆ ಅವರದೇ ಆದ ಭೌತಿಕ ಲಕ್ಷಣಗಳಿವೆ. ಕಡು ಕಪ್ಪು ಬಣ್ಣವನ್ನು ಹೊಂದಿರುತ್ತಾರೆ. ಗುಂಗರು ಕೂದಲು ಇರುತ್ತವೆ, ಅಗಲವಾದ ಹಣೆಯನ್ನು ಹೊಂದಿರುತ್ತಾರೆ. ಸಾಮಾನ್ಯವಾಗಿ ಕುಳ್ಳ ಜನಾಂಗದವರು, ತುಂಬಾ ಎತ್ತರ ಎಂದು ಹೇಳಿಕೊಳ್ಳುವಂತಿಲ್ಲ. ಸರಾಸರಿ ನಾಲ್ಕರಿಂದ ಐದು ಅಡಿ ಎತ್ತರ ಇರುತ್ತಾರೆ, ಧ್ವನಿ ಜೋರಾಗಿರುತ್ತದೆ. ಕಟುಮಸ್ತಾಗಿರುತ್ತದೆ. ಏಕೆಂದರೆ, ಇವರು ಕಾಡಿನಲ್ಲಿ ಬೇಟೆಗೆ ಹೋದಾಗ ಕಾಡಿನಲ್ಲಿ ಸೊಪ್ಪು, ಅಣಬೆ, ಗೆಣಸು ತರಲು ಹೋದಾಗ ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಒಬ್ಬರಿಗೊಬ್ಬರು ಚದುರಿ ಹೋಗಿದ್ದ ಸಂದರ್ಭದಲ್ಲಿ ಜೋರಾಗಿ ಕಿರುಚುವ ಮೂಲಕ ಇವರು ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

## ೨. ೩. ಭೌಗೋಳಿಕ ನೆಲೆಗಳ ಹಿನ್ನೆಲೆ

ಜೇನುಕುರುಬರು ವಾಸಿಸುತ್ತಿರುವ ನೆಲೆಗಳ ಹೆಸರುಗಳಿಗೆ ಬಹಳ ವಿಶಿಷ್ಟವಾದ ಐತಿಹ್ಯವಿದೆ. ಕೆಲವು ಹೆಸರುಗಳಿಗೆ ಅವುಗಳ ಹಿನ್ನೆಲೆಯಲ್ಲಿ ನಡೆದಿರುವ ಘಟನೆಗಳು ಸಾಕ್ಷಿಯಾಗಿ ಅಂತಹ ಹೆಸರುಗಳು ಬಂದಿದೆ. ಅಂತಹ ನೆಲೆಗಳ ವಿವರ ಈ ಕೆಳಗಿನಂತಿದೆ.

**ತೇರುಮಾಳ** : ಮಾವು ಕೊಲ್ಲಿಯಿಂದ ತೇರನ್ನು ಎಳೆದು ತಂದು ಬಿಟ್ಟ ಸ್ಥಳಕ್ಕೆ ತೇರುಮಾಳ ಎಂದು ಕರೆದಿದ್ದಾರೆ.

**ಸೀತೆಕೋಣ** : ರಾಮಾಯಣದ ಸೀತೆಯ ವನವಾಸದ ಸಂದರ್ಭದಲ್ಲಿ ನೀರಿನಲ್ಲಿ ಮುಳುಗಿ ಸುರಂಗದಲ್ಲಿ ಹೋಗಿ ಮಾವುಕಲ್ಲಿನ ದೇವಸ್ಥಾನದ ಬಳಿ ಆಚೆ ಬರುತ್ತಾಳೆ. ಇದು ಇರ್ಪುಜಲಪಾತದ ಬಳಿ ವಿರಾಜಪೇಟೆ ತಾಲೂಕಿನ ಕೊಡಗು ಜಿಲ್ಲೆಯಲ್ಲಿದೆ.

**ತೊಟ್ಟಿಲುಕೋಣ** : ಅಮ್ಮಾಳೆ ಅಜ್ಜಯ್ಯನಿಗೆ ತೊಟ್ಟಿಲು ಆಕಾರದಲ್ಲಿದ ಬಾವಿಯಿಂದ ನೀರು ತಂದು ಪೂಜೆ ಮಾಡಿದ್ದರಿಂದ ಇದಕ್ಕೆ ತೊಟ್ಟಿಲುಕೋಣ ಎಂಬ ಹೆಸರು ಬಂದಿದೆ.

**ಜಾಡಲ** : ಜನರು ಹೋಡಾಡಿದ ಜಾಡು ಜನರು ಹೆಜ್ಜೆ ಇಟ್ಟಂತಹ ಸ್ಥಳ ಅಲ್ಲಿಗೆ ಯಾರೇ ಹೋದರು ಹೆಜ್ಜೆ ಗುರುತು ಹಾಗೆಯೇ ನಿಲ್ಲುತ್ತಿತ್ತು ಎಂಬ ಇತಿಹಾಸವಿದೆ.

**ತೋರುಮಂಗಲ** : ಅಮ್ಮಾಳೆಯ ಸ್ವಾಮಿ ದೇವರು ಈ ಸ್ಥಳವನ್ನು ಯಾರೇ ತುಳಿದರು ಬೆರಳು ತೋರಿಸಿ ಇಂತಹ ವ್ಯಕ್ತಿಯೇ ಬಂದಿದ್ದನು ಎಂದು ತಿಳಿಸುತ್ತಿತ್ತು ಎಂಬ ಸಂಜಿಕೆ ಇದೆ.

**ದೊಡ್ಡಗದ್ದೆಮಾಳ** : ಇದು ನಾಗರಹೊಳೆಯಲ್ಲಿ ಅತಿದೊಡ್ಡ ಗಡಿಯನ್ನು ಹೊಂದಿದ್ದರಿಂದ ಮತ್ತು ಭತ್ತ ಬೆಳೆಯುತ್ತಿದ್ದುದರಿಂದ ಇದನ್ನು ದೊಡ್ಡಗದ್ದೆಮಾಳ ಎಂದು ಕರೆಯುತ್ತಾರೆ.

**ತೂಪುರಕಾಡು** : ನಾಗರಹೊಳೆಯಲ್ಲಿ ಒಂದು ಗಡಿಯಲ್ಲಿ ತೂಪುರ ಮರಗಳು ಹೆಚ್ಚಾಗಿ ಇದ್ದುದರಿಂದ ಅದನ್ನು ತೂಪುರಕಾಡು ಎಂದು ಹೆಸರು ಬಂದಿದೆ.

**ಬೇರ್ಕಡ** : ಬಹಳ ಹಿಂದೆ ಭಾವ ಭಾಮೈದುನರಿಬ್ಬರು ಬಿದಿರಿನ ಕೊಟ್ಟದಲ್ಲಿ ಜೇನುತುಪ್ಪ  ತರುತ್ತಿದ್ದಾಗ ಒಂದು ಮರದ ಬೊಡ್ಡೆಯ ಮೇಲೆ ಕಾಲಿಟ್ಟಾಗ ಆ ಬೊಡ್ಡೆಯು ಮುರಿದು ಭಾವ ಭಾಮೈದುನರು ಬೇರೆ ಬೇರೆ ಕಡೆ ಪ್ರತ್ಯೇಕವಾಗಿ ಬಿದ್ದಿದ್ದರಿಂದ ಅದನ್ನು ಬೇರ ಕಡ ಎಂಬ ಹೆಸರು ಬಂದಿದೆ. ಇದು ನಾಗರಹೊಳೆಯ ಕಾಡಿನಲ್ಲಿರುವ ನೆಲೆ.

**ಕೂಪುರ ಗಡಿಕೆರೆ** : ಕೆರೆಯ ಸುತ್ತ ಮುತ್ತ ಕೂಪುರ ಮರಗಳು ಹೆಚ್ಚಾಗಿ ಬೆಳೆದಿದ್ದರಿಂದ ಆ ನೆಲೆಯನ್ನು ಕೂಪುರ ಗಡಿ ಎಂದು ಕರೆದರು.

**ಅವರೆ ಹಾಕಿದ ಕೆರೆ** : ಕಾಡಿನಲ್ಲಿ ಅವರೆ ಕಾಯಿಯನ್ನು ಹೆಚ್ಚಾಗಿ ಬೆಳೆಯಲು ಫಲವತ್ತಾದ  ಮಣ್ಣಿನ ಸ್ಥಳವಿತ್ತು ಅಲ್ಲಿ ಅವರೆ ಬೀಜ ಬಿತ್ತಿ ಹೆಚ್ಚು ಅವರೆ ಕಾಯಿಯನ್ನು ಪಡೆಯುತ್ತಿದ್ದರು ಆದ್ದರಿಂದ ಅವರೇ ಹಾಕಿದ ಕೆರೆ ಎಂದು ಕರೆದರು.

**ಹೆಗ್ಗರ ಕಾಡು** : ಹೆಗ್ಗರೆ ಪಕ್ಷಿಯು ಈ ಕಾಡಿನಲ್ಲಿ ಹೆಚ್ಚಾಗಿ ಕಂಡು ಬಂದಿದ್ದರಿಂದ ಹೆಗ್ಗರ ಕಾಡು ಎಂಬ ಹೆಸರು ಬಂದಿದೆ.

**ಮುತ್ತಗೆ ಹಾಡಿ ಕೋರೆ** : ಮುತ್ತಗೆ ಮರಗಳು ಒತ್ತಾತ್ತಾಗಿ ಬೆಳೆದಿದ್ದನ್ನು ನೋಡಿದ ಜೇನುಕುರುಬರು ಇದಕ್ಕೆ ಮುತ್ತಗೆ ಹಾಡಿ ಕೋರೆ ಎಂದು ಕರೆದರು.

**ಬೋಳಿಸತ್ತಹಳ್ಳ** : ಹಿಂದಿನ ಕಾಲದಲ್ಲಿ 'ಬೋಳಿ' ಎಂಬ ಜೇನುಕುರುಬ ಸಮುದಾಯದ ಮಹಿಳೆಯೊಬ್ಬರು ಕಾಲು ಜಾರಿ ಬಿದ್ದ ಕಾರಣ ಅದಕ್ಕೆ ಬೋಳಿಸತ್ತಹಳ್ಳ ಎಂದು ಹೆಸರು ಕಟ್ಟಿದ್ದರು.

**ಹುಳಿಮಾವಿನಹಳ್ಳ** : ಮಾವಿನಮರದ ತೋಪು ದಟ್ಟವಾಗಿದ್ದು ಅದು ಹುಳಿ ಮಾವಿನ ಸೊಪ್ಪು ಆಗಿದ್ದರಿಂದ ಅದಕ್ಕೆ ಹುಳಿ ಮಾವಿನ ತೋಪು ಎಂದು ಕರೆದರು.

**ಆನೆ ಮುದುಕು ಮುಟ್ಟ** : ಹಿಂದೆ ಜೇನುಕುರುಬರ ಮಹಿಳೆಗೆ ಬಸವನೆಂಬ ಒಬ್ಬ ಮಗನಿದ್ದ. ಅವನು ಆನೆಯಂತೆ ಗರ್ಜಿಸುತ್ತಾ ಮರಗಳ ಕೊಂಬೆಗಳನ್ನು ಮುರಿಯುತ್ತಿದ್ದ. ಅವನ್ನು ಹಳ್ಳದಲ್ಲಿ ಸ್ನಾನ ಮಾಡುವಾಗ ಆನೆಯಂತೆ ಹೊರಳಾಡುತ್ತಾ ಸ್ನಾನ ಮಾಡುತ್ತಿದ್ದ ಆದ್ದರಿಂದ ಈ ತಾಯಿ ಇದ್ದ ನೆಲೆಗೆ ಆನೆ ಮುದುಕಿ ಮುಟ್ಟ ಎಂದು ಕರೆದರು.

**ಕಾರೆ ಅಡ್ಲು ಸುಡುನೆಲ** : ಈ ನೆಲೆಯಲ್ಲಿ ಕಾರೆ ಮರಗಳು ಹೆಚ್ಚಾಗಿದ್ದು ಪಕ್ಕದಲ್ಲಿಯೇ ಸ್ಮಶಾನ ಇತ್ತು ಜೇನುಕುರುಬರಲ್ಲಿ ಯಾರಾದರೂ ಸತ್ತರೆ ಈ ಭಾಗದಲ್ಲಿ ಈ ಕಾರೆ ಅಡ್ಲು ಸ್ಮಶಾನಕ್ಕೆ ತಂದು ಹೂಳುತ್ತಿದ್ದರು ಆದ್ದರಿಂದ ಇದನ್ನು ಕಾರೆ ಅಡ್ಲು ಸುಡು ನೆಲೆ ಎಂದು  ಕರೆದರು.

**ಸುಣ್ಣ ಪುರಳೆ ಕಾಡು** : ಈ ಕಾಡಿನಲ್ಲಿ ಸುಣ್ಣದ ಕಲ್ಲುಗಳು ಹೆಚ್ಚಾಗಿ ಇದ್ದವು. ಸುಣ್ಣದ ರೀತಿಯ ಕಲ್ಲುಗಳು ನುಚ್ಚಾಗಿ (ಅತಿಸಣ್ಣ) ಇದ್ದುದರಿಂದ ಇದನ್ನು ಸುಣ್ಣ ಪುರಲೆ ಕಾಡು ಎಂದು ಕರೆದರು.

**ಸಂಪಗೆ ಬೋರೆ ಕಾಡು** : ಈ ನೆಲೆಯಲ್ಲಿ ಸಂಪಿಗೆ ಮರಗಳು ಹೆಚ್ಚಾಗಿ ಬೆಳೆಯುತ್ತಿದ್ದವು. ಏಪ್ರಿಲ್ ಮೇ ತಿಂಗಳಲ್ಲಿ ಹೆಚ್ಚಾಗಿ ಹೂವು ಬಿಟ್ಟು ಆ ಸ್ಥಳದ ಸುತ್ತಾ ಮುತ್ತಾ ಸಂಪಗೆ ಹೂವಿನ ಸುವಾಸನೆ ಬೀರುತ್ತಿದ್ದದರಿಂದ ಇದನ್ನು ಸಂಪಿಗೆ ಬೋರೆ ಕಾಡು ಎಂದು ಕರೆದರು.

**ಕಾಟ ಮೆಟ್ಟ ಕಾಡು** : ಕಾಡೆಮ್ಮೆಗಳು ಹೆಚ್ಚಾಗಿ ಈ ಜಾಗದಲ್ಲಿ ಬಂದು ಮೇವು ತಿಂದು ಹೋಗುತ್ತಿದ್ದುದರಿಂದ ಇದನ್ನು ಕಾಟ ಮೆಟ್ಟಕಾಡು ಎನ್ನುತ್ತಿದ್ದರು.

**ಕಾರಳಳ್ಳ** : ಒಂದು ಹಳ್ಳದ ಸುತ್ತಾ ಮುತ್ತಾ ಉಪ್ಪು ಮಿಶ್ರಿತ ಮಣ್ಣು ಇದ್ದು, ಅಲ್ಲಿ ಆನೆ, ಕಾಟಿ ಮುಂತಾದವು ಉಪ್ಪು ಮಿಶ್ರಿತ ಆ ಮಣ್ಣನ್ನು ತಿನ್ನುತ್ತಿದ್ದವು, ಆದ್ದರಿಂದ ಅದಕ್ಕೆ ಕಾರಳಹಳ್ಳ ಎಂದು ಹೆಸರು ಬಂದಿದೆ. ಪ್ರಾಣಿಗಳು ಈ ಮಣ್ಣನ್ನು ತಿಂದರೆ ಅವುಗಳಿಗೆ ತೊಂದರೆಯಾಗುತ್ತಿರಲಿಲ್ಲ.

**ಬಾವಿಹಳ್ಳ** : ಬೇಸಿಗೆಯಲ್ಲಿಯೂ ನೀರು ರಭಸವಾಗಿ ಆಳವಾಗಿ ಹರಿಯುತ್ತಿದ್ದ ಈ ನೆಲೆಗೆ ಬಾವಿಹಳ್ಳ ಎಂದು ಕರೆದರು.

**ಮುಂಡಗೆ ಹಳ್ಳ** : ಹಳ್ಳದ ಪಕ್ಕ ಮುಂಡಗೆ ಮರಗಳು ಹೆಚ್ಚಾಗಿ ಬೆಳೆದಿದ್ದ ಈ ನೆಲೆಯನ್ನು ಮುಂಡಗೆ ಹಳ್ಳ ಎಂದು ಕರೆದರು. ಈ ಮುಂಡಗೆ ಕಾಯಿಯನ್ನು ಜಜ್ಜಿ ಆನೆಗೆ ಸ್ನಾನ ಮಾಡಿಸಲು ಬಳಸುತ್ತಿದ್ದರು. ಮುಂಡಗರಿಯಿಂದ ಚಾಪೆ ಹೆಣೆಯುತ್ತಿದ್ದರು

**ಹುಲಿಪಟ್ಟಿ ಕೆರೆ** : ಇಲ್ಲಿ ಹುಲಿಗಳು ಹೆಚ್ಚಾಗಿ ಓಡಾಡುತ್ತಿದ್ದವು, ಅಲ್ಲಿದ್ದ ನೀರಿನ ನೆಲೆಯಲ್ಲಿಗೆ ಒಂದು ನೀರು ಕುಡಿದು ವಿಶ್ರಮಿಸುತ್ತಿದ್ದವು, ಆದ್ದರಿಂದ ಈ ನೆಲೆಗೆ ಹುಲಿಪಟ್ಟಿ ಕೆರೆ ಎಂಬ ಹೆಸರು ಬಂದಿತು.

**ನುಚ್ಚುಕಲ್ಲು ಬೋರೆ (ದಿಣ್ಣೆ)** : ಈ ಕಾಡಿನಲ್ಲಿ ನುಚ್ಚು ಕಲ್ಲು ಹೆಚ್ಚಾಗಿದ್ದವು. ಆದ್ದರಿಂದ ಆ ನೆಲೆಗೆ ನುಚ್ಚು ಕಲ್ಲು ಬೋರೆ ಎಂದು ಕರೆದರು.

**ಎರೆಗಾಸು ಕಲ್ಲುಗುಡ್ಡ** : ಈ ನೆಲೆಯಲ್ಲಿ ಎರೆಗಾಸು ಹೆಚ್ಚಾಗಿ ಸಿಗುತ್ತಿತ್ತು ಮತ್ತು ಬಂಡೆಕಲ್ಲುಗಳು ಇದ್ದುದರಿಂದ ಇದಕ್ಕೆ ಎರೆಗಾಸು ಕಲ್ಲುಗುಡ್ಡ ಎಂದು ಹೆಸರು.

**ಅಜ್ಜಯ್ಯನ ಮರತಾಣ** : ಜೇನುಕುರುಬರ ಹಿರಿಯ ವ್ಯಕ್ತಿಯೊಬ್ಬರು ಒಂದು ಮರದ ಕೆಳಗೆ ವಾಸಿಸುತ್ತಾ ಅಲ್ಲಿನ ಕಲ್ಲುಗಳಿಗೆ ಪೂಜಿಸುತ್ತಾ ಇದ್ದರು ಅವರು ಮರಣ ಹೊಂದಿದ ನಂತರ ಆಸ್ಥಳಕ್ಕೆ ಅಜ್ಜಯ್ಯನ ಮರತಾಣ (ನೆಲೆ) ಎಂದು ಕರೆದರು.

**ಬೂದಿಗುಂಡಿ ಹಳ್ಳ** : ಈ ಹಿಂದೆ ದೊಡ್ಡ ಮರದ ದಿಮ್ಮಿಗಳನ್ನು ಎತ್ತಿನಗಾಡಿಯಲ್ಲಿ ಸಾಗಿಸುತ್ತಿದ್ದರು ಬೇಟೆಗೆ ಹೋದವರು ಅಲ್ಲಿ ಬೆಂಕಿ ಹಾಕಿಕೊಂಡು ನಿದ್ರೆ ಮಾಡುತ್ತಿದ್ದರು. ಬೆಂಕಿ ಹಾಕಿ ಹೆಚ್ಚು ಬೂದಿಗುಡ್ಡೆ ನಿರ್ಮಾಣವಾದುದರಿಂದ ಇದನ್ನು ಬೂದಿಗುಂಡಿ ಹಳ್ಳ ಎಂದು ಕರೆದರು.

**ಮೂರ್ಕಲ್ಲು** : ಈ ನೆಲೆಯನ್ನು ಹಿಂದೆ ಕೊಡಗಿನ ಒಬ್ಬರಾಜ ಮೈಸೂರು, ಕೊಡಗು, ಮತ್ತು ಕೇರಳ ಎಂದು ಮೂರುಕಲ್ಲು ಇಟ್ಟು ಗಡಿಯನ್ನು ಗುರುತಿಸಿದ್ದರಿಂದ ಇದಕ್ಕೆ ಮೂರ್ಕಲ್ಲು ಎಂದು ಹೆಸರು ಬಂದಿದೆ.

**ಕೂಟಪಾರೆ** : ಕೇರಳ, ಮೈಸೂರು ಕೊಡಗು ಭಾಗಕ್ಕೆ ಅಂಚು ಗುರ್ತಿಸುವಾಗ ಕೊಡಗಿನ ಕಾಡು, ಮೈಸೂರು ಕಾಡು, ಕೇರಳ ಕಾಡು ಎಂದು ಗುರ್ತಿಸಿದ್ದರಿಂದ ಇದನ್ನು ಕೂಟ ಪಾರೆ ಎಂದು ಕರೆದರು.

**ಬೆಂದಪಾಲ** : ಕಾಡಿನೊಳಗೆ ಜೇನುಕುರುಬರು ಸಣ್ಣ ಹಳ್ಳಿಗಳಿಗೂ ಚಿಕ್ಕ ಚಿಕ್ಕ (ಮರದದಿಮ್ಮಿಯಿಂದ) ಸೇತುವೆಯನ್ನು ನಿರ್ಮಿಸಿಕೊಂಡು ಓಡಾಡುತ್ತಿದ್ದರು ಬೇಸಿಗೆಯಲ್ಲಿ ಬೆಂಕಿ ಬಿದ್ದು ಈ ಪಾಲ ಅಂದರೆ ಸೇತುವೆ ಸುಟ್ಟು ಹೋದದ್ದರಿಂದ ಅದನ್ನು ಬೆಂದ ಪಾಲ ಎಂದು ಕರೆದರು.

**ಸೇಬು ಹಳ್ಳ** : ಕೆಸವಿನ ದಂಟಿಗೆ ಜೇನುಕುರುಬರ ಭಾಷೆಯಲ್ಲಿ 'ಸೇಬು' ಎಂದು ಕರೆಯುತ್ತಾರೆ. ಈ ಹಳ್ಳದಲ್ಲಿ ಕೆಸವಿನ ಗಿಡಗಳು ಹೆಚ್ಚಾಗಿ ಬೆಳೆದಿದ್ದರಿಂದ ಇದನ್ನು ಸೇಬು ಹಳ್ಳ ಎಂದು ಕರೆದರು.

ಈ ರೀತಿಯಾಗಿ ಕಾಡಿನೊಳಗೆ ಜೇನುಕುಬರು ಆಯಾ ಸ್ಥಳದಲ್ಲಿರುವ ಪ್ರಕೃತ್ತಿದತ್ತವಾದ ಗಿಡ, ಮರಗಳ ಹೆಸರುಗಳಿಂದಲೇ ಆ ನೆಲೆಯನ್ನು ಗುರ್ತಿಸಿ, ಗಿಡ ಮರಗಳ ಹೆಸರನ್ನೇ ಆ ನೆಲೆಗಳಿಗೆ ಕಟ್ಟಿ ಅಲ್ಲಲ್ಲಿ ವಾಸ ಮಾಡುತ್ತಿದ್ದರು. ಬಹಳ ಹಿಂದೆ ಜೇನುಕುರುಬರು ನಾಗರಹೊಳೆಯ ಕಾಡಿನೊಳಗೆ ಆಹಾರ ಸಂಗ್ರಹಣೆ, ಜೀವನ ನಿರ್ವಹಣೆಗಾಗಿ, ಕೆಲವು ದಿನಗಳು ಒಂದೊಂದು ಕಡೆ ಗುಡಿಸಲು ನಿರ್ಮಿಸಿ ಜೀವನ ಸಾಗಿಸುತ್ತಿದ್ದರು. ಆಗ ಸ್ಥಳಗಳ ಹೆಸರನ್ನು ನೆನಪಿಟ್ಟುಕೊಳ್ಳಲು ಈ ರೀತಿಯಾಗಿ ಗಿಡ ಮರ ಮತ್ತು ಆ ಸ್ಥಳದ ವಿಶೇಷತೆಯನ್ನು ಗುರ್ತಿಸಿ ಹೆಸರು ಇಟ್ಟುಕೊಂಡರು. ಈ ಎಲ್ಲಾ ನೆಲೆಗಳು ನಾಗರಹೊಳೆಯ ಕಾಡಿನೊಳಗೆ ಇವೆ. (ಮಾ : ತಿಮ್ಮಣ್ಣ, ಸೋಮಯ್ಯ, ನಾಗರಹೊಳೆ ಹಾಡಿ.)

## ೨. ೪. ಭೌಗೋಳಿಕ ಹಂಚಿಕೆ

ಜೇನುಕುರುಬರು ಕರ್ನಾಟಕದ ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಮುಖ್ಯವಾಗಿ ನಾಗರಹೊಳೆ, ಬಂಡೀಪುರ, ಕಾಕನಕೋಟೆ ಮತ್ತು ಕಬಿನಿ ನದಿಯ ದಡದಲ್ಲಿ ಕಂಡುಬರುತ್ತಾರೆ. ಇವರು ವಾಸ ಮಾಡುವ ಜಿಲ್ಲೆಗಳು, ಕರ್ನಾಟಕ ರಾಜ್ಯದ ಅತ್ಯಂತ ದಕ್ಷಿಣ ಭಾಗಕ್ಕೆ ಇರುವ ಪ್ರದೇಶವಾಗಿದೆ. ಮೈಸೂರು ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ಮಂಡ್ಯ ಜಿಲ್ಲೆಗಳಿವೆ; ಪೂರ್ವಕ್ಕೆ ಮಂಡ್ಯ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳು. ದಕ್ಷಿಣಕ್ಕೆ ನೀಲಗಿರಿ ಮತ್ತು ಮಲಬಾರ್, ಪಶ್ಚಿಮಕ್ಕೆ ಕೊಡಗು ಜಿಲ್ಲೆಯನ್ನು

ಹೋದಿದೆ. ಮೈಸೂರು ರಾಜ್ಯದ ಪಶ್ಚಿಮ ಮತ್ತು ಪೂರ್ವ ಘಟ್ಟಗಳಲ್ಲಿ ಸರಹದ್ದಿನಂತೆ ಹರಿಯುವ ಕಾವೇರಿ ನದಿ, ಜಿಲ್ಲೆಯ ಉತ್ತರ-ಪಶ್ಚಿಮ ಭಾಗದಿಂದ ಪೂರ್ವಾಭಿಮುಖವಾಗಿ ಹರಿಯುವ ಹೇಮಾವತಿ, ಲೋಕ ಪಾವನಿ, ಉತ್ತರಕ್ಕೆ ಶಿಂಷಾ ಮತ್ತು ಲಕ್ಷ್ಮಣ ತೀರ್ಥ, ಕಬಿನಿ, ದಕ್ಷಿಣಕ್ಕೆ ಹೊನ್ನು ಹೊಳೆ ಅಥವಾ ಸುವರ್ಣಾವತಿ ಹೆಸರುಗಳಲ್ಲಿ ಕವಲುಗಳಾಗಿ ಒಡೆದಿವೆ. ಅರಣ್ಯಾವೃತ ಭಾಗದಲ್ಲಿ ಜೇನುಕುರುಬರನ್ನು ಕಾಣಬಹುದಾಗಿದೆ.

ಬೆಟ್ಟಗಳಿಂದಾವೃತವಾದ ದಟ್ಟವಾದ ಹಚ್ಚಹಸುರಿನ ಕಾಡುಗಳು, ಈ ಜಿಲ್ಲೆಗಳ ಪಶ್ಚಿಮ ಭಾಗ, ದಕ್ಷಿಣ ಭಾಗ ಹಾಗೂ ಪೂರ್ವದ ಕೆಲವು ಪ್ರಾಂತ್ಯಗಳನ್ನು ಅರಣ್ಯಗಳು ಆಕ್ರಮಿಸಿಕೊಂಡಿವೆ. ಅತ್ಯಮೂಲ್ಯವಾದ ಮರಗಳ ಸಂಪತ್ತನ್ನು ಹೊಂದಿರುವ ಈ ಹಸಿರು ಕಾಡುಗಳು ಹುಣಸೂರು ತಾಲೂಕಿನ ಪಶ್ಚಿಮದಿಂದ ಪ್ರಾರಂಭಗೊಂಡು ದಕ್ಷಿಣಭಾಗದ ಕೆಲವು ಪ್ರಾಂತ್ಯಗಳಲ್ಲಿ ಹರಡಿಕೊಂಡು ಉತ್ತರಭಾಗಕ್ಕೆ ಬಂದಂತೆಲ್ಲಾ ಕಿರಿದಾಗಿದೆ. ಇವುಗಳಲ್ಲಿ ಹೆಗ್ಗಡದೇವನಕೋಟೆ ತಾಲೂಕಿನ ಬಿಸಲವಾಡಿ, ಕಾಕನಕೋಟೆ, ಬೇಗೂರು ಮತ್ತು ಐನೂರು ಮಾರಿಗುಡಿ ದಟ್ಟವಾದ ಹಾಗೂ ಶ್ರೀಮಂತವಾದ ಅರಣ್ಯಗಳೆಂದು ಕರೆಸಿಕೊಂಡಿವೆ. ಇವರು ತಮ್ಮ ಮೂಲದ ಬಗೆಗೆ ಇತರೆ ಬುಡಕಟ್ಟುಗಳಂತೆ ತಾವು ಕೇರಳದ ವೈನಾಡು ಮೂಲದವರೆಂದು ಹೇಳಿಕೊಳ್ಳುವುದಿಲ್ಲ. ಈ ಭಾಗದ ಇತರೆ ಬುಡಕಟ್ಟು ಜನರಿಗಿಂತ ಇವರು ದೈಹಿಕವಾಗಿ ಉದ್ದವಾಗಿದ್ದು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ನಂಜನಗೂಡು ಹಾಗೂ ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರಪೇಟೆ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಜೇನುಕುರುಬರು ವಾಸಿಸುವ ಪ್ರದೇಶಗಳನ್ನು 'ಹಾಡಿ' ಗಳೆಂದು ಕರೆಯುತ್ತಾರೆ. ಒಂದೊಂದು ಹಾಡಿಯಲ್ಲಿ ಕನಿಷ್ಠಪಕ್ಷ ಇಪ್ಪತ್ತು ರಿಂದ ಐವತ್ತು ಕುಟುಂಬಗಳು ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಕಂಡು ಬರುತ್ತವೆ. ಇತ್ತೀಚೆಗೆ ಪುನರ್ವಸತಿಯಾಗಿರುವ ಹಾಡಿಗಳಲ್ಲಿ/ಗ್ರಾಮಗಳಲ್ಲಿ ಹೆಚ್ಚಿನ ಕುಟುಂಬಗಳನ್ನು ಕಾಣಬಹುದಾಗಿದೆ. ಅರಣ್ಯದಂಚಿನ ಹಾಡಿಗಳಲ್ಲಿನ ಜನರು ಕಾಡಿನಲ್ಲಿ ದೊರೆಯುವ ಬಿದಿರು, ಹುಲ್ಲು, ಗರಿಗಳನ್ನು ಬಳಸಿಕೊಂಡು ಮಣ್ಣು, ನೀರು, ನಾರುಗಳನ್ನು ಸೇರಿಸಿಕೊಂಡು ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಜೇನುಕುರುಬರು "ಹಾಡಿ ಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳ ಮೇಲೆ ಕಲ್ಲುಗಳನ್ನು ಪೇರಿಸಿ ಇಟ್ಟು ಪೂಜೆಮಾಡಿ ವಾಪಸ್ಸಾಗುತ್ತಾರೆ, ಮಾರನೆಯ ದಿನದವರೆಗೂ ಪೇರಿಸಿದ ಕಲ್ಲುಗಳು ಹಾಗೇ ಇದ್ದರೆ ಆ ಪ್ರದೇಶ ಗಾಳಿ, ಗರಗಳಿಂದ ಮುಕ್ತವಾದ ಪ್ರದೇಶವೆಂಬುದು ಅವರ ನಂಬಿಕೆ. ಆ ಪೇರಿಸಿದ ಕಲ್ಲುಗಳೇನಾದರೂ ಉರುಳಿ ಬಿದ್ದಿದ್ದರೆ ಅಲ್ಲಿ ಹಾಡಿ ನಿರ್ಮಿಸುವುದು ಅಪಾಯಕರವೆಂಬುದು ಅವರ ನಂಬಿಕೆ (ಲಲಿತ, ಎ ಸಿ: ೧೯೯೩:೧೪).

ಜೇನುಕುರುಬರ ಹಾಡಿಗಳು ಚಿಕ್ಕದಾಗಿ, ಚೊಕ್ಕವಾಗಿದ್ದು, ಸಂಜೆಯ ವೇಳೆ ಗುಡಿಸಲಿನ ಹೊರ ಭಾಗದಲ್ಲಿ ಸಾಮಾನ್ಯವಾಗಿ ಬೆಂಕಿ ಹಾಕಿರುತ್ತಾರೆ. ಇದು ಅವರನ್ನು ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು

ಮತ್ತು ಸಂಜೆಯ ವೇಳೆಗೆ ಸ್ನಾನ ಮಾಡುವ ನೀರನ್ನು ಕಾಯಿಸಲಿಕ್ಕೆ ಮತ್ತು ಚಳಿಗಾಲದಲ್ಲಿ ಚಳಿಯಿಂದ ರಕ್ಷಿಸಿಕೊಳ್ಳಲು ಕೂಡ ಬೆಂಕಿಯನ್ನು ಬಳಸುತ್ತಾರೆ. ಗುಡಿಸಲಿನ ಹೊರ ಭಾಗ ಇನ್ನೊಂದೆಡೆ ಅರೆಯುವ ಕಲ್ಲು, ಕೆಲವೊಮ್ಮೆ ಕೋಳಿಗಳನ್ನು ಕೂಡಿಸಲು ಸಣ್ಣ ಬುಟ್ಟಿಗಳು ಇರುವುದನ್ನು ಗಮನಿಸಬಹುದು. ಗುಡಿಸಲಿನ ಒಳಭಾಗ ಒಂದು ಅಥವಾ ಎರಡು, ಇಲ್ಲವೆ ಮೂರು ಅಂಕಣ ಇರುತ್ತದೆ. ಹಳೆ ಗುಡಿಸಲುಗಳನ್ನು ಬಿದಿರು ಬೊಂಬುಗಳನ್ನು ಸೀಳಿ ಕಟ್ಟಿರುತ್ತಾರೆ. ಇವು ಬಹಳ ತಗ್ಗಿನವಾಗಿದ್ದು ಒಳಗೆ ಪ್ರವೇಶಿಸಲು ಬಾಗಿಲು ಬಿಟ್ಟರೆ ಬೇರೆ ಯಾವುದೇ ತೆರನಾದ ಕಿಟಕಿಯ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಕೆಲವು ಹೊಸದಾಗಿ ಇತ್ತೀಚೆಗೆ ನಿರ್ಮಾಣಗೊಂಡ ಗುಡಿಸಲುಗಳು ಸ್ವಲ್ಪ ಮಟ್ಟಿಗೆ ಎತ್ತರವಾಗಿ ವಿಶಾಲವಾಗಿರುವುದನ್ನು ಕಾಣಬಹುದು. ಕೆಲವು ಗುಡಿಸಲುಗಳು ಮಣ್ಣಿನಿಂದ ಮಾಡಲ್ಪಟ್ಟ ಗೋಡೆಗಳನ್ನು ಹೊಂದಿವೆ. ಗುಡಿಸಲಿನ ಮುಂಭಾಗಕ್ಕೆ ಗುಡಿಸಲಿನ ಗೋಡೆಗೆ ಹೊಂದಿಕೊಂಡಂತೆ ಮಣ್ಣಿನಿಂದ ಮಾಡಿದ ಹಾಗೂ ಅಚ್ಚುಕಟ್ಟಾಗಿ ಸಾರಿಸಿದ ಜಗುಲಿಗಳನ್ನು ಕಾಣಬಹುದಾಗಿದೆ. ಹೀಗೆ ಗುಡಿಸಲುಗಳು ಅವರ ಸಂಪ್ರದಾಯದಂತೆ ನಿರ್ಮಾಣಗೊಂಡಿವೆ ಹಾಗೂ ಮೊದಲ ಬಾರಿಗೆ ಪ್ರವೇಶಿಸುವಾಗ ಇದನ್ನು 'ಹೊಸಮನೆ ಸೇರುವುದು' ಎಂದು ಕರೆಯುತ್ತಾರೆ. ಸರ್ಕಾರದಿಂದ ಇತ್ತೀಚಿನ ದಿನಗಳಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದು, ಹೆಚ್ಚಿನ ಜನರು ಅದರೊಳಗಡೆ ವಾಸಮಾಡಲು ಇಷ್ಟಪಡುವದಿಲ್ಲ. ಬಹುಶಃ ಇದಕ್ಕೆ ಕಾರಣ ಅವರಿಗಿರುವ ಕಾಡಿನ ನಂಟು.

### ೨. ೪. ೧. ಮೈಸೂರು ಜಿಲ್ಲೆಯ ಜೇನುಕುರುಬರ ನೆಲೆಗಳು ಮತ್ತು ಜನಸಂಖ್ಯೆ

ಕರ್ನಾಟಕದಲ್ಲಿ ಜೇನುಕುರುಬರು ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳೊಳಗೆ ನೆಲೆಸಿದ್ದಾರೆ. ಮೂಲತಃ ೧೯೯೭ ರ ಪೂರ್ವದಲ್ಲಿ ಚಾಮರಾಜನಗರವು ಮೈಸೂರು ಜಿಲ್ಲೆಯೊಳಗಿದ್ದಿತು. ೧೯೯೭ ರಲ್ಲಿ ಜಿಲ್ಲಾ ಪುನರ್ವಿಂಗಡನೆಯಾದಾಗ ಚಾಮರಾಜನಗರವು ಮೈಸೂರಿನಿಂದ ಬೇರ್ಪಟ್ಟು ಸ್ವತಂತ್ರ ಜಿಲ್ಲೆಯೆನಿಸಿಕೊಂಡಿತು. ಈ ಮೂರು ಜಿಲ್ಲೆಗಳಲ್ಲಿ ಮುಖ್ಯವಾಗಿ ಕರ್ನಾಟಕದ ಬೇರೆ ಪ್ರದೇಶಗಳಲ್ಲಿ ಕಂಡು ಬರದ ಯರವ, ಜೇನುಕುರುಬ, ಬೆಟ್ಟ ಕುರುಬ, ಬುಡಕಟ್ಟುಗಳು ನೆಲೆಸಿವೆ. ಈ ಬುಡಕಟ್ಟುಗಳು ನೆಲೆಸಲು ಕಾರಣವಾದ ತಪ್ಪಲಿನಿಂದ ಕೂಡಿದ ಪಶ್ಚಿಮಘಟ್ಟದ ಸೆರಗನ್ನು ಹೊಂದಿದ ಕಾಡಿನಿಂದಾವೃತ್ತವಾದ ಬೆಟ್ಟಗುಡ್ಡಗಳು ಇಲ್ಲಿವೆ. ಮೂರು ಬುಡಕಟ್ಟುಗಳು ದ್ರಾವಿಡ ಭಾಷಾ ಪ್ರವರ್ಗಕ್ಕೆ ಸೇರಿದ ಭಾಷೆಗಳನ್ನು ಮಾತನಾಡುವ ವಾದರೂ ಭಿನ್ನ ಭಿನ್ನ ಭಾಷಾ ಪ್ರಕಾರಗಳನ್ನು ಹೊಂದಿದ ಬುಡಕಟ್ಟುಗಳಾಗಿವೆ.

ಭೂಪಟ : ೨. ೧. ಜೇನುಕುರುಬ ಸಮುದಾಯದ ಮೈಸೂರು ಜಿಲ್ಲೆಯ ನೆಲೆಗಳು



## ೨. ೪. ೧. ಅ. ಹೆಗ್ಗಡದೇವನ ಕೋಟೆ ತಾಲೂಕು

ಹೆಗ್ಗಡದೇವನ ಕೋಟೆಯಲ್ಲಿಯೇ ಎಂಭತ್ತು ನೆಲೆ(ಹಾಡಿ)ಗಳಲ್ಲಿ ಜೇನುಕುರುಬರು ನೆಲೆಸಿದ್ದು, ಅಧ್ಯಯನದ ಸಮೀಕ್ಷೆಯ ಪ್ರಕಾರ ಒಟ್ಟು ಈ ಎಲ್ಲಾ ಹಾಡಿಗಳಿಂದ ೩೮೮೧ ಕುಟುಂಬಗಳು ನೆಲೆಸಿವೆ. ಜೇನುಕುರುಬರ ಒಟ್ಟು ಜನಸಂಖ್ಯೆಯು ೧೫೩೪೫ ರಷ್ಟಿದ್ದು, ಇದರಲ್ಲಿ ಪುರುಷರು ೭೯೮೭ ಹಾಗೂ ಮಹಿಳೆಯರು ೭೩೫೮ ರಷ್ಟಿದ್ದಾರೆ.

**ಕೋಷ್ಟಕ : ೨.೧. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಅಣ್ಣೂರು | ೧೦೮ | ೨೦೩ | ೧೯೭ | ೪೦೦ |
| ೨ | ಆನಗಟ್ಟ | ೨೨ | ೨೪ | ೨೮ | ೫೨ |
| ೩ | ಆನೆಮಾಳ | ೬೦ | ೧೧೫ | ೧೧೫ | ೨೩೦ |
| ೪ | ಆಲನಹಳ್ಳಿ ಹಾಡಿ | ೨೦ | ೪೬ | ೩೯ | ೮೫ |
| ೫ | ಎತ್ತಗದ ಹಾಡಿ | ೭ | ೨೧ | ೧೯ | ೪೦ |
| ೬ | ಎಂ.ಸಿ. ತೊಳಲು ಹಾಡಿ | ೨೦ | ೩೯ | ೩೬ | ೭೫ |
| ೭ | ಕಲ್ಲಳ್ಳ ಹಾಡಿ | ೮೦ | ೧೫೫ | ೧೫೫ | ೩೧೦ |
| ೮ | ಕಾಟವಾಳ ಹಾಡಿ | ೯೦ | ೧೭೩ | ೧೫೭ | ೩೩೦ |
| ೯ | ಕಾಂತನ ಹಾಡಿ | ೨೦ | ೩೯ | ೩೦ | ೬೯ |
| ೧೦ | ಕಾರಾಪುರ | ೮೫ | ೧೯೧ | ೧೭೮ | ೩೬೯ |
| ೧೧ | ಕಾಳೇಗೌಡನಹಳ್ಳಿ ಹಾಡಿ | ೪೫ | ೧೦೭ | ೯೬ | ೨೦೩ |
| ೧೨ | ಕುಂಟೇರಿ | ೪೫ | ೯೯ | ೭೧ | ೧೭೦ |
| ೧೩ | ಕೆಬ್ಬೆಪುರ ಹಾಡಿ | ೧೦೨ | ೧೯೦ | ೧೭೨ | ೩೬೨ |
| ೧೪ | ಕೆರೆಹಾಡಿ | ೫೭ | ೧೨೩ | ೧೧೭ | ೨೪೦ |
| ೧೫ | ಕೆರೆಹಾಡಿ | ೪೦ | ೮೧ | ೮೪ | ೧೬೫ |
| ೧೬ | ಕಾರಾಪುರ | ೪೦ | ೭೩ | ೬೮ | ೧೪೧ |
| ೧೭ | ಕೊತ್ತನಹಳ್ಳಿ ಹಾಡಿ | ೧೨ | ೨೭ | ೨೩ | ೫೦ |
| ೧೮ | ಗೋಳೂರು(ಹಣ್ಣಿನತೋಟ) | ೭೦ | ೧೩೨ | ೧೩೭ | ೨೬೯ |
| ೧೯ | ಚಾಮಿಯಾನಹುಂಡಿ ಹಾಡಿ (ಎ) | ೮೦ | ೧೫೬ | ೧೪೯ | ೩೦೫ |
| ೨೦ | ಚಾಮಿಯಾನಹುಂಡಿ ಹಾಡಿ (ಬಿ) | ೨೮ | ೫೭ | ೪೮ | ೧೦೫ |
| ೨೧ | ಚಿಕ್ಕಕಾಳೇಗೌಡನಪುರ | ೧೮ | ೩೬ | ೩೩ | ೬೯ |
| ೨೨ | ಚಿಕ್ಕ ಕೆರೆಯೂರು ಹಾಡಿ | ೫೭ | ೧೧೦ | ೯೫ | ೨೦೫ |
| ೨೩ | ಜಾಗನಕೋಟೆ | ೨೫ | ೫೦ | ೪೫ | ೯೫ |

| | | | | | |
|---|---|---|---|---|---|
| ೨೪ | ಜಿ.ಎಂ. ಹಳ್ಳಿ | ೭೦ | ೧೪೬ | ೧೪೪ | ೨೯೦ |
| ೨೫ | ತಿಮ್ಮನ ಹೊಸಳ್ಳಿ | ೨೨ | ೪೨ | ೪೨ | ೮೪ |
| ೨೬ | ದಡದಹಳ್ಳಿ ಹಾಡಿ | ೩೦ | ೫೯ | ೪೭ | ೧೦೬ |
| ೨೭ | ದಮ್ಮನಕಟ್ಟೆ | ೪೫ | ೯೯ | ೯೧ | ೧೯೦ |
| ೨೮ | ದ್ಯಾವನ ಹಾಡಿ | ೪೦ | ೮೩ | ೮೪ | ೧೬೭ |
| ೨೯ | ದೇವಲಾಪುರ | ೨೬ | ೫೮ | ೫೨ | ೧೧೦ |
| ೩೦ | ನಾಗನಹಳ್ಳಿ | ೯ | ೨೪ | ೧೭ | ೪೧ |
| ೩೧ | ನಾಡಾಡಿ | ೪೦ | ೬೭ | ೬೫ | ೧೩೨ |
| ೩೨ | ನೂರಲಕುಪ್ಪೆ (ರಾಮೇನಹಳ್ಳಿ ಹಾಡಿ) | ೩೭ | ೭೮ | ೭೨ | ೧೫೦ |
| ೩೩ | ನೆಟ್ಟಗಾಲ ಹುಂಡಿ ಹಾಡಿ | ೪೦ | ೮೪ | ೮೬ | ೧೭೦ |
| ೩೪ | ನೆಮ್ಮನಹಳ್ಳಿ ಹಾಡಿ | ೧೦ | ೨೧ | ೧೪ | ೩೫ |
| ೩೫ | ಪಡುವಕೋಟೆ | ೬೯ | ೧೫೧ | ೧೨೯ | ೨೮೦ |
| ೩೬ | ಪ್ರಭಾನಗರ | ೬೦ | ೧೧೯ | ೧೦೧ | ೨೨೦ |
| ೩೭ | ಪುರದಕಟ್ಟೆ ಹಾಡಿ | ೨೦ | ೪೪ | ೨೭ | ೭೧ |
| ೩೮ | ಪೆಂಜಳ್ಳಿ | ೧೬೦ | ೩೩೫ | ೩೧೫ | ೬೫೦ |
| ೩೯ | ಬಸವನಗಿರಿ –ಎ | ೨೬ | ೫೧ | ೪೪ | ೯೫ |
| ೪೦ | ಬಸವರಾಜನಕಟ್ಟೆ | ೩೮ | ೮೬ | ೭೯ | ೧೬೫ |
| ೪೧ | ಬಾಪಿಕೆರೆ | ೨೧ | ೪೬ | ೩೪ | ೮೦ |
| ೪೨ | ಬಸಾಪುರ ಹಾಡಿ | ೬ | ೧೨ | ೯ | ೨೧ |
| ೪೩ | ಬಳ್ಳೆ | ೧೩೭ | ೨೮೩ | ೨೫೭ | ೫೪೦ |
| ೪೪ | ಬಾವಲಿ | ೧೨ | ೨೫ | ೩೩ | ೫೮ |
| ೪೫ | ಬೂದನೂರು ಹಾಡಿ | ೬೦ | ೧೧೨ | ೯೯ | ೨೧೧ |
| ೪೬ | ಬೊಮ್ಮಲಾಪುರ | ೨೦ | ೪೧ | ೩೨ | ೭೩ |
| ೪೭ | ಬೋರದೇವರಮಂಟಿ | ೩೭ | ೧೩೦ | ೧೦೬ | ೨೩೬ |
| ೪೮ | ಭೀಮನಹಳ್ಳಿ | ೧೨೦ | ೨೨೧ | ೨೩೦ | ೪೫೧ |
| ೪೯ | ಮಗ್ಗೆ | ೨೨ | ೪೪ | ೩೬ | ೮೦ |
| ೫೦ | ಮಚ್ಚೂರು | ೨೫ | ೫೭ | ೫೫ | ೧೧೨ |
| ೫೧ | ಮಂಚೆಗೌಡನಹಳ್ಳಿ | ೬೫ | ೧೩೫ | ೧೪೫ | ೨೮೦ |
| ೫೨ | ಮಜ್ಜನಕುಪ್ಪೆ | ೧೮ | ೩೩ | ೩೮ | ೭೧ |
| ೫೩ | ಮಂಟಿಹಾಡಿ | ೪೫ | ೧೦೯ | ೯೮ | ೨೦೭ |
| ೫೪ | ಮಾಸಿಮೂಲೆ | ೫೨ | ೧೦೩ | ೯೬ | ೧೯೯ |
| ೫೫ | ಮಾರಸಹಾಡಿ | ೧೦೦ | ೨೦೯ | ೨೦೬ | ೪೧೫ |
| ೫೬ | ಮಾಳದಹಾಡಿ | ೮೦ | ೧೭೭ | ೧೫೪ | ೩೩೧ |
| ೫೭ | ಮೂಲೆಯೂರು | ೧೪ | ೨೧ | ೨೯ | ೫೦ |
| ೫೮ | ಮೇಟಿಕುಪ್ಪೆ | ೯೦ | ೧೮೯ | ೧೬೧ | ೩೫೦ |

| | | | | | |
|---|---|---|---|---|---|
| ೫೯ | ಮೊತ್ತ | ೯೦ | ೨೦೭ | ೧೬೮ | ೩೭೫ |
| ೬೦ | ಮೊತ್ತ ಕೆರೆಹಾಡಿ | ೩೮ | ೭೬ | ೬೮ | ೧೪೪ |
| ೬೧ | ರಾಜೇಗೌಡನಹುಂಡಿ | ೬೮ | ೧೩೫ | ೧೨೬ | ೨೬೧ |
| ೬೨ | ವಿಕ್ಟ್ರೀಪುರ | ೧೨ | ೨೭ | ೨೩ | ೫೦ |
| ೬೩ | ವಡ್ಡರಗುಡಿ | ೭೨ | ೧೫೩ | ೧೨೬ | ೨೭೯ |
| ೬೪ | ವಡ್ಡರಹಳ್ಳಿ ಹಾಡಿ | ೩೦ | ೫೪ | ೫೭ | ೧೧೧ |
| ೬೫ | ಸೀಗೂರು | ೧೧೦ | ೨೧೨ | ೧೮೮ | ೪೦೦ |
| ೬೬ | ಸೀಗೋಡಿ ಹಾಡಿ | ೩೦ | ೫೭ | ೫೩ | ೧೧೦ |
| ೬೭ | ಸುಂಕದಕಟ್ಟೆ | ೧೫ | ೩೨ | ೨೯ | ೬೧ |
| ೬೮ | ಸೇಜಿನ ಕೊಲ್ಲಿ | ೨ | ೪ | ೩ | ೭ |
| ೬೯ | ಸೋನಳ್ಳಿ | ೭೦ | ೧೫೨ | ೧೩೭ | ೨೮೯ |
| ೭೦ | ಸೊಳ್ಳೆಪುರ (ಪು.ಕೇಂದ್ರ) | ೫೮ | ೧೩೨ | ೧೧೭ | ೨೪೯ |
| ೭೧ | ಹರಳಿಕಟ್ಟೆ | ೧೨ | ೨೮ | ೨೭ | ೫೫ |
| ೭೨ | ಹಂಚಿಪುರ | ೨೦ | ೪೪ | ೩೨ | ೭೬ |
| ೭೩ | ಹನುಮಂತನಗರ | ೬೦ | ೧೨೧ | ೧೧೪ | ೨೩೫ |
| ೭೪ | ಹರಳಳ್ಳಿ | ೧೦ | ೨೦ | ೨೦ | ೪೦ |
| ೭೫ | ಓರೇಹಳ್ಳಿ | ೮೦ | ೧೬೨ | ೧೪೮ | ೩೧೦ |
| ೭೬ | ಹುಣಸೇಕುಪ್ಪೆ | ೯೦ | ೨೦೦ | ೧೯೯ | ೩೯೯ |
| ೭೭ | ಹುಸಕೂರು ಹಾಡಿ | ೧೦೦ | ೧೮೩ | ೧೭೮ | ೩೬೧ |
| ೭೮ | ಹೆಬ್ಬಾಳದ ಹಾಡಿ | ೨೨ | ೩೯ | ೪೨ | ೮೧ |
| ೭೯ | ಹೊಸಳ್ಳಿ | ೮೦ | ೧೬೨ | ೧೪೮ | ೩೧೦ |
| ೮೦ | ಹೊಸಳ್ಳಿ ಹಾಡಿ | ೨೦ | ೪೬ | ೩೬ | ೮೨ |
| | **ಒಟ್ಟು** | **೩,೮೮೧** | **೭,೯೮೭** | **೭,೩೫೮** | **೧೫,೩೪೫** |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

## ೨. ೪.೧. ಆ. ಪಿರಿಯಾಪಟ್ಟಣ ತಾಲೂಕು

ಪಿರಿಯಾಪಟ್ಟಣ ತಾಲೂಕಿನೊಳಗೆ ಜೇನುಕುರುಬರ ಒಟ್ಟು ನೆಲೆಗಳು ಇಪ್ಪತ್ತೆರಡಿವೆ. ಈ ಇಪ್ಪತ್ತೆರಡು ಹಾಡಿಗಳಲ್ಲಿ ನೆಲೆಸಿದ ಒಟ್ಟು ಜೇನುಕುರುಬ ಕುಟುಂಬಗಳು ೧೦೦೬ ಇವೆ.

**ಕೋಷ್ಟಕ : ೨.೨. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಅಬ್ಬಳತಿ–ಎ ಹಾಡಿ | ೬೮ | ೧೬೦ | ೧೨೪ | ೨೮೪ |
| ೨ | ಅಬ್ಬಳತಿ–ಬಿ ಹಾಡಿ | ೪೫ | ೧೦೦ | ೯೨ | ೧೯೨ |
| ೩ | ಆಲದಕಟ್ಟೆ | ೧೨೪ | ೨೮೯ | ೨೬೪ | ೫೫೩ |
| ೪ | ಉತ್ತೇನಹಳ್ಳಿ | ೩೨ | ೮೮ | ೮೦ | ೧೬೮ |
| ೫ | ಕಂಡಿಬೆಕ್ಕೆ | ೧೮ | ೪೦ | ೩೧ | ೭೧ |
| ೬ | ಕೊಪ್ಪ | ೧೬ | ೨೫ | ೩೪ | ೫೯ |
| ೭ | ಗೌಡನಕಟ್ಟೆ | ೨೩ | ೫೦ | ೫೦ | ೧೦೦ |
| ೮ | ಗೌರಿಕೊಲ್ಲಿ | ೧೨ | ೨೮ | ೨೮ | ೫೬ |
| ೯ | ನಾರಳಾಪುರ | ೩೦ | ೭೩ | ೬೦ | ೧೩೩ |
| ೧೦ | ಬೋರನಕಟ್ಟೆ | ೪೦ | ೮೬ | ೮೬ | ೧೭೨ |
| ೧೧ | ಮಲಗನಕೆರೆ | ೩ | ೮ | ೮ | ೧೬ |
| ೧೨ | ಮರುಳುಕಟ್ಟೆ–ಎ ಹಾಡಿ | ೬೭ | ೧೪೫ | ೧೧೭ | ೨೬೨ |
| ೧೩ | ಮರುಳುಕಟ್ಟೆ–ಬಿ ಹಾಡಿ | ೬೮ | ೧೫೫ | ೧೨೨ | ೨೭೭ |
| ೧೪ | ಮುತ್ತೂರು ಕಾಲೋನಿ | ೨೦ | ೪೦ | ೩೨ | ೭೨ |
| ೧೫ | ರಾಣಿಗೇಟ್ ಎ | ೩೨ | ೭೦ | ೫೬ | ೧೨೬ |
| ೧೬ | ರಾಣಿಗೇಟ್ ಬಿ | ೧೧ | ೧೯ | ೨೮ | ೪೭ |
| ೧೭ | ಲಕ್ಷ್ಮೀಪುರ | ೬೦ | ೧೧೯ | ೧೨೮ | ೨೪೭ |
| ೧೮ | ಲಿಂಗಾಪುರ ಹಾಡಿ | ೧೫೦ | ೩೩೩ | ೨೮೭ | ೬೨೦ |
| ೧೯ | ವರ್ತಿ | ೫೩ | ೧೨೪ | ೯೪ | ೨೧೮ |
| ೨೦ | ವರ್ತಿ–ಬಿ ಹಾಡಿ | ೨೦ | ೭೧ | ೫೧ | ೧೨೨ |
| ೨೧ | ಹರ್ಳೇಕೆರೆ ಹಾಡಿ | ೬೨ | ೭೬ | ೭೨ | ೧೪೮ |
| ೨೨ | ಹೊಸೂರು ಕೆರೆಮಾಳ | ೫೨ | ೬೬ | ೫೨ | ೧೧೮ |
| | ಒಟ್ಟು | ೧೦೦೬ | ೨೧೬೫ | ೧೮೯೬ | ೪೦೬೧ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ಇದರಲ್ಲಿ ಒಟ್ಟು ಜನಸಂಖ್ಯೆಯು ೪೦೬೧ ಇದೆ. ಇದರಲ್ಲಿ ಪುರುಷರು ೨೧೬೫ ಇದ್ದು ಮಹಿಳೆಯರು ೧೮೯೬ ಇದ್ದಾರೆ.

### ೨.೪.೧. ಇ. ಹುಣಸೂರು ತಾಲೂಕು

ಹುಣಸೂರು ತಾಲೂಕಿನಲ್ಲಿ ಜೇನುಕುರುಬರ ಒಟ್ಟು ನೆಲೆಗಳು ೨೫ ಇದ್ದು ಇದರಲ್ಲಿ ಇರುವ ಜೇನುಕುರುಬರ ಒಟ್ಟು ಕುಟುಂಬಗಳು ೧೭೦೯. ಒಟ್ಟು ಜನಸಂಖ್ಯೆಯು ೬೭೮೭ ಇದ್ದು ಪುರುಷರು ೩೫೪೪ ಹಾಗೂ ಮಹಿಳೆಯರು ೩೨೪೩ ಇದ್ದಾರೆ.

**ಕೋಷ್ಟಕ : ೨.೩. ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಅಯ್ಯನಕೆರೆ | ೧೨೯ | ೨೬೧ | ೨೫೨ | ೫೧೩ |
| ೨ | ಕಾಳೇನಹಳ್ಳಿ | ೨೮ | ೫೯ | ೪೭ | ೧೦೬ |
| ೩ | ಕೆರೆಹಾಡಿ | ೫೪ | ೧೬೦ | ೧೩೪ | ೨೯೪ |
| ೪ | ಕೊಟ್ಟಿಗೆಕಾವಲ | ೭೮ | ೧೨೬ | ೧೦೭ | ೨೩೩ |
| ೫ | ಕೊಳವಿಗೆ ಹಾಡಿ | ೧೨೨ | ೯೧ | ೮೯ | ೧೮೦ |
| ೬ | ತರೀಕಲ್ಲು ರಂಗಯ್ಯನಕೊಪ್ಪಲು | ೧೫೨ | ೩೧೭ | ೨೯೭ | ೬೧೪ |
| ೭ | ತೆಕ್ಕಲವಾಡಿ | ೨೮ | ೪೬ | ೪೭ | ೯೩ |
| ೮ | ನಾಗಾಪುರ ೧ನೇ ಬ್ಲಾಕ್ | ೬೪ | ೧೨೭ | ೧೧೫ | ೨೪೨ |
| ೯ | ನಾಗಾಪುರ ೨ನೇ ಬ್ಲಾಕ್ | ೫೬ | ೧೧೪ | ೧೦೬ | ೨೨೦ |
| ೧೦ | ನಾಗಾಪುರ ೩ನೇ ಬ್ಲಾಕ್ | ೬೨ | ೧೨೬ | ೧೧೬ | ೨೪೨ |
| ೧೧ | ನೇರಳೇಕುಪ್ಪೆ-ಎ ಹಾಡಿ | ೭೫ | ೧೯೩ | ೧೬೭ | ೩೬೦ |
| ೧೨ | ನೇರಳೇಕುಪ್ಪೆ-ಬಿ ಹಾಡಿ | ೫೦ | ೧೧೭ | ೧೦೪ | ೨೨೧ |
| ೧೩ | ಪೆಂಜಳ್ಳಿ | ೬೨ | ೧೩೪ | ೧೨೭ | ೨೬೧ |
| ೧೪ | ಬಿಲ್ಲೇನಹಳ್ಳಿ | ೫೨ | ೧೧೨ | ೯೯ | ೨೧೧ |
| ೧೫ | ಬಿಲ್ಲೇನಹೊಸಳ್ಳಿ | ೧೩೫ | ೨೭೦ | ೨೩೧ | ೫೦೧ |
| ೧೬ | ಬೆಟ್ಟದ ಹಾಡಿ | ೭೨ | ೧೫೫ | ೧೩೪ | ೨೮೯ |
| ೧೭ | ಭರತವಾಡಿ | ೮೦ | ೧೯೭ | ೧೬೭ | ೩೬೪ |
| ೧೮ | ಮಾದಯ್ಯನಕೊಪ್ಪಲು | ೪೦ | ೯೫ | ೯೭ | ೧೯೨ |
| ೧೯ | ವಿಜಯಗಿರಿ | ೧೨೦ | ೩೦೩ | ೩೦೪ | ೬೦೭ |
| ೨೦ | ವೀರನಹೊಸಳ್ಳಿ | ೧೧೯ | ೨೫೭ | ೨೩೯ | ೪೯೬ |
| ೨೧ | ಸೋನಳ್ಳಿ | ೩೪ | ೫೬ | ೬೭ | ೧೨೩ |
| ೨೨ | ಹರಳಳ್ಳಿ ಹಾಡಿ | ೪೮ | ೧೦೯ | ೮೯ | ೧೯೮ |
| ೨೩ | ಹಳ್ಳದ ಕೊಪ್ಪಲು | ೨೫ | ೫೮ | ೫೪ | ೧೧೨ |
| ೨೪ | ಹಳೇವಾರಂಚಿ | ೧೮ | ೪೪ | ೪೧ | ೮೫ |
| ೨೫ | ಹಳೇಶೆಟ್ಟಿಹಳ್ಳಿ | ೬ | ೧೭ | ೧೩ | ೩೦ |
| ಒಟ್ಟು | | ೧೭೦೯ | ೩೫೪೪ | ೩೨೪೩ | ೬೭೮೭ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

### ೨. ೪. ೧. ಈ. ನಂಜನಗೂಡು ತಾಲೂಕು

ನಂಜನಗೂಡು ತಾಲೂಕಿನಲ್ಲಿ ಅಲ್ಪ ಪ್ರಮಾಣದಲ್ಲಿ ಜೇನುಕುರುಬರ ಹಾಡಿಗಳಿವೆ. ಈ ತಾಲೂಕಿನಲ್ಲಿ ಕೇವಲ ನಾಲ್ಕು ಹಾಡಿಗಳಿದ್ದು, ೧೭೩ ಕುಟುಂಬಗಳಿವೆ. ಜೇನುಕುರುಬರ ಒಟ್ಟು ಜನಸಂಖ್ಯೆಯು ೬೯೫ ಇದ್ದು, ಪುರುಷರು ೩೬೫ ಹಾಗೂ ಮಹಿಳೆಯರು ೩೩೦ ಇದ್ದಾರೆ.

**ಕೋಷ್ಟಕ : ೨.೪. ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಕೊತ್ತನಹಳ್ಳಿ ಹಾಡಿ | ೩೫ | ೭೮ | ೭೨ | ೧೫೦ |
| ೨ | ಚಿಲಕಹಳ್ಳಿ ಹಾಡಿ | ೨೦ | ೩೯ | ೪೧ | ೮೦ |
| ೩ | ಬೊರನಕಟ್ಟೆ ಹಾಡಿ | ೩೦ | ೬೪ | ೫೬ | ೧೨೦ |
| ೪ | ವೆಂಕಟಗಿರಿ ಹಾಡಿ | ೮೮ | ೧೮೪ | ೧೬೧ | ೩೪೫ |
| ಒಟ್ಟು | | ೧೭೩ | ೩೬೫ | ೩೩೦ | ೬೯೫ |
| | | | ೫೨.೫೨ | ೪೭.೪೮ | |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

ಮೈಸೂರು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕಂಡುಬರುವ ಜೇನುಕುರುಬರ ಒಟ್ಟು ಕುಟುಂಬಗಳು ೬೭೬ ಇವೆ. ಜೇನುಕುರುಬರ ಒಟ್ಟು ಜನಸಂಖ್ಯೆಯು ೨೬೮೮೮ ಇದ್ದು ಇದರೊಳಗೆ ಪುರುಷರು ೧೪೦೬೧ ಮಹಿಳೆಯರು ೧೨೮೨೭ ಇದ್ದಾರೆ.

## ೨.೪.೨. ಚಾಮರಾಜನಗರ ಜಿಲ್ಲೆಯ ಜೇನುಕುರುಬರ ನೆಲೆಗಳು ಮತ್ತು ಜನಸಂಖ್ಯೆ

ಚಾಮರಾಜನಗರ ಜಿಲ್ಲೆಯಲ್ಲಿ ಜೇನುಕುರುಬರು ಗುಂಡ್ಲುಪೇಟೆ ತಾಲೂಕಿನಲ್ಲಿ ಮಾತ್ರ ಕಂಡು ಬರುತ್ತಾರೆ. ಗುಂಡ್ಲುಪೇಟೆ ತಾಲೂಕಿನಲ್ಲಿ ಒಟ್ಟು ಹದಿನಾಲ್ಕು ಜೇನುಕುರುಬರ ನೆಲೆಗಳಿದ್ದು, ಒಟ್ಟು ೩೩೯ ಕುಟುಂಬಗಳು ಇವೆ. ಜೇನುಕುರುಬರ ಒಟ್ಟು ಜನಸಂಖ್ಯೆಯು ೧೪೫೦ ಇದ್ದು ಇದರಲ್ಲಿ ಪುರುಷರು ೭೫೫ ಹಾಗೂ ಮಹಿಳೆಯರು ೬೯೫ ಜನರಿದ್ದಾರೆ. ಇವರೆಲ್ಲ ಬಹುತೇಕ ಕಾಡಂಚಿನಲ್ಲಿ ಹಾಡಿಗಳನ್ನು ರಚಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಕಾಡಿನಲ್ಲಿ ದೊರೆಯುವ ಜೇನು, ಪಾಚಿ ಹಾಗೂ ಇತರ ಕಿರು ಉತ್ಪನ್ನಗಳನ್ನು ಅವಲಂಭಿಸಿದ್ದ ಇವರು ಪ್ರಸ್ತುತ ಕೃಷಿ ಹಾಗೂ ಕೃಷಿಯೇತರ ಕೂಲಿಗಳಾಗಿ ಜೀವನ ಸಾಗಿಸುತ್ತಿದ್ದಾರೆ.

ಭೂಪಟ : ೨. ೨. ಜೇನುಕುರುಬ ಸಮುದಾಯದ ಚಾಮರಾಜನಗರ ಜಿಲ್ಲೆಯ ನೆಲೆಗಳು.



ಕೋಷ್ಟಕ : ೨. ೫. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಆನಂಜಗುಂಡಿ | ೨೭ | ೬೦ | ೫೫ | ೧೧೫ |
| ೨ | ಉಪಕಾರ ಕಾಲೋನಿ | ೪೩ | ೯೨ | ೭೫ | ೧೬೭ |
| ೩ | ಕಾರೇಮಳ | ೧೫ | ೩೪ | ೨೯ | ೬೩ |
| ೪ | ಗುಡ್ಡಕೇರಿ | ೨೬ | ೫೪ | ೫೯ | ೧೧೩ |
| ೫ | ಜೆ.ಸಿ. ಕಾಲೋನಿ | ೨೨ | ೫೨ | ೪೫ | ೯೭ |
| ೬ | ನವಿಲುಗುಂಡಿ | ೨೫ | ೫೯ | ೪೯ | ೧೦೮ |
| ೭ | ಬಂಡಿಪುರ ಹಾಡಿ | ೧೦ | ೨೯ | ೨೪ | ೫೩ |
| ೮ | ಮಗುವಿನಹಳ್ಳಿ ಕಾಲೋನಿ | ೨೬ | ೬೦ | ೫೩ | ೧೧೩ |
| ೯ | ಮದ್ದೂರುಕಾಲೋನಿ | ೨೫ | ೬೬ | ೫೪ | ೧೨೦ |
| ೧೦ | ಮುಕ್ತ ಕಾಲೋನಿ | ೧೫ | ೩೩ | ೩೬ | ೬೯ |
| ೧೧ | ಮೇಲುಕಾಯನಹಳ್ಳಿ ಕಾಲೋನಿ | ೨೮ | ೫೮ | ೫೬ | ೧೧೪ |
| ೧೨ | ಲಕ್ಕಿಪುರ | ೧೬ | ೩೫ | ೨೮ | ೬೩ |
| ೧೩ | ಹರಿನಕಣಿವೆ | ೩೫ | ೭೩ | ೭೪ | ೧೪೭ |
| ೧೪ | ಹಸ್ತರಹಳ್ಳಿ ಹಾಡಿ | ೨೬ | ೫೦ | ೫೮ | ೧೦೮ |
| ಒಟ್ಟು | | ೩೩೯ | ೭೫೫ | ೬೯೫ | ೧೪೫೦ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

## ೨. ೪. ೩. ಕೊಡಗು ಜಿಲ್ಲೆಯ ಜೇನುಕುರುಬರ ನೆಲೆಗಳು ಮತ್ತು ಜನಸಂಖ್ಯೆ

ಕೊಡಗು ಜಿಲ್ಲೆಯು ಕರ್ನಾಟಕದಲ್ಲಿಯೇ ವಿಶಿಷ್ಟವಾದ ಜಿಲ್ಲೆಯಾಗಿದೆ. ವ್ಯವಹಾರಿಕವಾಗಿ ಕನ್ನಡ ಭಾಷೆಯನ್ನು ಬಳಸಿದರೂ ತಮ್ಮದೇ ಆದ ಕೊಡವ ಭಾಷೆಯನ್ನು ಮನೆಮಾತಾಗಿಸಿಕೊಂಡ ಜನರನ್ನೊಳಗೊಂಡ ಜಿಲ್ಲೆ ಇದಾಗಿದೆ. ಬೆಟ್ಟ ಗುಡ್ಡಗಳಿಂದ ಕೂಡಿದ ಈ ಜಿಲ್ಲೆಯು ಎಷ್ಟೋ ಕಾಡುವಾಸಿ ಬುಡಕಟ್ಟುಗಳಿಗೆ ನೆಲೆ ಒದಗಿಸಿದ ಜಿಲ್ಲೆ ಇದಾಗಿದೆ. ಈ ಜಿಲ್ಲೆಯಲ್ಲಿ ಜೇನುಕುರುಬರ ನೆಲೆಗಳು (ಹಾಡಿ) ಕಂಡು ಬರುತ್ತವೆ. ಜಿಲ್ಲೆಯು ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ ತಾಲೂಕುಗಳನ್ನು ಒಳಗೊಂಡಿದೆ.

ಭೂಪಟ : ೨. ೩. ಜೇನುಕುರುಬ ಸಮುದಾಯದ ಕೊಡಗು ಜಿಲ್ಲೆಯ ನೆಲೆಗಳು



### ೨. ೪. ೩. ಅ. ಸೋಮವಾರಪೇಟೆ ತಾಲೂಕು

ಸೋಮವಾರಪೇಟೆಯಲ್ಲಿ ಒಟ್ಟು ನಲವತ್ತೊಂದು ಜೇನುಕುರುಬರ ನೆಲೆಗಳನ್ನು ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿದೆ.

**ಕೋಷ್ಟಕ : ೨. ೬. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಆನೇಕಾಡು | ೧೦ | ೩೨ | ೩೦ | ೬೨ |
| ೨ | ಅರೆ ಹೊಸೂರು | ೩೪ | ೮೫ | ೬೫ | ೧೫೦ |
| ೩ | ಆಲೂರು ಸಿದ್ಧಾಪುರ | ೮ | ೨೦ | ೧೬ | ೩೬ |
| ೪ | ಉದುಗೂರುಹಾಡಿ | ೮ | ೨೧ | ೧೭ | ೩೮ |
| ೫ | ಎಡವನಾಡು | ೩೪ | ೬೪ | ೫೬ | ೧೨೦ |
| ೬ | ಎಡವನಾಡು ಕಲಾಪಾಡಿ | ೯ | ೧೮ | ೨೨ | ೪೦ |
| ೭ | ಐರೂರು | ೩೦ | ೬೯ | ೭೩ | ೧೪೨ |
| ೮ | ಕಟ್ಟೆಪುರ ಹಾಡಿ | ೨೦ | ೩೩ | ೩೨ | ೬೫ |
| ೯ | ಕಟ್ಟೆಹಾಡಿ(ಚಿಕ್ಲಿಹೊಳೆ) | ೨೦ | ೫೫ | ೫೪ | ೧೦೯ |
| ೧೦ | ಕಡ್ಲೆಮಕ್ಕಿ | ೮ | ೧೯ | ೨೨ | ೪೧ |
| ೧೧ | ಕಬ್ಬಿನಗದ್ದೆ | ೩೫ | ೯೬ | ೬೪ | ೧೬೦ |
| ೧೨ | ಕಂಬಿಬಾಣೆ | ೧೫ | ೩೫ | ೩೮ | ೭೩ |
| ೧೩ | ಕಲ್ಲೂರು | ೨೦ | ೪೭ | ೫೪ | ೧೦೧ |
| ೧೪ | ಕಾಟಕೊಪ್ಪಲು ಹಾಡಿ | ೧೭ | ೩೮ | ೩೦ | ೬೮ |
| ೧೫ | ಕಿಬ್ಬೆಟ್ಟ | ೧೫ | ೩೭ | ೨೮ | ೬೫ |
| ೧೬ | ಗಣಗೂರು | ೮ | ೨೪ | ೧೫ | ೩೯ |
| ೧೭ | ಗೋಣಿ ಮಾರೂರು | ೨೩ | ೩೪ | ೨೬ | ೬೦ |
| ೧೮ | ಗಂಧದ ಹಾಡಿ | ೧೮ | ೨೧ | ೨೨ | ೪೩ |
| ೧೯ | ಚಿಲುಮೆ | ೩೬ | ೭೫ | ೭೪ | ೧೪೯ |
| ೨೦ | ತ್ಯಾಗತ್ತೂರು | ೨೫ | ೭೧ | ೬೧ | ೧೩೨ |
| ೨೧ | ದೊಡ್ಡಮಳ್ತೆ | ೮ | ೧೭ | ೧೯ | ೩೬ |
| ೨೨ | ನಾಕೂರು ಶಿರಂಗಾಲ | ೩೮ | ೮೪ | ೮೦ | ೧೬೪ |
| ೨೩ | ನೇರ್ಗಳಲೆ | ೧೨ | ೨೧ | ೨೩ | ೪೪ |
| ೨೪ | ಬಳಗುಂದ | ೩೪ | ೮೨ | ೬೮ | ೧೫೦ |
| ೨೫ | ಬಾಣಾವರ | ೧೨ | ೨೬ | ೨೪ | ೫೦ |
| ೨೬ | ಬೆಂಡಬೆಟ್ಟ | ೧೮ | ೩೬ | ೩೯ | ೭೫ |

| | | | | | |
|---|---|---|---|---|---|
| ೨೭ | ಬಾಣಾವರ ಕಾಡಾಡಿ | ೧೪ | ೨೫ | ೨೬ | ೫೧ |
| ೨೮ | ಬ್ಯಾಡಗೊಟ್ಟ | ೧೦ | ೨೧ | ೧೯ | ೪೦ |
| ೨೯ | ಬಾಳೆಗುಂಡಿ | ೨೫ | ೭೫ | ೬೫ | ೧೪೦ |
| ೩೦ | ಮದಲಾಪುರ ಹಾಡಿ | ೧೮ | ೪೪ | ೩೬ | ೮೦ |
| ೩೧ | ಮಾಲಂಬಿ ಹಾಡಿ | ೮೫ | ೧೮೨ | ೧೬೮ | ೩೫೦ |
| ೩೨ | ಮಾಲಂಬಿ ಬೆಟ್ಟದಹಾಡಿ | ೮ | ೧೭ | ೧೩ | ೩೦ |
| ೩೩ | ಮಾವಿನಹಳ್ಳ (ರಂಗಸಮುದ್ರ) | ೩೬ | ೧೧೯ | ೯೧ | ೨೧೦ |
| ೩೪ | ಮೀನುಕೊಲ್ಲಿ | ೨೫ | ೬೨ | ೬೮ | ೧೩೦ |
| ೩೫ | ಸಜ್ಜಳ್ಳಿ | ೨೮ | ೫೪ | ೫೬ | ೧೧೦ |
| ೩೬ | ಸೂಳೆಬಾವಿ | ೨೨ | ೪೬ | ೪೨ | ೮೮ |
| ೩೭ | ಹಬ್ಬೂರಾಡಿ | ೨೪ | ೬೪ | ೫೬ | ೧೨೦ |
| ೩೮ | ಹಾಡಿ ನಾಡೂರು | ೧೬ | ೪೪ | ೩೭ | ೮೧ |
| ೩೯ | ಹಿತ್ತಲಮಕ್ಕಿ | ೮ | ೧೩ | ೧೨ | ೨೫ |
| ೪೦ | ಹುಣಸೆಪಾರೆ | ೧೮ | ೩೫ | ೩೫ | ೭೦ |
| ೪೧ | ಹೊಸಪಟ್ಟಣ | ೨೦ | ೫೭ | ೪೫ | ೧೦೨ |
| **ಒಟ್ಟು** | | **೮೭೨** | **೨೦೧೮** | **೧೮೭೧** | **೩೮೮೯** |
| | | | **೫೨.೫೭** | **೪೭.೪೩** | |

**ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.**

ಸೋಮವಾರಪೇಟೆ ತಾಲೂಕಿನೊಳಗೆ ಒಟ್ಟು ೪೧ ಜೇನುಕುರುಬರ ನೆಲೆಗಳು ಇದ್ದು, ೮೭೨ ಕುಟುಂಬಗಳು ನೆಲೆಸಿವೆ. ಒಟ್ಟು ಜನಸಂಖ್ಯೆ ೩೮೮೯ ಇದೆ. ಇದರಲ್ಲಿ ಪುರುಷರು ೨೦೧೮ ಮಹಿಳೆಯರು ೧೮೭೧ ರಷ್ಟಿದ್ದಾರೆ

## ೨. ೪. ೩. ಅ. ವಿರಾಜಪೇಟೆ ತಾಲೂಕು

**ಕೋಷ್ಟಕ : ೨. ೭. ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಜೇನುಕುರುಬ ಸಮುದಾಯದ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಅಕ್ಕಿಮಾಳ | ೨೦ | ೪೦ | ೪೦ | ೮೦ |
| ೨ | ಅವರೆಗುಂಡ | ೪ | ೭ | ೧೦ | ೧೭ |
| ೩ | ಆಯರ ಹೊಸಹಳ್ಳಿ | ೪ | ೧೫ | ೭ | ೨೨ |
| ೪ | ಆಸ್ತಾನ | ೧ | ೩ | ೨ | ೫ |
| ೫ | ಉಳ್ವಪಾರೆ ಹಾಡಿ | ೨೦ | ೩೫ | ೩೨ | ೬೭ |
| ೬ | ಕರಡಿಕಲ್ಲು ಹಾಡಿ | ೪೨ | ೪೭ | ೪೪ | ೯೧ |
| ೭ | ಕಾರೆಅಡ್ಲು | ೩೫ | ೯೫ | ೮೩ | ೧೭೮ |
| ೮ | ಕಾರೆಕಂಡಿ ಹಾಡಿ | ೪ | ೧೮ | ೧೧ | ೨೯ |
| ೯ | ಕೆಸುವಿನ ಕೆರೆ | ೪ | ೮ | ೧೧ | ೧೯ |
| ೧೦ | ಕೊಡಂಗೆಹಾಡಿ | ೨೮ | ೩೭ | ೩೭ | ೭೪ |
| ೧೧ | ಕೊಲ್ಲಿಹಾಡಿ | ೧೩ | ೩೬ | ೩೫ | ೭೧ |
| ೧೨ | ಕೊಳಂಗರೆಹಾಡಿ | ೨೦ | ೪೦ | ೩೧ | ೭೧ |
| ೧೩ | ಕೋಲುನಪತಿ/ಸಿಂಕೋನ | ೪೩ | ೫೩ | ೪೯ | ೧೦೨ |
| ೧೪ | ಗೇಟಹಾಡಿ | ೧೧ | ೨೩ | ೩೦ | ೫೩ |
| ೧೫ | ಗಂಧದ ತೋಟ | ೮ | ೧೯ | ೧೪ | ೩೩ |
| ೧೬ | ಗೋಣಿಗದ್ದೆ ಹಾಡಿ | ೩೦ | ೬೬ | ೪೪ | ೧೧೦ |
| ೧೭ | ಚನ್ನಂಗಿಬಸವನಹಳ್ಳಿ | ೬ | ೧೮ | ೧೧ | ೨೯ |
| ೧೮ | ಚಿಕ್ಕರೇಷ್ಮೆ | ೩ | ೧೪ | ೭ | ೨೧ |
| ೧೯ | ಚೊಟ್ಟೆಪಾರೆ | ೪೭ | ೫೯ | ೫೩ | ೧೧೨ |
| ೨೦ | ಜಂಗಲ್‌ಹಾಡಿ(ಹೊಸಗದ್ದೆ) | ೬೦ | ೧೪೦ | ೧೩೦ | ೨೭೦ |
| ೨೧ | ಜೈನ ಅಡ್ಲು | ೧೫ | ೧೪ | ೧೧ | ೨೫ |
| ೨೨ | ತಟ್ಟಳ್ಳಿ ಹಾಡಿ | ೩೪ | ೫೩ | ೪೪ | ೯೭ |
| ೨೩ | ತಟ್ಟೆಕೆರೆ ಹಾಡಿ | ೭೪ | ೨೬೪ | ೨೩೪ | ೪೯೮ |
| ೨೪ | ದೊಡ್ಡರೇಷ್ಮೆ | ೭೫ | ೧೫೭ | ೧೬೧ | ೩೧೮ |
| ೨೫ | ದಯದಹಪ್ಪು | ೧ | ೩ | ೩ | ೬ |
| ೨೬ | ದಿಡ್ಡಳ್ಳಿ | ೪೦ | ೬೧ | ೪೨ | ೧೦೩ |
| ೨೭ | ದುಬಾರೆ | ೭೯ | ೧೩೭ | ೧೧೩ | ೨೫೦ |
| ೨೮ | ದೊಡ್ಡಹಪ್ಪು | ೪ | ೧೭ | ೧೦ | ೨೭ |
| ೨೯ | ನಾಗರಹೊಳಗದ್ದೆ ಹಾಡಿ | ೬೧ | ೧೦೯ | ೯೨ | ೨೦೧ |

| | | | | | |
|---|---|---|---|---|---|
| ೩೦ | ನಾಣಚ್ಚಿಗದ್ದೆ ಹಾಡಿ | ೬೮ | ೮೩ | ೮೨ | ೧೬೫ |
| ೩೧ | ಬ್ರಹ್ಮಗಿರಿ ಹಾಡಿ | ೧೩ | ೨೮ | ೨೪ | ೫೨ |
| ೩೨ | ಬಾಳೆಕೋಟುಹಾಡಿ | ೧೨ | ೨೨ | ೨೦ | ೪೨ |
| ೩೩ | ಬೊಮ್ಮನಹಳ್ಳಿ ಕಾಲೋನಿ | ೧೩ | ೩೫ | ೩೦ | ೬೫ |
| ೩೪ | ಬೊಮ್ಮಡು(ಸಂಪಿಗೆಕೊಲ್ಲಿ) | ೧೨೮ | ೨೮೬ | ೨೨೬ | ೫೧೨ |
| ೩೫ | ಮಜ್ಜಿಗೆಹಳ್ಳ (ಆನೆಕ್ಯಾಂಪ್) | ೪೭ | ೧೧೩ | ೧೦೪ | ೨೧೭ |
| ೩೬ | ಮಜ್ಜಿಗೆಹಳ್ಳ (ಫಾರಂಹಾಡಿ) | ೩೦ | ೫೧ | ೪೫ | ೯೬ |
| ೩೭ | ಮತ್ತಿಗೋಡು | ೧೯ | ೩೩ | ೪೧ | ೭೪ |
| ೩೮ | ಸಿದ್ಧಪುರಹಾಡಿ | ೧೮ | ೩೧ | ೨೯ | ೬೦ |
| ೩೯ | ಹಳ್ಳಿಗಟ್ಟು ಹಾಡಿ | ೧೫ | ೩೨ | ೩೦ | ೬೨ |
| ೪೦ | ಹೆಬ್ಬಾಳ ಆನೆಕ್ಯಾಂಪ್ | ೧೦ | ೧೮ | ೧೮ | ೩೬ |
| ಒಟ್ಟು | | ೧೧೫೯ | ೨೩೨೦ | ೨೦೪೦ | ೪೩೬೦ |
| | | | ೫೩.೨೧ | ೪೬.೭೯ | |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

### ೨. ೪. ೩. ಇ. ವಿರಾಜಪೇಟೆ ತಾಲೂಕಿನ ಲೈನ್ ಮನೆಗಳು

ವಿರಾಜಪೇಟೆ ತಾಲೂಕಿನಲ್ಲಿ ಒಟ್ಟು ನಲವತ್ತು ಜೇನುಕುರುಬರ ನೆಲೆಗಳನ್ನು ಗುರುತಿಸಲಾಗಿದೆ. ಈ ನೆಲೆಗಳಲ್ಲಿ ನೆಲೆಸಿದ ಒಟ್ಟು ಜೇನುಕುರುಬರ ಕುಟುಂಬಗಳು ೧೧೫೯, ಹಾಗೆಯೇ ಒಟ್ಟು ಜನಸಂಖ್ಯೆಯು ೪೩೬೦ ಇದೆ. ಇದರಲ್ಲಿ ಪುರುಷರು ೨೩೨೦ ಹಾಗೂ ಮಹಿಳೆಯರು ೨೦೪೦ ರಷ್ಟಿದ್ದಾರೆ. ಇದಲ್ಲದೆ ಎಸ್ಟೇಟ್ ಮಾಲಿಕರು ರಚಿಸಿಕೊಟ್ಟ ಎಸ್ಟೇಟಿನೊಳಗೆ ಇರುವ ಲೈನ್ ಮನೆಗಳ ನೆಲೆಗಳು ಪ್ರತ್ಯೇಕವಾಗಿವೆ. ಅವುಗಳ ವಿವರ ಈ ಕೆಳಗಿನಂತಿದೆ.

ಈ ತಾಲೂಕಿನಲ್ಲಿ ಇಂತಹ ಒಟ್ಟು ಎಂಟು ನೆಲೆಗಳನ್ನು ಗುರುತಿಸಲಾಗಿದ್ದು ೪೯ ಕುಟುಂಬಗಳು ಎಸ್ಟೇಟನ ಭೂಮಾಲಿಕರ ಬಳಿ ಎಸ್ಟೇಟ್ ಕೆಲಸ ಮಾಡಿ ಅಲ್ಲೇ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಮೇಲ್ನೋಟಕ್ಕೆ ಕೇವಲ ಕೂಲಿಗಳೆಂದು ಹೇಳಲಾಗುತ್ತಿದೆಯಾದರೂ ಈ ಕುಟುಂಬಗಳೆಲ್ಲ ಶಾಶ್ವತವಾಗಿ ಅಲ್ಲೇ ನೆಲೆಗೊಂಡಿದ್ದಾರೆ.

**ಕೋಷ್ಟಕ : ೨. ೮. ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಜೇನುಕುರುಬ ಸಮುದಾಯದ ಲೈನ್ ಮನೆಗಳ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಕೊಲ್ಲಿಮನೆ ಎಸ್ಟೇಟ್ | ೫ | ೭ | ೯ | ೧೬ |
| ೨ | ಟಾಟಾಕಾಫಿ ಮೂಕ ಎಸ್ಟೇಟ್ | ೨ | ೬ | ೬ | ೧೨ |
| ೩ | ತಣ್ಣೀರುಹಳ್ಳ | ೬ | ೧೧ | ೧೩ | ೨೪ |
| ೪ | ಪ್ರಕಾಶ್ ಎಸ್ಟೇಟ್ | ೧೦ | ೨೩ | ೨೪ | ೪೭ |
| ೫ | ಪಲ್ಲೇರಿ ಹತ್ತಿರದ ಎಸ್ಟೇಟ್ | ೭ | ೧೬ | ೧೦ | ೨೬ |
| ೬ | ಪಾಲಪರಾ ಎಸ್ಟೇಟ್ | ೧೫ | ೨೧ | ೨೭ | ೪೮ |
| ೭ | ಫಾಲತೋಪು ಎಸ್ಟೇಟ್ | ೧ | ೧ | ೩ | ೪ |
| ೮ | ಮಂಜುಮಾಚಯ್ಯ ಎಸ್ಟೇಟ್ | ೩ | ೫ | ೪ | ೯ |
| ಒಟ್ಟು | | ೪೯ | ೯೦ | ೯೬ | ೧೮೬ |
| | | | ೪೮.೩೯ | ೫೧.೬೧ | |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

## ೨. ೪. ೩. ಈ. ವಿರಾಜಪೇಟೆ ತಾಲೂಕಿನ ಪೈಸಾರಿ ಮನೆಗಳು

ಈ ರೀತಿ ಲೈನ್ ಮನೆಗಳಲ್ಲಿ ವಾಸ ಮಾಡುವ ವರ್ಗಕ್ಕಿಂತ ಭಿನ್ನವಾದ ರೀತಿಯಲ್ಲಿ ನೆಲೆಸಿರುವ ಜೇನುಕುರುಬರ ಕುಟುಂಬಗಳು ಕೊಡಗು ಜಿಲ್ಲೆಯಲ್ಲಿ ಕಂಡು ಬರುತ್ತವೆ. ಅವುಗಳನ್ನು ಪೈಸಾರಿ ಕುಟುಂಬಗಳೆಂದು ಸ್ಥಳೀಯರು ಕರೆಯುತ್ತಾರೆ. ಪೈಸಾರಿಗಳೆಂದರೆ ತಮ್ಮ ಸ್ವಂತ ಜಮೀನಿನಲ್ಲಿ ಮನೆಗಳನ್ನು ರಚಿಸಿಕೊಂಡು ಒಬ್ಬಂಟಿಗಳಾಗಿ ನೆಲೆಸುವ ಕುಟುಂಬಗಳು ಎಂದರ್ಥ. ಜೇನುಕುರುಬರ ಕೆಲವು ಕುಟುಂಬಗಳಿಗೆ ಕಾಡಿನಿಂದ ಹೊರಹಾಕುವ ಉದ್ದೇಶದಿಂದ ಕಾಡಿನ ಹೊರಗೆ ಒಂದೆರಡು ಎಕರೆಗಳಷ್ಟು ಜಮೀನನ್ನು ಸರ್ಕಾರ ನೀಡಿದೆ. ಹೀಗೆ ತಮಗೆ ದೊರೆತ ಜಮೀನಿನಲ್ಲಿಯೇ ಮನೆಗಳನ್ನು ಕಟ್ಟಿಕೊಂಡು ರಾಗಿ ಮುಂತಾದ ಬೆಳೆಗಳನ್ನು ಬೆಳೆದುಕೊಳ್ಳುತ್ತ ಜೀವನ ನಿರ್ವಹಣೆ ಮಾಡುತ್ತಾರೆ. ಈ ರೀತಿಯ ಕುಟುಂಬಗಳು ಹೆಚ್ಚಾಗಿ ವಿರಾಜಪೇಟೆ ತಾಲೂಕಿನೊಳಗೆ ಕಂಡುಬರುತ್ತವೆ.

**ಕೋಷ್ಟಕ : ೨. ೯. ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಜೇನುಕುರುಬ ಸಮುದಾಯದ ಪೈಸಾರಿ ಮನೆಗಳ ನೆಲೆಗಳವಾರು ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು |
| ೧ | ಅನಸಗೆ | ೩ | ೫ | ೯ | ೧೪ |
| ೨ | ಆಲಂದೋಡು | ೨ | ೮ | ೩ | ೧೧ |
| ೩ | ಕುಂಬಾರಕಟ್ಟೆ (ಬಾಳೆಲೆ) | ೨೮ | ೩೭ | ೪೦ | ೭೭ |
| ೪ | ಕೋದಮೂಲೆ | ೧೨ | ೨೬ | ೨೧ | ೪೭ |
| ೫ | ತಾಯಿಭೂಮಿ(ನಾಣಚ್ಚಿ ಕುಟ್ಟ) | ೬ | ೧೪ | ೧೪ | ೨೮ |
| ೬ | ದೇವರಕಾಡು (ತಿತಿಮತಿ) | ೭೨ | ೧೫೧ | ೧೪೫ | ೨೯೬ |
| ೭ | ನಾತಂಗಲ್ – ೧ | ೧೦ | ೨೩ | ೧೯ | ೪೨ |
| ೮ | ನಾತಂಗಲ್ – ೨ | ೧೮ | ೩೭ | ೨೮ | ೬೫ |
| ೯ | ನಾಯಿಮನೆ ಕಾಲೋನಿ | ೨೦ | ೫೦ | ೪೨ | ೯೨ |
| ೧೦ | ನೆಮ್ಮಾತಿ (ಬಿರ್ನಾಣಿ) | ೩ | ೭ | ೬ | ೧೩ |
| ೧೧ | ಮಡ್ಡರಮಾಡುಕಟ್ಟೆಹಾಡಿ | ೩೦ | ೬೧ | ೫೬ | ೧೧೮ |
| ೧೨ | ಲಕ್ಕುಂದ (ಕುಟ್ಟ) | ೮ | ೨೭ | ೧೮ | ೪೫ |
| ೧೩ | ಹೊಸಕೊಲ್ಲಿ | ೨೧ | ೩೮ | ೩೦ | ೬೮ |
| ಒಟ್ಟು | | ೨೩೩ | ೪೮೪ | ೪೩೧ | ೯೧೫ |
| | | | ೫೨.೯ | ೪೭.೧ | |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ವಿರಾಜಪೇಟೆ ತಾಲೂಕಿನೊಳಗೆ ಪೈಸಾರಿಯ ಹದಿಮೂರು ನೆಲೆಗಳನ್ನು ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿದ್ದು, ೨೩೩ ಜೇನುಕುರುಬ ಕುಟುಂಬಗಳು ಇವೆ. ಈ ಕುಟುಂಬಗಳಲ್ಲಿರುವ ಒಟ್ಟು ಜನಸಂಖ್ಯೆಯು ೯೧೫ ಇದೆ. ಇದರಲ್ಲಿ ಪುರುಷರು ೪೮೪ ಮತ್ತು ಮಹಿಳೆಯರು ೪೩೧ ಇದ್ದಾರೆ.

### ೨. ೪. ೩. ಉ. ವಿರಾಜಪೇಟೆ ತಾಲೂಕಿನಲ್ಲಿ ನೆಲೆಸಿದ ಒಟ್ಟು ಕುಟುಂಬಗಳು

ವಿರಾಜಪೇಟೆ ತಾಲೂಕಿನಲ್ಲಿ ಜೇನುಕುರುಬರ ಒಟ್ಟು ನೆಲೆಗಳು ೬೧ ಇದ್ದು ೧,೪೪೧ ಕುಟುಂಬಗಳು ವಾಸಿಸುತ್ತಿವೆ. ಒಟ್ಟು ಜನಸಂಖ್ಯೆಯು ೫೩೫೧ ಇದ್ದು ಪುರುಷರು ೨೮೯೪ ಮಹಿಳೆಯರು ೨೫೬೭ ಇದ್ದಾರೆ.

**ಕೋಷ್ಟಕ : ೨. ೧೦. ವಿರಾಜಪೇಟೆ ತಾಲೂಕಿನ ಹಾಡಿ, ಲೈನ್ ಮನೆ, ಮತ್ತು ಪೈಸಾರಿಗಳಲ್ಲಿ ನೆಲೆಸಿದ ಜೇನುಕುರುಬ ಕುಟುಂಬಗಳ ವಿವರ**


| ಕ್ರ ಸಂ | ವಿವರ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|---|
| | | | | ಗಂ | ಹೆ | ಒಟ್ಟು |
| ೧ | ಹಾಡಿ | ೪೦ | ೧೧೫೯ | ೨೩೨೦ | ೨೦೪೦ | ೪೩೬೦ |
| ೨ | ಲೈನ್ ಮನೆ | ೦೮ | ೪೯ | ೯೦ | ೯೬ | ೧೮೬ |
| ೩ | ಪೈಸಾರಿ | ೧೩ | ೨೩೩ | ೪೮೪ | ೪೩೧ | ೯೧೫ |
| ಒಟ್ಟು | | ೬೧ | ೧,೪೪೧ | ೨,೮೯೪ | ೨,೫೬೭ | ೫,೩೫೧ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

## ೨. ೪. ೪. ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಜೇನುಕುರುಬರ ಜನಸಂಖ್ಯೆ ವಿವರ

ಒಟ್ಟಾರೆಯಾಗಿ ಹೇಳುವುದಾದರೆ ಕರ್ನಾಟಕದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ನೆಲೆಸಿರುವ ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಜೇನುಕುರುಬರ ಜನಸಂಖ್ಯೆ ವಿವರ.

ಭೂಪಟ : ೨. ೪. ಜೇನುಕುರುಬರ ತಾಲೂಕುವಾರು ನೆಲೆಗಳು




**ಕೋಷ್ಟಕ : ೨. ೧೧. ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಸಮೀಕ್ಷೆಗೊಳಪಟ್ಟ ಜೇನುಕುರುಬ ಸಮುದಾಯದ ಒಟ್ಟು ನೆಲೆಗಳು, ಕುಟುಂಬ ಹಾಗೂ ಲಿಂಗವಾರು ಜನಸಂಖ್ಯೆ**

| ಕ್ರಸಂ | ಜಿಲ್ಲೆ | ನೆಲೆಗಳು | ಕುಟುಂಬ | ಜನಸಂಖ್ಯೆ | | |
|---|---|---|---|---|---|---|
| | | | | ಗಂ | ಹೆ | ಒಟ್ಟು |
| ೦೧ | ಮೈಸೂರು | ೧೩೧ | ೬೭೬೯ | ೧೪೦೬೧ | ೧೨೮೨೭ | ೨೬೮೮೮ |
| ೦೨ | ಚಾಮರಾಜನಗರ | ೧೪ | ೦೩೩೯ | ೭೫೫ | ೬೯೫ | ೧೪೫೦ |
| ೦೩ | ಕೊಡಗು | ೧೦೨ | ೨೩೧೩ | ೪೯೧೨ | ೪೩೮೮ | ೯೩೦೦ |
| ಒಟ್ಟು | | ೨೪೭ | ೯೪೨೧ | ೧೯೭೨೮ | ೧೭೯೧೦ | ೩೭೬೩೮ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ಜೇನು ಕುರುಬ ನೆಲೆಗಳು ೨೪೭ ಇದ್ದು ೯೪೨೧ ಕುಟುಂಬಗಳು ಇವೆ. ಒಟ್ಟು ಜೇನುಕುರುಬರ ಜನಸಂಖ್ಯೆ ೩೭೬೩೮ ಇದೆ. ಇದರಲ್ಲಿ ಶೇ.೫೨.೪೩ ರಷ್ಟು (೧೯೭೨೮) ಪುರುಷರು ಹಾಗೂ ಶೇ.೪೭.೫೭ ರಷ್ಟು (೧೭೯೧೦) ಮಹಿಳೆಯರಿದ್ದಾರೆ ಎಂಬುದು ತಿಳಿದುಬರುತ್ತದೆ.

**ವೃತ್ತಚಿತ್ರ : ೨. ೧. ಜೇನುಕುರುಬ ಸಮುದಾಯದ ಜಿಲ್ಲಾವಾರು ಜನಸಂಖ್ಯೆ ವಿವರ (ಶೇಕಡವಾರುಗಳಲ್ಲಿ)**




ಜೇನುಕುರುಬರು ಕರ್ನಾಟಕ ರಾಜ್ಯದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಕಂಡು ಬರುತ್ತದೆ. ಅದರಲ್ಲಿ ಇವರು ಮೈಸೂರು ಜಿಲ್ಲೆಯೊಂದರಲ್ಲಿಯೇ ಶೇ.೭೧% ರಷ್ಟು ಜನಸಂಖ್ಯೆಯು ವಾಸಿಸುತ್ತಾರೆ. ಕೊಡಗು ಜಿಲ್ಲೆಯಲ್ಲಿ ಶೇ.೨೫% ಪ್ರತಿಶತ ಜೇನುಕುರುಬರು ವಾಸಿಸುತ್ತಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಶೇ.೪% ರಷ್ಟು ಜನಸಂಖ್ಯೆಯು ನೆಲೆಸಿದೆ. ಈ ಮೂರು ಜಿಲ್ಲೆಗಳನ್ನು ಗಮನಿಸಿದಾಗ ಮೈಸೂರು ಜಿಲ್ಲೆಯೊಂದೇ ಹೆಚ್ಚು ಜೇನುಕುರುಬರ ಜನಸಂಖ್ಯೆಯನ್ನು ಹೊಂದಿರುವುದನ್ನು ಕಾಣಬಹುದು

**ಕೋಷ್ಟಕ : ೨. ೧೨.ಜೇನುಕುರುಬ ಸಮುದಾಯದ ಜಿಲ್ಲಾವಾರು, ತಾಲೂಕುವಾರು, ಕುಟುಂಬಗಳ ನೆಲೆಯೂರಿದ ಹಾಡಿಗಳು**

| ಕ್ರ.ಸಂ. | ಜಿಲ್ಲೆ | ತಾಲೂಕು | ಕುಟುಂಬ | ಹಾಡಿ ಇರುವುದು | | | |
|---|---|---|---|---|---|---|---|
| | | | | ಕಾಡಿನ ಒಳಗೆ | ಕಾಡನ ಅಂಚಿನಲ್ಲಿ | ಕಾಡಿನ ಹೊರಗೆ | ಎಸ್ಟೇಟ್ ಒಳಗೆ |
| ೧ | ಮೈಸೂರು | ಎಚ್.ಡಿ. ಕೋಟೆ | ೩೮೮೧ | ೧೭ | ೪೦ | ೨೩ | - |
| | | ಪಿರಿಯಾಪಟ್ಟಣ | ೧೦೦೬ | ೭ | ೭ | ೮ | - |
| | | ಹುಣಸೂರು | ೧೭೦೯ | | ೧೩ | ೧೨ | - |
| | | ನಂಜನಗೂಡು | ೧೭೩ | | ೩ | ೧ | - |
| **ಮೈಸೂರು ಜಿಲ್ಲೆ** | | | **೬೭೬೯** | **೨೪** | **೬೩** | **೪೪** | **-** |
| ೨ | ಕೊಡಗು | ಸೋಮವಾರಪೇಟೆ | ೮೭೨ | ೨೦ | ೧೩ | ೮ | - |
| | | ವಿರಾಜಪೇಟೆ | ೧೧೫೯ | ೨೪ | ೧೧ | ೫ | - |
| | | ವಿರಾಜಪೇಟೆ | ೪೯ | - | - | ೧ | ೭ |
| | | ವಿರಾಜಪೇಟೆ | ೨೩೩ | | ೬ | ೭ | - |
| **ಕೊಡಗು ಜಿಲ್ಲೆ** | | | **೨೩೧೩** | **೪೪** | **೩೦** | **೨೧** | **೭** |
| ೩ | ಚಾ.ನ. | ಗುಂಡ್ಲುಪೇಟೆ | ೩೩೯ | - | - | ೧೪ | - |
| **ಚಾಮರಾಜನಗರ ಜಿಲ್ಲೆ** | | | **೩೩೯** | **-** | **-** | **೧೪** | **-** |
| **ಒಟ್ಟು** | | | **೯೦೩೪** | **೬೮** | **೯೩** | **೭೯** | **೭** |
| | | | | ೨೯.೧೮ | ೩೯.೯೧ | ೩೩.೯೦ | ೩.೦೦ |

**ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.**

ಜೇನುಕುರುಬರು ಮೈಸೂರು ಜಿಲ್ಲೆಯಲ್ಲಿನ ೧೩೧ ಹಾಡಿಗಳಲ್ಲಿ ೨೪ ಹಾಡಿಗಳು ಕಾಡಿನೊಳಗೆ, ೬೩ ಹಾಡಿಗಳು ಕಾಡಂಚಿನಲ್ಲಿ, ೪೪ ಹಾಡಿಗಳು ಕಾಡಿನ ಹೊರಗೆ ನೆಲೆಗೊಂಡಿರುವುದನ್ನು ಕಾಣುತ್ತೇವೆ.


ಕೊಡಗು ಜಿಲ್ಲೆಯಲ್ಲಿನ ೧೦೨ ಹಾಡಿಗಳಲ್ಲಿ ೪೪ ಹಾಡಿಗಳು ಕಾಡಿನೊಳಗೆ. ೩೦ ಹಾಡಿಗಳು ಕಾಡಂಚಿನಲ್ಲಿ. ೨೧ ಹಾಡಿಗಳು ಕಾಡಿನ ಹೊರಗೆ ಮತ್ತು ಎಸ್ಟೇಟ್‌ಗಳಲ್ಲಿ ೭ ಹಾಡಿಗಳು ನೆಲೆಗೊಂಡಿರುವುದನ್ನು ಕಾಣುತ್ತೇವೆ.

ಚಾಮರಾಜನಗರ ಜಿಲ್ಲೆಯಲ್ಲಿನ ಒಟ್ಟು ಎಲ್ಲಾ ೧೪ ಜೇನುಕುರುಬ ಹಾಡಿಗಳು ಕಾಡಿನ ಹೊರಗೆ ನೆಲೆಗೊಂಡಿರುವುದನ್ನು ಕಾಣುತ್ತೇವೆ.

ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಯಲ್ಲಿನ ೬೮ (೨೭%) ಹಾಡಿಗಳು ಕಾಡಿನೊಳಗೆ, ೯೩ (೩೮%) ಹಾಡಿಗಳು ಕಾಡಂಚಿನಲ್ಲಿ, ೭೯ (೩೨%) ಹಾಡಿಗಳು ಕಾಡಿನ ಹೊರಗೆ ಮತ್ತು ಎಸ್ಟೇಟ್‌ಗಳಲ್ಲಿ ೭ (೩%) ಹಾಡಿಗಳು ನೆಲೆಗೊಂಡಿರುವುದನ್ನು ಕಾಣುತ್ತೇವೆ.

**ವೃತ್ತಚಿತ್ರ : ೨. ೨. ಜೇನುಕುರುಬ ಸಮುದಾಯದ ನೆಲೆಗಳಿರುವ ವಿವರ**

**(ಶೇಕಡವಾರುಗಳಲ್ಲಿ)**




ಸಮೀಕ್ಷೆಗೆ ಒಳಪಡಿಸಿದಂತೆ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಜೇನುಕುರುಬರು ವಾಸಿಸುವ ನೆಲೆಗಳಿರುವ ಆಧಾರದ ಮೇಲೆ ಇವರನ್ನು ಕಾಡಿನ ಒಳಗೆ, ಕಾಡಿನಂಚಿನಲ್ಲಿ, ಕಾಡಿನ ಹೊರಗೆ ಮತ್ತು ಎಸ್ಟೇಟ್‌ಗಳಲ್ಲಿ ಇವರ ನೆಲೆಗಳನ್ನು ಗುರುತಿಸಿದ್ದು, ಇಂದು ಕಾಡಿನ ಒಳಗೆ ಪಾರಂಪರಿಕ ವೃತ್ತಿಯನ್ನು ಮಾಡಿಕೊಂಡು ಜೀವಿಸುತ್ತಿರುವವರ ಸಂಖ್ಯೆಯು ಶೇ. ೨೭% ಭಾಗವಾಗಿದ್ದಾರೆ. ಇಂದು ಮೂಲ, ಕಾಡಿನ ಒಡನಾಟ, ಕಾಡಿನ ಆಹಾರ, ಬೇಟೆ, ಮುಂತಾದವುಗಳನ್ನು ಹೊಂದಿರುವವರು ಇಡೀ ಸಮುದಾಯದಲ್ಲಿ ಕೇವಲ ಶೇ. ೨೭%. ಮಾತ್ರವಾಗಿದ್ದಾರೆ. ಕಾಡಂಚಿನಲ್ಲಿ ನೆಲೆಗಳನ್ನು ಹೊಂದಿರುವವರು, ಇದರಲ್ಲಿ ಪುನರ್ವಸತೀಕರಣಗೊಂಡವರು, ಅರಣ್ಯ ಇಲಾಖೆಯ ಕಾನೂನು ಕಟ್ಟಳೆಗಳಿಂದ ನಿರ್ವಸತೀಕರಣಗೊಂಡವರು ಸೇರಿದ್ದು ಶೇ. ೩೮% ಜೇನುಕುರುಬರು.

ಇಂದು ಕಾಡಿನ ಅಂಚುಗಳಲ್ಲಿ ವಾಸಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಕಾಡಿನ ನಂಟು ಕೇವಲ ನೆಪ ಮಾತ್ರಕಷ್ಟೇ. ಸ್ವತಂತ್ರವಾಗಿ ಕಾಡಿನ ಒಳಗೆ ಪ್ರವೇಶಿಸಲು ಸಾಧ್ಯವಿಲ್ಲ. ಇಲಾಖೆಯ ಅನುಮತಿ ಪಡೆಯಬೇಕು. ಸರ್ಕಾರದ ನೀತಿ ನಿಯಮಗಳ ಕಠಿಣತೆಯಿಂದಾಗಿ ಇವರಿಗೆ ಕಾಡಿನ ಸಂಪರ್ಕ ಅತಿ ಕಡಿಮೆ ಎನ್ನಬಹುದು.

ಇನ್ನು ಕಾಡಿನಿಂದ ಹೊರಗೆ ವಾಸಿಸುವ ಶೇ. ೩೨% ಭಾಗದ ಜೇನುಕುರುಬರು ಸಂಪೂರ್ಣವಾಗಿ ಪುನರ್ವಸತೀಕರಣಗೊಂಡು, ಕಾಡಿನಿಂದ ಬಹಳಷ್ಟು ದೂರದಲ್ಲಿ ಸರ್ಕಾರದವರು ನಿರ್ಮಿಸಿ ಕೊಟ್ಟಿರುವ ನೆಲೆಗಳಲ್ಲಿ ವಾಸಿಸುತ್ತಿರುವವರು. ಇವರಿಗೆ ಕಾಡಿನ ಯಾವ ಸೌಲಭ್ಯಗಳು ಇಲ್ಲ. ಕಾಡಿನಿಂದ ಸಿಗುವ ಸೊಪ್ಪು, ಗೆಣಸು, ಸಣ್ಣ ಬೇಟೆಯಾಡುವುದು ಸಾಧ್ಯವಿಲ್ಲ. ಇದರಿಂದ ಇವರಿಗೂ ಕಾಡಿನ ಒಡನಾಟ ಸಂಪೂರ್ಣವಾಗಿ ಇಳಿಮುಖವಾಗಿರುವುದು. ಸಮೀಕ್ಷೆಯಿಂದ ತಿಳಿದು ಬಂದಿದೆ.

ಕೊಡಗು ಜಿಲ್ಲೆಯ ಎಸ್ಟೇಟ್‌ಗಳಲ್ಲಿ ಶೇ. ೩% ಜೇನುಕುರುಬರು ವಾಸಿಸುತ್ತಾರೆ. ಇವರು ಎಸ್ಟೇಟ್‌ನಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಿರ್ವಾಹಣೆ ಮಾಡುತ್ತಿರುವವರು ಇವರಿಗೂ ಕಾಡಿಗೂ ಒಡನಾಟ ಅತಿ ವಿರಳವಾಗಿದೆ.

ಈ ರೀತಿಯಾಗಿ ಜೇನುಕುರುಬರು. ತಮ್ಮ ನೆಲೆಗಳನ್ನು ಹೊಂದಿದ್ದು. ಮೂಲ ಪಾರಂಪರಿಕ ವೃತ್ತಿಯ ಕೊಂಡಿ ಕಳಚಲು ಈ ರೀತಿಯ ತೊಂದರೆಗಳು ಕಾರಣವಾಗಿವೆ ಎಂದು ತಿಳಿಯುತ್ತದೆ.

ಈ ಮೇಲೆ ತಿಳಿಸಿರುವಂತೆ ಜೇನುಕುರುಬರು ತಮ್ಮ ಮೂಲ ಇತಿಹಾಸವನ್ನು ಹೊಂದಿದ್ದು, ಕ್ಷೇತ್ರ ಕಾರ್ಯದಲ್ಲಿ ವಕ್ತೃಗಳು ಸೃಷ್ಟಿ ಪುರಾಣಗಳು, ದಂತ ಕಥೆಗಳಲ್ಲಿ ಇವರ ಪರಂಪರೆಯನ್ನು ತಿಳಿಸಿರುತ್ತಾರೆ. ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿನ ಇವರ ನೆಲೆಗಳನ್ನು ಹಾಗೂ ಕುಟುಂಬಗಳ ಮತ್ತು ಜನಸಂಖ್ಯೆಯ ಮಾಹಿತಿಯನ್ನು ಸಂಪೂರ್ಣವಾಗಿ ತಿಳಿಯಲಾಗಿದೆ.

**ಮಾಹಿತಿದಾರರು**

ಅಕ್ಕಮ್ಮ, ಅಲದಕಟ್ಟೆ ಹಾಡಿ, ಪಿರಿಯಾಪಟ್ಟಣ, ತಾಲೂಕು, ಮೈಸೂರು ಜಿಲ್ಲೆ.

ಗೋಪಾಲ ನಾಣಚ್ಚಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ತಿಮ್ಮ ಜೆ ಕೆ, ನಾಗರಹೊಳೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ

ನೂರಾಳಿ, ಕೆರಹಾಡಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.

ವಿಠಲ ನಾಣಚ್ಚಿ, ಬಸವನಗಿರಿ ಬಿ ಹಾಡಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.

ಸೋಮಯ್ಯ ಜೆ ಕೆ, ಸಂಪಿಗೆ ಕೊಲ್ಲಿ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಹೊನ್ನಿ, ನಾಣಚಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

**ಆಧಾರಗಳು**


ಜನಗಣತಿ ವರದಿ, ಭಾರತ ಸರ್ಕಾರ, ೨೦೧೧

ಜೇನುಕುರುಬರ ಸಮೀಕ್ಷೆ, ಏಪ್ರಿಲ್-ಮೇ, ೨೦೧೩

ಲಲಿತ ಎ.ಸಿ., ೧೯೯೩, *ಕಾಡುಕುರುಬ ಮತ್ತು ಜೇನುಕುರುಬರ ಸಂಸ್ಕೃತಿ*, ಪು.ಸ.೧೪

ಅಧ್ಯಾಯ ಮೂರು.........

# ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನ

# ಅಧ್ಯಾಯ ಮೂರು

## ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನ

೩. ೧. ಕುಟುಂಬ

೩. ೨. ಜೇನುಕುರುಬರ ಕುಲ/ಬೆಡಗುಗಳು

೩. ೩. ಸಾಮಾಜಿಕ ಸಂರಚನೆ

೩. ೩. ೧. ಹಾಡಿಯ ಯಜಮಾನ

೩. ೩. ೨. ತಮ್ಮಡಿ

೩. ೩. ೩. ಮಣ್ಣಿನವರು

೩. ೩. ೩. ಕೋಲುಕಾರ

೩. ೩. ೩. ತಿರುಳುಗುಂದದವರು

೩. ೪. ವಿವಾಹ

೩. ೪. ೧. ಪ್ರಸ್ತ ಆಚರಣೆ

೩. ೪. ೨. ಅಂತರ್ಜಾತಿ ವಿವಾಹ

೩. ೪. ೩. ವಿಧವಾ ವಿವಾಹ

೩. ೪. ೪. ಬಹುಪತ್ನಿತ್ವ

೩. ೪. ೫. ಬಾಲ್ಯ ವಿವಾಹ

೩. ೫. ಹುಟ್ಟು

೩. ೫. ೧. ಗರ್ಭಿಣಿಯಾದ ಮೇಲೆ ಆಚರಿಸುವ ಸಂಪ್ರದಾಯಗಳು

೩. ೫. ೨. ಬಾಣಂತಿ ಮಗುವಿನ ಆರೈಕೆ

೩. ೫. ೩. ಹೊಸಿಲು ದಾಟುವ ಶಾಸ್ತ್ರ

೩. ೫. ೪. ತೊಟ್ಟಿಲ ಶಾಸ್ತ್ರ

೩. ೫. ೫. ಮಕ್ಕಳಿಗೆ ಆಸರ ತೆಗೆಯುವುದು

೩. ೫. ೬. ಜನನದ ಸೂತಕ

೩. ೬. ಋತುಮತಿ

೩. ೭. ಸಾವು

೩. ೭. ೧. ಸೂತಕ

೩. ೭. ೨. ಸ್ವರ್ಗ ನರಕದ ಪರಿಕಲ್ಪನೆ

೩. ೭. ೩. ನೆರಳು ಕರೆಯುವ ಆಚರಣೆ

# ಅಧ್ಯಾಯ ಮೂರು

## ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನ

ಮಾನವ ಸಂಘಜೀವಿ. ಆದಿ ಮಾನವನ ಅವಸ್ಥೆಯಿಂದಲೂ ಅನೇಕ ಕಾರಣಗಳಿಂದಾಗಿ ಸಾಮೂಹಿಕ ಬದುಕನ್ನು ಸಾಗಿಸುತ್ತಾ ಬಂದಿದ್ದಾನೆ. ಮಾನವನು ಎಷ್ಟೆಲ್ಲಾ ಆಧುನಿಕವಾಗಿ ಮುಂದುವರೆದಿದ್ದಾನೆಂದು ಹೇಳಲಾಗುತ್ತಿದೆಯಾದರೂ ಇನ್ನೂ ಎಷ್ಟೋ ಬುಡಕಟ್ಟುಗಳು ತಮ್ಮ ಮೂಲ ಜೀವನ ಕ್ರಮವನ್ನು ತೊರೆಯದೆ ಇಂದಿಗೂ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಬಂದಿವೆ. ಭಾರತದ ಕೆಲವು ಬುಡಕಟ್ಟುಗಳು ಬಾಹ್ಯವಾಗಿ ತಮ್ಮ ಉಡುಪು, ಆಹಾರ ಕ್ರಮ ಮುಂತಾದವುಗಳಲ್ಲಿ ಆಧುನಿಕ ವ್ಯವಸ್ಥೆಯನ್ನು ಅನುಸರಿಸುತ್ತಿವೆ ಎನಿಸಿದರೂ, ಅವು ಅಂತರ್ಯದಲ್ಲಿ ತಮ್ಮ ಮೂಲ ಸಾಮಾಜಿಕ ಸಂರಚನೆಯಿಂದ (Social Structure) ಕಳಚಿಕೊಳ್ಳದೆ ಹಾಗೇ ಮುಂದುವರೆದಿರುವುದು ಅವುಗಳ ಆಳವಾದ ಅಧ್ಯಯನದ ಮೂಲಕ ತಿಳಿದುಬರುತ್ತದೆ.

ಜೇನುಕುರುಬರ ಸಾಮಾಜಿಕ ಜೀವನ ಇತರರಿಗಿಂತ ಭಿನ್ನವಿದ್ದು, ತನ್ನದೇ ಆದ ವಿಶಿಷ್ಟ ಸಾಮಾಜಿಕ ರಚನೆಯನ್ನು ಹೊಂದಿದೆ. ಇಲ್ಲಿ ಎಲ್ಲರಿಗೂ ಸಮಾನವಾದ ಅವಕಾಶವಿದೆ. ಎಲ್ಲರೂ ಒಂದೇ ಎಂಬ ಮನೋಭಾವನೆ ಇದೆ. ಇದರಿಂದ ಇವರಲ್ಲಿ ಭಿನ್ನಮತಗಳೇ ಕಡಿಮೆ. ಇವರ ಕೌಟುಂಬಿಕ ವ್ಯವಸ್ಥೆ ಜೀವನ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಡಿಯಲ್ಲಿ ಇವರು ಸಾಮಾಜಿಕ ಬದುಕನ್ನು ಕಟ್ಟಿಕೊಂಡಿದ್ದಾರೆ.

ಭಾರತದಂತಹ ದೇಶದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಜೇನುಕುರುಬ ಬುಡಕಟ್ಟನ್ನು ಗಮನಿಸಿದರೆ ಅದು ಇಂದಿಗೂ ಆದಿಮ ಸ್ಥಿತಿಯಲ್ಲಿರುವ ಬುಡಕಟ್ಟಾಗಿದೆ. ಜೇನುಕುರುಬರು ಕಾಡಿನ ಮಧ್ಯ ಮತ್ತು ಕಾಡಂಚಿನಲ್ಲಿ ಹಾಡಿಗಳನ್ನು ಕಟ್ಟಿಕೊಂಡು ತಮ್ಮದೇ ಆದ ಸ್ವಚ್ಛಂದ ಬದುಕನ್ನು ನಡೆಸುತ್ತಿದ್ದಾರೆ. ಇತ್ತೀಚೆಗೆ ಸರ್ಕಾರದ ಕಾನೂನುಗಳು, ಹೊಸ ನೀತಿಗಳಿಂದಾಗಿ ತಮ್ಮ ಜೀವನ ಪದ್ಧತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡಿದೆ. ಹಾಡಿಯೊಳಗಿರುವವರು ಇಂದಿಗೂ ತಮ್ಮ ಬುಡಕಟ್ಟಿನೊಂದಿಗೆ ಬದುಕಿದರೆ, ಹಾಡಿಯ ಹೊರಗೆ ಬಂದು ಸರ್ಕಾರ ನಿರ್ಮಿಸಿಕೊಟ್ಟ ಮನೆಗಳಲ್ಲಿರುವವರು ಅನಿವಾರ್ಯವಾಗಿ ತಮ್ಮ ಬುಡಕಟ್ಟಿಗೆ ಭಿನ್ನವಾದ ಜನ ಸಮುದಾಯದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಕೊಡಗಿನಲ್ಲಿ ಬಂಡವಾಳಶಾಹಿ ಕಾಫಿ, ಟೀ ಎಸ್ಟೇಟ್‌ಗಳಲ್ಲಿ ಶಾಶ್ವತವಾಗಿ ಅಲ್ಲೇ ವಾಸವಿದ್ದೂ, ಕೂಲಿ ಕೆಲಸ ಮಾಡಿ ಜೀವನ ಸಾಗಿಸುವ ಜೇನುಕುರುಬ ಕುಟುಂಬಗಳಿವೆ. ಟೀ, ಕಾಫಿ ಎಸ್ಟೇಟ್‌ಗಳಲ್ಲಿ ನಿರ್ಮಿಸಿದ ಲೈನ್ ಮನೆಗಳಲ್ಲಿ ನೆಲೆಸಿರುವ ಇವರು ಯಾರ ಗಣತಿಗೂ ಸಿಗಲಾರರು. ಇವರನ್ನು ಮಾತನಾಡಿಸಬೇಕೆಂದರೆ ಬಂಡವಾಳಶಾಹಿಗಳ

ಪರವಾನಿಗೆ ಪಡೆಯಬೇಕು. ಅದು ಅಷ್ಟು ಸುಲಭ ಸಾಧ್ಯದ ಕೆಲಸವಲ್ಲ. ಹೀಗೆ ನಾನಾ ಹಂತಗಳಲ್ಲಿ ಹಂಚಿಹೋಗಿರುವ ಜೇನುಕುರುಬರು ಸಾಧ್ಯವಾದಷ್ಟು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿರುವುದು ಹಾಗೂ ಅದರಲ್ಲಿ ಪೂರ್ಣವಲ್ಲದಿದ್ದರೂ ಭಾಗಶಃ ಯಶಸ್ವಿಯಾಗಿದ್ದಾರೆಂದೇ ಹೇಳಬಹುದು. ವಿಶೇಷವಾಗಿ ಕಾಡಿನ ಮಧ್ಯ ಬದುಕುವ ಜೇನುಕುರುಬರು ತಮ್ಮ ಮಿತಿಯೊಳಗೆ ಜೀವನ ನಡೆಸುವ ಚಾಣಾಕ್ಷರು. ಆದರೆ ಆಧುನಿಕ ಪ್ರಪಂಚ ಇಂದಿಗೂ ಇವರನ್ನು ಶೋಷಣೆ ಮಾಡುವುದನ್ನು ನಿಲ್ಲಿಸಿಲ್ಲ.

## ೩. ೧. ಕುಟುಂಬ

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಎಂಬುದು ಪ್ರಮುಖವಾದ ಸ್ಥಾನವನ್ನು ಹೊಂದಿದೆ. ಜೇನುಕುರುಬರಲ್ಲಿ ವಿಭಕ್ತ ಕುಟುಂಬ ವ್ಯವಸ್ಥೆ ಇದ್ದು, ಮೇಲ್ನೋಟಕ್ಕೆ ಅವಿಭಕ್ತ ಕುಟುಂಬ ವ್ಯವಸ್ಥೆಯಂತೆ ಕಾಣುತ್ತದೆ. ತಂದೆ, ತಾಯಿ ಮತ್ತು ಅವಿವಾಹಿತ ಮಕ್ಕಳು ಕುಟುಂಬದ ಅವಿಭಾಜ್ಯ ಅಂಗಗಳಾಗಿರುತ್ತಾರೆ. ಮಕ್ಕಳ ಮದುವೆ ಆದ ತಕ್ಷಣ ಅವರನ್ನು ತಮ್ಮ ಗುಡಿಸಲಿನ ಪಕ್ಕದಲ್ಲಿಯೇ ಬೇರೊಂದು ಗುಡಿಸಲಿನ ನಿರ್ಮಾಣ ಮಾಡಿ ಇರಿಸುತ್ತಾರೆ.

ಇವರು ತಂದೆಯನ್ನು ಅಯ್ಯ ಎಂದೂ, ತಾಯಿಯನ್ನು ಅವ್ವೆ ಎಂದು ಸಂಬೋಧಿಸುತ್ತಾರೆ. ಮಕ್ಕಳನ್ನು ಮಕ್ಕ ಮರಿ ಎಂದು ಹೇಳುತ್ತಾರೆ.

## ೩. ೨. ಜೇನುಕುರುಬರ ಕುಲ/ಬೆಡಗುಗಳು

ಜೇನುಕುರುಬರಲ್ಲಿಯೂ ಇತರ ಬುಡಕಟ್ಟುಗಳಲ್ಲಿರುವಂತೆ ಕುಲ ಅಥವಾ ಬೆಡಗುಗಳಿವೆ. ಈ ಬೆಡಗುಗಳೇ ರಕ್ತಸಂಬಂಧವನ್ನು ನಿರ್ಣಯಿಸುತ್ತವೆ. ಮದುವೆಯಾಗುವ ವ್ಯಕ್ತಿಯು ಸ್ವತಃ ತನ್ನಿಚ್ಛೆಯಂತೆಯೇ ಹೆಣ್ಣನ್ನು ಗುರುತಿಸಿಕೊಳ್ಳುವ ಸ್ವಾತಂತ್ರ್ಯವು ಜೇನುಕುರುಬರಲ್ಲಿದೆಯಾದರೂ ಅವನು ತನ್ನ ಕುಲಾಚಾರ ಪದ್ಧತಿಯನ್ನು ನಿರಾಕರಿಸಿ, ಮದುವೆಯಾಗುವ ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ. ಒಂದೇ ಬೆಡಗುಗಳಲ್ಲಿ ವಿವಾಹ ನಿಷೇಧವಿದೆ. ವಿವಾಹವಾಗುವ ಗಂಡು ಹೆಣ್ಣುಗಳು ಬೇರೆ ಬೇರೆ ಬೆಡಗಿನವರಾಗಿರಬೇಕು. ಜೇನುಕುರುಬರಲ್ಲಿ ಒಟ್ಟು ಹದಿನೆಂಟು ಬೆಡಗುಗಳನ್ನು ಗುರುತಿಸಲಾಗಿದೆ. ತಮ್ಮ ಪುರಾತನರು ಅಥವಾ ತಮ್ಮ ವಂಶದವರ ಮೂಲದವರ ಹೆಸರಿನಿಂದ ಈ ಬೆಡಗುಗಳು ತಮಗೆ ಬಂದಿವೆ ಎಂದು ಜೇನುಕುರುಬರು ಹೇಳುತ್ತಾರೆ. ಜೇನುಕುರುಬರ ಕುಲ/ಬೆಡಗುಗಳು ಈ ಕೆಳಗಿನಂತಿವೆ. ಇವುಗಳನ್ನು ಜೇನುಕುರುರುಬರು ಕುತ್ತಿ ಮನೆತನಗಳೆಂದು ಕರೆಯುತ್ತಾರೆ.

ಅಮ್ಮಾನೆಯವರು
ಕಟ್ಟೆ ಮನೆಯವರು
ಕುಂತೂರು ಒಡೆಯ

ಕೋಟೆಬೀರ

ಕೌಡಲದವರು

ಗಣಗೂರು ಒಡೆಯ

ಗೆಜ್ಜೆಯವರು

ಗೋಣಿಗದ್ದೆ ಒಡೆಯ

ಜಾಡಲವರು

ಬಟ್ಟದ ಒಡತಿ

ಬರಗೂರು ದೊಡ್ಡವರು

ಬಾಣದವರು

ಭೂಮಿಯವರು

ದೊಡ್ಡತೋಡು ಸ್ವಾಮಿ

ನಡುಮನೆ ತಾಯಿ

ಮಾರಿಗುಡಿ ತಾಯಿ

ಲಕ್ಕುಂದ ಒಡೆಯ

ಹುಣಸೆ ಒಡೆಯ

**ಮೇಟ :** ಕುತ್ತಿ ಮನೆತನಕ್ಕೆ ಒಬ್ಬ 'ಮೇಟಿ' ಎಂಬುವವರು ಇರುತ್ತಾರೆ. ಒಂದು ಕುತ್ತಿ ಮನೆತನದಲ್ಲಿ ದೇವರಿಗೆ ಸಂಬಂಧಿಸಿದ ಕೆಲಸ ನಿರ್ವಹಿಸುವವರೇ ಇವರಾಗಿರುತ್ತಾರೆ. ಒಂದು ಕುತ್ತಿಗೆ ಸೇರಿದವರು ಒಂದು ಹಾಡಿಯಲ್ಲಿ ಸಂಖ್ಯಾತ್ಮಕವಾಗಿ ಹೆಚ್ಚಾಗಿದ್ದರೆ, ಅಲ್ಲಿಯ 'ಯಜಮಾನ' ಮತ್ತು 'ಮೇಟಿ' ಎರಡೂ ಸ್ಥಾನವನ್ನೂ ಒಬ್ಬರೇ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಮೇಟಿಯ ಸ್ಥಾನ ವಂಶ ಪಾರಂಪರ್ಯವಾಗಿರುತ್ತದೆ.

ಒಂದು ಕುತ್ತಿಯ ಮನೆತನದಲ್ಲಿ 'ಮೇಟಿ', 'ಕೋಟಿ', 'ಕಂಬ' ಎಂಬ ಸ್ಥಾನಮಾನವಿರುತ್ತದೆ.

'ಮೇಟಿ' ಎಂಬುವವರು ಕುತ್ತಿಯ ಮನೆತನದ ಹಿರಿಯರು ನಿರ್ವಹಿಸುತ್ತಾರೆ. ಒಂದು ವೇಳೆ 'ಮೇಟಿ' ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದರೆ, ಎರಡನೇ ಸ್ಥಾನ 'ಕೋಟಿ'ಯದ್ದು ಕೋಟಿ ಕುತ್ತಿ ಮನೆತನದ ಎರಡನೆಯವರಾಗಿರುತ್ತಾರೆ. ಇವರು ನಿರ್ವಹಿಸಲು ಸಾಧ್ಯವಾಗದಿದ್ದರೆ, ಮೂರನೇ ಸ್ಥಾನ 'ಕಂಬ' ಎಂಬುವವರದ್ದಾಗಿದ್ದು, ಇವರು ಆ ಮನೆತನದ ಸ್ಥಾನದ ಕೆಲಸ ದೇವರ ಕೆಲಸಗಳನ್ನು ನಿರ್ವಹಿಸುತ್ತಾರೆ. ಮೇಟಿ, ಕೋಟಿ, ಕಂಬ ಇವರುಗಳು ಒಂದು ಮನೆಯ ಸ್ವಂತ ಅಣ್ಣ ತಮ್ಮಂದಿರಾಗಬಹುದು. ಇಲ್ಲವೇ ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳಾಗಿರಬಹುದು. ಇವರುಗಳು ಆ ದೇವರ ಮನೆತನದ ಕೆಲಸಗಳನ್ನು ನಿರ್ವಹಿಸುತ್ತಾರೆ.

ಮೇಟಿಂಬ ಸ್ಥಾನದಲ್ಲಿರುವ ಅಣ್ಣ ಅಸಮರ್ಥರಾದರೆ ಅನಾರೋಗ್ಯದಲ್ಲಿದ್ದರೆ, ಮರಣಹೊಂದಿದ್ದರೆ, ಬೇರೆ ಯಾವುದೇ ತೊಂದರೆಗೆ ಒಳಗಾಗಿದ್ದರೂ ಕೂಡ ಎರಡನೆಯವರಾದ 'ಕೋಟೆ' ಆಡಳಿತ ನಡೆಸಬಹುದು. ಇವರೂ ಅಸಮರ್ಥರಾದರೆ 'ಕಂಬ'ದವರು ಆಡಳಿತ ನಡೆಸಲು ಅವಕಾಶವಿರುತ್ತದೆ. ಹೀಗೆ ಒಂದೊಂದು ಕುತ್ತಿ ಮನೆತನದವರು ಕೆಲಸಗಳನ್ನು ಹಂಚಿಕೊಳ್ಳುತ್ತಾರೆ (ಮಾ : ತಾಯಮ್ಮ, ಎಲೆಹುಂಡಿ ಹಾಡಿ).

## ೩. ೩. ಸಾಮಾಜಿಕ ಸಂರಚನೆ

ಜೇನುಕುರುಬ ಬುಡಕಟ್ಟು ಕೇವಲ ಕರ್ನಾಟಕದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲದೆ ತಮಿಳುನಾಡಿನ ನೀಲಗಿರಿ ಪ್ರದೇಶ, ಕೇರಳದ ವೈನಾಡು ಪ್ರದೇಶದಲ್ಲಿ ಕಂಡು ಬರುವ ಬುಡಕಟ್ಟಾಗಿದೆ. ಇವರ ಸಾಮಾಜಿಕ ಅಸ್ಥಿತ್ವಗಳು ಸ್ಥಾಪನೆಗೊಂಡಿರುವುದೇ ಕಾಡಿನೊಳಗೆ. ಕಾಡಿನ ಹೊರತಾದ ಜೀವನವನ್ನು ಜೇನುಕುರುಬರು ಕಲ್ಪಿಸಿಕೊಳ್ಳಲಾರರು. ಆದರೆ ಭಾರತದ ಅರಣ್ಯ ನೀತಿ, ಅಭಯಾರಣ್ಯಗಳು ಮುಂತಾದ ನೀತಿ ನಿಯಮಗಳಿಂದ ಇವರು ಕಾಡಿನಿಂದ ಹೊರದೂಡಲ್ಪಡುತ್ತಿದ್ದಾರೆ. ಹೀಗೆ ಹೊರದೂಡಲ್ಪಟ್ಟ ಜೇನುಕುರುಬರು ಅರಣ್ಯವನ್ನು ಅವಲಂಭಿಸಿದ್ದ ಬದುಕಿನಿಂದ ನಿಧಾನವಾಗಿ ಪರ್ಯಾಯ ಬದುಕಿನ ಕ್ರಮಗಳಿಗೆ ಒಗ್ಗಿಕೊಳ್ಳುತ್ತಿದ್ದಾರೆ. ಕಾಡಿನಿಂದ ಹೊರದೂಡಲ್ಪಟ್ಟ ಜೇನುಕುರುಬರು ಕಾಡಿನಂಚಿಗೆ ತಮ್ಮ ಹಾಡಿಗಳನ್ನು ರಚಿಸಿಕೊಂಡು ಇಂದಿಗೂ ಕಾಡಿನೊಂದಿಗೆ ಪೂರ್ಣವಾಗಿ ಸಂಬಂಧಗಳನ್ನು ಕಳಚಿಕೊಳ್ಳದೆ ಕಾಡಿನೊಂದಿಗಿರಲು ಹೆಣಗಾಡುತ್ತಿದ್ದಾರೆ. ಹೀಗೆ ಕಾಡಿನಿಂದ ಹೊರದೂಡಲ್ಪಟ್ಟ ಜೇನುಕುರುಬ ಕುಟುಂಬಗಳು ಅನಿವಾರ್ಯವಾಗಿ ಯರವ, ಬೆಟ್ಟಕುರುಬ, ಇನ್ನಿತರೆ ಹತ್ತು ಹಲವು ಸಮುದಾಯಗಳು ನೆಲೆನಿಂತ ಪ್ರದೇಶದ ಹತ್ತಿರದಲ್ಲಿಯೇ ತಮ್ಮ ಹಾಡಿಗಳನ್ನು ರಚಿಸಿಕೊಳ್ಳುವ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ರೀತಿ ಇತರ ಸಮುದಾಯಗಳ ಹತ್ತಿರದಲ್ಲಿ ಯಾವ ಯಾವ ಹಾಡಿಗಳಿವೆ, ಯಾವ ಸಮುದಾಯ, ಜಾತಿಗಳೊಂದಿಗೆ ನೆಲೆ ನಿಲ್ಲಲಾಗಿದೆ ಎಂಬುದನ್ನು ಈ ಕೆಳಗೆ ನೀಡಲಾಗಿದೆ.

### ೩. ೩. ೧. ಹಾಡಿಯ ಯಜಮಾನ

ಯಜಮಾನರ ಪಾತ್ರವನ್ನು ಜೇನುಕುರುಬರು ಅವರವರ ಕೆಲಸಕಾರ್ಯಗಳಿಗೆ ಅನುಗುಣವಾಗಿ ಹಂಚಿಕೊಂಡಿದ್ದಾರೆ.

**ಯಜಮಾನ** : ಜೇನುಕುರುಬರ ಪ್ರತಿಯೊಂದು ಹಾಡಿಗೂ ಯಜಮಾನನೊಬ್ಬನಿರುತ್ತಾನೆ. ಜೇನುಕುರುಬರ ಸಾಮಾಜಿಕ ಜೀವನದಲ್ಲಿ ಹಾಡಿಯ ಯಜಮಾನನೇ ಮುಖ್ಯನಾಗಿದ್ದು ಅವನ ಅಪ್ಪಣೆಯಿರದೆ ಹಾಡಿಯೊಳಗೆ ಯಾವ ಕಾರ್ಯಗಳೂ ಜರುಗುವುದಿಲ್ಲ. ಪ್ರತಿಯೊಂದು ಹಾಡಿಗೂ ಒಬ್ಬ ಯಜಮಾನನಿರುತ್ತಾನೆ. ಕೆಲವು ಹಾಡಿಗಳಲ್ಲಿ ದೊಡ್ಡ ಯಜಮಾನ ಮತ್ತು ಚಿಕ್ಕ

ಯಜಮಾನರುಗಳಿರುವುದನ್ನು ಕಾಣಬಹುದಾಗಿದೆ. ದೊಡ್ಡ ಯಜಮಾನ ಅನಿವಾರ್ಯ ಕಾರಣದಿಂದ ಅನಾರೋಗ್ಯದಿಂದ ಪಂಚಾಯತಿಗೆ ಬರಲು ಸಾಧ್ಯವಾಗದಿದ್ದರೆ ಚಿಕ್ಕ ಯಜಮಾನ ದೊಡ್ಡ ಯಜಮಾನ ನಿರ್ವಹಿಸುವ ಕಾರ್ಯ ಕೈಗೊಳ್ಳುತ್ತಾನೆ.

**೩. ೩. ೨. ತಮ್ಮಡಿ**

ಕುತ್ತಿ ಮನೆತನಗಳ ದೈವಗಳಿಗೆ ಸಂಬಂಧಿಸಿದಂತೆ ಪೂಜಾ ಕೈಂಕರ್ಯಗಳು, ದೈವಗಳ ಆರಾಧನೆ, ಪೂಜಾ ವಿಧಾನಗಳನ್ನು ನೆರವೇರಿಸುವುದು. ಆ ಕುತ್ತಿಯ ದೇವರ ಕಾರ್ಯ ಹಬ್ಬ, ಜಾತ್ರೆ, ಮಾಡಬೇಕಾದ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಳ್ಳುವುದು. ಜವಬ್ದಾರಿಯಿಂದ ಮನೆತನದ ಇತರರನ್ನು ಹಬ್ಬ ಜಾತ್ರೆಗಳಲ್ಲಿ ಇತರೆ ಕೆಲಸದಲ್ಲಿ ಕೆಲಸಗಳ ಹಂಚಿಕೆ ಮಾಡಿ ಅದರ ಮೇಲುಸ್ತುವಾರಿ ನೋಡಿಕೊಳ್ಳುವುದು. ತಮ್ಮಡಿಯ ಕರ್ತವ್ಯವಾಗಿರುತ್ತದೆ. ತಮ್ಮಡಿಯ ಅಧಿಕಾರವು ವಂಶಪಾರಂಪರ್ಯವಾಗಿ ಬಂದಿರುತ್ತದೆ.

**೩. ೩. ೩. ಮಣ್ಣಿನವರು**

ಮಣ್ಣಿನವರ ಕರ್ತವ್ಯ ಕೂಡ ವಂಶಪಾರಂಪರ್ಯವಾಗಿ ಬಂದಿರುತ್ತದೆ. ಹಾಡಿಯಲ್ಲಿನ ಆಯಾ ಕುತ್ತಿ ಮನೆತನದಲ್ಲಿ ಸಾವು, ಸಂಸ್ಕಾರ, ಸೂತಕ ಸಂಭ್ರಮದ ಆಚರಣೆಯನ್ನು ನೆರವೇರಿಸುವ ಜವಬ್ದಾರಿ ಮಣ್ಣಿನವರದಾಗಿರುತ್ತದೆ. ಇವರ ನೇತೃತ್ವವಿಲ್ಲದೇ ಯಾವ ಕೆಲಸವೂ ಜರಗುವುದಿಲ್ಲ. ಆ ಮಣ್ಣಿನ 'ಜಮ್ಮ'ದವರು ಇವರೇ ಆಗಿರುವುದರಿಂದ ಮಣ್ಣಿನವರ ಕರ್ತವ್ಯ ಬಹಳ ಪ್ರಮುಖವಾದುದು.

**೩. ೩. ೩. ಕೋಲುಕಾರ**

ಹಾಡಿಯ ಯಜಮಾನ ತಮ್ಮಡಿ ಮಣ್ಣಿನವರು ಹೇಳುವ ಕೆಲಸ ಕಾರ್ಯಗಳನ್ನು ಮುಂದೆ ನಿಂತು ಕೆಲಸ ಮಾಡಿಸುವುದೇ ಕೋಲುಕಾರನ ಕರ್ತವ್ಯ. 'ಭೂಮಿಯವರು' ಕುಲದ ಉಪಕುಲವಾದ'ಕಣಿವೆಗೆರೆ ಹದ್ದು ಕುತ್ತಿ' ಮನೆತನದವರು. ಕೋಲುಕಾರನ ಕೆಲಸ ನಿರ್ವಹಿಸುತ್ತಾರೆ. ಒಂದು ವೇಳೆ ಎಲ್ಲಾ ಹಾಡಿಯಲ್ಲೂ ಇವರು ಇರುವುದಿಲ್ಲ ಬೇರೆ ಕಡೆಯಿಂದ ಈ ಜವಬ್ದಾರಿ ಹೊತ್ತವರನ್ನು ಕರೆತಂದು ಕೆಲಸ ನಿರ್ವಹಿಸಲಾಗುತ್ತದೆ. ಇದೂ ಕೂಡ ವಂಶಪಾರಂಪರ್ಯವಾಗಿ ಬಂದ ವೃತ್ತಿಯಾಗಿರುತ್ತದೆ.

**೩. ೩. ೩. ತಿರುಳು ಗುಂದದವರು**

ಮಣ್ಣಿನವರು ಹೇಳುವ ಕೆಲಸ ಕಾರ್ಯಗಳ ಆಚರಣೆ ವಿಧಿ ವಿಧಾನಗಳನ್ನು ಅಕ್ಕ ಪಕ್ಕದ ಹಾಡಿಗಳಿಗೆ ತೆರಳಿ ಪ್ರಚಾರಕಾರ್ಯದ ಕರ್ತವ್ಯ ನಿರ್ವಹಿಸುವವರೇ ತಿರುಳುಗುಂದ ಮನೆತನದವರು ಆದ್ದರಿಂದ ಇವರಿಗೆ ಈ ಹೆಸರಿನಿಂದಲೇ ಸಂಬೋಧಿಸಲಾಗುತ್ತದೆ. ಇವರ ಕೆಲಸವೂ ವಂಶಪಾರಂಪರ್ಯವಾಗಿ ಬಂದಿರುತ್ತದೆ.

ಈ ರೀತಿಯಾಗಿ ಯಜಮಾನರುಗಳು ಸಮುದಾಯದಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಆಗಲೀ, ಶೋಕ ಸಂದರ್ಭದಲ್ಲಿಯೇ ಆಗಲೀ, ಅಲ್ಲಿ ನೇರವೇರಬೇಕಾದ ಕೆಲಸಗಳನ್ನು ಜವಬ್ದಾರಿಯಿಂದ ಕೆಲಸವನ್ನು ಮುಗಿಸುತ್ತಾರೆ. ಜೇನುಕುರುಬರು ಈ ರೀತಿಯಾಗಿ ಯಜಮಾನರುಗಳನ್ನು ನೇಮಿಸಿಕೊಂಡು ಅವರ ಮಾರ್ಗದರ್ಶನದಂತೆ ನಡೆಯುತ್ತಾರೆ. ಜೇನುಕುರುಬರಲ್ಲಿ ಹದಿನೆಂಟು ಕುತ್ತಿ ಮನೆತನಗಳು ಪ್ರಮುಖವಾದವು. ಈ ಹದಿನೆಂಟರಲ್ಲಿ ಒಟ್ಟು ನೂರೊಂದು ಮನೆತನಗಳಿವೆ, ಎಂದು ಕ್ಷೇತ್ರಕಾರ್ಯದಲ್ಲಿ ತಿಳಿದು ಬಂದಿದೆ.

ಜಾತಿ ಪಂಚಾಯಿತಿಯನ್ನು ವರ್ಷಕ್ಕೆ ಒಮ್ಮೆ ಸೇರುತ್ತಾರೆ. ಈ ಸಂದರ್ಭದಲ್ಲಿ ಹಾಡಿಯಲ್ಲಿ ಒಂದು ವರ್ಷದಲ್ಲಿ ಮಾಡುವ ಹಬ್ಬ, ಜಾತ್ರೆಗಳ ಬಗೆಗೆ, ಪ್ರತಿಯೊಂದು ಗುಡಿಸಲಿನ ಸ್ಥಿತಿಗತಿಗಳ ಬಗೆಗೆ ವಿಚಾರಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲಾಗುತ್ತದೆ. ಇನ್ನು ಹಾಡಿಯಲ್ಲಿ ಜಗಳವೇನಾದರು ಆದರೆ ಈ ಜಾತಿ ಪಂಚಾಯಿತಿಯನ್ನು ಮತ್ತೆ ಸೇರಿ ಅಲ್ಲಿಯೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುತ್ತದೆ.



**ದೇವರ ಗುಡ್ಡ**

ಜೇನುಕುರುಬರಲ್ಲಿ ಯಜಮಾನನ ನಂತರದ ಸ್ಥಾನವು ಗುಡ್ಡನಿಗೆ ಇರುತ್ತದೆ. ಗುಡ್ಡನಾಗುವವನು ದೇವರ ವಕ್ತಾರನಾಗಿರುತ್ತಾನೆ. ದೇವರಗುಡ್ಡನು ದೈವದ ಪ್ರತಿನಿಧಿ. "ಗುಡ್ಡರನ್ನು ಹಾಡಿಯ ಗುಡ್ಡ, ನೆರಳು ಕರೆಯೋ ಗುಡ್ಡ, ಜೇಟಿ ಒಡೆಯೋ ಗುಡ್ಡ, ಎಂದು ವಿಭಾಗಿಸಲಾಗುತ್ತದೆ" (ಮಾ : ನಾರಾಯಣ ಕಿಕ್ಕೇರಿ: ೨೦೧೧: ೧೮೪).

ಜೇನುಕುರುಬ ಪೂರ್ವಜ ಆದಿ ಅಯ್ಯ ಕನಸಿನೊಳಗೆ ಬಂದು ಗುಡ್ಡನಾಗು ಎಂದು ತಿಳಿಸಿದವರು ಮಾತ್ರ ಗುಡ್ಡರಾಗುತ್ತಾರೆ. ಹೀಗೆ ಕನಸಿನಲ್ಲಿ ಹೇಳಿಹೋದ ಅಯ್ಯನು ಒಂದು ದಿನ ಆ ವ್ಯಕ್ತಿಯ ಮೈಯೊಳಗೆ ಆವಾಹನೆಗೊಳ್ಳುತ್ತಾನೆ. ಆವಾಹನೆಗೊಂಡ ಆದಿ ಅಯ್ಯ ಗುಡ್ಡನಾಗುವವನು ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಿಳಿಸುತ್ತಾನೆ. ಇದಾದ ನಂತರ ಕುಟುಂಬದ ಹಿರಿಯರ ಆತ್ಮ ಬಂದು ಗುಡ್ಡನಾಗುವವನ ದೇಹ ಸೇರುತ್ತದೆ. ಹೀಗೆ ಹಿರಿಯರ ಆತ್ಮ ಸೇರಿದವರ ವರ್ತನೆ ಅಸಹಜವಾಗಿ ಜನರಿಗೆ ತೋರುತ್ತದೆ. ಹಾಡಿಯ ಜನ ಅಂಥವರನ್ನು ನದಿಗೆ ಇಲ್ಲವೆ ಹಳ್ಳಕ್ಕೆ ಕರೆದುಕೊಂಡುಹೋಗಿ ಸ್ನಾನ ಮಾಡಿಸುತ್ತಾರೆ. ಮೈದುಂಬಿದ ವ್ಯಕ್ತಿ ಎರಡು ಮೂರು ದಿನವೂ ಅಸಹಜವಾಗಿ ಯಾವುದೋ ಬೇರೆ ಪ್ರಪಂಚದಲ್ಲಿರುವಂತೆ ವರ್ತಿಸುತ್ತಿರುತ್ತಾನೆ. ಹೀಗೆ ಸ್ನಾನ ಮಾಡಿಸಿದ ವ್ಯಕ್ತಿಯನ್ನು ಹಾಡಿಯ ಹಿರಿಯ ಗುಡ್ಡನ ಬಳಿ ಬಿಡಲಾಗುತ್ತದೆ. ಹರಯಕ್ಕೆ ಕಾಲಿರಿಸಿದ ನಂತರವೇ ಗುಡ್ಡನಾಗುವುದು. ಇಲ್ಲಿ ಗುಡ್ಡನಾಗಲು ಹೆಣ್ಣು ಗಂಡೆಂಬ ಬೇಧವಿಲ್ಲವಾದರೂ ಗುಡ್ಡರ ಪ್ರಮಾಣದಲ್ಲಿ ಪುರುಷರದೇ ಮೇಲುಗೈ ಎಂದರೆ ತಪ್ಪಾಗಲಾರದು. ಗುಡ್ಡರು ಪಡೆದ ಶಕ್ತಿಯ ಮೇಲೆ ಅವರನ್ನು

ವಿಂಗಡಿಸುತ್ತಾರೆ. ಗುಡ್ಡರಾಗುವವರು ಮದುವೆಯಾಗಬಹುದು ಇಲ್ಲವೆ ಸನ್ಯಾಸದ ಜೀವನವನ್ನೂ ನಡೆಸಬಹುದು. ಕ್ಷೇತ್ರಕಾರ್ಯದಲ್ಲಿ ಮದುವೆಯಾದವರೇ ಹೆಚ್ಚು ಕಂಡುಬಂದರು.

**ಹಾಡಿ ಗುಡ್ಡ**

ಹಾಡಿಯೊಳಗೆ ಅಪರಾಧಗಳನ್ನು ಮಾಡುವವನಿಗೆ ಹಾಗೂ ಹಾಡಿಗೆ ಅಪಮಾನ ಮಾಡುವವರಿಗೆ ಶಿಕ್ಷೆ ವಿಧಿಸುವ ವ್ಯಕ್ತಿ ಇವನಾಗಿರುತ್ತಾನೆ. ಹಾಗೆಯೇ ಮಾಂತ್ರಿಕ ವೈದ್ಯನೂ ಇವನಾಗಿದ್ದು ಸಣ್ಣಪುಟ್ಟ ಖಾಯಿಲೆಗಳನ್ನು ವಾಸಿ ಮಾಡುವ ಜ್ಞಾನವನ್ನು ಹೊಂದಿರುತ್ತಾನೆ. ಹಾಡಿಯ ಯಜಮಾನನ ನಂತರದ ಸ್ಥಾನ ಇವನದೇ ಆಗಿರುತ್ತದೆ.

**ನೆರಳು ಕರೆಯೋ ಗುಡ್ಡ**

ಹಾಡಿಯಲ್ಲಿ ಸತ್ತ ವ್ಯಕ್ತಿಯ ಹಾಗೂ ಅವರ ಕುಟುಂಬದ ಹಿರಿಯರ ಆತ್ಮ (ನೆರಳು) ಕರೆಯುವ ಜ್ಞಾನ ಇವರಿಗೆ ಇರುತ್ತದೆ. ಹಿರಿಯರ ಆತ್ಮ ಕರೆದು ಅವರ ಆಸೆ ಪೂರೈಸಿ ಆದಿ ಅಯ್ಯನ ಬಳಿ ಆ ಆತ್ಮಗಳನ್ನು ಕಳುಹಿಸುವ ಶಕ್ತಿ ಇವನದಾಗಿರುತ್ತದೆ.

**ಜೇಟೆ ಒಡೆಯೋ ಗುಡ್ಡ**

ಜೇನುಕುರುಬರಲ್ಲಿ ಯಾರಾದರು ಒಬ್ಬರಿಗೊಬ್ಬರು ಆಗದವರು ಮಾಟ ಮಾಡಿಸಿದ್ದರೆ ಅಂಥವರ ಮಾಟವನ್ನು ತೆಗೆದು ಹಾಕುವುದು, ಖಾಯಿಲೆಗಳಿಗೆ ಔಷಧಿ ಮಾಡುವುದು, ಗಾಳಿ ಬಂದು (ದೆವ್ವ) ಸೇರಿದರೆ ಗಾಳಿ ಓಡಿಸುವ ಕೆಲಸವನ್ನು ಇವರು ಮಾಡುತ್ತಾರೆ.

ಈ ಎಲ್ಲಾ ಗುಡ್ಡರು ಬೇರೆ ಬೇರೆ ಶ್ರೇಣಿಯನ್ನು ಹೊಂದಿದವರಾಗಿರುತ್ತಾರೆ. ಈ ರೀತಿಯ ವಿವಿಧ ಶ್ರೇಣಿಯ ಗುಡ್ಡರು ಹಾಡಿಯೊಂದರಲ್ಲಿ ಇರಬಹುದು ಅಥವಾ ಇಲ್ಲದಿರಬಹುದು. ಇಲ್ಲದಿರಬಹುದೆಂದರೆ ಒಮ್ಮೊಮ್ಮೆ ಈ ಎಲ್ಲಾ ಶ್ರೇಣಿಯ ಗುಡ್ಡರ ಕ್ರಿಯೆಯನ್ನು ಹಾಡಿಯ ಗುಡ್ಡ ಅಥವಾ ನೆರಳು ಕರೆಯೋ ಗುಡ್ಡನೇ ಮಾಡುವುದುಂಟು. ಆದರೆ ಅಲ್ಲಿ ಈ ರೀತಿಯ ಶ್ರೇಣಿಯನ್ನು ಹೊಂದಿದ ಗುಡ್ಡರಿರಬಾರದು. ಹಾಗಿದ್ದಾಗ ಮಾತ್ರ ಅವರು ಮೇಲೆ ತಿಳಿಸಿದ ಎಲ್ಲ ಕ್ರಿಯೆಗಳನ್ನು ಮಾಡಬಹುದು.

ಇವರ ನಂತರ ಹಾಡಿಯಲ್ಲಿ ಯಾರು ವಯಸ್ಸಿನಲ್ಲಿ ಹಿರಿಯರಿರುತ್ತಾರೋ ಅವರು ಮೂರನೇ ಸ್ಥಾನದಲ್ಲಿರುತ್ತಾರೆ. ಅವರು ಕೇವಲ ಗಂಡಾಗಿರಬೇಕೆಂಬ ನಿಯಮವಿಲ್ಲ. ಯಾರಾದರೂ ಸರಿಯೆ. ಜೇನುಕುರುಬರಲ್ಲಿ ಎಲ್ಲ ಕ್ರಿಯಾವಿಧಿಗಳಲ್ಲಿ ಪುರುಷನೇ ಮುಂದಿರುತ್ತಾನಾದರೂ, ಅವರು ಹೆಣ್ಣನ್ನು ನಿರ್ಲಕ್ಷಿಸುವುದಿಲ್ಲ. ಪುರುಷ ಮಾಡುವ ಎಲ್ಲಾ ಕ್ರಿಯೆಗಳನ್ನು ಹೆಣ್ಣೂ ಮಾಡಬಹುದು. ಈ ವಿಚಾರದಲ್ಲಿ ಜೇನುಕುರುಬರು ಸಮನ್ವಯತೆ ಕಾಪಾಡಿಕೊಂಡಿದ್ದಾರೆ (ಮಾ : ರಾಮಿ, ದೊಡ್ಡ ರೇಷ್ಮೆ ಹಾಡಿ).

## ೩. ೪. ವಿವಾಹ

ಜೇನುಕುರುಬರಲ್ಲಿ ಬಹಳ ಹಿಂದೆ ವಿವಾಹ ಸಂಪ್ರದಾಯ ಸರಳ ರೀತಿಯಲ್ಲಿತ್ತು. ಒಂದೇ ಕುಲಗಳಲ್ಲಿ ವಿವಾಹ ನಿಷೇಧವಿದ್ದು, ವಯಸ್ಸಿಗೆ ಬಂದ ಗಂಡು ಹೆಣ್ಣು ಕಾಡಿನೊಳಗೆ ಹೋಗಿ ಒಂದು ರಾತ್ರಿ ಕಳೆದು ಹಾಡಿಗೆ ಹಿಂದಿರುಗಿದರೆ ಹಾಡಿಯವರೆಲ್ಲಾ ಅವರನ್ನು 'ಕಟ್ಟಿಕೊಂಡರು' ಎಂದು ಕರೆದು ಕುಲ ಪಂಚಾಯತಿ ಸೇರಿ ಅವರ ಗಂಡ ಹೆಂಡತಿ ಸಂಬಂಧವನ್ನು ಒಪ್ಪಿಕೊಳ್ಳುತ್ತಿದ್ದರು. ಆದರೆ ಈ ರೀತಿಯ ವಿವಾಹ ಸಂಪ್ರದಾಯ ಜೇನುಕುರುಬರಲ್ಲಿ ಇಂದು ವಿರಳವಾಗಿದೆ ಎಂದು ಕ್ಷೇತ್ರಾಧ್ಯಯನದಲ್ಲಿ ತಿಳಿದು ಬಂದಿದೆ.

ಸೀಗೂರು ಹಾಡಿಯ ಪುಟ್ಟಮ್ಮ ಅವರು ಹೇಳುವಂತೆ, ಕುಲ/ಕುತ್ತಿಯ ಮನೆಯ ಸ್ಥಾನವನ್ನು ನೋಡಿ ಹೆಣ್ಣನ್ನು ನೋಡುವ ಸಂಪ್ರದಾಯವನ್ನು ರೂಢಿಸಿಕೊಂಡಿರುತ್ತಾರೆ. ಹೆಣ್ಣು ಅಥವಾ ಗಂಡು ನೋಡಲು ಹೊರಡುವಾಗ ಕೇವಲ ಆ ಕುಟುಂಬದ ಸದಸ್ಯರು ಮೊದಲು ಹೋಗಿ ಬರುವುದು ಆನಂತರ ಎಲ್ಲರೂ ಹೋಗಿ ನೋಡಿಕೊಂಡು ಬಂದನಂತರ ಎಲ್ಲರೂ ಮಾತನಾಡಿ ಒಪ್ಪಿಗೆ ಸೂಚಿಸುವುದು. ಹುಡುಗಿ ಒಪ್ಪಿಗೆಯಾದ ನಂತರ ಹೂ ಮುಡಿಸುವ ಶಾಸ್ತ್ರ ಮಾಡುತ್ತಾರೆ. ಇದನ್ನು ಜೇನುಕುರುಬರು 'ಹೂ-ಸೋಡುವ' ಶಾಸ್ತ್ರ ಎಂದು ಕರೆಯುತ್ತಾರೆ. ಹೆಣ್ಣಿನ ಮನೆಯಲ್ಲಿಯೆ ಮದುವೆ ಶಾಸ್ತ್ರಗಳು ಸಾಮಾನ್ಯವಾಗಿ ನಡೆಯುತ್ತವೆ. ಮದುವೆ ಎನ್ನುವುದಕ್ಕೆ 'ಕೂಡೋದು' ಎಂಬ ಪದವನ್ನು ಜೇನು ಕುರುಬರು ಬಳಸುತ್ತಾರೆ.

ಮದುವೆ ಕಾರ್ಯದ ಪ್ರಾರಂಭದಲ್ಲಿ ಹಾಡಿಯ ಯಜಮಾನರಿಂದ ಹಾಲಿನಕಂಬ (ಜ್ಞಾನತಿ ಮರ) ವನ್ನು ಚಪ್ಪರದ ಮಧ್ಯದಲ್ಲಿ ನಡೆಸುವುದರ ಮೂಲಕ ಕುಲ ಪಂಚಾಯತಿಯ ಒಪ್ಪಿಗೆಯನ್ನು ಪಡೆಯುತ್ತಾರೆ. ವಿವಾಹದಲ್ಲಿ ೧೨ ಕಂಬಗಳನ್ನು ೧೨ ಗುಂಬಗಳ ಮೇಲೆ ನೆಟ್ಟು ಚಪ್ಪರ ಹಾಕುತ್ತಾರೆ. 'ಗುಂಬ' ಎಂದರೆ ಮಣ್ಣಿನ ಗುಡ್ಡೆ ಎಂದರ್ಥ. ಅಂದರೆ ೧೨ ಕಂಬದ ಬುಡದಲ್ಲಿ ಮಣ್ಣಿನ ಗುಡ್ಡೆಯನ್ನು ಮಾಡಿ ಪ್ರತಿಕಂಬದ ಬುಡಕ್ಕೂ ದೀಪವನ್ನು ಹಚ್ಚಿ ಅರಿಶಿಣ, ಕುಂಕುಮ, ಹೂವು ಹಣ್ಣಿನಿಂದ ಪೂಜೆ ಸಲ್ಲಿಸುತ್ತಾರೆ. ಆಮೇಲೆ ಮರದ ಹಸಿರು ಎಲೆಗಳನ್ನು ಚಪ್ಪರಕ್ಕೆ ಬಳಸಿ ಮದುವೆ ಸಪ್ಪರ (ಚಪ್ಪರ) ತಯಾರಿಸುತ್ತಾರೆ. ಕಳಸ ಪೂಜೆ ಮಾಡುತ್ತಾರೆ. ಚಪ್ಪರಕ್ಕಾಗಿ ಮಾವಿನ ಸೊಪ್ಪು ಮತ್ತು ಅರಳಿ ಸೊಪ್ಪುಗಳನ್ನು ತಪ್ಪದೇ ಹಾಕುವುದು ಹಾಗೂ ಕಂಬಗಳಿಗೆ ಮಾವಿನ ಸೊಪ್ಪಿನ ಕುಂಬ ಮತ್ತು ಬಿದಿರಿನ ಪಾರಿನಿಂದ ಕಮಾನುಗಳನ್ನು ಮಾಡುತ್ತಾರೆ. ನಂತರ ಗಂಡು ಹೆಣ್ಣಿಗೆ ಅರಿಶಿಣ ನೀರಿನ ಸ್ನಾನ ಮಾಡಿಸಿ ಪ್ರತ್ಯೇಕ ಗುಡಿಸಲುಗಳನ್ನು ನಿರ್ಮಿಸಿಕೊಡುತ್ತಾರೆ. ಮದುವೆ ಗಂಡಿಗೆ ಬಿಳಿ ಪಂಚೆ. ಅಂಗಿ. ಕೈಗೆ ಅರಿಶಿಣದ ಕಂಕಣವನ್ನು. ತಲೆಗೆ ಬಿಳಿಯ ಪೇಟವನ್ನು ಧರಿಸಿ ಅಲಂಕರಿಸಿರುತ್ತಾರೆ. ಆನಂತರ ಹಸೆಮಣೆ ಇಲ್ಲದ ಸಂದರ್ಭದಲ್ಲಿ ಮಣ್ಣನ್ನು ಎತ್ತರಕ್ಕೆ ಏರಿಸಿ ದಿಬ್ಬ ಮಾಡಿ ಅಲ್ಲಿ ಗಂಡು ಹೆಣ್ಣನ್ನು ಕೂರಿಸುತ್ತಾರೆ. ಮದುವೆಯ ಗಂಡು ಹೆಣ್ಣು ಮೊದಲು ಹಾಡಿಯ ಯಜಮಾನ ಮತ್ತು ಅವನ

ಹೆಂಡತಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಗಂಡು ಹೆಣ್ಣಿನ ತಂದೆ ತಾಯಿ ಅಕ್ಷತೆ ಅಕ್ಕಿಯನ್ನು ವಧು ವರರ ಮಂಡಿಗೆ ಮುಟ್ಟಿಸಿ ತಲೆಗೆ ಹಾಕುವರು. ನಂತರ ಅವರಿಂದ ಆಲದ ಮರ ಹಾಗೂ ಚಪ್ಪರದ ೧೨ ಕಂಬಗಳಿಗೆ ಪೂಜೆ ಮಾಡಿಸುತ್ತಾರೆ. ಗಂಡು ಹೆಣ್ಣಿಗೆ ತಾಳಿ ಕಟ್ಟಿಸುತ್ತಾರೆ.

### ೩. ೪. ೧. ಪ್ರಸ್ತ ಆಚರಣೆ

ಪ್ರಸ್ತದ ಆಚರಣೆ ಹೆಚ್ಚು ಕಡಿಮೆ ಪ್ರತ್ಯೇಕವಾಗಿ ಆಚರಿಸುವುದಿಲ್ಲ. ವಿವಾಹ ವಾಗುವುದೇ ಗಂಡು, ಹೆಣ್ಣು ಸೇರಿ ಕಾಡಿಗೆ ಹೋಗಿ ಒಂದು ಎರಡು ರಾತ್ರಿ ಜೊತೆಯಲ್ಲಿ ಕಳೆದು ಬಂದ ನಂತರ ಆದ್ದರಿಂದ ಪ್ರತ್ಯೇಕ ಆಚರಣೆ ಇಲ್ಲ.

### ೩. ೪. ೨. ಅಂತರ್ಜಾತಿ ವಿವಾಹ

ಇತ್ತೀಚೆಗೆ ಅಂತರ್ಜಾತಿ ವಿವಾಹದ ಸಂಖ್ಯೆ ಹೆಚ್ಚುತ್ತಿದೆ. ಜೇನುಕುರುಬ ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳು ಯರವ, ಕಾಡು ಕುರುಬರ ಹೆಣ್ಣು ಅಥವಾ ಗಂಡು ಮಕ್ಕಳನ್ನು ಮೆಚ್ಚಿ ವಿವಾಹವಾಗಿರುವ ಉದಾಹರಣೆ ಇತ್ತೀಚೆಗೆ ಹೆಚ್ಚುತ್ತಿದೆ. ವಿದ್ಯೆ ಕಲಿತ ಮಕ್ಕಳು ಶಾಲೆಯಲ್ಲಿ ಸ್ನೇಹಿತರಾಗಿ ಪ್ರೀತಿಸಿ ವಿವಾಹವಾಗಿರುವುದು ಹೆಚ್ಚಾಗಿ ಬೆಳಕಿಗೆ ಬಂದಿದೆ. ಅದನ್ನು ಹಿರಿಯರು ಕೂಡ ಸಮ್ಮತಿಸಿ ಅವರ ವೈವಾಹಿಕ ಜೀವನ ಸುಖಕರವಾಗಿರಲೆಂದು ಆಶೀರ್ವದಿಸುತ್ತಿದ್ದಾರೆ.

### ೩. ೪. ೩. ವಿಧವಾ ವಿವಾಹ

ಇವರಲ್ಲಿ ವಿವಾಹ ವಿಚ್ಛೇದನ ಮತ್ತು ಮರುಮದುವೆಗೆ ಮುಕ್ತ ಅವಕಾಶವಿದೆ. ವಿಧವೆ ಅಥವಾ ವಿಧುರರ ಇಚ್ಛೆಗನುಸಾರವಾಗಿ 'ಕೂಡಾವಳಿ" ನಡೆಯುತ್ತದೆ. ಆ ಸಮಯದಲ್ಲಿ ಯಾವುದೇ ಸಂಪ್ರದಾಯವಿಲ್ಲ. ಗಂಡ ಸತ್ತ ಹೆಣ್ಣುಗಳು ಹಾಡಿಯಲ್ಲಿ ಸರ್ವೆ ಸಾಮಾನ್ಯವಾಗಿ ಕಂಡು ಬರುತ್ತಾರೆ. ಜೇನುಕುರುಬರಲ್ಲಿ ಈ ಹಿಂದೆ ೧೨ ರಿಂದ ೧೫ ವರ್ಷದೊಳಗೆ ಹೆಣ್ಣು ಮಕ್ಕಳಿಗೆ ವಿವಾಹವನ್ನು ಮಾಡುತ್ತಿದ್ದರು. ಈಗ ೧೬ ರಿಂದ ೧೮ ವರ್ಷಕ್ಕೆ ವಿವಾಹ ಮಾಡುತ್ತಾರೆ. ಕೆಲವು ಗಂಡಸರು ಕುಡಿತದ ಚಟಕ್ಕೆ ಬಿದ್ದು ಬೇಗ ಸಾವನ್ನಪ್ಪುತ್ತಾರೆ. ಅಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳು ೨೦ ರಿಂದ ೨೫ ವರ್ಷಕ್ಕೆ ವಿಧವೆಯರಾಗುತ್ತಾರೆ. ಕೆಲವು ಹೆಣ್ಣು ಮಕ್ಕಳು ಮತ್ತೆ ಹಾಡಿಯಲ್ಲಿ ಇನ್ನೊಬ್ಬನನ್ನು ಮೆಚ್ಚಿ ಮರು ವಿವಾಹವಾಗಬಹುದು ಅದನ್ನು 'ಕೂಡಿ ಕೊಳ್ಳುವುದು' ಎನ್ನುತ್ತಾರೆ. ಕೆಲವರು ಮರು ವಿವಾಹವಾಗುವುದಿಲ್ಲ. ಗಂಡನ ಮನೆಯಲ್ಲಿಯೇ ಕಾಲ ಕಳೆಯುತ್ತಾರೆ. ಮಕ್ಕಳಿದ್ದರೆ ವಿಧವೆ ತಾಯಿಯ ಆರೈಕೆ ಮಾಡುತ್ತಾರೆ. ಮಕ್ಕಳಿಲ್ಲದ ವಿಧವೆಯರೂ ಇರುತ್ತಾರೆ. ಅಂದರೆ, ಮದುವೆಯಾದ ಒಂದು ವರ್ಷದೊಳಗೆ ಗಂಡ ಸತ್ತು ವಿಧವೆಯಯಾಗಿರುವ ಉದಾಹರಣೆಯೂ ಇವೆ. ಅಂತಹ ಹೆಣ್ಣು ಮಕ್ಕಳು

ಗಂಡನ ಅಣ್ಣ ತಮ್ಮಂದಿರ ಮಕ್ಕಳ ಜೊತೆ ಅಥವಾ ತವರು ಮನೆಯಲ್ಲಿ ಆಕೆಯ ಅಣ್ಣ ತಮ್ಮಂದಿರ ಮಕ್ಕಳ ಜೊತೆ ಮುಂದಿನ ಜೀವನವನ್ನು ಕಳೆಯುತ್ತಾರೆ.

ಶುಭ ಸಮಾರಂಭಗಳಲ್ಲಿ ಇವರಿಂದ ಶಾಸ್ತ್ರ ಮಾಡಿಸುವುದಿಲ್ಲ. ಒಂದು ವೇಳೆ ಆಕೆಗೆ ಮಕ್ಕಳಿದ್ದರೆ ಆಕೆಯ ಮಕ್ಕಳ ವಿವಾಹದಲ್ಲಿ ತಂದೆ ತಾಯಿಯ ಸ್ಥಾನದಲ್ಲಿ ವಿಧವೆಯ ಗಂಡನ ಅಣ್ಣ, ಅಣ್ಣನ ಹೆಂಡತಿ ನಿಂತು ಶಾಸ್ತ್ರಗಳನ್ನು ಮಾಡಬೇಕಾಗುತ್ತದೆ. ಸ್ವಂತ ಅಣ್ಣನಿಲ್ಲದಿದ್ದರೆ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು, ಸೊಸೆಯಂದಿರು ಶಾಸ್ತ್ರವನ್ನು ಮಾಡಬೇಕಾಗುತ್ತದೆ.

### ೩. ೪. ೪. ಬಹುಪತ್ನಿತ್ವ

ಜೇನುಕುರುಬರಲ್ಲಿ ಬಹುಪತ್ನಿತ್ವ ಜಾರಿಯಲ್ಲಿದೆ. ಆದರೆ ಅದರ ಪ್ರಮಾಣ ಕಡಿಮೆ. ಮದುವೆಯಾಗಿ ಮಕ್ಕಳಾಗದಿದ್ದರೆ, ಮೊದಲ ಹೆಂಡತಿಗೆ ಗುಣವಾಗದ ಖಾಯಿಲೆ ಇದ್ದರೆ, ಹೆಂಡತಿ ತೀರಿಹೋಗಿದ್ದರೆ, ಹೆಂಡತಿ ಬಿಟ್ಟಿದ್ದರೆ ಗಂಡು ಮರುಮದುವೆ ಆಗುವ ಸಂದರ್ಭಗಳು ಹೆಚ್ಚು. ಅದೂ ಕೂಡ ತುಂಬಾ ಅಪರೂಪವೆಂದೇ ಹೇಳಬಹುದು.

### ೩. ೪. ೫. ಬಾಲ್ಯ ವಿವಾಹ

ಇತರ ಬುಡಕಟ್ಟುಗಳಲ್ಲಿ ನಡೆಯುವಂತೆ ಜೇನು ಕುರುಬರಲ್ಲಿ ತುಂಬಾ ಚಿಕ್ಕ ವಯಸ್ಸಿನ ಮಕ್ಕಳ ಮದುವೆ ನಡೆಯುವುದಿಲ್ಲ. ಹಿಂದೆ ಆ ರೀತಿಯ ಮದುವೆಗಳು ನಡೆಯುತ್ತಿದ್ದವು. ಆದರೆ ಇತ್ತೀಚೆಗೆ ಆ ರೀತಿಯ ಮದುವೆಗಳು ನಡೆದ ಉದಾಹರಣೆಗಳಿಲ್ಲ. ಆದರೆ ಅಪ್ರಾಪ್ತ ವಯಸ್ಸಿನ ಮದುವೆಗಳು ನಡೆಯುತ್ತವೆ. ಹುಡುಗಿ ಮೈನೆರದ ನಂತರ ಮದುವೆ ಮಾಡುವುದೇ ಹೆಚ್ಚು. ಹುಡುಗರೂ ಸಹಿತ ಮದುವೆ ವಯಸ್ಸಿಗಿಂತಲೂ ಮೊದಲೇ ಮದುವೆಯಾಗುತ್ತಾರೆ.

ಈ ಸಮುದಾಯದ ಮತ್ತೊಂದು ವೈಶಿಷ್ಟ್ಯವೆಂದರೆ ಗಂಡಿಗಿಂತ ವಯಸ್ಸಿನಲ್ಲಿ ಹೆಣ್ಣು ದೊಡ್ಡವಳಾಗಿದ್ದರೂ ಮದುವೆ ನಡೆಯುವುದುಂಟು. ಹುಡುಗಿ ವಯಸ್ಸಾಗಿದ್ದರೂ ನೋಡಲು ಸುಂದರವಾಗಿದ್ದು ವಯಸ್ಸಾದಂತೆ ಕಾಣದೇ ಹೋದರೆ ಅಂಥವಳನ್ನು ಅವಳಿಗಿಂತ ಕಡಿಮೆ ವಯಸ್ಸಿನ ಹುಡುಗರು ಮದುವೆಯಾದ ಉದಾಹರಣೆಗಳೂ ಉಂಟು. ವಿವಾಹಕ್ಕೆ ಸಂಬಂಧಿಸಿದ ಆಚರಣೆಗಳಲ್ಲಿ ಹೆಣ್ಣು ಹೆಚ್ಚಾಗಿ ಭಾಗವಹಿಸುವಳಾದರೂ ಗಂಡಿನ ಆಯ್ಕೆ, ಮದುವೆ ನಿರ್ಧರಿಸುವ ಹಕ್ಕು ಹೆಣ್ಣಿಗೆ ಇರುವುದಿಲ್ಲ ಏಕೆಂದರೆ ದೈವದ ಯಜಮಾನ ಮತ್ತು ಅದರ ಸದಸ್ಯರೆಲ್ಲಾ ಪುರುಷರೇ ಆಗಿರುತ್ತಾರೆ.

### ೩. ೫. ಹುಟ್ಟು

ಹುಟ್ಟು ಪ್ರತಿ ಕುಟುಂಬದಲ್ಲಿ ನಡೆಯುವ ಸಂಭ್ರಮದ ಆಚರಣೆ. ಗರ್ಭಿಣಿಯಾದ ಮಹಿಳೆಯನ್ನು ಜೇನುಕುರುಬರು ತವರಿಗೆ ಕಳಿಸುವುದುಂಟು. ಸಾಧ್ಯವಾಗದಿದ್ದ ಪಕ್ಷದಲ್ಲಿ ಗಂಡನ

ಮನೆಯಲ್ಲಿಯೇ ಗರ್ಭಿಣಿ ಹೆಂಗಸನ್ನು ಇರಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಜೇನುಕುರುಬರಲ್ಲಿ ಗಂಡ ಹೆಂಡತಿಯರ ಹಟ್ಟಿಗಳು ಪ್ರಾದೇಶಿಕವಾಗಿ ದೂರವಿರುವುದಿಲ್ಲ. ಒಂದೇ ಹಾಡಿಯ ಹುಡುಗ ಹುಡುಗಿಯರಲ್ಲಿಯೇ ವಿವಾಹವಾಗುವುದು ಹೆಚ್ಚು. ವಿವಾಹವಾಗುವ ಹುಡುಗ ಹುಡುಗಿಯ ಬೆಡಗುಗಳು ಭಿನ್ನವಿದ್ದರಾಯಿತು. ಜೇನುಕುರುಬರಲ್ಲಿ ಹಿರಿಯ ಮಹಿಳೆಯರು ಹೆರಿಗೆಯನ್ನು ಮಾಡಿಸುತ್ತಾರೆ. ಮಜ್ಜಿಗೆಹಳ್ಳ ಹಾಡಿಯ ಗೌರಮ್ಮರವರು ಇವರು ಇದುವರೆವಿಗೂ ಯಶಸ್ವಿ ೪೮೦೦ ಹೆರಿಗೆಗಳನ್ನು ಮಾಡಿಸಿರುತ್ತೇನೆ ಎಂದು ಹೇಳುತ್ತಾರೆ. ಇತ್ತೀಚೆಗೆ ಕಾಡಿನಿಂದ ಹೊರಬಂದು ಕಾಡಿನಂಚಿನಲ್ಲಿರುವ ಜೇನುಕುರುಬರು ಹೆರಿಗೆಗಾಗಿ ಆಸ್ಪತ್ರೆಗಳಿಗೆ ಹೋಗುವುದುಂಟು. ಹೆರಿಗೆಯಾದ ಕುಟುಂಬವು ಕಡ್ಡಾಯವಾಗಿ ಮೂರು ತಿಂಗಳು ಸೂತಕವನ್ನು ಆಚರಿಸುತ್ತದೆ. ಆಸ್ಪತ್ರೆಗೆ ಹೋಗಿ ಹೆರಿಗೆ ಮಾಡಿಸಿಕೊಂಡ ಜೇನುಕುರುಬ ಮಹಿಳೆಯರು ಪಾರಂಪರಿಕ ಸಂಪ್ರದಾಯ ಮುರಿದು ಹಾಡಿಯ ಹೊರಗೆ ಹೆರಿಗೆ ಮಾಡಿಸಿಕೊಂಡಿದ್ದಕ್ಕೆ ಪ್ರಾಯಶ್ಚಿತ್ತವಾಗಿ ದೈವಕ್ಕೆ ತಪ್ಪುದಂಡ ಸಲ್ಲಿಸುವುದು ಕಂಡು ಬರುತ್ತದೆ.

### ೩. ೫. ೧. ಗರ್ಭಿಣಿಯಾದ ಮೇಲೆ ಆಚರಿಸುವ ಸಂಪ್ರದಾಯಗಳು

ಗರ್ಭಿಣಿ ಎಂದು ತಿಳಿಯಲು ಮೊದಲನೇ ತಿಂಗಳಲ್ಲಿ ಅವಳು ಮುಟ್ಟಾಗುವುದಿಲ್ಲ. ಇದರಿಂದ ಹೆಣ್ಣು ಗರ್ಭಿಣಿ ಎಂದು ಭಾವಿಸುತ್ತಾರೆ. ಗರ್ಭಿಣಿಯಾಗಿ ಗೊತ್ತಾದಾಗಿನಿಂದ ಏಳನೇ ತಿಂಗಳವರೆಗೆ ಯಾವುದೇ ರೀತಿಯ ಸಂಪ್ರದಾಯ ಆಚರಣೆಗಳು ಮಾಡುತ್ತಿರಲಿಲ್ಲ. ಏಳನೇ ತಿಂಗಳಲ್ಲಿ ಆಕೆಯನ್ನು ತವರು ಮನೆಗೆ ಕಳುಹಿಸುತ್ತಿದ್ದರು. ಆಗ ಕಾಡಿನ ಹೂವು, ಅರಿಶಿಣ, ಕುಂಕುಮ, ಸೀರೆ, ರವಿಕೆ, ಲಂಗ, ಕೊಡುತ್ತಿದ್ದರು. ಒಬ್ಬಟ್ಟು, ವಡೆ, ಅನ್ನ, ಪಾಯಸ ಹೀಗೆ ಸಿಹಿ ಪದಾರ್ಥ ಮಾಡಿ ಗರ್ಭಿಣಿಗೆ ತಿನ್ನಿಸುತ್ತಿದ್ದರು. ಮಡಿಲಿಗೆ ಅಕ್ಕಿ ಹಾಕಿ ತವರು ಮನೆಗೆ ಕಳುಹಿಸುತ್ತಿದ್ದರು. ಮಡಿಲಕ್ಕಿಯಲ್ಲಿ ಬಾಳೆ, ತೆಂಗಿನಕಾಯಿ, ಹೂವು, ಎಲೆ ಅಡಿಕೆಯನ್ನು ಹಾಕುತ್ತಿದ್ದರು (ಮಾ : ಪಾರ್ವತಿಜೆ ಕೆ, ನಾಗಪುರ ಹಾಡಿ).

ಹಾಡಿಯೊಳಗೆ ಮಗು ಹುಟ್ಟಿದರೆ ತಾಯಿ ಗರ್ಭದಿಂದ ಮಾಸು ಬಿದ್ದನಂತರ ಅಳತೆ ನೋಡಿ ಹರಿತವಾದ ಬೆಣಚುಕಲ್ಲಿನಿಂದ ಅಥವಾ ಬಿದಿರಿನ ಬ್ಲೇಡಿನಿಂದ ಹೊಕ್ಕಳಬಳ್ಳಿ ಕೊಯ್ಯಲಾಗುತ್ತದೆ. ಯಾರೂ ತುಳಿಯದ ಮರದ ಬೊಡ್ಡೆಯೊಂದರ ಕೆಳಗೆ ಮಾಸನ್ನು ಹೂಳಿ ಪೂಜೆ ಮಾಡುತ್ತಾರೆ.

### ೩. ೫. ೨. ಬಾಣಂತಿ ಮಗುವಿನ ಆರೈಕೆ

ಬಾಣಂತಿ ಮತ್ತು ಮಗುವಿನ ಆರೈಕೆ ಹೆರಿಗೆಯಾದ ತರುವಾಯ ಪ್ರಾರಂಭವಾಗುತ್ತದೆ. ಬಾಣಂತಿಗಾಗಿಯೇ ತಾತ್ಕಾಲಿಕವಾಗಿ ಗರಿ, ಬಿದಿರು ಬಳಸಿ ನಿರ್ಮಿಸಿದ ಗುಡಿಸಿಲಿನಲ್ಲಿ ಮಗುವಿಗೆ ಆರು ತಿಂಗಳು ತುಂಬುವರೆಗೂ ತಾಯಿ ಮತ್ತು ಮಗುವಿನ ಆರೈಕೆ ನಡೆಯುತ್ತದೆ. ಬಾಣಂತಿಯಾಗಾಗಿಯೇ

ಪ್ರತ್ಯೇಕವಾಗಿ ಅನ್ನ ಸೊಪ್ಪಿನಸಾರು ಮತ್ತು ವಿಶೇಷವಾಗಿ ಕಾಡು (ಕೂರ) ಪ್ರಾಣಿಯ ಮಾಂಸವನ್ನು ಆಹಾರವಾಗಿ ಮಾಡಿ ಕೊಡುತ್ತಾರೆ. ಮಗುವಿಗೆ ೬ ತಿಂಗಳು ತುಂಬಿದ ನಂತರ ಮಗು ಮತ್ತು ತಾಯಿ ಇಬ್ಬರಿಗೂ ಎಳ್ಳೆಣ್ಣೆಯಿಂದ ವಿಶೇಷವಾಗಿ ನೀರೆರೆದು ಸೂತಕ ಕಳೆದು ಕುಟುಂಬದ ಸದಸ್ಯರೊಂದಿಗೆ ಸೇರಿಸಿಕೊಳ್ಳುತ್ತಾರೆ. ಬಾಣಂತಿ ಇದ್ದ ತಾತ್ಕಾಲಿಕ ಗುಡಿಸಲನ್ನು ಸುಟ್ಟು ಹಾಕಲಾಗುತ್ತದೆ. ಅಲ್ಲಿಗೆ ಶಾಶ್ವತವಾಗಿ ಸೂತಕ ಕಳೆಯುತ್ತದೆಂಬುದು ಸಮುದಾಯದ ನಂಬಿಕೆ ಮತ್ತು ಆಚರಣೆ.

ಬಾಣಂತಿಗೆ ಕರಿಮೆಣಸಿನಿಂದ ತಯಾರಿಸಿದ ಕಷಾಯ ಕೊಡುತ್ತಾರೆ. ಮಗು ಹುಟ್ಟಿದ ತಕ್ಷಣ ಅದರ ಮೈಯನ್ನು ಬಟ್ಟೆಯಿಂದ ಒರೆಸಿ ಶೀತವಾಗದೇ ಇರಲಿ ಎಂದು ಮಗುವಿಗೆ ಸ್ನಾನ ಮಾಡಿಸುವ ಮುನ್ನ ಕೈಎಣ್ಣೆ ಹಚ್ಚುತ್ತಾರೆ. ಕೈಎಣ್ಣೆಯನ್ನು ಸ್ವತಃ ತಯಾರಿಸುತ್ತಾರೆ. ಎರಡು ಕಾಲುಗಳು ಮಧ್ಯೆ ಮಗುವನ್ನು ಮೂಕಡೆ (ಮುಖ ಕೆಳಗೆ) ಮಾಡಿ ಸ್ನಾನ ಮಾಡಿಸಿ ಆನಂತರ ಮುಖ ಮೇಲೆ ಮಾಡಿ ಸ್ನಾನ ಮಾಡಿಸುತ್ತಾರೆ. ಸ್ನಾನ ಮಾಡಿಸಿದ ನಂತರ ತಮ್ಮ ಎಡಗಾಲಿನಿಂದ ಮಣ್ಣನ್ನು ತೆಗೆದು ಮಗುವಿಗೆ ಬೊಟ್ಟು ಇಡುತ್ತಾರೆ. ಕಾಲಲ್ಲಿರುವ ನೀರನ್ನು ಮಗುವಿಗೆ ಚಿಮುಕಿಸುತ್ತಾರೆ. ಅರೆಬಿಸಿ ನೀರಿನಲ್ಲಿ ಮೈತೊಳೆಯುತ್ತಾರೆ. ಹೀಗೆ ಮೂರು ತಿಂಗಳವರೆಗೂ ಸ್ನಾನ ಮಾಡಿಸುತ್ತಾರೆ. ತಾಯಿಗೂ ಮೈತೊಳೆದು ಬೇರೆ ಬಟ್ಟೆ ಉಡಲು ಕೊಡುತ್ತಾರೆ.

ಮಗು ಹುಟ್ಟಿದಾಗ ಅದರ ಹೊಕ್ಕಳ ಬಳ್ಳಿಯನ್ನು ಬಿದಿರಿನ ಕಡ್ಡಿಯನ್ನು ಚೂಪು ಮಾಡಿ ಕತ್ತರಿಸುತ್ತಿದ್ದರು. ಬೆಳಗ್ಗೆ ಮತ್ತು ಸಂಜೆ ಎರಡು ಸಲ ಸ್ನಾನ ಮಾಡಿಸುತ್ತಿದ್ದರು. ಕಾಡಿನ ಮದ್ದುಗಳಾದ ಕರಿ ಜೀರಿಗೆ, ನಂಜಿನ ಬೀಜ ಕುಟ್ಟಿ ಪುಡಿಮಾಡಿ ಬೆಳಗ್ಗೆ ಕುಡಿಸುತ್ತಿದ್ದರು. ಗಾಳಿಸೊಪ್ಪು, ಬೆಳ್ಳುಳ್ಳಿ, ಒಳ್ಳೆ ಮೆಣಸುಗಳನ್ನು ಪುಡಿಮಾಡಿ ನೀರಿನಲ್ಲಿ ಹಾಕಿ ಕುಡಿಸುತ್ತಿದ್ದರು. ಗಾಳಿಸೊಪ್ಪು, ಕಾಡಾಗಲಸೊಪ್ಪು, ಕುಮಟೆಸೊಪ್ಪು, ಗಣಕೆಸೊಪ್ಪು ಇವುಗಳಲ್ಲಿ ದಿನವೂ ಒಂದೊಂದು ವಿಧದ ರಸವನ್ನು ಮಾಡಿ ಕುಡಿಸುತ್ತಿದ್ದರು. ಧೂಪದ ಹೊಗೆಯನ್ನು ಕೊಡುತ್ತಿದ್ದರು. ಸುಂಡೆ ಸೊಪ್ಪು, ಕರಿ ತುಳಸಿಯನ್ನು ಕಣ್ಣಿಗೆ ಹನಿಯ ರೂಪದಲ್ಲಿ ಹಾಕುತ್ತಿದ್ದರು.

ಹುಟ್ಟಿದ ಮಗುವಿಗೆ ಮೊದಲಿಗೆ ಕೈಯಣ್ಣೆಯನ್ನು ಚೀಪಿಸುತ್ತಾರೆ. ತರುವಾಯ ಜೇನನ್ನು ನೆಕ್ಕಿಸುತ್ತಾರೆ. ಹೆರಿಗೆಯಾದ ತರುವಾಯ ಬಾಣಂತಿಗೆ ಸಪ್ಪನೆಯ ಗಂಜಿ ಕೊಡುತ್ತಾರೆ. ಮಾರನೆ ದಿನ ಕೈಸುಂಡೆ ಎಂದು ಹೇಳಲಾಗುವ ಪದಾರ್ಥದ ಉಂಡೆ ಕೊಡುತ್ತಾರೆ. ಕೈಸುಂಡೆಯಲ್ಲಿ ಬೇವಿನ ಸೊಪ್ಪು, ಕಾಡಿನಲ್ಲಿ ದೊರೆಯುವ ಬೇರೆ ಬೇರೆ ಸೊಪ್ಪುಗಳು, ಮೆಣಸು, ಜೀರಿಗೆ, ಬಜೆ, ಓಪ್ಪಲಿ ಮುಂತಾದ ವಸ್ತುಗಳನ್ನು ಹಾಕಿ ಕೈಸುಂಡೆಯನ್ನು ಮಾಡಿರುವುದಾಗಿ ಹೇಳುತ್ತಾರೆ. ಆದರೆ ಅದರ ಪೂರ್ಣ ವಿವರವನ್ನು ತಿಳಿಸಲಾರರು. ಕೈಸುಂಡೆ ತಿನ್ನಿಸುವುದರಿಂದ ಬಾಣಂತಿಗೆ ಆಗಿರಬಹುದಾದ ನಂಜು ಪೂರ್ಣ ನಿವಾರಣೆಗೊಳ್ಳುತ್ತದೆ. ಮೊಲೆಹಾಲಿನ ವೃದ್ಧಿಯಾಗುತ್ತದೆ ಎಂದು ಹೇಳುತ್ತಾರೆ. ಮಗುವಿಗೆ ಜೇನಿನೊಂದಿಗೆ ಭಜೆ ತೇಯ್ದು ನೆಕ್ಕಿಸುತ್ತಾರೆ. ಅಜ್ವಾನದ ಕಷಾಯವನ್ನು ತಾಯಿ ಮಗುವಿಗೆ

ಕುಡಿಸುತ್ತಾರೆ. ತಾಯಿಗೆ ವಿವಿಧ ರೀತಿಯ ಗೆಣಸುಗಳನ್ನು ಬೇಯಿಸಿ ಕೊಡುತ್ತಾರೆ. ಹಾಗೆಯೇ ಗಂಜಿ, ಮೆತ್ತನೆಯ ಹಿಟ್ಟು,ಅಂದರೆ ಅಕ್ಕಿ ನುಚ್ಚು, ರಾಗಿ ಹಿಟ್ಟು ಬೆರೆಸಿ ತುಂಬಾ ಮೃದುವಾಗಿ ಮಾಡಿದ ಬೇಯಿಸಿದ ಹಿಟ್ಟು ಕೊಡುತ್ತಾರೆ. ಬಾಣಂತಿ ಮತ್ತು ಮಗುವಿಗೆ ಬಿಸಿ ನೀರಿನ ಸ್ನಾನ ಮಾಡಿಸಿ ಆದ ಮೇಲೆ ಗಾಳಿ ಸೊಪ್ಪು, ನಾಗದಾಳಿ ಸೊಪ್ಪು, ದೊಡ್ಡಪತ್ರೆ ಸೊಪ್ಪು, ಲಕ್ಕಿಸೊಪ್ಪು, ಅನೆಲದ್ದಿ, ತಾರಿ ಮರದ ಒಣಗಿದ ಎಲೆ, ಗಂಡುದಾಳಿ ಸೊಪ್ಪು, ಗಂಧ, ಬೆಳ್ಳುಳ್ಳಿ ಸಿಪ್ಪೆ, ಈರುಳ್ಳಿ ಸಿಪ್ಪೆ ಇವುಗಳನ್ನು ಬೆಂಕಿಯ ಕೆಂಡದ ಮೇಲೆ ಹಾಕಿ ಅದರ ಹೊಗೆಯನ್ನು ಬಾಣಂತಿ ಮತ್ತು ಮಗುವಿಗೆ ಕೊಡುತ್ತಾರೆ. ಇದರಿಂದ ಬಾಣಂತಿ ಮತ್ತು ಮಗುವಿಗೆ ಶೀತವಾಗುವುದಿಲ್ಲ. ಚರ್ಮಕ್ಕೆ ನಿರೋಧಕ ಶಕ್ತಿಯನ್ನು ಕೊಡುತ್ತದೆ.

ಮಗು ಹುಟ್ಟಿದಾಗ ಹುಟ್ಟಿದ ದಿನದಿಂದ ಮೂರನೇ ದಿನದ ವರೆಗೂ ಬಿದಿರಿನಲ್ಲಿ ಮಾಡಿದ ಮೊರದಲ್ಲಿ ಬಟ್ಟೆ, ಕಬ್ಬಿಣದ ಚೂರು ಹಾಕಿ ಮಗುವನ್ನು ಮಲಗಿಸುತ್ತಾರೆ. ಕಬ್ಬಿಣದ ಚೂರು ಹಾಕುವ ಉದ್ದೇಶ ಮಗುವಿಗೆ ಯಾವ ಕೆಟ್ಟ ಶಕ್ತಿಯೂ ತಾಗದಿರಲಿ ಎಂದು. ಮಗು ಹುಟ್ಟಿದ ಮೂರನೇ ದಿನ ಕಳೆದ ಮೇಲೆ ಮಗುವನ್ನು ಮೊರದಿಂದ ತೆಗೆದು ಬಿದಿರಿನ ಚಾಪೆಯಲ್ಲಿ ಮಲಗಿಸುತ್ತಾರೆ.

ಮಗುವಿಗೆ ಸ್ನಾನ ಮಾಡಿಸಲು ಒಂದು ಗುಂಡಿಯನ್ನು ಗುಡಿಸಲಿನ ಪಕ್ಕದಲ್ಲಿ ಅಥವಾ ಎದುರಿಗೆ ನಿರ್ಮಿಸಿರುತ್ತಾರೆ. ಗುಂಡಿಯು ನಾಲ್ಕು ಅಡಿ ಉದ್ದ ಮೂರು ಅಡಿ ಅಗಲವಿರುತ್ತದೆ. ಮೂರು ಅಡಿಯಷ್ಟು ಆಳವಿರುತ್ತದೆ. ಅಷ್ಟು ಜಾಗದಲ್ಲಿ ಮಣ್ಣನ್ನು ತೆಗೆದು ಅದನ್ನು ಸಗಣಿಯಿಂದ ಸಾರಿಸುತ್ತಾರೆ. ಮಗುವಿಗೆ ಸ್ನಾನ ಮಾಡಿಸಿದ ನೀರು ಗುಂಡಿಯ ಒಳಗೆ ಬೀಳುವ ಹಾಗೆ ಬಿದ್ದ ನೀರು ಗುಂಡಿಯ ಒಳಗೆ ಇಂಗುವಂತೆ ಮಾಡಿರುತ್ತಾರೆ. ಮಗುವಿಗೆ ಸಾಮಾನ್ಯವಾಗಿ ಹಾಡಿಯ ಹಿರಿಯ ಮಹಿಳೆ ಅನುಭವ ಇರುವಂತಹವರೊಬ್ಬರು ಸ್ನಾನ ಮಾಡಿಸುತ್ತಾರೆ. ಸ್ನಾನ ಮಾಡಿಸಿದ ನೀರು ಯಾರಾದರು ತುಳಿದರೆ ಮಗುವಿಗೆ ಹೊಟ್ಟೆನೋವು ಬರುತ್ತದೆ ಎಂದು ಈ ರೀತಿ ಮಾಡುತ್ತಾರೆ. ಬಾಣಂತನ ಹುಡುಗಿಯ ತವರು ಮನೆ (ಅಟ್ಟಮನೆ) ಯಲ್ಲಿಯೇ ನಡೆಸುತ್ತಿದ್ದರು (ಮಾ : ಜಾನಕಮ್ಮ, ಅಬ್ಬಳತಿ ಹಾಡಿ).

### ೩. ೫. ೩. ಹೊಸಿಲು ದಾಟುವ ಶಾಸ್ತ್ರ

ಮಗುವಿಗೆ ಮೂರು ತಿಂಗಳು ತುಂಬಿದ ಮೇಲೆ ಹೊಸಿಲು ದಾಟುವ ಶಾಸ್ತ್ರವನ್ನು ಮಾಡುತ್ತಿದ್ದರು. ಹೊಸಿಲು ದಾಟಿಸುವ ಶಾಸ್ತ್ರವೆಂದರೆ ಹೊಸಿಲಿನ ಒಳಭಾಗದಲ್ಲಿ ಬಾಣಂತಿ ಮಗುವನ್ನು ಕೂರಿಸಿ ಹೊಸಿಲಿಗೆ ಪೂಜೆ ಮಾಡಿ ಮಗುವಿಗೆ ನಿವಾಳಿಸುವುದು. ಈ ರೀತಿ ಪೂಜೆ ಮತ್ತು ನಿವಾಳಿಸುವ ಆಚರಣೆಯನ್ನು ಮಗುವಿನ ಸೋದರ ಮಾವ ಅಥವಾ ಮಗುವಿನ ತಾಯಿಯ ಅಣ್ಣ ತಮ್ಮಂದಿರು ಆಚರಿಸಬೇಕು. ಈ ಪೂಜೆಯಾದ ಮೇಲೆ ಮಗುವನ್ನು ಗುಡಿಸಲಿನ ಒಳ ಹೊಸಿಲಿನಿಂದ ಈಚೆಗೆ ದಾಟಿಸುತ್ತಾರೆ. ಅಲ್ಲಿಂದ ಮುಂದೆ ಮಗುವನ್ನು ಹೊರಗೆ ತರಬಹುದು. ಅಲ್ಲಿಯವರೆಗೂ ಮಗುವನ್ನು ಗುಡಿಸಲಿನಿಂದ ಹೊರಗೆ ತರುವಂತಿಲ್ಲ. ಈ ಶಾಸ್ತ್ರ ಆಚರಣೆ ಮಾಡಿದ ಸೋದರ ಮಾವನಿಗೆ ತೆಂಗಿನಕಾಯಿ, ಬಾಳೆಹಣ್ಣು, ಬಟ್ಟೆಯ ಕಾಣಿಕೆ ಕೊಡಲಾಗುತ್ತದೆ.

### ೩. ೫. ೪. ತೊಟ್ಟಿಲ ಶಾಸ್ತ್ರ

ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ತೊಟ್ಟಿಲ ಶಾಸ್ತ್ರಕ್ಕೂ ಮುಂಚಿತವಾಗಿ ಅಂದರೆ ತಾತ್ಕಾಲಿಕವಾಗಿ ಗಂಡು ಮಗುವಿಗೆ 'ಅಪ್ಪು' ಹೆಣ್ಣಿಗೆ 'ಅಮ್ಮಿ' ಎಂದೂ ಹೆಸರಿಸುತ್ತಿದ್ದರು. ಜೇನುಕುರುಬರು ತೊಟ್ಟಿಲ ಶಾಸ್ತ್ರವನ್ನು ಮಗು ಹುಟ್ಟಿದ ನಾಲ್ಕು ತಿಂಗಳಿಗೆ ಇಲ್ಲವೆ ಒಂದು ವರ್ಷಕ್ಕೆ ಮಾಡುತ್ತಾರೆ. ಇವರ ತೊಟ್ಟಿಲು ಶಾಸ್ತ್ರ ತುಂಬಾ ಸರಳ ರೀತಿಯಲ್ಲಿ ಮುಗಿಯುತ್ತದೆ. ತೊಟ್ಟಿಲು ಕಾರ್ಯದ ದಿನ ಬೆಳಗ್ಗೆ ಮನೆಯನ್ನು ಪೂರ್ಣವಾಗಿ ಸಾರಿಸುತ್ತಾರೆ. ತಾವೇ ಹೆಣೆದ ಬಿದಿರಿನ ಬುಟ್ಟಿಯಾಕಾರದ ತೊಟ್ಟಿಲನ್ನು ಮನೆಯ ಮಧ್ಯಭಾಗದಲ್ಲಿರಿಸುತ್ತಾರೆ. ಅಂದು ತಾಯಿ ಮಗುವಿಗೆ ಸ್ನಾನ ಮಾಡಿಸುತ್ತಾರೆ. ತಾಯಿಗೆ ಹೊಸ ವಸ್ತ್ರ ಉಡಿಸುತ್ತಾರೆ. ಈ ಎಲ್ಲಾ ಕಾರ್ಯವನ್ನು ಹಾಡಿಯ ಮಹಿಳೆಯರೆಲ್ಲ ಸೇರಿ ಮಾಡುತ್ತಾರೆ. ತರುವಾಯದ ಕೆಲಸವನ್ನೆಲ್ಲ ಹಾಡಿಯ ಯಜಮಾನ ನಿರ್ವಹಿಸುತ್ತಾನೆ. ತಮ್ಮ ಕುಟುಂಬಕ್ಕೆ ಹೊಸ ಕುಡಿಯೊಂದು ಬಂದಿರುವುದನ್ನು ನೋಡಿ ಹಿರಿಯರೆಲ್ಲಾ ಆ ಮಗುವಿಗೆ ಹಾರೈಸಿ ರಕ್ಷಣೆ ನೀಡಲಿ ಎಂಬ ಉದ್ದೇಶದಿಂದ ಹಿರಿಯರನ್ನು ಕರೆಯುವ ಪದ್ಧತಿ ಇದೆ. ಹೀಗೆ ಹಿರಿಯರ ಹಾರೈಕೆಯಾದ ತರುವಾಯ ಯಜಮಾನನು ಅವರ ಕುಟುಂಬದ ಹಿರಿಯನೊಬ್ಬನ ಹೆಸರನ್ನು ಇರಿಸುತ್ತಾನೆ. ಸಾಮಾನ್ಯವಾಗಿ ಅಂದು ಮಗುವಿಗೆ ಹಾರೈಸಲು ಬಂದ ಹಿರಿಯನ ಹೆಸರನ್ನು ಮಗುವಿಗೆ ಇಡುವುದು ರೂಡಿ, ಯಜಮಾನನೇ ಹೆಸರನ್ನು ಇಡುತ್ತಾನೆ. ಹೆಸರಿಟ್ಟ ತರುವಾಯ ಮಹಿಳೆಯರು ತಮ್ಮದೇ ಭಾಷೆಯಲ್ಲಿ ಸೋಬಾನೆ ಪದಗಳನ್ನು ಹೇಳುತ್ತಾರೆ. ಆಮೇಲೆ ತೊಟ್ಟಿಲುಕಾರ್ಯಕ್ಕೆ ಬಂದವರಿಗೆಲ್ಲ ಎಲೆ ಅಡಿಕೆ, ಹೊಗೆಸೊಪ್ಪು ನೀಡಲಾಗುತ್ತದೆ. ಇತ್ತೀಚೆಗೆ ತಮ್ಮ ಯೋಗ್ಯತೆಗೆ ತಕ್ಕಂತೆ ಸಿಹಿ ಊಟ ನೀಡುವ ಪದ್ಧತಿ ರೂಢಿಗೆ ಬಂದಿದೆ.



ಸಾಮಾನ್ಯವಾಗಿ ಗಂಡು ಮಗುವಿಗೆ ಕಾಳ, ಬೊಮ್ಮ, ಕರಿಯ, ಅಜ್ಜಯ್ಯ, ಮುತ್ತು, ತಿಮ್ಮ, ಸೋಮ, ಎಂಬಿತ್ಯಾದಿ ಹೆಸರುಗಳಿದ್ದರೆ, ಹೆಣ್ಣಿಗೆ ಕಾಳಿ, ಬೊಮ್ಮಿ, ಬೋಳಿ, ತಿಮ್ಮಿ, ಜಾಜಿ, ದೊಡ್ಡಮ್ಮ, ಚಿಕ್ಕಮ್ಮ, ಗೌರಿ, ಪುಟ್ಟಿ, ಶಾಂತಿ, ನೀಲಿ, ಮುಂತಾದ ಹೆಸರುಗಳನ್ನು ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಹೆಸರುಗಳನ್ನು ಕಟ್ಟುತ್ತಾರೆ.

ಮಗು ಹುಟ್ಟಿದ ಮೂರನೇ ವರ್ಷ ಅಥವಾ ಐದನೇ ವರ್ಷದಲ್ಲಿ ಹುಟ್ಟಿದ ಕೂದಲನ್ನು ತೆಗೆಸುತ್ತಾರೆ. ಅದನ್ನು 'ಕೂದಲು ತೆಗೆದಶಾಸ್ತ್ರ' ಅಥವಾ 'ಮಂಡೆಶಾಸ್ತ್ರ' ಎನ್ನುವರು. ಮಗುವಿಗೆ ಇದೇ ಸಂದರ್ಭದಲ್ಲಿ ಕಿವಿಯನ್ನು ಚುಚ್ಚುತ್ತಾರೆ.

**ನುಲಿಉಪ್ಪಳಿಕೆ (ಮಕ್ಕಳಿಗೆ ಹೊಕ್ಕಳು ನೋವು)** : ಹುಟ್ಟಿನಿಂದ ಒಂದು ವರ್ಷದ ಮಕ್ಕಳಿಗೆ ಹೊಕ್ಕಳು ನೋವು ಬರುತ್ತದೆ. ಅದನ್ನು ಜೇನುಕುರುಬರು 'ನುಲಿಉಪ್ಪಳಿಕೆ' ಎನ್ನುತ್ತಾರೆ. ಆಗ ಮಗು ಒಂದೇ ಸಮನೇ ಉಸಿರುಕಟ್ಟಿ ಅಳುವುದು, ಮೈ ಮುರಿಯುವುದು ಮಾಡುತ್ತದೆ. ಆಗ ಬಾಣಂತಿಯಾದ ತಾಯಿಯು ಮಗುವಿನ ಹೊಕ್ಕಳು ಭಾಗಕ್ಕೆ ತನ್ನ ಬಾಯಿಯ ಎಂಜಲನ್ನು ಸವರುತ್ತಾಳೆ. ಬೇಗ ಎಂಜಲು ಹಾರಿ ಹೋಗಿ ಹೊಕ್ಕಳಿನ ಸುತ್ತ ಬಿಸಿಯಾಗುತ್ತದೆ. ಆಗ ಮಗುವಿಗೆ ನುಲಿಉಪ್ಪಳಿಕೆಯಾಗಿದೆ ಎಂದು ತಿಳಿಯುತ್ತದೆ. ಬಳೆ ಚೂರು ಅಥವಾ ಸೂಜಿಯನ್ನು ದೀಪದ ಬೆಂಕಿಯಲ್ಲಿ ಕಾಯಿಸಿ ಮಗುವಿನ ಹೊಕ್ಕಳ ಸುತ್ತಲೂ ಆಯತಾಕಾರವಾಗಿ ಸುಡುತ್ತಾರೆ. ಮಗು ನೋವಿನಿಂದ ಕಿರುಚುತ್ತದೆ. ಸುಟ್ಟ ಭಾಗಕ್ಕೆ ಕೈಯೆಣ್ಣೆ (ಹರಳೆಣ್ಣೆ) ಹಚ್ಚುತ್ತಾರೆ. ಗಾಯ ತಂಪಾಗಲಿ ಎಂದು.  ಆನಂತರ ಸುಟ್ಟ ಚರ್ಮ ಏಳು ದಿನದಲ್ಲಿ ಒಣಗಿ ಬಿದ್ದು ಹೋಗುತ್ತದೆ. ಮಗುವಿಗೆ ಹೊಕ್ಕಳ ನೋವು ಹೋಗುತ್ತದೆ.

ಮಕ್ಕಳ ಬಟ್ಟೆಯನ್ನು ಒಗೆದು ಹೆಚ್ಚು ಸುಕ್ಕಾಗುವಂತೆ ಹಿಂಡಿದರೆ ಮಕ್ಕಳೂ ಕೂಡ ನಾವು ಹೇಗೆ ಬಟ್ಟೆ ಹಿಂಡಿರುತ್ತೇವೆಯೋ ಹಾಗೆಯೇ ಅವು ಮೈ ಮುರಿಯುತ್ತವೆ. ಅದಕ್ಕೆ ಬಟ್ಟೆಯನ್ನು ನೀರಿನಲ್ಲಿ ಅದ್ದಿ ಹಾಗೆಯೇ ಒಣಗಲು ಹಾಕುತ್ತಾರೆ. ಆಗ ಮಕ್ಕಳು ಮೈ ಮುರಿಯದೇ ನೆಮ್ಮದಿಯಾಗಿ ನಿದ್ರೆ ಮಾಡುತ್ತವೆ (ಮಾ : ಪುಟ್ಟಮ್ಮ, ಮೇಟಿಕುಪ್ಪೆ ಹಾಡಿ).

### ೩. ೫. ೫. ಮಕ್ಕಳಿಗೆ ಆಸರ ತೆಗೆಯುವುದು

ಜೇನುಕುರುಬರು ಮಕ್ಕಳಿಗೆ ಆಸರ ತಗುಲಿದರೆ ಅಂದರೆ ದೃಷ್ಠಿ ಆಗಿದ್ದರೆ, ಯಾವಾಗ ದೃಷ್ಠಿಯಾಗಿದೆ, ಎಂದು ತಿಳಿಯುತ್ತದೆಯೋ, ಆಗಲೇ **ಉದಾ** : ಮಗು ಅಳುವುದು, ಕೈ ಕಾಲು ಸೆಟೆಯುವುದು, ಸಂಕಟಪಡುವುದು ಮುಂತಾದವುಗಳಿಂದ ದೃಷ್ಠಿಯಾಗಿದೆ. ಎಂದು ತಿಳಿದು ಆಗಲೇ ಆಸರ ತೆಗೆಯುತ್ತಾರೆ. ಅದಕ್ಕೆ ಗಳಿಗೆ, ಸಮಯ ಕಾಯುವುದಿಲ್ಲ. ಅವರು ವಾಸಿಸುವ ಹಾಡಿಗಳ ಸುತ್ತ - ಮುತ್ತ ಸಿಗುವ ಹೂವುಗಳನ್ನು ಬಳಸಿಕೊಳ್ಳುತ್ತಾರೆ. ಧೂಪಮರದ ಗೊಂದನ್ನು ಒಣಗಿಸಿಟ್ಟಿರುತ್ತಾರೆ, ಅದನ್ನು ಕೆಂಡಕ್ಕೆ ಹಾಕಿ ಮಗುವನ್ನು ಕೆಂಡದ ಎದುರಿಗೆ ಎತ್ತಿಕೊಂಡರೆ ಮಗುವಿನ ದೃಷ್ಠಿಯಾಗಿದ್ದರೆ, ಕೆಂಡ ಚಟ ಚಟ ಎಂದು ಸಿಡಿಯುತ್ತದೆ. ಅದರ ಮಸಿಯನ್ನು ತೆಗೆದು ಮಗುವಿನ ಹಣೆಗೆ ಇಡುತ್ತಾರೆ. ಇದಾದ ಅರ್ಧ ಗಂಟೆಯೊಳಗೆ ಮಗುವಿನ ದೃಷ್ಠಿ ಇಳಿಯುತ್ತದೆ.

ದಿಂಡಿಲು ಮರದ ಚಕ್ಕೆ, ಮತ್ತಿಮರದ ಚಕ್ಕೆ, ನೇರಳೆಮರದ ಚಕ್ಕೆ, ಬೂಡೆಮರ(ಬೀಟೆಮರ)ದ ಚಕ್ಕೆ, ಅಳತ್ತಿಮರದ ಚಕ್ಕೆಯನ್ನು ಸಣ್ಣ ಸಣ್ಣ ತುಂಡು ಮಾಡಿ ಒಣಗಿಸಿಟ್ಟು ಕೊಂಡು ಮಕ್ಕಳಿಗೆ ದೃಷ್ಠಿ ತಗುಲಿದಾಗ ಈ ಚಕ್ಕೆಗಳಿಂದ ಕೆಂಡವನ್ನು ಮಾಡಿಕೊಂಡು ಧೂಪ ಮರದ ಗೊಂದನ್ನು ಈ ಕೆಂಡಕ್ಕೆ ಹಾಕಿ ಚಟ ಚಟ ಎಂದು ಸಿಡಿಸಿ ಮಕ್ಕಳನ್ನು ಕೆಂಡದ ಮುಂದೆ ಮೇಲೆ, ಕೆಳಗೆ, ಅಕ್ಕ, ಪಕ್ಕ ಎಡ ಬಲಕ್ಕೆ ನೀವಾಳಿಸಿ ಗಾಳಿ, ಗರ ಬಂದರೆ ಸಿಡಿದು ಹೋಗಲಿ ಅಜ್ಜಯ್ಯ ಕಂದಮ್ಮನ ಕಾಯಲಿ ಎಂದು ಬೇಡುತ್ತಾರೆ.

**ಬಳೆ ಚೂರಿನ ಸೋಕು** : ಬಳೆ ಚೂರುಗಳು ದೃಷ್ಟಿ ತೆಗೆಯಲು ಬಳಸುತ್ತಾರೆ ಮಕ್ಕಳಿಗೆ ದೃಷ್ಟಿಯಾದರೆ ಅಳುವುದು, ಮುಖ ಕೆಂಪಾಗುವುದು ಹೀಗೆ ಆದಾಗ ಬಳೆ ಚೂರನ್ನು ಮಗುವಿಗೆ ಮೇಲೆ ಕೆಳಗೆ, ಎಡ ಬಲಕ್ಕೆ, ನೀವಾಳಿಸಿ ಸೂರ್ಯನ ಕಡೆ ಮುಖ ಮಾಡಿ ವಂದಿಸಿ ಥೂ... ಥೂ... ಥೂ... ಎಂದು ಮೂರು ಸಲ ಬಾಯಿ ಎಂಜಲನ್ನು ಮಗುವಿನ ಮುಖಕ್ಕೆ ಸಿಡಿಯುವಂತೆ ಉಗಿದು ಬಳೆ ಚೂರನ್ನು ಯಾರೂ ತುಳಿಯದ ಜಾಗಕ್ಕೆ ಬಿಸಾಕುತ್ತಾರೆ. ಇದರಿಂದ ಮಗುವಿಗೆ ದೃಷ್ಟಿ ಇಳಿಯುತ್ತದೆ.

**ಪೊರಕೆ ಕಡ್ಡಿ ಸೋಕು** : ಮಗುವನ್ನು ಮುಟ್ಟಾದ ಹೆಂಗಸರು ಎತ್ತಿಕೊಂಡರೆ ಅಥವಾ ಅವರು ನೆರಳು ಸೋಕಿದರೆ ಮಗುವಿಗೆ ಭೇಧಿಯಾಗುತ್ತದೆ. ಮಗು ತುಂಬಾ ಅಳುತ್ತದೆ. ಆಗ ಪೊರಕೆ ಕಡ್ಡಿ (ಸೇನೆಹುಲ್ಲಿನ ಕಡ್ಡಿ, ಮುಂಡರಿಗೆ ಕಡ್ಡಿ) ಬಳಸಿ, ಪೊರಕೆ ಕಡ್ಡಿ ಮಗುವಿನ ಹಣೆಯಿಂದ ಕಾಲಿನವರೆಗೂ ಮೇಲೆ ಕೆಳಗೆ ಐದು ಬಾರಿ, ಎಡದಿಂದ ಬಲಕ್ಕೆ ಐದು ಬಾರಿ ತಗುಲಿಸಿ 'ಗಾಳಿ ಗರ ಮುಂಡೆ ಕಂಡೆ ಕಣ್ಣಿನ ದೃಷ್ಟಿ ಹೋಗಲಿ' ಎಂದು ಥೂ... ಥೂ... ಥೂ... ಎಂದು ಮೂರು ಬಾರಿ ಹೇಳಿ ಕಡ್ಡಿಯನ್ನು ಸುಡುತ್ತಾರೆ. ಅದು ಚಟ ಚಟ ಎಂದು ಸಿಡಿದರೆ ಮಗುವಿಗೆ ದೃಷ್ಟಿ ಆಗಿದೆ ಎಂದು ಅರ್ಥ. ಆಗ ಆ ಮಸಿಯನ್ನು ಮಗುವಿನ ಎಡದ ಕಣ್ಣಿನ ಉಬ್ಬು, ಎಡದ ಅಂಗೈ, ಹೊಕ್ಕಳು, ಎಡದ ಕಾಲಿನ ಅಂಗಾಲಿಗೆ ಹಚ್ಚುತ್ತಾರೆ. ಮಗು ದೃಷ್ಟಿ ಹರಿದು ಚೆನ್ನಾಗಿ ನಿದ್ರೆ ಮಾಡುತ್ತದೆ.

**ಸೇಲೆ ಸೆರಗಿನ ಸೋಕು** : ಮಗುವಿಗೆ ಪ್ರತಿದಿನ ಸ್ನಾನ ಮಾಡಿಸಿದ ನಂತರ ಸೀರೆಯ ಸೆರಗಿನಿಂದ ಸ್ನಾನ ಮಾಡಿಸಿದ ಹೆಂಗಸರು ಮಗುವಿಗೆ ಆಸರ ತೆಗೆಯುತ್ತಾರೆ. ಸ್ನಾನ ಮಾಡಿಸುವಾಗ ಹಾಡಿಯಲ್ಲಿನ ಜನರುಗಳ ಕಣ್ಣಿನ ದೃಷ್ಟಿ ತಾಗಿರಬಹುದೆಂದು ಭಾವಿಸಿ, ಸ್ನಾನ ಮಾಡಿಸಿದ ಹಿರಿಯ ಹೆಂಗಸು ತನ್ನ ಸೇಲ್ (ಸೀರೆ) ಸೆರಗಿನಿಂದ ಮಗುವಿಗೆ ಮುಖಕ್ಕೆ ತಲೆಯಿಂದ ಕಾಲಿನವರೆಗೆ ಐದು ಬಾರಿ ಸೀರೆಯ ಸೆರಗನ್ನು ತಗುಲಿಸಿ ಕೆಳಮುಖವಾಗಿ ನೀವಾಳಿಸುತ್ತಾರೆ. ಆನಂತರ ಮಗುವನ್ನು ಗುಡಿಸಲಿನ ಒಳಗೆ ಕರೆದುಕೊಂಡು ಹೋಗುತ್ತಾರೆ. ನೀವಾಳಿಸಿದ ಸೀರೆಯ ಸೆರಗನ್ನು ಸ್ನಾನ ಮಾಡಿಸಿದ ಗುಂಡಿಯ ಕಡೆ ತಿರುಗಿ ಉಫ್... ಉಫ್... ಎಂದು ಬಾಯಿಂದ ಉರುಬುತ್ತಾರೆ ಮತ್ತು ಬಿಟ್ಟಿತ್ತು ಬಿಟ್ಟಿತ್ತು ಬಿಟ್ಟಿತ್ತು ಎಂದು ಹೇಳುತ್ತಾರೆ.

**ತೆಂಗಿನ ಕರಟದ ಸೋಕು** : ಮಕ್ಕಳಿಗೆ ದೃಷ್ಟಿ ತೆಗೆಯಲು ಇನ್ನೊಂದು ವಿಧಾನವನ್ನು ಅನುಸರಿಸುತ್ತಾರೆ. ತೆಂಗಿನ ಕಾಯಿಯ ಹೋಳುಗಳಲ್ಲಿ ತೆಂಗಿನ ಕಾಯಿಯನ್ನು ತುರಿದ ನಂತರ ಉಳಿದ ಕರಟವನ್ನು ಹಾಗೆಯೇ ಇಟ್ಟಿರುತ್ತಾರೆ. ಮಕ್ಕಳಿಗೆ ದೃಷ್ಟಿ ಆಗಿದೆ ಎಂದು ತಿಳಿದ ನಂತರ ಕರಟಕ್ಕೆ ಕೆಂಡವನ್ನು ಹಾಕಿಕೊಂಡು ಮಗುವಿನ ಮುಖದಿಂದ ಅಂಗಾಲಿನವರೆಗೆ ಉದ್ದುದ್ದ ಮತ್ತು ಅಡ್ಡ ಅಡ್ಡವಾಗಿ ನೀವಾಳಿಸಿ ಥೂ... ಥೂ... ಥೂ... ಎಂದು ಹೇಳುತ್ತಾ ಆ ಕರಟವನ್ನು ತೆಗೆದುಕೊಂಡು ಹೋಗಿ ಉರಿಯುತ್ತಿರುವ ಒಲೆಯ ಕೆಂಡಕ್ಕೆ ಹಾಕುತ್ತಾರೆ. ಆಗ 'ಡಬ್ – ಡಬ್' ಎಂದು ಶಬ್ದ ಬರುತ್ತದೆ. ಆನಂತರ ಮಗುವಿಗೆ ಸ್ವಲ್ಪ ಸಮಯದಲ್ಲಿಯೇ ದೃಷ್ಟಿ ಇಳಿದು ಮಗು ಚೆನ್ನಾಗಿ ನಿದ್ರೆಗೆ ಜಾರುತ್ತದೆ.

ಮಕ್ಕಳಿಗೆ ದೃಷ್ಟಿಯಾದರೆ ದೃಷ್ಟಿಯನ್ನು ಇಳಿಸಲು ಓರಿಯರು ಅನುಸರಿಸಿದ ಪಾರಂಪರಿಕ ತಿಳುವಳಿಕೆಯನ್ನು ಅನುಸರಿಸುತ್ತಾರೆ.

**ಒತ್ತೆ ಸೋಕು** : ಮಗು ಬೆಚ್ಚಿ ಬಿದ್ದಾಗ ತಾಯಿ ಮಗುವನ್ನು ಹೆಗಲಿನಲ್ಲಿ ಎತ್ತಿಕೊಂಡಿರುತ್ತಾರೆ. ಹಾಡಿಯ ಓರಿಯ ಅನುಭವಸ್ತ ಹೆಂಗಸೊಬ್ಬರು ದೃಷ್ಟಿಯನ್ನು ಇಳಿಸಲು ಒಂದು ಕಡ್ಡಿಗೆ ಹಳೆಯ ಬಟ್ಟೆ ಸುತ್ತಿ ಕೈಯೆಣ್ಣೆಯಲ್ಲಿ ಅದ್ದಿ ಒತ್ತೆ ಕಟ್ಟ ಬೆಂಕಿ ಹಚ್ಚುತ್ತಾರೆ. ಒಂದು ಬಿದಿರಿನ ಕೊಟ್ಟಕ್ಕೆ ನೀರು ತುಂಬಿಕೊಂಡು ಅದಕ್ಕೆ ಅರಿಶಿಣ ಹಾಕಿ ಕೈಯಲ್ಲಿ ಕಲಸುತ್ತಾರೆ. ಅರಿಶಿಣ ನೀರು ಸಿದ್ಧವಾಗಿರುತ್ತದೆ. ಆ ನೀರನ್ನು ಮಗುವಿನ ಮುಖಕ್ಕೆ ಬೆಂಕಿ ತೋರಿಸುತ್ತಾ ಅರಿಶಿಣದ ನೀರನ್ನು ಬೆಂಕಿಗೆ ಎರಚಿದರೆ ಬೆಂಕಿ ಹಾರಿ ಹೊಗೆ ಬರುತ್ತದೆ, ಅದನ್ನು ನೋಡಿ ಮಗು ಬೆಚ್ಚಿ ಬೀಳುತ್ತದೆ. ಬೆಚ್ಚಿದ ನಂತರ ಮಗು ಮೈ ಸೆಟೆಯುತ್ತಾ ಕಿರುಚುತ್ತದೆ, ಆಗ ಮೊದಲು ಹೆದರಿದ್ದ ಭಯ ಹೋಗುತ್ತದೆ.

ಮಕ್ಕಳಿಗೆ ಕಣ್ಣು ನೋವಾಗಿದ್ದರೆ. ತಾಯಿಯ ಎದೆ ಹಾಲನ್ನು ಕಣ್ಣಿಗೆ ಬಿಡುತ್ತಾರೆ. ಐದು ಹತ್ತು ನಿಮಿಷದಲ್ಲಿಯೆ ಮಗುವಿಗೆ ಕಣ್ಣು ನೋವು ಕಡಿಮೆಯಾಗಿ ಅಳುವುದನ್ನು ನಿಲ್ಲಿಸುತ್ತದೆ.

ಮಗು ಮಲಗಿಸಲು ಸೀರೆಯಿಂದ ಗುಡಿಸಲಿನ ಮೇಲ್ಛಾವಣಿಯ ಕಂಬಕ್ಕೆ ನೇಕೆ (ತೊಟ್ಟಿಲು) ಕಟ್ಟುತ್ತಾರೆ. ತೊಟ್ಟಲಿನ ಕೆಳಭಾಗದ ನೆಲ್ಲದಲ್ಲಿ ಪೊರಕೆ, ಕತ್ತಿ ಇಟ್ಟಿರುತ್ತಾರೆ. ಬಾಣಂತಿಯು ನಿತ್ಯಕರ್ಮಗಳಿಗೆಂದು ಹೊರಗೆ ಹೋಗಿ ಬಂದಾದ ಮೇಲೆ ಮೊದಲು ಎದೆಯ ಹಾಲನ್ನು ಓಂಡಿ ಆಚೆ (ಅಂಗೈಗೆ) ಚೆಲ್ಲಿ ಥೂ... ಥೂ... ಥೂ... ಎಂದು ಮೂರು ಸಲ ಹೇಳಿ ಆನಂತರ ಮಗುವಿಗೆ ಹಾಲು ಕುಡಿಸುತ್ತಾಳೆ. ಏಕೆಂದರೆ ಹೊರಗೆ ಹೋಗಿ ಬಂದಾಗ ಗಾಳಿಯ ಮೂಲಕ ಕೆಟ್ಟ ಶಕ್ತಿ ಮೈಯೊಳಗೆ ಸೇರಬಹುದು. ಎದೆ ಹಾಲು ಕುಡಿಸಿದಾಗ ಆ ಕೆಟ್ಟಗಾಳಿ ಮಗುವಿನ ಮೈಗೆ ಸೇರಬಹುದೆಂಬ ಭಯದಿಂದ ಅದು ಹೋಗಲಿ ಎಂದು ಹಾಗೆ ಮಾಡುತ್ತಾರೆ.

**ಕೆಂಡ ಸೋಕು** : ಒಂದು ತಟ್ಟೆಯಲ್ಲಿ ನೀರಿನೊಂದಿಗೆ ಹಸಿ ಅರಿಶಿಣವನ್ನು ಮಿಶ್ರಣ ಮಾಡಿ ಅರಿಶಿಣ ನೀರನ್ನು ಸಿದ್ದ ಪಡಿಸಿಕೊಳ್ಳುತ್ತಾರೆ. ಬೆಂಕಿಯ ಕೆಂಡವನ್ನು ತೆಂಗಿನ ಕರಟದೊಳಗೆ ತಂದು ಮೇಲಿನಿಂದ ಕೆಳಗೆ ಮೂರು ಬಾರಿ ಅಥವಾ ಏಳು ಬಾರಿ ನೀವಾಳಿಸಿ ಅರಿಶಿಣ ನೀರಿಗೆ ಹಾಕುತ್ತಾರೆ. ಹಾಗೆ ನೀವಾಳಿಸುವಾಗ *"ಸ್ವಾಮಿ ಅಜ್ಜಯ್ಯದಿರೇ ಅಜ್ಜಮ್ಮದಿರೇ ಈ ಕೂಸುಗು ಬಂದಿರಂತ ದುಶ್ಮಾನ ಯಾನ್ ಆಗಿವಿಗೆಯೋ ಅದು ನಂಗ ಗೊತ್ತು ಕಾಣೆ. ಅದುನೇ ನಿಂಗದನೇ ಒಳಿದಾಗಲಿ ನಿಂಗಾವೇ ಕಾವಲು"* ಎಂದು ಹೇಳುತ್ತಾರೆ. ಸೋಕು ಆಗಿದ್ದಾಗ ನೀರು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಆಗ ಸೋಕು ಆಗಿದೆ ಎಂದು ಭಾವಿಸಲಾಗುತ್ತದೆ. ಅರಿಶಿಣ ನೀರಿನಲ್ಲಿ ಯಾವುದೇ ಬದಲಾವಣೆ ಕಾಣದಿದ್ದಾಗ ಸೋಕು ಬಿಟ್ಟು ಬೇರೆ ಸಮಸ್ಯೆ ಉಂಟಾಗಿದೆ ಎಂದು ಭಾವಿಸುತ್ತಾರೆ.

**ಬಲಿ ಸೋಕು** : ಸೋಕು ಹೆಚ್ಚಾಗಿ ಜೀವ ಹೋಗುವ ಸಂದರ್ಭ ಬಂದಿದೆ, ಎಂದು ಅನಿಸಿದಾಗ ನಾಟಿ ಕೋಳಿಯ ಹುಂಜವನ್ನು ತಂದು ಸೋಕು ಉಂಟಾದ ವ್ಯಕ್ತಿಯನ್ನು ಕೂರಿಸುತ್ತಾರೆ. ಪೂರ್ವದ ದಿಕ್ಕಿಗೆ

ಮುಖ ಮಾಡಿ ಕೂರಿಸಿ ದೈವವನ್ನು ನೆನೆದು, ಆ ಕೋಳಿಯನ್ನು ಅವನ ನೆತ್ತಿಯ ಮೇಲೆ ಹಿಡಿದು, ಆ ಕೋಳಿಯ ಕಾಲನ್ನು ತೊಳೆದು, ಅದರ ಬಾಯಿಗೆ ನೀರು ಆಕ್ಕಿ ಕಾಳು ಹಾಕಿ ಕುಯ್ಯುತ್ತಾರೆ. ಕುಯ್ದಾಗ ರಕ್ತ ಅವನ ತಲೆಯ ಮೇಲೆ ಹಾರಿಸುತ್ತಾರೆ. ಅವನ ಹಣೆಗೆ ತಿಲಕವನ್ನು ಇಡುತ್ತಾರೆ. ಈ ಸಂದರ್ಭದಲ್ಲಿ *"ಸ್ವಾಮಿ ನನ್ನ ಆಳನೇ, ನನ್ನ ಕೂಸುನೇ ಬುಟ್ಟುಕೊಡು. ಆಳುಗೆ ಆಳು ಬತ್ತು. ಇದೇ ಎರಡು ಕಾಲಿನ ಬೇಟೆ. ಎತ್ತು ನಂಗ ಆಳಸಿ ಇತ್ತ ಬುಟ್ಟು ಕೊಡು ಸ್ವಾಮಿ"* ಎಂದು ಉಚ್ಛರಿಸಿ ಕತ್ತು ಕುಯ್ದು ಕೋಳಿಯನ್ನು ಸೋಕು ಉಂಟಾದ ವ್ಯಕ್ತಿಯ ಹಿಂದಕ್ಕೆ ಎಸೆಯುತ್ತಾರೆ. ಇದರಿಂದ ಅವನ ಜೀವದ ಬದಲಾಗಿ ಬೇರೊಂದು ಜೀವವನ್ನು ಒಪ್ಪಿಸಿದ ಹಾಗೆ ಆಗುತ್ತದೆ. ಎಂದು ಹೇಳುತ್ತಾರೆ.

**ಕೂಡು ಬಳ್ಳಿ ಸೋಕು** : ಜೇನುಕುರುಬರಲ್ಲಿ ಕೆಲವರು ಸೋಕನ್ನು ನಿವಾರಿಸುತ್ತಾರೆ. ಅಂತಹವರು ಕಾಡಿನಲ್ಲಿ ಕೂಡು ಬಳ್ಳಿಯನ್ನು ಗುರ್ತಿಸುತ್ತಾರೆ. ಈ ರೀತಿ ಗುರ್ತಿಸುವವರು ಸೋಕು ಉಂಟಾದ ವ್ಯಕ್ತಿಯ ಹೆಸರನ್ನು ಹೇಳಿ ಆ ಬಳ್ಳಿಯನ್ನು ಕಡಿದಾಗ ಅಥವಾ ಮುರಿದಾಗ ಕಡಿದ, ಮುರಿದ ಭಾಗ ಸಹಜವಾಗಿ ಬಿಳಿ ಬಣ್ಣದಿಂದ ಕೆಂಪು ಬಣ್ಣಕ್ಕೆ ತಿರುಗಿದಾಗ ಹೆಸರು ಹೇಳಿದ ವ್ಯಕ್ತಿಗೆ ಸೋಕು ಉಂಟಾಗಿದೆ ಎಂದು ನಿಶ್ಚಯಿಸುತ್ತಾರೆ. ಕಡಿದ ಬಳ್ಳಿಯ ಸ್ವಲ್ಪ ಭಾಗವನ್ನು ತಂದು ಚೆನ್ನಾಗಿ ಜಜ್ಜಿ, ಗಾಳಿಸೊಪ್ಪು, ದೊಡ್ಡ ಪತ್ರೆ ಎಲೆ, ನಾಗದಾಳಿ ಸೊಪ್ಪನ್ನು ಸೇರಿಸಿ ಮಿಶ್ರಣ ಮಾಡಿ, ತೆಂಗಿನ ಕರಟಕ್ಕೆ ಹಾಕಿ ಸೋಕು ಉಂಟಾದ ವ್ಯಕ್ತಿಯ ಕಣ್ಣು, ಕಿವಿ, ಮೂಗು ಬಿಟ್ಟು ಸಂಪೂರ್ಣವಾಗಿ ದೇಹಕ್ಕೆ ಲೇಪಿಸುತ್ತಾರೆ. ಆಗ ಸೋಕು ಉಂಟಾದ ವ್ಯಕ್ತಿಯ ಮೈಯಲ್ಲಿ ಕಚ್ಚಿದ ಅನುಭವವಾಗುತ್ತದೆ. ಅರ್ಧ ಘಂಟೆಯ ನಂತರ ತಣ್ಣೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಹೀಗೆ ಮಾಡಿದರೆ ಅವನ ಸೋಕು ನಿವಾರಣೆಯಾಗುತ್ತದೆ.

**ಮುರುಕು ಮರ ಸೋಕು** : ಮುರುಕು ಮರ (ಪಾರಿವಾಳ ಮರ)ದ ಸಕ್ಕೆ (ಚಕ್ಕೆ)ಯನ್ನು ತಂದು ಅದಕ್ಕೆ ಗಾಳಿಸೊಪ್ಪು, ನಾಗದಾಳಿ, ಬೆಳ್ಳುಳ್ಳಿ, ಗದ್ದೆಗಾಳಿಸೊಪ್ಪು, ದೊಡ್ಡಪತ್ರೆಸೊಪ್ಪು ಇವುಗಳನ್ನು ಜಜ್ಜಿ ಪೂರ್ಣ ದೇಹಕ್ಕೆ ಹಚ್ಚಿ ಸ್ವಲ್ಪ ಸಮಯದ ನಂತರ ಸ್ನಾನ ಮಾಡಿಸುತ್ತಾರೆ. ಈ ರೀತಿ ಮಾಡಿದರೆ ಮುರುಕು ಮರದಿಂದ ಸೋಕು ಆಗಿದ್ದರೆ ಅದು ನಿವಾರಣೆಯಾಗುತ್ತದೆ.

**ಹೊಂಗೆ ಮರದ ಸೋಕು** : ಹೊಂಗೆ ಮರದ ಚಕ್ಕೆಯೊಂದಿಗೆ, ನಾಗದಾಳಿ, ಗಾಳಿಸೊಪ್ಪು, ಬೆಳ್ಳುಳ್ಳಿ ಇವುಗಳನ್ನು ಜಜ್ಜಿ ಸೋಕು ತಗುಲಿದ ವ್ಯಕ್ತಿಯ ದೇಹಕ್ಕೆ ಹಚ್ಚಿ ಒಂದು ಗಂಟೆಯ ನಂತರ ಸ್ನಾನ ಮಾಡಿಸಿದರೆ ಹೊಂಗೆ ಮರದಿಂದ ಉಂಟಾದ ಸೋಕು ನಿವಾರಣೆಯಾಗುತ್ತದೆ.

**ಓರೆಮರ (ಸೋಕು ಮರ) ಸೋಕು** : ಓರೆಮರದ ಚಕ್ಕೆಯನ್ನು ಬೆಳ್ಳುಳ್ಳಿಯೊಂದಿಗೆ ಸೇರಿಸಿ ಸೋಕು ಉಂಟಾದ ವ್ಯಕ್ತಿಯ ದೇಹಕ್ಕೆ ಬಳಿಯುತ್ತಾರೆ. ಇದು ತುಂಬಾ ವಿಷಯುಕ್ತವಾದುದು. ಆನಂತರ ಒಂದು ಗಂಟೆಯ ನಂತರ ಸ್ನಾನ ಮಾಡಿಸಿದರೆ ಸೋಕು ಉಂಟಾದ ವ್ಯಕ್ತಿಯ ದೇಹದಿಂದ ಸೋಕು ನಿವಾರಣೆಯಾಗುತ್ತದೆ.

**ಮಡಿಕೆಯ ಮಸಿ ಸೋಕು** : ಮಡಿಕೆಯ ಮಸಿಯನ್ನು ತೆಗೆದು ಕಾಲಿನ, ಅಂಗಾಲಿನ ಭಾಗವನ್ನು ಭೂಮಿಗೆ ಉಜ್ಜಿ ಮಗುವಿನ ನಾಲಿಗೆಗೆ ಮಸಿಯನ್ನು ಚೀಪಿಸುತ್ತಾರೆ. ಚೀಪಿಸಿದ ತಕ್ಷಣವೇ ಎದೆ ಹಾಲು ಕುಡಿಸುತ್ತಾರೆ. ಆಗ ಮಸಿಯು ಎದೆಯ ಹಾಲಿನ ಜೊತೆ ಮಗುವಿನ ಹೊಟ್ಟೆಯೊಳಗೆ ಹೋಗಿ ಮಗುವಿಗೆ ಹೊಟ್ಟೆನೋವು ವಾಸಿಯಾಗುತ್ತದೆ.

**ಒಲೆಯ ಬೂದಿ ಸೋಕು** : ಒಲೆಯ ಬೂದಿಯನ್ನು ಎಡಗಾಲಿನ ಹೆಬ್ಬೆಟ್ಟಿನಿಂದ ತೆಗೆದುಕೊಂಡು ಮಗುವಿನ ಕುತ್ತಿಗೆಗೆ, ಹಣೆಗೆ ಇಟ್ಟರೆ ಸ್ವಲ್ಪ ಹೊತ್ತಿನಲ್ಲಿಯೇ ಮಗುವಿನ ದೃಷ್ಟಿ ಇಳಿಯುತ್ತದೆ.

**ಪೊರಕೆ ಕಡ್ಡಿ ಸೋಕು** : ಮುಟ್ಟಾದ ಹೆಂಗಸರು, ವಿವಾಹವಾಗದ ಹೆಣ್ಣು ಮಕ್ಕಳು ಮಗುವನ್ನು ಎತ್ತಿಕೊಂಡರೆ ಮಗುವಿನ ಹೊಟ್ಟೆನೋವು ಬಂದು ಮಗು ಅಳುತ್ತದೆ. ಸುಟ್ಟಗಾಂದ್ರಿ ಮೆಣಸು(ಉರಿ ಮೆಣಸು), ಸಾಸಿವೆ, ಉಪ್ಪು, ಚೀಪೆಹುಲ್ಲಿನ ಪೊರಕೆ ಕಡ್ಡಿಯನ್ನು ಒಟ್ಟಿಗೆ ಸೇರಿಸಿ ಮೂರು ಬಾರಿ ನೀವಾಳಿಸಿ ಒಲೆಗೆ ಹಾಕಿದಾಗ, ಅದು ಚಟ ಚಟ ಎಂದು ಸಿಡಿಯುತ್ತದೆ. ಆಗ ಮಗುವಿಗೆ ದೃಷ್ಠಿ ಇಳಿಯುತ್ತದೆ.

**ಕೈರೇ ನಾರ ಸೋಕು** : ಮಗು ಹಾಸಿಗೆಯಲ್ಲಿ ಮೈ ಮುರಿಯುತ್ತಿದ್ದರೆ ಅದಕ್ಕೆ ಕೈರಿ ಕಾಯಿ ತಂದು ಮಗು ಮಲಗುವ ಜಾಗದಲ್ಲಿ ಇಡುತ್ತಾರೆ, ಕೈರೇ ನಾರನ್ನು ಮಗುವಿನ ಕುತ್ತಿಗೆಗೆ ಕಟ್ಟುತ್ತಾರೆ. ಆಗ ಮಗು ಮೈ ಮುರಿಯುವುದನ್ನು ನಿಲ್ಲಿಸಿ ಸುಖ ನಿದ್ರೆ ಮಾಡುತ್ತದೆ.

**ಕೊಳ್ಳಿ ಸೋಕು** : ಜೇನುಕುರುಬರು ಬೇಟೆ ಮಾಡಿದ ನಂತರ ಮಾಂಸವನ್ನು ಗುಡಿಸಲಿಗೆ ತಂದ ಮೇಲೆ ನೇರವಾಗಿ ಒಳಗೆ ತೆಗೆದು ಕೊಳ್ಳುವುದಿಲ್ಲ. ಮಾಂಸವನ್ನು ತಂದವರನ್ನು ಗುಡಿಸಲಿನ ಹೊರಗೆ ನಿಲ್ಲಿಸಿ. ಒಲೆಯೊಳಗೆ ಉರಿಯುತ್ತಿರುವ ಕೊಳ್ಳಿಯನ್ನು ತಂದು ಆ ಕೊಳ್ಳಿಯ ಮೇಲಿನಿಂದ ಅರಿಶಿಣ ಮಿಶ್ರಣ ಮಾಡಿದ ನೀರನ್ನು ಮಾಂಸಕ್ಕೆ ಹುಯ್ಯುತ್ತಾರೆ. ಇದರ ಉದ್ದೇಶ ದುಷ್ಟಶಕ್ತಿಗಳು ಮಾಂಸದ ಮುಖಾಂತರ ದೇಹವನ್ನು ಗುಡಿಸಲುಗಳನ್ನು ಸೇರುತ್ತದೆ. ಎಂಬ ಉದ್ಧೇಶ ಮತ್ತು ಮಾಂಸವನ್ನು ಶುದ್ಧಗೊಳಿಸುವ ಉದ್ಧೇಶವೂ ಇದರಲ್ಲಿದೆ. ಈ ರೀತಿ ಮಾಂಸವನ್ನು ಶುದ್ಧಗೊಳಿಸುವ ಕ್ರಿಯೆಗೆ ಸೋಕು ತೆಗೆಯುವುದು ಎಂದು ಕರೆಯುತ್ತಾರೆ.

**ಗಾಳಿ ಸೋಕು** : ಬೇಟೆಗೆ ಹೋದ ಗಂಡಸರು ಮರಳಿ ಕಾಡಿನಿಂದ ಹಾಡಿಗೆ ಬಂದರೆ, ಅವರನ್ನು ಮೊದಲು ಹಾಡಿಯ ಗುಡಿಸಲಿನ ಮುಂದೆ ನಿಲ್ಲಿಸಿ. ಅವರಿಗೆ ಗಾಳಿ ಸೋಕಬಾರದು ಅಥವಾ ಯಾವುದಾದರೂ ದುಷ್ಟ ಶಕ್ತಿ ತಾಗಬಾರದು ಎಂದು ಯೋಚಿಸಿ ಮನೆಯಲ್ಲಿ ಹಿರಿಯರು ಸೋಕು ತೆಗೆಯುತ್ತಾರೆ. ಸೋಂಕು ತೆಗೆಯುವವರು ಗಂಡು ಅಥವಾ ಹೆಣ್ಣಾಗಿರಬಹುದು. ಇಬ್ಬರಲ್ಲಿ ಯಾರಾದರೂ ಸರಿಯೇ ಸೋಕು ತೆಗೆಯಬಹುದು ಆದರೆ ಮುಟ್ಟಾದ ಹೆಂಗಸು ತೆಗೆಯುವಂತಿಲ್ಲ. ಈ ರೀತಿ ಸೋಕು ತೆಗೆಯುವಾಗ ಎದುರಿಗೆ ಯಾರನ್ನೂ ನಿಲ್ಲಿಸುವಂತಿಲ್ಲ, ಬೇಟೆಯಿಂದ ಬಂದ ವ್ಯಕ್ತಿಯಿಂದ ಸೋಕು ಹೊರ ಬಂದು ಎದುರಿಗೆ ಇದ್ದವರಿಗೆ ಸೇರುವ ಸಾಧ್ಯತೆ ಇರುತ್ತದೆ.

ಕೆಟ್ಟ ಶಕ್ತಿಗಳ ಬಗ್ಗೆ ಜೇನುಕುರುಬರಿಗೆ ಅತಿಯಾದ ಭಯ ಮತ್ತು ಅವುಗಳಿಂದ ತಮ್ಮನ್ನು ಕಾಪಾಡಿಕೊಳ್ಳಲು ಹಿರಿಯರು ಹೀಗೆ ಮಾಡುತ್ತಿದ್ದರು ಎಂಬುದನ್ನು ಹಾಗೆಯೇ ಅನುಸರಿಸಿಕೊಂಡು ಬಂದಿದ್ದಾರೆ.

**ಮಜ್ಜಿಗೆಹಳ್ಳ ಹಾಡಿಯ ಶ್ರೀಮತಿ ಗೌರಮ್ಮನವರು**

ಜೇನುಕುರುಬ ಮಹಿಳೆಯರಿಗೆ ಗೌರಮ್ಮನವರು ಅತ್ಯಂತ ಹೆಚ್ಚು ಪಾರಂಪರಿಕ ಜ್ಞಾನವನ್ನು ಹೊಂದಿದವರು. ಇವರು ಮಜ್ಜಿಗೆ ಹಳ್ಳಹಾಡಿ ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆಯವರು. ಸುಮಾರು ೮೦ ವರ್ಷ ವಯಸ್ಸಿನ ಗೌರಮ್ಮನವರು ಪಾರಂಪರಿಕ ಹೆರಿಗೆ ಪದ್ಧತಿಯನ್ನು ತನ್ನ ತಾಯಿಯಿಂದ ಕಲಿತವರು. ಜೊತೆಗೆ ಸಂಘಟನೆಯಲ್ಲಿ ಸಕ್ರಿಯಾವಾಗಿ ತಮ್ಮನ್ನು ತೊಡಗಿಸಿಕೊಂಡವರು. ಪಾರಂಪರಿಕ ಹೆರಿಗೆ ವೃತ್ತಿಯೊಂದಿಗೆ ಅಂಗನವಾಡಿಯಲ್ಲಿ ಸಹಾಯಕಿಯಾಗಿ ಹನ್ನೆರಡು ವರ್ಷಗಳ ಕಾಲ ಕೆಲಸ ನಿರ್ವಹಿಸಿದ್ದಾರೆ. ತಿತಿಮತಿ ಗ್ರಾಮ ಪಂಚಾಯಿತಿಯಲ್ಲಿ ಹದಿನೈದು ವರ್ಷ ಸದಸ್ಯೆಯಾಗಿ ಅದರಲ್ಲಿ ಮೂರು ವರ್ಷಗಳು ಉಪಾಧ್ಯಕ್ಷರಾಗಿ, ಮೂರು ವರ್ಷಗಳ ಕಾಲ ಪೋಲೀಸ್ ಇಲಾಖೆಯಲ್ಲಿ ನಾಗರೀಕ ಸಲಹಾ ಸದಸ್ಯೆಯಾಗಿ ಮೂರು ವರ್ಷ ಕೆಲಸ ನಿರ್ವಹಿಸಿದ್ದಾರೆ.

ಇಪ್ಪತ್ತೊಂದನೆ ವರ್ಷಕ್ಕೆ ತಮ್ಮ ವೃತ್ತಿಯನ್ನು ಆರಂಭಿಸಿ ಇಲ್ಲಿಯವರೆಗೂ ಸುಮಾರು ಅಂದಾಜು ನಾಲ್ಕುಸಾವಿರದ ಎಂಟುನೂರು ಹೆರಿಗೆಗಳನ್ನು ಸುಸೂತ್ರವಾಗಿ ಮಾಡಿಸಿದ್ದೇನೆ ಎನ್ನುತ್ತಾರಿವರು. ಹೆರಿಗೆಗೆ ಸಂಬಂಧಿಸಿದಂತೆ ಮಡಿಕೇರಿಯಲ್ಲಿ ಮೂರು ತಿಂಗಳು, ವಿರಾಜಪೇಟೆಯಲ್ಲಿ ಒಂದು ತಿಂಗಳು, ತಿತಿಮತಿಯಲ್ಲಿ ಎಂಟು ದಿನಗಳು ತರಬೇತಿ ಪಡೆದಿದ್ದಾರೆ. ಅವರೆ ಹೇಳುವಂತೆ 'ಹೆರಿಗೆ ಮಾಡುವ ಮುನ್ನ ಯಾವುದೇ ರೀತಿಯ ತೊಂದರೆಗಳಾಗಬಾರದೆಂದು "ಅಜ್ಜಯ್ಯ"ನಿಗೆ ಹರಕೆಯನ್ನು ಕಟ್ಟುತ್ತೇನೆ.



ಹೆರಿಗೆ ಸಮಯದಲ್ಲಿ ಹೊಟ್ಟೆನೋವು ಬಂದು ಮಗು ಕೆಳಗೆ ಸೇರುತ್ತದೆ. ಆಗ ಗರ್ಭಿಣಿಯ ಹೊಟ್ಟೆಯನ್ನು ಹಸ್ತದಿಂದ ಎಳೆದು ಎಳೆದು ಕೆಳಮುಖವಾಗಿ ನೀವುತ್ತೇನೆ. ಗರ್ಭಿಣಿ ಹೆಂಗಸನ್ನು ಅಂಗಾತವಾಗಿ ಮಲಗಿಸಿಯೇ ಹೆರಿಗೆ ಮಾಡಿಸಲಾಗುತ್ತದೆ. ಒಂದು ವೇಳೆ ಹೆರಿಗೆ ಕಷ್ಟಸಾಧ್ಯವೆನಿಸಿದಾಗ ಗರ್ಭಿಣಿಯನ್ನು ಗುಡಿಸಲಿನ ಕಂಬ ಅಥವಾ ಗೋಡೆಗೆ ಒರಗಿಸಿ ಎರಡೂ ಕಾಲುಗಳನ್ನು ಅಂಗಾತವಾಗಿ ಮುಂದಕ್ಕೆ ಚಾಚಿಸಿ ಕೂರಿಸುತ್ತಾರೆ. ಅದೇ ಹಾಡಿಯ ಅಥವಾ ಆ ಕುಟುಂಬದ ಒಂದಿಬ್ಬರು ಹಿರಿಯ ಮಹಿಳೆಯರ ಸಹಕಾರ ಪಡೆಯುತ್ತಾರೆ. ಈ ಮಹಿಳೆಯರು ಗರ್ಭಿಣಿ ಹೆಂಗಸು

ತನ್ನ ಹೆರಿಗೆಯ ನೋವು ತಾಳಲಾರದೇ, ಗೋಳಾಡುವ ಸಂದರ್ಭದಲ್ಲಿ ಇವರು ಆಕೆಯ ಬೆನ್ನು, ಕೈ, ಕಾಲು, ಕುತ್ತಿಗೆ ಭಾಗಗಳನ್ನು ನೇವರಿಸುತ್ತಾ, ಆಕೆಯ ತಲೆ ಸವರಿ "ನಿಂಗಾವ್ದೇ ಏನು ತೊಂದರೆ ಕಾಣೆ, ನಿಂಗಾವ ಅಜ್ಜಮ್ಮನ ನೆನಸಾಕು, ನಿಂಗಾವ ಕೂಸುವೇ ಬರಾಕು" ಎಂದು ಸಮಾಧಾನ ಮತ್ತು ಧೈರ್ಯ ಹೇಳುತ್ತಾರೆ. ಮಡಿಕೆಯಲ್ಲಿ ಬಿಸಿನೀರನ್ನು ಇರಿಸಿಕೊಂಡು ಜನನದ ಸ್ಥಳಕ್ಕೆ ಶಾಖವನ್ನು ನೀಡುತ್ತಾರೆ. ಗರ್ಭಿಣಿಯ ಗಂಟಲು ಒಣಗದಿರಲಿ ಮತ್ತು ಹೊಟ್ಟೆಯಲ್ಲಿರುವ ಮಗು ನಿಧಾನವಾಗಿ ಕೆಳಗೆ ಜಾರಿ, ಹೆರಿಗೆ ಸರಾಗವಾಗಿ ಆಗಲಿ ಎಂದು ಆಕೆಗೆ ಕುಡಿಯಲು ಜೀರಿಗೆ ಕಷಾಯವನ್ನು ಕುಡಿಸುತ್ತಾರೆ. ಸರಾಗವಾಗಿ ಹೆರಿಗೆ ಆಗದೇ ಇರದ ಸಂದರ್ಭದಲ್ಲಿ ಇವರು ತಮ್ಮ ಎರಡೂ ಕೈಗಳ ತೋರುಬೆರಳು, ಮಧ್ಯಬೆರಳಿನಿಂದ ಹೊಟ್ಟೆಯೊಳಗಿರುವ ಮಗುವಿನ ಕುತ್ತಿಗೆಯನ್ನು ಹಿಡಿದು ಯಾವುದೇ ಅಪಾಯಗಳಾಗದೇ ಆಚೆಗೆ ಎಳೆದುಕೊಳ್ಳುತ್ತಾರೆ. ನಂತರ ಮಗುವನ್ನು ಒಂದು ಬಟ್ಟೆಯ ಮೇಲೆ ಮಲಗಿಸಿ, ಅದರ ಹೊಕ್ಕಳು ಬಳ್ಳಿಯನ್ನು ಚೂಪಾದ ಬಿದಿರಿನ ಚಕ್ಕೆಯಿಂದ ಬೇರ್ಪಡಿಸಿ, ಕತ್ತರಿಸಿದ ತುದಿಗೆ ಕೈಎಣ್ಣೆಯನ್ನು ಸವರಿ ಗಂಟು ಹಾಕುತ್ತಾರೆ ನಂತರ ಮಗವನ್ನು ಬಿದಿರಿನ ಮೊರದಲ್ಲಿ ಇರಿಸುತ್ತಾರೆ. ತಾಯಿಯ ಹೊಟ್ಟೆಯಿಂದ ಬಂದ ಮಾಸನ್ನು ಒಂದು ಬಟ್ಟೆಗೆ ಸುತ್ತಿ ಭೂಮಿಯಲ್ಲಿ ಹೂಳಿಸುತ್ತಾರೆ.

ಹೊಟ್ಟೆಯಲ್ಲಿ ಮಗು ಸತ್ತಿದ್ದರೆ ಹೊಟ್ಟೆ ಬಿಸಿ ಇರುವುದಿಲ್ಲ, ಮಗು ತಿರುಗುವುದಿಲ್ಲ ಆಗ ಮಗು ಸತ್ತಿದೆ ಎಂದು ಭಾವಿಸುತ್ತಾರೆ. ತಾಯಿ ಸತ್ತು ಹೋದ ಮೇಲು ಮಗುವನ್ನು ಜೀವಂತವಾಗಿ ಹೊರಗೆ ತೆಗೆದಿರುವ ಉದಾಹರಣೆಗಳು ಇವೆ. ಹೀಗೆ ಈ ವೃತ್ತಿಯಲ್ಲಿ ಸಂತೃಪ್ತಿಯನ್ನು ಕಂಡಿದ್ದೇನೆ ಎಂದು ಹೇಳಿದರು. ಇತ್ತೀಚೆಗೆ ಸರ್ಕಾರ ಆಸ್ಪತ್ರೆಯಲ್ಲಿಯೇ ಹೆರಿಗೆ ಮಾಡಿಸಬೇಕೆಂದು ಕಾನೂನು ಜಾರಿಗೆ ತಂದಿದೆ' ಎಂದು ತಿಳಿಸಿದರು.

ಇಂದಿನ ಮಹಿಳೆಯರಿಗೆ ಪಾರಂಪರಿಕ ಜ್ಞಾನವನ್ನು ಉಳಿಸಿ ಬೆಳೆಸಬೇಕೆಂದು ಪ್ರೇರೆಪಿಸುತ್ತಾರೆ. ಇಷ್ಟೊಂದು ಜ್ಞಾನವನ್ನು ಪಡೆದಂತಹ ಗೌರಮ್ಮನವರು ಸಮುದಾಯದ ಮೂಲಭೂತ ಸೌಕರ್ಯಗಳಿಗಾಗಿ ಸಂಘಟನೆಯಲ್ಲಿಯೂ ಪಾಲ್ಗೊಂಡ ಉದಾಹರಣೆಗಳಿವೆ. ಜೇನುಕುರುಬ ಮಹಿಳೆಯರಲ್ಲಿ ಇವರು ಅತ್ಯಂತ ಧೈರ್ಯಶಾಲಿಯಾಗಿದ್ದು ನೇರ ನಡೆನುಡಿಯ ಸಾರ್ಥಕ ಜೀವನ ನಡೆಸುತ್ತಿದ್ದಾರೆ.

### ೩. ೫. ೬. ಜನನದ ಸೂತಕ

ಸೂತಕ ಕಳೆಯುವಾಗ ಹಾಡಿಯ ಯಜಮಾನ ಮತ್ತೆ ಯಜಮಾನಿಗೆ ತಿಳಿಸುತ್ತಿದ್ದರು. ಹಡೆದವರು ಮೂರು ತಿಂಗಳ ನಂತರ ಮನೆಯನ್ನು ಶುದ್ಧ ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ಮನೆದೇವರು ಅಥವಾ ಬಸವೇಶ್ವರ ದೇವರ ತೀರ್ಥಕ್ಕೆ ಭಾಗ್ಯ ಮರದ ಚಕ್ಕೆಯನ್ನು ಜಜ್ಜಿ ಹಾಕುತ್ತಾರೆ. ಆ ನೀರನ್ನು ಮನೆಯ ಒಳಗೆ. ಹೊರಗೆ ಚಿಮುಕಿಸುತ್ತಾರೆ. ಹಾಡಿಯ ಯಜಮಾನನಿಂದ ಪೂಜೆ

ಮಾಡಿಸುತ್ತಾರೆ. ಯಜಮಾನಿಯು ಮಗು ಮತ್ತು ಬಾಣಂತಿಗೆ ಹೊಸ ಬಟ್ಟೆ ಹಾಕಿಸಿ, ಹರಿಯುವ ನೀರಿನ ಹತ್ತಿರ ಕರೆದುಕೊಂಡು ಹೋಗಿ ಹನ್ನೆರಡು ಮಣ್ಣಿನ ಉಂಡೆಯನ್ನು ಮಾಡಿ, ಅವುಗಳಿಗೆ ಅರಿಶಿಣ, ಕುಂಕುಮ ಹಾಕಿಸಿ ಆನಂತರ ಅದರ ಮೇಲೆ ಒಂದು ದಾರವನ್ನು ಹಾಕಿ ತಾಯಿಯಿಂದ ಪೂಜೆ ಮಾಡಿಸುತ್ತಾರೆ. ನಂತರ ಒಂದು ಎಲೆಗೆ ದೀಪದ ಬತ್ತಿ ಹಾಕಿ ಹೊತ್ತಿಸಿ ಅದನ್ನು ನೀರಿನಲ್ಲಿ ತೇಲಿ ಬಿಡುತ್ತಿದ್ದರು. ಈ ಸಂದರ್ಭದಲ್ಲಿ ಗಂಡಿನ ಹೆಣ್ಣಿನ ಕುಟುಂಬದ ಸ್ತ್ರೀಯರು ಮಾತ್ರ ಇರುತ್ತಾರೆ. ಅಲ್ಲಿಂದ ನೀರು ತಂದು, ಹಾಲು ಬರುವ ಯಾವುದಾದರೊಂದು ಮರಕ್ಕೆ ಸುರಿಯುತ್ತಾರೆ. ನೀರಿಗೆ ಶರಣುಮಾಡಿ ಶುದ್ಧ ನೀರನ್ನು ತೆಗೆದುಕೊಂಡು ಬರುತ್ತಿದ್ದರು. ಆ ಸಂದರ್ಭದಲ್ಲಿ ಮಗು ಹಿಡಿದವರಿಗೆ ಕೈ ತೊಳೆಸಿ ಸೀರೆ, ರವಿಕೆ, ಸೀಗೆಪುಡಿ, ಅರಿಶಿಣ ಚೂರು, ಹಣ, ಎಣ್ಣೆ ಮತ್ತು ಪೂಜೆಯ ಸಾಮಾನುಗಳನ್ನು ಅವರಿಗೆ ನೀಡುತ್ತಿದ್ದರು. ಆನಂತರ ಹಾಡಿಯ ಯಾಜಮಾನಿಗೆ ಪೂಜೆಯ ಸಾಮಾನು, ಹಣ ಕೊಡುತ್ತಿದ್ದರು. ಬಾಣಂತಿಗೆ ಅರಿಶಿಣ, ಸೀಗೆಕಾಯಿ ಪುಡಿಯಿಂದ ಕೈ ತೊಳೆಸುತ್ತಿದ್ದರು. ಅಂದಿನ ಅಡುಗೆಗೆ ಶುದ್ಧೀಕರಿಸಿದ ಅಥವಾ ಹೊಸ ಪಾತ್ರೆಗಳನ್ನು ಬಳಸುತ್ತಾರೆ. ಅಂದು ಎಲ್ಲವೂ ಶುದ್ಧತೆಯಿಂದ ನಡೆಯಬೇಕು. ಹಡೆದಮ್ಮನ ಉಗುರು, ಮಗುವಿನ ಉಗುರನ್ನು ಕತ್ತರಿಸಿ ಒಂದು ಗುಂಡಿ ಮಾಡಿ ಅದರಲ್ಲಿ ಹಾಕಿ, ಹಡೆದಮ್ಮ ಮತ್ತು ಮಗುವಿಗೆ ಕೈ ತೊಳೆಸುತ್ತಾರೆ. ಆನಂತರ ಆ ಗುಂಡಿಯನ್ನು ಮುಚ್ಚುತ್ತಾರೆ. ಇದನ್ನು ಸೂತಕ ಕಳೆಯುವುದು ಎಂದು ಹೇಳುತ್ತಾರೆ.

ಮಗು ಹುಟ್ಟಿದಾಗ ತಾಯಿಯ ಹೊಟ್ಟೆಯಿಂದ ಬರುವ ಸತ್ತೆಯನ್ನು ಉಲ್ಟಾ ಅಥವಾ ಬೋರಲಾಗಿ ಮುಚ್ಚಿದ್ದರೆ ಇನ್ನುಮುಂದೆ ಆ ತಾಯಿಗೆ ಮಕ್ಕಳಾಗುವುದಿಲ್ಲ ಎನ್ನುತ್ತಾರೆ. ಇದಕ್ಕೆ ಮರಳುಕಟ್ಟೆ ಹಾಡಿಯ ವಿನೋದ್ ರವರ ತಾಯಿಯ ಉದಾಹರಣೆಯನ್ನು ಕೊಡುತ್ತಾರೆ. ಸತ್ತೆಯನ್ನು ಬೋರಲಾಗಿ ಮುಚ್ಚಿದ್ದರಿಂದ ವಿನೋದ್ ನಂತರ ಇವರಿಗೆ ಮಕ್ಕಳಾಗಲಿಲ್ಲ. ಎಂಬ ಮಾಹಿತಿಯನ್ನು ಶ್ರೀಮತಿ ಯಶೋಧ ರವರು ನೀಡುತ್ತಾರೆ.

**೩. ೬. ಋತುಮತಿ**



ಋತುಮತಿಯಾದ ಹೆಣ್ಣನ್ನು ಗುಮ್ಮದೊಳಗೆ ಕೂರಿಸಲು ಮಾವಿನ ಮರದ ಕೊಂಬೆಯನ್ನೇ ಮೊದಲು ಕಡಿಯಬೇಕು. ಮಾವಿನ ಮರದ ಸೊಪ್ಪನ್ನು ಗುಮ್ಮಕ್ಕೆ ಬಳಸುತ್ತಾರೆ. ಋತುವಾದ ಹೆಣ್ಣನ್ನು ಗುಮ್ಮದೊಳಗೆ ಬಿಡುವ ಮುನ್ನ ಸ್ನಾನ ಮಾಡಿಸುತ್ತಾರೆ. ಸ್ನಾನವಾದ ನಂತರವೇ ಸೊಪ್ಪನ್ನು ಕುಯ್ಯಬೇಕು. ಶುಭದ ಸಂಕೇತವಾಗಿ ಮಾವಿನ ಸೊಪ್ಪನ್ನು ಬಳಸುತ್ತಾರೆ. ಗುಮ್ಮ ನಿರ್ಮಿಸಲು

ಅಡಲೆ ಮರದ ಸೊಪ್ಪು, ಸಾಗಡೆ ಮರದ ಸೊಪ್ಪು, ತಡಸ್ ಮರದ ಸೊಪ್ಪು ಬಳಸುತ್ತಾರೆ. ಈ ಮರದಲ್ಲಿ ಎಲೆಗಳು ಉದುರುವುದಿಲ್ಲ. ಇದಕ್ಕೆ "ಹಾಳೆ ಉದುರದ ಮರ" ಎನ್ನುತ್ತಾರೆ. ಈ ಮರಗಳ ಸೊಪ್ಪನ್ನು ಹಸಿಯಾಗಿರುವಾಗ ಒಂದಕ್ಕೊಂದು ಸೇರಿಸಿ ಕಟ್ಟಿದರೆ ಒಂದು ವರ್ಷದ ವರೆಗೂ ಅವುಗಳ ಎಲೆ ಉದುರದೇ ಹಾಗೇ ಉಳಿದಿರುತ್ತದೆ. ಇದರಿಂದ ಗುಮ್ಮಕ್ಕೆ ಗಾಳಿ ಮಳೆಗಳಿಂದ ರಕ್ಷಣೆ ಸಿಗುತ್ತದೆ.

ಸ್ನಾನ ಮಾಡಿಸಿದ ನಂತರ ಅರ್ಧ ಭಾಗ ಮಾಡಿದ ಸೇಲೆ(ಸೀರೆ)ಯಿಂದ 'ಗಟ್ಟಿಗೆ' ಕಟ್ಟುತ್ತಾರೆ. ಗಟ್ಟಿಗೆ ಕಟ್ಟುವುದೆಂದರೆ ಆ ಸೇಲೆಯನ್ನು ಪೂರ್ಣ ದೇಹ ಮುಚ್ಚಿಕೊಳ್ಳುವ ಹಾಗೆ ಒಂದು ಸುತ್ತು ಸುತ್ತಿ ಎಲ ಭುಜದ ಮೇಲೆ ಗಂಟು ಹಾಕುತ್ತಾರೆ. ಇತ್ತೀಚೆಗೆ ಹೊಸ ಸೀರೆ ತಂದು ಈಗಿನ ಪದ್ಧತಿಯಂತೆ ಸೀರೆ ಕಟ್ಟುತ್ತಾರೆ.

ಮುಂಡಗೆ ಮಂದರಿ (ಸೇನೆ ಹುಲ್ಲಿನ ಚಾಪೆ)ಯನ್ನು ಹಾಸಿ ಗುಮ್ಮದೊಳಗೆ ಕೂರಿಸುತ್ತಾರೆ. ಗುಮ್ಮದೊಳಗೆ ಇರುವವರೆಗೂ ಅರಿಶಿಣ ನೀರಿನ ಸ್ನಾನವನ್ನೇ ಮಾಡಿಸುತ್ತಾರೆ. ಮುಖ ಚರ್ಮಕ್ಕೆ ಕಾಂತಿ ಬರುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಈಕೆಯನ್ನು ಹಾಡಿಯವರು ನೋಡಿದ ಕ್ಷಣ 'ಗುಮ್ಮದಮ್ಮಿ' ಎಂದು ಗುರುತಿಸಲು ನೆರವಾಗುತ್ತದೆ.

ಹೆಣ್ಣು ಮಕ್ಕಳು ದೊಡ್ಡವರಾದಾಗ ಹಾಡಿಯ ಯಜಮಾನಿಯು ನೀರನ್ನು ಕಾಯಿಸಿ ಸೂತಕದ ಅಮ್ಮಿಗೆ ಹಾಕುತ್ತಾಳೆ. ಅದನ್ನು ಕೆಟ್ಟ ನೀರು ಎಂದು ಕರೆಯುತ್ತಾರೆ, ಆಕೆಗೆ ಅರಿಶಿಣ, ಕೈಎಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಇದಕ್ಕೂ ಮೊದಲು ಹಾಡಿಯ ಯಜಮಾನನ ಅಪ್ಪಣೆ ಪಡೆದು ಹುಡುಗಿಯ ಸೋದರ ಮಾವ ಸೊಪ್ಪನ್ನು ಪ್ರತ್ಯೇಕ ಸೊಪ್ಪಿನಗುಡಿಸಲು (ಗುಮ್ಮ) ಕಟ್ಟುತ್ತಾನೆ. ನಂತರ ಹುಡುಗಿಗೆ ಸೀರೆ ರವಿಕೆ ತೊಡಿಸಿ ಅಲಂಕಾರ ಮಾಡಿ ಗುಮ್ಮದ ಒಳಗೆ ಇರಿಸುತ್ತಾರೆ. ಅವಳನ್ನು ಸೇನೆ ಹುಲ್ಲಿನ ಚಾಪೆ ಅಥವಾ ಮುಂಡರಿಗೆ ಚಾಪೆಯಲ್ಲಿ ಕೂರಿಸುತ್ತಾರೆ. ಅಕ್ಕಿಯ ಮೇಲೆ ತೆಂಗಿನಕಾಯಿ ಕನ್ನಡಿಯನ್ನಿಟ್ಟ ಕಳಸವನ್ನು ಇಡುತ್ತಿದ್ದರು. ಕಳಸದ ತಟ್ಟೆಯ ಜೊತೆಗೆ ಇನ್ನೂ ಐದು ತಟ್ಟೆಯನ್ನು ಇಡುತ್ತಿದ್ದರು ೧ನೇ ತಟ್ಟೆಯಲ್ಲಿ ಎಲೆ ಅಡಿಕೆ, ೨ನೇ ತಟ್ಟೆಯಲ್ಲಿ ಬಾಳೆಹಣ್ಣು, ೩ನೇ ತಟ್ಟೆಯಲ್ಲಿ ಅವಲಕ್ಕಿ ಕಡಲೆ, ೪ನೇ ತಟ್ಟೆಯಲ್ಲಿ ಅಕ್ಕಿ ಮತ್ತು ೫ನೇ ತಟ್ಟೆಯಲ್ಲಿ ತೆಂಗಿನಕಾಯಿ ಇಡುತ್ತಿದ್ದರು. ಯಜಮಾನಿಯ ಜೊತೆಗೆ ನಾಲ್ಕು ಜನ ಹೆಂಗಸರು ಕಳಸವನ್ನು ತೆಗೆದುಕೊಂಡು ಪೂರ್ವ (ಮೂಡ), ಪಶ್ಚಿಮ (ಮುಳುಗ), ಉತ್ತರ (ತೆಂಕ), ದಕ್ಷಿಣ (ಪಡ್ಗ) ದಿಕ್ಕುಗಳಿಗೆ ನಮಸ್ಕರಿಸಿ, ಎಲೆ ಅಡಿಕೆ, ತೆಂಗಿನಕಾಯಿ, ಬಾಳೆಹಣ್ಣು, ಅವುಲು (ಅವಲಕ್ಕಿ), ಕಡಲೆ ಇವುಗಳನ್ನು ಋತುಮಾತಿಯಾದ ಹೆಣ್ಣು ಮಗಳಿಗೆ ಮಂಡಿ ಭುಜ ಮತ್ತು ತಲೆಗೆ ಮುಟ್ಟಿಸಿ ಅವಳ ಸೆರಗಿಗೆ (ಸೇಲೆ ಸರಗ್) ಹಾಕುತ್ತಾರೆ. ನಂತರ ಗುಮ್ಮದೊಳಗೆ ಬಿಡುತ್ತಾರೆ. ಈರೀತಿ ಗುಮ್ಮದೊಳಗೆ ಇರಿಸಲಾಗುವ ಋತುಮತಿಯಾದ ಹೆಣ್ಣಿಗೆ "ಗುಮ್ಮದಮ್ಮಿ" ಎಂದೂ ಇವರ ಜೊತೆಗೆ ಜೊತೆಯಾಗಿರಿಸುವ ಚಿಕ್ಕ ಹುಡುಗಿಗೆ "ಬರಡಮ್ಮಿ" ಎಂದು ಕರೆಯುತ್ತಾರೆ.

ಗುಮ್ಮನಿಂದ ಹೊರಗೆ ಬರುವವರೆಗೂ ಅವಳಿಗೆ ಬೆಳಗ್ಗೆ ಸಾಯಂಕಾಲ ಅರಿಶಿಣ ನೀರಿನ ಸ್ನಾನ ಮಾಡಿಸುತ್ತಾರೆ. ಅವಳಿಗೆ ತಿನ್ನಲು ಉದ್ದಿನ ಬೇಳೆ, ಕೊಬ್ಬರಿ, ತೆಂಗಿನಕಾಯಿ, ಅನ್ನ ಕೊಡುತ್ತಾರೆ. ಋತುಮತಿಯಾದ ಹೆಣ್ಣು ಗಂಡಸರ ಮುಖ ನೋಡುವಂತಿಲ್ಲ. ಗಂಡಸರ ಮುಖ ನೋಡಿದರೆ ಗುಮ್ಮದಮ್ಮಿಗೆ ಗಂಡಸರ ಮುಖ ಬಂದು ಬಿಡುತ್ತದೆಂಬ ಭಾವನೆಯಿಂದ ಗಂಡಸರ ಮುಖ ನೋಡುವುದಿಲ್ಲ. ಗುಮ್ಮದ ಹೊರಗೆ ಹೋಗುವಾಗ ಹಸಿಮ್ಮೆ ಎಂದು ಕತ್ತಿ (ಚಾಕು) ತೆಗೆದುಕೊಂಡು ಹೋಗುತ್ತಾರೆ. ಇವರಿಬ್ಬರನ್ನು ಒಂದು ವರ್ಷದವರೆಗೂ ಗುಮ್ಮದಲ್ಲಿಯೇ ಕೂರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಅವಧಿ ಕಡಿಮೆಯಾಗಿದೆ. ಹೆಣ್ಣು ಮಗು ಋತುಮತಿಯಾದಾಗ ಹೊಳೆಯಲ್ಲಿ ಹನ್ನೆರಡು ಗುಂಬ ಮಾಡಿ ಅದಕ್ಕೆ ಪೂಜೆ ಸಲ್ಲಿಸಿ ಸೂತಕವನ್ನು ಕಳೆಯುತ್ತಾರೆ. ಇದರಲ್ಲಿ ಹಾಡಿಯ ಯಜಮಾನನ ಹೆಂಡತಿಯೇ ಮುಖ್ಯ ಪಾತ್ರ ವಹಿಸುತ್ತಾರೆ.

ಋತುಮತಿಯಾದ ಹೆಣ್ಣನ್ನು ಗುಮ್ಮದೊಳಗೆ ಕೂರಿಸುವ ಮುನ್ನ. ಸೋದರಮಾವ ಸೊಪ್ಪನ್ನು ಗುಡಿಸಲಿಗೆ ಇರಿಸಿ ಈಕೆಯನ್ನು ಗುಮ್ಮದೊಳಗೆ ಬಿಡುವಾಗ ಅಲ್ಲಿ ನೆರೆದ ಹಿರಿಯ ಹೆಂಗಸರು, ಗುಮ್ಮದಮ್ಮಿಯ ಸೋದರ ಮಾವನಿಗೆ ಈ ರೀತಿ ಹಾಡಿನ ಮೂಲಕ ಏನೇನು ತಂದೀದ್ದಿಯ ಎಂದು ಕೇಳುತ್ತಾರೆ. ಹಾಡು ಈ ರೀತಿ ಇದೆ.

ನೀರು ತಂದೆನೋ ತಮ್ಮ

ನೀರು ತಂದೆನೋ ॥

ಕಾವೇರಿ ಕಂದಮ್ಮನ ಓಸಗೇಗೆ

ಬಟ್ಟೆ ತಂದೆನೋ ತಮ್ಮ

ಬಟ್ಟೆ ತಂದೆನೋ ॥

ಕಾವೇರಿ ಕಂದಮ್ಮನ ಓಸಗೇಗೆ

ಡಾಬು ತಂದೆನೋ ತಮ್ಮ

ಡಾಬು ತಂದೆನೋ

ಕಾವೇರಿ ಕಂದಮ್ಮನ ನಡುವೀಗೆ

ರವಿಕೆ ತಂದೆನೋ ತಮ್ಮ

ರವಿಕೆ ತಂದೆನೋ

ಕಾವೇರಿ ಕಂದಮ್ಮನ ಓಸಗೇಗೆ

ಉಂಗುರ ತಂದೆನೋ ತಮ್ಮ

ಉಂಗುರ ತಂದೆನೋ

ಕಾವೇರಿ ಕಂದಮ್ಮನ ಬೆರಳಿಗೆ

ಕಾಲ್ ಚೈನು ತಂದೆನೋ ತಮ್ಮ

ಕಾಲ್ ಚೈನು ತಂದೆನೋ

ಕಾವೇರಿ ಕಂದಮ್ಮನ ಕಾಲೀಗೆ

ಬಳೆಗಳ ತಂದೆನೋ ತಮ್ಮ

ಬಳೆಗಳ ತಂದೆನೋ ॥

ಕಾವೇರಿ ಕಂದಮ್ಮನ ಕೈಯಲಿಗೆ (ಮಾ: ಸುಶೀಲ, ಗೌರಿ, ಗೋಣಿಗದ್ದೆ ಹಾಡಿ).

### ೩. ೭. ಸಾವು

ಜೇನುಕುರುಬರು ಗುಡಿಸಿಲಿನಲ್ಲಿ ಸಾವು ಆಗುವುದನ್ನು ಇಷ್ಟಪಡುವುದಿಲ್ಲ. ಏಕೆಂದರೆ ಸಾವು ಗುಡಿಸಿಲಿನೊಳಗೆ ಬರಬಾರದೆಂಬ ಪ್ರತೀತಿ ಇದೆ. ಜೇನು ಕುರುಬರು ಸಾವಿನಂಚಿನಲ್ಲಿರುವ ವ್ಯಕ್ತಿಯನ್ನು ಮನೆಯಿಂದ ಹೊರಗಿರುವ ಗುಡಿಸಿಲಿನಲ್ಲಿಡಲಾಗುತ್ತದೆ. ಮರಣದ ನಂತರ ಆ ಗುಡಿಸಲನ್ನು ಬೆಂಕಿಯಿಟ್ಟು ಸುಡಲಾಗುತ್ತದೆ. ಸಾಮಾನ್ಯವಾಗಿ ವಯಸ್ಸಾದವರು, ಕಾಯಿಲೆಯಿಂದ ಬಳಲುವವರನ್ನು ಗುಡಿಸಿಲಿನ ಹತ್ತಿರ ಪ್ರತ್ಯೇಕ ಗುಡಿಸಲು ಕಟ್ಟಿ ಅದರೊಳಗೆ ಅವರನ್ನಿರಿಸಿ ಶುಶ್ರೂಷೆ ಮಾಡುತ್ತಾರೆ. ಸತ್ತ ವ್ಯಕ್ತಿಗಾಗಿ ನಿರ್ಮಿಸಿದ ಗುಡಿಸಿಲನ್ನು ಸುಟ್ಟುಹಾಕಲಾಗುತ್ತದೆ. ಗಂಡ ಸತ್ತರೆ ಹೆಂಡತಿಯನ್ನು ಗಂಡನ ಹೆಣದ ಜೊತೆಯಲ್ಲಿ ಕೂರಿಸಿ ಆಕೆಗೆ ಕೊನೆಯದಾಗಿ ಮಡಿಲು ತುಂಬುವ ಶಾಸ್ತ್ರವನ್ನು ಮಾಡುತ್ತಾರೆ. ಹೆಂಡತಿ ಇಲ್ಲದಿದ್ದರೆ ಅಥವಾ ಸತ್ತ ಮನುಷ್ಯ ಮದುವೆ ಅಗಿಲ್ಲದಿದ್ದರೆ ಹೆಣದ ಪಕ್ಕಕ್ಕೆ ಹೆಣ್ಣಿನ ಆಕೃತಿಯ ಜೇಡಿ ಮಣ್ಣಿನ ಗೊಂಬೆಗೆ ಅರಿಶಿಣ ಹಚ್ಚಿದ ಗೊಂಬೆಯನ್ನು ಕೂರಿಸಿ ಗೊಂಬೆ ಮತ್ತು ಸತ್ತ ವ್ಯಕ್ತಿಗೆ ಪೂಜೆ ಮಾಡುತ್ತಾರೆ. ಇದರ ಉದ್ದೇಶವೆಂದರೆ ಮದುವೆಯಾದ ವ್ಯಕ್ತಿಗೆ ಜೇನುಕುರುಬರಲ್ಲಿ ಹೆಚ್ಚು ಪ್ರಾಮುಖ್ಯತೆ ನೀಡುತ್ತಾರೆ.

ಸತ್ತ ನಂತರದ ಸೂತಕ ೧೧ ದಿನಗಳವರೆಗೂ ಇರುತ್ತದೆ. ೩ ಅಥವಾ ೫ನೇ ದಿನಹಾಲು ತುಪ್ಪ ಬಿಡುತ್ತಾರೆ. ಸತ್ತ ವ್ಯಕ್ತಿಯನ್ನು ಸುಟ್ಟ ಜಾಗದಲ್ಲಿ ಹಾಲು, ತುಪ್ಪ, ಎಲೆ, ಅಡಿಕೆ, ಹಣ್ಣು, ಕಾಯಿ, ಮಾಂಸ, ಮದ್ಯ, ಬೀಡಿ, ಎಡೆ ಇಟ್ಟು ಪೂಜಿಸುತ್ತಾರೆ. ಸತ್ತವರನ್ನು ಸುಟ್ಟ ಅಥವಾ ಹೂಳಿದ ಜಾಗದಲ್ಲಿ ಗಿಡ ನೆಡುತ್ತಾರೆ. ಇಲ್ಲದೆ ಇದ್ದರೆ ಯಾವುದಾದರೂ ಮರದ ಕೆಳಗೆ ಸುಡುತ್ತಾರೆ ಅಥವಾ ಹೂಳುತ್ತಾರೆ. ಆ ಮರದ ಜಾಗವನ್ನು ನೆನಪಿಟ್ಟು ಕೊಂಡಿರುತ್ತಾರೆ.

### ೩. ೭. ೧. ಸೂತಕ

ಸತ್ತ ವ್ಯಕ್ತಿಯ ಮನೆಯನ್ನು ಸೂತಕದ ಮನೆ ಎಂದು ಕರೆಯಲಾಗುತ್ತದೆ. ಸೂತಕದ ಮನೆಯವರು ಸೂತಕ ಕಳೆದುಕೊಳ್ಳುವವರೆಗೂ ಯಾವುದೇ ಆಚರಣೆ ಮಾಡುವಂತಿಲ್ಲ ಮತ್ತು ಭಾಗವಹಿಸುವಂತಿಲ್ಲ. ಹಾಗೆಯೇ ಸಿಹಿ ಪದಾರ್ಥ, ಮಾಂಸದ ಅಡುಗೆಗಳನ್ನು ಮಾಡುವಂತಿಲ್ಲ. ಬೇರೆಯವರ ಮನೆಗೆ ಹೋಗುವಂತಿಲ್ಲ. ಬೇರೆಯವರೂ ಈ ಮನೆಗೆ ಬರುವುದಿಲ್ಲ. ಸಾಮಾನ್ಯವಾಗಿ ಹನ್ನೊಂದನೇ ದಿನಕ್ಕೆ ಸೂತಕ ಕಳೆದುಕೊಳ್ಳುವ ಆಚರಣೆ ಮಾಡುತ್ತಾರೆ. ಸತ್ತ ಹನ್ನೊಂದನೇ ದಿನದ ಸೂತಕ ಆಚರಣೆಯಲ್ಲಿ ಸತ್ತ ವ್ಯಕ್ತಿಯ ಗುಡಿಸಲಿನ ಮೂಲೆಯಲ್ಲಿ ಅವನಿಗೆ ಇಷ್ಟವಾದ ಆಹಾರ ಪದಾರ್ಥಗಳೊಂದಿಗೆ ಗೆಡ್ಡೆಗೆಣಸು, ಸೊಪ್ಪು, ಅಣಬೆ, ಮಾಂಸಾಹಾರ, ನೀರು ಬೀಡಿಗಳನ್ನಿರಿಸಿ ಅವರ ಆತ್ಮವನ್ನು ಸಂತೃಪ್ತಿಗೊಳಿಸುವ ಆಚರಣೆಯನ್ನು ಕೈಗೊಳ್ಳುತ್ತಾರೆ. ಅಂದು ರಾತ್ರಿ ಇರಿಸಿದ ನೀರು ಖಾಲಿಯಾಗಿರುತ್ತದೆ. ಹಾಗೆಯೇ ಇರಿಸಿದ ಬೀಡಿಗಳು ಸುಟ್ಟು ಹೋಗಿರುತ್ತವೆ. ಹೀಗಾದಾಗ ಸತ್ತ ವ್ಯಕ್ತಿಯ ಆತ್ಮದಿಂದ ಯಾವುದೇ ತೊಂದರೆಗಳು ಎದುರಾಗುವುದಿಲ್ಲ ಎಂದು ಭಾವಿಸಲಾಗುತ್ತದೆ.

### ೩. ೭. ೨. ಸ್ವರ್ಗ ನರಕದ ಪರಿಕಲ್ಪನೆ

ಹಾಡಿಯಲ್ಲಿ ಹಿರಿಯರು ಹೇಳುವಂತೆ ಒಳ್ಳೆಯ ಕೆಲಸ ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ. ಯಾರು ತಮ್ಮ ಜೀವಮಾನದಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೆಯೋ ಅವರು ಸ್ವರ್ಗಕ್ಕೆ ಹೋಗುತ್ತಾರೆ ಎಂದು ಹೇಳುತ್ತಾರೆ. ಕೆಟ್ಟ ಕೆಲಸ ಮಾಡಿದವರು ನರಕಕ್ಕೆ ಹೋಗುತ್ತಾರೆ. ಎಂದು ಹೇಳುತ್ತಾರೆ. ಈ ಕಲ್ಪನೆ ಹೆಚ್ಚು ಕಡಿಮೆ ಎಲ್ಲರೂ ಒಳ್ಳೆಯ ಉತ್ತಮವಾದ ಕೆಲಸಗಳನ್ನು ರೂಢಿಸಿಕೊಳ್ಳಲಿ ಎಂಬುದಾಗಿರಬಹುದು. ಆದ್ದರಿಂದ ಉತ್ತಮ ಸಮಾಜದ ನಿರ್ಮಾಣಕ್ಕೆ ಈ ರೀತಿಯ ಸಲಹೆಗಳನ್ನು ನೀಡುತ್ತಿದ್ದರು ಎಂದು ಭಾವಿಸಬಹುದು. ಸತ್ತವರ ಆತ್ಮ ಯಾವುದಾದರೂ ದೈವಶಕ್ತಿಯಾಗಿ ಮಾರ್ಪಟ್ಟು ನಮ್ಮ ಕಷ್ಟ ಸುಖಗಳನ್ನು ದೂರದಿಂದಲೇ ನೋಡುತ್ತಿರುತ್ತಾರೆ ಎಂದು ಭಾವಿಸುವರು.

### ೩. ೭. ೩. ನೆರಳು ಕರೆಯುವ ಆಚರಣೆ

ಜೇನುಕುರುಬರಲ್ಲಿ ನೆರಳು ಕರೆಯುವ ಆಚರಣೆ ಒಂದು ವಿಶಿಷ್ಟ ಆಚರಣೆಯಾಗಿದೆ. ಇದೊಂದು ದೀರ್ಘ ಪ್ರಕ್ರಿಯೆ. ಕುಟುಂಬದಲ್ಲಿ ಯಾವುದೇ ತೊಂದರೆ ಕಾಣಿಸಿದರೆ ಸತ್ತ ಕುಟುಂಬದ ಸದಸ್ಯನ ಆತ್ಮವನ್ನು ಆಹ್ವಾನಿಸಿ ಪರಿಹಾರೋಪಾಯವನ್ನು ಕಂಡುಕೊಳ್ಳುವ ಆಚರಣೆಯೇ ನೆರಳು ಕರೆಯುವ ಆಚರಣೆಯಾಗಿದೆ. ಮನುಷ್ಯ ಸತ್ತ ಮೇಲೆ ಅವನ ಆತ್ಮವು ದೇಹವಲ್ಲದೇ ನೆರಳಿನ ರೂಪದಲ್ಲಿರುತ್ತದೆ. ಎಂಬ ನಂಬಿಕೆ ಜೇನುಕುರುಬರಲ್ಲಿದೆ. ವ್ಯಕ್ತಿ ಸತ್ತು ಹದಿನಾಲ್ಕನೇ ದಿನದಿಂದ ನಲವತ್ತೊಂದು ದಿನಗಳೊಳಗೆ ಬುಂಡೆ ಕರೆಯುವ ಮೂಲಕ ಅಲೆದಾಡುವ ನೆರಳಿನ ರೂಪದ ಆತ್ಮವನ್ನು ಆಹ್ವಾನಿಸುತ್ತಾರೆ. ಹೆಂಡತಿ, ಮಗ, ತಾಯಿ, ಸ್ನೇಹಿತ ಹೀಗೆ ಯಾರಾದರೊಬ್ಬರ ಮೈಯೊಳಗೆ

ನೆರಳು ಕಾಣಿಸಿಕೊಳ್ಳುತ್ತದೆ. ಹೀಗೆ ಮೈದುಂಬಿ ಬಂದ ನೆರಳು ತನ್ನ ಇಷ್ಟ, ಕಷ್ಟ ನಷ್ಟಗಳನ್ನೆಲ್ಲಾ ಹೇಳಿಕೊಳ್ಳುತ್ತದೆ.

ಇದೊಂದು ಸತ್ತ ಆತ್ಮವನ್ನು ತೃಪ್ತಿಗಳಿಸುವ ಕ್ರಿಯೆ. ಈ ರೀತಿಯ ಆಚರಣೆ ಬೇರೆ ಬುಡಕಟ್ಟುಗಳಲ್ಲಿಲ್ಲವಾದರೂ ಅವರು ಆತ್ಮವನ್ನು ತೃಪ್ತಿಗೊಳಿಸಲು ಮತ್ತೊಂದು ಆಚರಣೆ ನಡೆಸುತ್ತಾರೆ. ಈ ಕ್ರಿಯೆ ಬುಡಕಟ್ಟಿನಿಂದ ಬುಡಕಟ್ಟಿಗೆ ಭಿನ್ನ ಭಿನ್ನ ರೂಪದಲ್ಲಿರುವುದನ್ನು ಕಾಣುತ್ತೇವೆ (ಮಾ : ಸೋಮಯ್ಯ ಮತ್ತು ಆಶಾ ನೇರಳಕುಪ್ಪೆ ಹಾಡಿ).

### ೩. ೮. ವಾರ್ಷಿಕಾವರ್ತನ ಆಚರಣೆಗಳು

ಜೇನುಕುರುಬರಿಗೆ ವರ್ಷದ ಮೊದಲ ತಿಂಗಳು ಎಂದರೆ ಮಾರ್ಚ್/ ಏಪ್ರಿಲ್ ಯುಗಾದಿ ಹಬ್ಬದ ತಿಂಗಳು. ವರ್ಷದ ಮೊದಲ ಹಬ್ಬವೇ ಯುಗಾದಿ ಹಬ್ಬವಾಗಿರುತ್ತದೆ. ಯುಗಾದಿ ನಂತರ ಕೊಂತಿ ಪೂಜೆ, ಕುದುರೆಹಬ್ಬ, ಬಿಸುಹಬ್ಬ, ಗೌರಿಹಬ್ಬವನ್ನು ಹಿಂದೆ ಆಚರಿಸುತ್ತಿದ್ದರು. ಇತ್ತೀಚೆಗೆ ಈ ಹಬ್ಬಗಳ ಆಚರಣೆಯ ಜೊತೆಗೆ ದೀಪಾವಳಿ, ಕಾವೇರಿ ಸಂಕ್ರಮಣ, ಹುತ್ತರಿ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

### ೩. ೮. ೧. ಯುಗಾದಿ

ಹಾಡಿಯಲ್ಲಿ ಯಜಮಾನನ ಸಮ್ಮುಖದಲ್ಲಿ ಯುಗಾದಿ ಹಬ್ಬ ಮಾಡಬೇಕೆಂಬ ವಿಷಯವನ್ನು ನಿರ್ಧರಿಸಿಕೊಳ್ಳುತ್ತಾರೆ. ಹಾಡಿಯ ಎಲ್ಲರೂ ಹೊಸ ಮಡಿಕೆ ತಂದು ಮನೆ ಸ್ವಚ್ಛಗೊಳಿಸುತ್ತಾರೆ. ದೇವರ ಮನೆಯನ್ನು ಸ್ವಚ್ಛಗೊಳಿಸಿಕೊಂಡು, ಹೊಸ ತೋಡನ್ನು ತೆಗೆದು ನೀರನ್ನು ತಂದು ದೇವರ ಪೂಜೆ ಮತ್ತು ಹೊಸ ಹಬ್ಬದ ಅಡುಗೆಗೆ ಬಳಸಿಕೊಳ್ಳುತ್ತಾರೆ. ದೇವರ ಪೂಜೆಗೆ ಅಕ್ಕಿಪಾಯಸ, ಎಲೆ, ಅಡಿಕೆ, ಹೊಗೆಸೊಪ್ಪು, ಬೀಡಿ, ಬಂಗಿಸೊಪ್ಪು, ಎಡೆಗೆ ಇಟ್ಟು ಅಜ್ಜಯ್ಯ ಮತ್ತು ಅಜ್ಜಮ್ಮನ ಪೂಜೆ ಮಾಡುತ್ತಾರೆ. ಪೂಜೆಗೆ ಅಜ್ಜಮ್ಮ ಅಜ್ಜಯ್ಯಗೋಸ್ಕರ ಎಲೆ, ಅಡಿಕೆ, ಹೊಗೆಸೊಪ್ಪು, ಸುಣ್ಣ ಇಡುತ್ತಾರೆ. ಆ ವರ್ಷ ಬೆಳೆದ ಕುಂಬಳಕಾಯಿ, ಸೋರೆಕಾಯಿ, ಬೂದಿಕಾಯಿ, ಗೆಣಸುಗಳನ್ನು ದೇವರ ಮನೆಯಲ್ಲಿ ದೇವರ ಮುಂದೆ ಇಟ್ಟು ಪೂಜಿಸುತ್ತಾರೆ.

ಪೂಜೆಯ ನಂತರ ತಮಗೆ ಬಳಸಿಕೊಂಡು ಉಳಿದ ತರಕಾರಿಯನ್ನು ಹಾಡಿಯ ಇತರರಿಗೆ ಹಂಚುತ್ತಾರೆ. ತರಕಾರಿಯನ್ನು ಮೊದಲ ಫಲವಾಗಿದ್ದರೆ ಅದನ್ನು 'ತಮ್ಮಡಿ' ಕೈಯಿಂದ ಕುಯ್ಯಿಸಿ ಹಾಡಿಯವರಿಗೆ ಹಂಚುತ್ತಾರೆ. ಇವರು ದೇವರ ಪೂಜೆಗೆ ಬಳಸುವ ನೀರಿಗೆ ತೋಡನ್ನು ತೋಡುವ ಮುನ್ನ ನೀರಿರುವ ಜಾಗದಲ್ಲಿ ಅರವತ್ತು ಹೆಜ್ಜೆಗಳು ಕಾಲಿನಿಂದ ಅಳತೆ ಮಾಡಿ ತೋಡು ನಿರ್ಮಿಸಿ ಅಲ್ಲಿ ಸಗಣಿಯಿಂದ ಸಾರಿಸಿ ಬಾಳೆಹಣ್ಣು, ತೆಂಗಿನಕಾಯಿ, ಜೊತೆಗೆ ಐದು ಪೈಸೆ, ಹತ್ತು ಪೈಸೆ, ಹದಿನೈದು ಪೈಸೆ ಅಥವಾ ಇಪ್ಪತ್ತು ಪೈಸೆ ಅವರ ಶಕ್ತಿಗೆ ಅನುಗುಣವಾಗಿ ಮುಡುಪಿಟ್ಟು, ಪೂಜೆ ಮಾಡಿ ಆನಂತರ

ಹೊಸ ನೀರನ್ನು ಪಡೆಯುತ್ತಾರೆ. ಆನಂತರ ಗುಡಸಲಿಗೆ ನೀರು ತಂದು ಪೂಜೆ ಮಾಡಿ, ಅಡುಗೆ ಮಾಡಿ ಊಟ ಮಾಡುತ್ತಾರೆ.

ಹಬ್ಬದ ಊಟವಾದ ನಂತರ ಮಕ್ಕಳು ಉಯ್ಯಾಲೆ ಆಡುತ್ತಾರೆ. ಹಾಡಿಗಳಲ್ಲಿ ಪ್ರತಿಯೊಂದು ಗುಡಿಸಲನ್ನು ಮಾವಿನಸೊಪ್ಪಿನ ತೋರಣದಿಂದ ಸಿಂಗರಿಸುತ್ತಾರೆ. ಹೊಸ ಬೇವಿನ ಸೊಪ್ಪಿನ ಹೂವುಗಳನ್ನು ತಂದು ಅದಕ್ಕೆ ಬೆಲ್ಲ ಸೇರಿಸಿ ದೇವರಿಗೆ ಎಡೆ ಇಟ್ಟು ಆನಂತರ ಹಾಡಿಯವರಿಗೆಲ್ಲಾ ಹಂಚುತ್ತಾರೆ. ಈ ವರ್ಷದ ಪ್ರಾರಂಭ ಯುಗಾದಿ ಹಬ್ಬದಿಂದ ಆಗಿದೆ. ಈ ವರ್ಷ ಸುಖ - ದುಃಖಗಳು ಸಮಾನವಾಗಿ ಬರಲಿ ಎಂದು ಕೊಂಡು ಬೇವು, ಬೆಲ್ಲ ತಿನ್ನುತ್ತಾರೆ. ಅಂದಿನ ದಿನವನ್ನು ಎಲ್ಲರೂ ಸಂತೋಷದಿಂದ ಕಳೆಯುತ್ತಾರೆ.

### ೩. ೮. ೨. ಬಿಸುಹಬ್ಬ

ಇದೊಂದು ಸಮುದಾಯಿಕ ಹಬ್ಬ, ಏಪ್ರಿಲ್‌ನಲ್ಲಿ ನಡೆಯುತ್ತದೆ. ಏಪ್ರಿಲ್ ಇಂತಹ ದಿನದಿಂದ ಸುರುಮಾಡಬೇಕೆಂದು ಹಾಡಿಯ ಯಾಜಮಾನನ ಸಮ್ಮತಿಯ ಮೇರೆಗೆ ದಿನವನ್ನು ನಿರ್ಧರಿಸುತ್ತಾರೆ. ಮೊದಲು ಕೇರಳದ ತಿರುನೆಲ್ಲಿಯಲ್ಲಿ ಈ ಹಬ್ಬ ಆಚರಣೆಯಾಗುತ್ತದೆ. ಅಲ್ಲಿ ಪ್ರಾರಂಭವಾದ ಮೇಲೆ ಕರ್ನಾಟಕದ ಕೊಡಗಿನಲ್ಲಿ ಮಾಡಬೇಕಾಗಿರುತ್ತದೆ. ಏಕೆಂದರೆ ಮೊದಲು ಈ ಹಬ್ಬ ಹುಟ್ಟಿದ್ದು ಕೇರಳದಲ್ಲಿ ಆದ್ದರಿಂದ ಅವರು ಮೊದಲು ಪ್ರಾರಂಭಿಸಿದ ನಂತರ ಇಲ್ಲಿ ಆಚರಣೆಯಾಗುತ್ತದೆ. 'ದೇವೆಸಪ್ಪ' ದೇವರ ಹೆಸರಿನಲ್ಲಿ ಈ ಹಬ್ಬ ಆಚರಣೆಯಾಗುತ್ತದೆ.

ಯಜಮಾನನ ಮನೆಯಿಂದ ಅಕ್ಕಿ, ಬಾಳೆಹಣ್ಣು, ತೆಂಗಿನಕಾಯಿ, ಅರಿಶಿಣ, ಕುಂಕುಮ, ಹೂವು, ಸಾಂಮ್ರಾಣಿ ಮತ್ತು ಹತ್ತು ರೂಪಾಯಿ ಇಟ್ಟು ಯಜಮಾನನ ಮನೆಗೆ ಕೊಡುತ್ತಾರೆ. ಯಜಮಾನನ ಹೆಂಡತಿ ಅದನ್ನು ಪೂಜೆ ಮಾಡಿ ಕೊಡುತ್ತಾಳೆ. ಹಾಗೂ ಯಜಮಾನ ಕಡ್ಡಿ ಕೋಲಾಟಕ್ಕೆ ಬಳಸುವಂತಹವನ್ನು ಕಡಿದು ಕೊಡುತ್ತಾನೆ. ಕೋಲಾಟ ಆಡುವ ಗುಂಪು ಮೊದಲೇ ನಿರ್ಧರಿತವಾಗುತ್ತದೆ. ಈ ಗುಂಪಿನ ಸದಸ್ಯರು ಮತ್ತೆ ಅದನ್ನು ದೇವಸ್ಥಾನಕ್ಕೆ ಕೊಟ್ಟು ಪೂಜೆ ಮಾಡಿಸುತ್ತಾರೆ. ಪೂಜೆಯು ಆದ ನಂತರ ಕೋಲಾಟದ ಕಡ್ಡಿಗಳನ್ನು ಪೂಜಾರಿಯಿಂದ ವಾಪಸಿ ಪಡೆದು ದೇವಾಲಯದ ಮುಂದೆ ಕೋಲಾಟ ಹಾಕುತ್ತಾರೆ. ಆನಂತರ ಯಜಮಾನನ ಮನೆಯ ಮುಂದೆ ಕೋಲಾಟ ಆಡುತ್ತಾರೆ. ಆ ಮೇಲೆ ಯಾವ ಯಾವ ಹಾಡಿಗಳಿಗೆ ಯಾವ ದಿನ ಹೋಗಬೇಕೆಂದು ಗುಂಪಿನ ಸದಸ್ಯರೆಲ್ಲರೂ ತಿರ್ಮಾನಿಸಿ ಕೊಳ್ಳುತ್ತಾರೆ. ಕೋಲಾಟ ಹಾಡುತ್ತಾ, ಭಿಕ್ಷೆ ಬೇಡುತ್ತಾ, ಒಂದು ವಾರ ಹೀಗೆ ಕೋಲಾಟ ಹಾಕುತ್ತಾ, ಭಿಕ್ಷೆ ಬೇಡುತ್ತಾ ಬಂದ ಅಕ್ಕಿ, ಹಣವನ್ನು ಸಂಗ್ರಹಿಸಿಕೊಳ್ಳುತ್ತಾರೆ. ಸೂಳಿ, ಕೊಡಂಗಿ ಇಬ್ಬರಿಗೂ ಬಂದ ಹಣ ಅವರೇ ಇಟ್ಟುಕೊಳ್ಳುತ್ತಾರೆ. ಉಳಿದ ಹಣ ಅಕ್ಕಿಯನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಭಿಕ್ಷೆ ಬೇಡುವ ಸಂದರ್ಭದಲ್ಲಿ ಹಾಡನ್ನು ಹಾಡುತ್ತಾರೆ.

ನಾವು ದೇಪಿಸೊಪ್ಪನು ಇಳುಸವರುದೂರಿದೂರಿ ॥

ನಾವು ಇದು ಸಾವಿರ ಮನೆಗೆ ಸಂತೋಷ॥

ನಾವು ದೇವರ ಮನೆಯ ಬೇಡುವೆವು॥

ನಾವು ಕಾಡು ಅರಸರ ಮಕ್ಕಳಯ್ಯ॥

ನಾವು ಸಾವಿರ ಮನೆಯ ಬೇಡುವೆವು॥

ನಾವು ಒಂದು ಮನೆಯು ಹೊತ್ತಿಲ್ಲ॥

ದನ ಕರು ಹೆಚ್ಚಾಲಿ॥

ದನ ಕರು ಮರಿ ಹೆಚ್ಚಾಲಿ॥

ನಿನ್ನ ದನಕರ ಹೆಚ್ಚಾಲಿ॥

ಇನ್ನೂ ನಾಲ್ಕು ಮನೆಯ ಬೇಡುವರು॥

ಇದು ಸಾವಿರ ಮನೆಗೆ ಸಂತೋಷ॥

ನಿನ್ನ ಆಳು ಕಾಳು ಹೆಚ್ಚಾಲಿ॥

ಇದು ಒಂದು ಮನೆಗೆ ಹೊತ್ತಿಲ್ಲ॥

ಅನ್ನ ದಾನ ನಾನಲ್ಲ॥

ಅನ್ನ ದಾನ ದಾನವ್ವ ॥

ಹನ್ನೆರಡು ತರಹದ ಕೋಲಾಟವನ್ನು ಆಡುತ್ತಾರೆ. ಊರಿಗೆ ಮರಳಿದ ನಂತರ ಎಲ್ಲರೂ ಹಣ, ಅಕ್ಕಿ ಹಂಚಿಕೊಂಡ ಮೇಲೆ ತಮ್ಮ ಪಾಲಿನ ಅಕ್ಕಿಯಿಂದ ಅವರವರ ಮನೆಯಲ್ಲಿ ಅನ್ನ, ಪಾಯಸ ಮಾಡುತ್ತಾರೆ. ಕೊನೆ ದಿನ ಸಂಜೆ ಆರು ಗಂಟೆಗೆ ಮತ್ತೊಮ್ಮೆ ಕೋಲನ್ನು ಹೊಡೆಯುತ್ತಾ, ಹಾಡು ಆಡುತ್ತಾ, ಗೋಣಿಮರ ಅಥವಾ ಹೊನ್ನಿಮರದ ಬುಡಕ್ಕೆ ಕೋಲನ್ನು ಇಟ್ಟು ಪೂಜೆ ಸಲ್ಲಿಸುತ್ತಾರೆ. ಕೋಡಂಗಿ ಮತ್ತು ಸೂಳೆಯ ತಲೆಗೆ ಬಿದಿರಿನ ಕೊಂಬುಗಳನ್ನು ಇಟ್ಟಿರುತ್ತಾರೆ. ಅದಕ್ಕೆ ಸಣ್ಣ ಸುರಲು ಬಳ್ಳಿ ಹಂಬು, ಕಕ್ಕೆಹೂವು, ಬಿದಿರಿನ ಕೊಂಬುಗಳನ್ನು ತೆಗೆದು ಮರದ ಬುಡಕ್ಕೆ ಇಡುತ್ತಾರೆ. ಸೂಳೆ ಕೊಡಂಗಿಗೆ, ಗಂಡಸಿಗೆ ಹೆಣ್ಣಿನ ವೇಷ ಹಾಕಿರುತ್ತಾರೆ. ಉಳಿದ ಗಂಡಸರು ಗಂಡಸರ ಉಡುಪಿನಲ್ಲೇ ಇರುತ್ತಾರೆ. ಆ ಮರದ ಬುಡಕ್ಕೆ ಪೂಜೆ ಸಲ್ಲಿಸಿ ಹಾಡಿಗೆ ಮರಳುತ್ತಾರೆ. ಈ ಹಬ್ಬದ ವಿಶೇಷವೆಂದರೆ ಇವರು ಭಿಕ್ಷೆಯಲ್ಲಿ ಬಂದ ಹಣವನ್ನು ಹಂಚಿಕೊಳ್ಳುತ್ತಾರೆ.

ಈ ರೀತಿಯಾಗಿ ಜಿಪು ಹಬ್ಬಕ್ಕೆ ತನ್ನದೇ ಆದ ಮಹತ್ವ ಇದೆ. ಪ್ರತಿ ವರ್ಷವೂ ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಈ ಹಬ್ಬದಲ್ಲಿ ಯಾರ ಮನಸ್ಸಿಗೂ ನೋವಾಗದಂತೆ ನಡೆದು ಕೊಳ್ಳುತ್ತಾರೆ. ಎಲ್ಲರೂ ಕೋಲಾಟ ಹಾಕುವವರನ್ನು ಪ್ರೋತ್ಸಾಹಿಸುತ್ತಾರೆ ಹುರಿದುಂಜಿಸುತ್ತಾರೆ. ಅವರ ಹಬ್ಬದ ವೈಶಿಷ್ಟವನ್ನು ಈಗಲೂ ಉಳಿಸಿಕೊಂಡಿದ್ದಾರೆ.

## ೩. ೮. ೩. ಗೌರಿ ಹಬ್ಬ

ಇದು ಆಗಸ್ಟ್ – ಸೆಪ್ಟಂಬರ್ ತಿಂಗಳಿನಲ್ಲಿ ಬರುವ ಹಬ್ಬ. ಈ ಹಬ್ಬವನ್ನು ಜೇನುಕುರುಬರು ಹಳೆಯ ತಲೆಮಾರಿನಿಂದಲೂ ನಡೆಸಿಕೊಂಡು ಬಂದಿದ್ದಾರೆ. ಈಗಲೂ ಅದರ ಮಹತ್ವವನ್ನು ಉಳಿಸಿಕೊಂಡಿದ್ದಾರೆ. ಗುಡಿಸಲನ್ನು ಸಗಣಿಯಿಂದ ಸಾರಿಸಿ, ಗೋಮೂತ್ರವನ್ನು ಗುಡಿಸಲಿಗೆ ಸಿಂಪಡಿಸಿ ದೇವರ ಮನೆಗೆ ಸಿಂಪಡಿಸಿ ಸ್ನಾನ ಮಾಡುತ್ತಾರೆ. ಹೊಸಮಡಿಕೆಯನ್ನು ತಂದು ಪೂಜೆ ಮಾಡುತ್ತಾರೆ. ಒಲೆಗೆ ಪೂಜೆ ಮಾಡಿ. ಹೊಸ ಮಡಿಕೆಗಳನ್ನು ಒಲೆಯ ಮೇಲಿಟ್ಟು ಪೂಜಿಸಿ ಆನಂತರ ಹೊಸ ಅಡುಗೆಯನ್ನು ಮಾಡುತ್ತಾರೆ. ಹೊಸ ಬಿದಿರಿನ ಮೊರದಲ್ಲಿ ತುಂಬೆಸೊಪ್ಪು ಹಾಡಿಯಲ್ಲಿ ಬೆಳೆದ ತರಕಾರಿಗಳನ್ನು ಇಡುತ್ತಾರೆ.

ಈ ಹಬ್ಬ ವಿಶೇಷ ಅಡುಗೆಯೆಂದರೆ ತೌಂಡು ರೊಟ್ಟಿಯನ್ನು ಮಾಡುತ್ತಾರೆ. ಭತ್ತ ಕುಟ್ಟಿ ಅಕ್ಕಿಯನ್ನು ಬೇರ್ಪಡಿಸಿದಾಗ ಹೊಟ್ಟು ಪ್ರತ್ಯೇಕವಾಗಿ, ಅಕ್ಕಿ ಬೇರೆಯಾಗುತ್ತದೆ. ಇನ್ನೂ ಸ್ವಲ್ಪ ಸ್ವಲ್ಪ ಹೊಟ್ಟು ಅಕ್ಕಿಯಲ್ಲೆ ಉಳಿದಿರುತ್ತದೆ. ಮತ್ತೆ ಆ ತೌಡನ್ನು ಚೆನ್ನಾಗಿ ಕುಟ್ಟಿದಾಗ ಅಕ್ಕಿ ಶುದ್ದಗೊಂಡು ತೌಡು ಪ್ರತ್ಯೇಕವಾಗುತ್ತದೆ. ಈ ತೌಡಿನಲ್ಲಿ ಅಕ್ಕಿ ಅಲ್ಪ ಸ್ವಲ್ಪ ಉಳಿದಿರುತ್ತದೆ. ಈ ತೌಡನ್ನು ಹದಗೊಳಿಸಿ ರೊಟ್ಟಿ ಮಾಡುತ್ತಾರೆ. ಇದರ ಜೊತೆಗೆ ನಾರಾಗಾಸು, ನೂರೆ ಗಾಸು, ನಾರಾ ಎಕ್ಕಗಾಸು, ಕಾಲ್ಗಾಸು, ನೆರಿಗೆಗಾಸು ಹಬ್ಬದ ಸಂದರ್ಭದಲ್ಲಿ ಇವುಗಳನ್ನು ಇಡುತ್ತಾರೆ. ಇಂತಹದ್ದೇ ಗೆಣಸು ಪೂಜೆಗೆ ಇಡಬೇಕೆಂದು ಕಡ್ಡಾಯವಲ್ಲ ಸಿಕ್ಕಂತಹ ಎಲ್ಲಾ ತರಹದ್ದನ್ನು ಇಡುತ್ತಾರೆ. ಅನ್ನ, ಪಾಯಸ ಮಾಡಿ ಊಟ ಮಾಡುತ್ತಾರೆ. ಗೌರಿಯನ್ನು ಕೂರಿಸಲು ದೇವಿಯ ಹೆಸರಿನಲ್ಲಿ ಹೊಸ ತರಕಾರಿ, ಗೆಣಸನ್ನು ಇಟ್ಟು ಪೂಜಿಸುತ್ತಾರೆ. ಸಂಭ್ರಮದಿಂದ ಕಳೆಯುತ್ತಾರೆ.

## ೩. ೮. ೪. ದೀಪಾವಳಿ

ಹಿಂದೆ ಈ ಹಬ್ಬವನ್ನು ಜೇನುಕುರುಬರು ಆಚರಿಸುತ್ತಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಪುನರ್ವಸತೀಕರಣದ ಪ್ರಭಾವ. ಹೊರಗಿನ ಜನರ ಸಂಪರ್ಕ, ಮಕ್ಕಳು ಶಾಲೆಗೆ ಹೋಗುವ ಪರಿಣಾಮ ಅಲ್ಲಿ ಸ್ನೇಹಿತರನ್ನು ನೋಡಿ ಇವರೂ ಕೂಡ ತಂದೆ ತಾಯಿಗಳಿಗೆ ಪಟಾಕಿ ತಂದು ಕೊಡಲು ಹೇಳಿ ಹಾಡಿಯಲ್ಲೆಲ್ಲಾ ಪಟಾಕಿಯನ್ನು ಸಿಡಿಸುತ್ತಾ ಸಂಭ್ರಮ ಪಡುತ್ತಾರೆ. ಪ್ರತ್ಯೇಕ ಪೂಜೆ. ಎಲ್ಲಾ ಹಬ್ಬಗಳಲ್ಲಿ ಆಚರಿಸುವಂತೆಯೇ ನಡೆಯುತ್ತದೆ. ಸಿಹಿ ಅಡುಗೆ ಮಾಡಿ ಊಟ ಮಾಡುತ್ತಾರೆ.

### ೩. ೮. ೫. ಕಾವೇರಿ ಸಂಕ್ರಮಣ

ಕೊಡಗಿನಲ್ಲಿ ಕೊಡವರು ಕಾವೇರಿ ಸಂಕ್ರಮಣ ಹಬ್ಬವನ್ನು ಬಹಳ ಹಿಂದಿನಿಂದಲೂ ಆಚರಿಸುತ್ತಾರೆ. ತಲಕಾವೇರಿಯಲ್ಲಿ ಅಕ್ಟೋಬರ್ ತಿಂಗಳ ಮೂರನೇ ವಾರದಲ್ಲಿ ತೀರ್ಥೋದ್ಭವವಾಗುತ್ತದೆ. ಅದನ್ನು ಸಂಭ್ರಮದಿಂದ ಕೊಡವರು ಹೋಮ ಹವನ ಮಾಡಿ ಕಾವೇರಿಯನ್ನು ಬರಮಾಡಿಕೊಂಡು ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಹೊಸ ಬಟ್ಟೆಧರಿಸುತ್ತಾರೆ. ಇದನ್ನು ಗಮನಿಸುವ ಕೊಡಗಿನ ಜೇನುಕುರುಬರು ಕೊಡವರಂತೆಯೇ ಹೊಸ ಬಟ್ಟೆ ಧರಿಸಿ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸುವ ಆಚರಣೆಯನ್ನು ಬೆಳಸಿಕೊಂಡಿದ್ದಾರೆ.

### ೩. ೮. ೬. ಹುತ್ತರಿ

ಕೇರಳ ಕರ್ನಾಟಕ ಗಡಿಭಾಗದಲ್ಲಿ ವಾಸಿಸುವ ಜೇನುಕುರುಬರು ಹುತ್ತರಿ ಹಬ್ಬವನ್ನು ಆಚರಿಸುತ್ತಾರೆ. ಕೇರಳದಲ್ಲಿ ಈ ಹಬ್ಬ ವಿಜೃಂಭಣೆಯಿಂದ ನಡೆಯುತ್ತದೆ. ಈ ಹಬ್ಬವನ್ನು ಕಾಡಂಚಿನಲ್ಲಿ ವಾಸಿಸುವ ಎಲ್ಲಾ ಬುಡಕಟ್ಟಿನ ಜನರೂ ಆಚರಿಸುತ್ತಾರೆ. ಜೇನುಕುರುಬರೂ ಸಹ ಇತ್ತೀಚೆಗೆ 'ಹುತ್ತರಿ' ಹಬ್ಬವನ್ನು ಆಚರಿಸುತ್ತಾರೆ ವಿಶೇಷವೆಂದರೆ ಅನ್ನ, ಪಾಯಸ ಮಾಡಿ ಊಟ ಮಾಡುವುದು. ಮನೆ ದೇವರಾದ ಅಜ್ಜಯ್ಯಗೆ ಪೂಜೆ ಸಲ್ಲಿಸುವುದು. 'ಹುತ್ತರಿ' ಹೆಸರಿನಲ್ಲಿ ಮನೆದೇವರ ಪೂಜೆ ನಡೆಯುತ್ತದೆ. ಉಳಿದಂತೆ ಚಾಮರಾಜನಗರ, ಹೆಚ್ ಡಿ ಕೋಟೆಯ ಜೇನುಕುಬರು ಈ ಹಬ್ಬವನ್ನು ಆಚರಿಸುವುದಿಲ್ಲ.

### ೩. ೮. ೭. ಕಯ್ಯಾಲಿ ಪುದು

ಇದು ಕೊಡಗಿನಲ್ಲಿ ಮಾತ್ರ ಆಚರಿಸುವ ಕೊಡವರ ಹಬ್ಬವಾದರೂ ಇಂದು ಜೇನುಕುರುಬರು ಇವರ ಎಸ್ಟೇಟ್‌ಗಳಲ್ಲಿ ಕೆಲಸ ಮಾಡುವುದರಿಂದ ಕೊಡವರು ಹಬ್ಬ ಆಚರಿಸಿದಾಗ ಜೇನುಕುರುಬರೂ ಕೂಡ ಇವರೊಂದಿಗೆ ಸಾಧ್ಯವಿರುವ ಕಡೆ ಇದ್ದು ಸಂಭ್ರಮವನ್ನು ಆಚರಿಸುತ್ತಾರೆ. ಈ ಹಬ್ಬದ ವಿಶೇಷವೆಂದರೆ ಹಂದಿ ಮಾಂಸದ ಊಟ ಮಾಡುವುದು.

### ೩. ೮. ೮. ಸಂಕ್ರಾಂತಿ ಹಬ್ಬ

ಸಂಕ್ರಾಂತಿ ಹಬ್ಬದ ಬೆಳ್ಳಂಬೆಳಗೆ ನಸುಕಿನ ಐದು ಮೂವತ್ತ ರಿಂದ ಆರು ಗಂಟೆಯ ಒಳಗೆ ಒಂದು ಬಿದಿರು ಕಡ್ಡಿಯನ್ನು ಎರಡು ರಿಂದ ಮೂರು ಅಡಿಯಷ್ಟು ಕತ್ತರಿಸಿ ಅದನ್ನು ಮೂರು ಭಾಗವನ್ನು ಸೀಳಿ ಅದನ್ನು ಮತ್ತೆ ಆ ಮೂರು ಸೀಳುಗಳನ್ನು ಒಂದು ಕೊನೆಯಲ್ಲಿ ಮತ್ತೆ ಅರ್ಧಕ್ಕೆ ಸೀಳಿ ಹಾಗೆ ಬಿಡುವುದು. ಹೀಗೆ ಸೀಳಿದ ಬಿದಿರನ್ನು ಮೂರನ್ನೂ ಒಂದಕ್ಕೊಂದು ಕತ್ತರಿ ಆಕಾರದಲ್ಲಿ ಹೊಸ ಬೆಳೆಯನ್ನು ಹೊಂದಿದ ಹೊಲದ ಮುಂಭಾಗದಲ್ಲಿ ಸ್ವಲ್ಪ ಭಾಗ ನೆಲಕ್ಕೆ ಹೂಳುವುದರ ಮೂಲಕ ನಿಲ್ಲಿಸುವರು. ಅದಕ್ಕೆ ಕುತ್ತುಳ್ಳಿ ಹುಂಬನ್ನು ಎಲೆ ಸಮೇತ ತಂದು ಅದನ್ನು ದೊಡ್ಡ ಸಿಂಬೆಯ ಆಕಾರದಲ್ಲಿ

ಒಂದರೊಳಗೊಂದು ಹೆಣೆದು ಈ ಮೂರು ಕೀಲುಗಳ ಮೇಲೆ ಇಡುವರು. ಇದರ ಇನ್ನೊಂದು ಇದೇ ತರಹದ ಬಿದಿರು ಮತ್ತು ಹಂಬನ್ನು ಹಾಡಿಯ ಅವರವರ ದೇವರು ಇರುವ ಬಿದಿರಿನ ಗುಡಿಸಲಿನ ಮುಂದೆ ಇಡುವರು. ದೇವರಿಗೆ ಒಳ್ಳೆಯ ಫಸಲು ಕೊಡೆಂದು ಬೇಡುವರು ಹಾಗೂ ಹಾಡಿಯಲ್ಲಿ ನೆಟ್ಟಿರುವ ಬಿದಿರು ಮತ್ತು ಹಂಬನ್ನು ಹೂಳಿ ಮನೆಯಲ್ಲಿ ಶಾಂತಿ ನೆಮ್ಮದಿಯನ್ನು ನೀಡೆಂದು ಬೇಡುವರು.

ಇದೇ ತರಹದ ಬಿದಿರನ್ನು ಕೊಡಗಿನ ಬೇರೆ ಸಮುದಾಯದವರು ಇದೇ ಸಂಕ್ರಾಂತಿಯಂದು ಬೆಳಗಿನ ಐದುವರೆಯಿಂದ ಆರು ಗಂಟೆಗೆ ನೆಡುವರು. ಜೊತೆಗೆ ಈ ರೀತಿ ನೆಟ್ಟು ಬಿದಿರು ಮತ್ತು ಹಂಬಿನ ಮೇಲೆ ಆ ದಿನ ಅವರು ಮಾಡಿದ ತಿಂಡಿಯನ್ನು ದೇವರಿಗೆ ಎಡೆಯ ರೂಪದಲ್ಲಿ ಇಡುವರು. ಉದಾ : ಇಡ್ಲಿ, ದೋಸೆ, ಪಲ್ಯಾ ಅನ್ನಸಾರು. ಇತ್ಯಾದಿ ಈ ರೀತಿ ಕೊಡಗರು ಇಡುವ ಎಡೆಯನ್ನು ಜೇನುಕುರುಬರು ಅಲ್ಲಿಯೇ ಒಂದು ಕಡೆ ಅವಿತು ಕುಳಿತು ಅದನ್ನು ಕದ್ದು ತಿನ್ನುವರು ಇದು ಒಂದು ವಿಧದ ಸಂಪ್ರಾದಾಯ ಈ ರೀತಿಯ ಸಂಕ್ರಾಂತಿ ಹಬ್ಬದಂದು ಬೆಳಗ್ಗೆ ಎಡೆಯನ್ನು ಎತ್ತಿಕೊಂಡು ತಿನ್ನುವರು.

### ೩. ೮. ೯. ಕೊಂತಪೂಜೆಯ ಆಚರಣೆಯ ಕ್ರಮ

ಮುಖ್ಯವಾಗಿ ಗಿಡಮರಗಳು ಚಿಗುರುವ ವಸಂತ ಕಾಲದಲ್ಲಿ ಜೇನುಕುರುಬರು ಕೊಂತ ಪೂಜೆ ಎಂಬ ಆಚರಣೆಯೊಂದು ಮಾಡುತ್ತಾರೆ. ಇದು ಅವರ ನಂಬಿಕೆಯ ಸೃಷ್ಟಿ ಪುರಾಣದ ಕುರಿತು ಅವರು ಹೊಂದಿರುವ ನಂಬಿಕೆಯ ಪ್ರತಿಬಿಂಬ. ಈ ಆಚರಣೆ ನಾಟಕೀಯವಾಗಿ ನಡೆಸುವ ಮನೋರಂಜನಾತ್ಮಕವಾದ ಆಚರಣೆಯಾಗಿದೆ. ವಾರ್ಷಿಕಾವರ್ತನ ಆಚರಣೆಗಳಲ್ಲಿ ಕೊಂತ ಪೂಜೆಗೆ ಜೇನುಕುರುಬರು ಹೆಚ್ಚು ಮಹತ್ವ ಕೊಡುತ್ತಾರೆ. ಈ ಆಚರಣೆಯನ್ನು ಗಂಡು ಹೆಣ್ಣು ಸೇರಿಯೇ ಮಾಡುವರಾದರೂ ಆಚರಣೆ ಕ್ರಮಬದ್ಧವಾಗಿ ನಡೆಯುವಲ್ಲಿ ಮಹಿಳೆಯರ ಪಾತ್ರ ದೊಡ್ಡದು. "ಕೊಂತ ಪೂಜೆಯನ್ನು ಆರೋಗ್ಯವನ್ನು ಮರಳಿ ಪಡೆಯುದಕ್ಕಾಗಿ ಹೆಣ್ಣುಮಕ್ಕಳು ಆಚರಿಸುತ್ತಾರೆ"(ಲಲಿತ ಎ.ಸಿ., ೧೯೯೩, ೩೬).

ವಸಂತಕಾಲದಲ್ಲಿ ಗಿಡಮರ ಚಿಗುರುವುದನ್ನೇ ಜೇನುಕುರುಬರು ಕಾಯುತ್ತಿರುತ್ತಾರೆ. ವಸಂತ ಕಾಲದ ನಲವತ್ತು ದಿನ ಹಬ್ಬ ಆಚರಿಸುತ್ತಾರೆ. ಒಟ್ಟಾರೆ ವಸಂತಕಾಲ ಮುಗಿಯುವುದರೊಳಗೆ ಆಚರಣೆ ಪೂರೈಸಬೇಕು ಎಂಬ ನಂಬಿಕೆ ಇವರದು. ವಸಂತ ಕಾಲದಲ್ಲಿ ತಾವು ಆಚರಣೆ ಮಾಡಬೇಕೆಂದು ಹಿಂದಿನ ದಿನ ರಾತ್ರಿ ತಮ್ಮ ಹಾಡಿಗೆ ಹತ್ತಿರವಿರುವ ನದಿ, ಹಳ್ಳ ಇಲ್ಲವೆ ಕೆರೆಗೆ ಹೋಗುತ್ತಾರೆ. ಅಲ್ಲಿ ಯಾರೂ ತುಳಿಯದಿರುವ ಜಾಗ ನೋಡಿ ಆ ಸ್ಥಳದಲ್ಲಿ ದೊರೆಯುವ ಮಣ್ಣನ್ನು ಹಾಡಿಗೆ ತಂದು ಗುಂಡಿಯೊಂದರಲ್ಲಿಡುತ್ತಾರೆ. ಮಾರನೆ ದಿನ ಬೆಳಿಗ್ಗೆ ಈ ಗುಂಡಿಯ ದಡದ ಮೇಲೆ ಇರುವ ಮಣ್ಣನ್ನು ತೆಗೆದುಕೊಂಡು ಎರಡು ಮನುಷ್ಯಾಕಾರದ ಗೊಂಬೆಗಳನ್ನು ಮಾಡುತ್ತಾರೆ. ಇದರಲ್ಲಿ ಒಂದು ಗಂಡು

ಗೊಂಬೆಯಾದರೆ ಮತ್ತೊಂದು ಹೆಣ್ಣು ಗೊಂಬೆಯಾಗಿರುತ್ತದೆ. ಹೀಗೆ ತಯಾರಿಸಿದ ಗೊಂಬೆಗಳಿಗೆ ಕುಂಕುಮ, ಅರಿಶಿಣ ಹಚ್ಚಿ ಹೂವು ಮುಡಿಸಿ ಅಲಂಕಾರ ಮಾಡುತ್ತಾರೆ. ಈ ಎಲ್ಲಾ ಕ್ರಿಯೆ ಮಾಡುವುದು ಮಹಿಳೆಯರು. ಇವರು ಗೊಂಬೆ ತಯಾರಿಸಿ (ಕೊಂತ) ಅಲಂಕಾರ ಮಾಡುವಷ್ಟರಲ್ಲಿ ಇತ್ತ ಗಂಡಸರು ಹಾಡಿಯ ಮಧ್ಯಭಾಗದಲ್ಲಿ ಚಪ್ಪರ ಹಾಕುವ ಕಾರ್ಯ ಮಾಡುತ್ತಾರೆ. ಮಹಿಳೆಯರೆಲ್ಲಾ ಸೇರಿ ಚಪ್ಪರದ ಕೆಳಗೆ ಸಗಣಿಯಿಂದ ಸಾರಿಸಿ ಶುದ್ಧಗೊಳಿಸುತ್ತಾರೆ. ಅಷ್ಟೊತ್ತಿಗೆ ಗುಡ್ಡನು ಶೃಂಗರಿಸಿದ ಗೊಂಬೆಗಳನ್ನು ತಂದು ಬಲಕ್ಕೆ ಗಂಡು ಗೊಂಬೆಯನ್ನು ಎಡಕ್ಕೆ ಹೆಣ್ಣು ಗೊಂಬೆಯನ್ನು ಇರಿಸಿ ಪೂಜೆ ಪ್ರಾರಂಭಿಸುತ್ತಾನೆ. ಮೂವತ್ತೊಂಭತ್ತು ದಿನಗಳವರೆಗೆ ಸಂಜೆ ಈ ಕೊಂತಗಳ ಮುಂದೆ ಹಾಡು ಕುಣಿತಗಳ ಮೂಲಕ ಹಬ್ಬ ಆಚರಿಸುತ್ತಾರೆ. ಗಂಡು ಹೆಣ್ಣು ಕೊಂತಗಳನ್ನು ಶೃಂಗರಿಸುವಾಗ ಐದಾರು ಜನ ಮಹಿಳೆಯರು ಕೊಂತಕ್ಕೆ ಅಂದರೆ ಸೃಷ್ಟಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಿರುತ್ತಾರೆ. ಅವರ ಹಿಂದೆ ಕೆಲವು ಮಹಿಳೆಯರು ಸೊಲ್ಲು ನುಡಿಯುತ್ತಿರುತ್ತಾರೆ. ಮೂವತ್ತೊಂಭತ್ತು ದಿನ ಕಳೆದು ನಲವತ್ತನೇ ದಿನ ಕೊಂತ ಪೂಜೆಯ ಕೊನೆಯ ಹಾಗೂ ಮಹತ್ವದ ದಿನವಾಗಿರುತ್ತದೆ. ಅಂದು ಸೃಷ್ಟಿ ಕ್ರಿಯೆಯನ್ನು ಪುನರಭಿನಯಿಸುವ ಕಾರ್ಯ ನಡೆಯುತ್ತದೆ.

ನಲವತ್ತನೇ ದಿನ ಹಾಡಿಯ ಎಲ್ಲ ಜನ ಕೊಂತದ ಪೂಜಾ ಸ್ಥಳ ಸೇರುತ್ತಾರೆ. ಗಂಡು ಕೊಂತದ ಪಕ್ಕ ವಯಸ್ಸಾದ ಹೆಂಗಸರು ಮೊದಲ ಭಾಗದಲ್ಲಿ ಮಧ್ಯವಯಸ್ಕರು ಮಧ್ಯದಲ್ಲಿ ಹರೆಯದವರು ಮಧ್ಯ ವಯಸ್ಕರ ಹಿಂಭಾಗದಲ್ಲಿ, ಹುಡುಗರು ಕೊನೆಯ ಭಾಗದಲ್ಲಿ ಅಥವಾ ಹಿಂಭಾಗದಲ್ಲಿ ಕುಳಿತುಕೊಳ್ಳುತ್ತಾರೆ. ಹೆಣ್ಣು ಕೊಂತದ ಪಕ್ಕದಲ್ಲಿ ಪುರುಷ ವರ್ಗ ಕುಳಿತುಕೊಳ್ಳುತ್ತದೆ. ಇಲ್ಲಿಯೂ ವಯಸ್ಸಾದವರು ಮುಂಭಾಗದಲ್ಲಿ ಮಧ್ಯವಯಸ್ಕರು ಮಧ್ಯದಲ್ಲಿ, ಹರೆಯದವರು ಅವರ ಹಿಂಭಾಗದಲ್ಲಿ, ಹುಡುಗರು ಪೂರ್ಣವಾಗಿ ಹಿಂಭಾಗದಲ್ಲಿ ಒಟ್ಟಾರೆಯಾಗಿ ವಯಸ್ಸಿನ ಹಿರಿತನದ ಮೇಲೆ ಸ್ಥಾನವನ್ನು ನಿರ್ಧರಿಸಿಕೊಂಡು ಕುಳಿತುಕೊಳ್ಳುತ್ತಾರೆ. ಗಂಡಸರು ಹೆಂಗಸರು ಅರ್ಧ ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಾರೆ. ಚಪ್ಪರದ ಹಿಂಭಾಗದಲ್ಲಿ ಕುಳಿತ ಹೆಂಗಸರು ಕೊಂತಕ್ಕೆ ಸಂಬಂಧಿಸಿದ ಹಾಡು ಹೇಳುತ್ತಿರುತ್ತಾರೆ.

ಇಲ್ಲಿ ಪ್ರೇಕ್ಷಕನಾದವನು ನಟನಾಗಿ ನಟನಾದವನು ಪ್ರೇಕ್ಷಕನಾಗಿ ಕಾಣುತ್ತಾರೆ. ಹೀಗೆ ರಾತ್ರಿ ಪ್ರಾರಂಭವಾದ ಈ ಕ್ರಿಯೆ ಮರಳಿ ಬೆಳಕು ಹರಿಯುವವರೆಗೆ ಮುಂದುವರೆಯುತ್ತದೆ. ಬೆಳಕು ಹರಿದ ನಂತರ ಗುಡ್ಡನಾದವನು ಜನರೊಂದಿಗೆ ಸೇರಿ ಕೊಂತಗಳನ್ನು ಚಪ್ಪರದ ಹಿಂಭಾಗಕ್ಕೆ ಒಯ್ದು ಹರಿಯುವ ನೀರಿಗೆ ಬಿಡುತ್ತಾನೆ. ಹರಿಯುವ ನೀರಿನ ಭಾಗದಿಂದ ತಂದ ಮಣ್ಣನ್ನು ಮರಳಿ ನೀರಿಗೆ ಮರಳಿಸಲಾಗುತ್ತದೆ. ಮುಂಭಾಗದಿಂದ ಹಾಡಿಗೆ ತಂದ ಮಣ್ಣು ಮನುಷ್ಯನಾಕಾರ ತಾಳಿ ಕೊನೆಗೆ ಹಿಂಭಾಗದಿಂದ ತಾನು ಬಂದ ಸ್ಥಳಕ್ಕೇ ಹಿಂದಿರುಗುತ್ತದೆ. ಹಬ್ಬದ ಇಡೀ ಕ್ರಿಯೆ ಮನುಷ್ಯನ ಜೀವಮಾನದ ಪ್ರಾರಂಭದಿಂದ ಕೊನೆಯವರೆಗಿನ ಸುಖ ಸಂತೋಷ, ಜಂಜಾಟಗಳನ್ನು ಪ್ರದರ್ಶಿಸಿ ಕೊನೆಗೊಂದು ದಿನ ಬಂದ ದಾರಿಯಲ್ಲಿಯೇ ಸಾಗಬೇಕಾದ ಅನಿವಾರ್ಯತೆಯನ್ನು ತಿಳಿಸಿಕೊಡುವ

ಹಬ್ಬ ಇದಾಗಿದೆ. ಈ ಹಬ್ಬವು ಮೈಸೂರಿನ ಹೆಚ್ ಡಿ ಕೋಟೆ ಪ್ರಾಂತ್ಯದ ಜೇನುಕುರುಬರಲ್ಲಿ ಮಾತ್ರ ಆಚರಣೆಯಲ್ಲಿದೆ. (ಮಾ : ಶಾಂತಿ, ಯಡಚ, ಚಾಮಿಯಾನಹುಂಡಿ "ಎ" ಹಾಡಿ.)

### ೩. ೮. ೧೦. ಕುದುರೆ ಹಬ್ಬ

ಜೇನುಕುರುಬರ ಮತ್ತೊಂದು ವಿಶೇಷ ಹಬ್ಬ ಕುದುರೆ ಹಬ್ಬವಾಗಿದೆ. ಈ ಹಬ್ಬವನ್ನು ಕೊಡಗಿನ ವಿರಾಜಪೇಟೆ ಹಾಗೂ ಪಿರಿಯಾಪಟ್ಟಣ ತಾಲೂಕಿನ ಜೇನುಕುರುಬರು ಆಚರಿಸುತ್ತಾರೆ. ಇದನ್ನು ಸ್ಥಳೀಯರು ಕುಂಡೆ ಹಬ್ಬವೆಂದು ಕರೆಯುತ್ತಾರೆ. ಈ ಹಬ್ಬವನ್ನು ಕೊಡವರು, ಬೆಟ್ಟಕುರುಬರು ಆಚರಿಸುತ್ತಾರೆ. ಹಬ್ಬದ ಒಂದು ಭಾಗವಾಗಿ ಜೇನುಕುರುಬರಿರುತ್ತಾರೆ.

ಶತಮಾನಗಳ ಹಿಂದೆ ಇಂದಿನ ಕೊಡಗಿನ ದೇವರಕಾಡು ಭಾಗದ ಕಾಡಿನಲ್ಲಿ ಜೇನುಕುರುಬ ಸಮುದಾಯ ವಾಸವಾಗಿತ್ತು. ಆ ಭಾಗದಲ್ಲಿ ದೈವ ಶಕ್ತಿಯ ಪ್ರಭಾವವೂ ಹೆಚ್ಚಿತ್ತು. ಒಮ್ಮೆ ಕಾಡಿನಲ್ಲಿ ಹುಲಿಯೊಂದು ಜೇನುಕುರುಬ ಬುಡಕಟ್ಟಿನ ತುಂಬಿದ ಗರ್ಭಿಣಿ ಮಹಿಳೆಯನ್ನು ಹಿಡಿದು ತಿಂದು ಹಾಕಿತ್ತು. ಈ ಘಟನೆಯು ಜೇನುಕುರುಬರಿಗೆ ಅಲ್ಲಿನ ದೈವ ಶಕ್ತಿಯ ಮೇಲೆ ಕೋಪಗೊಳ್ಳಲು ಕಾರಣವಾಯಿತು. ಏನೂ ತಪ್ಪು ಮಾಡದ ಒಂದು ಜೇನು ಕುಡಿಯು ಪ್ರಪಂಚವನ್ನು ನೋಡದೇ ಇದ್ದು ಬಿಟ್ಟಿತು. ಇದರ ಹಿಂದೆ ಈ ದೈವ ಶಕ್ತಿಯ ಕೈವಾಡವಿದೆ. ಇದೇ ನಮ್ಮ ಕುಡಿಯನ್ನು ವಶಕ್ಕೆ ಪಡೆದಿದೆ. ಎಂದು ಭಾವಿಸಲಾಯಿತು.



ಈ ಕೋಪವನ್ನು ತೀರಿಸಿಕೊಳ್ಳಲು ಅಲ್ಲಿನ ದೈವಶಕ್ತಿಗೆ ಬೈಯುವುದರ ಮೂಲಕ ಆ ಭಾಗದ ಜೇನುಕುರುಬರು ಹಬ್ಬವನ್ನಾಗಿ ಆಚರಿಸುತ್ತಾರೆ. ಅಂದು ವಿವಿಧ ಬಗೆಯ ಹೆಣ್ಣಿನ ವೇಷಗಳನ್ನು, ದೈವದ ವೇಷಗಳನ್ನು ಧರಿಸಿದ ಗಂಡು ಮಕ್ಕಳು ವಿವಿಧ ಬಗೆಯಲ್ಲಿ ಹೆಣ್ಣಿನ ಅಂಗಾಂಗಗಳನ್ನು ಉಚ್ಚರಿಸಿ. ಅದಕ್ಕೆ ತಕ್ಕದಾದ ಪದಗಳನ್ನು ಕಟ್ಟಿ ಹಾಡಿ ಕುಣಿದು ರಂಜಿಸುವ ಮತ್ತು ಈ ವಿಧದಲ್ಲಿ ತಮ್ಮ ಅಸಹನೆಯನ್ನು ದೈವಕ್ಕೆ ಒಪ್ಪಿಸುವ ಆಚರಣೆಯೇ "ಕುದುರೆ ಹಬ್ಬ" ವಾಗಿದೆ. ಅಂದರೆ "ದೈವ ಇಚ್ಛೆ ಇಲ್ಲದೇ ಹುಲ್ಲು ಕಡ್ಡಿಯೂ ಅಲುಗಾಡದು" ಎಂಬುದು ಜೇನುಕುರುಬರ ನಂಬಿಕೆಯಾಗಿದೆ. (ಮಾ : ಯಶೋಧ ಹಾಗೂ ಕುಮಾರ್‌ಎಂ ಟಿ, ಮರಳುಕಟ್ಟೆ ಹಾಡಿ.)

ಮೇ-ಜೂನ್ ತಿಂಗಳೊಳಗೆ ಈ ಹಬ್ಬವನ್ನು ಆಚರಿಸಲಾಗುತ್ತದೆ. ಕುದುರೆ ಹಬ್ಬದ ದಿನ ಪ್ಯಾಂಟ್, ಷರ್ಟ್, ಡೊಳ್ಳು ಹೊಟ್ಟೆ, ಕೂಲಿಂಗ್ ಗ್ಲಾಸ್, ಚೂಡಿದಾರ, ಸೀರೆ ಇತ್ಯಾದಿಗಳನ್ನು ಜೇನುಕುರುಬ ಪುರುಷರು ಹಾಕಿಕೊಂಡು ಗುಂಪು ಗುಂಪಾಗಿ ಅಶ್ಲೀಲ ಪದಗಳನ್ನು ಹಾಡುತ್ತ ಬುರುಡೆ, ಹಲಗೆ ಬಾರಿಸುತ್ತ ಮೆರವಣಿಗೆ ಹೊರಡುತ್ತಾರೆ. ಅಂದು ಅವರು ಯಾರಿಗೆ ಬಯ್ದರೂ ಅದನ್ನು ತೀವ್ರವಾಗಿ ಪರಿಗಣಿಸುವಂತಿಲ್ಲ. ಆ ಹಬ್ಬದ ವೈಶಿಷ್ಟವೇ ಅದು. ಮೆರವಣಿಗೆ ಹೊರಟ ಜೇನುಕುರುಬರು ದಾರಿಯಲ್ಲಿ ಯಾರೇ ಅಡ್ಡ ಬರಲಿ ಅವರಿಂದ ಹಣ ಕೇಳಿ ಪಡೆಯುತ್ತಾರೆ. ಹಾಗೆಯೇ ಮನೆ ಮನೆಗೆ ತೆರಳಿ ಬಯ್ಗಳ ಹಾಡನ್ನು ಹಾಡುತ್ತ ಭಿಕ್ಷೆ ರೂಪದಲ್ಲಿ ಹಣ, ಧಾನ್ಯ ಪಡೆಯುತ್ತಾರೆ. ನೋಡಲು ತುಂಬಾ ತಮಾಷೆಯಾಗಿ ಕಾಣುವ ಈ ಮೆರವಣಿಗೆಯನ್ನು ನೋಡಿ ಇತರರು ಖುಷಿ ಪಡುತ್ತಾರೆ. ಅಂದು ಇಡೀ ವರ್ಷ ತಮ್ಮೊಳಗೆ ಒತ್ತಿಟ್ಟ ಭಾವನೆಗಳನ್ನು ಹೊರಹಾಕಲು ಜೇನುಕುರುಬರಿಗೆ ಒಂದು ಉತ್ತಮ ಅವಕಾಶ ದೊರೆಯುತ್ತದೆ.

ಇದಲ್ಲದೇ ಜೇನುಕುರುಬರೊಂದಿಗೆ ಬೆಟ್ಟಕುರುಬರಲ್ಲಿಯೂ ಕೂಡ 'ನಮ್ಮ ಮನೆ ಕಷ್ಟಗಳನ್ನು ಈಡೇರಿಸು' ಎಂದು ಹರಕೆ ಕಟ್ಟಿಕೊಂಡು ವೇಷಧಾರಿಗಳಾಗಿ ಕುಣಿಯುವವರ ಸಂಖ್ಯೆಯೂ ಕ್ರಮೇಣ ಹೆಚ್ಚಾಗುತ್ತಿದೆ.

**ಆಚರಣೆ** : ೨೦೧೬ನೇ ಸಾಲಿನಲ್ಲಿಮೇ ತಿಂಗಳ ೨೫ ಹಾಗೂ ೨೬ರಂದು ಕುದುರೆ ಹಬ್ಬವನ್ನು ಆಚರಿಸಲಾಯಿತು. ಹಬ್ಬದ ಪ್ರಮುಖ ಆಕರ್ಷಣೆ ಭದ್ರಕಾಳಿ ದೇವಸ್ಥಾನ. ಈ ದೈವದ ಮೂಲ ಪುಜಿಗರು ಬೆಟ್ಟಕುರುಬ ಬುಡಕಟ್ಟಿನವರು. ಇಲ್ಲಿ ಹಬ್ಬವನ್ನು ಆಚಣೆ ಮಾಡುವ ಒಂದು ವಾರದ ಮೊದಲು ಮಾಯಮುಡಿ ಎಂಬಲ್ಲಿಗೆ ಒಂದು ಕುದರೆ (ಬಿದಿರು ಪಟ್ಟಿಯಿಂದ ತಯಾರಿಸಿರುತ್ತಾರೆ) ಯನ್ನು ತೆಗೆದುಕೊಂಡು ಹೋಗಿ ಅಲ್ಲಿ ಪೂಜ ಕೈಂಕರ್ಯವನ್ನು ಮಾಡಿ ಹಬ್ಬವನ್ನು ಪ್ರಾರಂಭಿಸುತ್ತಾರೆ. ದೈವಗಳ ಪೂಜಾ ವಿಧಿವಧಾನಗಳಲ್ಲಿ ಜೇನುಕುರುಬರ ಪಾತ್ರವೇನೂ ಇರುವುದಿಲ್ಲ. ಬದಲಾಗಿ ಇಲ್ಲಿ ಬೆಟ್ಟಕುರುಬ ಸಮುದಾಯ ಎಲ್ಲವನ್ನೂ ನಿರ್ವಹಿಸುತ್ತದೆ.

**ಇಲ್ಲಿನ ದೈವಗಳ ವಿವರ**

**ಬೇಟೆಕರುಂಬ ಅಯ್ಯಪ್ಪ ದೇವಸ್ಥಾನ** : ಇಂದು ಇಲ್ಲಿ ಬ್ರಾಹ್ಮಣ ಪೂಜಾರಿಯಾಗಿರುತ್ತಾರೆ.

**ಭದ್ರಕಾಳಿ ದೇವಸ್ಥಾನ** : ಇಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶ ಇರುವುದಿಲ್ಲ. ಇಲ್ಲಿಯೂ ಸಹ ಬ್ರಾಹ್ಮಣ ಪೂಜಾರಿಯಾಗಿರುತ್ತಾರೆ.

**ಕುದುರೆ ಅಂಬಾಲ** : ಹಬ್ಬದ ಕುದುರೆಗಳನ್ನು ಅಣಿಗೊಳಿಸುವುದು ಮತ್ತು ಕುದುರೆಗಳನ್ನು ಆಡಿಸುವುದೂ ಸೇರಿದಂತೆ ಪೂಜಾರಿಯೂ ಕೂಡಾ ಬೆಟ್ಟಕುರುಬರು ಆಗಿರುತ್ತಾರೆ.

**ಈಶ್ವರ ದೇವಸ್ಥಾನ** : ಇಂದು ಇಲ್ಲಿ ಬ್ರಾಹ್ಮಣ ಭಟ್ಟರು ಪೂಜಾರಿಯಾಗಿರುತ್ತಾರೆ. (ಮಾ : ಕಾಳ ಜಿ ಕೆ, ದೊಡ್ಡರೇಷ್ಮೆ ಹಾಡಿ, ಕಾಳಪ್ಪ ಜಿ ಕೆ, ಕಾರೆಅಡ್ಲು ಹಾಡಿ,ಸೋಮ ಜಿ ಕೆ, ದೇವರಪುರ ಹಾಡಿ.

## ೩. ೯. ಜಾತ್ರೆಗಳು

- ψ ಕುಟ್ಟ ಜಾತ್ರೆ : ಮೇ ತಿಂಗಳಲ್ಲಿ ಮೂರು ದಿನ ಜಾತ್ರೆ ನಡೆಯುತ್ತದೆ ಮಂಗಳವಾರ ಸಂಜೆಯಿಂದ ಬುಧವಾರ ಮಧ್ಯಾಹ್ನದವರೆಗೆ ದೇವರ ಕಾರ್ಯ ಇರುತ್ತದೆ. ಬುಧವಾರ ರಾತ್ರಿಯವರೆಗೂ ಸಾಂಸ್ಕೃತಿಕ ಕಾರ್ಯ ಕ್ರಮವನ್ನು ನಡೆಸಲಾಗುತ್ತದೆ. ಆಡು ಮತ್ತು ಕೋಳಿ ಬಲಿ ಕೊಡುತ್ತಾರೆ.
- ψ ಕೋತುರು ಜಾತ್ರೆ : ಮೇ ತಿಂಗಳಿನಲ್ಲಿ ಯಾವುದಾದರೊಂದು ಮಂಗಳವಾರ ಮತ್ತು ಬುಧವಾರ ಹಿರಿಯರು ಜಾತ್ರೆ ಮಾಡಬೇಕೆಂದು ನಿಶ್ಚಯಿಸುತ್ತಾರೆ. ಹಿರಿಯರು ನಿಶ್ಚಯಿಸಿದ ಮಾದರಿಯಲ್ಲಿಯೇ ಎರಡು ದಿನಗಳ ಕಾಲ ಅದ್ದೂರಿಯಾದ ಜಾತ್ರೆ ನಡೆಯುತ್ತದೆ.
- ψ ಪಣ್ಣೆ ಜಾತ್ರೆ : ಪಣ್ಣೆಯಲ್ಲಿಯೂ ವರ್ಷಕ್ಕೆ ಒಮ್ಮೆ ಮೇ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಮಂಗಳವಾರ ಮತ್ತು ಬುಧವಾರ ಜಾತ್ರೆ ನಡೆಯಬೇಕೆಂದು ಹಿರಿಯರು ನಿಶ್ಚಯಿಸುತ್ತಾರೆ. ಇಲ್ಲಿಯೂ ಆಡು ಮತ್ತು ಕೋಳಿ ಬಲಿ ಇರುತ್ತದೆ.
- ψ ಇನ್ನು ಉಳಿದ ಅಮ್ಮಾಳು, ದೊಡ್ಡತೋಡು ಗೋಣಿಗದ್ದೆ ಜಾತ್ರೆಗಳಲ್ಲಿ ಪ್ರಾಣಿ ಬಲಿ ಇರುವುದಿಲ್ಲ. ತರಕಾರಿ ಸಾರು ಸಿಹಿ ಊಟ ಮಾಡಿ ಎಲ್ಲರಿಗೂ ದಾಸೋಹ ಯೋಜನೆ ಮಾಡಿರುತ್ತಾರೆ.

## ೩. ೯. ೧. ಅಮ್ಮಾಳೆ ಜಾತ್ರೆ

ಇದು ನಾಗರಹೊಳೆಯ ನಾಣಚ್ಚಿ ಎಂಬ ಊರಿನಿಂದ ನಾಲ್ಕು ಕಿಲೋಮೀಟರ್ ಕಾಡಿನೊಳಗೆ ಇದೆ. ಇದಕ್ಕೆ ಕಾಲ್ನಡಿಗೆಯಲ್ಲಿಯೇ ಹೋಗಬೇಕು. ಅಮ್ಮಾಳೆಯಲ್ಲಿರುವ ದೇವಾಲಯಕ್ಕೆ ತನ್ನದೇ ಇತಿಹಾಸವಿದೆ. ಅಮ್ಮಾಳೆಯಲ್ಲಿ ದೇವರ ವಿಗ್ರಹ ಆನೆಯ ತಲೆಯನ್ನು ಹೊಂದಿದೆ. ಇಲ್ಲಿ ಸಾವಿರಾರು ಆನೆಯ ತಲೆಯ ವಿಗ್ರಹಗಳಿವೆ. ಆನೆಯೇ ಇಲ್ಲಿಯ ದೇವಾಲಯದೊಳಗೆ ಪೂಜಿಸಲ್ಪಡುತ್ತಿರುವ ಮೂರ್ತಿ. ಬಹಳ ಹಿಂದೆ ಕೇರಳದಲ್ಲಿ ಒಬ್ಬ ರಾಜನಿದ್ದ (ಹೆಸರು ಗೊತ್ತಿಲ್ಲ) ಆತನು ತನ್ನ ಸಾಮ್ರಾಜ್ಯದಲ್ಲಿ ಸಾವಿರಾರು ಆನೆಗಳನ್ನು ಸಾಕಿದ್ದನು. ಕೆಲವು ವರ್ಷಗಳ ನಂತರ ಬರಗಾಲ ಬಂದು ಮಳೆ ಬೆಳೆ ಇಲ್ಲದೆ ಆನೆಗಳಿಗೆ ಆಹಾರವೂ ಸಿಗದಂತೆ ತೊಂದರೆ ಅನುಭವಿಸಿದಂತಾಯಿತ್ತು. ಆಗ ಕೇರಳದ ರಾಜ ಕೊಡಗಿನ ರಾಜನಿಗೆ ಪತ್ರ ಬರೆದು ನಿಮಗೆ ಅವಶ್ಯಕವಿರುವ ಆನೆಗಳನ್ನು ಹಿಡಿದುಕೊಂಡು ಹೋಗಬಹುದು ಎಂದು ತಿಳಿಸಿದ್ದನು. ಕೊಡಗಿನ ರಾಜನು ಇದಕ್ಕೆ ಸಮ್ಮತಿ ಇತ್ತು,

ತನ್ನ ಸೈನಿಕರನ್ನು ಕೇರಳಕ್ಕೆ ಕಳುಹಿಸಿದನು. ಸೈನಿಕರು ಆನೆಗಳನ್ನು ಅವರೆ ಹಂಬಲು, ಸಾಲಂಬಲುವಿನ ಹಗ್ಗದಿಂದ ಆನೆಗಳನ್ನು ಎಳೆದು ತಂದು ಅಮ್ಮಾಳೆಯಲ್ಲಿ ಜೋಡು ಬಿಟ್ಟರು. ಅಮ್ಮಾಳೆ ಜಾಗದಲ್ಲಿ ಜೇನುಕುರುಬರ ಅಜ್ಜ ಅಜ್ಜಿ ಇಬ್ಬರು ಗಂಡ ಹೆಂಡತಿ ಅಲ್ಲಿ ವಾಸಿಸುತ್ತಿದ್ದರು. ಆನೆಗಳು ಜೋಡು ಬಿಟ್ಟ ಜಾಗದಲ್ಲಿ ಪೂಜೆಯನ್ನು ಸಲ್ಲಿಸಿದರು. ಎತ್ತಮ್ಮ ಎತ್ತಯ್ಯನ ರೂಪದಲ್ಲಿ ಆನೆಗಳಿವೆ ಎಂದು ಭಾವಿಸಿ ಅಂದಿನಿಂದ ಅಲ್ಲಿ ಆನೆಯ ತಲೆಯನ್ನು ಮಣ್ಣಿನಲ್ಲಿ ಮಾಡಿ ಪೂಜಿಸಿಕೊಂಡು ಬಂದರು. ಮರಣ ಹೊಂದಿದ ಆನೆಗಳನ್ನು ಅಲ್ಲೇ ಹೂಳಿದರು. ಕಾಲಾನಂತರದಲ್ಲಿ ಜೇನುಕುರುಬರ ಕಕ್ಕೆ ಮನೆತನದವರು ಈ ಅಮ್ಮಾಳೆಯ ದೇವರಿಗೆ ಪೂಜಿಸಲು ಪ್ರಾರಂಭಿಸಿದರು. ಇಂದಿಗೂ ಈ ಮನೆತನದವರು ಇಲ್ಲಿ ಪೂಜೆ ಮಾಡಿಕೊಂಡು ವರ್ಷಕ್ಕೆ ಒಮ್ಮೆ ಜಾತ್ರೆಯನ್ನು ನಡೆಸುತ್ತಾರೆ. ಪ್ರತಿ ಸೋಮವಾರ ಇಲ್ಲಿ ಪೂಜೆ ನಡೆಯುತ್ತದೆ. ಕಕ್ಕೆ ಮನೆತನದವರು ಕುತ್ತಿ ಸ್ಥಾನವನ್ನು ಹೊಂದಿರುವ 'ಮೇಟಿ'ಯವರು ಪೂಜೆ ಕಾರ್ಯ ನಡೆಸಿಕೊಂಡು ಬರುತ್ತಿದ್ದಾರೆ.

ಪ್ರತಿ ವರ್ಷ ಏಪ್ರಿಲ್ – ಮೇ ತಿಂಗಳಲ್ಲಿ ಜಾತ್ರೆ ನಡೆಸುತ್ತಾರೆ. ಈ ಜಾತ್ರೆ ಒಟ್ಟು ಎಂಟು ದಿನಗಳವರೆಗೂ ನಡೆಯುತ್ತದೆ. ಕಕ್ಕೆ ಮನೆತನದ ಹಿರಿಯರು ನಿಯೋಜಿಸಿದ ಸಮುದಾಯದ ಜನರು ಮೊದಲು ಹೋಗಿ ಮಡಿ ಉಡುಗೆಯಿಂದ ದೇವಾಲಯವನ್ನು ಸ್ವಚ್ಛಗೊಳಿಸಿ, ಗೋಮೂತ್ರ ಹಾಕಿ ಸಗಣಿಯಿಂದ ಸಾರಿಸಿ ಅಚ್ಚು ಕಟ್ಟಿನ ಕೆಲಸವನ್ನು ನಿರ್ವಹಿಸುತ್ತಾರೆ. ಅಮ್ಮಾಳೆಯಲ್ಲಿ ಸಣ್ಣ ಗಾತ್ರದಿಂದ ಹಿಡಿದು ದೊಡ್ಡ ಗಾತ್ರದವರೆಗೂ ಆನೆಗಳ ವಿಗ್ರಹಗಳಿವೆ. ಈ ಎಲ್ಲಾ ವಿಗ್ರಹಗಳನ್ನು ಜಾತ್ರೆಯ ಸಂದರ್ಭದಲ್ಲಿ ಹೊಳೆಗೆ ತೆಗೆದುಕೊಂಡು ಹೋಗಿ ತೊಳೆದುಕೊಂಡು ಬರುತ್ತಾರೆ. ಕಕ್ಕೆ ಮನೆತನದವರು ದೇವರಿಗೆ ಕರ್ಪೂರ, ಗಂಧಕಡ್ಡಿ, ಬಾಳೆಹಣ್ಣು, ತೆಂಗಿನಕಾಯಿ, ಹೂವಿನಿಂದ ಪೂಜಿಸುತ್ತಾರೆ. ಈ ಕುತ್ತಿ ಮನೆತನವವರು ಈ ಜಾತ್ರೆಯಲ್ಲಿ ಎಲ್ಲಾ ಕೆಲಸವನ್ನೂ ಜವಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಈ ಜಾತ್ರೆಗೆ ಇನ್ನೂ ಉಳಿದ ಕುತ್ತಿ ಮನೆತನದ 'ತಮ್ಮಡಿ'ಗಳು ತಮ್ಮ ತಮ್ಮ ದೇವರುಗಳನ್ನು ತಂದು ಈ ಸ್ಥಳದಲ್ಲಿ ಇರಿಸಬೇಕು. ಎಲ್ಲಾ ದೇವರಿಗಳಿಗೂ ಏಳು ದಿನಗಳ ಕಾಲ ಪೂಜೆ ಸಲ್ಲುತ್ತದೆ. ಅನ್ನ, ಪಾಯಸ ಮಾಡಿ, ಜಾತ್ರೆಯಲ್ಲಿ ಭಾಗವಹಿಸುವವರಿಗೆಲ್ಲಾ ಊಟದ ವ್ಯವಸ್ಥೆ ಮಾಡಿರುತ್ತಾರೆ.

ಈ ಜಾತ್ರೆಯಲ್ಲಿ ಎಂಟು ದಿನಗಳೂ ಒಂದೊಂದು ವಿಧವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

**ಒಂದನೆ ದಿನ :** ದೇವಾಲಯವನ್ನು ಶುಚಿಗೊಳಿಸುವುದು. ದೇವಾಲಯದ ಸುತ್ತ ಅಚ್ಚು ಕಟ್ಟು ಮಾಡುವುದು. ಸಗಣಿ ನೀರಿನಿಂದ ಸಾರಿಸುವುದು. ರಂಗೋಲಿ ಹಾಕುವುದು. ಗೋಮೂತ್ರ ಸಿಂಪಡಿಸುವುದು ಮಾಡುತ್ತಾರೆ. ಕಕ್ಕೆ ಮನೆತನದ ಕೆಲವು ಜನರಿಗೆ ಈ ಜವಬ್ದಾರಿಯನ್ನು ವಹಿಸಿರುತ್ತಾರೆ.

**ಎರಡನೆ ದಿನ :** ಚಪ್ಪರ ಹಾಕುವುದು. ಮಾವಿನ ಎಲೆಯ ತೋರಣ ಕಟ್ಟುವುದು. ಹನ್ನೆರಡು ಕಂಬಗಳನ್ನು ನೆಟ್ಟು ಮಾವಿನಸೊಪ್ಪು, ಅರಳಿ ಸೊಪ್ಪು, ತಡಸಲು ಸೊಪ್ಪು ಬಳಸಿಕೊಂಡು ಚಪ್ಪರ

ಹಾಕುವುದು. ಬಿದಿರಿನ ಕಮಾನುಗಳನ್ನು ನಿಲ್ಲಿಸುವುದು. ಹೂವಿನ ಅಲಂಕಾರ ಮಾಡುವುದು. ಪೂಜೆಗೆ ಸಿದ್ಧತೆ ಮಾಡಿಕೊಳ್ಳುವ ಎಲ್ಲಾ ಕೆಲಸಗಳು ಎರಡನೇ ದಿನ ಸಿದ್ಧವಾಗುತ್ತದೆ.

**ಮೂರನೆ ದಿನ** : ದೇವರನ್ನು ತೊಳೆಯುವ ಕೆಲಸ ಮೂರನೇ ದಿನ ನಡೆಯುತ್ತದೆ. ಆನೆಯ ವಿಗ್ರಹಗಳನ್ನು ಹೊಳೆಗೆ ತೆಗೆದುಕೊಂಡು ಹೋಗಿ ತೊಳೆದು ಶುದ್ಧಗೊಳಿಸುವ ಕಾರ್ಯ ನಡೆಯುತ್ತದೆ. ಮೇಟಿಯಾದವನ ಸಮ್ಮುಖದಲ್ಲಿ ಪೂಜಾರಿಯು ದೇವರನ್ನು ತೊಳೆದು ತಂದು ಗರ್ಭಗುಡಿಯಲ್ಲಿ ಇರಿಸಿ ಪೂಜೆಗೆ ಸಂಬಂಧಿಸಿದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು.

**ನಾಲ್ಕನೆ ದಿನ** : ನಾಲ್ಕನೆ ದಿನ ಅಮ್ಮಾಳೆಯ ಸ್ಥಳದಿಂದ ಅಜ್ಜಯ್ಯನ ಮರತಾಳು ಎಂಬ ದೇವರು ಅಮ್ಮಾಳೆಯಿಂದ ಒಂಭತ್ತು ಕಿಲೋಮೀಟರ್ ದೂರದಲ್ಲಿನ ಬೆಟ್ಟದ ಮೇಲೆ ಹೊತ್ತು ನಡೆದು ಹೋಗಿ ಆ ಬೆಟ್ಟದ ಮೇಲೆ ಪೂಜೆ ಸಲ್ಲಿಸಿ ವಿಶ್ರಮಿಸಿ ಅಂದು ಸಂಜೆಯೊಳಗೆ ಅಮ್ಮಾಳೆಗೆ ಹಿಂದಿರುಗುತ್ತಾರೆ. ಅಲ್ಲಿಯೂ ಪೂಜೆಯಾದ ನಂತರ ಪ್ರಸಾದ ಅವಲಕ್ಕಿ ಬೆಲ್ಲವನ್ನು ನೆರೆದಿರುವ ಎಲ್ಲರಿಗೂ ಹಂಚುತ್ತಾರೆ.

**ಐದನೆ ದಿನ** : ಐದನೇ ದಿನದಲ್ಲಿ ಅಮ್ಮಾಳೆ ದೇವಾಲಯಕ್ಕೆ ಬಂದಿರುವ ಎಲ್ಲಾ ಭಕ್ತಾದಿಗಳಿಗೂ ಪೂಜೆಯನ್ನು ಮಾಡಿಕೊಡುತ್ತಾರೆ. ದೇವಾಲಯದಲ್ಲಿಯೇ ರಾತ್ರಿ ಮಲಗುವವರು ಮಲಗುತ್ತಾರೆ, ಇನ್ನೂ ಕೆಲವರು ಹಾಡಿಗಳಿಗೆ ಹಿಂದಿರುಗುತ್ತಾರೆ. ಮತ್ತೆ ಮೂರನೇ ದಿನ ಬೆಳಕಾದ ಮೇಲೆ ಬಂದು ದೇವಾಲಯದ ಬಳಿ ಸೇರುತ್ತಾರೆ.

**ಆರನೆ ದಿನ** : ಇನ್ನೂ ಭಕ್ತಾದಿಗಳು ಹೊಸದಾಗಿ ಬರುತ್ತಾನೆ ಇರುತ್ತಾರೆ. ಹೊಸದಾಗಿ ಬಂದವರಿಗೆ ಪುಜೆಯನ್ನು ಮಾಡಿ ಪ್ರಸಾದವನ್ನು ನೀಡುತ್ತಾರೆ.

**ಏಳನೆ ದಿನ** : ಕಕ್ಕೆ ಕುತ್ತಿಯ ಮನೆತನದ ಎಲ್ಲಾ ಅಣ್ಣ ತಮ್ಮಂದಿರೂ ಒಟ್ಟಾಗಿ ಪೂಜೆಯನ್ನು ಮಾಡಿಸಿ ಜಾತ್ರೆಯ ಎಲ್ಲಾ ಕೆಲಸ ಕಾರ್ಯ ನಿರ್ವಹಿಸಿದವರು ಸೇರಿ ಎಲೆ ಅಡಿಕೆ ತಿನ್ನುತ್ತಾರೆ.

**ಎಂಟನೆ ದಿನ** : ಈ ದಿನ ಬೇರೆ ಬೇರೆ ಕುತ್ತಿಯವರು ತಂದಿದ್ದ ದೇವರುಗಳನ್ನು ಅವುಗಳ ಮೂಲ ಸ್ಥಾನಕ್ಕೆ ದೇವರನ್ನು ತಲೆಯ ಮೇಲೆ ಹೊತ್ತು ಕೊಂಡು ಹೋಗಿ ಅವುಗಳ ಜಾಗಕ್ಕೆ ಸೇರಿಸುತ್ತಾರೆ.

ಇಲ್ಲಿ ಅಮ್ಮಾಳೆಯಲ್ಲಿ ಕಕ್ಕೆ ಮನೆತನದ ಅಣ್ಣ ತಮ್ಮಂದಿರು ಹಣಕಾಸಿನ ಲೆಕ್ಕಚಾರ ಮಾಡಿ ಎಷ್ಟು ಹಣ ಖರ್ಚಾಯಿತು. ಉಳಿಯಿತು ಎಂಬುದನ್ನು ಲೆಕ್ಕ ಹಾಕಿ ಉಳಿದ ದುಡ್ಡನ್ನು ಮುಂದಿನ ವರ್ಷದ ಜಾತ್ರೆಯ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳುವುದಾಗಿ ಹೇಳುತ್ತಾ ಎಲ್ಲರೂ ಸಂತೋಷವಾಗಿ ಎಂಟು ದಿನ ನಡೆದ ಕಾರ್ಯಗಳ ಬಗ್ಗೆ ಅನಿಸಿಕೆಯನ್ನು ಒಬ್ಬರಿಗೊಬ್ಬರು ವ್ಯಕ್ತಪಡಿಸಿಕೊಳ್ಳುತ್ತಾರೆ.

ಅಮ್ಮಾಳೆಯ ದೇವಾಲಯದ ಎದುರಿಗೆ 'ಆನೆ ಕತ್ತಿನ ಮುರಿ ದೇವರಿದೆ' ಇದಕ್ಕೂ ಜಾತ್ರೆಯಲ್ಲಿ ಎಂಟು ದಿನ ಪೂಜೆಯನ್ನು ಸಲ್ಲಿಸುತ್ತಾರೆ. ಬಂದ ಭಕ್ತಾದಿಗಳೆಲ್ಲರೂ ಇಲ್ಲಿಗೂ ಪೂಜೆ ಸಲ್ಲಿಸುತ್ತಾರೆ. ಆದರೆ ಎಡೆ ಇಡುವುದಿಲ್ಲ ಒಂದು ಆನೆ ಕೋಪ ಬಂದು ಇನ್ನೊಂದು ಆನೆಯ ಮೇಲೆ ದಾಳಿ

ಮಾಡಿದ್ದರ ಪರಿಣಾಮ ಇನ್ನೊಂದು ಆನೆಗೆ ಕತ್ತು ಮುರಿದು ಆ ಸ್ಥಳದಲ್ಲಿಯೇ ಸತ್ತದ್ದರಿಂದ ಈ ರೀತಿ ಹೆಸರು ಬಂದಿದೆ. ಅದಕ್ಕೆ ಕೂಡ ಜೇನುಕುರುಬರು ಪೂಜೆ ಸಲ್ಲಿಸುತ್ತಾರೆ.

## ೩. ೧೦. ಉಡುಗೆ ತೊಡುಗೆ

ಪ್ರತಿಯೊಂದು ಸಮುದಾಯವು ಕೂಡ ಇತರರಗಿಂತ ಭಿನ್ನ, ಎಂಬುದನ್ನು ತಿಳಿಸಲು ಇರುವ ಮಾನದಂಡಗಳಲ್ಲಿ ಉಡುಗೆ ತೊಡುಗೆ, ಹೊರತಲ್ಲ ಏಕೆಂದರೆ ಬುಡಕಟ್ಟುಗಳು ತಮ್ಮದೇ ಆದ ವಿಭಿನ್ನವಾದ ಆಚಾರ-ವಿಚಾರ, ಸಂಸ್ಕೃತಿಯ ಆಚರಣೆಯ ಜೊತೆಗೆ, ವೇಷ ಭೂಷಣಗಳಲ್ಲಿಯೂ ದೇಸೀತನವನ್ನು ಉಳಿಸಿ ಕೊಂಡಿರುತ್ತದೆ. ಸಮುದಾಯಗಳು ಕಾಡಿನಲ್ಲಿ ಜೀವಿಸುತ್ತಿರುವುದಾಗಲೀ ಅಲೆಮಾರಿ ಸಮುದಾಯಗಳೇ ಆಗಲಿ, ವಿಶಿಷ್ಟವಾದ ಉಡುಗೆಯನ್ನು ಬಳಸುವ ಮೂಲಕ 'ನಾವು ಒಂದು' ಎಂಬ ಒಗ್ಗೂಡುವಿಕೆಯನ್ನು ತಿಳಿಸಲು ಮತ್ತು ಬುಡಕಟ್ಟು ಲಕ್ಷಣವಾದ ನಾವು ಪ್ರತ್ಯೇಕಿತರು ಎಂಬುದನ್ನು ತೋರಿಸಲು ಇದರಿಂದ ಸಾಧ್ಯವಾಗುತ್ತದೆ. ಅಂತೆಯೇ ಜೇನುಕುರುಬರೂ ಸಹ ವಿಭಿನ್ನ ವಿಶಿಷ್ಟ ಶಿಷ್ಟಾಚಾರದ ಉಡುಗೆ ತೊಡುಗೆಯನ್ನು ಧರಿಸುತ್ತಾರೆ. ಮಹಿಳೆಯರು, ಪುರುಷರು, ಮಕ್ಕಳು ಆಯಾ ವಯಸ್ಸಿಗೆ ತಕ್ಕಂತೆ ವೇಷಭೂಷಣ ಪಡೆಯುತ್ತಾರೆ.



ಪ್ರಾಚೀನ ಕಾಲದಲ್ಲಿ ಕಾಡಿನ ಮರಗಳ ತೊಗಟೆ, ಸೊಪ್ಪುಗಳೇ ಇವರ ದೇಹಕ್ಕೆ ಆಸರೆಯಾಗಿದ್ದವು. ಮೈಮುಚ್ಚಿಕೊಳ್ಳಲು ಬಟ್ಟೆ ಇರಲಿಲ್ಲ. ಭೂತಾಳೆ ಮರದಲ್ಲಿ ಸುರುಳಿ ಸುರುಳಿಯಾಗಿ ಬರುವ ತೊಗಟೆಯನ್ನು ಮೈಗೆ ಸುತ್ತಿಕೊಳ್ಳುತ್ತಿದ್ದರು. ಹೆಂಗಸರು ಎದೆಗೆ ಮತ್ತು ಸೊಂಟಕ್ಕೆ ಸುತ್ತಿಕೊಳ್ಳುತ್ತಿದ್ದರು. ಗಂಡಸರು ಸೊಂಟಕ್ಕೆ ಮಾತ್ರ ಸುತ್ತಿಕೊಳ್ಳುತ್ತಿದ್ದರು. ಕಾಲಕಳೆದಂತೆ ಬಟ್ಟೆಗಳನ್ನು ಧರಿಸುವ ಪದ್ಧತಿ ಬೆಳೆಸಿಕೊಂಡರು. ಬಹಳ ಹಿಂದೆ ಜೇನುಕುರುಬರು ಕಾಡಿನಲ್ಲಿ ವಾಸಿಸುವಾಗ ಗುಂಪು ಗುಂಪಾಗಿ ಮರದ ಪೊಟರೆಗಳಲ್ಲಿ ವಾಸಿಸುವಾಗ 'ಬಟ್ಟೆ' ಪರಿಕಲ್ಪನೆ ಅವರಲ್ಲಿ ಇರಲಿಲ್ಲ. ಆಗ ಸ್ವಾಗೆ ಮರದ ಚಕ್ಕೆಯನ್ನು ಕತ್ತಿಯಿಂದ ಚೆನ್ನಾಗಿ ಜಜ್ಜಿದರೆ ಅದು ತೆಳುವಾಗುವುದರ ಜೊತೆಗೆ ಅಗಲವಾಗುತ್ತಾ ಹೋಗುತ್ತಿತ್ತು. ಮೈಗೆಸುತ್ತಿಕೊಳ್ಳಲು ಎಷ್ಟುಬೇಕೋ ಅಷ್ಟು ಅಗಲವಾಗಿ ಚಕ್ಕೆಯನ್ನು ಜಜ್ಜಿ ಅದನ್ನು ಗಂಡಸರು ಸೊಂಟದಿಂದ ಕೆಳಗೆ ಕೆಳ ಉಡುಪಾಗಿ ಧರಿಸುತ್ತಿದ್ದರು. ಹೆಂಗಸರು ಸೊಂಟ ಸೊಂಟದಿಂದ ಕೆಳಗೆ ಒಂದು ಭಾಗ ಮತ್ತು ಸೊಂಟದಿಂದ ಮೇಲಕ್ಕೆ ಭುಜದ ಕೆಳಗೆ ಒಂದು ಸುತ್ತು ಬರುವಂತೆ

ಸುತ್ತಿಕೊಳ್ಳುತ್ತಿದ್ದರು. ಸುಳ್ಳುಸೊಪ್ಪನ್ನು ಒಂದರ ಪಕ್ಕ ಒಂದು ಜೋಡಿಸಿ ಕೈರೇಮರ, ಹೊಂಗೆಮರದ ನಾರಿನಿಂದ ಜಗಿಯಾಗಿ ಕಟ್ಟಿ ಅದನ್ನು ದೇಹಕ್ಕೆ ಕಟ್ಟಿ ಕೊಳ್ಳುತ್ತಿದ್ದರು.

ಕಾಲಾನಂತರ ಬಟ್ಟೆಗಳ ಬಳಕೆ ತಿಳಿಯಿತು. ಸಂತೆಗಳಲ್ಲಿ ಮಾರುವ ತುಂಡು ಬಟ್ಟೆಗಳನ್ನು ತಂದು ಒಂದಕ್ಕೊಂದು ಜೋಡಿಸಿ ಅಗತ್ಯಕ್ಕೆ ತಕ್ಕಂತೆ ಕಟ್ಟಿಕೊಳ್ಳುತ್ತಿದ್ದರು. ಇನ್ನೂ ಕಾಲಕಳೆದಂತೆ ಗಂಡಸರು ಸೊಂಟದ ಕೆಳಗೆ ಪಂಚೆಯನ್ನು ಮೇಲುಡುಪಾಗಿ ಭುಜದ ಮೇಲೆ ಒಂದು ತುಂಡು ಬಟ್ಟೆಯನ್ನು ಹಾಕಿಕೊಳ್ಳುತ್ತಿದ್ದರು. ಹೆಂಗಸರು ಒಂದು ದೊಡ್ಡ ಸೀರೆಯನ್ನು ತೆಗೆದುಕೊಂಡು ದೇಹಕ್ಕೆ ಭುಜದಿಂದ ಕೆಳಗೆ ಸುತ್ತಿಕೊಂಡು ಒಂದು ತುದಿಯನ್ನು ಎಡ ಭುಜದ ಮೇಲೆ ತೆಗೆದುಕೊಂಡು ಗಂಟು ಕಟ್ಟುತ್ತಿದ್ದರು. ಈಗಿನ ರವಿಕೆಯ ಬಳಕೆ ಅವರಿಗೆ ತಿಳಿದಿರಲಿಲ್ಲ.

ತಲೆಗೂದಲನ್ನು ಬಾಚಿ ಹಿಂದೆ ತುರುಬು ಕಟ್ಟಿ ಆ ಗಂಟಿಗೆ ಸುತ್ತಲು ಮುಳ್ಳು ಹಂದಿಯ ಮುಳ್ಳುಗಳನ್ನು ಚುಚ್ಚಿ ಕೊಳ್ಳುತ್ತಿದ್ದರು. ವಾಲೆ ಮರದ ಎಲೆಯಿಂದ ಬಳೆ ಮಾಡಿ ಕೈಗೆ ಬಳೆ ಹಾಕಿ ಕೊಳ್ಳುತ್ತಿದ್ದರು. ಕಾಲಿಗೆ ಹಾಕುವ ಕಡಗ ಹಿತ್ತಾಳೆ ಅಥವಾ ತಾಮ್ರದಿಂದ ಮಾಡಿ ಕೊಳ್ಳುತ್ತಿದ್ದರು. ಕಾಡಿನ ಹೂವುಗಳಾದ ಕಾಡುಮಲ್ಲಿಗೆ, ಮತ್ತುಗದ ಹೂ, ಕೇದಗ ಜಾಜಿ, ಸಂಪಿಗೆ, ಬಿಳಿದಾಸವಾಳ ಪಚ್ಚೆ ಅಬ್ಬಲಿಗೆ ಮುಂತಾದ ಹೂವುಗಳನ್ನು ಮುಡಿಯುತ್ತಿದ್ದರು.

ಅಡುಗೆ ಮಾಡಿದ ಮಡಿಕೆಯ ತಳದಲ್ಲಿನ ಮಸಿಯನ್ನು ಬಿದಿರಿನ ಚೂಪಾದ ಕಡ್ಡಿಯಿಂದ ಹಣೆಗೆ ಬೊಟ್ಟನ್ನು ಇಡುತ್ತಿದ್ದರು. ಉಬ್ಬನ್ನು ಆನೆಯ ಬಾಲದ ಕೂದಲಿನಿಂದ ತಿದ್ದುತ್ತಿದ್ದರು. ಆದರಿಂದ ಕಣ್ಣಿಗೆ ಕಾಡಿಗೆ ತರಹ ಮಸಿಯನ್ನು ಹಚ್ಚಿಕೊಳ್ಳುತ್ತಿದ್ದರು. ಕಿವಿಗೆ ಕಾರೆಮುಳ್ಳು, ಕಳ್ಳಿಮುಳ್ಳು ಇಡುತ್ತಿದ್ದರು. ಲವಂಗವನ್ನು ಕಿವಿಯ ಆಭರಣವಾಗಿ ಇಡುತ್ತಿದ್ದರೆ, ಗುಲಗಂಜಿಗೆ ತೂತು ಮಾಡಿ ಮುಳ್ಳಂದಿಯ ಮುಳ್ಳಗೆ ಪೋಣಿಸಿ ಕೋವಿಗೆ ಇಟ್ಟುಕೊಳ್ಳುತ್ತಿದ್ದರು. ಮೂಗಿಗೆ ಕಾರೆಮುಳ್ಳಿನಿಂದ ಚುಚ್ಚಿ ಬಿದಿರಿನ ಸಣ್ಣ ಕಡ್ಡಿಯನ್ನು ಇಟ್ಟುಕೊಳ್ಳುತ್ತಿದ್ದರು. ಅದಕ್ಕೆ ಕಾಡು ಮಲ್ಲಿಗೆ ಪೋಣಿಸಿಕೊಳ್ಳುತ್ತಿದ್ದರು. ಕರಳಿಗೆ ರಂಜಿಗೆ ಮರದ ಬೀಜಗಳನ್ನು, ಕಾರೆಕಾಯಿ, ಅಂಟ್ವಾಳಕಾಯಿ, ಮುತ್ತಗ ಬೀಜಗಳನ್ನು ಹೊಂಗೆ, ನಾರಿಗೆ ಪೋಣಿಸಿ ಕುತ್ತಿಗೆಗೆ ಹಾಕಿಕೊಳ್ಳುತ್ತಿದ್ದರು. ಮದುವೆಯಾದವರು ಕರಿಮಣಿ ಹಾಕಿಕೊಂಡು ಹಬ್ಬ ಹರಿದಿನಗಳಲ್ಲಿ ಕಾಡಿನಲ್ಲಿ ಸಿಗುವ ಕಾಯಿ, ಹಣ್ಣು, ಬೀಜಗಳಿಂದ ಅಲಂಕಾರಿಕ ವಸ್ತುಗಳನ್ನು ಸಿದ್ಧಪಡಿಸಿಕೊಂಡು ಧರಿಸುತ್ತಿದ್ದರು. ಸೊಪ್ಪಿನಿಂದ ತಯಾರಿಸಿದ ಉಡುಗೆಯನ್ನು ನೃತ್ಯ ಮಾಡುವಾಗ ಧರಿಸುತ್ತಿದ್ದರು. ಮಾವಿನ ಮರದ ಎಲೆಗಳನ್ನು ತುರುವಿಗೆ ಕಟ್ಟಿಕೊಳ್ಳುತ್ತಿದ್ದರು. ಸೊಂಟಕ್ಕೆ ಕಾಡಿನಲ್ಲಿ ಸಿಗುವ ಸೊಪ್ಪುಗಳನ್ನು ಕಟ್ಟಿಕೊಳ್ಳುತ್ತಿದ್ದರು. ಮದುವೆಯಾದ ಹೆಂಗಸರು ಕಾಲಿನ ತೋರು ಬೆರಳಿಗೆ ಬೆಳ್ಳಿಯ ಕಾಲುಂಗುರ ಹಾಕುತ್ತಿದ್ದರು. ಕಾಲಿಗೆ ತಾಮ್ರದ ಕಡಗ ಧರಿಸುತ್ತಿದ್ದರು.

ಇತ್ತೀಚೆಗಿನ ಬದಲಾವಣೆಯಲ್ಲಿ ಜೇನುಕುರುಬ ಮಹಿಳೆಯರು ತಮ್ಮ ಉಡುಗೆ ತೊಡುಗೆಯಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ. ಇಂದು ಮಹಿಳೆಯರು ಸೀರೆ, ರವಿಕೆ, ಹೊರಗೆ ಹೋಗುವಾಗ

ಧರಿಸುತ್ತಾರೆ. ಮನೆಯಲ್ಲಿ ನೈಟಿಗಳನ್ನು ಧರಿಸುವುದನ್ನು ಕಾಣಬಹುದಾಗಿದೆ. ಗಂಡಸರು ಪ್ಯಾಂಟು ಮತ್ತು ಶರಟು ಧರಿಸುತ್ತಾರೆ. ಹೆಂಗಸರು ಇಂದಿನ ಆಧುನಿಕ ಆಭರಣವನ್ನು ಧರಿಸುತ್ತಾರೆ. ಆಧುನಿಕವಾಗಿ ಬಂದಿರುವ ಸ್ಟಿಕ್ಕರ್‌ಗಳನ್ನು ಹಣೆಯಲ್ಲಿ ಇಡುತ್ತಾರೆ. ಕೈಗೆ ಗಾಜಿನ ಬಳೆ, ಕುತ್ತಿಗೆಗೆ ಆಧುನಿಕ ಮಣಿಸರಗಳನ್ನು ಧರಿತ್ತಿದ್ದಾರೆ. ಆಧುನಿಕ ಉಡುಗೆಯೊಂದಿಗೆ ಆಧುನಿಕ ಪಾದರಕ್ಷೆಗಳನ್ನು ಧರಿಸುವುದು. ಕೈಗೆ ವಾಚು ಧರಿಸುವುದನ್ನು ಇಂದು ನಾವು ಕಾಣಬಹುದು. ಜೇನುಕುರುಬ ಮಹಿಳೆಯರಿಗೂ ಬಹಳ ಹಿಂದಿನಿಂದ ಅಲಂಕಾರ ಪ್ರಜ್ಞೆ ಇತ್ತು ಎಂಬುದು ಅವರ ಉಡುಗೆ ತೊಡುಗೆಯಿಂದ ತಿಳಿಯುತ್ತದೆ.

ಜೇನುಕುರುಬರ ಪ್ರಾಚೀನ ಉಡುಗೆ ತೊಡುಗೆಯಲ್ಲಿ ಆಸಕ್ತಿ ಕ್ರಮೇಣ ಕಡಿಮೆಯಾಗಿದೆ. ಇಂದು ಆಧುನಿಕ ಉಡುಪು ಮತ್ತು ಆಭರಣಗಳನ್ನು ಧರಿಸುವುದು ಕ್ಷೇತ್ರಾಧ್ಯಯನದಲ್ಲಿ ಕಂಡು ಬಂದಿದೆ. ಇಂತಹ ಬದಲಾವಣೆಯಿಂದ ಮುಂದಿನ ದಿನಗಳಲ್ಲಿ ಇವರ ಪಾರಂಪರಿಕ ಉಡುಗೆ ತೊಡುಗೆ ಇಲ್ಲದಂತಾಗುವ ಸಾಧ್ಯತೆ ಇದೆ. ಮುಂದಿನ ಪೀಳಿಗೆಯವರಿಗೆ ಪಾರಂಪರಿಕ ಉಡುಗೆಯನ್ನು ಕೇವಲ ಪುಸ್ತಕ, ಚಿತ್ರ ಪಟಗಳಲ್ಲಿ ತೋರಿಸುವ ದಿನಗಳು ಬಹಳ ದೂರವಿಲ್ಲ (ಮಾ : ಅಮ್ಮಾಣಮ್ಮ, ಮೇಟಕುಪ್ಪೆ ಹಾಡಿ).

**ಅಸಲು (ಹಚ್ಚೆ)** : ಇವರ ಸ್ನೇಹಿತರು ಸಂಬಂಧಿಗಳಲ್ಲಿ ಇವರಿಗೆ ತುಂಬಾ ಇಷ್ಟವಾಗುವ ವ್ಯಕ್ತಿಯ ನೆನಪಿಗೋಸ್ಕರ ಕೈ ಮೇಲೆ ಅಸಲು ಹಾಕಿಸಿಕೊಳ್ಳುತ್ತಿದ್ದರು. ಅಡಿಗೆ ಮಾಡಿ ಸೌದೆಯಲ್ಲಿ ಕೆಂಡವಾಗಿ ಉಳಿದ ಇದ್ದಿಲನ್ನು ಪುಡಿ ಮಾಡಿ ಕೂಳಿ ಮರದ ಕೊಂಬೆಗಳನ್ನು ಮುರಿದಾಗ ಹಾಲು ಬರುತ್ತಿತ್ತು. ಈ ಹಾಲನ್ನು ಬಿದಿರಿನ ಸಣ್ಣ ಕೊಟ್ಟದಲ್ಲಿ ಸಂಗ್ರಹಿಸಿ ಇದ್ದಿಲಿನ ಪುಡಿಯನ್ನು ಮಿಶ್ರಣ ಮಾಡಿ ಬಿದಿರಿನ ಸಣ್ಣ ಸೀಳಿನಿಂದ ಸೂಜಿ ತರಹ ಚೂಪು ಮಾಡಿ ಕೈ ಮೇಲೆ ಅಸಲು ಹಾಕಿಸಿಕೊಳ್ಳುತ್ತಿದ್ದರು. ಅಸಲಿನಲ್ಲಿ ಹೂವಿನ ಚಿತ್ರ, ಎಲೆಯ ಚಿತ್ರ, ಪ್ರಾಣಿ–ಪಕ್ಷಿಗಳ ಚಿತ್ರ, ಸೂರ್ಯ–ಚಂದ್ರರ ಚಿತ್ರಗಳನ್ನು ಬರೆಸಿಕೊಳ್ಳುತ್ತಿದ್ದರು. ಅಚ್ಚೆ ಬರೆಸುವ ಮುಖಾಂತರ ಇಷ್ಟವಾದ ವ್ಯಕ್ತಿಯ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದರು. ಅಚ್ಚೆಯನ್ನು ಮುಂಗೈ ಮೇಲೆ, ಕೈಯ ಹೆಬ್ಬೆರಳಿನ ಮೇಲೆ, ಚುಕ್ಕೆ ಇಡುವ ಮೂಲಕ ನಾಡಿ ಮಿಡಿಯುವ ಕೈಯ ಭಾಗ, ಒಳಮೊಳಕೈಯ ಮೇಲೆ, ಹಣೆ ಕೆನ್ನೆಗಳು ಗಲ್ಲದ ಮೇಲೆ ಚುಕ್ಕೆ, ಸಣ್ಣ ಸಣ್ಣ ಚಿತ್ರ ಬರೆಸಿಕೊಳ್ಳುತ್ತಿದ್ದರು. ಕೈಗಳ ಮೇಲೆ ದೊಡ್ಡ ಚಿತ್ರ ಬರೆಸಿಕೊಳ್ಳುತ್ತಿದ್ದರು.

**ಕೈ ಬಳೆ** : ಗಾಜಿ ಗಿಡದ ಬೀಜ ಮತ್ತು ಮೆಣಸಿಗೆ ಬೀಜವನ್ನು ಹೊಂಗೆ ನಾರಿಗೆ ಪೋಣಿಸಿ ಕೈಗೆ ಬಳೆಯ ತರಹ, ಕೊರಳಿಗೆ ಹಾರದ ತರಹ ಹಾಕಿಕೊಳ್ಳುತ್ತಿದ್ದರು.

**ಚಪ್ಪಲಿ ತಯಾರಿಕೆ**

ನೇರಳೆ ಮರದ ಚಕ್ಕೆಯನ್ನು ಕಾಲಿನ ಅಳತೆಗೆ ತಕ್ಕಂತೆ ಕತ್ತರಿಸಿ, ಅದಕ್ಕೆ ತೂತುಮಾಡಿ ಕೈರೇಮರದ ನಾರಿನಿಂದ ಉಮಟ ಮಾಡಿಕೊಂಡು ಕಾಲಿಗೆ ಹಾಕಿಕೊಳ್ಳುತ್ತಿದ್ದರು. ಅವು ಪಾದಗಳಿಗೆ ಚಪ್ಪಲಿಯ ತರಹ ರಕ್ಷಣೆಯನ್ನು ನೀಡುತ್ತಿದ್ದವು.

### ೩. ೧೧. ಜಾತಿ ಪಂಚಾಯಿತಿ

ಜಾತಿ ಪಂಚಾಯಿತಿ ವರ್ಷಕ್ಕೆ ಒಮ್ಮೆ ಸೇರುತ್ತಾರೆ. ಈ ಸಂದರ್ಭದಲ್ಲಿ ಹಾಡಿಯಲ್ಲಿ ಒಂದು ವರ್ಷದಲ್ಲಿ ಮಾಡುವ ಹಬ್ಬ, ಜಾತ್ರೆಗಳ ಬಗೆಗೆ ಪ್ರತಿಯೊಂದು ಗುಡಿಸಲಿನ ಪರಿಸ್ಥಿತಿಗಳ ಬಗೆಗೆ ವಿಚಾರಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಚರ್ಚಿಸುತ್ತಾರೆ. ಇನ್ನು ಹಾಡಿಯಲ್ಲಿ ಜಗಳವೇನಾದರೂ ಆದರೆ ಈ ಜಾತಿ ಪಂಚಾಯಿತಿಯನ್ನು ಮತ್ತೆ ಸೇರಿ ಅಲ್ಲಿಯೇ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಲಾಗುತ್ತದೆ. ಒಬ್ಬರಿಗೊಬ್ಬರಿಗೆ ರಾಜಿ ಮಾಡಿಸುತ್ತಾರೆ.

ಹತ್ತು ಕುತ್ತಿ ಮನೆಯ ಸ್ಥಾನಕ್ಕೆ ಒಬ್ಬರು ಯಜಮಾನರಿರುತ್ತಾರೆ. ಅವರೇ ಹಾಡಿಯ ಯಜಮಾನರಾಗುತ್ತಾರೆ. ಹಾಡಿಯ ಯಜಮಾನರಾಗುವವರು ದೇವರ ಮನೆತನದವರು ಆಗಬೇಕು. ಗಂಡು ಮಗು ಇಲ್ಲದಿದ್ದರೆ ದೊಡ್ಡಪ್ಪ ಅಥವಾ ಚಿಕ್ಕಪ್ಪನ ಮಗುವನ್ನು ದತ್ತು ಪಡೆದು ಹಾಡಿಯ ಯಜಮಾನನ ಆಯ್ಕೆ ಮಾಡುತ್ತಾರೆ. ಇದು ಅವರಿಗೆ ಪಾರಂಪರಿಕವಾಗಿ ಬಂದಿರುತ್ತದೆ.

ಹೆಣ್ಣಿಗೂ ಜಾತಿ ಪಂಚಾಯ್ತಿಯಲ್ಲಿ ಯಜಮಾನರ ಸ್ಥಾನವನ್ನು ನೀಡಿರುವ ಉದಾಹರಣೆಗಳಿವೆ. ಉದಾ: ಹಾಡಿಯಲ್ಲಿ ಹೆಣ್ಣು ಮಗು ಋತುಮತಿಯಾದರೆ ಹಾಡಿಯ ಯಜಮಾನನ ಹೆಂಡತಿಯೇ ಆ ಮಗುವಿಗೆ ಸೂತಕದ ಶಾಸ್ತ್ರ ಮಾಡಬೇಕು. ಇದು ಜಾತಿ ಪಂಚಾಯ್ತಿಯ ನಿಯಮವಾಗಿರುತ್ತದೆ.

ನ್ಯಾಯ ಪಂಚಾಯ್ತಿಯಲ್ಲಿ ಮಹಿಳೆಯರ ಪಾತ್ರವೆಂದರೆ ಮಹಿಳೆಯರು ಹಾಡಿಯಲ್ಲಿ ತಪ್ಪು ಮಾಡಿದಾಗ ಮಹಿಳೆಯರೇ ಸೇರಿ ನ್ಯಾಯ ತೀರ್ಮಾನ ಮಾಡಿಕೊಳ್ಳುತ್ತಿದ್ದರು. ಆದರೆ ಹಣಕಟ್ಟುವ ವ್ಯವಸ್ಥೆ ಇರಲಿಲ್ಲ. ಮಹಿಳೆಯರು ಪರಸ್ಪರ ಜಗಳವಾಡಿದಾಗ ಮಹಿಳೆಯರ ಗಂಡಂದಿರು ನ್ಯಾಯ ತೀರ್ಮಾನಿಸುತ್ತಾರೆ.

ಒಂದು ಹಾಡಿಯಲ್ಲಿ ಕಾಯಿಲೆ ಬಂದರೆ, ಹಾಡಿಗೆ ಸಮಸ್ಯೆ ಉಂಟಾದರೆ ಹಾಡಿಯ ಯಜಮಾನನಾದ 'ತಮ್ಮಡಿ'ಯೇ ಅದಕ್ಕೆ ಸೂಕ್ತ ಪರಿಹಾರ ಸೂಚಿಸಬೇಕು. ಬೇರೆ ಹಾಡಿಯ ಯಜಮಾನ ಬಂದು ನ್ಯಾಯ ತೀರ್ಮಾನ ಮಾಡಲು ಅವಕಾಶ ಕೊಡುವುದಿಲ್ಲ.

ಪಂಚಾಯಿತಿ ಸೇರಲು ನಿರ್ದಿಷ್ಟ ಸಮಯದ ಕಡ್ಡಾಯವಿರುವುದಿಲ್ಲ. ಇವರಿಗೆ ಸರಿ ಹೊಂದುವಂತಹ ಯಾವುದೇ ಸಮಯದಲ್ಲಿ ಪಂಚಾಯಿತಿ ಸೇರಬಹುದಾಗಿರುತ್ತದೆ. ಬೇರೆ

ಹಾಡಿಯವರನ್ನು ಕರೆದು ನ್ಯಾಯ ತೀರ್ಮಾನ ಮಾಡುತ್ತಿರಲಿಲ್ಲ. ಹಾಡಿಯ ತಮ್ಮಡಿಯೇ ತೀರ್ಮಾನ ಮಾಡುತ್ತಿದ್ದರು. ಆತನೇ ನ್ಯಾಯ ತೀರ್ಮಾನ ಮಾಡುತ್ತಿದ್ದರು.

### ೩. ೧೨. ರಾಜಕೀಯ ಸ್ಥಿತಿಗತಿ

ರಾಜಕೀಯವಾಗಿ ಜೇನುಕುರುಬರು ಹೆಚ್ಚಾಗಿ ಗುರುತಿಸಿಕೊಂಡಿಲ್ಲವೆಂದೇ ಹೇಳಬಹುದು. ಚುನಾವಣಾ ಮೀಸಲಾತಿ ಅನ್ವಯ ಅಭ್ಯರ್ಥಿಗಳು ಸ್ಪರ್ಧಿಸಬೇಕಾಗಿರುವುದರಿಂದ ರಾಜಕೀಯ ಪಕ್ಷಗಳಿಗೆ ಬೇರೆ ಅಭ್ಯರ್ಥಿಗಳೇ ಸಿಗದಿರುವ ಸಂದರ್ಭದಲ್ಲಿ ಜೇನುಕುರುಬ ಅಭ್ಯರ್ಥಿಗಳನ್ನು ಚುನಾವಣೆಗಳಿಗೆ ಸ್ಪರ್ಧಿಸಲು ಅವಕಾಶಗಳು ಸಿಗುತ್ತಿವೆ. ಇದು ಬಯಸದೇ ಬರುವ ಭಾಗ್ಯವೆಂದೇ ಹೇಳಬಹುದು. ೨೦೧೫ ರ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಹುತೇಕ ಅಭ್ಯರ್ಥಿಗಳು ಇದೇ ರೀತಿ ಆಯ್ಕೆಯಾಗಿರುವುದನ್ನು ಕಾಣಬಹುದಾಗಿದೆ. ಅದರಲ್ಲೂ ಮಹಿಳಾ ಮೀಸಲಾತಿ ಸ್ಥಾನಗಳು ಅಧಿಕವಾಗಿ ದೊರೆತಿರುವುದನ್ನು ಕಾಣುತ್ತೇವೆ.

**೨೦೧೫ರ ಗ್ರಾಮ ಪಂಚಾಯಿತಿ ಚುನಾವಣೆ ವಿವರ**

ಮೇ – ಜೂನ್ ೨೦೧೫ರ ಗ್ರಾಮ ಪಂಚಾಯಿತಿಯ ಚುನಾವಣೆಯಲ್ಲಿ ವಿವಿಧ ಗ್ರಾಮ ಪಂಚಾಯಿತಿಯಿಂದ ಸ್ಪರ್ಧಿಸಿ ಜಯಗಳಿಸಿದ ಅಭ್ಯರ್ಥಿಗಳು ಮತ್ತು ಅವರು ಸಮುದಾಯದ ಬಗೆಗೆ ಹೊಂದಿರುವ ಕಾಳಜಿಯ ಕುರಿತ ವಿವರವನ್ನು ದಾಖಲಿಸಲಾಗಿದೆ.

**ಕೋಷ್ಟಕ : ೩. ೧. ೨೦೧೫ ರ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ ಜೇನುಕುರುಬ ಅಭ್ಯರ್ಥಿಗಳ ವಿವರ.**

| **ಜಿಲ್ಲೆ : ಕೊಡಗು** | | **ತಾಲೂಕು : ವಿರಾಜಪೇಟೆ** |
|---|---|---|
| **ಗ್ರಾಮ ಪಂಚಾಯತಿ ಹೆಸರು** | **ಅಭ್ಯರ್ಥಿಗಳ ಹೆಸರು (ಅಂದಾಜು ವಯಸ್ಸು)** | **ವಾಸಸ್ಥಾನ** |
| ಕೇ ಬಾಡಗ | ಜೆ ಅಣ್ಣಯ್ಯ (೫೦) | ಕೊಳಂಗೆ ಹಾಡಿ |
| | ಜೆ ಜಯ (೩೦) | ಆಲಂದೂಡು |
| ನಾಲ್ಕೇರಿ | ಜೆ ಎಂ ರಾಮು (೩೫) ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ | ಬೊಮ್ಮಾಡುಹಾಡಿ (ಸಂಪಿಗೆ ಕೊಲ್ಲಿ) |
| | ಜೆ ಕೆ ಲಕ್ಷ್ಮಿ ( ೨೭) | ಬೊಮ್ಮಾಡು ಹಾಡಿ (ಸಂಪಿಗೆ ಕೊಲ್ಲಿ) |
| | ಜೆ ಕೆ ಶಾಂತಿ (೫೦) | ನಾಣಚಿಗದ್ದೆ ಹಾಡಿ |
| ತಿತಿಮತಿ | ಜೆ ಸಿ ಶಾಂತಮ್ಮ (೩೦) | ಮಜ್ಜಿಗೆಹಳ್ಳ ಹಾಡಿ |
| | ಜೆ ಮುತ್ತು (೩೨) | ದೊಡ್ಡರೇಷ್ಮೆ ಹಾಡಿ |
| ದೇವರಪುರ | ಜೆ ರಾಜು (೪೯) | ಬೊಮ್ಮನಹಳ್ಳಿ ಕಾಲೋನಿ |
| | ಜೆ ರಾಣಿ(೩೨) | ದೇವರಕಾಡು ಪೈಸಾರಿ |
| ನಿಟ್ಟೂರು | ಜೆ ಕೆ ಅಣ್ಣಯ್ಯ (೪೬) | ಕೋಳಂಗೇರಿ ಹಾಡಿ |
| | ಜೆ ವಿನೋದ (೨೮) | ಕಟ್ಟೆಹಾಡಿ |
| | ಜೆ ಅಪ್ಪಣ್ಣ (೫೦) | ತಟ್ಟೇಕೇರೆ |
| ಕುಟ್ಟ | ಜೆ ಕೆ ರಂಜೀತ್ (೩೮) | ಸಿಂಕೋನ ಕಾಲೋನಿ |

| ಜಿಲ್ಲೆ : ಮೈಸೂರು | | ತಾಲೂಕು : ಪಿರಿಯಾಪಟ್ಟಣ |
|---|---|---|
| ಗ್ರಾಮ ಪಂಚಾಯತಿ ಹೆಸರು | ಅಭ್ಯರ್ಥಿಗಳ ಹೆಸರು (ಅಂದಾಜು ವಯಸ್ಸು) | ವಾಸಸ್ಥಾನ |
| ಮುತ್ತೂರು | ಮೋಹನ್ ಕುಮಾರ್ | ಮುತ್ತೂರು ಕಾಲೋನಿ ಹಾಡಿ |
| | ರಾಜಮ್ಮ | ಲಿಂಗಪುರ |
| | ಸೀತ | ಮುತ್ತೂರು ಕಾಲೋನಿ ಹಾಡಿ |
| ಕೊಪ್ಪ | ಶಿವ ಕುಮಾರ್ | ರಾಣಿಗೇಟ್ |
| ಚಿಟ್ಟೇನಹಳ್ಳಿ | ಸವಿತಾ | ನಾರಳಾಪುರ |
| ಮಾಲಂಗಿ | ಜಾನಕಮ್ಮ | ಅಬ್ಬಳತಿ |
| ಜಿಲ್ಲೆ : ಮೈಸೂರು | | ತಾಲೂಕು : ಹುಣಸೂರು |
| ನೇರಳಕುಪ್ಪೆ | ಮಧುರ (೨೫) | ಕಚುವಿನ ಹಳ್ಳಿ |
| | ರಾಜು (೨೮) | ಕಚುವಿನ ಹಳ್ಳಿ |
| ಗುರುಪುರ | ವಸಂತ (೩೦) | ನಾಗಾಪುರ ಐದನೇ ಬ್ಲಾಕ್ |
| ದೊಡ್ಡಹೆಜ್ಜೂರು | ಮಗೇಶ (೩೧) | ಭಾರತವಾಡಿ |
| ಕಿರಂಗೂರು | ನಾಗೇಶ (೨೭) | ದಾಸನಪುರ |
| ಕಡೆ ಮನುಗನಹಳ್ಳಿ | ಕಮಲ(೩೫) ಅವಿರೋಧ ಆಯ್ಕೆ | ಉಡುವೆ ಪುರ |
| | ರಾಣಿ (೨೮) ಅವಿರೋಧ ಆಯ್ಕೆ | ಉಡುವೆಪುರ |
| | ರಾಮಯ್ಯ (೫೦) | ತೆಕ್ಕಲ ಹಾಡಿ |

**ಕೋಷ್ಟಕ : ೩. ೨. ೨೦೧೫ ರ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಜಿತ ಜೇನುಕುರುಬ ಅಭ್ಯರ್ಥಿಗಳ ವಿವರ.**

| ಜಿಲ್ಲೆ : ಕೊಡಗು | | ತಾಲೂಕು : ವೀರರಾಜೇಂದ್ರಪೇಟೆ |
|---|---|---|
| ಗ್ರಾಮ ಪಂಚಾಯತಿ ಹೆಸರು | ಅಭ್ಯರ್ಥಿಗಳ ಹೆಸರು (ಅಂದಾಜು ವಯಸ್ಸು) | ವಾಸಸ್ಥಾನ |
| ಕೇ ಬಾಡಗ | ಜೆ ಎಸ್ ಅಯ್ಯಪ್ಪ(೩೦) | ನಾಣಚಿಗದ್ದೆ ಹಾಡಿ |
| | ಜೆ ಎಸ್ ಗೌರಿ | ತಾಯಿ ಭೂಮಿ ಪೈಸಾರಿ |
| ನಾಲ್ಕೇರಿ | ಜೆ ವಾಣಿ (೪೦) | ನಾಗರಹೊಳೆ |
| | ಜೆ ನಿರ್ಮಲ | ಗೋಣಿಗದ್ದೆ |
| ತಿತಿಮತಿ | ಜೆ ಯಲ್ಲಪ್ಪ(೩೮) | ದೊಡ್ಡರೇಷ್ಮೆ |
| | ಜೆ ಬೇಬಿ (ಮ.) ೩೫ | ಬೊಗ್ಗನ ಅಡ್ಲು |
| ದೇವರಪುರ | ಜೆ ಆರ್ ಪುಷ್ಪ | ಕಾರೆ ಅಡ್ಲು |
| ಜಿಲ್ಲೆ : ಮೈಸೂರು | | ತಾಲೂಕು : ಪಿರಿಯಾಪಟ್ಟಣ |
| ಮುತ್ತೂರು | ಎಂ ಟಿ ಕುಮಾರ್ | ಮುತ್ತೂರು ಕಾಲೋನಿ ಹಾಡಿ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

**ಶ್ರೀಮತಿ ರಾಜಮ್ಮ, ಮುತ್ತೂರು ಗ್ರಾಮ ಪಂಚಾಯಿತಿ**

ಇವರದು ವಾಸದ ಹಾಡಿ ಮುತ್ತೂರು ಕಾಲೋನಿ. ರಾಜಮ್ಮನವರು (೩೫ ವರ್ಷ) ಜೇನುಕುರುಬರ ಮಹಿಳಾ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯಗಳಿಸಿದ್ದಾರೆ. ಇವರೇ ಹೇಳುವಂತೆ, ನಮ್ಮವರ ಕಷ್ಟಗಳನ್ನು ಬಗೆ ಹರಿಸಬೇಕು. ನಮ್ಮ ಹಾಡಿಗಳಿಗೆ ಇಂದಿಗೂ ಸ್ವಚ್ಛವಾದ ಕುಡಿಯುವ ನೀರಿನ ಕೊರತೆ ಇದೆ, ಅದನ್ನು ನಿವಾರಿಸಬೇಕು. ವಿದ್ಯುತ್ ಸಂಪರ್ಕ, ಚರಂಡಿ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಿಸಬೇಕು. ನಮ್ಮವರಿಗೆ ಮನೆ ಕಟ್ಟಿಸಲು ಅನುದಾನ ಬಿಡುಗಡೆ ಮಾಡಿಸಬೇಕು. ನಮ್ಮದೊಂದು ಮಾದರಿ ಗ್ರಾಮ ಪಂಚಾಯಿತಿಯನ್ನಾಗಿ ಮಾಡಲೇಬೇಕು ಎಂಬ ಆಸೆ ಹೊಂದಿರುವುದಾಗಿ ಹೇಳಿಕೊಂಡರು. ಜೊತೆಗೆ ಸ್ವಸಹಾಯ ಸಂಘಗಳನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿ ಮಹಿಳೆಯರಲ್ಲಿ ಉಳಿತಾಯದ ಪ್ರವೃತ್ತಿ ಬೆಳೆಯುವಂತೆ ಮಾಡಬೇಕು ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ, ಉದ್ಯೋಗಕ್ಕೆ ಬಳಸಬೇಕು ಎಂದು ತಿಳಿಸಿದರು. ನಮ್ಮ ಗಂಡಸರ ಮದ್ಯಪಾನವನ್ನು ಬಿಡಿಸಲು ಸಾಕಷ್ಟು ಹೋರಾಟ ಮಾಡಿದ್ದೇವೆ, ಕೆಲವರು ಕುಡಿತ ಬಿಟ್ಟಿದ್ದಾರೆ ಎಂದು ಸಂತಸಗೊಂಡರು.

ನಾವು ಆದಿವಾಸಿಗಳೆಂದು ಗುರುತಿಸಿಕೊಂಡಿದ್ದರೂ ಕೂಡ ನಾವು ಕಾಡಿನ ಜೀವಿಗಳಂತೆ ಹಿಂದೆ ಇದ್ದ ಹಾಗೇ ಇರುವುದಕ್ಕಿಂತ ನಮ್ಮ ಸಂಸ್ಕೃತಿಯನ್ನು ಒಳಗೊಂಡು ಆಧುನಿಕ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ಕೊಡಿಸಬೇಕು. ಕಂಪ್ಯೂಟರ್ ಕಲಿಕೆ ಇಂದು ಅಗತ್ಯವಾಗಿದೆ ಆ ಕಡೆಗೆ ಹೆಚ್ಚು ಒತ್ತು ನೀಡುತ್ತೇವೆ ಎಂದರು. ನಮ್ಮ ಹಿಂದಿನವರು ಕಾಡಿನೊಳಗೆ ಸೌಖ್ಯವಾಗಿದ್ದರು. ಆದರೆ ನಮಗೆ ಇಂದು ಕಾಡಿನಲ್ಲಿ ಭದ್ರತೆ ಇಲ್ಲದೆ ಅತಂತ್ರರಾಗಿದ್ದೇವೆ ನೆಲೆಯೇ ಇಲ್ಲ ಎನ್ನುತ್ತಾರೆ. ಇವರು ಪಾರಂಪರಿಕ ಜ್ಞಾನವನ್ನು ಉಳಿಸಲು ಜೇನುಕುರುಬ ಸಮುದಾಯಕ್ಕೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕು ಹಾಗೂ ಹಳೆಯ ಜ್ಞಾನದ ಜೊತೆಗೆ ಆಧುನಿಕ ಶಿಕ್ಷಣದ ಅವಶ್ಯಕತೆಯೂ ಇದೆ ಎನ್ನುತ್ತಾರೆ.

## ೩. ೧೩. ನಾಯಕತ್ವದ ಸಮಸ್ಯೆ

ಜೇನುಕುರುಬರು ಬಹಳ ಹಿಂದೆ ಕಾಡಿನೊಳಗೆ ಒಂದೇ ಕಡೆ ವಾಸಿಸುತ್ತಿದ್ದರು. ಸ್ವಾಭಾವಿಕವಾಗಿ ಒಂದು ಕುಟುಂಬದ ಹಿರಿಯರು ನಾಯಕತ್ವ ವಹಿಸಿಕೊಂಡು, ಇಡೀ ಹಾಡಿಯೇ ಒಂದು ಕುಟುಂಬ ಮಾದರಿಯನ್ನು ಹೊಂದುತ್ತಿತ್ತು. ಅವರ ನಾಯಕತ್ವದಲ್ಲಿ ಇಡೀ ಹಾಡಿಯ ಜನರು ಅವರ ಮಾತಿಗೆ ಬದ್ಧರಾಗಿ ಜೀವಿಸುತ್ತಿದ್ದರು. ಆದರೆ, ಹೊರಗೆ ನೆಲೆಸಿರುವವರು ಒಂದೇ ಸಮುದಾಯದವರಲ್ಲ. ಬೇರೆ ಬೇರೆ ಸಮುದಾಯದ ನೆರೆ ಹೊರೆಯನ್ನು ಹೊಂದಬೇಕಾದ ಅನಿವಾರ್ಯತೆ ಇದ್ದು ಅಲ್ಲಿ ಯಾರು ನಾಯಕರು ಎಂಬುದು ಪ್ರಶ್ನೆಯಾಗುತ್ತಿದೆ? ಅಥವಾ ಮನೆಗೆ ಒಬ್ಬರು ನಾಯಕರಾಗುವಂತಾಗಿ ಹಿರಿಯರಿಗೆ ಗೌರವ ಮನ್ನಣೆ ಕಡಿಮೆಯಾಗುತ್ತಿದೆ.

- ಪುನರ್ವಸತೀಕರಣದ ನೆಲೆಯಲ್ಲಿ ಬೇರೆ ಬೇರೆ ಸಮುದಾಯದವರು ನೆಲೆಸಿ ಸಂಖ್ಯಾತ್ಮಕವಾಗಿ ಹೆಚ್ಚಾಗಿರುವ ಸಮುದಾಯದ ಹಿರಿಯ ನಾಯಕತ್ವ ವಹಿಸಿಕೊಂಡು ಕಾರ್ಯನಿರ್ವಹಿಸದರೆ, ಆತನ ನಿಯಮ ಎಲ್ಲಾ ಸಮುದಾಯಕ್ಕೂ ಎಲ್ಲಾ ರೀತಿಯಲ್ಲೂ ಹೊಂದಾಣಿಕೆ ಯಾಗದೆ, ಪರಸ್ಪರ ಭಿನ್ನಾಭಿಪ್ರಾಯಗಳು ತಲೆದೋರುತ್ತವೆ.
- ಕಾಡಿನೊಳಗೆ ಅವಿಭಕ್ತ ಕುಟುಂಬದವರಾಗಿದ್ದ ಇವರು ಕಾಡಿನ ಆಚೆ ವಿಭಕ್ತ ಕುಟುಂಬಗಳಾಗುತ್ತಿದ್ದಾರೆ. ಅವಿಭಕ್ತ ಕುಟುಂಬ (Joint Family) ಇದ್ದಾಗ ಆಂತರಿಕ ಕಲಹಗಳು ಬಹಳ ಅಪರೂಪವಾಗಿದ್ದು, ಅಂತಹ ಕಲಹಗಳು ಏರ್ಪಟ್ಟರೆ ಅದನ್ನು ಕುಟುಂಬದ ಒಳಗೆ ಬಗೆಹರಿಸಿಕೊಳ್ಳುತ್ತಿದ್ದರು. ಹೊರಬಂದ ಅನಂತರ ವಿಭಕ್ತ ಕುಟುಂಬಗಳಾದ ನಂತರ ಗಂಡ-ಹೆಂಡತಿಯ ಸಣ್ಣ ಸಣ್ಣ ಜಗಳಗಳಿಗೂ ಆರಕ್ಷಕ ಠಾಣೆಯ ಮೆಟ್ಟಿಲು ಹತ್ತುವಂತಾಗಿದೆ. ಇಲ್ಲಿ ಹಿರಿಯರ ಮಾರ್ಗದರ್ಶನದ ಕೊರತೆ ಎದ್ದು ಕಾಣುತ್ತದೆ.
- ಹಿಂದೆ ನಾಯಕರಿಗೆ ತುಂಬಾ ಗೌರವ ನೀಡುತ್ತಿದ್ದರು. ಆಧುನಿಕತೆ ಪ್ರಭಾವದಿಂದ ಕುಡಿತದ ಚಟಗಳನ್ನು ಅಂಟಿಸಿಕೊಂಡು ನಾಯಕರಿಗೆ ಗೌರವ ನೀಡುತ್ತಿಲ್ಲ. ನಾಯಕತ್ವ ಎಂಬ ಪರಿಕಲ್ಪನೆಯಿಂದ ದೂರ ಸರಿಯುತ್ತಿದ್ದಾರೆ. ಚಿಕ್ಕ ಮಕ್ಕಳು ಸಹಿತ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಪರಿಪಾಠ ಬೆಳೆದಿದೆ.
- ಹಿರಿಯರು ಮತ್ತು ಯುವ ಸಮುದಾಯದ ನಡುವೆ ತಲೆ ಮಾರಿನ ಅಂತರ (Generation Gap) ದಿಂದ ಪರೋಕ್ಷವಾಗಿ ನಾಯಕತ್ವದ ಮೇಲೆ ಪರಿಣಾಮ ಬೀರುತ್ತಿದೆ.
- ಪರಿಶಿಷ್ಟ ವರ್ಗದ ಮೀಸಲು ಪಟ್ಟಿಯಲ್ಲಿ ಆದಿವಾಸಿಯೇತರರು ನುಸುಳುತ್ತಿರುವುದರಿಂದ ಜೇನುಕುರುಬರಂತಹ ಆದಿಮ ಬುಡಕಟ್ಟುಗಳಿಗೆ ಕನಿಷ್ಟ ಸ್ಥಾನಮಾನಗಳೂ ಸಿಗುತ್ತಿಲ್ಲ. ಇತ್ತ ಪಾರಂಪರಿಕ ತಿಳುವಳಿಕೆಯಿಂದ ಜೀವಿಸಲು ಕಾಡೂ ಇಲ್ಲ. ಆಧುನಿಕ ಜೀವನದ ಸವಲತ್ತು ಪಡೆಯಲು ಅಧಿಕಾರವೂ ಇಲ್ಲ. ಇದರಿಂದ ಇವರ ಬದುಕು ಅತಂತ್ರವಾಗಿದೆ.
- ಆಧುನಿಕ ರಾಜಕೀಯ ನಾಯಕರು, ಆದಿಮ ಬುಡಕಟ್ಟಿನ ಸದಸ್ಯರಿಗೆ ಪ್ರಾಶಸ್ತ್ಯ ನೀಡುತ್ತಿಲ್ಲ. ಇವರು ಮುಗ್ಧ ಸ್ವಭಾವದವರಾಗಿದ್ದರಿಂದ ಗಟ್ಟಿಯಾಗಿ ನೆಲೆ ಗಿಟ್ಟಿಸಿಕೊಳ್ಳಲು ಇವರಿಗೆ ಸಾಧ್ಯವಾಗುತ್ತಿಲ್ಲ.
- ಮೀಸಲು ಕ್ಷೇತ್ರದಲ್ಲಿ ನಿರಾಯಾಸವಾಗಿ (ಬೇರೆ ಅಭ್ಯರ್ಥಿಗಳಿಲ್ಲದೆ) ಗೆಲುವು ಕಂಡಿರುವ ಜೇನುಕುರುಬರು ನೆಪ ಮಾತ್ರಕ್ಕೆ ಅಧಿಕಾರದಲ್ಲಿರುತ್ತರಾದರೂ, ಬುಡಕಟ್ಟೇತರರ ಹಿಡಿತದಲ್ಲಿ ಕೆಲಸ ನಿರ್ವಹಿಸುವುದು ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಿದೆ.

- ಪಾರಂಪರಿಕ ಜೀವನಕ್ಕೆ ಹೊಂದಿಕೊಂಡಿದ್ದವರು ಆಧುನಿಕ ರಾಜಕೀಯ ನಿಯಮಗಳನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲರಾಗುತ್ತಾ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗದೇ, ರಾಜಕೀಯ ಹಕ್ಕನ್ನು ಚಲಾಯಿಸಲಾಗದೆ ಜೀವಿಸುವಂತಾಗಿದೆ.
- ಪಾರಂಪರಿಕ ನಾಯಕರಿಗೆ ಸ್ಥಾನಮಾನವಿಲ್ಲ, ಆಧುನಿಕ ನಾಯಕರಿಗೆ ಸರ್ಕಾರ, ಕಾನೂನುಗಳ ತಿಳುವಳಿಕೆ ಇಲ್ಲದಿರುವುದು ಕೂಡ ಇವರಿಗೆ ಶಾಪವಾಗಿ ಪರಿಣಮಿಸಿದೆ.

### ೩. ೧೪. ಶೈಕ್ಷಣಿಕ ಸ್ಥಿತಿಗತಿ

ಜೇನುಕುರುಬ ಬುಡಕಟ್ಟಿನ ಶೈಕ್ಷಣಿಕ ಸ್ಥಿತಿ ಗತಿಯ ಕುರಿತು ಮತ್ತು ಈ ಅಧ್ಯಯನದ ಪರಿಧಿಯಲ್ಲಿ ವಿಶ್ಲೇಷಿಸುವುದಾದರೆ, ಇವರ ಶಿಕ್ಷಣ ಜ್ಞಾನವನ್ನು 'ಪಾರಂಪರಿಕ ಶಿಕ್ಷಣ ಜ್ಞಾನ' ಮತ್ತು 'ಆಧುನಿಕ ಶಿಕ್ಷಣ ಜ್ಞಾನ' ಎಂದು ಎರಡು ಆಯಾಮಗಳಲ್ಲಿ ನೋಡಬಹುದಾಗಿದೆ.

### ೩. ೧೪. ೧ ಪಾರಂಪರಿಕ ಶಿಕ್ಷಣ

ಶಿಕ್ಷಣವೆಂಬುದಕ್ಕೆ ಇಂದು ಯುರೋಪಿಯನ್ನರ ಪ್ರಭಾವದಿಂದ ಭಾರತಕ್ಕೆ ಕಾಲಿರಿಸಿದ ಆಧುನಿಕ ಶಿಕ್ಷಣವೆಂಬ ಪರಿಕಲ್ಪನೆ ಪ್ರಚಲಿತವಿದೆ. ಆಧುನಿಕ ಶಿಕ್ಷಣಕ್ಕೆ ಹೊರತಾದ ಜ್ಞಾನ ಶಿಸ್ತುಗಳನ್ನು ಶಿಕ್ಷಣದ ಪರಧಿಯಲ್ಲಿ ನೋಡುವ ಜಾಯಮಾನವಿಲ್ಲದಂತಾಗಿದೆ. ಉದಾಹರಣೆಗೆ ನಾಟಿ ವೈದ್ಯ ಪದ್ಧತಿಯನ್ನು ಹಳ್ಳಿಗಾಡಿನ ಎಷ್ಟೋ ಜನ ಅನುಸರಿಸುತ್ತಿದ್ದಾರೆ. ಅದು ತಲೆಮಾರಿನಿಂದ ತಲೆಮಾರಿಗೆ ಮುಂದುವರೆಯುತ್ತ ಬಂದ ಮೌಖಿಕ ಪರಂಪರೆಯ ಶಿಕ್ಷಣವೆಂದೇ ಹೇಳಬಹುದು. ಆದರೆ ಅದನ್ನು ಶಿಕ್ಷಣವೆಂದು ಪರಿಗಣಿಸುವುದೇ ಇಲ್ಲ. ಪ್ರಪಂಚದಾದ್ಯಂತ ಇರುವ ಬುಡಕಟ್ಟುಗಳು ತನ್ನದೇ ಆದ ಜ್ಞಾನ ಶಿಸ್ತನ್ನು ಹೊಂದಿರುತ್ತವೆ. ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹರಿದುಬಂದಿರುವ ಈ ಜ್ಞಾನ ಶಿಸ್ತನ್ನು ಪರರಿಗೆ ಅವು ಹಂಚುವುದಿಲ್ಲ. ಈ ಪಾರಂಪರಿಕ ಶಿಕ್ಷಣ ಕೇವಲ ಆ ಬುಡಕಟ್ಟಿಗೆ ಮಾತ್ರ ಸೀಮಿತವಾಗಿರುತ್ತದೆ. ಪಾರಂಪರಿಕ ಶಿಕ್ಷಣ ಜ್ಞಾನವನ್ನು ವ್ಯಾಖ್ಯಾನಿಸುವುದಾದರೆ

ಜೇನುಕುರುಬರ ಪಾರಂಪರಿಕ ಶಿಕ್ಷಣ ಜ್ಞಾನವನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

**ಜೇಂಕಿ ಕಂಡುಹಿಡಿಯುವ ಜ್ಞಾನ** : ಜೇನುಕುರುಬರು ಯಾವ ಆಧುನಿಕ ಸಲಕರಣೆಗಳು ಇಲ್ಲದೆ ಕಾಡಿನ ಉತ್ಪನ್ನಗಳನ್ನೇ ಬಳಸಿಕೊಂಡು ಕಾಲಕಾಲಕ್ಕೆ, ತಮಗೆ ಬೇಕಾದ ಹಾಗೆ ಬೆಂಕಿಯನ್ನು ಉತ್ಪತ್ತಿ ಮಾಡಿಕೊಳ್ಳುತ್ತಾರೆ. ಇದು ತಮ್ಮ ಆಹಾರವನ್ನು ಬೇಯಿಸಿಕೊಳ್ಳುವುದು ಮತ್ತು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ.

**ಅರಣ್ಯ ಜ್ಞಾನ** : ಜೇನುಕುರುಬರು ಅರಣ್ಯವಾಸಿಗಳಾದ್ದರಿಂದ ಸಹಜವಾಗಿ ಇವರಿಗೆ ಅರಣ್ಯ ಸಂಬಂಧಿತ ಜ್ಞಾನವನ್ನು ಹೊಂದಿರುತ್ತಾರೆ. ಕಾಡಿನಲ್ಲಿರುವ ಮರಗಳ ಬಗೆಗಳು, ಅವುಗಳ ಉಪಯೋಗಗಳನ್ನು

ಇವರು ಬಲ್ಲವರಾಗಿರುತ್ತಾರೆ. ಜೇನುಕುರುಬರು ಮರ ಹತ್ತುವ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ.

**ಮಳೆಯ ಜ್ಞಾನ** : ಜೇನುಕುರುಬರು ಕಾಲಕಾಲಕ್ಕೆ ಆಗುವ ಮಳೆಯ ಪ್ರಮಾಣವನ್ನು ಮುಂದಾಗಿಯೇ ತಿಳಿದುಕೊಳ್ಳುವ ಜ್ಞಾನವನ್ನು ಹೊಂದಿರುತ್ತಾರೆ.

**ಪ್ರಾಣಿಗಳ ಜ್ಞಾನ** : ಜೇನುಕುರುಬರು ಕಾಡುಪ್ರಾಣಿಗಳನ್ನು ಗುರುತಿಸುವ ಮತ್ತು ಅವುಗಳಿಂದ ರಕ್ಷಿಸಿಕೊಳ್ಳುವ ಜ್ಞಾನವನ್ನು ತಿಳಿದುಕೊಂಡಿರುತ್ತಾರೆ. ಇವರು ತಮ್ಮ ಸಂತತಿಗೆ ಕಾಡು ಮತ್ತು ಕಾಡು ಪ್ರಾಣಿಗಳೊಂದಿಗೆ ಬದುಕುವ ಶಿಕ್ಷಣವನ್ನು ಬಾಲ್ಯದಿಂದಲೇ ಕಲಿಸುತ್ತಿರುತ್ತಾರೆ.

**ಬಿದಿರಿನ ಜ್ಞಾನ** : ಬಿದಿರಿನ ಉಪಯೋಗ ಜೇನುಕುರುಬರಿಗೆ ಬಹಳ ಚೆನ್ನಾಗಿ ಗೊತ್ತಿರುತ್ತದೆ. ಹುಟ್ಟುತ್ತಾ ಕಳಲೆಯಾಗಿ, ಬೆಳೆದ ನಂತರ ಗಳ (ಬೊಂಬು)ವಾಗಿ ಸಮರ್ಪಕವಾಗಿ ಬಿದಿರನ್ನು ಬಳಸಿಕೊಳ್ಳುವ ಶಿಕ್ಷಣ ಜ್ಞಾನವನ್ನು ಹೊಂದಿರುತ್ತಾರೆ.

**ಬೆಂಕಿ ನಂದಿಸುವ ಜ್ಞಾನ** : ಜೇನುಕುರುಬರಿಗೆ ಕಾಡು ಸರ್ವಸ್ವವೂ ಹೌದು, ದೈವವೂ ಹೌದು. ಶತಾಯಗತಾಯ ಅರಣ್ಯವನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ. ಆಕಸ್ಮಿಕವಾಗಿ ಕಾಳ್ಗಿಚ್ಚಿನಿಂದ ಸಂಭವಿಸುವ ಬೆಂಕಿಯನ್ನು ನಿಂದಿಸುವಲ್ಲಿ ಜೇನುಕುರುಬರು ಸದಾ ಮುಂದಿರುತ್ತಾರೆ.

**ನೀರು ಕಂಡುಹಿಡಿಯುವ ಜ್ಞಾನ** : ಪ್ರತಿಯೊಂದು ಜೀವಿಗೂ ನೀರು ಅತ್ಯಮೂಲ್ಯ ಕಾಡಿನಲ್ಲಿ ಬೇಕೆಂದಾಗ ನೀರು ಲಭ್ಯವಿರುವುದಿಲ್ಲ. ಆದರೆ ಬಿದಿರು, ಮತ್ತಿ ಮರ ಇವುಗಳಲ್ಲಿ ನೀರಿರುವ ಜ್ಞಾನವನ್ನು ಜೇನುಕುರುಬರು ಹೊಂದಿರುತ್ತಾರೆ. ಅವುಗಳಲ್ಲಿನ ನೀರನ್ನು ಹೇಗೆ ಪಡೆಯಬೇಕೆಂಬ ಶಿಕ್ಷಣ ಜ್ಞಾನವನ್ನು ಮಕ್ಕಳಾದಿಯಾಗಿ ಎಲ್ಲರೂ ತಿಳಿದಿರುತ್ತಾರೆ.

**ವಸತಿ ನಿರ್ಮಾಣ ಜ್ಞಾನ** : ಜೇನುಕುರುಬರು ಕಾಡಿನಲ್ಲಿ ಶಾಶ್ವತವಾಗಿ ನೆಲೆಗಳನ್ನು ಸ್ಥಾಪಿಸಿಕೊಳ್ಳುವುದಿಲ್ಲ. ತಾತ್ಕಾಲಿಕ ನೆಲೆಗಳಲ್ಲಿಯೇ ಸ್ವಚ್ಛಂದವಾಗಿ ಬದುಕುವ ಕಲೆಯನ್ನು ರೂಢಿಸಿ ಕೊಂಡಿರುತ್ತಾರೆ.

**ಆಹಾರ ಜ್ಞಾನ** : ಜೇನುಕುರುಬರು ಸೇವಿಸುವ ಆಹಾರ, ಸೊಪ್ಪುಗಳು ಮತ್ತು ಗೆಡ್ಡೆ ಗೆಣಸುಗಳನ್ನು ಋತುಮಾನಗಳಿಗೆ ಮತ್ತು ಸಂದರ್ಭೋಚಿತವಾಗಿ ಬಳಸಿಕೊಳ್ಳುವ ಜ್ಞಾನವನ್ನು ಜೇನುಕುರುಬ ಹಿರಿಯರು ತಮ್ಮ ಮಕ್ಕಳಿಗೆ ತಿಳಿಸಿಕೊಡುತ್ತಾರೆ.

**ಜೇನು ಕಂಡುಹಿಡಿಯುವ ಜ್ಞಾನ** : ಜೇನುಕುರುಬರಿಗೂ ಜೇನಿಗೂ ಅವಿನಾಭಾವ ಸಂಬಂಧವಿದೆ. ಜೇನಿನಲ್ಲಿರುವ ವಿಧಗಳು, ಜೇನು ಕುಯ್ಯುವ ಬಗೆಗಳು, ನೊಣಗಳ ದಾಳಿಯಿಂದ ರಕ್ಷಿಸಿಕೊಳ್ಳುವ ವಿಧಾನ ಇವುಗಳನ್ನು ಜೇನುಕುರುಬ ಮಕ್ಕಳು ಕರಗತಮಾಡಿಕೊಂಡಿರುತ್ತಾರೆ.

**ಬೇಟೆಯ ಜ್ಞಾನ** : ಇವರು ಕಾಡಿನಲ್ಲಿ ಯಾವ ಪ್ರಾಣಿಯನ್ನು ಹೇಗೆ ಬೇಟೆಯಾಡಬೇಕೆಂಬ ಜ್ಞಾನವನ್ನು ತಮ್ಮ ಪೂರ್ವಿಕರಿಂದ ತಿಳಿದುಕೊಂಡಿರುತ್ತಾರೆ.

**ಔಷಧಿಯ ಜ್ಞಾನ** : ಜೇನುಕುರುಬರು ಕಾಡಿನಲ್ಲಿ ಸಿಗುವ ಸೊಪ್ಪು ಸೊದೆಗಳು, ಕಾಂಡ ಬೇರುಗಳಿಂದ ರೋಗರುಜಿನಗಳಿಗೆ ಬೇಕಾದ ಔಷಧಿಗಳನ್ನು ತಯಾರಿಸಿಕೊಳ್ಳುತ್ತಾರೆ. ಇಷ್ಟೆಯಲ್ಲದೇ ಇವರು ಆನೆ ಮತ್ತು ತಮ್ಮ ಸಾಕು ಪ್ರಾಣಿಗಳಿಗೂ ಔಷಧಿಯನ್ನು ಕಂಡುಕೊಳ್ಳುವ ಜ್ಞಾನವನ್ನು ಹೊಂದಿರುತ್ತಾರೆ.

**ಆನೆಯೊಂದಿಗೆ ಅನ್ಯೋನ್ಯತೆಯನ್ನು ಸಾಧಿಸಿಕೊಳ್ಳುವ ಜ್ಞಾನ** : ಜೇನುಕುರುಬರು ಆನೆಯನ್ನು ಪಳಗಿಸುವಲ್ಲಿ ನಿಸ್ಸೀಮರು. ಕಾಡು ಆನೆಯನ್ನು ಹೇಗೆ ಪಳಗಿಸಿ ಹತೋಟಿಗೆ ತರಬೇಕೆಂಬ ಶಿಕ್ಷಣ ಜ್ಞಾನವನ್ನು ವಂಶ ಪಾರಂಪರ್ಯವಾಗಿ ಇವರು ಹೊಂದಿರುತ್ತಾರೆ.

**ಸಂಸ್ಕೃತಿಯನ್ನು ಉಳಿಸುವ ಜ್ಞಾನ** : ಇವರು ಆಚರಿಸುವ ಹಬ್ಬ ಹರಿದಿನಗಳು, ದೈವಾಚರಣೆ, ಪೂರ್ವಿಕರ ಆಚರಣಾ ಪದ್ದತಿಗಳು ಮೌಖಿಕವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಪಸರಿಸುತ್ತಾ ಬಂದಿರುತ್ತವೆ. ಇವುಗಳ ಆಚರಣಾ ವಿಧಾನಗಳನ್ನು ಇಂದಿಗೂ ಪಾಲಿಸುತ್ತಾರೆ.

**ಮಹಿಳಾ ಶಿಕ್ಷಣ ಜ್ಞಾನ** : ಮಹಿಳೆಯರು ತಮ್ಮ ನಿತ್ಯ ಬದುಕಿನಲ್ಲಿ ಸದಾ ಚಟುವಟಿಕೆಯಿಂದ ಇರುತ್ತಾರೆ. ಇವರು ತಮ್ಮ ಮಕ್ಕಳ ಲಾಲನೆ ಪಾಲನೆ, ಕುಟುಂಬ ನಿರ್ವಹಣೆ, ತಮ್ಮ ಆರೋಗ್ಯ ಸ್ಥಿತಿಗತಿಗಳ ಬಗ್ಗೆ ಸದಾ ಜಾಗೃತರಾಗಿರುತ್ತಾರೆ. ಒಬ್ಬರಿಗೊಬ್ಬರು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಪಾರಂಪರಿಕ ಶಿಕ್ಷಣ ಜ್ಞಾನವನ್ನು ಉಳಿಸಿಕೊಂಡಿರುತ್ತಾರೆ.

### ೩. ೧೪. ೨ ಆಧುನಿಕ ಶಿಕ್ಷಣ

ಬಹುತೇಕ ಅಲ್ಪಸಂಖ್ಯಾತ ಬುಡಕಟ್ಟುಗಳು ಆಧುನಿಕ ಶಿಕ್ಷಣದಿಂದ ವಂಚಿತರಾಗಿರುತ್ತಾರೆ. ಎಲ್ಲಿ ಆಧುನಿಕ ಶಿಕ್ಷಣ ಪ್ರವೇಶ ಪಡೆಯುತ್ತದೆಯೋ ಅಲ್ಲಿ ಪರಂಪರೆಯಿಂದ ದೊರೆತ ಶಿಕ್ಷಣವು ನಿಧಾನಕ್ಕೆ ದೂರಸರಿಯುತ್ತದೆ. ಬಹುತೇಕ ಆಧುನಿಕತೆಯ ಆಮಿಷಕ್ಕೆ ಒಳಗಾಗುವವರು ಪುರುಷರೇ ಆಗಿರುತ್ತಾರೆ. ಮಹಿಳೆಯರ ಮೇಲೂ ಅದು ಪ್ರಭಾವ ಬೀರುವುದಾದರೂ ತುಂಬಾ ನಿಧಾನಕ್ಕೆ ಮಹಿಳೆಯರನ್ನು ಆಕರ್ಷಿಸುತ್ತದೆ. ಹೀಗಾಗಿಯೇ ಪರಂಪರೆಯ ಉಳಿವನ್ನು ನಾವು ಮಹಿಳೆಯರಲ್ಲಿಯೇ ಹೆಚ್ಚಾಗಿ ಕಾಣುವುದು. ಕಾರಣ ಮಹಿಳೆಯರು ಆಧುನಿಕ ಶಿಕ್ಷಣ ಪದ್ಧತಿಯಿಂದ ಹೆಚ್ಚು ದೂರವಿದ್ದಾರೆ. ಪುರುಷಶಾಹಿ ವರ್ಗ ಆಧುನಿಕ ಶಿಕ್ಷಣವನ್ನು ಮಹಿಳೆಯರು ಪಡೆಯುವುದು ಅನುಪಯುಕ್ತವೆಂದು ತಿಳಿದುದರ ಪರಿಣಾಮ ಇದಾಗಿರಬೇಕು.

### ೩. ೧೪. ೨. ಅ. ಮೈಸೂರು ಜಿಲ್ಲೆಯ ಜೇನುಕುರುಬರ ಶೈಕ್ಷಣಿಕ ವಿವರ

ಸಾಮಾನ್ಯವಾಗಿ ಭಾರತದಲ್ಲಿ ಆರು ವರ್ಷದೊಳಗಿನ ಮಗು ಶಾಲೆಯ ಮೆಟ್ಟಿಲನ್ನು ಏರಲು ಯೋಗ್ಯವೆಂದು ಪರಿಗಣಿಸಲಾಗುತ್ತದೆ. ಅಂದರೆ ಆರು ವರ್ಷ ಪೂರ್ಣಗೊಳ್ಳದ ವಯೋಮಾನದ ಮಕ್ಕಳನ್ನು ಶಾಲೆಗೆ ಹೋಗಲು ಅರ್ಹವಲ್ಲವೆಂದೇ ಹೇಳಲಾಗುತ್ತದೆ. ಹೀಗಾಗಿ ೦-೦೬ ವಯೋಮಾನದ ಮಕ್ಕಳನ್ನು ಸಾಕ್ಷರರಲ್ಲವೆಂದು ಪರಿಗಣಿಸಲಾಗಿದೆ. ಜಿಲ್ಲೆಯಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ಈ ವಯೋಮಾನದ ಒಟ್ಟು ಮಕ್ಕಳು ೫೩೨೫ ಇವೆ. ಇವುಗಳಲ್ಲಿ ಗಂಡು ೩೧೧೫ ಹಾಗೂ ಹೆಣ್ಣು ೨೨೧೦ ಇವೆ.

೦-೬ರ ಹೊರತಾಗಿರುವ ಜನರು ಶಿಕ್ಷಣಕ್ಕೆ ಅರ್ಹರಾದವರೆಂದು ಪರಿಗಣಿಸಲಾಗುತ್ತದೆ. ಇಂತಹ ಸಾಕ್ಷರತೆಯನ್ನು ಪಡೆಯಲು ಅರ್ಹರಾದ ಜೇನುಕುರುಬ ಜನರು ಮೈಸೂರಿನಲ್ಲಿ ಒಟ್ಟು ೨೨,೧೮೩ ಜನರಿದ್ದಾರೆ. ಇದರಲ್ಲಿ ಪುರುಷರು ೧೧,೫೬೬ ಹಾಗೂ ಮಹಿಳೆಯರು ೧೦,೬೧೭ ಜನರಿದ್ದಾರೆ. ಮೈಸೂರು ಜಿಲ್ಲೆಯ ಜೇನುಕುರುಬ ಬುಡಕಟ್ಟಿನ ಒಟ್ಟು ಜನಸಂಖ್ಯೆಯು ೨೭೫೦೮ ಇದೆ. ಇದರಲ್ಲಿ ಸಾಕ್ಷರತೆಯನ್ನು ಹೊಂದಲು ಅರ್ಹವಾದವರು ಒಟ್ಟುಶೇಕಡ ೮೦.೬೪ ರಷ್ಟಿದ್ದರೆ ಶಿಕ್ಷಣ ಪಡೆಯಲು ಅರ್ಹವಲ್ಲದವರು ಶೇಕಡ ೧೯.೩೬ ರಷ್ಟಿದ್ದಾರೆ.ಶಿಕ್ಷಣ ಪಡೆಯಲು ಅರ್ಹವಾದ ಪುರುಷರು ಒಟ್ಟು ಶೇಕಡ ೭೮.೭೮ ರಷ್ಟಿದ್ದರೆ ಮಹಿಳೆಯರು ಶೇಕಡ ೮೨.೭೭ ರಷ್ಟಿದ್ದಾರೆ.

**ಕೋಷ್ಟಕ : ೩. ೩. ಮೈಸೂರು ಜಿಲ್ಲೆಯ ಜೇನುಕುರುಬ ಸಮುದಾಯದ ತಾಲೂಕುವಾರು ಸಾಕ್ಷರತೆ ಪಡೆಯಲು ಅರ್ಹರಾದ ಹಾಗೂ ಅರ್ಹರಾಗದವರ ವಿವರ**

| ಕ್ರ. ಸಂ. | ತಾಲೂಕು | ಸಾಕ್ಷರತೆ ಪಡೆಯಲು ಅರ್ಹರಲ್ಲದವರು | | | ಸಾಕ್ಷರತೆ ಪಡೆಯಲು ಅರ್ಹರಾದವರು | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಹೆಚ್ ಡಿ ಕೋಟೆ | ೧೮೪೭ | ೧೨೧೮ | ೩೦೬೫ | ೬೭೬೦ | ೬೧೪೦ | ೧೨೯೦೦ |
| ೨ | ಪಿರಿಯಾಪಟ್ಟಣ | ೪೬೪ | ೩೩೭ | ೮೦೧ | ೧೭೦೧ | ೧೫೫೯ | ೩೨೬೦ |
| ೩ | ಹುಣಸೂರು | ೭೧೧ | ೫೮೪ | ೧೨೯೫ | ೨೮೩೩ | ೨೬೫೯ | ೫೪೯೨ |
| ೪ | ನಂಜನಗೂಡು | ೯೩ | ೭೧ | ೧೬೪ | ೨೭೨ | ೨೫೯ | ೫೩೧ |
| | ಒಟ್ಟು | ೩೧೧೫ | ೨೨೧೦ | ೫೩೨೫ | ೧೧೫೬೬ | ೧೦೬೧೭ | ೨೨೧೮೩ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೩೦೬೫ ಇವೆ. ಇವುಗಳಲ್ಲಿ ಗಂಡು ೩೦೬೫ ಹಾಗೂ ಹೆಣ್ಣು ೧೨೧೮ ಇವೆ. ಸಾಕ್ಷರತೆಗೆ ಅರ್ಹರಾದವರು ಈ ತಾಲೂಕಿನಲ್ಲಿ ಒಟ್ಟು ೧೨೯೦೦ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೬೭೬೦ ಹಾಗೂ ಮಹಿಳೆಯರು ೬೧೪೦ ಜನರಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೮೦೧ ಇವೆ. ಇವುಗಳಲ್ಲಿ ಗಂಡು ೪೬೪ ಹಾಗೂ ಹೆಣ್ಣು ೩೩೭ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೩೨೬೦ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೧೭೦೧ ಹಾಗೂ ಮಹಿಳೆಯರು ೧೫೫೯ ಜನರಿದ್ದಾರೆ.

ಹುಣಸೂರು ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೧೨೯೫ ಇವೆ. ಇವುಗಳಲ್ಲಿ ಗಂಡು ೭೧೧ ಹಾಗೂ ಹೆಣ್ಣು ೫೮೪ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೫೪೯೨ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೨೮೩೩ ಹಾಗೂ ಮಹಿಳೆಯರು ೨೬೫೯ ಜನರಿದ್ದಾರೆ.


ನಂಜನಗೂಡು ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೧೬೪ ಇವೆ. ಇವುಗಳಲ್ಲಿ ಗಂಡು ೯೩ ಹಾಗೂ ಹೆಣ್ಣು ೭೧ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೫೩೧ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೨೭೨ ಹಾಗೂ ಮಹಿಳೆಯರು ೨೫೯ ಜನರಿದ್ದಾರೆ.

**ಕೋಷ್ಟಕ : ೩. ೪. ಮೈಸೂರು ಜಿಲ್ಲೆಯ ತಾಲೂಕುವಾರು ಜೇನುಕುರುಬ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ**

| ಕ್ರ ಸಂ. | ತಾಲೂಕುಗಳು | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಎಚ್.ಡಿ. ಕೋಟೆ | ೩೮೮೧ | ೬೭೬೦ | ೬೧೪೦ | ೧೨೯೦೦ | ೩೪೩೯ | ೨೧೫೩ | ೫೫೯೨ | ೩೩೨೧ | ೩೯೮೭ | ೭೩೦೮ |
| ೨ | ಪಿರಿಯಾಪಟ್ಟಣ | ೧೦೦೬ | ೧೭೦೧ | ೧೫೫೯ | ೩೨೬೦ | ೭೬೦ | ೫೭೫ | ೧೩೩೫ | ೯೪೧ | ೯೮೪ | ೧೯೨೫ |
| ೩ | ಹುಣಸೂರು | ೧೭೨೯ | ೨೮೩೩ | ೨೬೫೯ | ೫೪೯೨ | ೧೦೫೫ | ೭೨೧ | ೧೭೭೬ | ೧೭೭೮ | ೧೯೩೮ | ೩೭೧೬ |
| ೪ | ನಂಜನಗೂಡು | ೧೭೩ | ೨೭೨ | ೨೫೯ | ೫೩೧ | ೧೨೨ | ೯೭ | ೨೧೯ | ೧೫೦ | ೧೬೨ | ೩೧೨ |
| ಒಟ್ಟು | | ೬೭೬೯ | ೧೧೫೬೬ | ೧೦೬೧೭ | ೨೨೧೮೩ | ೫೩೭೬ | ೩೫೪೬ | ೮೯೨೨ | ೬೧೯೦ | ೭೦೭೧ | ೧೩೨೬೧ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

ಬಿಂಬಚಿತ್ರ : ೩. ೧. ಮೈಸೂರು ಜಿಲ್ಲೆಯ ತಾಲೂಕುವಾರು ಜೇನುಕುರುಬ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ




| | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಎಚ್.ಡಿ. ಕೋಟೆ | ೩೨೮೧ | ೬೭೬೦ | ೬೧೪೦ | ೧೨೯೦ | ೩೪೩೯ | ೨೧೫೩ | ೫೫೯೨ | ೩೩೨೧ | ೩೯೮೭ | ೭೩೦೮ |
| ಪಿರಿಯಾಪಟ್ಟಣ | ೧೦೦೬ | ೧೭೦೧ | ೧೫೫೯ | ೩೨೬೦ | ೭೬೦ | ೫೭೫ | ೧೩೩೫ | ೯೪೧ | ೯೮೪ | ೧೯೨೫ |
| ಹುಣಸೂರು | ೧೭೦೯ | ೨೮೩೩ | ೨೬೫೯ | ೫೪೯೨ | ೧೦೫೫ | ೭೨೧ | ೧೭೭೬ | ೧೭೭೮ | ೧೯೩೮ | ೩೭೧೬ |
| ನಂಜನಗೂಡು | ೧೭೩ | ೨೭೨ | ೨೫೯ | ೫೩೧ | ೧೨೨ | ೯೭ | ೨೧೯ | ೧೫೦ | ೧೬೨ | ೩೧೨ |

## ಹೆಗ್ಗಡದೇವನ ಕೋಟೆಯ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೩೨೮೧ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೧೨೯೦೦ ಜನರಿದ್ದಾರೆ. ಇದರಲ್ಲಿ ಪುರುಷರು ೬೭೬೦ ಹಾಗೂ ಮಹಿಳೆಯರು ೬೧೪೦ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೫೫೯೨ ಜನರಿದ್ದಾರೆ. ಇದರಲ್ಲಿ ಪುರುಷರು ೩೪೩೯ ಹಾಗೂ ಮಹಿಳೆಯರು ೨೧೫೩ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೭೩೦೮ ಜನರಿದ್ದಾರೆ. ಇದರಲ್ಲಿ ಪುರುಷರು ೩೩೨೧ ಹಾಗೂ ಮಹಿಳೆಯರು ೩೯೮೭ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಸಾಕ್ಷರರ ಹಾಗೂ ಅನಕ್ಷರಸ್ಥರಪ್ರಮಾಣದಲ್ಲಿ ಸಾಕ್ಷರಸ್ಥರ ಒಟ್ಟು ಶೇಕಡ ೪೩.೩೪ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೫೦.೮೭ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೫.೦೬ ರಷ್ಟು ಮಾತ್ರವಿದೆ. ಅನಕ್ಷರಸ್ಥರಪ್ರಮಾಣದಲ್ಲಿ ಪುರುಷ ಅನಕ್ಷರಸ್ಥರಿಗಿಂತ ಮಹಿಳಾ ಅನಕ್ಷರಸ್ಥರಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರಸ್ಥರು ಶೇಕಡ ೫೬.೬೬ರಷ್ಟಿದ್ದಾರೆ.

**ಪಿರಿಯಾಪಟ್ಟಣ ತಾಲೂಕಿನ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ**

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೧೦೦೬ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೩೨೬೦ ಜನರಿದ್ದಾರೆ. ಇದರಲ್ಲಿ ಪುರುಷರು ೧೭೦೧ ಹಾಗೂ ಮಹಿಳೆಯರು ೧೫೫೯ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೧೩೩೫ ಜನರಿದ್ದಾರೆ. ಇದರಲ್ಲಿ ಪುರುಷರು ೭೬೦ ಹಾಗೂ ಮಹಿಳೆಯರು ೫೭೫ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೧೯೨೫ ಜನರಿದ್ದಾರೆ. ಇದರಲ್ಲಿ ಪುರುಷರು ೯೪೧ ಹಾಗೂ ಮಹಿಳೆಯರು ೯೮೪ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಜೇನುಕುರುಬ ಸಾಕ್ಷರರ ಹಾಗೂ ಅನಕ್ಷರಸ್ಥರ ಪ್ರಮಾಣದಲ್ಲಿ ಸಾಕ್ಷರಸ್ಥರ ಒಟ್ಟು ಶೇಕಡ ೪೦.೯೫ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೪.೬೭ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೬.೮೭ ರಷ್ಟು ಮಾತ್ರವಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಅನಕ್ಷರಸ್ಥರಿಗಿಂತ ಮಹಿಳಾ ಅನಕ್ಷರಸ್ತರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರಸ್ತರ ಪ್ರಮಾಣವು ಶೇಕಡ ೫೯.೦೪ ರಷ್ಟಿದೆ.

**ಹುಣಸೂರು ತಾಲೂಕಿನ ಸಾಕ್ಷರರು ಹಾಗೂ ಅನಕ್ಷರಸ್ಥರವಿವರ**

ಹುಣಸೂರು ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೧೭೮೯ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೫೪೯೨ ಜನರಿದ್ದಾರೆ. ಇದರಲ್ಲಿ ಪುರುಷರು ೨೮೩೩ ಹಾಗೂ ಮಹಿಳೆಯರು ೨೬೫೯ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೧೭೭೬ ಜನರಿದ್ದಾರೆ. ಇದರಲ್ಲಿ ಪುರುಷರು ೧೦೫೫ ಹಾಗೂ ಮಹಿಳೆಯರು ೭೨೧ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೩೭೧೬ ಜನರಿದ್ದಾರೆ. ಇದರಲ್ಲಿ ಪುರುಷರು ೧೭೭೮ ಹಾಗೂ ಮಹಿಳೆಯರು ೧೯೩೮ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಜೇನುಕುರುಬ ಸಾಕ್ಷರರ ಹಾಗೂ ಅನಕ್ಷರಸ್ಥರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಒಟ್ಟು ಶೇಕಡ ೩೨.೩೪ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೩೭.೨೩ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೨೭.೧೨ ರಷ್ಟು ಮಾತ್ರವಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಅನಕ್ಷರಸ್ಥರಿಗಿಂತ ಮಹಿಳಾ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರಸ್ಥರ ಪ್ರಮಾಣವು ಶೇಕಡ ೬೭.೬೬ ರಷ್ಟಿದೆ.

### ನಂಜನಗೂಡು ತಾಲೂಕಿನ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ

ನಂಜನಗೂಡು ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೧೭೩ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೫೩೧ ಜನರಿದ್ದಾರೆ. ಇದರಲ್ಲಿ ಪುರುಷರು ೨೭೨ ಹಾಗೂ ಮಹಿಳೆಯರು ೨೫೯ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೨೧೯ ಜನರಿದ್ದಾರೆ. ಇದರಲ್ಲಿ ಪುರುಷರು ೧೨೨ ಹಾಗೂ ಮಹಿಳೆಯರು ೯೭ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೩೧೨ ಜನರಿದ್ದಾರೆ. ಇದರಲ್ಲಿ ಪುರುಷರು ೧೫೦ ಹಾಗೂ ಮಹಿಳೆಯರು ೧೬೨ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಜೇನುಕುರುಬ ಸಾಕ್ಷರರ ಹಾಗೂ ಅನಕ್ಷರಸ್ಥರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಒಟ್ಟು ಶೇಕಡ ೪೧.೨೪ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೪.೮೫ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೭.೪೫ ರಷ್ಟು ಮಾತ್ರವಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಅನಕ್ಷರಸ್ಥರಿಗಿಂತ ಮಹಿಳಾ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರಸ್ಥರ ಪ್ರಮಾಣವು ಶೇಕಡ ೫೮.೭೬ ರಷ್ಟಿದೆ.

ಮೈಸೂರು ಜಿಲ್ಲೆಯನ್ನು ಒಟ್ಟಾರೆಯಾಗಿ ನೋಡುವುದಾದರೆ ಜೇನುಕುರುಬ ಸಾಕ್ಷರರ ಹಾಗೂ ಅನಕ್ಷರಸ್ಥರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಸರಾಸರಿ ಒಟ್ಟು ಶೇಕಡ ೪೦.೨೧ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೬.೪೮ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೩.೯೯ರಷ್ಟು ಮಾತ್ರವಿದೆ. ಅನಕ್ಷರಸ್ಥರ ಪ್ರಮಾಣದಲ್ಲಿ ಪುರುಷ ಅನಕ್ಷರಸ್ಥರಿಗಿಂತ ಮಹಿಳಾ ಅನಕ್ಷರಸ್ಥರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರಸ್ಥರ ಪ್ರಮಾಣವು ಶೇಕಡ ೫೯.೭೮ ರಷ್ಟಿದೆ.

ಮೈಸೂರು ಜಿಲ್ಲೆಯ ತಾಲೂಕುವಾರು ಜೇನುಕುರುಬರ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಸಾಕ್ಷರತೆಯ ಪ್ರಮಾಣವು ಶೇಕಡ ೪೦.೨೧ ರಷ್ಟಿದೆಯೆಂದು ಸಮೀಕ್ಷೆಯ ಮೂಲಕ ತಿಳಿದು ಬರುತ್ತದೆ. ಆದರೆ ವಾಸ್ತವ ಸ್ಥಿತಿಯೇ ಬೇರೆ ಇದೆ. ಹಿಂದೆ ಕಾಡನ್ನೇ ತಮ್ಮ ನೆಲೆಯಾಗಿಸಿಕೊಂಡಿದ್ದ ಜೇನುಕುರುಬರು ಶಾಲೆಯ ಮುಖವನ್ನೇ ನೋಡಿದವರಲ್ಲ. ಇವರ ನಂಟೇನಿದ್ದರು ಕಾಡಿನೊಂದಿಗೆ ತಳಕು ಹಾಕಿಕೊಂಡಿತ್ತು. ಆಧುನಿಕ ಶಿಕ್ಷಣ ಪಡೆದ ಕಾಡಿನಾಚೆಯ ವ್ಯಕ್ತಿಗೆ ಗೊತ್ತಿರದ ಕಾಡಿನ ಮಾಹಿತಿ ಜೇನುಕುರುಬರಿಗೆ ತಿಳಿದಿತ್ತು. ಕಾಡಿನ ಪ್ರತಿಯೊಂದು ಮರದ ಗುಣ ಲಕ್ಷಣಗಳು, ಮರದ ಹೆಸರು, ಉಪಯೋಗ, ಅದು ಫಲಕೊಡುವ ಕಾಲ ಇತ್ಯಾದಿ ಅವರಿಗೆ ಬಾಯಿ ಪಾಠವಾಗಿತ್ತು. ಆದರೆ ಆಧುನಿಕ ಶಿಕ್ಷಣದಿಂದ ಅವರು ವಂಚಿತರಾಗಿದ್ದಾರೆ. ಕಾಡನ್ನೇ ನಂಬಿ ಬದುಕುವ ಅವರಿಗೆ ಸಂದರ್ಭದಲ್ಲಿ ನಾಡಿನ ಶಿಕ್ಷಣವೇ ಬೇಡವಾಗಿತ್ತು.

ಆದರೆ ಹಿಂದೆ ಇದ್ದಂತಹ ಪರಿಸ್ಥಿತಿ ಈಗ ಇಲ್ಲವಾಗಿದೆ. ಜೇನುಕುರುಬರ ಬಹುತೇಕ ಕುಟುಂಬಗಳಿಗೆ ಕಾಡು ದೂರದ ಮಾತಾಗಿ ಉಳಿದಿದೆ. ಈ ಸರ್ಕಾರಗಳ ಅರಣ್ಯ ಕಾಯ್ದೆ ಇತ್ಯಾದಿಗಳ

ಕಾರಣದಿಂದಾಗಿ ಕಾಡುವಾಸಿಗಳು ಕಾಡನ್ನು ತೊರೆದು ಹೊರಬರಬೇಕಾಯಿತು. ಹೀಗೆ ಕಾಡಿನಿಂದ ಹೊರದೂಡಲ್ಪಟ್ಟ ಬುಡಕಟ್ಟುಗಳು ಅನಿವಾರ್ಯವಾಗಿ ಆಧುನಿಕ ನಾಗರೀಕ ಬದುಕಿಗೆ ತಮ್ಮನ್ನು ಒಡ್ಡಿಕೊಳ್ಳುವಂತಾಯಿತು. ಇಲ್ಲಿಯ ರೀತಿನೀತಿಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವಂತಾಯಿತು. ಈ ರೀತಿಯ ಅನಿವಾರ್ಯತೆಯಿಂದ ಆಧುನಿಕ ಶಿಕ್ಷಣ ಪಡೆಯುವಂತಾಯಿತು.

ಇಂತಹ ಅನಿವಾರ್ಯತೆಗಳಿಗೆ ಒಮ್ಮೊಂದೊಮ್ಮೆಗೆ ಜೇನುಕುರುಬರಂತಹ ಬುಡಕಟ್ಟುಗಳು ತೆರೆದುಕೊಳ್ಳಲಿಲ್ಲ. ಆದರೆ ಬದುಕಿನ ಅನಿವಾರ್ಯತೆ ಇಂತಹ ಶಿಷ್ಟಾಚಾರಗಳಿಗೆ ಒಗ್ಗುವಂತೆ ಮಾಡಿತು.

ಇವತ್ತಿನ ಕಡ್ಡಾಯ ಶಿಕ್ಷಣ, ಮಕ್ಕಳನ್ನು ಶಾಲೆಯ ಕಡೆಗೆ ಆಕರ್ಷಿಸಲೆಂದೇ ಸೃಷ್ಟಿಗೊಂಡ ಅಕ್ಷರ ದಾಸೋಹ, ಉಚಿತ ಪಠ್ಯಪುಸ್ತಕಗಳ ಕೊಡುಗೆ, ಸೈಕಲ್ ವಿತರಣೆ ಮುಂತಾದ ಹಲವು ಯೋಜನೆಗಳು ಮಕ್ಕಳನ್ನು ಶಾಲೆಯತ್ತ ಮುಖ ಮಾಡುವಂತೆ ಮಾಡಿದವು. ಆದರೆ ಇದರಿಂದ ಗುಣಮಟ್ಟದ ಶಿಕ್ಷಣ ದೊರೆಯುತ್ತದೆಯೆ, ಶಾಲೆಯಲ್ಲಿ ದಾಖಲಾದಷ್ಟು ಪ್ರಮಾಣದಲ್ಲಿ ಹಾಜರಾತಿ ಇರುತ್ತದೆಯೆ ಇತ್ಯಾದಿ ವಿಚಾರಗಳಿಗೆ ಉತ್ತರ ನೀಡುವುದು ಸ್ವಲ್ಪ ಕಷ್ಟವಾಗುತ್ತದೆ.

ಪ್ರಸ್ತುತ ಆಧುನಿಕ ಶಿಕ್ಷಣದ ವಿವಿಧ ಹಂತಗಳಲ್ಲಿ ಶಿಕ್ಷಣ ಪಡೆದ ಜೇನುಕುರುಬರ ವಿವರ ಈ ಕೆಳಗಿನಂತಿದೆ.

ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೫೫೯೨ ಜನರಿದ್ದಾರೆ. ಇದರಲ್ಲಿ ಪುರುಷರು ೩೪೩೯ ಹಾಗೂ ಮಹಿಳೆಯರು ೨೧೫೩ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೩೬೯೬ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೧೯೯೪ ಹಾಗೂ ಹೆಣ್ಣುಮಕ್ಕಳು ೧೭೦೨ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೧೫೫೦ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೧೧೦೨ ಹಾಗೂ ಹೆಣ್ಣುಮಕ್ಕಳು ೪೪೮ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯ ವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೩೦೧ ಜನರಿದ್ದಾರೆ. ಇದರಲ್ಲಿ ೨೯೮ ಜನ ಗಂಡು ಮಕ್ಕಳಿದ್ದರೆ ಕೇವಲ ೦೩ ಜನ ಹೆಣ್ಣು ಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ೩೬ ಗಂಡು ಮಕ್ಕಳು ಮಾತ್ರ ಇದ್ದಾರೆ. ಪದವಿ ತರಗತಿಯಲ್ಲಿ ಮೂರು ಜನ ಪುರುಷರಿದ್ದಾರೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಯಾರೂ ಪಡೆಯುತ್ತಿಲ್ಲ. ಐಟಿಐಯಲ್ಲಿ ಆರು ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೧೩೩೫ ಜನರಿದ್ದಾರೆ. ಇದರಲ್ಲಿ ಪುರುಷರು ೭೬೦ ಹಾಗೂ ಮಹಿಳೆಯರು ೫೭೫ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೭೧೬ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೩೫೮ ಹಾಗೂ ಹೆಣ್ಣುಮಕ್ಕಳು ೩೫೮ ಜನರಿದ್ದಾರೆ.

ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೫೭೨ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೩೪೮ ಹಾಗೂ ಹೆಣ್ಣುಮಕ್ಕಳು ೨೨೪ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೪೧ ಜನರಿದ್ದಾರೆ. ಇದರಲ್ಲಿ ೨೨ ಜನ ಗಂಡುಮಕ್ಕಳಿದ್ದರೆ ೧೯ ಜನ ಹೆಣ್ಣುಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ೦೪ ಗಂಡುಮಕ್ಕಳು ಮಾತ್ರ ಇದ್ದಾರೆ. ಪದವಿ ತರಗತಿಯಲ್ಲಿ ಒಬ್ಬರು ಪುರುಷರಿದ್ದಾರೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಒಬ್ಬರು ಮಾತ್ರ (ದೂರಶಿಕ್ಷಣ ಮೂಲಕ) ಪಡೆದಿದ್ದಾರೆ. ಇತರೆ ವಿಭಾಗದಲ್ಲಿ ಯಾವೊಬ್ಬ ವಿದ್ಯಾರ್ಥಿಯೂ ವ್ಯಾಸಂಗ ಮಾಡುತ್ತಿಲ್ಲ.

ಹುಣಸೂರು ತಾಲೂಕಿನಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೧೭೭೬ ಜನರಿದ್ದಾರೆ. ಇದರಲ್ಲಿ ಪುರುಷರು ೧೦೫೫ ಹಾಗೂ ಮಹಿಳೆಯರು ೭೨೧ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೯೦೬ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೫೫೪ ಹಾಗೂ ಹೆಣ್ಣುಮಕ್ಕಳು ೩೫೨ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೮೧೬ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೪೮೨ ಹಾಗೂ ಹೆಣ್ಣುಮಕ್ಕಳು ೩೩೪ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೫೪ ಜನರಿದ್ದಾರೆ. ಇದರಲ್ಲಿ ೧೯ ಜನ ಗಂಡುಮಕ್ಕಳಿದ್ದರೆ ೩೫ ಜನ ಹೆಣ್ಣುಮಕ್ಕಳಿದ್ದಾರೆ. ಪ್ರೌಢ ತರಗತಿಯ ಹಂತದಿಂದ ಮುಂದಕ್ಕೆ ಯಾರೂ ವ್ಯಾಸಂಗ ಮಾಡಿರುವುದಿಲ್ಲ.

ನಂಜನಗೂಡು ತಾಲೂಕಿನಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೨೧೯ ಜನರಿದ್ದಾರೆ. ಇದರಲ್ಲಿ ಪುರುಷರು ೧೨೨ ಹಾಗೂ ಮಹಿಳೆಯರು ೯೭ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೧೧೭ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೬೩ ಹಾಗೂ ಹೆಣ್ಣುಮಕ್ಕಳು ೫೪ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೭೫ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೪೩ ಹಾಗೂ ಹೆಣ್ಣುಮಕ್ಕಳು ೩೨ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೨೪ ಜನರಿದ್ದಾರೆ. ಇದರಲ್ಲಿ ೧೩ ಜನ ಗಂಡುಮಕ್ಕಳಿದ್ದರೆ ೧೧ ಜನ ಹೆಣ್ಣುಮಕ್ಕಳಿದ್ದಾರೆ. ಐಟಿಐ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ಇಬ್ಬರು ಗಂಡುಮಕ್ಕಳು ಮಾತ್ರವಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೮೯೨೨ ಜನರಿದ್ದಾರೆ. ಇದರಲ್ಲಿ ಪುರುಷರು ೫೩೭೬ ಹಾಗೂ ಮಹಿಳೆಯರು ೩೫೪೬ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು

ಒಟ್ಟು ೫೪೩೫ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೨೯೯೫ ಹಾಗೂ ಹೆಣ್ಣುಮಕ್ಕಳು ೨೪೪೦ ಜನರಿದ್ದಾರೆ. ಅದರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೩೦೧೩ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೧೯೭೫ ಹಾಗೂ ಹೆಣ್ಣುಮಕ್ಕಳು ೧೦೩೮ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೪೨೦ ಜನರಿದ್ದಾರೆ. ಇದರಲ್ಲಿ ೩೫೨ ಜನ ಗಂಡುಮಕ್ಕಳಿದ್ದರೆ ೬೮ ಜನ ಹೆಣ್ಣುಮಕ್ಕಳಿದ್ದಾರೆ. ಪಿಯುಸಿ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ೪೧ ಗಂಡುಮಕ್ಕಳು ಮಾತ್ರವಿದ್ದಾರೆ. ಪದವಿಯನ್ನು ೪ ಜನ ಹಾಗೂ ಸ್ನಾತಕೋತ್ತರ ಪದವಿಯನ್ನು ಒಬ್ಬರು, ಐಟಿಐ ಯಲ್ಲಿ ೮ ಜನ ಗಂಡುಮಕ್ಕಳು ಮಾತ್ರ ವ್ಯಾಸಂಗ ಮಾಡುತ್ತಿರುವುದು ಕಂಡುಬರುತ್ತದೆ.

ಐಟಿಐ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವವರು ಒಟ್ಟು ಇಬ್ಬರು ಗಂಡುಮಕ್ಕಳು ಮಾತ್ರವಿದ್ದಾರೆ.

ಅಂದರೆ ಒಟ್ಟು ಸಾಕ್ಷರರ ಜನಸಂಖ್ಯೆಯಲ್ಲಿ ಸಾಕ್ಷರತೆಯನ್ನು ಪಡೆದ ಪುರುಷರು ೬೦.೨೫ ಇದ್ದರೆ ಮಹಿಳೆಯರು ೩೯.೭೫ರಷ್ಟಿದ್ದಾರೆ. ಇದರಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ಶೇಕಡ ೬೦.೯೧ರಷ್ಟಿದ್ದಾರೆ. ಇದರಲ್ಲಿಪುರುಷರು ಶೇಕಡ ೫೫.೭೧ ರಷ್ಟಿದ್ದರೆ ಮಹಿಳೆಯರು ಶೇಕಡ ೬೮.೮೦ ರಷ್ಟಿದ್ದಾರೆ.

ಮಾಧ್ಯಮಿಕ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೩೩.೭೭ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೩೬.೭೩, ಮಹಿಳೆಯರು ಶೇಕಡ ೨೯.೨೭ ರಷ್ಟಿದ್ದಾರೆ. ಪ್ರೌಢ ಶಿಕ್ಷಣದ ಹಂತದಲ್ಲಿ ಶಿಕ್ಷಣ ಪಡೆದವರು ಶೇಕಡ ೦೪.೭೦ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೬.೫೪, ಮಹಿಳೆ ಶೇಕಡ ೧.೯೧ ರಷ್ಟಿದ್ದಾರೆ.

ಪಿಯುಸಿ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೦.೪೫ ರಷ್ಟಿದ್ದಾರೆ. ಇದರಲ್ಲಿ ಪುರುಷರು ೦.೭೬ ರಷ್ಟಿದ್ದಾರೆ. ಮಹಿಳೆಯರು ಇಲ್ಲವೇ ಇಲ್ಲ. ಪದವಿ ಹಂತದಲ್ಲಿ ಶಿಕ್ಷಣ ಪಡೆದವರು ಶೇಕಡ ೦.೦೪೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೦೭ ರಷ್ಟಿದ್ದಾರೆ. ಮಹಿಳೆಯರು ಇರುವುದಿಲ್ಲ. ಅದೇ ರೀತಿ ಸ್ನಾತಕೋತ್ತರದಲ್ಲಿ ಶಿಕ್ಷಣ ಪಡೆದವರು ಶೇಕಡ ೦.೦೧ ರಷ್ಟಿದ್ದಾರೆ. ಇದರಲ್ಲಿ ಪುರುಷರು ೦.೦೧ ಇದ್ದು ಮಹಿಳೆಯರು ಯಾರೂ ಇಲ್ಲ. ಅದೇ ರೀತಿ ಐಟಿಐ ಪೂರೈಸಿದವರು ಒಟ್ಟು ಶೇಕಡ ೦.೦೮ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೧೪ ರಷ್ಟಿದ್ದು ಮಹಿಳೆಯರು ಯಾರೂ ಇರುವುದಿಲ್ಲ.

ಅಂದರೆ ಪ್ರಾಥಮಿಕ ಹಂತದಿಂದ ಮೇಲೆ ಹೋದಂತೆಲ್ಲ ಶಿಕ್ಷಣ ಪಡೆದವರ ಪ್ರಮಾಣ ಕಡಿಮೆಯಾಗುತ್ತ ಸಾಗಿದೆ. ಪ್ರಾಥಮಿಕ ಹಂತದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ

ಶಿಕ್ಷಣ ಪಡೆಯುತ್ತಿದ್ದರೆ ಮುಂದುವರೆದಂತೆ ಉನ್ನತ ಶಿಕ್ಷಣದಲ್ಲಿ ಮಹಿಳೆಯರು ಕಣ್ಮರೆಯಾಗಿದ್ದಾರೆ. ಅಂದರೆ ಶೈಕ್ಷಣಿಕವಾಗಿ ಜೇನುಕುರುಬ ಮಹಿಳೆಯರು ಹಿಂದುಳಿದಿದ್ದಾರೆಂದು ಹೇಳಬಹುದು.

### ೩.೧೪.೨.ಆ. ಕೊಡಗು ಜಿಲ್ಲೆಯ ಜೇನುಕುರುಬ ಸಮುದಾಯದ ಶೈಕ್ಷಣಿಕ ವಿವರ

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೮೩೨ ಇವೆ. ಇವುಗಳಲ್ಲಿ ಗಂಡು ೪೭೬ ಹಾಗೂ ಹೆಣ್ಣು ೩೫೬ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೩೦೦೭ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೧೫೪೨ ಹಾಗೂ ಮಹಿಳೆಯರು ೧೪೬೫ ಜನರಿದ್ದಾರೆ.

**ಕೋಷ್ಟಕ : ೩. ೫. ಕೊಡಗು ಜಿಲ್ಲೆಯ ಜೇನುಕುರುಬ ಸಮುದಾಯದ ತಾಲೂಕುವಾರು ಸಾಕ್ಷರತೆ ಪಡೆಯಲು ಅರ್ಹರಾದ ಹಾಗೂ ಅರ್ಹರಾಗದವರ ವಿವರ**

| ಕ್ರ ಸಂ. | ತಾಲೂಕು | ಸಾಕ್ಷರತೆ ಪಡೆಯಲು ಅರ್ಹರಲ್ಲದವರು | | | ಸಾಕ್ಷರತೆ ಪಡೆಯಲು ಅರ್ಹರಾದವರು | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಸೋಮವಾರಪೇಟೆ | ೪೭೬ | ೩೫೬ | ೮೩೨ | ೧೫೪೨ | ೧೪೬೫ | ೩೦೦೭ |
| ೨ | ವಿರಾಜಪೇಟೆ | ೮೦೯ | ೫೬೫ | ೧೩೪೭ | ೨೦೮೫ | ೨೦೦೨ | ೪೦೮೭ |
| ಒಟ್ಟು | | ೧೨೮೫ | ೯೨೧ | ೨೧೭೯ | ೩೬೨೭ | ೩೪೬೭ | ೭೦೯೪ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.


ಹಾಗೆಯೇ ವಿರಾಜಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೧೩೪೭ ಇವೆ. ಇವುಗಳಲ್ಲಿ ಗಂಡು ೮೦೯ ಹಾಗೂ ಹೆಣ್ಣು ೫೬೫ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೪೦೮೭ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೨೦೮೫ ಹಾಗೂ ಮಹಿಳೆಯರು ೨೦೦೨ ಜನರಿದ್ದಾರೆ.

**ಕೋಷ್ಟಕ : ೩. ೬. ಕೊಡಗು ಜಿಲ್ಲೆಯ ಜೇನುಕುರುಬ ಬುಡಕಟ್ಟಿನ ತಾಲೂಕುವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ಅನಕ್ಷರಸ್ಥರ ವಿವರ**

| ಕ್ರ ಸಂ. | ತಾಲೂಕುಗಳು | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಸೋಮವಾರಪೇಟೆ | ೮೭೨ | ೧೫೪೨ | ೧೪೬೫ | ೩೦೦೭ | ೭೪೯ | ೫೩೯ | ೧೨೮೮ | ೭೯೩ | ೯೨೬ | ೧೭೧೯ |
| ೨ | ವಿರಾಜಪೇಟೆ | ೧೪೪೧ | ೨೦೮೫ | ೨೦೦೨ | ೪೦೮೭ | ೮೫೨ | ೬೦೨ | ೧೪೫೪ | ೧೨೩೩ | ೧೪೦೦ | ೨೬೩೩ |
| ಒಟ್ಟು | | ೨೩೧೩ | ೩೬೨೭ | ೩೪೬೭ | ೭೦೯೪ | ೧೬೦೧ | ೧೧೪೧ | ೨೭೪೨ | ೨೦೨೬ | ೨೩೨೬ | ೪೩೫೨ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

## ಲಂಬಚಿತ್ರ : ೩. ೨. ಕೊಡಗು ಜಿಲ್ಲೆಯ ಜೇನುಕುರುಬ ತಾಲೂಕುವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ಅನಕ್ಷರಸ್ಥರು




| | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಸೋಮವಾರಪೇಟೆ | ೮೭೨ | ೧೫೪೨ | ೧೪೬೫ | ೩೦೦೭ | ೭೪೯ | ೫೩೯ | ೧೨೮೮ | ೭೯೩ | ೯೨೬ | ೧೭೧೯ |
| ವಿರಾಜಪೇಟೆ | ೧೪೪೧ | ೨೦೮೫ | ೨೦೦೨ | ೪೦೮೭ | ೮೫೨ | ೬೦೨ | ೧೪೫೪ | ೧೨೩೩ | ೧೪೦೦ | ೨೬೩೩ |

**ಸೋಮವಾರಪೇಟೆ ತಾಲೂಕಿನ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ**

ಸೋಮವಾರಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೮೭೨ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೩೦೦೭ ಜನರಿದ್ದಾರೆ. ಇದರಲ್ಲಿ ಪುರುಷರು ೧೫೪೨ ಹಾಗೂ ಮಹಿಳೆಯರು ೧೪೬೫ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೧೨೮೮ ಜನರಿದ್ದಾರೆ. ಇದರಲ್ಲಿ ಪುರುಷರು ೭೪೯ ಹಾಗೂ ಮಹಿಳೆಯರು ೫೩೯ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೧೭೧೯ ಜನರಿದ್ದಾರೆ. ಇದರಲ್ಲಿ ಪುರುಷರು ೭೯೩ ಹಾಗೂ ಮಹಿಳೆಯರು ೯೨೬ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಜೇನುಕುರುಬರ ಒಟ್ಟು ೮೭೨ ಕುಟುಂಬಗಳಲ್ಲಿ ಸಾಕ್ಷರರ ಹಾಗೂ ಅನಕ್ಷರರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಒಟ್ಟು ಶೇಕಡ ೪೨.೮೩ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೮.೫೭ ರಷ್ಟಿದ್ದರೆ. ಮಹಿಳಾ ಸಾಕ್ಷರರು ಶೇಕಡ ೩೬.೭೯ ರಷ್ಟು ಮಾತ್ರವಿದೆ. ಅನಕ್ಷರರಪ್ರಮಾಣದಲ್ಲಿ ಪುರುಷ ಅನಕ್ಷರರಿಗಿಂತ ಮಹಿಳಾ ಅನಕ್ಷರರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರರಪ್ರಮಾಣವು ಶೇಕಡ ೫೭.೧೬ ರಷ್ಟಿದೆ.

**ವಿರಾಜಪೇಟೆ ತಾಲೂಕಿನ ಸಾಕ್ಷರರು ಹಾಗೂ ಅನಕ್ಷರಸ್ಥರ ವಿವರ**

ವಿರಾಜಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬರ ಒಟ್ಟು ೧೪೪೧ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೪೦೮೭ ಜನರಿದ್ದಾರೆ. ಇದರಲ್ಲಿ ಪುರುಷರು ೨೦೮೫ ಹಾಗೂ ಮಹಿಳೆಯರು ೨೦೦೨ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೧೪೫೪ ಜನರಿದ್ದಾರೆ. ಇದರಲ್ಲಿ ಪುರುಷರು ೮೫೨ ಹಾಗೂ ಮಹಿಳೆಯರು ೬೦೨ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೨೬೩೩ ಜನರಿದ್ದಾರೆ. ಇದರಲ್ಲಿ ಪುರುಷರು ೧೨೩೩ ಹಾಗೂ ಮಹಿಳೆಯರು ೧೪೦೦ ಜನರಿದ್ದಾರೆ.

ಒಟ್ಟಾರೆಯಾಗಿ ಈ ತಾಲೂಕಿನ ಜೇನುಕುರುಬರ ಸಾಕ್ಷರರ ಹಾಗೂ ಅನಕ್ಷರರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಒಟ್ಟು ಶೇಕಡ ೩೫.೫೮ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೦.೮೬ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೦.೦೬ ರಷ್ಟು ಮಾತ್ರವಿದೆ.ಅನಕ್ಷರರ ಪ್ರಮಾಣದಲ್ಲಿ ಪುರುಷ ಅನಕ್ಷರರಿಗಿಂತ ಮಹಿಳಾ ಅನಕ್ಷರರಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರರ ಪ್ರಮಾಣವು ಶೇಕಡ ೬೪.೪೨ ರಷ್ಟಿದೆ.

ಕೊಡಗು ಜಿಲ್ಲೆಯನ್ನು ಒಟ್ಟಾರೆಯಾಗಿ ನೋಡುವುದಾದರೆ ಜೇನುಕುರುಬ ಸಾಕ್ಷರರ ಹಾಗೂ ಅನಕ್ಷರರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಸರಾಸರಿ ಒಟ್ಟು ಶೇಕಡ ೩೮.೬೫ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೪೪.೧೪ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೩೨.೯೧ ರಷ್ಟು ಮಾತ್ರವಿದೆ. ಅನಕ್ಷರರ ಪ್ರಮಾಣದಲ್ಲಿ ಪುರುಷ ಅನಕ್ಷರರಿಗಿಂತ ಮಹಿಳಾ ಅನಕ್ಷರರ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ಅನಕ್ಷರರ ಪ್ರಮಾಣವು ಶೇಕಡ ೬೧.೩೪ ರಷ್ಟಿದೆ.

ಕೊಡಗು ಜಿಲ್ಲೆಯ ಒಟ್ಟು ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣ ಶೇಕಡ ೧೦.೪೭ ಇದೆ. ಈ ಜಿಲ್ಲೆಯ ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲೂಕಿನಲ್ಲಿ ಜೇನುಕುರುಬರು ಕಂಡುಬರುತ್ತಾರೆ.

ಸೋಮವಾರಪೇಟೆಯಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೧೨೮೮ ಜನರಿದ್ದಾರೆ. ಇದರಲ್ಲಿ ಪುರುಷರು ೭೪೯ ಹಾಗೂ ಮಹಿಳೆಯರು ೫೩೯ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೮೩೩ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೪೯೪ ಹಾಗೂ ಹೆಣ್ಣುಮಕ್ಕಳು ೩೩೯ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೩೭೬ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೨೦೨ ಹಾಗೂ ಹೆಣ್ಣುಮಕ್ಕಳು ೧೭೪ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೭೫ ಜನರಿದ್ದಾರೆ.

ಇದರಲ್ಲಿ ೪೯ ಜನ ಗಂಡುಮಕ್ಕಳಿದ್ದರೆ ೨೬ ಜನ ಹೆಣ್ಣುಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ೧೨ ಗಂಡುಮಕ್ಕಳು ಮಾತ್ರ ಇದ್ದಾರೆ. ಪದವಿ ತರಗತಿ ಯಲ್ಲಿ ಒಬ್ಬರು ಪುರುಷರಿದ್ದಾರೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಒಬ್ಬರೂ ಪಡೆದಿರುವುದಿಲ್ಲ. ಇತರೆ ವಿಭಾಗದಲ್ಲಿ ಐಟಿಐನಲ್ಲಿ ಒಬ್ಬ ಹುಡುಗ ಮಾತ್ರ ವ್ಯಾಸಂಗ ಮಾಡುತ್ತಿದ್ದಾನೆ.

ವಿರಾಜಪೇಟೆಯಲ್ಲಿ ಸಾಕ್ಷರತೆಯನ್ನು ಪಡೆದ ಜೇನುಕುರುಬರು ಒಟ್ಟು ೧೧೪೫೪ ಜನರಿದ್ದಾರೆ. ಇದರಲ್ಲಿ ಪುರುಷರು ೮೫೨ ಹಾಗೂ ಮಹಿಳೆಯರು ೬೦೨ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೧೦೧೭ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೫೦೨ ಹಾಗೂ ಹೆಣ್ಣುಮಕ್ಕಳು ೫೧೫ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೩೦೨ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೨೨೫ ಹಾಗೂ ಹೆಣ್ಣುಮಕ್ಕಳು ೭೭ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೧೦೮ ಜನರಿದ್ದಾರೆ. ಇದರಲ್ಲಿ ೯೮ ಜನ ಗಂಡುಮಕ್ಕಳಿದ್ದರೆ ೧೦ ಜನ ಹೆಣ್ಣುಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ೨೨ ಗಂಡುಮಕ್ಕಳು ಮಾತ್ರ ಇದ್ದಾರೆ. ಪದವಿ ತರಗತಿಯಲ್ಲಿ ಇಬ್ಬರು ಪುರುಷರಿದ್ದಾರೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಒಬ್ಬರೂ ಪಡೆದಿರುವುದಿಲ್ಲ. ಇತರೆ ವಿಭಾಗದಲ್ಲಿ ಐಟಿಐನಲ್ಲಿ ಮೂವರು ವಿದ್ಯಾರ್ಥಿಗಳು ಮಾತ್ರ ವ್ಯಾಸಂಗ ಮಾಡುತ್ತಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬರಲ್ಲಿ ಸಾಕ್ಷರತೆಯನ್ನು ಪಡೆದವರು ಒಟ್ಟು ೨೭೪೨ ಜನರಿದ್ದಾರೆ. ಇದರಲ್ಲಿ ಪುರುಷರು ೧೬೦೧ ಹಾಗೂ ಮಹಿಳೆಯರು ೧೧೪೧ ಜನ ಸಾಕ್ಷರರಿಗ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೧೮೫೦ ಜನರಿದ್ದಾರೆ. ಇದರಲ್ಲಿ ಗಂಡು ಮಕ್ಕಳು ೯೯೬ ಹಾಗೂ ಹೆಣ್ಣುಮಕ್ಕಳು ೮೫೪ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೬೭೮ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೪೨೭ ಹಾಗೂ ಹೆಣ್ಣುಮಕ್ಕಳು ೨೫೧ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೧೮೩ ಜನರಿದ್ದಾರೆ. ಇದರಲ್ಲಿ ೧೪೭ ಜನ ಗಂಡುಮಕ್ಕಳಿದ್ದರೆ ೩೬ ಜನ ಹೆಣ್ಣುಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ೨೪ ಗಂಡುಮಕ್ಕಳು ಮಾತ್ರ ಇದ್ದಾರೆ. ಪದವಿ ತರಗತಿಯಲ್ಲಿ ಮೂವರು ಪುರುಷರಿದ್ದಾರೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಒಬ್ಬರೂ ಪಡೆದಿರುವುದಿಲ್ಲ. ಇತರೆ ವಿಭಾಗದಲ್ಲಿ ಐಟಿಐನಲ್ಲಿ ನಾಲ್ಕು ಜನ ವಿದ್ಯಾರ್ಥಿಗಳುಮಾತ್ರ ವ್ಯಾಸಂಗ ಮಾಡುತ್ತಿದ್ದಾರೆ.

ಅಂದರೆ ಒಟ್ಟು ಸಾಕ್ಷರರ ಜನಸಂಖ್ಯೆಯಲ್ಲಿ ಸಾಕ್ಷರತೆಯನ್ನು ಪಡೆದ ಪುರುಷರು ೫೮.೩೮ ಇದ್ದರೆ ಮಹಿಳೆಯರು ೪೧.೬೨ ರಷ್ಟಿದ್ದಾರೆ. ಇದರಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು

ಒಟ್ಟು ಶೇಕಡ ೬೭.೪೬ ರಷ್ಟಿದ್ದಾರೆ. ಇದರಲ್ಲಿಪುರುಷರು ಶೇಕಡ ೬೨.೨೧ ರಷ್ಟಿದ್ದರೆ ಮಹಿಳೆಯರು ಶೇಕಡ ೭೪.೮೪ ರಷ್ಟಿದ್ದಾರೆ.

ಮಾಧ್ಯಮಿಕ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೨೪.೭೨ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೨೬.೬೭ ಮಹಿಳೆಯರು ಶೇಕಡ ೨೧.೯೯ ರಷ್ಟಿದ್ದಾರೆ.

ಪ್ರೌಢ ಶಿಕ್ಷಣದ ಹಂತದಲ್ಲಿ ಶಿಕ್ಷಣ ಪಡೆದವರು ಶೇಕಡ ೬.೬೭ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೯.೧೮ ಮಹಿಳೆ ಶೇಕಡ ೩.೧೫ ರಷ್ಟಿದ್ದಾರೆ.

ಪಿಯುಸಿ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೦.೮೭ ರಷ್ಟಿದ್ದಾರೆ. ಇದರಲ್ಲಿ ಪುರುಷರು ೧.೪೯ ರಷ್ಟಿದ್ದಾರೆ. ಮಹಿಳೆಯರು ಇಲ್ಲವೇ ಇಲ್ಲ.

ಪದವಿ ಹಂತದಲ್ಲಿ ಶಿಕ್ಷಣ ಪಡೆದವರು ಶೇಕಡ ೦.೧೦ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೧೮ ರಷ್ಟಿದ್ದಾರೆ. ಮಹಿಳೆಯರು ಇರುವುದಿಲ್ಲ.

ಅದೇ ರೀತಿ ಸ್ನಾತಕೋತ್ತರದಲ್ಲಿ ಶಿಕ್ಷಣ ಪಡೆದವರು ಯಾರೂ ಇರುವುದಿಲ್ಲ. ಅದೇ ರೀತಿ ಐಟಿಐ ಪೂರೈಸಿದವರು ಒಟ್ಟು ಶೇಕಡ ೦.೧೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೨೪ ರಷ್ಟಿದ್ದು ಮಹಿಳೆಯರು ಯಾರೂ ಇರುವುದಿಲ್ಲ.

ಅಂದರೆ ಪ್ರಾಥಮಿಕ ಹಂತದಿಂದ ಮೇಲೆ ಹೋದಂತೆಲ್ಲ ಶಿಕ್ಷಣ ಪಡೆದವರ ಪ್ರಮಾಣ ಕೊಡಗು ಜಿಲ್ಲೆಯಲ್ಲಿಯೂ ಕಡಿಮೆಯಾಗುತ್ತ ಸಾಗಿದೆ ದೃಢವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಮುಂದುವರೆದಂತೆ ಉನ್ನತ ಶಿಕ್ಷಣದಲ್ಲಿ ಮಹಿಳೆಯರು ಕಣ್ಮರೆಯಾಗಿದ್ದಾರೆ.

**೩.೧೪.೨. ಇ. ಚಾಮರಾಜನಗರ ಜಿಲ್ಲೆಯ ಜೇನುಕುರುಬ ಸಮುದಾಯದ ಶೈಕ್ಷಣಿಕ ವಿವರ**

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬ ಬುಡಕಟ್ಟಿನ ೦-೦೬ ವಯೋಮಾನದ ಒಟ್ಟು ಮಕ್ಕಳು ೭೧೧ ಇವೆ. ಇವುಗಳಲ್ಲಿ ಗಂಡು ೩೮೧ ಹಾಗೂ ಹೆಣ್ಣು ೩೩೦ ಇವೆ. ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಈ ತಾಲೂಕಿನಲ್ಲಿ ಒಟ್ಟು ೭೩೯ ಜೇನುಕುರುಬರಿದ್ದಾರೆ. ಇದರಲ್ಲಿ ಪುರುಷರು ೩೭೪ ಹಾಗೂ ಮಹಿಳೆಯರು ೩೬೫ ಜನರಿದ್ದಾರೆ.

**ಕೋಷ್ಟಕ : ೩. ೭. ಚಾಮರಾಜನಗರ ಜಿಲ್ಲೆಯ ಜೇನುಕುರುಬ ಸಮುದಾಯದ ತಾಲೂಕುವಾರು ಸಾಕ್ಷರತೆ ಪಡೆಯಲು ಅರ್ಹರಾದ ಹಾಗೂ ಅರ್ಹರಾಗದವರ ವಿವರ**

| ಕ್ರ. ಸಂ. | ತಾಲೂಕು | ಸಾಕ್ಷರತೆ ಪಡೆಯಲು ಅರ್ಹರಲ್ಲದವರು | | | ಸಾಕ್ಷರತೆ ಪಡೆಯಲು ಅರ್ಹರಾದವರು | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಗುಂಡ್ಲುಪೇಟೆ | ೩೮೧ | ೩೩೦ | ೭೧೧ | ೩೭೪ | ೩೬೫ | ೭೩೯ |
| ಒಟ್ಟು | | ೩೮೧ | ೩೩೦ | ೭೧೧ | ೩೭೪ | ೩೬೫ | ೭೩೯ |


ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

**ಕೋಷ್ಟಕ : ೩. ೮. ಚಾಮರಾಜನಗರ ಜಿಲ್ಲೆಯ ಜೇನುಕುರುಬ ಸಮುದಾಯದ ತಾಲೂಕುವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ಅನಕ್ಷರಸ್ಥರು**

| ಕ್ರ. ಸಂ. | ತಾಲೂಕು | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ನಿರಕ್ಷರಸ್ಥರು | | |
|---|---|---|---|---|---|---|---|---|---|---|---|
| | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಗುಂಡ್ಲುಪೇಟೆ | ೩೩೯ | ೬೪೩ | ೫೯೪ | ೧೨೩೭ | ೨೪೧ | ೧೬೪ | ೪೦೫ | ೪೦೨ | ೪೩೦ | ೮೩೨ |
| ಒಟ್ಟು | | ೩೩೯ | ೬೪೩ | ೫೯೪ | ೧೨೩೭ | ೨೪೧ | ೧೬೪ | ೪೦೫ | ೪೦೨ | ೪೩೦ | ೮೩೨ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

**ಲಂಬಚಿತ್ರ : ೩. ೩. ಚಾಮರಾಜನಗರ ಜಿಲ್ಲೆಯ ಜೇನುಕುರುಬ ಸಮುದಾಯದ ತಾಲೂಕುವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ಅನಕ್ಷರರ ಪ್ರಮಾಣ**



ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬರ ಒಟ್ಟು ೩೭೯ ಕುಟುಂಬಗಳಲ್ಲಿ ಸಾಕ್ಷರತೆಗೆ ಅರ್ಹರಾದ ಜೇನುಕುರುಬರು ಒಟ್ಟು ೧೨೩೭ ಜನರಿದ್ದಾರೆ. ಇದರಲ್ಲಿ ಪುರುಷರು ೬೪೩ ಹಾಗೂ ಮಹಿಳೆಯರು ೫೯೪ ಜನರಿದ್ದಾರೆ. ಆದರೆ ಸಾಕ್ಷರತೆಯನ್ನು ಹೊಂದಿದವರು ಒಟ್ಟು ೪೦೫ ಜನರಿದ್ದಾರೆ. ಇದರಲ್ಲಿ ಪುರುಷರು ೨೪೧ ಹಾಗೂ ಮಹಿಳೆಯರು ೧೬೪ ಜನರಿದ್ದಾರೆ. ಅಂದರೆ ಸಾಕ್ಷರಾರ್ಹರಲ್ಲಿ ಸಾಕ್ಷರತೆಯನ್ನು ಪಡೆಯಲು ಸಾಧ್ಯವಾಗದೆ ಇರುವವರು ಒಟ್ಟು ೮೩೨ ಜನರಿದ್ದಾರೆ. ಇದರಲ್ಲಿ ಪುರುಷರು ೪೦೨ ಹಾಗೂ ಮಹಿಳೆಯರು ೪೩೦ ಜನರಿದ್ದಾರೆ.

ಒಟ್ಟಾರೆಯಾಗಿ ಚಾಮರಾಜನಗರದ ಜಿಲ್ಲೆಯ ಜೇನುಕುರುಬರ ಸಾಕ್ಷರರ ಹಾಗೂ ಅನಕ್ಷರರ ಪ್ರಮಾಣದಲ್ಲಿ ಸಾಕ್ಷರಸ್ಥರ ಪ್ರಮಾಣವು ಒಟ್ಟು ಶೇಕಡ ೩೨.೭೪ ರಷ್ಟು ಮಾತ್ರವಿದೆ. ಪುರುಷ ಸಾಕ್ಷರರು ಶೇಕಡ ೩೭.೪೮ ಇದ್ದರೆ ಮಹಿಳಾ ಸಾಕ್ಷರರು ಶೇಕಡ ೨೭.೬೦ ರಷ್ಟು ಮಾತ್ರವಿದೆ. ನಿರೀಕ್ಷರರ ಪ್ರಮಾಣದಲ್ಲಿ ಪುರುಷ ನಿರಕ್ಷರಿಗಳಿಗಿಂತ ಮಹಿಳಾ ನಿರಕ್ಷರಿಗಳ ಪ್ರಮಾಣವು ಅಧಿಕವಾಗಿದೆ. ಒಟ್ಟಾರೆ ನಿರೀಕ್ಷರರ ಪ್ರಮಾಣವು ಶೇಕಡ ೬೭.೨೫ ರಷ್ಟಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನಲ್ಲಿ ಜೇನುಕುರುಬರು ಕಂಡು ಬರುತ್ತಾರೆ. ಹೀಗಾಗಿ ಈ ಜಿಲ್ಲೆಯ ಗುಂಡ್ಲುಪೇಟೆ ತಾಲೂಕನ್ನು ಮಾತ್ರ ಅಧ್ಯಯನ ಕೈಗೊಳ್ಳಲಾಗಿದೆ. ಗುಂಡ್ಲುಪೇಟೆ ತಾಲೂಕಿನ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬರಲ್ಲಿ ಸಾಕ್ಷರತೆಯನ್ನು ಪಡೆದವರು ಒಟ್ಟು ೪೦೫ ಜನರಿದ್ದಾರೆ. ಇದರಲ್ಲಿ ಪುರುಷರು ೨೪೧ ಹಾಗೂ ಮಹಿಳೆಯರು ೧೬೪ ಜನ ಸಾಕ್ಷರರಿದ್ದಾರೆ. ಇಷ್ಟು ಸಾಕ್ಷರರಲ್ಲಿ ಒಂದರಿಂದ ಐದನೇ ತರಗತಿವರೆಗೆ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು ಒಟ್ಟು ೨೦೩ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೧೦೨ ಹಾಗೂ ಹೆಣ್ಣುಮಕ್ಕಳು ೧೦೧ ಜನರಿದ್ದಾರೆ. ಆರರಿಂದ ಎಂಟನೇ ತರಗತಿಯವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಪಡೆದವರು ಒಟ್ಟು ೧೩೭ ಜನರಿದ್ದಾರೆ. ಇದರಲ್ಲಿ ಗಂಡುಮಕ್ಕಳು ೯೨ ಹಾಗೂ ಹೆಣ್ಣುಮಕ್ಕಳು ೪೫ ಜನರಿದ್ದಾರೆ. ಒಂಬತ್ತು ಹಾಗೂ ಹತ್ತನೇ ತರಗತಿಯವರೆಗಿನ ಪ್ರೌಢಶಿಕ್ಷಣ ಪಡೆಯುತ್ತಿರುವವರು ಒಟ್ಟು ೬೩ ಜನರಿದ್ದಾರೆ. ಇದರಲ್ಲಿ ೪೫ ಜನ ಗಂಡುಮಕ್ಕಳಿದ್ದರೆ ೧೮ ಜನ ಹೆಣ್ಣುಮಕ್ಕಳಿದ್ದಾರೆ. ಪದವಿಪೂರ್ವ ತರಗತಿಯಲ್ಲಿ ಕೇವಲ ಒಬ್ಬ ಹುಡುಗನು ಮಾತ್ರ ಇದ್ದಾನೆ. ಪದವಿ ತರಗತಿಯಲ್ಲಿ ಕೂಡ ಒಬ್ಬನೇ ಇದ್ದಾನೆ. ಸ್ನಾತಕೋತ್ತರ ಹಂತದ ಶಿಕ್ಷಣವನ್ನು ಒಬ್ಬರೂ ಪಡೆದಿರುವುದಿಲ್ಲ.ಇತರೆ ವಿಭಾಗದಲ್ಲಿ ಐಟಿಐನಲ್ಲಿ ಒಬ್ಬನೇಹುಡುಗ ಇದ್ದಾನೆ.

ಅಂದರೆ ಒಟ್ಟು ಸಾಕ್ಷರರ ಜನಸಂಖ್ಯೆಯಲ್ಲಿ ಸಾಕ್ಷರತೆಯನ್ನು ಪಡೆದ ಪುರುಷರು ೫೯.೫೦ ಇದ್ದರೆ ಮಹಿಳೆಯರು ೪೦.೫೦ ರಷ್ಟಿದ್ದಾರೆ. ಇದರಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಹೊಂದಿದವರು

ಒಟ್ಟು ಶೇಕಡ ೫೦.೧೨ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೪೨.೩೨ ರಷ್ಟಿದ್ದರೆ ಮಹಿಳೆಯರು ಶೇಕಡ ೬೧.೫೮ ರಷ್ಟಿದ್ದಾರೆ.

ಮಾಧ್ಯಮಿಕ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೩೩.೮೨ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೩೮.೧೭ ರಷ್ಟು ಮಹಿಳೆಯರು ಶೇಕಡ ೨೭.೪೩ ರಷ್ಟಿದ್ದಾರೆ.

ಪ್ರೌಢ ಶಿಕ್ಷಣದ ಹಂತದಲ್ಲಿ ಶಿಕ್ಷಣ ಪಡೆದವರು ಶೇಕಡ ೧೫.೫೬ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೧೮.೬೭ ರಷ್ಟು ಮಹಿಳೆ ಶೇಕಡ ೧೦.೯೭ ರಷ್ಟಿದ್ದಾರೆ.

ಪಿಯುಸಿ ಹಂತದ ಶಿಕ್ಷಣ ಪಡೆದವರು ಒಟ್ಟು ಶೇಕಡ ೦.೨೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ೦.೪೧ ರಷ್ಟಿದ್ದಾರೆ. ಮಹಿಳೆಯರು ಇಲ್ಲವೇ ಇಲ್ಲ.

ಪದವಿ ಹಂತದಲ್ಲಿ ಶಿಕ್ಷಣ ಪಡೆದವರು ೦.೨೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ೦.೪೧ ರಷ್ಟಿದ್ದಾರೆ. ಮಹಿಳೆಯರು ಇಲ್ಲವೇ ಇಲ್ಲ.


ಅದೇ ರೀತಿ ಸ್ನಾತಕೋತ್ತರದಲ್ಲಿ ಶಿಕ್ಷಣ ಪಡೆದವರು ಯಾರೂ ಇರುವುದಿಲ್ಲ. ಅದೇ ರೀತಿ ಐಟಿಐ ಪೂರೈಸಿದವರು ಒಟ್ಟು ೦.೨೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ೦.೪೧ ರಷ್ಟಿದ್ದಾರೆ. ಮಹಿಳೆಯರು ಇಲ್ಲವೇ ಇಲ್ಲ. ಮಹಿಳೆಯರು ಯಾರೂ ಇರುವುದಿಲ್ಲ.

ಅಂದರೆ ಪ್ರಾಥಮಿಕ ಹಂತದಿಂದ ಮೇಲೆ ಹೋದಂತೆಲ್ಲ ಶಿಕ್ಷಣ ಪಡೆದವರ ಪ್ರಮಾಣ ಕೊಡಗು ಜಿಲ್ಲೆಯಲ್ಲಿಯೂ ಕಡಿಮೆಯಾಗುತ್ತ ಸಾಗಿದೆ ಎಂಬುದು ದೃಢವಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ಮುಂದುವರೆದಂತೆ ಉನ್ನತ ಶಿಕ್ಷಣದಲ್ಲಿ ಮಹಿಳೆಯರು ಕಣ್ಮರೆಯಾಗಿದ್ದಾರೆ.

### ೩. ೧೪. ೩. ಜೇನುಕುರುಬ ಸಮುದಾಯದ ಜಿಲ್ಲಾವಾರು, ಶೈಕ್ಷಣಿಕ ವಿವರ

ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳಲ್ಲಿ ಸಮೀಕ್ಷೆಗೆ ಒಳಪಡಿಸಿದ ಸಾಕ್ಷರ ಹಾಗೂ ಅನಕ್ಷರಸ್ಥರ ವಿವರ ಈ ಕೆಳಗಿನಂತಿದೆ. ಮೂರು ಜಿಲ್ಲೆಗಳ ನಡುವೆ ಒಟ್ಟು ೯೪೨೧ ಜೇನುಕುರುಬ ಕುಟುಂಬಗಳಿವೆ. ಈ ಕುಟುಂಬಗಳಲ್ಲಿ ಒಟ್ಟು ಸಾಕ್ಷರತೆಗೆ ಅರ್ಹರಾದವರು ಒಟ್ಟು ೩೦೫೧೪ ಜನರಿದ್ದಾರೆ. ಇದರಲ್ಲಿ ಪುರುಷರು ೧೫೮೩೬ ಮಹಿಳೆಯರು ೧೪೬೭೮ ಜನರಿದ್ದಾರೆ. ಈ ಸಾಕ್ಷರರ್ಹರಲ್ಲಿ ಸಾಕ್ಷರತೆ ಪಡೆದವರು ಒಟ್ಟು ೧೨೦೬೯ ಜನರಿದ್ದಾರೆ. ಇದರಲ್ಲಿ ಪುರುಷ ಸಾಕ್ಷರರು ೭೨೧೮ ಹಾಗೂ ಮಹಿಳಾ ಸಾಕ್ಷರರು ೪೮೫೧ ಜನರಿದ್ದಾರೆ. ಒಟ್ಟು ಅನಕ್ಷರಸ್ಥ ಜೇನುಕುರುಬರು ೧೮೪೪೫ ಜನರಿದ್ದಾರೆ. ಇದರಲ್ಲಿ ಪುರುಷ ಅನಕ್ಷರಸ್ಥರು ೮೬೧೮ ಹಾಗೂ ಮಹಿಳಾ ಅನಕ್ಷರಸ್ಥರು ೯೮೨೭ ಜನರಿದ್ದಾರೆ.

ವೃತ್ತಚಿತ್ರ : ೬. ೧. ಮೈಸೂರು ಕೊಡಗು ಚಾಮರಾಜನಗರ ಜಿಲ್ಲೆಗಳ ಒಟ್ಟು ಜೇನುಕುರುಬ ಸಾಕ್ಷರಸ್ಥರು.





ಶೇಕಡವಾರಿನಲ್ಲಿ ಹೇಳುವುದಾದರೆ ಮೂರು ಜಿಲ್ಲೆಗಳ ನಡುವೆ ಜೇನುಕುರುಬ ಒಟ್ಟು ಸಾಕ್ಷರರು ಶೇಕಡ ೩೯.೫೫ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೪೫.೫೭ ರಷ್ಟು, ಮಹಿಳೆ ಶೇಕಡ ೩೩.೦೪ ರಷ್ಟು ಸಾಕ್ಷರತೆ ಹೊಂದಿದ್ದಾರೆ.

ಮೂರು ಜಿಲ್ಲೆಗಳ ನಡುವೆ ಅನಕ್ಷರಸ್ಥ ಜೇನುಕುರುಬರು ಒಟ್ಟು ಶೇಕಡ ೬೦.೪೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೫೪.೪೨ ರಷ್ಟು ಹಾಗೂ ಮಹಿಳೆ ಶೇಕಡ ೬೬.೯೫ ರಷ್ಟು ಅನಕ್ಷರಸ್ಥರಿದ್ದಾರೆ. ಅಂದರೆ ಪುರುಷ ಸಾಕ್ಷರರಿಗಿಂತ ಮಹಿಳಾ ಸಾಕ್ಷರರ ಪ್ರಮಾಣ ಕಡಿಮೆ ಇದೆ.



ಲಂಬಚಿತ್ರ : ೩. ೪. ಜೇನುಕುರುಬ ಸಮುದಾಯದ ಜಿಲ್ಲಾವಾರು, ಲಿಂಗವಾರು ಸಾಕ್ಷರಸ್ಥರು ಮತ್ತು ಅನಕ್ಷರಸ್ಥರು




| | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಮೈಸೂರು | ೫೩೭೬ | ೩೫೪೬ | ೮೯೨೨ | ೬೧೯೦ | ೭೦೭೧ | ೧೩೨೬೧ |
| ಕೊಡಗು | ೧೬೦೧ | ೧೧೪೧ | ೨೭೪೨ | ೨೦೨೬ | ೨೩೨೬ | ೪೩೫೨ |
| ಚಾಮರಾಜನಗರ | ೨೪೧ | ೧೬೪ | ೪೦೫ | ೪೦೨ | ೪೩೦ | ೮೩೨ |

ಕೋಷ್ಟಕ : ೩. ೯. ಜೇನುಕುರುಬ ಸಮುದಾಯದ ಜಿಲ್ಲಾವಾರು, ತಾಲೂಕುವಾರು, ಕುಟುಂಬ ಲಿಂಗವಾರು ಸಾಕ್ಷರರ್ಹರು, ಸಾಕ್ಷರಸ್ಥರು ಮತ್ತು ಅನಕ್ಷರಸ್ಥರ ವಿವರ

| ಕ್ರ.ಸಂ. | ಜಿಲ್ಲೆ | ತಾಲೂಕುಗಳು | ಕುಟುಂಬ | ಸಾಕ್ಷರರ್ಹರು | | | ಸಾಕ್ಷರಸ್ಥರು | | | ಅನಕ್ಷರಸ್ಥರು | | |
|---|---|---|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಮೈಸೂರು | ಎಚ್.ಡಿ. ಕೋಟೆ | ೩೮೮೧ | ೬೭೬೦ | ೬೧೪೦ | ೧೨೯೦೦ | ೩೪೩೯ | ೨೧೫೩ | ೫೫೯೨ | ೩೩೨೧ | ೩೯೮೭ | ೭೩೦೮ |
| | | ಪಿರಿಯಾಪಟ್ಟಣ | ೧೦೦೬ | ೧೭೦೧ | ೧೫೫೯ | ೩೨೬೦ | ೭೬೦ | ೫೭೫ | ೧೩೩೫ | ೯೪೧ | ೯೮೪ | ೧೯೨೫ |
| | | ಹುಣಸೂರು | ೧೭೦೯ | ೨೮೩೩ | ೨೬೫೯ | ೫೪೯೨ | ೧೦೫೫ | ೭೨೧ | ೧೭೭೬ | ೧೭೭೮ | ೧೯೩೮ | ೩೭೧೬ |
| | | ನಂಜನಗೂಡು | ೧೭೩ | ೨೭೨ | ೨೫೯ | ೫೩೧ | ೧೨೨ | ೯೭ | ೨೧೯ | ೧೫೦ | ೧೬೨ | ೩೧೨ |
| **ಮೈಸೂರು ಜಿಲ್ಲೆ** | | | **೬೭೬೯** | **೧೧೫೬೬** | **೧೦೬೧೭** | **೨೨೧೮೩** | **೫೩೭೬** | **೩೫೪೬** | **೮೯೨೨** | **೬೧೯೦** | **೭೦೭೧** | **೧೩೨೬೧** |
| ೨ | ಕೊಡಗು | ಸೋಮವಾರಪೇಟೆ | ೮೭೨ | ೧೫೪೨ | ೧೪೬೫ | ೩೦೦೭ | ೭೪೯ | ೫೩೯ | ೧೨೮೮ | ೭೯೩ | ೯೨೬ | ೧೭೧೯ |
| | | ವಿರಾಜಪೇಟೆ | ೧೧೫೯ | ೧೬೫೫ | ೧೫೮೫ | ೩೨೪೦ | ೬೯೩ | ೫೦೨ | ೧೧೯೫ | ೯೬೨ | ೧೦೮೩ | ೨೦೪೫ |
| | | ವಿರಾಜಪೇಟೆ (ಲೈನ್) | ೪೯ | ೭೪ | ೭೬ | ೧೫೦ | ೨೦ | ೨೧ | ೪೧ | ೫೪ | ೫೫ | ೧೦೯ |
| | | ವಿರಾಜಪೇಟೆ (ಪೈಸಾರಿ) | ೨೩೩ | ೩೫೬ | ೩೪೧ | ೬೯೭ | ೧೩೯ | ೭೯ | ೨೧೮ | ೨೧೭ | ೨೬೨ | ೪೭೯ |
| **ಕೊಡಗು ಜಿಲ್ಲೆ** | | | **೨೩೧೩** | **೩೬೨೭** | **೩೪೬೭** | **೭೦೯೪** | **೧೬೦೧** | **೧೧೪೧** | **೨೭೪೨** | **೨೦೨೬** | **೨೩೨೬** | **೪೩೫೨** |
| ೩ | ಚಾ.ನಗರ | ಗುಂಡ್ಲುಪೇಟೆ | ೩೩೯ | ೬೪೩ | ೫೯೪ | ೧೨೩೭ | ೨೪೧ | ೧೬೪ | ೪೦೫ | ೪೦೨ | ೪೩೦ | ೮೩೨ |
| ಚಾಮರಾಜನಗರಜಿಲ್ಲೆ | | | ೩೩೯ | ೬೪೩ | ೫೯೪ | ೧೨೩೭ | ೨೪೧ | ೧೬೪ | ೪೦೫ | ೪೦೨ | ೪೩೦ | ೮೩೨ |
| ಒಟ್ಟಾರೆ ಜೇನುಕುರುಬರು | | | ೯೪೨೧ | ೧೫೮೩೬ | ೧೪೬೭೮ | ೩೦೫೧೪ | ೭೨೧೮ | ೪೮೫೧ | ೧೨೦೬೯ | ೮೬೧೮ | ೯೮೨೭ | ೧೮೪೪೫ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

ಒಟ್ಟಾರೆಯಾಗಿ ರಾಜ್ಯದ ಸಾಕ್ಷರತೆಯ ಪ್ರಮಾಣವನ್ನು ನೋಡಿದರೆ ರಾಜ್ಯದ ಪರಿಶಿಷ್ಟ ಪಂಗಡದ ಸಾಕ್ಷರತೆಯು ಪ್ರಮಾಣವು ಸರಾಸರಿ ಶೇಕಡ ೬.೯೫ ಮಾತ್ರವಿದೆ. ಆದರೆ ಮೈಸೂರು (ಶೇ೧೧.೧೫,) ಕೊಡಗು (ಶೇ೧೦.೪೭,) ಚಾಮರಾಜನಗರ (ಶೇ೧೧.೭೮) ಮೂರು ಜಿಲ್ಲೆಗಳಲ್ಲಿಯೂ ಪರಿಶಿಷ್ಟ ಪಂಗಡದವರ ಸಾಕ್ಷರತೆಯ ಪ್ರಮಾಣವು ರಾಜ್ಯದ ಪರಿಶಿಷ್ಟ ಪಂಗಡಗಳ ಒಟ್ಟು ಸಾಕ್ಷರತೆಯ ಪ್ರಮಾಣಕ್ಕಿಂತ ಅಧಿಕವಾಗಿರುವುದು ಕಂಡು ಬರುತ್ತದೆ. ಅದರಲ್ಲೂ ಚಾಮರಾಜನಗರ ಜಿಲ್ಲೆಯು ಇತರ ಎರಡು ಜಿಲ್ಲೆಗಳಗಿಂತ ಅಧಿಕ ಪ್ರಮಾಣದ ಪರಿಶಿಷ್ಟ ಪಂಗಡದ ಸಾಕ್ಷರರನ್ನು ಹೊಂದಿದ ಜಿಲ್ಲೆಯೆಂದು ೨೦೧೧ರ ಜನಗಣತಿ ತಿಳಿಸುತ್ತದೆ.

**ಕೋಷ್ಟಕ : ೩. ೧೦. ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಒಟ್ಟು ಪರಿಶಿಷ್ಟ ಪಂಗಡ ಹಾಗೂ ಜೇನುಕುರುಬ ಸಾಕ್ಷರಸ್ಥರ ವಿವರ**

| ಕ್ರಸಂ | ಜಿಲ್ಲೆ | ಜಿಲ್ಲೆಗಳ ಒಟ್ಟು ಪ.ಪಂ ಸಾಕ್ಷರಸ್ಥರು | | | ಜೇನುಕುರುಬ ಸಾಕ್ಷರಸ್ಥರು | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಮೈಸೂರು | ೧,೬೬,೬೯೭ | ೧,೬೭,೮೫೦ | ೩,೩೪,೫೪೭ | ೫೩೭೬ | ೩೫೪೬ | ೮೯೨೨ |
| ೨ | ಕೊಡಗು | ೨೮,೫೧೦ | ೨೯,೫೪೪ | ೫೮,೦೫೪ | ೧೬೦೧ | ೧೧೪೧ | ೨೭೪೨ |
| ೩ | ಚಾಮರಾಜನಗರ | ೫೯,೩೬೯ | ೬೦,೮೫೦ | ೧,೨೦,೨೧೯ | ೨೪೧ | ೧೬೪ | ೪೦೫ |
| ಒಟ್ಟು | | ೮೭,೮೭೯ | ೯೦,೩೯೪ | ೫೮,೦೫೪ | ೭೨೧೮ | ೪೮೫೧ | ೧೨೦೬೯ |
| ರಾಜ್ಯದ ಪ.ಪಂ ಸಾಕ್ಷರಸ್ಥರು | | ೨೧,೩೪,೭೫೪ | ೨೧,೧೪,೨೩೩ | ೪೨,೪೮,೯೮೭ | ೧೪೪೩೬ | ೯೭೦೨ | ೨೪೧೩೮ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ಚಾಮರಾಜನಗರದಲ್ಲಿ ಪರಿಶಿಷ್ಟ ಪಂಗಡದವರು ಹೊಂದಿದ ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೧೧.೭೮ ಇದೆ. ಎರಡನೇ ಸ್ಥಾನದಲ್ಲಿ ಮೈಸೂರಿದ್ದು ಇಲ್ಲಿಯ ಪರಿಶಿಷ್ಟ ಪಂಗಡದವರ ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೧೧.೧೫ ಇದೆ. ಈ ಎರಡು ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನ ಪರಿಶಿಷ್ಟ ಪಂಗಡದ ಸಾಕ್ಷರತೆ ಪ್ರಮಾಣವು ಕಡಿಮೆ ಇದೆಯೆಂದೇ ಹೇಳಬಹುದು. ಈ ಜಿಲ್ಲೆಯ ಪರಿಶಿಷ್ಟ ಪಂಗಡದ ಸಾಕ್ಷರತೆಯ ಪ್ರಮಾಣವು ಶೇಕಡ ೧೦.೪೭ರಷ್ಟಿದೆ.

ಮೈಸೂರು, ಕೊಡಗು, ಚಾಮರಾಜನಗರ ಈ ಮೂರು ಜಿಲ್ಲೆಗಳಲ್ಲಿ ಮೈಸೂರು ಜಿಲ್ಲೆಯ ಒಟ್ಟು ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರರು ೩,೩೪,೫೪೭ ಇದೆ. ಇದರಲ್ಲಿ ಪುರುಷರು ೧೬೬೬೯೭ ಹಾಗೂ ಮಹಿಳೆಯರು ೧೬೭೮೫೦ ಜನರಿದ್ದಾರೆ. ಈ ಜಿಲ್ಲೆಯ ಒಟ್ಟು ಸಾಕ್ಷರರಿಗೆ ಹೋಲಿಸಿದರೆ ಈ ಜಿಲ್ಲೆಯ ಜೇನುಕುರುಬರ ಒಟ್ಟು ಸಾಕ್ಷರತಾ ಪ್ರಮಾಣವು ಶೇಕಡ ೨.೬೬ ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣವು ಶೇಕಡ ೩.೨೨ ರಷ್ಟಿದೆ. ಮಹಿಳಾ ಸಾಕ್ಷರರ ಪ್ರಮಾಣ ಶೇಕಡ ೨.೧೧ ರಷ್ಟು ಮಾತ್ರವಿದೆ.

ಹಾಗೆಯೇ ಕೊಡಗು ಜಿಲ್ಲೆಯ ಪರಿಶಿಷ್ಟ ಪಂಗಡಗಳ ಒಟ್ಟು ಸಾಕ್ಷರರು ೫೮೦೫೪ ಜನರಿದ್ದಾರೆ. ಇದರಲ್ಲಿ ಪುರುಷರು ೨೮೫೧೦ ಹಾಗೂ ಮಹಿಳೆಯರು ೨೯೫೪೪ ಜನರಿದ್ದಾರೆ. ಈ ಜಿಲ್ಲೆಯ ಒಟ್ಟು ಸಾಕ್ಷರರಿಗೆ ಹೋಲಿಸಿದರೆ ಜಿಲ್ಲೆಯ ಜೇನುಕುರುಬರ ಒಟ್ಟು ಸಾಕ್ಷರತಾ ಪ್ರಮಾಣವು ಶೇಕಡ ೪.೭೨ ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣವು ಶೇಕಡ ೫.೬೪ ಇದೆ. ಮಹಿಳಾ ಸಾಕ್ಷರರ ಪ್ರಮಾಣ ಶೇಕಡ ೩.೮೬ ರಷ್ಟು ಮಾತ್ರವಿದೆ.

ಚಾಮರಾಜನಗರ ಜಿಲ್ಲೆಯ ಪರಿಶಿಷ್ಟ ಪಂಗಡಗಳ ಒಟ್ಟು ಸಾಕ್ಷರರು ೧೨೦೨೧೯ ಜನರಿದ್ದಾರೆ. ಇದರಲ್ಲಿ ಪುರುಷರು ೫೯೩೬೯ ಹಾಗೂ ಮಹಿಳೆಯರು ೬೦೮೫೦ ಜನರಿದ್ದಾರೆ. ಈ ಜಿಲ್ಲೆಯ ಒಟ್ಟು ಸಾಕ್ಷರರಿಗೆ ಹೋಲಿಸಿದರೆ ಜಿಲ್ಲೆಯ ಜೇನುಕುರುಬರ ಒಟ್ಟು ಸಾಕ್ಷರತಾ ಪ್ರಮಾಣವು ಶೇಕಡ ೦.೩೩ ರಷ್ಟು ಮಾತ್ರವಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣವು ಶೇಕಡ ೦.೪೦ ಇದೆ. ಮಹಿಳಾ ಸಾಕ್ಷರರ ಪ್ರಮಾಣ ಶೇಕಡ ೦.೨೬ ರಷ್ಟು ಮಾತ್ರವಿದೆ.


ಒಟ್ಟಾರೆಯಾಗಿ ಹೇಳುವುದಾದರೆ ಆಯಾ ಜಿಲ್ಲೆಗಳ ಪರಿಶಿಷ್ಟ ಪಂಗಡದ ಸಾಕ್ಷರರಿಗಿಂತ ಕಡಿಮೆ ಪ್ರಮಾಣದ ಸಾಕ್ಷರರನ್ನು ಜೇನುಕುರುಬ ಸಮುದಾಯ ಹೊಂದಿದೆ ಎಂದು ತಿಳಿದು ಬರುತ್ತದೆ. ಅದರಲ್ಲೂ ಜೇನುಕುರುಬ ಮಹಿಳಾ ಸಾಕ್ಷರರು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದು ತಿಳಿದುಬರುತ್ತದೆ.

**ಕೋಷ್ಟಕ : ೩. ೧೧. ಜೇನುಕುರುಬ ಸಮುದಾಯದ ಲಿಂಗವಾರು ಶೈಕ್ಷಣಿಕ ವಿವರ**

| ಕ್ರ. ಸಂ. | ಶೈಕ್ಷಣಿಕ ಹಂತ | ಗಂಡು | ಹೆಣ್ಣು | ಒಟ್ಟು |
|---|---|---|---|---|
| ೧ | ಪ್ರಾಥಮಿಕ | ೨೬೧೪ | ೧೯೦೭ | ೪೫೨೧ |
| ೨ | ಮಾಧ್ಯಮಿಕ | ೨೩೩೮ | ೧೬೯೯ | ೪೦೩೭ |
| ೩ | ಪ್ರೌಢಶಾಲೆ | ೨೦೬೮ | ೧೧೬೨ | ೩೨೩೦ |
| ೪ | ಡಿಪ್ಲೋಮಾ | ೫ | ೩ | ೮ |
| ೫ | ಪದವಿ ಪೂರ್ವ | ೧೧೭ | ೪೮ | ೧೬೫ |
| ೬ | ಪದವಿ | ೭೪ | ೨೮ | ೧೦೨ |
| ೭ | ಸ್ನಾತ ಕೋತ್ತರ | ೦ | ೩ | ೩ |
| ೮ | ಇತರೆ | ೨ | ೧ | ೩ |
| **ಒಟ್ಟು** | | **೭೨೧೮** | **೪೮೫೧** | **೧೨೦೬೯** |
| | | ೫೯.೮೦೬೧ | ೪೦.೧೯೩೯ | |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩

ಲಂಬಚಿತ್ರ : ೬. ೫. ಜೇನುಕುರುಬ ಸಮುದಾಯದ ಲಿಂಗವಾರು ಶೈಕ್ಷಣಿಕ ವಿವರ




| | ಪ್ರಾಥಮಿಕ | ಮಾಧ್ಯಮಿಕ | ಪ್ರೌಢಶಾಲೆ | ಡಿಪ್ಲೋಮಾ | ಪದವಿ ಪೂರ್ವ | ಪದವಿ | ಸ್ನಾತಕೋತ್ತರ | ಇತರೆ |
|---|---|---|---|---|---|---|---|---|
| ಗಂಡು | ೨೬೧೪ | ೨೩೩೮ | ೨೦೬೮ | ೫ | ೧೧೭ | ೭೪ | ೦ | ೨ |
| ಹೆಣ್ಣು | ೧೯೦೭ | ೧೬೯೯ | ೧೧೬೨ | ೩ | ೪೮ | ೨೮ | ೩ | ೧ |
| ಒಟ್ಟು | ೪೫೨೧ | ೪೦೩೭ | ೩೨೩೦ | ೮ | ೧೬೫ | ೧೦೨ | ೩ | ೩ |

ಒಟ್ಟಾರೆಯಾಗಿ ಹೇಳುವುದಾದರೆ ಮೈಸೂರು ಚಾಮರಾಜನಗರ ಕೊಡಗು ಜಿಲ್ಲೆಗಳಲ್ಲಿ ಸಮೀಕ್ಷೆಗೆ ಒಳಪಡಿಸಿದ ಜೇನುಕುರುಬರ ಸಾಕ್ಷರತೆಯ ಪ್ರಮಾಣವು ಈ ಕೆಳಗಿನಂತಿದೆ.

ಮೂರು ಜಿಲ್ಲೆಗಳಿಂದ ಪ್ರಾಥಮಿಕ ಶಿಕ್ಷಣವನ್ನು ಪಡೆದವರ ಸಂಖ್ಯೆಯು ಒಟ್ಟು ೪,೫೨೧ ಜನರಿದ್ದಾರೆ. ಇದರಲ್ಲಿ ಪುರುಷರು ೨೬೧೪ ಹಾಗೂ ಮಹಿಳೆಯರು ೧೯೦೭ ಜನರಿದ್ದಾರೆ.

ಮಾಧ್ಯಮಿಕ ಶಿಕ್ಷಣ ಹೊಂದಿದವರು ಒಟ್ಟು ೪೦೩೭ ಜನರಿದ್ದಾರೆ. ಇದರಲ್ಲಿ ಪುರುಷರು ೨೩೩೮ ಹಾಗೂ ಮಹಿಳೆಯರು ೧೬೯೯ ಜನರಿದ್ದಾರೆ.

ಪ್ರೌಢ ಶಿಕ್ಷಣ ಹೊಂದಿದವರು ಒಟ್ಟು ೩೨೩೦ ಜನರಿದ್ದಾರೆ. ಇದರಲ್ಲಿ ಪುರುಷರು ೨೦೬೮ ಹಾಗೂ ಮಹಿಳೆಯರು ೧೧೬೨ ಜನರಿದ್ದಾರೆ.

ವೃತ್ತಿ ಶಿಕ್ಷಣ (ಡಿಪ್ಲಮೊ) ಹೊಂದಿದವರು ಒಟ್ಟು ೮ ಜನರಿದ್ದಾರೆ. ಇದರಲ್ಲಿ ಪುರುಷರು ೫ ಹಾಗೂ ಮಹಿಳೆಯರು ೩ ಜನರಿದ್ದಾರೆ.

ಪದವಿಪೂರ್ವ ಶಿಕ್ಷಣ ಹೊಂದಿದವರು ಒಟ್ಟು ೧೬೫ ಜನರಿದ್ದಾರೆ. ಇದರಲ್ಲಿ ಪುರುಷರು ೧೧೭ ಹಾಗೂ ಮಹಿಳೆಯರು ೪೮ ಜನರಿದ್ದಾರೆ.

ವಿವಿಧ ಪದವಿ ಶಿಕ್ಷಣ ಹೊಂದಿದವರು ಒಟ್ಟು ೧೦೨ ಜನರಿದ್ದಾರೆ. ಇದರಲ್ಲಿ ಪುರುಷರು ೭೪ ಹಾಗೂ ಸಮಹಿಳೆಯರು ೨೮ ಜನರಿದ್ದಾರೆ.

ಸ್ನಾತಕೋತ್ತರ ಶಿಕ್ಷಣ ಹೊಂದಿದವರು ಒಟ್ಟು ಮೂರು ಜನರಿದ್ದು ಇದರಲ್ಲಿ ಪುರುಷರು ಮಾತ್ರ ಮೂರು ಜನರಿದ್ದು ಮಹಿಳೆಯರು ಕಂಡುಬರುವುದಿಲ್ಲ.

ಇವುಗಳಲ್ಲದೆ ಇತರೆ ಅಂದರೆ ಇಂಜಿನೀಯರಿಂಗ್ ಪದವಿಯನ್ನು ಇಬ್ಬರು ಪುರುಷರು ಪಡೆಯುತ್ತಿದ್ದು ಒಬ್ಬ ಮಹಿಳೆ ನರ್ಸಿಂಗ್ ಶಿಕ್ಷಣವನ್ನು ಪಡೆಯುತ್ತಿದ್ದು ಇತರೆ ಶಿಕ್ಷಣ ಪಡೆಯುತ್ತಿರುವವರು ಒಟ್ಟು ಮೂರು ಜನರಿದ್ದಾರೆ.

ಒಟ್ಟಾರೆಯಾಗಿ ನೋಡಿದರೆ ಆಧುನಿಕ ಶಿಕ್ಷಣವನ್ನು ಪಡೆಯುತ್ತಿರುವವರಲ್ಲಿ ಪುರುಷರೇ ಮೇಲುಗೈ ಸಾಧಿಸಿರುವುದು ಕಂಡು ಬರುತ್ತದೆ. ಜೇನುಕುರುಬ ಮಹಿಳೆಯರು ಆಧುನಿಕ ಶಿಕ್ಷಣ ಪಡೆಯುವಲ್ಲಿ ಹಿಂದಿದ್ದಾರೆಂಬುದು ಸಮೀಕ್ಷೆಯಿಂದ ತಿಳಿದು ಬರುತ್ತಿದೆ. ಆದರೆ ಪಾರಂಪರಿಕ ಜ್ಞಾನವನ್ನು ಸಮುದಾಯದೊಳಗೆ ಇನ್ನೂ ಜೀವಂತವಾಗಿರಿಸಿಕೊಂಡಿರುವವರು ಮಹಿಳೆಯರೇ ಆಗಿದ್ದಾರೆ. ತಮ್ಮ ಆಚರಣೆಗಳ ಮೂಲಕ ಪರಂಪರೆಯನ್ನು ಪುರುಷರೂ ಮರೆಯದಂತೆ ನೋಡಿಕೊಳ್ಳುವ ಎಚ್ಚರಿಕೆಯನ್ನು ಮಹಿಳೆಯರು ಹೊಂದಿದ್ದಾರೆ.

### ೩. ೧೪. ೪. ಶೈಕ್ಷಣಿಕ ಸಮಸ್ಯೆಗಳು

ಪಾರಂಪರಿಕ ಶಿಕ್ಷಣವನ್ನು ಇಂದು ಉಳಿಸಿ ಬೆಳೆಸುವ ವಾತಾವರಣವೇ ಇಲ್ಲದಂತಾಗಿದೆ.

- ಕಾಡಿನ ಹೊರಗೆ ಜೀವನ ಮಾಡುತ್ತಿರುವುದು ಪಾರಂಪರಿಕ ಶಿಕ್ಷಣದ ಪ್ರಸರಣಕ್ಕೆ (Diffusion) ಕ್ಕೆ ತೀವ್ರ ತೊಂದರೆಯುಂಟಾಗುತ್ತಿದೆ. ಉದಾ : ಮರ ಹತ್ತುವ ಜ್ಞಾನ, ಜೇನು ಕೀಳುವುದು, ಆಹಾರಾನ್ವೇಷಣೆ ಇತ್ಯಾದಿ.
- ಪುನರ್ವಸತೀಕರಣದ ನೆಲೆಗಳು ಕಾಡಿನಿಂದ ಬಹಳಷ್ಟು ದೂರವಿರುವುದು. ಅರಣ್ಯ ಮತ್ತು ಜೇನುಕುರುಬರ ನಡುವಿನ ಅಂತರ ಹೆಚ್ಚಿಸಿವೆ. ಇದು ಪಾರಂಪರಿಕ ಶಿಕ್ಷಣದ ಕಲಿಕೆಗೆ ತೊಡಕುಂಟಾಗಿದೆ.
- ಅರಣ್ಯಾಧಾರಿತ ಕಾನೂನುಗಳ ಅನುಷ್ಠಾನಗಳಿಂದ ಪಾರಂಪರಿಕೆ ಶಿಕ್ಷಣ ದಿಕ್ಕು ತಪ್ಪುತ್ತಿದೆ.
- ಪಾರಂಪರಿಕ ಶಿಕ್ಷಣ ದಾಖಲಾತಿ ರೂಪದಲ್ಲಿ ಇಲ್ಲದಿರುವುದು ಮುಂದಿನ ತಲೆಮಾರಿಗೆ ಈ ಜ್ಞಾನ ನಾಶವಾಗುವ ಮುನ್ಸೂಚನೆಯಾಗಿದೆ. ಹೇಗೆಂದರೆ, ಪಾರಂಪರಿಕ ಶಿಕ್ಷಣವು ಹಿರಿಯರಿಂದ ಈಗಿನ ತಲೆ ಮಾರಿನವರು ಅವರ ಜೊತೆಗಿದ್ದು ಪ್ರತಿನಿತ್ಯ ಕಲಿಯುವಂತದ್ದು. ಕಾಡಿನೊಳಗೆ ನೆಲೆಸಿರುವ ಅವರು ನಡೆಸುವ ಜೀವನ ವಿಧಾನವೇ ಪಾರಂಪರಿಕ ಶಿಕ್ಷಣ.

ಆದರೆ, ಪುನರ್ವಸತೀಕರಣದಿಂದ ಈ ರೀತಿ ನಿತ್ಯದ ಕಲಿಕೆ ಆಗುವುದಿಲ್ಲ. ಪಾರಂಪರಿಕ ಶಿಕ್ಷಣ ದಾಖಲೆ ರೂಪದಲ್ಲಿ ಇರುವುದಿಲ್ಲ. ನೋಡುತ್ತಾ ಕಲಿತು ಜೀವನ ಸಾಗಿಸುವಂತದ್ದು, ಕಾಡಿನ ಆಚೆಯ ಬದುಕು ಇದಕ್ಕೆ ವಿರುದ್ಧವಾದುದು. ಆದ್ದರಿಂದ ಈ ಜ್ಞಾನ ನಶಿಸುವ ಮುನ್ಸೂಚನೆ ಎದ್ದು ಕಾಣುತ್ತಿದೆ.

- ಆಧುನಿಕ ಸಂಪರ್ಕ ಮಾಧ್ಯಮಗಳ ಬಳಕೆಯಿಂದಾಗಿ ಇಂದಿನ ಯುವ ಪೀಳಿಗೆಯು ಪಾರಂಪರಿಕ ಶಿಕ್ಷಣದ ಕಲಿಕೆಗೆ ಉತ್ಸುಕತೆ ತೋರುತ್ತಿಲ್ಲ.
- ಹಿರಿಯರು, ಪಾರಂಪರಿಕ ಜ್ಞಾನವನ್ನು ತಿಳಿಸಲು ಸಿದ್ಧರಾಗಿದ್ದೂ, ಯುವ ಪೀಳಿಗೆಯಲ್ಲಿ ಕೆಲವರು ಉತ್ಸಾಹ ತೋರಿದರೂ ಕೂಡ ಇಂದಿನ ವ್ಯವಸ್ಥೆಗಳು ಹೊಂದಿಕೆಯಾಗುವುದಿಲ್ಲ.
- ಪಾರಂಪರಿಕ ಶಿಕ್ಷಣ ಮತ್ತು ಆಧುನಿಕ ಶಿಕ್ಷಣದ ಪರಿಕಲ್ಪನೆ ವೈರುಧ್ಯವಾದವುಗಳು. ಕಲಿಯುವ ಆಸಕ್ತರಿಗೆ ಕಾಡಿನ ಮುಕ್ತ ವಾತಾವರಣ ಇಲ್ಲ. ಆಧುನಿಕ ಶಿಕ್ಷಣ ಪಡೆಯುವಲ್ಲಿ ಇತರೆ ಹೊರ ಜನರುಗಳ ಮಕ್ಕಳೊಂದಿಗೆ ಸ್ಪರ್ಧೆಗೆ ಇಳಿಯಬೇಕಾಗಿರುವುದರಿಂದ ಆಧುನಿಕ ಶಿಕ್ಷಣದಿಂದಲೂ ದೂರ ಸರಿಯುತ್ತಿದ್ದಾರೆ. ಇತ್ತ ಪಾರಂಪರಿಕ ಶಿಕ್ಷಣವೂ ಇಲ್ಲದೆ, ಆಧುನಿಕ ಶಿಕ್ಷಣವನ್ನು ಪಡೆಯಲಾಗದೆ ಕೃಷಿ ಕೂಲಿ, ಎಸ್ಟೇಟ್ ಕೂಲಿ ಕೆಲಸ ಮಾಡುತ್ತಾ ಶೋಷಣೆಗೆ ಒಳಪಡುತ್ತಾ ದಿನದೂಡುವಂತೆ ಆಗಿದೆ.
- ಆಧುನಿಕ ಶಿಕ್ಷಣದ ಪ್ರಾಥಮಿಕ ಹಂತವನ್ನು ಬಲವಂತವಾಗಿಯಾದರೂ ಪೂರೈಸುತ್ತರಾದರೊ ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣಗಳನ್ನು ಸ್ವಂತ ಖರ್ಚಿನಲ್ಲಿ ಓದಬೇಕಾಗಿರುವ ಅನಿವಾರ್ಯತೆ ಕೂಡ ಇವರನ್ನು ಎಲ್ಲೂ ಸಲ್ಲದಂತೆ ಮಾಡಿವೆ.
- ಕಾಡಿನೊಳಗೆ ದಿನನಿತ್ಯದ ಚಟುವಟಿಕೆಗಳು ಪ್ರಾರಂಭವಾಗುವುದೇ ಪಾರಂಪರಿಕ ಜ್ಞಾನದಿಂದ. ಆದರೆ, ಆಧುನಿಕ ಜೀವನಕ್ಕೆ ಹೊಂದಿಕೊಳ್ಳಲೇಬೇಕಾಗಿರುವುದು ಅನಿವಾರ್ಯ. ಈ ಎರಡೂ ಸನ್ನಿವೇಶಗಳನ್ನು ನಿಭಾಯಿಸಲು ಸಾಧ್ಯವಾಗದೇ ಆತಂಕದಲ್ಲಿಯೇ ಜೀವಿಸಲು ವಾತಾವರಣವನ್ನು ಕ್ಷೇತ್ರ ಕಾರ್ಯದಲ್ಲಿ ಗಮನಿಸಲಾಗಿದೆ.
- ಪಾರಂಪರಿಕ ಶಿಕ್ಷಣ ಮೌಖಿಕ ಪರಂಪರೆಯನ್ನು ಹೊಂದಿರುವಂತದ್ದು. ಅದು ಹಿರಿಯರಿಂದ ತಾನಾಗಿಯೇ ಬರುವ ಬಳುವಳಿ. ಅದಕ್ಕೆ ಅಡ್ಡಿ, ಆತಂಕಗಳಿಲ್ಲ, ನಿರಾಯಾಸವಾಗಿ ಕಲಿಯುತ್ತಾರೆ. ಆದರೆ, ಆಧುನಿಕ ಶಿಕ್ಷಣ ಹೊರ ಜಗತ್ತಿನ ಬೇರೆ ಸಮುದಾಯಗಳ ಶಿಕ್ಷಕರಿಂದ ನಿರ್ದಿಷ್ಟ ಸಮಯದಲ್ಲಿ ಕಲಿಯುವಂತದ್ದು. ಇವರ ಮುಗ್ಧತೆ ಮತ್ತು ನಾಚಿಕೆಯ ಸ್ವಭಾವದಿಂದಾಗಿ ಕಲಿಕೆಯಲ್ಲಿ ಹಿಂದುಳಿದು ಮತ್ತೆ ಶಾಲೆ ಬಿಟ್ಟು ಅತಂತ್ರರಾಗುತ್ತಾರೆ.
- ಕಾಡಿನೊಳಗೆ ಪ್ರಾಣಿ, ಪಕ್ಷಿಗಳ ಕಲರವ, ಮರಗಳ ಶಬ್ದ ಇವರಿಗೆ ನಿತ್ಯದ ಆನಂದವನ್ನು ಹೆಚ್ಚಿಸುತ್ತದೆ. ಎಲ್ಲರೂ ಒಂದೇ ಕುಟುಂಬದವರೆಂದು ಭಾವಿಸುವ

ಮನೋಭಾವದವರಾಗಿರುತ್ತಿದ್ದರು. ಕಾಡಿನಿಂದ ಹೊರಬಂದ ಮೇಲೆ ಪ್ರಾಣಿ, ಪಕ್ಷಿ, ಗಿಡ-ಮರಗಳ ನಂಟು ಇಲ್ಲದಂತಾಗಿ, ಒಂಟಿತನ ಕಾಡುತ್ತದೆ.

- ಪಾರಂಪರಿಕ ಅಜ್ಜಯ್ಯನ 'ಜಮ್ಮ' ಇವರಿಗೆ ಅಪರೂಪಕ್ಕೆ ಒಮ್ಮೆ ನೋಡುವಂತಹ ಸ್ಥಿತಿ, ಅಲ್ಲಿ ವಾಸಿಸುತ್ತಾ ಅವುಗಳ ಮಹತ್ವವನ್ನು ಹಿರಿಯರಿಂದ ಕೇಳಿ ತಿಳಿದುಕೊಳ್ಳುವ ವಾತಾವರಣವೇ ಇಲ್ಲದಿರುವುದು. ಪಾರಂಪರಿಕ ಶಿಕ್ಷಣ ಎಂಬುದು ಇವರಿಗೆ ಮರೀಚಿಕೆ ಎಂಬಂತಾಗಿದೆ. ಪಾರಂಪರಿಕ ಜೀವನ ಶೈಲಿ, ಕಲೆ, ಸಾಂಸ್ಕೃತಿಕ ಬದುಕು ಎಲ್ಲವೂ ಕಾಡಿನೊಳಗೆ ಸ್ವಚ್ಛಂದವಾಗಿ ಅನುಭವಿಸಿ, ಆನಂದ ಪಡೆಯುವಂತಿತ್ತು. ಹೊರದೂಡಲ್ಪಟ್ಟಿರುವುದರಿಂದ ಸಂಸ್ಕೃತಿಯ ಮೂಲ ಅಸ್ತಿತ್ವ ಕಳೆಗುಂದಿದೆ. ಪಾರಂಪರಿಕ ಜೀವನ ಶೈಲಿಯ ವಾತಾವರಣದಿಂದ ವಿಮುಖರಾಗಿ, ಅನಿವಾರ್ಯವಾಗಿ ಬದಲಾವಣೆಯನ್ನು ಸ್ವೀಕರಿಸುವಂತಾಗಿದೆ.

### ೩. ೧೫. ಸಂಘಟನೆ



**ಶ್ರೀಮತಿ ಜಾನಕಮ್ಮ ಅಬ್ಬಳತಿ ಹಾಡಿ :** ಇವರು ಸುಮಾರು ೨೫ ವರ್ಷಗಳಿಂದ ಸಮುದಾಯಸಂಘಟನೆಯಲ್ಲಿ ತೊಡಗಿದವರಾಗಿದ್ದಾರೆ. ಇವರು 'ಪ್ರಗತಿಪರ ಆದಿವಾಸಿ ಗಿರಿಜನರ ಸಂಘ' ಮತ್ತು ಡೀಡ್ ಸಂಸ್ಥೆಯಲ್ಲಿ ಸಂಘಟನೆಯ ಜವಾಬ್ದಾರಿಗಳನ್ನು ಹೊತ್ತಿದ್ದರು. ಇವರ ಮಾತಿನಲ್ಲಿ ನಾವು ಕಾಡಿನೊಳಗೆ ಹುಟ್ಟಿ ಬದುಕಿದವರು. ನಮ್ಮ – ಕಾಡಿನ ಮಧ್ಯೆ ಅರಣ್ಯ ಇಲಾಖೆಯ ಪ್ರವೇಶನಾಯಿತು. ಅನಂತರ ಇವರ ಅನುಮತಿಯನ್ನು ಪಡೆದು ಕಾಡಿನೊಳಗೆ ಪ್ರವೇಶಿಸುವಂತೆ ಆಯಿತು. ಪರಿಸರವನ್ನು ಉಳಿಸಬೇಕು ಎಂಬುದು ಅರಣ್ಯ ನೀತಿಯ ಉದ್ದೇಶ. ನಮ್ಮವರೇನೂ ಪರಿಸರಕ್ಕೆ ದ್ರೋಹವನ್ನು ಬಗೆದವರಲ್ಲ. ಪರಿಸರವನ್ನು ಬೆಳೆಸಿದವರು ನಾವುಗಳು. ನಮ್ಮ ಮುತ್ತಜ್ಜ, ಅಜ್ಜ, ಅಪ್ಪನವರು ತಾವೇ ಬೆಳೆಸಿದ ಕಾಡನ್ನು ನಾಶಮಾಡುವ ಉದ್ದೇಶ ನಮಗೆ ಇಲ್ಲ ನಮ್ಮವರ ಹೆಸರಲ್ಲಿ ಬೇರೆಯವರು ಕಾಡಿನ ನಾಶ ಮಾಡುತ್ತಿದ್ದಾರೆ. ನಾವುಗಳು ಸಂಘಟಿತ ಹೋರಾಟಗಳನ್ನು ಮಾಡಿದಾಗ ಮಾತ್ರ ನಮಗೆ ಯಶಸ್ಸು ಸಿಗುತ್ತದೆ ಎನ್ನುತ್ತಾರೆ.

**ಶ್ರೀಮತಿ ಗುಲಾಬಿ ಮಜ್ಜಿಗೆ ಹಳ್ಳ ಹಾಡಿ**



ಶ್ರೀಮತಿ ಗುಲಾಬಿರವರು ಪ್ರಮುಖ ಮಹಿಳಾ ಸಂಘಟಕರು. ಇವರು 'ಕವನ' ಸಂಸ್ಥೆಯಲ್ಲಿ ಮಹಿಳೆಯರನ್ನು ಸಂಘಟಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವರು. ಮಹಿಳೆಯರ ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸುವುದರಲ್ಲಿ ಇವರು ಹೆಚ್ಚಿನ ಶ್ರಮವನ್ನು ಹಾಕಿದ್ದಾರೆ.

**ಶ್ರೀಯುತ ಜೆ ಕೆ ಸೋಮಯ್ಯ (೪೮ ವರ್ಷ) ಸಂಪಿಗೆ ಕೊಲ್ಲಿ ಹಾಡಿ, ವೀರರಾಜಪೇಟೆ, ಕೊಡಗು ಜಿಲ್ಲೆ**



ಶ್ರೀಯುತ ಜೆ ಕೆ ಸೋಮಯ್ಯನವರು. ಜೇನುಕುರುಬ ಸಮುದಾಯದ ಪ್ರಮುಖ ಸಂಘಟನಾಕಾರರು. ಸುಮಾರು ೩೦ ವರ್ಷದ ಸಂಘಟನೆಯ ಅನುಭವವನ್ನು ಹಂಚಿಕೊಂಡರು. ಜನರನ್ನು ಸಂಘಟಿಸಲು ಅನುಭವಿಸಿದ ಕಷ್ಟ, ನೋವು ಅತ್ಯಂತ ನಿಕೃಷ್ಟತೆಯಿಂದ ಕೂಡಿದ್ದಾಗಿತ್ತು. ತಮ್ಮ ಹೆಂಡತಿಯನ್ನು ಸಂಘಟನೆಯ ಒಂದು ಭಾಗವಾಗಿ ರೂಪಿಸಿಕೊಂಡವರಿವರು. ಸುಮಾರು ೩೭ ಬೀದಿನಾಟಕಗಳ ಪ್ರದರ್ಶನವನ್ನು ಸಮುದಾಯದವರ ಒಡನಾಟದಲ್ಲಿ ರೂಪಿಸಿದವರು.

ಜೇನುಕುರುಬರು ಯಾವ ರೀತಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಅನ್ಯಾಯಕ್ಕೆ ಸಿಲುಕಿ ಬಲಿಪಶುಗಳಾಗುತ್ತಿದ್ದಾರೆ ಎಂಬುದನ್ನು ಬೀದಿನಾಟಕಗಳನ್ನು ಆಡುವುದರ ಮೂಲಕ ತಮ್ಮ ನೋವನ್ನು ತೋಡಿ ಕೊಂಡಿದ್ದಾರೆ. ಮೈಸೂರಿನ ಕಲಾ ಮಂದಿರದಲ್ಲಿಯೂ ಇವರು ರೂಪಿಸಿದ ನಾಟಕಗಳು ಪ್ರದರ್ಶನಗೊಂಡಿವೆ.

ಇವರು ಸಮುದಾಯದ ಜನರನ್ನು ಸೇರಿಸಿಕೊಂಡು ರೂಪಿಸಿದ ನಾಟಕಗಳೆಂದರೆ

- ದಿಕ್ಕು ತಪ್ಪಿದ ಬದುಕು
- ಕೊತ್ನಹಳ್ಳಿ ರತ್ನಮ್ಮ
- ವರದಕ್ಷಿಣೆ ಪಿಡುಗು
- ಅರಣ್ಯದ ದೌರ್ಜನ್ಯ ಇವುಗಳು ಪ್ರಮುಖವಾದವುಗಳು.

**ಶ್ರೀಯುತ ಜೆ ಕೆ ತಿಮ್ಮ (೪೮ ವರ್ಷ) ನಾಗರಹೊಳೆ ಹಾಡಿ, ವಿರಾಜಪೇಟೆ ॥ತಾ॥ ಕೊಡಗು.**



ಜೆ ಕೆ ತಿಮ್ಮರವರು ಶ್ರೀಯುತ ಕೆಂಚ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಗಳಿಗೆ ಜನಿಸಿದವರು. ಭೋಜಮ್ಮ ರವರನ್ನು ವಿವಾಹವಾದ ನಂತರ ೧೯೭೬ ರಲ್ಲಿ ಇವರು ನಾಗರಹೊಳೆ ಅರಣ್ಯದಲ್ಲಿ ನೆಲೆಗೊಂಡರು. ಜೆ ಕೆ ತಿಮ್ಮ ರವರು ಜೇನುಕುರುಬ ಸಮುದಾಯದ ಬಹಳ ಪ್ರಮುಖ ಸಂಘಟನಾಕಾರರು. ನೇರ ನಡೆ, ನುಡಿ ಹೊಂದಿದ ಇವರು ಅನುಭವಿಸಿದ್ದು, ಸವೆಸಿದ್ದು ಸಂಘರ್ಷದ ಹಾದಿಯನ್ನು ಪ್ರತಿ ಹೆಜ್ಜೆಗೂ ದೌರ್ಜನ್ಯವನ್ನು ಅನುಭವಿಸಿದ್ದಾರೆ. ಸಮುದಾಯವನ್ನು ಸಂಘಟಿಸುವಲ್ಲಿ ಇವರ ಪಾತ್ರ ಕೂಡ ಅತ್ಯಂತ ಪ್ರಮುಖವಾದುದು. ಸಂಘಟನೆಗೆ ಸಮುದಾಯದ ಹೆಂಗಸರುಗಳನ್ನು ಪ್ರೇರೇಪಿಸಿ ಕರೆ ತಂದವರು. ಅವರಿಂದ ಪ್ರಭಾವಿತರಾಗಿ ಅನೇಕ ಹೆಂಗಸರು ತಮ್ಮ ಹಕ್ಕುಗಳ ಬಗ್ಗೆ ಧ್ವನಿ ಎತ್ತಿದ್ದಾರೆ. ನಾಣಚ್ಚಿಗದ್ದೆ ಹಾಡಿಯ ಶ್ರೀಮತಿ ಶಾಂತಿ, ಆಲದಕಟ್ಟೆ ಶ್ರೀಮತಿ ಅಕ್ಕಮ್ಮ, ಶ್ರೀಮತಿ ಲೇ॥ ಜಾಜಿ, ಶ್ರೀಮತಿ ಗೌರಮ್ಮ, ಶ್ರೀಮತಿ ಗುಲಾಬಿ. ಪ್ರಮುಖ ಸಂಘಟನಾಕಾರರು. ಇವರ ಮಾರ್ಗದರ್ಶನದಲ್ಲಿ ಸಮುದಾಯದ ನೂರಾರು ಹೆಣ್ಣು ಮಕ್ಕಳು ಬೀದಿಗಿಳಿದು ತಮ್ಮ ಹಕ್ಕುಗಳ ಬಗ್ಗೆ, ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಇವರ ಸಂಘಟನೆಯು ಇಡೀ ಮೈಸೂರು, ಕೊಡಗು ಜಿಲ್ಲೆಯನ್ನೇ ಪ್ರತಿಧ್ವನಿಸಿದೆ. ಅತ್ಯಂತ ಪ್ರಾಮಾಣಿಕತೆಯಿಂದ ಹೆಣ್ಣು-ಗಂಡು ಎಂಬ ಭೇಧವಿಲ್ಲದೆ, ಸಮುದಾಯದವರನ್ನು ಸಂಘಟಿಸುವುದರ ಜೊತೆಗೆ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡಿದ್ದಾರೆ. ಇದು ಇಂದಿಗೂ ಮುಂದುವರೆದಿದೆ. ಬದುಕಿರುವವರೆಗೂ ತನ್ನ ಸಮುದಾಯಕ್ಕಾಗಿ ಹೋರಾಡುವ ಛಲ ಜೆ ಕೆ ತಿಮ್ಮರವರದು.

**ಇವರು ನಿರ್ವಹಿಸುತ್ತಿರುವ ಕೆಲವು ಜವಾಬ್ದಾರಿಗಳು.**

- ಬುಡಕಟ್ಟು ಕೃಷಿಕರ ಸಂಘದ ಸಕ್ರೀಯ ಕಾರ್ಯಕರ್ತರು.
- ರಾಷ್ಟ್ರೀಯ ಆದಿವಾಸಿ ಆಂದೋಲನದಲ್ಲಿ ಸಕ್ರೀಯ ಕಾರ್ಯಕರ್ತರು.
- ನಾಲ್ಕೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ಅರಣ್ಯ ಹಕ್ಕು ಅನುಷ್ಠಾನ ಸಮಿತಿ' ಯಲ್ಲಿ ಸದಸ್ಯರಾಗಿ ಸರ್ಕಾರದ ವತಿಯಿಂದ ನೇಮಕವಾಗಿರುತ್ತಾರೆ.
- ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ 'ಜಿಲ್ಲಾ ಎಸ್.ಸಿ., ಎಸ್.ಟಿ. ಹಿತರಕ್ಷಣಾ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
- ಕುಟ್ಟಾ ಗ್ರಾಮಾಂತರ ಆರಕ್ಷಕ ಠಾಣೆಯಲ್ಲಿ 'ನಾಗರೀಕ ಸಲಹಾ ಸಮಿತಿ' ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಪ್ರಮುಖ ಘಟನಾವಳಿಗಳು

- ೧೯೯೬ ರಲ್ಲಿ ಅರಣ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿದ ತಾಜ್ ಹೋಟೇಲ್ ನಿರ್ಮಾಣದ ವಿರುದ್ಧದ ಹೋರಾಟ.
- ೧೯೯೬-೯೭ ರಲ್ಲಿ 'ಆದಿವಾಸಿಗಳ ಅರಣ್ಯ ಹಕ್ಕು ಕಾಯಿದೆಯ ಜಾರಿಗಾಗಿ' ನಾಗರಹೊಳೆ ವಲಯ ಅರಣ್ಯ ಅಧಿಕಾರಿಗಳ ಕಛೇರಿ ಎದುರು ಅನಿರ್ದಿಷ್ಟ ತೊಂಭತ್ತು ದಿನಗಳ ಧರಣಿ ಸತ್ಯಾಗ್ರಹ.
- ೨೦೦೬ ರಲ್ಲಿ 'ಆದಿವಾಸಿಗಳ ಅರಣ್ಯ ಹಕ್ಕು ಕಾಯಿದೆಯ ಜಾರಿಗಾಗಿ' ಮತ್ತಿಗೋಡು ಆನೆ ಚೌಕೂರು ಗೇಟ್ ಬಳಿ ರಸ್ತೆ ತಡೆ ಚಳುವಳಿ.

ನಾಗರಹೊಳೆ ವ್ಯಾಪ್ತಿಯ ಎಲ್ಲಾ ಹಡಿಗಳನ್ನು ಕಾಡಿನಲ್ಲಿಯೇ ಉಳಿಸಬೇಕೆಂದು ಹಾಗೂ ಆದಿವಾಸಿಗಳನ್ನು ಒಕ್ಕಲೆಬ್ಬಿಸಬಾರದೆಂದು ಹೋರಾಟ ನಡೆಸಿದರ ಫಲವಾಗಿ ಇವರ ಮೇಲೆ ಅರಣ್ಯ ಇಲಾಖೆಯು ಸಾಕಷ್ಟು ಮೊಕದ್ದಮೆಗಳನ್ನು ದಾಖಲಿಸಿರುತ್ತಾರೆ. ಮುಖ್ಯವಾಗಿ ತಾಜ್ ಹೋಟೆಲ್ ವಿರುದ್ಧದ ಹೋರಾಟದ ಸಂದರ್ಭದಲ್ಲಿ, ೨೦೧೩ ರಲ್ಲಿ ಹಾಡಿಯಲ್ಲಿ ಗುಡಿಸಲು ನಿರ್ಮಾಣದ ಸಂದರ್ಭ, ಗೋಣಿಗದ್ದೆ ಹಾಡಿಯ ಸ್ಥಳಾಂತರದ ವಿರುದ್ಧ ಹೋರಾಟ ಮಡಿದ ಸಂದರ್ಭಗಳಲ್ಲಿ ಇವರ ಮೇಲೆ ಮೊಕದ್ದಮೆಗಳನ್ನು ದಾಖಲಿಸಿರುತ್ತಾರೆ. ಇದರಿಂದ ತಮ್ಮ ಹೋರಾಟದ ಜೊತೆ ಜೊತೆಗೆ ಕೋರ್ಟು ಕಛೇರಿಗಳನ್ನು ಅಲೆಯುವುದು ಅನಿವಾರ್ಯವಾಗಿದೆ.

**ಶ್ರೀಯುತ ರಾಮಕೃಷ್ಣ (೩೫ ವರ್ಷ) ನಾಣಚ್ಚಿಗದ್ದೆ ಹಾಡಿ, ವಿರಾಜಪೇಟೆ ತಾ॥, ಕೊಡಗು ಜಿಲ್ಲೆ.**



ಶ್ರೀಯುತ ರಾಮಕೃಷ್ಣ ರವರ ಮಾತಿನಂತೆ, ಸರ್ಕಾರದ ಕಟ್ಟು ನಿಟ್ಟಿನ ಕ್ರಮಗಳು, ಅರಣ್ಯ ಇಲಾಖೆಯ ನಿಯಮಗಳು, ಕಾಡಿನ ಒಳಗೆ ವಾಸವಿರುವಂತಹ ಹಾಡಿನ ಜನಗಳಿಗೆ ತುಂಬಾ ತೊಂದರೆ ಉಂಟು ಮಾಡುವಂತಿವೆ. ಹಾಡಿಗಳನ್ನು ಕಾಲ್ನಡಿಗೆಯಲ್ಲಿಯೇ ಸುತ್ತಿ ಅರಣ್ಯದೊಳಗಿರುವ ಎಲ್ಲಾ ಹಾಡಿಯವರಿಗೂ ಅರಣ್ಯ ಇಲಾಖೆಯ ಕೆಲವೊಂದು ಅಸಂಬದ್ಧ ನಿಯಮಗಳ ವಿರುದ್ಧ ಜಾಗೃತಿಯನ್ನು ಮೂಡಿಸುತ್ತೇನೆ. ಅರಣ್ಯ ಹಕ್ಕು ಕಾಯಿದೆಯಲ್ಲಿ ರೂಪಿಸಿರುವ ಕಾಡಿನೊಳಗೆ ಪ್ರವೇಶ, ಉತ್ಪನ್ನಗಳ ಸಂಗ್ರಹ ಲ್ಯಾಂಪ್ಸ್ ಸೊಸೈಟಿಗೆ ಮಾರಾಟ, ಹೀಗೆ ಇನ್ನು ಹಲವಾರು ಜೀವನೋಪಾಯದ ಮಾರ್ಗಗಳನ್ನು ಕಂಡು ಕೊಳ್ಳಲು ಸಮುದಾಯದವರಿಗೆ ಅರಿವು ಮೂಡಿಸುವ ಕೆಲಸ ಮಾಡುತ್ತೇನೆ ಎನ್ನುತ್ತಾರೆ.

ಬಿದಿರಿನ ಬಳಕೆಯಿಂದ ಜಲ್ಲಿ ತಯಾರಿಕೆ, ಅಡ್ಡ ದೊಣ್ಣೆ, ಅಡ್ಡ ಕತ್ತರಿ, ಗರಗಸ, ಉರುಣೆ, ಪೂಣೆ, ಪಿಕಾಸಿ, ನೇಗಿಲು, ಗುದ್ದಲಿಗಳನ್ನು ತಯಾರಿಸಿಕೊಂಡು, ಕಾಡಿನಲ್ಲಿ ತಾವುಗಳು ನೆಲೆಸಿರುವ ಹಾಡಿಯಿಂದ ಓಡಿದು ತಮಗೆ ಅವಶ್ಯಕತೆ ಇರುವೆಡೆ ಹೋಗಿ ಬರಲು ಕಾಡಂಚಿನವರೆಗೂ ಕಾಲು ದಾರಿಯನ್ನು ನಿರ್ಮಿಸಲು ಆಯಾ ಹಾಡಿನ ಜನರ ಮನ ಒಲಿಸಿ ದಾರಿಗಳನ್ನು ಮಾಡಿಕೊಳ್ಳಲು ಸಹಕಾರಿಯಾಗಿರುತ್ತಾರೆ.

ಸಮುದಾಯದವರನ್ನು ಸಂಘಟಿಸಿ ಅವರೇ ರಚಿಸಿದ ಆದಿವಾಸಿಗಳ ಹಾಡುಗಳನ್ನು ಹಾಡುವುದು. ಕೋಲಾಟ, ನೃತ್ಯ, ಕುಣಿತವಾದ್ಯ ನುಡಿಸುವುದು, ಅಂಜಲೆ ನುಡಿಸುವುದು, ಬಿದಿರಿನಿಂದ ಸಂಗೀತವಾದ್ಯ ಪರಿಕರಗಳನ್ನು ತಯಾರಿಸುವುದು ಮುಂತಾದ ಕೆಲಸದಲ್ಲಿ ನಿರತರಾಗಿರುತ್ತಾರೆ.

ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹಾಡಿಯ ಜನರಿಗೆ ತಿಳಿಸುವ ಕೆಲಸವನ್ನು ಇವರು ಮಾಡುತ್ತಾರೆ. ಸರ್ಕಾರ ನೀಡುವ ಸವಲತ್ತುಗಳನ್ನು ಪಡೆಯಲು ಜನರಿಗೆ ಹುರಿದುಂಬಿಸುವ ಜೊತೆಗೆ ಜೀವನೋಪಾಯಕ್ಕೆ ಸರ್ಕಾರದ ಸಹಾಯ ಪಡೆದು ತಮ್ಮ ಪಾರಂಪರಿಕ ಕುಲಕುಸುಬುಗಳಾದ ಜೇನು ಸಂಗ್ರಹ, ಬೇಟೆಯನ್ನು, ಉಳಿಸಿಕೊಳ್ಳುವಂತೆ ಎಲ್ಲರಿಗೂ ತಿಳಿಸುತ್ತಾರೆ. ಆಯಾ ಋತುಮಾನದಲ್ಲಿ ಜೇನು ಸಂಗ್ರಹಕ್ಕೆ ಜನರನ್ನು ಒಗ್ಗೂಡಿಸಿ ಎಲ್ಲರೂ ಸೇರಿ ಜೇನು ಸಂಗ್ರಹಿಸುವ ಕೆಲಸ ನಿರ್ವಹಿಸುತ್ತಾರೆ.

ಜನರನ್ನು ಸಂಘಟಿಸಿ ಕಾಡಿನೊಳಗೆ ಹಸು, ಆಡು, ಕುರಿ ಸಾಕಣೆ, ಮನೆಕಟ್ಟಲು ಮಣ್ಣು, ಬಿದಿರಿನ ತಡಿಕೆ, ಕಲ್ಲುಗಳು, ಹುಲ್ಲು ಬಿದಿರುಗಳನ್ನು, ಕಾಡಿನಿಂದಲೇ ಸಂಗ್ರಹಿಸಿ ಮನೆಗಳನ್ನು ನಿರ್ಮಿಸಬೇಕೆಂದು ಪ್ರೇರೇಪಿಸುತ್ತಾರೆ.

ಇವರುಗಳ ಹೋರಾಟದ ಫಲವಾಗಿ ಅರಣ್ಯ ಇಲ್ಲಾಖೆಯ ಅನುಮತಿ ಪಡೆದು ಕಾಡಿನಲ್ಲಿ ದೊರೆಯುವ ನೆಲ್ಲಿ, ಹುಣಸೆ, ಪಾಚಿ, ಹೂವು, ಚಕ್ಕೆ, ಬಿದಿರು, ಕಳಲೆ, ಅಣಬೆ, ನಾರು, ಬೇರು, ಸೊಪ್ಪು, ಗೆಣಸು, ಒಣಸೌದೆ, ಮತ್ತಿಮರದ ನೀರು ಮುಂತಾದವುಗಳನ್ನು ಸಂಗ್ರಹಿಸಿ ಬಳಸುವ ಅವಕಾಶ ದೊರೆತಿದೆ. ಕಾಡಿನಲ್ಲಿಯೇ ಗಿಡ ಬೆಳಸುವ ಕಾರ್ಯ ಬದು ಹಾಕುವುದು, ನೀರುಗುಂಡಿ ನಿರ್ಮಾಣ, ಕೆಲಸವನ್ನು ಸಂಘಟನೆಯ ಜನರೊಂದಿಗೆ ಸೇರಿ ನಿರ್ವಹಿಸುತ್ತಾರೆ.

ಈ ರೀತಿಯಾಗಿ ರಾಮಕೃಷ್ಣರವರು ಜೇನುಕುರುಬರ ಪಾರಂಪರಿಕ ಜ್ಞಾನದ ಉಳಿವಿಗೆ, ಸದಾ ಹಸನ್ಮುಖಿಯಾಗಿ ಭಾಗವಹಿಸಿ, ಸಮುದಾಯದ ಜನರನ್ನು ಮೂಲ ಸಂಸ್ಕೃತಿ ಉಳಿಸಿ ಬೆಳೆಸಿರೆಂದು ತಿಳಿಸುತ್ತಾರೆ ಇದರಿಂದ ಅನೇಕ ಜನರು ತಮ್ಮ ಹಕ್ಕುಗಳನ್ನು ಕೇಳಿ ಪಡೆಯುವಷ್ಟು ಧೈರ್ಯವನ್ನು ಬೆಳೆಸಿ ಕೊಂಡಿದ್ದಾರೆ.

**ಶ್ರೀಯುತ ಗೋಪಾಲ ನಾಣಚ್ಚಿಗದ್ದೆ ಹಾಡಿ, ವೀರರಾಜಪೇಟೆ ತಾ॥, ಕೊಡಗು ಜಿಲ್ಲೆ.**

ನಮ್ಮ ಹೋರಾಟದಿಂದ ಕಾಡಿನ ದೇವಸ್ಥಾನಗಳು, ಸ್ಮಶಾನಗಳು, ಕೆರೆಕಟ್ಟೆಗಳು, ಪ್ರತಿಮೆ, ಮರಗಳು, ಹಳ್ಳಗಳು, ಕಾಲುದಾರಿಗಳು, ವಾಸ ಮಾಡಿದ, ಕೃಷಿ ಬೇಸಾಯ ಮಾಡಿದ ಜಾಗಗಳು, ಮರಗಿಡಗಳು, ವೀರಗಲ್ಲುಗಳು, ಗುರುತುಗಳು, ಹಾಡಿಯ ಯಜಮಾನಿಕೆ, ಹಾಡಿಯ ಹಿರಿಯರ ಹೇಳಿಕೆ, ಕಾಡಿನ ಪ್ರವೇಶ ಇತ್ಯಾದಿಯನ್ನು ನಮ್ಮ ಹೋರಾಟದಿಂದಲೇ ಪಡೆದಿದ್ದೇವೆ. ಶಾಲೆ, ಔಷಧಾಲಯ, ಗಿಡಮೂಲಿಕೆ, ಅಂಗನವಾಡಿ, ನ್ಯಾಯಬೆಲೆ ಅಂಗಡಿ, ವಿದ್ಯುತ್, ದೂರವಾಣಿ ಸಂಪರ್ಕಗಳು, ಕೆರೆ ಕಟ್ಟೆಗಳ ನಿರ್ಮಾಣ, ಕುಡಿಯುವ ನೀರು ಸರಬರಾಜು, ನೀರಿನ ಕೊಳವೆ ಮಾರ್ಗ, ಮಳೆ ನೀರು ಕೊಯ್ಲು, ನಿರ್ಮಿತಿಗಳು, ಸಣ್ಣ ನೀರಾವರಿ ಕಾಲುವೆಗಳು, ಸಾಂಪ್ರದಾಯಿಕ ಇಂಧನ ಮೂಲ, ಕೌಶಲ್ಯ ವರ್ಧನೆ, ಮತ್ತು ವೃತ್ತಿ ತರಬೇತಿ ಕೇಂದ್ರಗಳು, ರಸ್ತೆ ನಿರ್ಮಾಣ, ಸಮುದಾಯ ಕೇಂದ್ರಗಳು, ಸಭೆಗೆ ಪ್ರತ್ಯೇಕ ಕೊಠಡಿ, ವಾಸದ ಕಾಡಿನಲ್ಲಿರುವ ನಮ್ಮ ಹಾಡಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಬೇಕೆಂಬ ಬೇಡಿಕೆಯನ್ನು ಹೋರಾಡಿ ಪಡೆಯಲು ಪ್ರಯತ್ನಿಸುತ್ತಿದ್ದೇವೆ. ಇನ್ನೂ ಸಾಕಾರವಾಗಿಲ್ಲ. ಅರಣ್ಯ ಇಲಾಖೆಯವರ ಕಿರುಕುಳ, ಸಮಾಜದ ದಬ್ಬಾಳಿಕೆಯಿಂದ ನಮಗೆ ಹೆಚ್ಚಾಗಿ ತೊಂದರೆಯಾಗಿದೆ. ಇದಕ್ಕೆ ಸಂಘಟಿತರಾಗಿ ಹೋರಾಡುತ್ತಿದ್ದೇವೆ ಎಂದು ಹೇಳುತ್ತಾರೆ.

**ಶ್ರೀಯುತ ಜೆ ಪಿ ರಾಜು ಮಾವಿನಹಳ್ಳ ಹಾಡಿ, ಸೋಮವಾರ ಪೇಟೆ ತಾ॥, ಕೊಡಗು ಜಿಲ್ಲೆ.**

ಶ್ರೀಯುತ ಜೆ ಪಿ ರಾಜುರವರು ಸಂಘಟನೆ ಮತ್ತು ಸಮುದಾಯದ ಕುರಿತು ತಮ್ಮ ಅನಿಸಿಕೆಗಳನ್ನು ಈ ರೀತಿ ಹಂಚಿಕೊಂಡರು. ನಮ್ಮ ಕುಟುಂಬದ ಮೂಲ ಕಸುಬು ಕೃಷಿ ಹಾಗೆಯೇ ಕಾಡುಗಳಲ್ಲಿಯ ಜೇನು ಸಂಗ್ರಹ, ಮೊದಲಾದವುಗಳಿಂದ ನಮ್ಮ ಕುಟುಂಬದ ಜೀವನ ನಿರ್ವಹಣೆ ಸಾಧ್ಯವಾಗಿದೆ. ಒಮ್ಮೆ ನಾನು ಎರಡನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದಾಗ ಓರ್ವ ಭೂ ಮಾಲೀಕ ನಮ್ಮ ತಂದೆಯವರು ರಾತ್ರಿ ನಿದ್ರೆಯಲ್ಲಿದ್ದಾಗ ವಿನಾಕಾರಣ ಅಮಾನೀಯವಾಗಿ ಹಲ್ಲೆ ನಡೆಸಿದ್ದರು. ಆದ ಹಲ್ಲೆಯನ್ನು, ನೋವನ್ನು ನಾವು ಪ್ರತಿಭಟಿಸುವ ಧೈರ್ಯ ಇರಲಿಲ್ಲ. ಈ ಘಟನೆ ನನ್ನ ಮನಸಿನಲ್ಲಿ ವಾಸಿಯಾಗದ ಗಾಯವಾಗಿಯೇ ಉಳಿದಿದೆ. ಇದೇ ನಮ್ಮ ಸಮುದಾಯದ ಪರವಾಗಿ ಸಾಮಾಜಿಕ ನಾಯಕರಾಗಿ ನಿರಂತರವಾಗಿ ದುಡಿಯುವುದಕ್ಕೆ ಪ್ರೇರಣೆಯಾಗಿದೆ ಎನ್ನುತ್ತಾರೆ.



ಜೆ ಪಿ ರಾಜುರವರು ೧೯೬೨ನೇ ಇಸವಿಯಲ್ಲಿ ಸೋಮವಾರಪೇಟೆ ತಾಲೂಕಿನ ಆಲೂರು ಸಿದ್ದಾಪುರ ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆದು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅಲ್ಲಿಯೇ ಮುಗಿಸಿ ನಂತರ ತಮ್ಮ ತಂದೆಯುವರ ಹಾಡಿ ಮಾಪಿನಹಳ್ಳಕ್ಕೆ ಮರಳಿ ಬಂದು ನೆಲೆನಿಂತು ಸ್ಥಳೀಯ ಭೂ ಮಾಲೀಕರ ಗದ್ದೆ ಕೆಲಸ, ತೋಟ ಕೆಲಸ (ಕೂಲಿ) ಮಾಡುತ್ತಾ, ಮಾಪಿನ ಹಳ್ಳದ ಅರಣ್ಯದಲ್ಲಿ ಸ್ವಂತ ಮನೆ ನಿರ್ಮಿಸಿದರು.

**ನಿರ್ವಹಿಸಿದ ಜವಾಬ್ದಾರಿಗಳು**

೨೦೦೫- ೨೦೦೬ ಶತಮಾನಗಳಿಂದ ಭೂಮಿಯ ಹಕ್ಕಿನಿಂದ ವಂಚಿತರಾದ ಆದಿವಾಸಿ ಸಮುದಾಯಕ್ಕೆ ಭೂಮಿಯ ಹಕ್ಕನ್ನು ಕೊಡಿಸಲು "ಬುಡಕಟ್ಟು ಅರಣ್ಯ ಹಕ್ಕು ಕಾಯಿದೆ" ಯ ಜಾರಿಗಾಗಿ ಪ್ರತಿಭಟಸಲು ಕೊಡಗು, ಚಿಕ್ಕಮಗಳೂರು, ಹೆಚ್ ಡಿ ಕೋಟೆ ಹಾಗೂ ರಾಜ್ಯದ ವಿವಿದ ಭಾಗಗಳಿಂದ ಸುಮಾರು ೩೦೦ ಜನರನ್ನು ಟಿಕೇಟ್ ರಹಿತವಾಗಿ ದೆಹಲಿಗೆ ಕರೆದೊಯ್ದುರು. ಅವರು ನಿರ್ವಹಿಸಿದ ಜವಬ್ಧಾರಿಗಳೆಂದರೆ,

- ಅಧ್ಯಕ್ಷರು, ಬುಡಕಟ್ಟು ಕೃಷಿಕರ ಸಂಘ, ಸೋಮವಾರಪೇಟೆ ತಾಲೂಕು. ೧೯೮೬.
- ಅಧ್ಯಕ್ಷರು, ಕೊಡಗು ಜಿಲ್ಲಾ ಬುಡಕಟ್ಟು ಕೃಷಿಕರ ಸಂಘ. ೧೯೮೮.
- ನಿರ್ದೇಶಕರು, ವ್ಯ. ಸೇ. ಸಹಕಾರ ಸಂಘ, ನಿಯಮಿತ. ನಂಜರಾಯಪಟ್ಟಣ. ೧೯೯೦.
- ಅಧ್ಯಕ್ಷರು, ದಕ್ಷಿಣ ಭಾರತ ಆದಿವಾಸಿ ವೇದಿಕೆ. ೧೯೯೩ – ೧೯೯೬.
- ಸದಸ್ಯರು, ಭೂ ಸುಧಾರಣಾ ಸಮಿತಿ, ಸೋಮವಾರಪೇಟೆ ತಾಲೂಕು. ೧೯೯೭.
- ಅಧ್ಯಕ್ಷರು, ಕರ್ನಾಟಕ ರಾಜ್ಯ ಮೂಲನಿವಾಸಿ ವೇದಿಕೆ. ೧೯೯೮ – ೨೦೦೧.
- ಉಪಾಧ್ಯಕ್ಷರು, ಲ್ಯಾಂಪ್ಸ್ ಸಹಕಾರ ಸಂಘ, ಬಸವನಹಳ್ಳಿ. ೧೯೯೭
- ಸದಸ್ಯರು, ಕೊಡಗು ಜಿಲ್ಲಾ ಪ.ಜಾ ಮತ್ತು ಪ. ಪಂ. ದೌರ್ಜನ್ಯ ಸಮಿತಿ. ೧೯೯೮.
- ವಿರಾಜಪೇಟೆ ತಾಲೂಕು ಮೀಸಲು ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧೆ ೧೯೯೬
- ಅಧ್ಯಕ್ಷರು, ಲ್ಯಾಂಪ್ಸ್ ಸಹಕಾರ ಸಂಘ, ಬಸವನಹಳ್ಳಿ, ಕೊಡಗು ಜಿಲ್ಲೆ. ೧೯೯೬ – ೨೦೦೩
- ಸದಸ್ಯರು, ಕೊಡಗು ಜಿಲ್ಲಾ ಸಾಕ್ಷರ ಕಾವೇರಿ ಸಮಿತಿ. ೨೦೦೧
- ಅಧ್ಯಕ್ಷರು, ಶಾಲಾ ಅಭಿವೃದ್ಧಿ ಸಮಿತಿ, ರಂಗಸಮುದ್ರ. ೨೦೦೨ – ೨೦೦೩
- ನಿರ್ದೇಶಕರು, ಕರ್ನಾಟಕ ರಾಜ್ಯ ಲ್ಯಾಂಪ್ಸ್ ಮಹಾ ಮಂಡಳಿ, ಮೈಸೂರು. ೨೦೦೨ – ೨೦೦೩
- ಸದಸ್ಯರು, ಲಯನ್ಸ್ ಕ್ಲಬ್, ಕುಶಾಲನಗರ. ೨೦೦೧

- ನಿರ್ದೇಶಕರು, ವ್ಯ. ಸೇ. ಸಹಕಾರ ಸಂಘ, ನಂಜರಾಯ ಪಟ್ಟಣ. ೨೦೦೩
- ರಾಷ್ಟ್ರಾಧ್ಯಕ್ಷರು, ನ್ಯಾಷನಲ್ ಆದಿವಾಸಿ ಆಂದೋಲನ. ೨೦೦೫
- ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದು. ೨೦೦೬
- ಅಧ್ಯಕ್ಷರು ಲ್ಯಾಂಪ್ಸ್ ಸಹಕಾರ ಸಂಘ, ಬಸವನಹಳ್ಳಿ. ೨೦೦೯

**ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವಿಕೆ**

- ೧೯೯೭ ರಲ್ಲಿ ಬುಡಕಟ್ಟು ಜನರ ಪ್ರತಿನಿಧಿಯಾಗಿ **ಜಿನೀವಾದಲ್ಲಿ** ನಡೆದ ವಿಶ್ವ ಸಂಸ್ಥೆಯ ಆದಿವಾಸಿ ಜನರ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಭಾಗವಹಿಸಿದರು.
- ೨೦೦೦ನೇ ಇಸವಿಯಲ್ಲಿ ಬುಡಕಟ್ಟು ಜನರ ಪ್ರತಿನಿಧಿಯಾಗಿ **ವಾಷಿಂಗ್ಟನ್**‌ನಲ್ಲಿ ನಡೆದ ಆದಿವಾಸಿ ಜನರ ಕುರಿತು ವಿಶ್ವ ಬ್ಯಾಂಕಿನ ಅಧಿನಿಯಮಗಳ ಸಮಾಲೋಚನೆಯಲ್ಲಿ ಭಾಗವಹಿಸಿದ್ದರು.
- ೨೦೦೯ನೇ ಇಸವಿಯಲ್ಲಿ ಹವಾಮಾನ ಬದಲಾವಣೆ ಬಗ್ಗೆ **ಕೋಪನ್ ಹೇಗನ್**‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಸಮಾಲೋಚನೆಯಲ್ಲಿ ಭಾಗವಹಿಸಿದ್ದು ಮತ್ತು ಸಿಮೆಂಪು ಫೌಂಡೇಷನ್‌ನ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಕೊಡಗಿನಲ್ಲಿ ಬುಡಕಟ್ಟು ಜನರ ಸಂಘಟನೆಗೆ ಮತ್ತು ಅಭಿವೃದ್ಧಿಗೆ ಜನ್ಮ ತಾಳಿರುವ ೧೯೮೪ ರಲ್ಲಿ ಬುಡಕಟ್ಟು ಕೃಷಿಕರ ಸಂಘದ ಮುಂದಾಳುಗಳಾಗಿ ಸಂಘಟನೆಯ ನೀತಿಗಳನ್ನು ತಿಳಿದು, ವಿಚಾರ ಶಕ್ತಿಯನ್ನು ಬೆಳೆಸಿ ಮುಂದಾಳುಗಳ ತರಬೇತಿ ಪಡೆದು, ಆತ್ಮವಿಶ್ವಾಸ, ಸ್ವಾವಲಂಬನೆ, ಸಂಪರ್ಕ, ವ್ಯವಹಾರ, ಜಾಗೃತಿ, ಮೂಡಿ ಸಮಸ್ಯೆಗಳ ನಿವಾರಣೆಗೆ ಸತತ ಹೋರಾಟವನ್ನು ಮಾಡಿರುತ್ತಾರೆ.

ಆದಿವಾಸಿ ಸಂಘಟನೆಗಳಾದ ಆದಿವಾಸಿ ದಕ್ಷಿಣ ಭಾರತ ವೇದಿಕೆ, ರಾಜ್ಯ ಮೂಲ ನಿವಾಸಿ ವೇದಿಕೆ ಇವುಗಳಲ್ಲಿ ಕೂಡ ಸದಸ್ಯತ್ವವನ್ನು ಪಡೆದು ಸೇವೆ ಸಲ್ಲಿಸುತ್ತಿದ್ದಾರೆ. ಇದೀಗ ನ್ಯಾಷನಲ್ ಆದಿವಾಸಿ ಆಂದೋಲನ ರಾಷ್ಟ್ರಾಧ್ಯಕ್ಷರಾಗಿ, ಜನಸಂಘಟನೆಯ ಮುಂಚೂಣಿಯಲ್ಲಿದ್ದು, ಆದಿವಾಸಿ ಜನರಿಗೆ ಉತ್ಸಾಹವನ್ನು ತುಂಬಿ, ಬೆಂಬಲ ನೀಡುವುದರೊಂದಿಗೆ ಬುಡಕಟ್ಟು ಕೃಷಿಕರ ಸಂಘವು ಮತ್ತಷ್ಟು ಯಶಸ್ಸಿನ ಮೆಟ್ಟಿಲುಗಳನ್ನು ಏರುವಲ್ಲಿ ತಮ್ಮ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇವರು ಜಿಲ್ಲೆಯಾದ್ಯಂತ **'ಚೇಪಿ'** ಎಂದೇ ಹೆಸರುವಾಸಿಯಾಗಿದ್ದಾರೆ.

ಇವರು ಇಲ್ಲಿಯವರೆಗೆ ಜೀವನದಲ್ಲಿ ಅನುಭವಿಸಿದ ಕಷ್ಟ ಸಂಕಷ್ಟಗಳು, ನ್ಯಾಯಕ್ಕೋಸ್ಕರ, ಪ್ರಕೃತಿಯ ಉಳಿವಿಗೋಸ್ಕರ, ಗಿರಿಜನ ಸಮುದಾಯ ಅವರ ಬದುಕಿನ ಹಕ್ಕನ್ನು ಪಡೆಯುವ ನಿಟ್ಟಿನಲ್ಲಿ

ಮಾಡಿರುವಂತಹ ಎಲ್ಲ ಸೇವೆಯನ್ನು ಪರಿಗಣಿಸಿ ಇಂತಹವರನ್ನು ಗೌರವಿಸುವುದರ ಮುಖಾಂತರ ಬೇರೆ ಯುವಕರು ಹಾಗೂ ಇತರರಿಗೆ ಸ್ಫೂರ್ತಿ ಸಿಗುವಂತಾಗಬೇಕಾಗಿದೆ.

**ಶ್ರೀಯುತ ಕುಮಾರ ಎಂ ಟಿ, ಮರಳುಕಟ್ಟೆ ಹಾಡಿ, ಪಿರಿಯಾಪಟ್ಟಣ ತಾ॥, ಮೈಸೂರು ಜಿಲ್ಲೆ.**

ಶ್ರೀಯುತ ಎಂ ಟಿ ಕುಮಾರ್ ರವರು ಜೇನುಕುರುಬ ಸಮಾಜವನ್ನು ಸಂಘಟಿಸುವುದರ ಜೊತೆಗೆ ರಾಜ್ಯದ ಎಲ್ಲಾ ಆದಿವಾಸಿಗಳ ಮುಖಂಡರ ಜೊತೆ ಒಡನಾಟವನ್ನು ಹೊಂದಿರುತ್ತಾರೆ. ಅರಣ್ಯ ಇಲಾಖೆಯ ಸತತ ವಿರೋಧದ ನಡುವೆಯೇ ತಮ್ಮ ಪೂರ್ವಿಕರು ವಾಸವಿದ್ದ ಜಾಗದಲ್ಲಿಯೇ ಇಂದಿಗೂ ನೆಲೆಗೊಂಡಿದ್ದಾರೆ. ಅರಣ್ಯ ಹಕ್ಕು ಕಾಯಿದೆಯ ಸಮರ್ಪಕ ಅನುಷ್ಠಾನಕ್ಕಾಗಿ ಇವರು ಸಾಕಷ್ಟು ಹೋರಾಟ, ಪ್ರತಿಭಟನೆಯನ್ನು ದಾಖಲಿಸಿದ್ದಾರೆ. ಜೇನುಕುರುಬರಿಗೆ ದೊರೆಯುತ್ತಿರುವ ಆರು ತಿಂಗಳ ಪೌಷ್ಟಿಕ ಆಹಾರ ವಿತರಣಾ ಯೋಜನೆಗಾಗಿ ಇವರು ಸರ್ಕಾರದೊಂದಿಗೆ ಮೇಲಿಂದ ಮೇಲೆ ಪತ್ರ ವ್ಯವಹಾರವನ್ನು ಮಾಡಿ ಯೋಜನೆಯನ್ನು ಸಮುದಾಯಕ್ಕೆ ತಲುಪಿಸುವಲ್ಲಿ ಸಫಲರಾಗಿದ್ದಾರೆ. ಪ್ರಸ್ತುತ ಇವರು ನಿರ್ವಹಿಸುತ್ತಿರುವ ಜವಾಬ್ದಾರಿಗಳು



- ೨೦೧೩ ರಿಂದ ಆದಿವಾಸಿ ರಕ್ಷಣಾ ಪರಿಷತ್ ನಲ್ಲಿ ರಾಜ್ಯ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ೨೦೧೧ ರಿಂದ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆದಿಮ ಬುಡಕಟ್ಟು ಮೇಲುಸ್ತುವಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ೨೦೧೫ ರಿಂದ ಮಾನ್ಯ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯ ಅರಣ್ಯ ಹಕ್ಕು ಅನುಷ್ಠಾನ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ೨೦೧೪ – ೨೦೧೫ ರಲ್ಲಿ ಹುಣಸೂರು, ಪಿರಿಯಾಪಟ್ಟಣ ತಾಲೂಕು ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘ. (ಲ್ಯಾಂಪ್ಸ್) ಇದರ ಅಧ್ಯಕ್ಷರಾಗಿ ಹಾಗೂ ಹಾಲೀ ನಿದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಎಂ ಟಿ ಕುಮಾರ್ ರವರು ಪ್ರತಿಷ್ಠಿತ ಮೈಸೂರು ದಸರಾ ಸಂದರ್ಭದ ಆಹಾರ ಮೇಳದಲ್ಲಿ 'ಬೊಂಬು ಬಿರಿಯಾನಿ' ಯನ್ನು ತಯಾರಿಸಿ ಜೇನುಕುರುಬರ ಆಹಾರ ಪದ್ಧತಿಯನ್ನು ಪ್ರಚಾರ ಪಡಿಸಿರುತ್ತಾರೆ.

## ೩. ೧೫. ೧. ಜೇನುಕುರುಬ ಸಂಘಟನೆಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳು

ಬುಡಕಟ್ಟು ಕೃಷಿಕರ ಸಂಘ

ಯರವ ಒಕ್ಕೂಟ (ಜೇನು ಕುರುಬರೂ ಸೇರಿ)

ಕವನ

ಧರ್ಮಸ್ಥಳ ಸಂಘ

ಸಂಸ್ಥೆಗಳು

ಲಿಫ್ಟ್

ಡೀಡ್ಸ್ ಇತ್ಯಾದಿ

CORD ಎಂಬ ಸ್ವಯಂ ಸೇವಾ ಸಂಸ್ಥೆ ಕುಶಾಲನಗರದಲ್ಲಿದೆ. DEED ಸಂಸ್ಥೆ ಹೆಚ್ ಡಿ ಕೋಟೆ ಯಲ್ಲಿದೆ. ಈ ಸಂಸ್ಥೆಗಳು ಇವರಿಗೆ ಇವರ ಹಕ್ಕುಗಳ ಬಗ್ಗೆ, ನೆಲದ ಸಂಪತ್ತಿನ ಬಗ್ಗೆ, ಅವುಗಳ ಬಳಕೆಯ ಬಗ್ಗೆ ಅರಿವು ಮೂಡಿಸುತ್ತಿವೆ. ಇವರು ವಿದ್ಯಾವಂತರಾಗಬೇಕು, ಸಮಾಜ ಮುಖಿಯಾಗಿರಬೇಕು, ಕಾನೂನುಗಳ ಬಗ್ಗೆ ತಿಳುವಳಿಕೆಯನ್ನು ಹೊಂದಿರಬೇಕು, ಸಮುದಾಯದವರೆಲ್ಲಾ ಸಂಘಟಿತರಾಗಬೇಕು, ಸಂಸ್ಕೃತಿ ಉಡುಗೆ ತೊಡುಗೆಯನ್ನು ಉಳಿಸಬೇಕು, ಮೂಲೆ ಗುಂಪಾಗಬಾರದು ಎಂದು ತಿಳುವಳಿಕೆಯನ್ನು ನೀಡುತ್ತಿದ್ದಾರೆ. ಹಾಡುಗಳ ಮೂಲಕ, ಅಭಿನಯದ ಮೂಲಕ, ನೃತ್ಯದ ಮೂಲಕ ಇವರ ಸಂಸ್ಕೃತಿಯ ಮೌಲ್ಯವನ್ನು ಇತರರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದವು. (ಮಾ : ಗುಲಾಬಿ, ಮಜ್ಜಿಗೆ ಹಳ್ಳ ಹಾಡಿ. ಜಯಮ್ಮ, ನಾಗಪುರ ಹಾಡಿ)

## ೩. ೧೫. ೨. ಸಂಘಟನಾ ಸಮಸ್ಯೆಗಳು

ಜೇನು ಕುರುಬರು ಸಂಘ ಜೀವಿಗಳು. ಅವರ ಪಾರಂಪಾರಿಕ ಜೀವನ ಶೈಲಿ ಅವರನ್ನು ಒಂದು ಗೂಡಿಸುತ್ತಿತ್ತು. (ಆಹಾರನ್ವೇಷಣೆ, ಬೆಂಕಿ ಕಾಯಿಸುವುದು, ಗೆಣಸು ಬೇಯಿಸುವುದು, ಹಂಚಿ ತಿನ್ನುವುದು ಇತ್ಯಾದಿ) ಆದರೆ ಪುನರ್ವಸತೀಕರಣದಿಂದ ಬೇರೆ ಬೇರೆ ನೆಲೆಗಳಿಗೆ ಹರಿದುಹಂಚಿ ಹೋಗಿದ್ದಾರೆ. ಪಾರಂಪರಿಕ ನೆಲೆಗಾಗಿ ಹೋರಾಡಲು ಸಂಘಟಿತರಾಗಲು ಸಾಧ್ಯವಾಗುತ್ತಿಲ್ಲ.

- ಪಾರಂಪರಿಕ ಜ್ಞಾನದ ಮಹತ್ವವನ್ನು ಉಳಿಸಿ ಬೆಳೆಸಲು ಸಂಘಟಿತರಾಗಬೇಕಾಗಿದೆ. ಪಾರಂಪರಿಕ ನಾಯಕರಿಗೆ ಇಂದು ಮಹತ್ವವಿಲ್ಲದೆ ಆಧುನಿಕ ರಾಜಕೀಯ ಪಕ್ಷದಿಂದ ಗೆಲುವು ಸಾಧಿಸಿದವರಿಗೆ ಮಾಹಿತಿಯ ಕೊರತೆ, ಸಾಮರ್ಥ್ಯದ ಕೊರತೆಯಿಂದ ಸಮಸ್ಯೆಯಲ್ಲಿಯೇ ನರಳುವಂತಾಗಿದೆ.

* ಸರ್ಕಾರ ಮತ್ತು ಸಮುದಾಯದ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸಬೇಕಾಗಿರುವ ಸಂಘಟನೆಗಳು ಸ್ವಯಂಪ್ರೇರಿತರಾಗಿ ಸಮುದಾಯೇತರ ನಾಯಕತ್ವದಿಂದಾಗಿ ಸರ್ಕಾರದ ಬಾಬಿದೆಗಳ ಅನುಷ್ಠಾನದಲ್ಲಿ ತೊಡಕಾಗುತ್ತಿದೆ. ಇದರಿಂದ ಪಾರಂಪರಿಕ ಜ್ಞಾನ ಉಳಿಸಿಕೊಳ್ಳಲು ಕಷ್ಟವಾಗುತ್ತಿದೆ.
* ಪಾರಂಪರಿಕ ಜ್ಞಾನವನ್ನು ಉಳಿಸಿಕೊಳ್ಳಲು ಸಮುದಾಯದ ಹಿರಿಯರ ಒಡನಾಟ ಯುವ ಪೀಳಿಗೆಗೆ ಇಲ್ಲದಿರುವುದು ಅಥವಾ ಕಡಿಮೆಯಾಗಿರುವುದು ಅವುಗಳ ಮಹತ್ವದ ಅರಿವೇ ಇಲ್ಲದಿರುವುದು ಕೂಡ ಸಮಸ್ಯೆಯಾಗಿ ಪರಿಣಮಿಸಿದೆ.

### ೩. ೧೬. ಸಾಮಾಜಿಕ ಸಮಸ್ಯೆಗಳು

ಜೇನುಕುರುಬರು ಕಾಡಿನ ಒಳಗೆ ಜೀವಿಸುತ್ತಿದ್ದ ಕಾಲದಲ್ಲಿ ಅವರದೇ ಆದ ಸಾಮಾಜಿಕ ನಿಯಮಗಳನ್ನು ರೂಪಿಸಿಕೊಂಡು ಜೇನುಕುರುಬರ ಹಿರಿಯ ಮುಖಂಡರುಗಳು, ನಾಯಕರು, ಹಾಡಿಯ ಯಜಮಾನ, ತಮ್ಮಡಿ, 'ಮೇಟಿ' ಮುಂತಾದವರ ಮಾರ್ಗದರ್ಶನದಲ್ಲಿ ಜೀವನ ನಿರ್ವಹಣೆ ಮಾಡುತ್ತಾ ಎಂತಹ ಸಮಸ್ಯೆಗಳು ಉದ್ಭವಿಸಿದರೂ ಹಾಡಿಯ ಯಜಮಾನ ಪಂಚಾಯ್ತಿ ಸೇರಿಸಿ ಸಮಸ್ಯೆಗೆ ಪರಿಹಾರ ಸೂಚಿಸುತ್ತಿದ್ದುದ್ದನ್ನು ಎಲ್ಲರೂ ಪಾಲಿಸುತ್ತಾ ಉದ್ಭವಿಸಿದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಿದ್ದರು.

ದೈವಗಳ ಕೆಲಸ ಕಾರ್ಯಪೂಜೆ, ಕುಲದೇವರುಗಳು ಕುತ್ತಿ ಮನೆತನದ ಕರ್ತವ್ಯಗಳ ಜವಬ್ದಾರಿಯನ್ನು ನಿರ್ವಹಿಸುವಂತೆ ತಮ್ಮಡಿಯು ಮಾರ್ಗದರ್ಶನ ನೀಡುತ್ತಿದ್ದರು. ಅದರಂತೆ ದೈವದ ಬಗೆಗಿನ ಕೆಲಸಗಳು ಸುಸೂತ್ರವಾಗಿ ಜರುಗುತ್ತಿದ್ದವು.

ಮನೆಯ ಯಜಮಾನನಾದ 'ಮೇಟಿ' ಯಾದವನು ಕುಟುಂಬದ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದನು. ಆದರೆ ಬದಲಾದ ಸನ್ನಿವೇಶದಲ್ಲಿ ಇಂದು ಹಾಡಿಯ ಪರಿಕಲ್ಪನೆಯೇ ಭಾಗಶಃ ದೂರವಾಗುತ್ತಿದೆ. ಏಕೆಂದರೆ ಕಾಡಿನಿಂದ ಹೊರಗೆ ಬಲವಂತವಾದ ದಬ್ಬುವಿಕೆಯಿಂದ ಈ ಮೇಲೆ ತಿಳಿಸಿದ ಇವರ ಹಿರಿಯರ ಕಲ್ಪನೆ ಇಂದು ಬಹಳಷ್ಟು ದೂರವಾಗುತ್ತಿದೆ. ಇಂದು ಇವರು ಸರ್ಕಾರ ಸೂಚಿಸಿದ ನೆಲೆಗಳಲ್ಲಿ, ಬದುಕಬೇಕಾಗಿರುವುದರಿಂದ ಹಾಡಿಯ ಕಲ್ಪನೆ ಇಲ್ಲ. ಯಜಮಾನಿಕೆ ಮಾಡಲು ಪಂಚಾಯ್ತಿಯ ಪರಿಕಲ್ಪನೆಯಲ್ಲಿ ಅಲ್ಲಿ ತರಲು ಸಾಧ್ಯವಿಲ್ಲ. ಪುನರ್ವಸತೀಕರಣದಲ್ಲಿ ಅನೇಕ ಬುಡಕಟ್ಟಿನ ಜನರು ಒಟ್ಟೊಟ್ಟಿಗೆ ಅಕ್ಕಪಕ್ಕದಲ್ಲಿ ವಾಸ ಮಾಡಬೇಕಾದ ಸನ್ನಿವೇಶ. ಇವರಿಗೆ ಇವರ ಕಟ್ಟಳೆಗಳನ್ನು ಅನುಸರಿಸಲು ಮುಜುಗರ ಇರಬಹುದು ಅಥವಾ ಅಂತಹ ವಾತಾವರಣವೇ ಸೃಷ್ಟಿಸಲು ಸಾಧ್ಯವಾಗದೇ ಇರಬಹುದು. ಸಣ್ಣ ಪುಟ್ಟ ಸಮಸ್ಯೆಗಳಿಗೂ ಇಂದು ಪಂಚಾಯ್ತಿ ಸೇರಿ ಸರಿಪಡಿಸಿಕೊಳ್ಳುವ ಬದಲು ಕೋರ್ಟು ಕಛೇರಿಗಳಲ್ಲಿ ಅಲೆಯುವ ಸ್ಥಿತಿ ಬಂದಿದೆ.

ಕುಟುಂಬದ ಒಳಗೆ 'ಮೇಟಿ' ಹಿರಿಯ ವ್ಯಕ್ತಿಯಾಗಿರುತ್ತಿದ್ದರು. ಇಂದು ಹಿರಿಯರ ಮಾರ್ಗದರ್ಶನ ಕೇಳುವ ಸ್ಥಿತಿಯಲ್ಲಿ ಯುವ ಪೀಳಿಗೆ ಇಲ್ಲ. ಏಕೆಂದರೆ ಹೊರ ಜಗತ್ತಿನ ಜನರ ಸಂಪರ್ಕ ಇವರನ್ನು ಆದಷ್ಟು ಎಲ್ಲಾ ವಿಚಾರದಲ್ಲಿಯೂ ಮನ ಬಂದಂತೆ ಬದುಕುವ ರೀತಿಗೆ ತಂದಿವೆ.

ಮಹಿಳೆಯರೂ ಸಹಿತ ಸಾಮಾಜಿಕವಾಗಿ ಇಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವರ ನಿತ್ಯ ಜೀವನದ ಪಾರಂಪರಿಕ ತಿಳುವಳಿಕೆಯಿಂದ ಬದುಕಲು ಮುಕ್ತ ವಾತಾವರಣ ಇಲ್ಲ. ಕಾಡಿನ ಹೊರಗಿನ ಬದುಕು ಇವರ ಸ್ವಚ್ಛಂದ ಮನಸ್ಥಿತಿಯನ್ನೇ ಬದಲಿಸಿದೆ. ಕಾಡಿನೊಳಗೆ ಹೋಗುವಂತಿಲ್ಲ, ಹೋಗಲು ಅನೇಕ ಕಟ್ಟುನಿಟ್ಟಿನ ನಿಯಮಗಳು, ಕಳ್ಳತನದ ಆರೋಪ ಇವರ ಮೇಲೆ ಏರುವುದು. ಇಲಾಖೆಯ ಶೋಷಣೆಯಿಂದ ಇವರ ಪಾರಂಪರಿಕ ಜ್ಞಾನವನ್ನು ಬಳಸಿಕೊಳ್ಳಲು ಸಾಧ್ಯವಿಲ್ಲದೆ ಹಕ್ಕಿಯ ರೆಕ್ಕೆ ಮುರಿದಂತಾಗಿದೆ. ಈ ಸ್ಥಿತಿ ಮುಂದುವರೆದರೆ ಮುಂದೊಂದು ದಿನ ಈ ಜ್ಞಾನ ಮುಂದಿನ ತಲೆಮಾರಿಗೆ ಇಲ್ಲದಂತೆ ಆಗುವ ವಾತಾವರಣ ಖಂಡಿತ ಸೃಷ್ಟಿಯಾಗಿಯೇ ಆಗುತ್ತದೆ.

ಕಾಡಂಚಿನ, ಕಾಡಿನ ಹೊರಗೆ ಜೀವನ ಇವರನ್ನು ಮತ್ತೊಂದು ಶೋಷಣೆಯ ಸುಳಿಗೆ ಸಿಲುಕಿಸಿದಂತೆ ಆಗುತ್ತದೆ. ಕಾಡಿನ ಹೊರಗೆ ಜೀವನ ನಿರ್ವಹಣೆಗಾಗಿ ಕೂಲಿ, ಕೃಷಿ ಕೂಲಿ, ಎಸ್ಟೇಟ್‌ಗಳಲ್ಲಿ ಕೂಲಿ ಮಾಡುವ ಸಂದರ್ಭದಲ್ಲಿ ಹೊರಗಿನ ಪ್ರಬಲ ಜಾತಿ (Dominant caste) ಗಳ ಪ್ರಭಾವದಿಂದ ನೆಮ್ಮದಿಯಾಗಿ ಕೂಲಿಯನ್ನೂ ಪಡೆಯಲು ಸಾಧ್ಯವಾಗುವುದಿಲ್ಲ. ಇದೂ ಕೂಡ ಜೇನುಕುರುಬರಿಗೆ ನುಂಗಲಾರದ ತುತ್ತು.

ಈ ರೀತಿಯಾಗಿ ಸಾಮಾಜಿಕ ವ್ಯವಸ್ಥೆಯೊಳಗೆ ಬೆರೆಯಲು ಅವರ ಜ್ಞಾನದ ತಿಳುವಳಿಕೆ ಅಡ್ಡಬರುವುದಾದರೂ ಕೂಡ, ಬದಲಾದ ಸನ್ನಿವೇಶಕ್ಕೆ ಹೊಂದಿಕೊಳ್ಳಲು ಅಷ್ಟೇ ಕಷ್ಟವನ್ನು ಅನುಭವಿಸುತ್ತಾ ದಿನ ದೂಡುವಂತೆ ಆಗಿದೆ.

ಕಾಡಿನ ಆಚೆಯ ನಾಗರೀಕರೆಂದು ಕರೆಸಿಕೊಳ್ಳುವ ಜನರು ಇವರನ್ನು ಮನುಷ್ಯರೆಂಬ ಕನಿಷ್ಠ ಗೌರವವನ್ನೂ ನೀಡುವುದಿಲ್ಲ. ತುಂಬಾ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಾರೆ. ಇತ್ತ ಕಾಡಿನ ರಾಜರಂತಿದ್ದ ಇವರು ಕಾಡಿನ ಹೊರಗಿನ ಜಗತ್ತಿನ ಶೋಷಣೆಯಿಂದ ನಲುಗುತ್ತಾ ಬದುಕಲೇ ಬೇಕಾದ ವಾತಾವರಣ ಸೃಷ್ಟಿಯಾಗಿದೆ.

ಈ ಸಮುದಾಯದ ಜನರ ಸಂಕುಚಿತ ಮನೋಭಾವನೆ ಮುಗ್ಧತೆಯನ್ನು ಪರೀಕ್ಷೆಗೆ ಒಳಪಡಿಸಿದಂತಾಗಿದ್ದು ಯಾವ ರೀತಿಯಿಂದಲೂ ನೆಮ್ಮದಿಯ ವಾತಾವರಣ ಸ್ವಂತಿಕೆ ಸ್ವಾತಂತ್ರ್ಯವೆಂಬುದು ಇವರಿಗೆ ಕೈಗೆ ಎಟುಕದಂತಹದ್ದಾಗಿದೆ.

ಈ ರೀತಿಯಾಗಿ ಜೇನುಕುರುಬರು ಸಮಸ್ಯೆಗಳಲ್ಲಿಯೇ ಬದುಕುತ್ತಿದ್ದಾರೆ. ಒಂದಲ್ಲಾ ಒಂದು ಕಾರಣ ಅವರ ಜೀವನದಲ್ಲಿ ಅನೇಕ ಏಳು-ಬೀಳಿಗೆ ಕಾರಣವಾಗುತ್ತಿದ್ದು, ಅತ್ತ ಪಾರಂಪರಿಕ ಜ್ಞಾನವನ್ನು

ಉಳಿಸಿಕೊಳ್ಳುವ ವಾತಾವರಣವೂ ಇಲ್ಲ, ಇತ್ತ ಆಧುನಿಕ ಜೀವನಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವೂ ಇಲ್ಲದೇ ಅತಂತ್ರರಾಗಿದ್ದು ದಿನನಿತ್ಯವೂ ಮತ್ತೊಬ್ಬರಿಂದ ಎದುರುವ ಸನ್ನಿವೇಶ, ಶೋಷಣೆಯ ಸನ್ನಿವೇಶಗಳನ್ನು ಎದುರಿಸಲೇಬೇಕಾಗಿದೆ. ಇದರಿಂದ ಮೂಲ ಸತ್ವವೂ ಉಳಿಯುತ್ತಿಲ್ಲ. ಅವರಿಗೆ ಬೇಕಾದ ಕನಿಷ್ಠ ಮಟ್ಟದ ಆಧುನಿಕ ನೆಲೆಯೂ ಇಲ್ಲದೆ ಒದ್ದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ.

ಒಟ್ಟಾರೆ ಹೇಳುವುದಾದರೆ ಸಮಸ್ಯೆಗಳು ಜೇನುಕುರುಬರ ಬೆನ್ನಿಗಂಟಿದಂತಿವೆ. ಇದರಿಂದ ಹೊರಬಂದು ತಮ್ಮ ಮೂಲ ನೆಲೆ, ಬದುಕು ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಗಳು ಆಗುತ್ತಿವೆ. ನಿರಂತರ ಹೋರಾಟ ಇವರಿಗೆ ಗೆಲುವನ್ನು ತಂದುಕೊಡಬಹುದೆಂಬ ಆಶಾಭಾವನೆಯಿಂದಲೇ ದಿನಗಳೆಯುತ್ತಿದ್ದಾರೆ.

**ಮಾಹಿತಿದಾರರು**

ಅಮ್ಮಾಣಮ್ಮ, ಮೇಟಕುಪ್ಪೆ ಹಾಡಿ, ಹೆಚ್ ಡಿ ಕೋಟೆ ತಾಲೂಕು,ಮೈಸೂರು ಜಿಲ್ಲೆ.

ಆಶಾ, ನೇರಳಕುಪ್ಪೆ ಹಾಡಿ, ಹುಣಸುರು ತಾಲೂಕು, ಮೈಸೂರು ಜಿಲ್ಲೆ.

ಕಾಳ ಜಿ ಕೆ, ದೊಡ್ಡರೇಷ್ಮೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಕಾಳಪ್ಪ ಜಿ ಕೆ, ಕಾರೆಅಡ್ಲು ಹಾಡಿ,ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಕುಮಾರ್ಎಂ ಟಿ, ಮರಳುಕಟ್ಟೆ ಹಾಡಿ. ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ಗುಲಾಬಿ, ಮಜ್ಜಿಗೆ ಹಳ್ಳ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಗೋಪಾಲ ನಾಣಚ್ಚಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಗೌರಮ್ಮ, ಮಜ್ಜಿಗೆಹಳ್ಳ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಗೌರಿ, ಗೋಣಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಜಯಮ್ಮ, ನಾಗಪುರ ಹಾಡಿ, ಹುಣಸುರು ತಾಲೂಕು, ಮೈಸೂರು ಜಿಲ್ಲೆ.

ಜಾನಕಮ್ಮ, ಅಬ್ಬಳತಿ ಹಾಡಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ತಾಯಮ್ಮ, ಎಲೆಹುಂಡಿ ಹಾಡಿ, ಹೆಚ್ ಡಿ ಕೋಟೆ ತಾಲೂಕು,ಮೈಸೂರು ಜಿಲ್ಲೆ.

ತಿಮ್ಮ ಜೆ ಕೆ,ನಾಗರಹೊಳೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ನೂರಾಳಿ, ಕೆರೆಹಾಡಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.

ಪಾರ್ವತಿ ಜೆ ಕೆ, ನಾಗಪುರ ಹಾಡಿ, ಹುಣಸುರು ತಾಲೂಕು, ಮೈಸೂರು ಜಿಲ್ಲೆ.

ಪುಟ್ಟಮ್ಮ, ಮೇಟಕುಪ್ಪೆಹಾಡಿ, ಹೆಚ್ ಡಿ ಕೋಟೆತಾಲೂಕು,ಮೈಸೂರು ಜಿಲ್ಲೆ.

ಯಡಚ, ಚಾಮಿಯಾನಹುಂಡಿ "ಎ" ಹಾಡಿ, ಹೆಚ್ ಡಿ ಕೋಟೆ ತಾಲೂಕು,ಮೈಸೂರು ಜಿಲ್ಲೆ.

ಯಶೋಧ, ಮರಳುಕಟ್ಟೆ ಹಾಡಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ರಾಜು ಜೆ ಪಿ, ಮಾವಿನಹಳ್ಳ ಹಾಡಿ, ಸೊಮವಾರಪೇಟೆ ತಾಲೂಕು, ಕೊಡುಗು ಜಿಲ್ಲೆ.

ರಾಮಕೃಷ್ಣ, ನಾಣಚ್ಚಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ರಾಮಿ, ದೊಡ್ಡ ರೇಷ್ಮೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಶಾಂತಿ, ಚಾಮಿಯಾನಹುಂಡಿ "ಎ" ಹಾಡಿ, ಹೆಚ್ ಡಿ ಕೋಟೆ ತಾಲೂಕು,ಮೈಸೂರು ಜಿಲ್ಲೆ.

ಸುಶೀಲ, ಗೋಣಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಸೋಮ ಜಿ ಕೆ, ದೇವರಪುರ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಸೋಮಯ್ಯ ನೇರಳಕುಪ್ಪೆ ಹಾಡಿ, ಹುಣಸುರು ತಾಲೂಕು, ಮೈಸೂರು ಜಿಲ್ಲೆ.

ಸೋಮಯ್ಯ,ಜೆ ಕೆ, ಸಂಪಿಗೆ ಕೊಲ್ಲಿ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

**ಆಧಾರಗಳು**


ಜನಗಣತಿ ವರದಿ, ಭಾರತ ಸರ್ಕಾರ, ೨೦೧೧

ಜೇನುಕುರುಬರ ಸಮೀಕ್ಷೆ, ಏಪ್ರಿಲ್-ಮೇ, ೨೦೧೩

ನಾರಾಯಣಕಿಕ್ಕೇರಿ, ಜೇನುಕುರುಬ ಜನಾಂಗದ ಅವ್ಯಕ್ತ ಸಾಂಸ್ಕೃತಿಕ ಪರಂಪರೆ. ೨೦೧೧, ಪುಟ ೧೮೪.

ಲಲಿತ ಎ.ಸಿ., ೧೯೯೩, ಕಾಡುಕುರುಬ ಮತ್ತು ಜೇನುಕುರುಬರ ಸಂಸ್ಕೃತಿ, ಪು.ಸ.೩೬.

ಅಧ್ಯಾಯ ನಾಲ್ಕು ..........



# ಜೇನುಕುರುಬರ ಪಾರಂಪರಿಕ ಸಾಂಸ್ಕೃತಿಕ ಜೀವನ

# ಅಧ್ಯಾಯ ನಾಲ್ಕು

## ಜೇನುಕುರುಬರ ಪಾರಂಪರಿಕ ಸಾಂಸ್ಕೃತಿಕ ಜೀವನ

# ಅಧ್ಯಾಯ ನಾಲ್ಕು

# ಜೇನುಕುರುಬರ ಪಾರಂಪರಿಕ ಸಾಂಸ್ಕೃತಿಕ ಜೀವನ

ಬುಡಕಟ್ಟು ಸಮಾಜಗಳು ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಹೊಂದಿರುವರು. ಜೇನುಕುರುಬ ಬುಡಕಟ್ಟು ತನ್ನ ಸಂಸ್ಕೃತಿಯನ್ನು ತಲತಲಾಂತರದಿಂದ ಉಳಿಸಿಕೊಂಡು ಬಂದಿದೆ. ಅದನ್ನು ತಮ್ಮ ಪೂರ್ವಿಕರ ಅನುಕರಣೆಗಳು, ದೈವಗಳ ಆಚರಣೆಗಳು, ಪ್ರಕೃತಿಯ ಆರಾಧನೆಗಳೊಂದಿಗೆ ಸಾಂಸ್ಕೃತಿಕವಾಗಿ ವಿಭಿನ್ನತೆಯನ್ನು ಕಾಪಾಡಿಕೊಂಡು ಬಂದಿದೆ. ಈ ಬಗೆಯ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡಿರುವುದರಿಂದಲೇ ಇವರು ಇಂದಿಗೂ ಪ್ರತ್ಯೇಕವಾದ ಸಾಂಸ್ಕೃತಿಕ ನೆಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಜೇನುಕುರುಬರು ತಮ್ಮ ಪಾರಂಪರಿಕ ಜೀವನ ಕಲೆ, ಸಾಹಿತ್ಯ, ಮನೋರಂಜನಾ ಕ್ರೀಡೆಗಳ ಮುಖಾಂತರ ತಮ್ಮ ಸಾಂಸ್ಕೃತಿಕ ಉಳಿಯುವಿಕೆಯನ್ನು ಜೀವಂತವಾಗಿರಿಸಿದ್ದಾರೆ.

## ೪. ೧. ಧಾರ್ಮಿಕ ಆಚರಣೆಗಳು

ಜೇನುಕುರುಬರು ಪ್ರಕೃತಿ ಆರಾಧಕರು. ಪರಿಸರದಲ್ಲಿನ ಪ್ರತಿಯೊಂದು ಮರ, ಗಿಡ, ಪ್ರಾಣಿ, ಪಕ್ಷಿಗಳಲ್ಲಿ ದೈವತ್ವವನ್ನು ಕಾಣುತ್ತಾರೆ. ಅವರ ನಂಬಿಕೆಗಳು ಪವಿತ್ರವೂ ಮತ್ತು ಶಕ್ತಿದಾಯಕವೂ ಆಗಿವೆ. ಅವರ ದೇವತೆಗಳಿಗೆ, ಹಿರಿಯರಿಗೆ ಪ್ರಮುಖವಾದ ಸ್ಥಾನವನ್ನು ಕೊಡುತ್ತಾರೆ ಎಂದು ಹೇಳಿದ್ದಾರೆ. ಅಂತೆಯೇ ಅವರು 'ಮೇಟಿ' ಎಂಬ ಹಿರಿಯ ಮುಖಂಡನ ಸಹಕಾರದಿಂದ ಮಾರ್ಗದರ್ಶನದಿಂದ ಜೀವಿಸುತ್ತಾರೆ. ಎಂಬುದೂ ಕೂಡ ಅವರು ಹಿರಿಯರಿಗೆ ಕೊಡುವ ಗೌರವ ಸೂಚಿಯಾಗಿದೆ.

ಇವರು ಹಿಂದೂ ಧರ್ಮದ ಆರಾಧಕರಾಗಿದ್ದೂ, ತಮ್ಮದೇ ವೈಶಿಷ್ಟ್ಯಪೂರ್ಣ ಪರಂಪರೆಯನ್ನು ಬೆಳೆಸಿಕೊಂಡು ಬಂದವರಾಗಿರುತ್ತಾರೆ.

## ೪. ೨. ದೈವಗಳು

ಅಮ್ಮಾಳೆ, ಅಜ್ಜಯ್ಯ, ಗೋಳೂರ ಒಡೆಯ, ಮತ್ತಿಗೋಡು ತಾಯಿ, ನಾಣಚಿಸ್ವಾಮಿ, ಅಮ್ಮಾಳೆಸ್ವಾಮಿ, ಕರಡಿಕಲ್ಲು ಒಡೆಯ, ಮಾರಟ್ಟಿ, ಕಕ್ಕೇರಿ, ಸೇಗೂರು ಮನೆ, ಮಾಸ್ತಿ, ದೊಡ್ಡಹಳ್ಳ, ಸಣ್ಣಹಳ್ಳ, ದೊಡ್ಡಬಳೆ, ಸಣ್ಣಬಳೆ, ಮುತ್ತಗೆ, ಬೂದುವಾರೆ ಬಡಿಯ, ಬಿಸಲಾಡಿ ತಾಯಿ, ಏಳು ಹಟ್ಟಿ ಹುಣಸೆಬಡಿಯ, ಬಾಣದವರು, ಕಟ್ಟಿಮನೆಯವರು, ಕೌಡಲವರು, ಕೋಟೆಬೀರ, ಅಮ್ಮನೆಯವರು, ಬಟ್ಟದ ಒಡತಿ, ಗಣಗೂರ ಒಡಿಯ, ಕುಂತೂರು ಒಡಿಯ, ದೊಡ್ಡ ತೋಡು ಸ್ವಾಮಿ, ನಡುಮನೆ ತಾಯಿ, ಗೆಜ್ಜೆಯವರು, ಗೋಣಿಗದ್ದೆ ಒಡಿಯ, ಲಕ್ಕುಂದ ಒಡಿಯ, ಬರಗೂರು ದೊಡ್ಡವರು, ಮಾರಿಗುಡಿ ತಾಯಿ, ಭೂಮಿಯವರು, ಪಣ್ಣೆ ತಾಯಿ.

## ೪. ೨. ೧. ದೈವಗಳ ಸ್ಥಾನಗಳು

ಜೇನುಕುರುಬರ ಕುತ್ತಿ ಮನೆತನಗಳಿಗೆ ಅವರದೇ ಆದ ಕುಲ ದೈವಗಳ ಆಚರಣೆಯನ್ನು ಹೊಂದಿರುವುದನ್ನು ಕಾಣುತ್ತೇವೆ. ಇವರು ಆರಾದಿಸುವ ದೈವಗಳ ಬಗ್ಗೆ ಅಪಾರ ನಂಬಿಕೆ, ಭಕ್ತಿಯನ್ನು ಹೊಂದಿರುತ್ತಾರೆ. ನಾಗರಹೊಳೆ ಅರಣ್ಯ ಪ್ರದೇಶವನ್ನು ಕೇಂದ್ರವಾಗಿಟ್ಟು ಅದಕ್ಕೆ ಹೊಂದಿಕೊಂಡಂತೆ ಇರುವ ಇಂದಿನ ಕೇರಳ ಗಡಿ ಭಾಗದ ಅರಣ್ಯವನ್ನೂ ಸೇರಿರುವ ಅರಣ್ಯಗಳಲ್ಲಿ ನೆಲೆಕಂಡಿದ್ದ ಜೇನುಕುರುಬರ ದೈವಗಳ ಆಚರಣಾ ನೆಲೆಗಳನ್ನು ಕಾಣುತ್ತೇವೆ.

**ಕೋಷ್ಟಕ : ೪. ೧. ಜೇನುಕುರುಬರು ಆರಾಧಿಸುವ ದೈವಗಳು ಮತ್ತು ಅವುಗಳ ಸ್ಥಾನಗಳು.**

| ದೈವಗಳು | ದೈವದ ಮೂಲನೆಲೆ | ತಾಲೂಕು | ಜಿಲ್ಲೆ |
|---|---|---|---|
| ಅಮ್ಮಾಳೆ | ಬಾಳೆಕೋವು ಮತ್ತು ನಾಣಚ್ಚಿ ಮಧ್ಯೆ | ವಿರಾಜಪೇಟೆ | ಕೊಡಗು |
| ಅಮ್ಮಾಳೆ ಅಜ್ಜಯ್ಯ | ಮಧ್ಯೆ | ವಿರಾಜಪೇಟೆ | ಕೊಡಗು |
| ಏಳುಹಟ್ಟಿ ಒಡೆಯ | ಬೇರ್ಕೊಲ್ಲಿ | ವೀರಾಜಪೇಟೆ | ಕೊಡಗು |
| ಕಕ್ಕೇರಿ ಒಡೆಯ | ತೋಳ್ಪಟ್ಟಿಯಿಂದ ಎರಡು ಕಿಲೋ ಮೀಟರ್ ಕಾಡಿನೊಳಗೆ ಇದೆ. | ಕೇರಳ ವೈನಾಡು | |
| ಕರಡಿಗಲ್ಲು ಒಡೆಯ | ಕಟ್ಟೆಪಾಳೆ ಅರಣ್ಯದ ಅಂಚು | ವಿರಾಜಪೇಟೆ | ಕೊಡಗು |
| ಕೋಳಿಮರದ ಅಜ್ಜಯ್ಯ | ಮಾರನಕಟ್ಟೆ ಹಾಡಿ | ವಿರಾಜಪೇಟೆ | ಕೊಡಗು |
| ಗಣಗೂರು ಒಡೆಯ | ಬಾಳೆಲೆ (ಮತ್ತಿಗೂಡು ಅರಣ್ಯದಲ್ಲಿ) | ವಿರಾಜಪೇಟೆ | ಕೊಡಗು |
| ಗೋಳುರು ಒಡೆಯ | ನಾಥಂಗಲ್ | ವಿರಾಜಪೇಟೆ | ಕೊಡಗು |
| ಚಿಕ್ಕ ಅಮ್ಮಾಳೆ | ನಾಣಚ್ಚಿ ಮತ್ತು ಬಾಳೆಕೋವು | ವಿರಾಜಪೇಟೆ | ಕೊಡಗು |
| ತಾರೆಕಟ್ಟೆ ಒಡೆಯ | ಗುಡ್ಡೆ ಹೊಸಳ್ಳಿ | ಮಡಿಕೇರಿ | ಕೊಡಗು |
| ದೊಡ್ಡತೋಡು ಸ್ವಾಮಿ | ಕಲ್ಲುಕೋರೆ | ವಿರಾಜಪೇಟೆ | ಕೊಡಗು |
| ದೊಡ್ಡ ಬಳ್ಳೆ ಸ್ವಾಮಿ | ಬಳ್ಳೆ ಹಾಡಿ | ಹೆಚ್ ಡಿ ಕೋಟೆ | ಮೈಸೂರು |
| ದೊಡ್ಡಮ್ಮಾ | ದುಬಾರೆ | ವಿರಾಜಪೇಟೆ | ಕೊಡಗು |
| ನಾಣಚ್ಚಿ ಸ್ವಾಮಿ | ನಾಣಚ್ಚಿ ಕಾಡಿನೊಳಗೆ | ವಿರಾಜಪೇಟೆ | ಕೊಡಗು |
| ನೆಟ್ಟುಕಲ್ಲು ಸ್ವಾಮಿ | ಅಂಗನ ಕಟ್ಟೆ ಹಾಡಿ | ವಿರಾಜಪೇಟೆ | ಕೊಡಗು |
| ಬರಗೂರು ಸ್ವಾಮಿ | ಕುಂತೂರು ಕಾಡಿನೇ ಎರಡು ಕಿ. ಮೀ. | ವಿರಾಜಪೇಟೆ | ಕೊಡಗು |
| ಬಿಸಲಾಡಿ ತಾಯಿ | ನಾಗರಹೊಳೆ ಕಾಡು | ಹೆಚ್ ಡಿ ಕೋಟೆ | ಮೈಸೂರು |
| ಬೈರಪ್ಪ ಸ್ವಾಮಿ | ಬೈರನಗುಡಿ | ಹುಣಸೂರು | ಮೈಸೂರು |
| ಬೊಮ್ಮಾಡಮ್ಮ | ತಿರುಮಲೆ ಬರಗೂರು ವೆಗೊಲ್ಲಿ | ವಿರಾಜಪೇಟೆ | ಕೊಡಗು |
| ಭದ್ರಕಾಳಿ | ದೇವರ ಪುರ | ವಿರಾಜಪೇಟೆ | ಕೊಡಗು |
| ಮತ್ತಿಗೋಡು ತಾಯಿ | ಬಾಳೆಕೋವು | ವಿರಾಜಪೇಟೆ | ಕೊಡಗು |
| ಮಾಸ್ತಮ್ಮ | ಬಳ್ಳೆ ಹಾಡಿ | ಹೆಚ್ ಡಿ ಕೋಟೆ | ಮೈಸೂರು |
| ಮುತ್ತಗೆ | ದೊಡ್ಡ ಕಾನೂರು | ವಿರಾಜಪೇಟೆ | ಕೊಡಗು |
| ಮುದುಮಲೆ | ನಾಗರಹೊಳೆ ಕಾಡು | ವಿರಾಜಪೇಟೆ | ಕೊಡಗು |
| ಮೂರಟ್ಟಿ | ಮೂರಟ್ಟಿ ಊರಿನಲ್ಲಿದೆ | ಕೇರಳ ವೈನಾಡು | |
| ಲಕ್ಕುಂದ ಸ್ವಾಮಿ | ನಾಗರಹೊಳೆ ಕಾಡು | ವಿರಾಜಪೇಟೆ | ಕೊಡಗು |
| ಶೆಟ್ಟಿಗದ್ದೆ | ಲಕ್ಕುಂದ | ವಿರಾಜಪೇಟೆ | ಕೊಡಗು |
| ಸಣ್ಣ ಬಳ್ಳೆ ಸ್ವಾಮಿ | ನಾಗರಹೊಳೆ ಕಾಡು | ಹೆಚ್ ಡಿ ಕೋಟೆ | ಮೈಸೂರು |
| ಸೀತೆತೋಮ ಸ್ವಾಮಿ | ಮರಳುಕಟ್ಟೆ ಹಾಡಿ | ಪಿರಿಯಪಟ್ಟಣ | ಮೈಸೂರು |
| ಹಂದಿಗೆರೆ ಚೌಡಮ್ಮ | ತಿತಿಮತಿ (ಕಾಡಿನೊಳಗೆ ಎಂಟು ಕಿ.ಮೀ.) | ವಿರಾಜಪೇಟೆ | ಕೊಡಗು |
| ಹೊಸಲು ಮಾರಮ್ಮ | ಆನೆಚೌಕೂರು | ವಿರಾಜಪೇಟೆ | ಕೊಡಗು |

ಆಧಾರ : ಮಾ : ತಿಮ್ಮಿ, ಆಲಂದೋಡು ಪೈಸಾರಿ.

ನೆಟ್ಟುಕಲ್ಲುಸ್ವಾಮಿ : ಇಲ್ಲಿಯ ವಿಶೇಷತೆ ಎಂದರೆ ಆ ದೇವಸ್ಥಾನದ ಬಳಿ ಯಾರೇ ಹೋದರು ಅವರು ಕಲ್ಲುಗಳನ್ನು ಒಂದರ ಮೇಲೊಂದು ಕಟ್ಟಿ,ಕಾಲಿಗೆ ಮುಟ್ಟಸಿ ಗುಡ್ಡೆ ಹಾಕಬೇಕು. ಕೋರೆಕಲ್ಲು ಹಾಕಿ ದೇವರ ಧ್ಯಾನ ಮಾಡಿ ಮುಂದೆ ಕಾಡಿನೊಳಗೆ ಸಾಗಿದರೆ ಎಷ್ಟು ದೂರ ನಡೆದರೂ ಕೈ ಕಾಲುಗಳು ಸೋಲುವುದಿಲ್ಲ. ಯಾವ ತೊಂದರೆಯೂ ಬರುವುದಿಲ್ಲ. ಕಾಡಿನ ಪ್ರಾಣಿಗಳು ತೊಂದರೆ ಮಾಡುವುದಿಲ್ಲ. ಹಿಂದೆ ಜೇನುಕುರುಬರ ಹಿರಿಯರೊಬ್ಬರು ಹೀಗೆ ಕಲ್ಲನ್ನು ಗುಡ್ಡೆ ಹಾಕಿ ಮುಂದೆ ಸಾಗಿದ್ದರಿಂದ ಯಾವ ತೊಂದರೆ ಸಂಭವಿಸಿಲ್ಲವಂತೆ. ಅಂದಿನಿಂದ ಅಂಗನ ಗುಡ್ಡೆಯ ಬಳಿ ಯಾರೇ ಹೋದರು ಕಲ್ಲು ಗುಡ್ಡೆ ಹಾಕುವ ಸಂಪ್ರದಾಯವನ್ನು ರೂಢಿಸಿ ಕೊಂಡಿದ್ದಾರೆ

| ದೈವಗಳು | ಪೂಜಿಸುವ ವಾರ |
|---|---|
| ಕುಟ್ಟ ಭದ್ರಕಾಳಿ | ಮಂಗಳವಾರ |
| ಕೋತುರು ಮಾರಿ | ಮಂಗಳವಾರ |
| ಪಣ್ಣೆ ನಾಣಚ್ಚಿ | ಮಂಗಳವಾರ |
| ಗೋಣಿಗದ್ದೆ ಜಮ್ಮದ ದೈವ | ಬುಧವಾರ |
| ಅಮ್ಮಾಳೆ ತಾಯಿ | ಬುಧವಾರ |
| ದೊಡ್ಡ ತೋಡು ಅಜ್ಜಯ್ಯ | ಬುಧವಾರ |

ಪ್ರಮುಖ ಹಬ್ಬಗಳಲ್ಲಿ ಚಿಕ್ಕಮಕ್ಕಳು (ವಯಸ್ಕರಲ್ಲದವರು) ಭತ್ತಕುಟ್ಟಿ ಅಕ್ಕಿಯಿಂದ ಹೊಟ್ಟನ್ನು ಬೇರ್ಪಡಿಸಿ ಶುದ್ಧಗೊಳಿಸಿದ ಅಕ್ಕಿಯನ್ನು ದೇವರಿಗೆ ಅನ್ನ ಮಾಡಿ ಎಡೆ ಇಡುವಂತೆ ಹಿರಿಯರು ಮಾರ್ಗದರ್ಶನ ಮಾಡುತ್ತಾರೆ. ಬಾಯಿಗೆ ಬಟ್ಟೆ ಕಟ್ಟಿಕೊಂಡು ಅಡುಗೆ ಮಾಡುತ್ತಾರೆ. ಏಕೆಂದರೆ, ಬಾಯಿಯ ಎಂಜಲು ಪ್ರಸಾದದ ಮೇಲೆ ಬಿದ್ದು ಪ್ರಸಾದ ಮೈಲಿಗೆಯಾಗುತ್ತದೆ ಎಂಬ ನಂಬಿಕೆಯಿಂದ ಹೀಗೆ ಮಾಡುತ್ತಾರೆ. ಬಿದಿರಿನ ಕೊಳಾಯಿಯಲ್ಲಿ ನೀರನ್ನು ತಂದು ದೇವರ ಪೂಜೆಯ ಎಡೆಗೆ ಈ ನೀರನ್ನು ಉಪಯೋಗಿಸಲಾಗುತ್ತದೆ.

ಇಂದು ನಾಡ ದೈವಗಳೆಲ್ಲವೂ ಜೇನುಕುರುಬರ ಮನೆಗಳನ್ನು ಹೊಕ್ಕಿವೆ. ಲಕ್ಷ್ಮಿ, ಸರಸ್ವತಿ, ಗಣಪತಿ, ತಿರುಪತಿ, ವೆಂಕಟೇಶ್ವರ, ಈಶ್ವರ ಇತ್ಯಾದಿ ದೈವಗಳನ್ನು ಆರಾಧಿಸುತ್ತಾರೆ.

## ೪. ೩. ಭಾಷೆ

ಭಾಷೆ ಎಂಬುದು ಪ್ರಮುಖವಾದ ಸಂವಹನವಾದುದು. ಮಾನವ ಮಾತ್ರ ಪ್ರಕೃತಿಯಲ್ಲಿ ಭಾವನೆಗಳನ್ನು ಭಾಷೆಯ ಮುಖಾಂತರ ವ್ಯಕ್ತ ಪಡಿಸುವ ಕೌಶಲ್ಯ ಸಾಮರ್ಥ್ಯವನ್ನು ಹೊಂದಿದ್ದಾನೆ. ಪ್ರಾಣಿ ಪಕ್ಷಿಗಳಿಗೂ ಭಾಷೆ ಇದೆ. ಆದರೆ ಅದು ವ್ಯಕ್ತ ಮಾಡುವ ವಿಧಾನ ಆಯಾ ಪ್ರಾಣಿ ವರ್ಗ ಪಕ್ಷಿ ವರ್ಗಕ್ಕೆ ಮಾತ್ರವೇ ಅರ್ಥವಾಗುವಂತಹದ್ದು.

ಜೇನು ಭಾಷೆಯಲ್ಲಿ ಮಹಿಳೆಯು *"ನಂಗ ಭಾಷೆಲು ನಂಗ ಹೊತ್ತಾರೆ ಕೋಳಿ ಕೂಗಾಗ ಸಮಯಲು ಎದ್ದು ಸುಧಾರಿಸೋಡು ಅಟ್ಟ ಕತೆ ಹೋಗಿ ಗುತಿಸಿ ನೀರು, ಸಗಣೆಲು ಸಾರಿಸಿ ಒಲೆಗ ಬೆಂಕಿ ಇಡಿಸಿ, ಗಂಜಿ ಕಾಸಾಲೆ, ಕೂಳು ಮಾಡಲೇ ಅಟ್ಟಲು ಗುತಿಸಿ ಕೈ, ಕಾಲು, ಮಕ ತೋಳದೋಡು ರಾಯ ಕಲ್ಲಿಲು ರಾಗಿ ಬೀಸಿ ಹಿಟ್ಟು ಮಾಡಿಸಿ ಭತ್ತ ಕುಟ್ಟ ಅಕ್ಕ ಮಡಗಿವರೆ ಆ ಅಕ್ಕಿಲ ಗಂಜಿ ಕಾಸಿ ಮಕ್ಕ ಮಲಿನೆಲ್ಲ ಎಳಿಸಿ ಮಕ ತೊಳೆಸಿ ಗಂಜಿನೆ ಕುಡಿಸಿ, ಪಾತ್ರೆನೆ ತೊಳೆಸಿ ಮನೆಲು ಮಡಗಿಬುಟ್ಟು ಸೊಪ್ಪು, ಗಾಸು ನೋಡಿ ಬರುವ ಅಂತ ಅಕ್ಕ ಪಕ್ಕದವರು ಸೇರಿ ಕಾಡಿಗೆ ಹೋತಿನ ಸೊಪ್ಪು ತಂದು, ಸೊಪ್ಪು ಬೇಯಿಸಿ ಕೂಳು ಜೊತೆಲಿ ತಿತ್ತಿಯಾದು. ಕೂಳು ಕಾಣೆ ಎಂದರೆ ಸೊಪ್ಪುನೆ ತಿತ್ತು ಮಲಗಿಕೊತ್ತವ. ಗಂಡಸರು ಗಾಸು ಅಗೆತು ಬಂದರೆ ಗಾಸು ಬೇಸಿ ಮಕ್ಕಗೆಲ್ಲ ಕೊಡದು ನಾವು ತಿನ್ನದು ಗಾಸು ಕೊಟ್ಟ ಅಜ್ಜಯ್ಯಗು ಅಡೆ ಮಡಗಾದು"* ಎಂದು ತನ್ನ ದೈನಂದಿನ ಬದುಕಿನ ಬಗ್ಗೆ ಹೇಳುತ್ತಾರೆ.

ಜಗತ್ತಿನ ಎಲ್ಲಾ ಮಾನವ ಸಮುದಾಯಗಳೂ ತಮ್ಮದೇ ಆದ ಭಾಷೆಯನ್ನು ಹೊಂದಿದ್ದು, ಅದನ್ನು ಸಂಪರ್ಕ ಮಾಧ್ಯಮವಾಗಿ ಬಳಸಿಕೊಳ್ಳುತ್ತಾ ತಮ್ಮ ತಮ್ಮ ನಿತ್ಯದ ಚಟುವಟಿಕೆಗಳನ್ನು ನಿರ್ವಹಿಸುತ್ತವೆ. ವಿಶ್ವದಾದ್ಯಂತ ಇರುವ ಎಲ್ಲಾ ಬುಡಕಟ್ಟುಗಳು ವಿಭಿನ್ನವಾದ ಭಾಷೆಯನ್ನು ಬಳಸುತ್ತಾ ಬಂದಿದೆ. ಅದರಲ್ಲಿ ಬಹಳಷ್ಟು ಭಾಷೆಗಳಿಗೆ ಲಿಪಿ ಇಲ್ಲ.

ಭಾರತದಲ್ಲಿ ಲಿಪಿ ಇರುವ ಭಾಷೆಗಳಿಗಿಂತಲೂ ಲಿಪಿ ಇಲ್ಲದ ಭಾಷೆಳ ಸಂಖ್ಯೆಯೇ ಅಧಿಕವಾಗಿದೆ. ಜೇನುಕುರುಬರೂ ಕೂಡ ಮಾತನಾಡುವ ಭಾಷೆಗೆ ಲಿಪಿ ಇಲ್ಲ. ಇವರು ಮಾತನಾಡುವ ಭಾಷೆಯನ್ನು 'ಜೇನುನುಡಿ' ಎಂದು ಕರೆಯುತ್ತಾರೆ. ಇದು ಕನ್ನಡವನ್ನು ಹೋಲುತ್ತದೆ. ಮೈಸೂರು, ಚಾಮರಾಜನಗರ, ಕೊಡಗಿನಲ್ಲಿ ವಾಸಿಸುವ ಜೇನುಕುರುಬರು ಕನ್ನಡ, ಜೇನುಭಾಷೆಯನ್ನು ಸ್ಪಷ್ಟವಾಗಿ ಮಾತನಾಡುತ್ತಾರೆ. ಗಡಿಭಾಗದ ಜೇನುಕುರುಬರು ಮಲಯಾಳಂ, ತಮಿಳು ಭಾಷೆ ಜೊತೆಗೆ ಸೋಲಿಗ, ಯರವರೊಂದಿಗೂ ಮಾತನಾಡುತ್ತಾರೆ.

ಇಂದು 'ಜೇನುನುಡಿ' ಮಾತನಾಡವವರ ಸಂಖ್ಯೆ ಇಳಿಮುಖವಾಗುತ್ತಿದೆ. ಏಕೆಂದರೆ ಇವರನ್ನು ಅನೇಕ ಕಾರಣಗಳನ್ನು ತೋರಿಸಿ ಕಾಡಿನಿಂದ ಹೊರಗೆ ತಳ್ಳಿದರ ಪರಿಣಾಮ ಇಂದು ಹೊರಗಿನ ಜನರ ಸಂಪರ್ಕದಿಂದಾಗಿ ಬೇರೆ ಭಾಷೆಯಾದ ಕನ್ನಡ, ತಮಿಳು, ಮಲಯಳಂ ಭಾಷೆಗಳನ್ನೂ ಬಳಸಬೇಕಾದ ಅನಿವಾರ್ಯತೆಯಿಂದಾಗಿ ಜೇನು ಭಾಷೆ ಮಾತನಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ.

ಜೇನುಕುರುಬ ಮಕ್ಕಳು ಆಶ್ರಮ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಯುತ್ತಾರೆ. ಮನೆಗಳಲ್ಲಿ ಮಾತ್ರ ಜೇನುನುಡಿ ಮಾತನಾಡುತ್ತಾರೆ. ಅದೂ ತುಂಬಾ ವಿರಳವಾಗಿದೆ. ಹೀಗೆ ಭಾಷೆಯ ಬಳಕೆ ಕಡಿಮೆಯಾಗುವುದು ನೋಡಿದರೆ ಇನ್ನು ಕೆಲವೇ ದಶಕಗಳಲ್ಲಿ ಜೇನುನುಡಿ ಎಂಬ ಭಾಷೆಯೇ ನಾಶವಾಗುತ್ತದೆ. ಪುಸ್ತಕ ರೂಪದಲ್ಲಿ ಭಾಷೆಯನ್ನು ಓದಬೇಕಾಗುತ್ತದೆ. ಅದೇ ಸಮುದಾಯದ ಮಕ್ಕಳಿಗೆ

ಮುಂದೊಂದು ದಿನ ಈ ಭಾಷೆಯನ್ನು ಮಾತನಾಡಲು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ.

ಜೇನು ಭಾಷೆಯನ್ನು ಉಳಿಸಬೇಕೆಂದರೆ ಅನೌಪಚಾರಿಕವಾಗಿದ್ದರೂ ಈ ಸಮುದಾಯಕ್ಕೆ ಜೇನುನುಡಿಯನ್ನು ಉಳಿಸಿ ಬೆಳೆಸುವ ಜವಬ್ದಾರಿ ಪ್ರಸ್ತುತ ತಲೆಮಾರಿನದು. ಈಗಿನ ಮಕ್ಕಳಿಗೆ ಕಡ್ಡಾಯವಾಗಿ ಭಾಷೆಯ ತಿರುಳು ಹೇಳಿಕೊಡಬೇಕು. ಸಂಪರ್ಕ ಮಾಧ್ಯಮವಾಗಿ ಬಳಕೆಯಾಗಬೇಕು. ಈ ಸಂಬಂಧವಾಗಿ ಹಿರಿಯ ವಿದ್ವಾಂಸರಾದ ಡಾ ಕಿಕ್ಕೇರಿ ನಾರಾಯಣರ ಜೇನುನುಡಿ ಕನ್ನಡ, ಇಂಗ್ಲೀಷ್ ನಿಂಗಟು ಬಹಳಷ್ಟು ಉಪಯುಕ್ತವಾದ ಪುಸ್ತಕವಾಗಿದೆ. ಇಂತಹ ಬರವಣಿಗೆಯೇ ಮುಂದೆ ಈ ಸಮುದಾಯದಲ್ಲಿ ಜೇನುಭಾಷೆ ಎಂಬುದು ಇತ್ತು ಎಂಬುದನ್ನು ತಿಳಿಯಲು ದಾರಿ ದೀಪವಾಗಬಹುದು.

## ೪. ೪. ಕುಶಲ ಕಲೆ

ಜೇನುಕುರುಬರಲ್ಲಿ ಕುಶಲ ಕಲೆಯನ್ನು ಕಾಣಬಹುದಾಗಿದೆ.

- ಕೈಯಾ (ಕಹಿ) ನಾರನ್ನು ಬಳಸಿ ಬಿಲ್ಲನ್ನು ತಯಾರಿಸಿ ಬೇಟೆಗೆ ಬಳಸಿಕೊಳ್ಳುತ್ತಾರೆ.
- ನೆಲ್ಲಿಗರಿಯಿಂದ ಜೇಳಿಗೆಯ ಬ್ಯಾಗನ್ನು ತಯಾರಿಸುತ್ತಾರೆ.
- ಬಿದಿರು ಚಾಪೆಗೆ ಹಗ್ಗ ಸೇರಿಸಿ ಹೆಣೆಯುತ್ತಾರೆ.
- ಕಯ್ಯಾ ಸೇರ ಬುರುಡೆ (ಕಹಿ ಸೋರೆ ಬುರುಡೆ)ಯಿಂದ ಬುಂಡೆಯನ್ನು ತಯಾರಿಸುತ್ತಾರೆ. ಪರಳು ಬೀಜವನ್ನು ಒಣಗಿಸಿ ಸೋರೆ ಬುರುಡೆಗೆ ಹಾಕಿ ಅಂಟುವಾಳ ಮರದ ಮೇಣವನ್ನು ತೂತಿಗೆ ಮುಚ್ಚುತ್ತಾರೆ.
- ಬಿದಿರಿನಿಂದ ಮೊರ ಹೆಣೆಯುತ್ತಾರೆ.

## ೪. ೫. ಜನಪದ ಸಾಹಿತ್ಯ

ಪ್ರತಿಯೊಂದು ಬುಡಕಟ್ಟು ಸಮುದಾಯವು ತನ್ನದೇ ಆದ ಆಚರಣೆ, ವಿಧಿನಿಷೇಧಗಳನ್ನು ಸೃಷ್ಟಿಸಿಕೊಂಡು ತಮ್ಮದೇ ಪ್ರತ್ಯೇಕವೆಂಬಂತಹ ಸಂಸ್ಕೃತಿಯೊಂದನ್ನು ರೂಪಿಸಿಕೊಂಡಿರುತ್ತಾರೆ. ಇವರ ಸಂಸ್ಕೃತಿಯನ್ನು ತಿಳಿಸುವ ಇವರ ಜೀವನ ಕ್ರಮದಂತೆ ಇವರೇ ಸೃಷ್ಟಿಸಿಕೊಂಡ ಸಾಹಿತ್ಯವೂ ವೈಶಿಷ್ಟ್ಯಪೂರ್ಣವಾದುದಾಗಿದೆ. ತಾವು ಸೃಷ್ಟಿಸಿಕೊಂಡ ಸಾಹಿತ್ಯದೊಳಗೆ ತಮ್ಮ ಸಂಸ್ಕೃತಿಯ ಮಜಲುಗಳನ್ನು ಅಡಗಿಸಿ ಇಟ್ಟುಕೊಂಡಿರುತ್ತಾರೆ. ಅಂದರೆ ಒಂದು ಬುಡಕಟ್ಟು ಸಂಸ್ಕೃತಿಯನ್ನು ಅರಿಯಬೇಕಾದರೆ ಅವರ ಸಾಹಿತ್ಯವನ್ನೂ ಅರಿಯಬೇಕಾದದ್ದು ಅನಿವಾರ್ಯವಾಗಿರುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ

ಜೇನುಕುರುಬರ ಸಾಹಿತ್ಯ, ಕ್ರೀಡೆ ಮುಂತಾದವುಗಳನ್ನು ಇಲ್ಲಿ ನೋಡಲಾಗಿದೆ. ಇವರ ಸಾಹಿತ್ಯವು ಮೌಖಿಕ ಪರಂಪರೆಯನ್ನು ಹೊಂದಿದ್ದು, ಪರಂಪರೆಯೊಳಗೆ ತಲೆಮಾರಿನಿಂದ ತಲೆಮಾರಿಗೆ ರವಾನಿಸಲ್ಪಟ್ಟಿದೆ.

ಜನಪದ ಸಾಹಿತ್ಯವು ಮನುಷ್ಯನ ಬಾಳಿನ ಬಗೆ ಬಗೆಯ ಅನುಭವಗಳನ್ನು ಅನೇಕ ರೀತಿಯಿಂದ ವ್ಯಕ್ತಪಡಿಸುತ್ತದೆ. ಹಾಡುಗಾರಿಕೆ, ಖಂಡ ಕಾವ್ಯಗಳು, ಕಥೆ, ಗಾದೆ, ಒಗಟು ಮೊದಲಾದ ಜನಪದ ಸಾಹಿತ್ಯದ ರೂಪದಲ್ಲಿ ಮೂಡಿ ಬರುತ್ತದೆ. ಇದಕ್ಕೆ ಜೇನುಕುರುಬ ಬುಡಕಟ್ಟು ಸಮುದಾಯವೂ ಹೊರತಾಗಿಲ್ಲ. ತಮ್ಮ ನೋವು ನಲಿವುಗಳನ್ನು ಹಂಚಿಕೊಳ್ಳಲು ರೂಪಿಸಿಕೊಂಡಿರುವ ಜನಪದ ಸಾಹಿತ್ಯದ ರೂಪಗಳಾಗಿ ಮೂಡಿವೆ.ಈ ರೀತಿಯ ಜನಪದ ರೂಪಗಳಲ್ಲಿ ಹಾಡುಗಾರಿಕೆ ಪ್ರಮುಖವಾಗಿದೆ. ಇದಕ್ಕೆ ಹೆಣ್ಣು ಗಂಡೆಂಬ ಭೇದವಿಲ್ಲ. ಜೇನನ್ನು ಬಿಡಿಸುವಾಗಲೋ, ಗೆಡ್ಡೆಗೆಣಸನ್ನು ಕೀಳಲು ಕಾಡಿನಲ್ಲಿ ಅಲೆಯುವಾಗಲೋ ಈ ರೀತಿಯ ಮೌಖಿಕ ಪರಂಪರೆಯ ಹಾಡುಗಳನ್ನು ಜೇನುಕುರುಬರು ಗುನಗುನಿಸುವುದನ್ನು ಕಾಣುತ್ತೇವೆ. ಅವರ ಬಹುತೇಕ ಹಾಡುಗಳು ಕಾಡು ಹಾಗೂ ಕಾಡುಪ್ರಾಣಿಗಳೊಂದಿಗಿನ ಅವಿನಾಭಾವ ಸಂಬಂಧವನ್ನು ತೋರಿಸುತ್ತವೆ. ಪಾರಂಪರಿಕ ಜ್ಞಾನದ ಹಿನ್ನೆಲೆಯಲ್ಲಿ ಈ ಹಾಡುಗಳನ್ನು ಅವಲೋಕಿಸಲಾಗಿದೆ.

**೪. ೫. ೧. ಹಾಡುಗಳು**

ಜೇನುಕುರುಬ ಬುಡಕಟ್ಟಿನಲ್ಲಿ ಜನಪದ ಹಾಡುಗಳು ಅಥವಾ ಗೀತೆಗಳು ಸಮೃದ್ಧಿಯಾಗಿ ದೊರೆಯುತ್ತವೆ. ಇವರ ಜನಪದ ಗೀತೆಗಳು ಬಹಳ ಮನರಂಜನೀಯವಾಗಿವೆ. ಬದುಕಿನ ವಿವಿಧ ಘಟ್ಟಗಳಲ್ಲಿ ಹಲವಾರು ಸವಾಲುಗಳನ್ನು ಎದುರಿಸಿ ಗಳಿಸಿದ ಅನುಭವದ ಗುಚ್ಛವೇ ಜನಪದ ಹಾಡುಗಳಾಗಿವೆ. ಕೋಲಾಟ, ದೈವದ ಕುರಿತಾದ ಪದ, ಕಥನ ಗೀತೆ ಮತ್ತು ಕುಣಿತದೊಂದಿಗೆ ಹಾಡುವ ಪದಗಳನ್ನು ಗಂಡಸರು ಹಾಡಿದರೆ, ನಾಮಕರಣ, ಋತುಮತಿ, ಮದುವೆ ಮುಂತಾದ ಆಚರಣೆಗಳಲ್ಲಿ ಹಾಡುವ ಹಾಡುಗಳನ್ನು ಹೆಂಗಸರು ಹಾಡುತ್ತಾರೆ. ಜೇನುಕುರುಬರು ತಮ್ಮ ಮೂಲ ಕಸುಬಾದ ಜೇನು ಸಂಗ್ರಹಣೆಗೆ ಸಂಬಂಧಿಸಿದ ಜೇನುಪದಗಳನ್ನು ಗಂಡು ಹೆಣ್ಣೆಂಬ ಭೇದವಿಲ್ಲದೆ ಹಾಡುತ್ತಾರೆ. ಇವರು ಮೂಲ ಪುರುಷನ ನೆನಪಿಗಾಗಿ ಮಾಡುವ ಕೊಂತ ಪೂಜೆಯ ಆಚರಣೆಯಲ್ಲಿ ವಿವಿಧ ವೇಷಗಳನ್ನು ಕಟ್ಟಿ ಆ ವೇಷಕ್ಕೆ ತಕ್ಕಂತೆ ವಿವಿಧ ಪದಗಳನ್ನು ಬಹಳ ಸೊಗಸಾಗಿ ಹಾಡುತ್ತಾರೆ. ಜೇನುಕುರುಬರ ಹಾಡಿಗಳಿಗೆ ಹೋದರೆ ಅಲ್ಲಿ ಜನಪದ ಭಂಡಾರವನ್ನು ಹೊಂದಿದ ಗಣಿಗಳೇ ಸಿಗುತ್ತವೆ (ಮಾ : ಪುಟ್ಟಮ್ಮ, ಆಲದ ಕಟ್ಟೆ ಹಾಡಿ).

ಸಾಹಿತ್ಯ ೧. ನಿಲ್ಲು ನಿಲ್ಲಯ್ಯ ರಾಜ ನಿಜಗುಣ ಏನು ಬಲ್ಲೆ

ಮಲ್ಲಿಗೆ ತರಲಿ ನಿಲ್ಲಯ್ಯರಾಜ ಮಲ್ಲಿಗೆ ತರಲಿ

ಕಾಕನಕೋಟೆ ಏರಿಮೇಲೆ ಕಾಯಿಸೊಪ್ಪು ಕುಯ್ಯುವಾಗ

ಸುರುದಾರೇ ಮಾತಾಡಲೋ

ನಿಲ್ಲು ನಿಲಯ್ಯ ರಾಜ ನಿಜಗುಣ ಏನು ಬಲ್ಲೆ

ಮಲ್ಲಿಗೆ ತರಲಿ ..... ನಿಲ್ಲಯ್ಯ ರಾಜ

ಮಲ್ಲಿಗೆ ತರಲಿ ...

ಆನೆಯು ಚೆಂದ....

ಬಳ್ಳಿ ಆನೆ ಮರಿಯ ಕೈಯ ಮಗು ಚೆಂದ

ಬಳ್ಳಿ ರಾಜನ ತಂದು ಮೈ ನಂದೂ ನನ್ನ

ಹುಲಿಗೇ ಹುಲಿ ಚೆಂದ ಹುಲಿಯಾ ಮರಿ ಚೆಂದ

ಬಳ್ಳಿಯ ಹುಲಿಯ ಕೈಯ ಮಗು ಚೆಂದ

ವೈಜನೂತ ತಂದೂ ವೈ ನಂದೂ ನನ್ನ

ಕೈಯ ಮುಗಿದವಳೋ ಬಳ್ಳಿ ರಾಜನ ತಂದವೇ

ತಂದೇ ವೈ ನಂದೂ ನನ್ನ

ಒಳ್ಳೆ ಶಿವರಾಮ ಗುಟ್ಟಿದಾನೆ

ಶಿವಯೋಗದೊಳಗೀಗ

ಬಳ್ಳಿ ಶಿವ ಲೋಕದೊಳಗೆ ಬೆಳೆದುಂಟೆ

ವೈಜನೂತ ತಂದೂ ವೈ ನಂದೂ ನನ್ನ

ಶ್ರೀಗಂಗೆ ಹುಟ್ಟಿದವೇ ಅಂದಾಳು ಕಾಡಲೇ

ಶಿವಗಂಗೆ ಹುಟ್ಟಿದಂತೆ

ಶಿವಲೋಕದೊಳಗೆ ಬೆಳೆದುಂಟೆ

ಅಂದಾನು ಕಾದಾನು ವೈಜನೂತ

ತಂದೇವೈ ನಂದೂ ನನ್ನ

ಒಳ್ಳೇ ರಾಜನು ತಂದೇ ವೈ ನಂದೂ ನನ್ನ

ಶ್ರೀದೇವಿ ಹುಟ್ಟದಲ್ಲೇ ಅಂದಾನು ಕಾದಲೇ

ಅಂದಾನು ಕಾಡಲೇ ಬೆಳೆದುಂಟೆ

ಒಳ್ಳೆ ಹನ್ನೊಂದು ವರ್ಷಕ್ಕೆ ಬೆಳೆದಿದ್ದೆ

ಒಳ್ಳೆ ಜನೂತ ನಂದೂ ವೈ ನಂದೂ ನನ್ನ

ಒಳ್ಳೆ ರಾಜನು ಕಿಂದೇ ವೈ ನಂದೂ ನನ್ನ

**ಭಾವಾರ್ಥ** : ಜೇನುಕುರುಬರ ಹಿರಿಯರು ಈ ಹಾಡನ್ನು ಜೇನುಕುರುಬರ ನಿತ್ಯದ ಚಟುವಟಿಕೆ ಆಹಾರ ಸಂಗ್ರಹಣೆ ಮುಂತಾದವುವಳನ್ನು ಈ ಹಾಡಿನಲ್ಲಿ ತಿಳಿಸುತ್ತಾರೆ. ಕಾಡಿನ ಕೋಟೆಯ ಕಾಡಿನ ಆನೆಗಳ, ಹುಲಿಗಳ, ಚಲನ ವಲನ ಜೇನುಕುರುಬ ಹೆಣ್ಣು ಮಕ್ಕಳು ಹುಟ್ಟಿ ಬೆಳೆದು ವಯಸ್ಕರಾಗುವುದನ್ನು ಈ ಹಾಡಿನಲ್ಲಿ ತಿಳಿಸಿದ್ದಾರೆ (ಮಾ : ಪುಟ್ಟಮ್ಮ, ಆಲದ ಕಟ್ಟೆ ಹಾಡಿ).

**ಸಾಹಿತ್ಯ ೨.**ಅಜ್ಜಯ್ಯಾನ ಸುತ್ತಾಲೇ ಉಳಿಸಿಕೊಡಾಕು

ನಂಗ ತಾಯಿ ತಂದೆ ಬದುಕಿದುದನೇ ಬಿಟ್ಟು ಕೊಡಕು

ನಂಗ ತಾಯಿ ತಂದೆ ಬದುಕಿದುದನೇ ಬಿಟ್ಟು ಕೊಡಾಕು

ಕಾಡಿನ ಕಲ್ಲೊ ನಂಗ ದೇವರಾನು ಅಲ್ಲೆ

ಮರಗಿಡಾನೂ ಅಲ್ಲೆ

ನಂಗ ಜಮ್ಮಾನೂ ಅಲ್ಲೆ

ನಂಗ ಜಮ್ಮಾನೂ ಅಲ್ಲೇ ॥ ಪಲ್ಲವಿ ॥

**ಭಾವಾರ್ಥ** : ಈ ಹಾಡಿನಲ್ಲಿ ಜೆನುಕುರುಬರು ಕಾಡು ನಮ್ಮ ತಂದೆ ತಾಯಿ ಹುಟ್ಟುವುದು ಇಲ್ಲಿಯೆ ಸತ್ತರೂ ಇಲ್ಲೇ ಸಾಯುತ್ತೇವೆ. ಇಲ್ಲಿನ ಕಾಡಿನ ಮರ, ಗಿಡ ಕಲ್ಲುಗಳೇ ನಮ್ಮ ದೇವರುಗಳು ನಮ್ಮ ಅಜ್ಜಂದಿರು ಬಾಳಿ ಬದುಕಿದ ನೆಲೆಗಳಿವು ಇದನ್ನು ನಾವು ಇಲ್ಲೇ ಇದ್ದು ಉಳಿಸಿಕೊಳ್ಳಬೇಕು ಎಂಬುದನ್ನು ತಿಳಿಸಿದ್ದಾರೆ

**ಸಾಹಿತ್ಯ ೩.** ಅಲ್ಲಾ ಕಣಾ ಬಾವ ಕೂರಾನೇ

ಕೊಳೆಸೇಬು ಗಡಿಲು ಕೂರಾನೇ

ನೋಡಿ ನೋಡಿ ಎತ್ತಸ್ ಕೂರಾನೇ

ಕೊತು ಕೊತು ಎತ್ತನ್ ಕೂರಾನೇ

ನಿನ್ನ ಕಿಂದಿ ಪಟಾ ಪಟಾ ಕೂರಾನೇ

ನಿನ್ನ ಕಣ್ಣು ನೀಟಿ ನೀಟಿ ಕೂರಾನೇ

ಅಲ್ಲಾ ಕಣಾ ಭಾವ ಕೂರಾನೇ

ಕೂರ ಕುಂಯ್ಯ ಕೂಡುವ ಕೂರಾನೇ

ನಿನ್ನ ತಂಗೇ ನನ್ನಗ್ ಕೂರಾನೇ

ನನ್ನ ತಂಗೇ ನಿಂಗಗ್ ಕೂರಾನೇ

ನೋಡಿ ನೋಡಿ ಎತ್ತನ್ ಕೂರಾನೇ

ಬಗ್ಗಿ ಬಗ್ಗಿ ಎತ್ತನ್ ಕೂರಾನೇ

ದೊಡ್ಡ ಮೊಡ್ಡಿ ಕೂರ ಕೂರಾನೇ

**ಭಾವಾರ್ಥ** : ಒಂದು ಸಲ ಭಾವ ಮೈದುನರು ಕಾಡಿಗೆ ಹೋಗುತ್ತಿರುವಾಗ 'ಕೂರ' (ಕಾಡಿನಲ್ಲಿ ವಾಸಿಸುವ ಹಂದಿ ಜಾತಿಯ ಒಂದು ಪ್ರಾಣಿ) ಬೇಟೆಗೆ ಹೋಗೋಣ ಎಂದು ಮಾತನಾಡಿಕೊಂಡು ಹೋಗುತ್ತಾರೆ ಒಂದು ಸಣ್ಣ ಸೇಜಿನ ಮರದ ಕೆಳಗೆ ಅವಿತು ಕುಳಿತು ಈ ಹಾಡನ್ನು ಹೇಳಿದ್ದಾರೆ ಎಂದು ಹೇಳುತ್ತಾರೆ.

ಪ್ರಾಣಿ ಬೇಟೆಗೆ ಹೋದಾಗ ಅದರಲ್ಲೂ ಕೂಡ ಚಿಕ್ಕ (ಹಂದಿ) ಬೇಟೆಯಲ್ಲಿ ಗುಂಪು ಗುಂಪಾಗಿ ಇವರು ಹೋಗುತ್ತಾರೆ. ಜಿಲದಲ್ಲಿರುವ ಈ ಪ್ರಾಣಿಯನ್ನು ಬೇಟೆಯಾಡುವಾಗ ಈ ರೀತಿಯ ಪದಗಳಿಂದ ಹಾಡುಗಳನ್ನು ಹಾಡುತ್ತಾ ಬೇಟೆಯಾಡುತ್ತಾರೆ. ಅಂದರೆ ಬೇಟೆಯಲ್ಲಿ ಪ್ರಾಣಿ ತಪ್ಪಿಸಿಕೊಳ್ಳುವ ಸಂದರ್ಭ ಹೆಚ್ಚಿಸುತ್ತದೆ. ಆಗ ಆ ಕಡೆ ನೋಡು ಈ ಕಡೆ ನೋಡು ಎಂದು ಒಬ್ಬರಿಗೊಬ್ಬರು ಹೇಳುತ್ತಾ ಚಡಪಡಿಸುವ ಹಾಡು ಇದಾಗಿದೆ.

ಈ ರೀತಿಯಾಗಿ ಜೇನುಕುರುಬರು ಕಾಡಿನ ಒಡನಾಟವನ್ನೂ ಸಾಹಿತ್ಯದ ಮೂಲಕ ತಿಳಿಸುತ್ತಾರೆ. ಎಂತಹ ಸನ್ನಿವೇಶದಲ್ಲೂ ಹಿರಿಯರು ಇಲ್ಲೇ ಇದ್ದು ಗಂಜಿ ಕುಡಿದು ಉಸಿರು ಬಿಟ್ಟು ಹೋಗಿದ್ದಾರೆ. ಇಂತಹ ಹಿರಿಯರ ನೆಲೆಗಳಲ್ಲಿಯೇ ನಾವು ಜೀವನ ಸಾಗಿಸುತ್ತೇವೆಯೇ ವಿನಃ ಕಾಡಿನಿಂದ ಹೊರಗೆ ಹೋಗುವುದಾಗಲೀ ಕಾಡಿಗೆ ದ್ರೋಹ ಬಗೆಯುವುದಾಗಲಿ ಮಾಡುವುದಿಲ್ಲ. ಕಾಡಿನ ಕಲ್ಲು, ಮರಗಳನ್ನೇ ದೇವರೆಂದು ನಂಬಿಕೆ ಎಂಬುದನ್ನು ಬಲವಾಗಿ ನಂಬಿದವರು. ಇವರು ಹೀಗೆ ಇವರ ಸಾಹಿತ್ಯವನ್ನು ಗಮನಿಸಿದಾಗ ಕಾಡಿನ ಮತ್ತು ಜೇನುಕುರುಬರ ಅವಿನಾಭಾವ ಸಂಬಂಧ ಪವಿತ್ರವಾದುದು ಎಂಬುದು ತಿಳಿಯುತ್ತದೆ.

ಸಾಹಿತ್ಯ ೪ ಧೂಪ ಹಚ್ಚಿಸಕ್ಕೊ ದೇವರಿಗೂ ಆರತಿ ಬೆಳಗಾಕೂ

ನಂಗ ಪೂಜೆ ಮಾಡಕೂ ದೇವರುನೇ ವರವೇ ಬ್ಯಾಡಕೂ

ಈ ಕಾಡಲೇ ನಂಗ ಎಲ್ಲರೂ ಹುಟ್ಟಿನೂ ಓ ಓ ಓ

ಈ ಕಾಡಲೇ ನಂಗ ಎಲ್ಲರೂ ಬದುಕುನೋ ಓ ಓ ಓ॥ಪಲ್ಲವಿ॥

ನಾರಾಗಾಸನೂ ತಿಂದವರು ॥

ನಂಗ ತೂಡೇ ಜೇನನೂ ಕೀಯವರೂ ॥

ಬಾರಲು ನಣ್ಣ ಎಲ್ಲ ॥

ಐಗೊಲ್ಲಿ ಬರಗೂರು ರಾಶಿಗೂ ದೊಡ್ಡವರು

ಯಾಟೂಗಾರು ದೊಡ್ಡ ಸ್ವಾಮಿ ದಂಡು ಆಡಿದವರು ॥

ನಂಗ ಮಕ್ಕಮರಿನೆಲ್ಲಾ ಸಾಕವರು

ತಪ್ಪು ಮಾಡಿದವರಿಗೂ ಗುಂಡು ಇಡುವಾರು ॥

ಬಾರಲು ನಣ್ಣ ಎಲ್ಲ॥

ಸಟ್ಟಿಗದ್ದೆ ಲಕ್ಕಂದ ಸ್ವಾಮಿ ನಾಯಿಲೇ ಕಚ್ಚಾಸವರು

ಅಮ್ಮಾಳೆ ದೊಡ್ಡಸ್ವಾಮಿ ಆನೆಲು ತುಳಿಸುವರು ॥

ಯಾರುಗೂ ನಂಗೂ ಅಂಜಲೇಗ

ನಂಗ ಜಮ್ಮಾಲೇ ನಂಗ ಬುಡಲೇಗಾ

ಬಾರಲು ನಣ್ಣ ಎಲ್ಲ ॥

ಹಣ್ಣು ಕಾಯಿ ಊದುಬತ್ತಿ ನಂಗ ದೇವರಿಗೂ

ಸಾಂಬ್ರಾಣಿ ಕರ್ಪೂರ ನಂಗ ಸ್ವಾಮಿಗೂ

ಬೀಡಿ ಬಂಗಿಬತ್ತಿ ನಂಗ ಅಜಯ್ಯನಗೂ

ಎಲೆ ಅಡಿಕೆ ಹೊಗೆಸೊಪ್ಪು ನಂಗ ಅಜ್ಜಮ್ಮನಗೂ

ಬಾರಲು ನಣ್ಣ ಎಲ್ಲ ॥

**ಭಾವಾರ್ಥ** : ಈ ಸಾಹಿತ್ಯದಲ್ಲಿ ಜೇನುಕುರುಬರು ಅಜ್ಜಯ್ಯ ದೇವರಿಗೆ ದೀಪ ಹಚ್ಚಿ ಆರತಿ ಬೆಳಗುತ್ತಾ ನಾವು ಈ ಕಾಡಿನಲ್ಲಿ ಹುಟ್ಟಿ ಬೆಳೆದು, ಕಷ್ಟ, ದುಃಖ ಅನುಭವಿಸಿ ಬರೀ ಜೇನು ತಿಂದು ನಾರಾ ಗೆಣಸು

ತಿಂದು ಬದುಕಿದ್ದೆವು ಎಂದು ಹೇಳುತ್ತಾ, ಕುತ್ತಿ ಮನೆತನವಾದ ಐಗೊಲ್ಲಿ, ರಾಶಿ, ಬರಗೂರು, ಯಾಟಗಾರಸ್ವಾಮಿ ಎಲ್ಲರ ಗುಣಗಾನ ಮಾಡುತ್ತಾ, ಎಲ್ಲಾ ದೈವಗಳೂ ನಮ್ಮನ್ನು ನಮ್ಮ ಮಕ್ಕಳನ್ನು ಕಾಪಾಡಿದ್ದಾರೆ. ತಪ್ಪು ಮಾಡಿದ ಯಾರಿಗಾದರೂ ಈ ದೇವರು ಶಿಕ್ಷೆ ಕೊಡುತ್ತಾರೆ. ಎಂದು ಹೇಳುತ್ತಾರೆ. ಲಕ್ಕುಂದ ಸ್ವಾಮಿಯವರು ನಾಯಿಯಿಂದ ಕಚ್ಚಿಸುತ್ತಾರೆ. ಅಮ್ಮಾಳೆಯವರು ಆನೆಯಿಂದ ತುಳಿಸುತ್ತಾರೆ. ನಾವೂ ಯಾರಿಗೂ ಹೆದರುವುದಿಲ್ಲ ನಮ್ಮ ಅಜ್ಜ ಬಾಳಿ ಬದುಕಿದ ಕಾಡಿನ ಜಾಗವಾದ ಜಮ್ಮವನ್ನು ಬಿಡುವುದು ಇಲ್ಲ. ಎಂದು ಶಪತ ಮಾಡುತ್ತಾ ದೇವರಿಗೆ ಕರ್ಪೂರ ಪೂಜೆ ಹಿರಿಯರಾದ ಅಜ್ಜಯ್ಯ ಅಜ್ಜಮ್ಮನಿಗೆ ಎಲೆ, ಅಡಿಕೆ, ಹೊಗೆಸೊಪ್ಪು ಇಟ್ಟು ಪೂಜಿಸಿ ಎಲ್ಲರೂ ಹೊಂದಾಗಿ ಸೇರೋಣಾ ಎಂದು ಹಾಡುತ್ತಾರೆ.

**ಸಾಹಿತ್ಯ ೫**   ಮೋಜು ನೋಡಿರಣ್ಣಾ ಇವರ ಮೋಜು ನೋಡಿರಣ್ಣಾ

ಗಾಜಿನ ಮನೆಯಲ್ಲಿ ಕುಂತಿರುವ ಮಜವಾ ನೋಡಿರಣ್ಣಾ ॥ ಮೋಜು ॥

ಮಂತ್ರಿ ಪದವಿ ಕಿತ್ತುಕೊಂಡು ಮೆರೆಯುತ್ತಾರಲ್ಲೇ

ಇವರು ದೇಸದ ಮಾನ ನಾಸ ಮಾಡಿ ಬದುಕುತ್ತಾರಲ್ಲಾ ॥

ಮೋಜು ನೋಡಿರಣ್ಣಾ ಇವರ ಮೋಜು ನೋಡಿರಣ್ಣಾ

ಗಾಜಿನ ಮನೆಯಲ್ಲಿ ಕುಂತಿರುವ ಮಜವಾ ನೋಡಿರಣ್ಣಾ ॥

**ಭಾವಾರ್ಥ** : ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುವುದು, ಕಿರುಕುಳ ಕೊಡುವುದು, ಕಾಡಿನಲ್ಲಿ ಅಗತ್ಯವಿರುವ ನಾರು ಬೇರು, ಸೊಪ್ಪು, ಸೌದೆ ತರಲು ಹೋಗುವುದಕ್ಕೆ ಅಡ್ಡಿ ಪಡಿಸುತ್ತಾರೆ. ಪದೇ ಪದೇ ಈ ರೀತಿ ತೊಂದರೆ ಕೊಡುವುದರಿಂದ ಈ ಹಾಡು ರಚಿಸಿಕೊಂಡು ಸಂಘಟನೆಯಲ್ಲಿ ಪ್ರತಿಭಟನೆ ಸಂದರ್ಭದಲ್ಲಿ ಜೇನುಕುರುಬರು ಹಾಡುತ್ತಾರೆ.

**ಸಾಹಿತ್ಯ ೬**   ನಅಯ್ಯೋ ಓ ಓ ಓ

ಅಮ್ಮಾ ... ಅಮ್ಮಾ

ಎತ್ತು ಹೊತ್ತು ಸಾಕಿದೆ ನಾ ಅವ್ವೆ ನಾ ನನ್ನ ಮಗುವೇ

ನಿಂಗ ಅಪ್ಪ ಸತ್ತು ಹೋದಾಗ

ಗಂಜೀ ನೀರು ಕುಡಿಸಿ ಸಾಕೇನೇ

ಗಂಜಿ ನೀರು ಕುಡಿಸಿ ಸಾಕೇನೆ ॥

ಅಮ್ಮಾ ... ಅಮ್ಮಾ

ಸಾವು ಕಾರನ ಮನೇಲೂ ಕೂಲಿ ಕೆಲಸ ಮಾಡಿ

ಅರ್ಧ ಪಾವು ಅಕ್ಕಿ ತಂದು ಗಂಜಿ ನೀರು ಮಾಡಿ ಕುಡಿಸಿ

ಮೈಗೂ ಬಟ್ಟೆ ಇಲ್ಲಾದೆ ತುಂಡು ಬಟ್ಟೆ ಕಟ್ಟಗೆ ಕಟ್ಟಿ

ಕಷ್ಟ ಪಟ್ಟು ಸಾಕಿದೇ ನಾ

ಅವ್ವೆನಾ ನನ್ನಾ ಮಗನೇ

ನಿಂಗ ಅಪ್ಪ ಸತ್ತು ಹೋದಾಗ ಆ

ಗಂಜಿ ನೀರು ಕುಡಿಸಿ ಸಾಕೇನೇ ॥

ಅಮ್ಮಾ ... ಅಮ್ಮಾ

**ಭಾವಾರ್ಥ** : ಜೇನುಕುರುಬ ತಾಯಿಯೊಬ್ಬಳು ತನ್ನ ತಂದೆಯನ್ನು ಕಳೆದುಕೊಂಡ ಮಗುವಿಗೆ ಕಷ್ಟಗಳನ್ನು ಅನುಭವಿಸಲು ಸಾಧ್ಯವಾಗದೇ ಇದ್ದಾಗ ಆ ದುಃಖವನ್ನು ಈ ರೀತಿ ಹಾಡುತ್ತಾಳೆ. ಇದನ್ನೂ ಕೂಡ ತನ್ನ ಮಗುವಿನ ಮೇಲಿನ ಪ್ರೀತಿ ಬಾಂದವ್ಯಕ್ಕೆ ಮನದುಂಬಿ ಹಾಡಿರುವ ಸನ್ನಿವೇಶವನ್ನು ತಿಳಿಸುತ್ತದೆ.

ತನ್ನದೇ ಮಗುವನ್ನು ನೋಡುತ್ತಾ, ಕಣ್ಣೀರು ಸುರಿಸುತ್ತಾ, ನಿನ್ನ ಅಪ್ಪ ಸತ್ತು ಹೋದ ಮೇಲೂ ನಾನು ನಿನ್ನನ್ನು ಗಂಜಿ ನೀರು ಕುಡಿಸಿ ಬೆಳೆಸಲು ಎಷ್ಟೋಂದು ಕಷ್ಟ ಪಡಬೇಕಾಯಿತು. ಸಾವುಕಾರರ ಮನೆಯಲ್ಲಿ ಕೂಲಿ ಮಾಡಿ ಒಂದು ದಿನಕ್ಕೆ ಆಗುವಷ್ಟು ಅಕ್ಕಿ ತಂದು ಅದನ್ನು ಗಂಜಿ ಬೇಯಿಸಿ ಕುಡಿಸಿದ ಮೈಗೆ ಬಟ್ಟೆ ಇಲ್ಲದಾಗ ಪಟ್ಟ ಶ್ರಮವನ್ನು ನೆನೆಯುತ್ತಾ ಹೀಗೆ ಹಾಡಿದ ಹಾಡು ಇದು.

**ಸಾಹಿತ್ಯ ೭** ಮುತ್ತಿನಂತಾ ಮಗಳನೇ...

ನಾ... ಜೀತ ಕೆಲಸ ಕಳುಸಿ ಬುಟ್ಟೆ

ದೇವರಾಂತ ಮಗಳನೇ

ನಾ... ಒಡೆಯನ ಮನೆಗೆ ಕಳಿಸಿ ಬುಟ್ಟೆ

ಒಂದು ಏಟೂ ವೀಸೇಡು ಬಟ್ಟೆನೇ ಒಗೆಯ ಕ್ಕೂ

ಒಂದು ಏಟೂ ವೀಸೋಡೂ ಪಾತ್ರೆನೇ ತೊಳೆಯ ಕ್ಕೂ

ಒಂದು ತುತ್ತು ಕೂಳು ತನ್ನಲೇ

ಎದೆಗೇ ಒದಸಕ್ಕೂ ॥ ಮುತ್ತಿನಂತಾ ॥

ಮುತ್ತಿನಂತಾ ಮಗಳನೇ...

ನಾ... ಜೀತ ಕೆಲಸ ಕಳುಸಿ ಬುಟ್ಟೆ

ದೇವರಂತಾ ಮಗಳನೇ...

ನಾ... ಒಡೆಯನ ಮನೆಗೆ ಕಳುಸಿಬುಟ್ಟೆ

ಕೋಳಿ ಕೂಗದ ಎದ್ದೋಡು ಹಟ್ಟನೇ ಗುಡುಸಕ್ಕೂ ॥

ಹಟ್ಟಿ ಗುಡಿಸಿ ಆದ ಮೇಲೆ ಸಗಣಿ ತೆಗೆಯಾಕ್ಕೂ ॥

ಮುತ್ತಿನಂತಾ ಮಗಳನೇ...

ನಾ... ಜೀತ ಕೆಲಸ ಕಳುಸಿ ಬುಟ್ಟೆ

ದೇವರಂತಾ ಮಗಳನೇ...

ನಾ... ಒಡೆಯನ ಮನೆಗೆ ಕಳುಸಿ ಬುಟ್ಟೆ ॥

ಶಾಲೇನೇ ಬುಡಿಸಿ ಬುಟ್ಟೆ ಜೀತಕ್ಕೆ ಕಳಿಸಿದೆ ॥

ಅಪ್ಪಾ ಮಾಡಿದ ಸಾಲ ತೀರಿಸಲೇ

ಮಗ ದನಾನೇ ಮ್ಯಾಸಕ್ಕೂ ॥

ಮುತ್ತಿನಂತಾ ಮಗಳನೇ...

ನಾ... ಜೀತ ಕೆಲಸ ಕಳುಸಿ ಬುಟ್ಟೆ

ದೇವರಂತಾ ಮಗಳನೇ...

ನಾ... ಒಡೆಯನ ಮನೆಗೂ ಕಳಿಸಿ ಬುಟ್ಟೆ.

**ಭಾವಾರ್ಥ** : ಜೇನುಕುರುಬರು ಕಾಡಿನಲ್ಲಿ ವಾಸಿಸುವುದರಿಂದ ಎಸ್ಟೇಟ್ ಮಾಲೀಕರ ಕೆಲಸವನ್ನೂ ಮಾಡಬೇಕಾಗುವುದು ಕೊಡಗು ಜಿಲ್ಲೆಯಲ್ಲಿ ಕಂಡು ಬರುತ್ತದೆ. ಆಗ ಸಾಲ ಸೋಲ ಮಾಡಿ ಸಾಲ ತೀರಿಸಲು ಸಾಧ್ಯವಾಗದಿದ್ದಾಗ ಮಕ್ಕಳನ್ನು ಮಾಲಿಕರ ಬಳಿ ಕೆಲಸಕ್ಕೆ ಕಳುಹಿಸಬೇಕಾಗುತ್ತದೆ. ಅವರು ಕೊಟ್ಟ ಕಷ್ಟವನ್ನು ಅನುಭವಿಸಿ ಅಲ್ಲಿ ಕೆಲಸ ಮಾಡಬೇಕಾಗುತ್ತದೆ. ಅವರು ಹೊಡೆದರೆ ಸಹಿಸಿ ಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ಮಕ್ಕಳು ಕಷ್ಟ ಪಡುವುದನ್ನು ನೆನಪಿಸಿಕೊಂಡು ಈ ರೀತಿ ಹಾಡನ್ನು ಹಾಡಿದ್ದಾರೆ.

**ಸಾಹಿತ್ಯ ೮** ತೆನೆ ಭತ್ತ ಕುಟ್ಟಿ ತೆನೆ ಭೋಜಿ

ತಾನೀ ತಾನಾನಾ...

ತಾನಾನಾ... ಭೋಜಿ

ತಾನೀ ತಾನಾನಾ...

ಕುಂತರು ಗದ್ದೆಲೂ

ನಂಗ ನಾಟನೇ ಹಾಕಿತಿನೋ ॥ ತೆನೆ ॥

ಕಾಡು ತರತೊ ಬೈಲು ಮಾಡಿ ರಾಗಿನೇ

ಸಲ್ಲು ತಿನೋ ॥

ಕೂಳು ನೀರು ಕುಡಿಸಿ ಬುಟು

ನೀರು ಗೋತಿನೀ ॥

ನಾ ಬರುಗಂಟ ಅಕ್ಕಿ ಹಾಕಿ ಕೂಳು ಬೇಸಿಯು ॥

ಮಾವನೂ ಬಾವನೂ ಕೆಲಸಗೂ ತೆನೆ ಗದ್ದೆ ಬುಟ್ಟರೂ

ಟಿಂಬರು ತರತೂ ಸೌದೆ ತರುತು ಲಾಟುನೇ ಕಟ್ಟಿದರೂ ॥

ಬೆಳಗೆ ಎದ್ದು ಕೂಳು ಬೇಸಿದರೇ ನೀನು ಹೋಗಿಲೆ ॥

ಇವತ್ತು ದಿನದ ಕೂಲೀಲೇ ನಂಗಾ ಕಾಣುವೇ ॥

ವಾದಾರೇ ಹೋಗಾಲೀ ನಂಗಾ ಕೂಲಿ ತಾ ॥

ಇವತ್ತು ದಿನದ ಕೂಲೀನೇ ನಂಗಾ ಗದ್ದೇಲು ದುಡಿತಿನಿ ॥

ತಾನಾನಾ... ತಾನಾನಾ... ತಾನಾತಾನಾನಾ.

ಲಾಲಾ ಲಲಲಲಲ ಲಾಲಾಲಾ ಲಲಾಲಲಾ

**ಭಾವಾರ್ಥ** : ಕಾಡಿನಲ್ಲಿ ಗದ್ದೆಯನ್ನು ಬೆಳೆದರೆ ಭತ್ತವನ್ನು ಹುಲ್ಲಿನಿಂದ ಬೇರ್ಪಡಿಸಿ ಶುಚಿಗೊಳಿಸುವಾಗ ಜೇನುಕುರುಬರು ಈ ಹಾಡನ್ನು ಹಾಡಿದ್ದಾರೆ. ತೆನೆ ಭತ್ತ ಕುಟ್ಟಿ ಅನ್ನ ಮಾಡುತ್ತೇವೆ. ಕುಂತೂರು ಗದ್ದೆಯಲ್ಲಿ ನಾಟ ಮಾಡುತ್ತೇನೆ. ಕಾಡನ್ನು ಶುಚಿಗೊಳಿಸಿ ರಾಗಿ ಬೆಳೆಯುತ್ತೇನೆ ಎಂಬ ಹಾಡನ್ನು ಈ ರೀತಿ ಹಾಡಿದ್ದಾರೆ.

**ಸಾಹಿತ್ಯ ೯** ಕಾಡೂಲೇ ಹುಟ್ಟಿ ಬಂದವರೂ...

ನಂಗ ಜೇನುಕುರುಬರು

ಕಾಡೂಲೇ ಬೆಳೆದು ಬಂದವರೂ...

ಕಾಡಿನ ಮರವೇ ಮನೆಯೂ

ಕಾಡಿನ ಕಲ್ಲೇ ದೇವರು

ಕಾಡುನೇ ನಂಬೋಡೆ ಬದುಕೇನೋ...

ನಂಗಾ ಆದಿವಾಸಿಗಾ ಕಾಡುಲೇ ನಂಬೋಡೆ ಬದುಕೀನೇ ॥ ಕಾಡೂಲೇ ॥

ಓ ಓ ಓ ಓಓ ಓಆ ಆ ಆ ಆ ಆ ಆ

ಓಂದಿನ ಕಾಲಲೂ ನಂಗಾ ಗಾಸು ಗೆಡ್ಡೆನೆ ತಿಂದೇನು ಸೊಪ್ಪು ಸದೇನೆ ತಿಂದು

ಕಾಡುನೇ ನಂಬೊಡೆ ಬದುಕಿನೇ ನಂಗಾ ಆದಿವಾಸಿಗ

ಕಾಡುಲೇ ನಂಬೋಡೆ ಬದುಕೀನೋ ಕಾಡುನೇ ನಂಬೋಡೂ

ಹಿಂದಿನ ಕಾಲೂಲೇ ನಂಗಾ ಸೀಗೆಕಾಯಿ ತರ್ತೇನೋ

ಹಿಂದಿನ ಕಾಲೂಲೇ ನಂಗಾ ಅಂಟ್ವಾಳ ಕಾಯಿ ತೀತ್ತೀನೇ

ಇದು ನೆಲ್ಲಾ ಕೀದೇಡು ಸರಕಾರಗ ಕೊಡುತಿನೇ

ನಂಗಾ ಆದಿವಾಸಿ ಇದುನೆಲ್ಲಾ ಸರಕಾರಕೂ ಕೋಡುತ್ತೀನೋ... ॥

ಹಿಂದಿನ ಕಾಲುಲು ನಂಗ ಉಚ್ಚನ ಬೇಟೆಗೆ ಹೋಕಿನೋ

ಹಿಂದಿನ ಕಾಲುಲು ನಂಗ ಹಾರನ ಬೇಟೆಗೆ ಹೋಕಿನೋ

ಇಂಗ ಯಾಕ ವಾಗಲೂ ಬಿಡದಿಲೇ ಸರಕಾರದವರುಗು

ಇಂಗ ಯಾನ ತಪ್ಪು ಮಾಡೀನೋ ಈ ಸರಕರದವರುಗು

ಇಂಗ ಯಾನ ತಪ್ಪು ಮಾಡೀನೋ ॥

ಆ... ಆ... ಆ... ಓ... ಓ... ಓ...

ಕರಿರಾಯನ ಕುಂತರು ಕಲ್ಲು ಕಲ್ಲಳ ಹೊತ್ತೀನೋ

ಈಗ ಯಾಕ ವಾಗಲೂ ಬುಡದಿಲೇ

ನಂಗಯಾನ ತಪ್ಪು ಮಾಡೀನೋ ಈ ಅರಣ್ಯ ದವರುಗು

ಇಂಗ ಯಾನ ತಪ್ಪು ಮಾಡೀನೋ.

ಓ... ಓ... ಓ... ಆ... ಆ... ಆ... ॥

**ಭಾವಾರ್ಥ** : ಜೇನುಕುರುಬರು ಕಾಡಿನಲ್ಲಿ ಹುಟ್ಟಿ ಬೆಳೆದು ಜೀವಮಾನ ಸಾಗಿಸಿದವರು ಕಾಡಿನಲ್ಲಿನ ಮರವೇ ಮನೆಯಾಗಿತ್ತು, ಆಶ್ರಯ ತಾಣವಾಗಿತ್ತು. ಕಾಡಿನ ಕಲ್ಲೇ ದೇವರಾಗಿತ್ತು ಎಂದು ಅಜ್ಜಂದಿರು ಹೇಳಿದ ಮಾತನ್ನು ನಂಬಿ ಅವುಗಳಿಗೆ ಪೂಜಿಸುತ್ತಾ ಬದುಕಿದವರು. ಕಾಡಿನ ಗೆಣಸು, ಸೊಪ್ಪು ತಿಂದು ಬದುಕಿದವರು ಎಂದು ಹೇಳುತ್ತಾ ನಾವು ಇಲ್ಲೇ ಹುಟ್ಟಿ ಬೆಳೆದವರು ನಮ್ಮ ಮೂಲಸ್ಥಳದ ಬಗ್ಗೆ ಈ ಹಾಡಿನಲ್ಲಿ ತಿಳಿಸುತ್ತಾರೆ.

**ಸಾಹಿತ್ಯ ೧೦**

ಕಾಡೂ ಈ ಮೇಡೂ ಇದು ನಮ್ಮ ನಾಡು
ಮೇಡೂ ಈ ಕಾಡು ಇದು ನಮ್ಮ ನಾಡು
ಅಮ್ಮಳಮ್ಮ ಇರುವ ಕಾಡು
ಅಜ್ಜಯ್ಯನಾ ನೆಲೆಯ ಬೀಡು ॥ ಕಾಡೂ ॥
ನಮ್ಮೆಲ್ಲರ ಪುಣ್ಯ ಬೀಡು ನಾಗರಹೊಳೆ ಕಾಡು ॥
ಕಾಡೂ ಈ ಮೇಡೂ ಇದು ನಮ್ಮ ನಾಡು
ಮೇಡೂ ಈ ಕಾಡೂ ಇದು ನಮ್ಮ ನಾಡು
ಆನೆಗಳ ಹಿಂಡಿನಲ್ಲಿ, ಜಿಂಕೆಯ ಜಿಗಿತ ನೋಡಿ ॥
ಆನೆಗಳ ಹಿಂಡಿನಲ್ಲಿ ನವಿಲುಗಳ ನಾಟ್ಯ ನೋಡಿ ॥
ಜಿಂಕೆಯ ಜಿಗಿತ ನೋಡಿ ನಲಿದವರು ನಾವು
ನಲಿದವರು ನಾವು.
ಕಾಡೂ ಈ ಮೇಡೂ ಇದು ನಮ್ಮ ನಾಡು
ಮೇಡೂ ಈ ಕಾಡೂ ಇದು ನಮ್ಮ ನಾಡು.
ಕೋಗಿಲೆಯ ಗಾನ ಕೇಳಿ ಗಿಳಿಯ ಅಂದ ನೋಡಿ ॥
ಕೋಲಾಟ ಆಡೀಲೀ ಕುಣಿದವರು ನಾವು
ಕುಣಿದವರು ನಾವು
ಕಾಡೂ ಈ ಮೇಡೂ ಇದು ನಮ್ಮ ನಾಡು
ಮೇಡು ಈ ಕಾಡು ಇದು ನಮ್ಮ ನಾಡು ॥

**ಭಾವಾರ್ಥ** : ಈ ಹಾಡು ನಾಗರಹೊಳೆಯ ಕಾಡನ್ನು ಬಣ್ಣಿಸಿರುವುದಾಗಿದೆ, ಈ ಕಾಡು ನಮ್ಮದೆ, ಇಲ್ಲಿ ಅಜ್ಜಯ್ಯ, ಅಮ್ಮಾಳಮ್ಮ ನೆಲೆ ನಿಂತವರು. ಈ ಪುಣ್ಯಭೂಮಿಯಲ್ಲಿ ಹುಟ್ಟಿದ ನಾವೇ ಧನ್ಯರು. ಕಾಡಿನ ಸೊಬಗನ್ನು ಕಣ್ತುಂಬಿಕೊಂಡು, ಆನೆಗಳ ಹಿಂಡು, ಜಿಂಕೆಯ ಜಿಗಿತ, ನವಿಲಿನ ನಾಟ್ಯ, ಕೋಗಿಲೆಯ ಗಾನ, ಗಿಳಿಯ ತೊದಲು ಮಾತು ಕೇಳುತ್ತಾ, ಕುಣಿಯುತ್ತಾ ಈ ಕಾಡಿನಲ್ಲಿ ಬದುಕಿದ್ದೇವೆ. ಆನಂದದಿಂದ ಇದ್ದೇವೆ ಎಂದು ಹೇಳುತ್ತಾರೆ.

**ಸಾಹಿತ್ಯ ೧೧.** ಹಳ್ಳಿ ಪಳ್ಳಿ ಪಟ್ಟಣ ನಗರ ಸೇರಿದಾಗ ಡೆಲ್ಲಿ ॥ ಹಳ್ಳಿ ಪಳ್ಳಿ ॥

ಡೆಲ್ಲಿಲಿರೋ ದೊಡ್ಡಣ್ಣ ತಿರುಗಿ ನೋಡೋನೆ ಪಳ್ಳನೇ

ತಿರುಗಿ ನೋಡೋನೇ ಪಳ್ಳನೇ

ಹಳ್ಳಿ ಪಳ್ಳಿ ಪಟ್ಟಣ ನಗರ ಸೇರಿದಾಗ ಡೆಲ್ಲಿ,

ಡೆಲ್ಲಿಲಿರೋ ದೊಡ್ಡಣ್ಣ ತಿರುಗಿ ನೋಡೋನೇ ಪಳ್ಳನೇ

ತಿರುಗಿ ನೋಡುನೇ ಪಳ್ಳನೇ....

**ಭಾವಾರ್ಥ** : ಕಾಡಿನಿಂದ ಒಕ್ಕಲೆಬ್ಬಿಸುವ ಸಂದರ್ಭಗಳಲ್ಲಿ ಸರ್ಕಾರದ ನೀತಿಗಳಿಗೆ ಪ್ರತಿಭಟನೆಯಾಗಿ ಈ ರೀತಿಯಾದ ಹಾಡನ್ನು ಹಾಡುತ್ತಾರೆ. ಸರ್ಕಾರಗಲಿಗೆ ನಮ್ಮ ಬಗ್ಗೆ ಕಾಳಜಿ ಇಲ್ಲ. ನಮ್ಮ ಕಷ್ಟ ಸುಖದ ಕಡೆಗೆ ತಿರುಗಿ ನೋಡುವುದಿಲ್ಲ ಎಂಬುದನ್ನು ಈ ಹಾಡಿನಲ್ಲಿ ಹೇಳಿದ್ದಾರೆ.

**ಸಾಹಿತ್ಯ ೧೨** ಕಾಡೂಲುಕವೇ ತರತು

ಕಡೂಲು ಪಟ್ಟಿ ತರತು

ಕಡೂಲೇ ಹುಲ್ಲು ಕಿತ್ತೋಡು ಮನೆ ಕಟ್ಟಿನೋ ॥ ಕಾಡೂಲುಕವೇ ॥

ಅಜ್ಜಯ್ಯಾನ ಹೆಸರಲೇ ಪಟ್ಟಿ ತರತು

ಅಜ್ಜಯ್ಯಾನ ಜಮ್ಮಾಲೇ ಮನೆ ಕಟ್ಟಿನೋ

ನಂಗ ಅಜ್ಜಯ್ಯಾನ ಜಮ್ಮಾಲೇ ಮನೆ ಕಟ್ಟಿನೋ

ನಂಗ ಅಜ್ಜಯ್ಯಾನ ಜಮ್ಮಾಲೇ ಮನೆ ಕಟ್ಟಿನೋ

ಆ... ಆ... ಆ... ಓ... ಓ... ಓ... ॥

ಹಿಂಡಸು ಕಾಯಿ ಕಿದೋಡು, ಹಿಟ್ಟು ಬೇಸಿ ತಿಂದೋಡು ॥

ಕಾಸೂಹಿರುದು ಸುಟ್ಟೋಡು

ಒಂದೇ ಕಾಲು ಕೊಟ್ಟೋಡು

ಜೇನು ತುಪ್ಪ ಗಾಸು ಗಂಡೆ ಮುಳ್ಳೋಲು ಕೋಡೆ ತಿಂದೇನೋ ಭಾವ ॥

ಆ... ಆ... ಆ... ಓ... ಓ... ಓ... ॥

ಕಾಡೂಲುಕವೇ ತರತು

ಕಾಡೂಲ ಪಟ್ಟಿ ತರತು

ಕಾಡೂಲೇ ಹುಲ್ಲು ಕಿದ್ದು

ಮನೆ ಕಟ್ಟಿನೋ ॥

ದಿಂಡಾಲ್ ಮೇಣ ತೆಗೆದೋಡು

ಮತ್ತಿಕಾಯಿ ಕಿತ್ತೋಡು ॥

ನಗಾ ಕಟ್ಟಿ ಉದುರು ಪೋಡು

ಕಛೇರಿಗೆ ಕೊಡುತೀನೋ ॥

ಆ... ಆ... ಆ... ಓ... ಓ... ಓ... ॥

**ಭಾವಾರ್ಥ** : ಜೇನುಕುರುಬರು ಕಾಡಿನಲ್ಲಿ ಅವರ ಹಿರಿಯರು ಬಾಳಿ ಬದುಕಿದ ನೆಲೆಗಳಿಗೆ ತುಂಬಾ ಗೌರವ ಕೊಡುತ್ತಾರೆ. ಅದನ್ನು ಈ ಹಾಡಿನಲ್ಲಿ ಕಾಣಬಹುದಾಗಿದೆ. ಕಾಡಿನ ಹುಲ್ಲು ಕಿತ್ತುಕೊಂಡು ಬಂದು ಅಜ್ಜಯ್ಯನ ಹೆಸರಲ್ಲಿ ಅಜ್ಜಮ್ಮನ ನೆಲೆಯಲ್ಲಿ ಗುಡಿಸಲು ಕಟ್ಟುತ್ತೇವೆ. ಹಿಂಡಸಕಾಯಿ, ಜೇನು, ಗಾಸು ತಿಂದು ಇಲ್ಲೆ ಬದುಕುತ್ತೇವೆ. ಕಾಡಿನಲ್ಲಿ ಸಿಗುವ ಆಹಾರವನ್ನೇ ತಿಂದು ಬದುಕುತ್ತೇವೆ ಎಂಬುದನ್ನು ಹೀಗೆ ಹೇಳುತ್ತಾರೆ.

**ಸಾಹಿತ್ಯ ೧೩.** ಗಿಜಗಿಲಿಕ್ಕಿನ ಲಕ್ಕಿನ ಮರು

ಬಾರೆ ಗಿಜ್ಜಗಲೆ ॥ ಗಿಜಗಿಲಿಕ್ಕಿನ ॥

ನೋಡಿ ಪತ್ತೆ ಮಾಡೀನವ್ವ

ಬಾರೆ ಗಿಜ್ಜಗಲೆ ॥

ಏರೋಪ್ಲೇನು ದಾಟಿ

ನಮ್ಮ ದೇಶವನ್ನೇ ನೋಡಿ ॥

ನಾನಾನಾ... ಪೂಜೆ... ತನ್ನಿ ತನೋ...

ಗಿಜನಲಕ್ಕಿನ ಲಕ್ಕಿನ ಮರಕು

ಬಾರೆ ಗಿಜಗಲ್ಲೇ

ನೋಡಿ ಮಾಡಿ ಹೇಳ್ತೀನವ್ವ

ಬಾರೆ ಗಿಜ್ಜಗಲೆ ॥

**ಭಾವಾರ್ಥ** : ಜೇನುಕುರುಬರು ಪ್ರಾಣಿ ಪ್ರಿಯರು ಎಂಬುದು ಈ ಹಾಡಿನಲ್ಲಿ ತಿಳಿಯುತ್ತದೆ. ಗೀಜಗದ ಹಕ್ಕಿಯನ್ನು ಕುರಿತು ಈ ಹಾಡು ಹಾಡುತ್ತಾರೆ. ಗೀಜುಗದ ಚಿಲಿಪಿಲಿ ಹಾರಾಟ ಅದರ ಚಟುವಟಿಕೆಯನ್ನು ಅದರ ಹಾರಾಟದ ವೇಗವನ್ನು ಈ ರೀತಿಯಾಗಿ ಬಣ್ಣಿಸಿದ್ದಾರೆ.

**ಸಾಹಿತ್ಯ ೧೪** ಹೊತ್ತು ನೆತ್ತಿ ಬೆಳಿಗ್ಗೆ ಎದ್ದು ಕೈ ಕಾಲ್ ಮುಖ ತೊಳುದೋಡು

ಕತ್ತಿ ಎತ್ತೋಡು ಕಾಡುಗೋತಿನ ॥ ಹೊತ್ತುನೆತ್ತಿ ॥

ಹುಡು ಹುಡುಕಿ ಕಿತ್ತೋಡು ನಾರಗಾಸ ಅಗತೋಡು

ಗೋಣಿ ಬುಡಲು ಸುಟ್ಟೋಡು ತಿತ್ತೀನಾ

ಗೋಣಿ ಬುಡಲು ತುಪ್ಪವೇ ತಿತ್ತಿನಾ

ನಂಗ ಅಜ್ಜಯ್ಯ ಗೋಣಿ ಬುಡಲು ತುಪ್ಪವೇ ತಿತ್ತಿನಾ ॥

ಕಾಡುವೆಲ್ಲಾ ನೋಡೋಡು ಕಾಡುನೆಲ್ಲಾ ಬಳಸೋಡು

ಕಾಡುನಲ್ಲೇ ತಳಗಿಕೋತ್ತೀನಾ

ನಂಗ ಅಜ್ಜಯ್ಯ ಕಡುನಲ್ಲೇ ಮಲಗಿಕೋತೀನಾ ॥

ಹುಸುಕಟ್ಟಿ ಸುಳಿಕಟ್ಟಿ ದೊಡ್ಡಪಾಲ ಚಿಕ್ಕಪಾಲ

ಅಂತ ಆಳಿ ಹೆಸರು ಹಾಕೀನ ॥

ನಂಗ ಅಜ್ಜಯ್ಯ ಅಂತ ಆಳಿ ಹೆಸರು ಹಾಕಿನ

ನಂಗ ಅಜ್ಜಯ್ಯ ಅಂತ ಆಳಿ ಹೆಸರು ಹಾಕಿನ ॥

ಅಡವಣ್ಣು ತೂಮರಣ್ಣು ಸಾಗಡೆಹಣ್ಣು ನೇರಳೆಹಣ್ಣು ಕಿತ್ತು ತಿತ್ತಿನಾ

ನಂಗ ಅಜ್ಜಯ್ಯ ಕಿತ್ತು ತಿತ್ತಿನಾ ॥

ಅಡೆವಣ್ಣು ಸಾಗಡೆಹಣ್ಣು ನೇರಲೆಹಣ್ಣು ತೂಮರಣ್ಣು

ಮಕ್ಕ ಮರಿಗೂ ಕೀದೂ ತತ್ತಿನಾ

ನಂಗ ಅಜ್ಜಯ್ಯ ಮಕ್ಕ ಮರಿಗೂ ಕೀದೂ ತತ್ತಿನಾ ॥

ಕಾಡುನೆಲ್ಲಾ ಸುತ್ತೋಡು ಕಾಡುನೆಲ್ಲಾ ಬಳಸೋಡು

ಮರ ಮರವ ನೋಡು ಕೋಡು

ಮರಗೆಲ್ಲಾ ಹೆಸರು ಆಕಿನಾ

ನಂಗ ಅಜ್ಜಯ್ಯ ಮರಗೆಲ್ಲಾ ಹೆಸರು ಆಕಿನಾ

ತ್ಯಾಗ ಮರ ಹೊನ್ನೇಮಾರ ಬಿಟಿಮಾರ ಅಂತ ಆಳಿ

ಮರಗೆಲ್ಲಾ ಹೆಸರು ಹಾಕಿನಾ

ನಂಗ ಅಜ್ಜಯ್ಯ ಮರಗೆಲ್ಲಾ ಹೆಸರು ಹಾಕಿನಾ

ನಂಗ ಅಜ್ಜಯ್ಯ ಮರಗೆಲ್ಲಾ ಹೆಸರು ಹಾಕಿನಾ ॥

**ಭಾವಾರ್ಥ** : ಜೇನುಕುರುಬರು ಕಾಡಿನಲ್ಲಿ ಜೀವನ ಸಾಗಿಸುತ್ತಿರುವಾಗ, ಈ ರೀತಿ ತನ್ನ ಜೀವನದಲ್ಲಿ ಬದುಕಿದ ವಿಧಾನ, ಕಾಡಿನ ವರ್ಣನೆ, ಕಾಡಿನಲ್ಲಿ ಕೆಲಸ ಮಾಡುವುದನ್ನು ಹೀಗೆ ಹೇಳುತ್ತಾರೆ. ಹೊತ್ತು ನೆತ್ತಿಗೆ ಏರುವ ಮುನ್ನ ಅಂದರೆ ಸೂರ್ಯ ಹುಟ್ಟುವ ಮುನ್ನ ಬೇಗ ನಸುಕಿನಲ್ಲಿಯೇ ಎದ್ದು ಕೈ ಕಾಲು ಮುಖ ತೊಳೆದು ಕತ್ತಿಯನ್ನು ತೆಗೆದುಕೊಂಡು ಕಾಡಿಗೆ ಆಹಾರ ಹುಡುಕಲು ಹೋಗುತ್ತಾರೆ. ಅಲ್ಲಿ ಸಿಗುವ ನಾರಾಗಾಸು, ಜೇನುತುಪ್ಪ, ತಿನ್ನುವುದನ್ನು ನೆನಪಿಸಿಕೋಳ್ಳುತ್ತಾರೆ. ಕಾಡಿನಲ್ಲಿ ಕತ್ತಲೆಯಾದರೆ ಮರದ ನೆರಳಿನಲ್ಲಿಯೇ ಅಲ್ಲೆ ಮಲಗುತ್ತೇವೆ. ಕಾಡಿನ ಜಾಗಗಳಿಗೆ ನೆಲೆಗಳಿಗೆ ಹೆಸರನ್ನು ಕೊಟ್ಟುಕೊಂಡಿದ್ದಾರೆ.

ದೊಡ್ಡ ಪಾಲ, ಚಿಕ್ಕ ಪಾಲ ಹೀಗೆ ಹೆಸರು ಇಡುತ್ತೇವೆ. ಅಲ್ಲಿ ಸಿಗುವ ಹಣ್ಣುಗಳಾದ ಅಡವಣ್ಣು, ತೂಪರಣ್ಣು, ಸಾಗಟೆ, ನೇರಳೆ, ನೆಲ್ಲಿ, ಸೀಬೆ, ಮಾವು ತಿನ್ನುತ್ತೇವೆ. ಮಕ್ಕಳಿಗೆ ಹೆಂಡತಿಗೆ ತರುತ್ತೇವೆ. ಅಲ್ಲಿನ ಮರಗಳಿಗೆ ಹೊನ್ನೆ, ಬೀಟೆ, ತೇಗ ಮುಂತಾದ ಹೆಸರನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾ ಈ ಹಾಡನ್ನು ಹಾಡುತ್ತಾರೆ.

ಜೇನುಕುರುಬರು ಕಾಡಿನ ಪ್ರತಿಯೊಂದು ನೆಲೆಯ ಹೆಸರು, ಮರಗಳ ಹೆಸರು, ಸೊಪ್ಪು, ಸೌದೆಗಳ, ನಾರು ಬೇರಿನ ವಿವರವನ್ನು ತಿಳಿದುಕೊಂಡಿರುತ್ತಾರೆ. ಕಾಡಿನಲ್ಲಿ ಆಹಾರ ಸಂಗ್ರಹಿಸಲು ಬಳಸುವ ಕತ್ತಿಯನ್ನು ಯಾವಾಗಲು ತಮ್ಮ ಬಳಿ ಇಟ್ಟು ಕೊಂಡಿರುತ್ತಾರೆ. ಅದು ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ನೆರವಾಗುತ್ತದೆ. ಆಹಾರ ಸಂಗ್ರಹಣೆಗೂ ನೆರವಾಗುತ್ತದೆ. ಎಂಬುದನ್ನು ತಿಳಿಸುತ್ತದೆ.

ಹೀಗೆ ಜೇನುಕುರುಬರು ಕಾಡಿನಲ್ಲಿ ಜೀವಿಸುತ್ತಾ, ಕಾಡಿನ ಪ್ರತಿಯೊಂದು ಆಗು ಹೋಗುಗಳನ್ನು ನೋಡುತ್ತಾ, ನಲ್ಲಿಯುತ್ತಾ, ಸಾಕು ಪ್ರಾಣಿ ಪಕ್ಷಿಗಳೊಂದಿಗೆ ಸಹ ಜೀವನವನ್ನು ನಡೆಸುತ್ತಾ ಜೀವನವನ್ನು

ನಿರ್ವಹಿಸುತ್ತಾರೆ. ಕಾಡಿನ ಒಡನಾಟವೇ ಅವರ ಸಮಯವನ್ನು ನಿರಾಯಾಸವಾಗಿ ಕಳೆಯಲು ಸಹಕಾರಿಯಾಗಿರುವುದು. ಕಾಡೇ ಅವರ ಉಸಿರು ಎಂಬುದನ್ನು ಈ ಹಾಡಿನಲ್ಲಿ ತಿಳಿಯಬಹುದು.

ಹಬ್ಬ ಜಾತ್ರೆಗಳಲ್ಲಿ ತಮ್ಮದೇ ವಿಶಿಷ್ಟ ಹಾಡು, ನೃತ್ಯ, ಕೋಲಾಟದ ಮೂಲಕ ಮನರಂಜನೆಯನ್ನು ಹೊಂದುತ್ತಾ ಸಂತೋಷದಿಂದಲೇ ಕಾಲ ಕಳೆಯುತ್ತಾರೆ. ತಾವು ವಾಸಿಸುವ ಕಾಡಿನ ಬಾಂದವ್ಯ ಬಹಳವಿರುವುದರಿಂದ, ಕಾಡಿನ ಪ್ರಾಣಿ ಪಕ್ಷಿಗಳ, ಗಿಡ ಮರಗಳ ಜೊತೆಯ ಬಿಡಿಸಲಾರದ ನಂಟನ್ನು ಹೊಂದಿದ್ದು, ಸಾಮಾಜಿಕ ಬಲೆಯನ್ನು ಹೆಣೆದುಕೊಂಡು, ಪರಸ್ಪರ ಪ್ರೀತಿ, ಗೌರವಗಳೊಂದಿಗೆ ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

### ೪. ೫. ೨. ಕೋಲಾಟ

ನಾಗರಹೊಳೆ ಗದ್ದೆಹಾಡಿಯ ಜೆಟಿ ತಿಮ್ಮ ಭಾಗವತ, (೫೯ ವರ್ಷ) ಇವರ ಮಾಹಿತಿಯಂತೆ, ಬಿಶು ಹಬ್ಬದ ಸಂದರ್ಭದಲ್ಲಿ ಕೋಲಾಟವನ್ನು ಹಾಕುತ್ತಿದ್ದರು. ಈಗಲೂ ಆಡುತ್ತಾರೆ. ಈ ಹಿಂದೆ ಬಿಶು ಹಬ್ಬವು 'ದೇವೆಸಪ್ಪ' ಎಂಬ ದೇವರ ಹೆಸರಿನಲ್ಲಿ ನಡೆಸುತ್ತಿದ್ದರು. ಈಗಲೂ ಅದು ಮುಂದುವರೆದಿದೆ. ಈ ದೇವರು ಕೇರಳದಲ್ಲಿ ಇರುವುದರಿಂದ ಬಿಸುಹಬ್ಬದ ಐದು ದಿನ ಮುಂಚೆ ಕೇರಳ ರಾಜ್ಯದಲ್ಲಿ ಆದಿವಾಸಿಗಳು ಈ ಹಬ್ಬವನ್ನು ಮೊದಲು ಆಚರಿಸುತ್ತಾರೆ. ಬಿಶು ಹಬ್ಬದ ದಿನದಂದು ಕೇರಳದ ತಿರುನೆಲ್ಲಿ ಎಂಬ ಸ್ಥಳದಲ್ಲಿ ಕೋಲಾಟವನ್ನು ಹಾಡುತ್ತಾರೆ.

ಇಬ್ಬರು ಗಂಡಸರಿಗೆ ಅಲಂಕಾರ ಮಾಡುತ್ತಾರೆ. ಒಂದು ಗಂಡು ಹೆಣ್ಣಿನ ರೂಪ ಇನ್ನೊಂದು ಗಂಡಿಗೆ ದೇವರ ರೂಪದ ಅಲಂಕಾರ ಮಾಡುತ್ತಾರೆ. ಒಬ್ಬರಿಗೆ ಹೆಣ್ಣಿನ ವೇಷದ ಗಂಡಸಿಗೆ 'ಸೂಳೆ' ಎಂದೂ, ದೇವರ ವೇಷದ ಗಂಡಸಿಗೆ 'ಕೋಡಂಗಿ' ಎಂದು ಹೆಸರಿಡುತ್ತಾರೆ. ಅವರೇ ದೇವರೆಂದು ನಂಬಿ ಕೋಲಾಟವನ್ನು ಆಚರಿಸುತ್ತಾರೆ. ಇದರ ಜೊತೆಗೆ ಭಿಕ್ಷಾಟನೆಗೆ ಹೋಗುತ್ತಾ ಅದರಲ್ಲಿ ಕೋಲುಗಳನ್ನು ಹೀಗೆ ವಿಂಗಡಿಸುತ್ತಾರೆ.

ಮನೆ ಕೋಲು - I

ಮನೆ ಕೋಲು - II

ಮನೆ ಕೋಲು – III

ದೋಣಿ ಕೋಲು-I

ದೋಣಿ ಕೋಲು - II

ಕಿಸತಾರಿ ಕೋಲು

ದೇವಸಪ್ಪ ಕಟ್ಟಿಸಿದ ಬೀಡಿಗಿನ ಸವಡಲ್ಲ

ಕಂಬಗಳ ಎಂದು ತಲೆ ಉಂಟು ಕೋಲೆ ||ದೇವಸಪ್ಪ ||

ಕಂಬಗಳ ಎಂದು ತಲೆ ಉಂಟು ಅರಮನೆ

ರೆಂಟೆಗಳ ಎಂದು ಬೇಳಿ ಕಾಡಿ ಕೋಲೆ

ಕೋಲುವಿಯ್ಯ ಗಂಡು ಮಾತ್ರ ಬಾಗಿಲಿಗೆ ಬಂದರು

ರಾಯರು ದೊಡ್ಡಯ್ಯ ಹೊರಗಿಡ್ಡೆ ಕೋಲೆ

ರಾಯರು ದೊಡ್ಡಯ್ಯ ಹೊರಗಿಡ್ಡೆ ಹಿಳೆವ ||

ಇಳೆಯ ಕೊಟ್ಟು ಕಳಸಯ್ಯ ಕೋಲೆ

ಸೂಳೇರು ಆಡುವ ಸೋರಲು ಮಲ್ಲಿಗೆ

ಜೇಣೇರು ದೇವೆಸಪ್ಪ ಜೇನು ನಾಡು ಕೋಲೆ

ಜೇಣೇರು ದೇವೆಸಪ್ಪ ಜೇಣೇ ನಾಡಿ ಬರುವಾಗ ||

ಸಾವಿರ ಬಿಂದಿಗೆ ಬೇಳೆ ಕಾಡಿ ಕೋಲೆ

ನೆಲ್ಲಿಯ ಕಾಯುವುದು ಚೆಲ್ಲಿದರು ||

ಜಗಿಯ ದಸಳದ ಮಾವುತ ನೆನೆದಾಡು ಕೋಲೆ

ದಸಳದ ಮಾವುತ ನೆನೆದಾಡಿ ಬರುವಾಗ ಕೆಸಮತಿ ||

ಚನ್ನ ಬಸವನ ಕೋಲೆ

ಊರುಬಳಸಿ ಉಮ್ಮತ್ತು ಕೇರು ಬಳಸಿ

ಕೆಂಜೀಗೆ ಅರಮನೆ ಬಳಸಿ ಹೊಣ್ಣೆ ಕೋಲೆ

ಅರಮನೆ ಬಳಸಿ ಹೊರಗಿಣಿ ಗೌರಮ್ಮ ||

ನನಿಗೊಂದು ಬಳಸಿ ಪಲ್ಲಕ್ಕಿ ಕೋಲೆ

ಎಬೂನ ಹಳ್ಳದಲ್ಲಿ ಹಬ್ಬತ್ತು ನಮ್ಮ ಕೋಲೆ

ನಮ್ಮನೆ ಕೊಳಲು ಸವರಿದ್ದು ಕೋಲೆ

ನಮ್ಮನೆ ಕೋಲು ಕೊಳಲು ಸವರಿದ್ದು. ||

ನಂಜುಂಡಯ್ಯ ಒಂದೆರಡು ಜೋಡು ಕಲಿಸಯ್ಯ ಕೋಲೆ

ಒಕ್ಕಲೋದ ಮನೆಯಲ್ಲಿ ಮಕ್ಕಳು ಬೆಂದರಯ್ಯ

ಮಕ್ಕಳು ಮುತ್ತು ಮುಡಿಲೇರಿ ಕೋಲೆ

ಮಕ್ಕಳ ಮುತ್ತು ಮುಡಿಲೇರಿ ಕಟ್ಟಿಕೊಂಡು ||

ಚೆಲ್ಲುತ್ತಾ ಹೋದ ಕಟ್ಟಿಗೊಂಡು ಕೋಲೆ

ಸಾಲು ಸಂದ ಹೋಲುಕಣೀ ಕೋಲು ಕಟ್ಟಿಗೆ

ಧೀರಬಲ್ಲ ಸೀವೆಕಾಯಿ ಬಾರೋ ಮಲ್ಲಿಗೆ ||

ಸುಳಿ ಬಾಳೆ ತಾಳಿ ತಾಳಿರುವು

ತಬ್ಬರಿ ಕುಂಬಳ ಹಬ್ಬಿತು ಮನೆ ಮೇಲೆ

ತಬ್ಬರಿ ದಾಡಿ ತಾಳು ಬಾಡು ಸುವ್ವಿ

ತಬ್ಬರಿ ಬಾಡಿ ತಾಳುವಾಡಿ ದಾಳಿಂಬೆ ||

ದಾಳಿಂಬೆ ಮರ ನಲಿದಾಡಿ ಸುವ್ವಿ

ಅತ್ತಿಗೆ ಜೊತೆ ಕೋಲುವಿಲ್ಲ

ತಪ್ಪು ತಮ್ಮ ಉಜೇವಿಲ್ಲ

ಜಲಗರಿಕೆ ಏದು ಕಣೇ ಜಲಗಿರಿಕೆ ಭಾವ

ಭಾವ ಭಾವ ಎಂದರೇ ಬಾಯಿ ತುಂಬ ಕರೆದರೆ ||

**ಮನೆ ಕೋಲು** – II

ಕೋಲು ಮುತ್ತಿನ ಕೋಲೆಣ್ಣ ಕೋಲು ಚಿನ್ನಾರಿ ಕೊಲ್ಲೆಣ್ಣ

ಮಂದುಬಿದ್ದಾಯಿತೇ ಮುರಿಕೇರಿ ಆನೆ ಬಂದ ತೈಡೇ

ಸುಳಿದಾವ್ರೋ.... ಕೋಲು ಮುತ್ತಿನ ಕೋಲಣ್ಣಾ,

ಮೂವನಾ ಕೇಳಿ ಬಂದೇ ಕಡೇ ಅವ್ವ ಗುರುಗಂಡಜಿ ನಾ ಕೇಳಿ

ಒಂದೇ ಹೂವನಾ ಕೇಳಿ ನಾ ಬಂದಿ

ಪೂಲೆನೆಂಬುವ ವೆಂತವನೋ ಗುರು ಮಲ್ಲಿಗೆ ನೆಂತುವ

ನೆಂತುವನೊ

ಯಾರಯ್ಯೋ ಬಳೆಗಾರ ನೀ ಕೂರಯ್ಯ ಜಗದಲಿ

ತೂಡಿಸದ ಬಳೆವ ನೆಲ್ಲಿ ಏನಾ ಮಾಡಿಕೊಂಡೆ ಎಲ್ಲವಣ್ಣೆ

ದೊಡ್ಡವರು ದೊಡ್ಡವರು ಕೂಡಿ ಗುದ್ದಾಡಿ ಮಾಡಿ

ಬಳಿ ಹೊಡೆದಾವೋ ಯಾರಯ್ಯೋ ಬಲೆಗಾಂ

**ಮನೆ ಕೋಲು** – III

ಆರುವರೆಣ್ಣೆ ಆರುವರೆಣ್ಣೆ ಕಾಲುಗಗ್ಗರ ಕೋಲೆ

ವರುಷದ ದನಿವನ ಕೋಲೆ

ಧನಗಿನ ಬಿದ್ದು ಕೊಂಡು ಕೋಲೆ ದನಿ ಮಾಳಕ್ಕೆ

ಹೊರಟಾಳು ಕೋಲೆ

ಹೀಗೆ ಈ ಹಾಡನ್ನು ಕೋಲಿಗೆ ಏಟು ಹೊಡೆಯುತ್ತಾ ಹಾಡಿಗೆ ತಕ್ಕಂತೆ, ಕೋಲಲ್ಲಿ ತಾಳ ಹೊಡೆಯುತ್ತಾ ಈ ನೃತ್ಯವನ್ನು ಮಾಡುತ್ತಾರೆ.

ಈ ಕೋಲಾಟವನ್ನು ವರ್ಷಕ್ಕೊಮ್ಮೆ ಬಿಸುಹಬ್ಬದ ಸಂದರ್ಭದಲ್ಲಿ ಈ ಹಾಡನ್ನು ಹಾಡುತ್ತಾ ನೃತ್ಯದ ಜೊತೆಗೆ ಎಲ್ಲಾ ಹಾಡಿಗಳಿಗೆ ಹೋಗಿ ಭಿಕ್ಷೆ ಬೇಡುತ್ತಾರೆ. ಈ ಹಾಡು ಮತ್ತು ಕೋಲಾಟದ ಇತಿಹಾಸವನ್ನು ಯಾರು ತಿಳಿದಿರುತ್ತಾರೋ, ಅಂಥವರು ಹಾಡುತ್ತಾರೆ.

**ದೋಣಿ ಕೋಲು** – I

ಆಕಾಶಕ್ಕೆ ಹಾರದ್ ಹದ್ ನಮ್ಮ ಕೋಲುಗೆ ತುಂಬದ

ಮದ ಕೋಲುಗೆ ತಂದ ನುದ್ದ

ನಮ್ಮ ಲೋಲಿಗೆ ಲಜ್ಜಿನ ಚೀಲೀನೇ

ಕೋಲು ಸುದಂಬರಿ ಕೋಲೆ

ನಮ್ಮ ಕೋಲು ನೋಡುವಳ

ಬಾಲೆ ಕೋಲು ನೋಡುವಳ ಬಾಲೆ ನಮ್ಮ

ಲೋಲಿಗ ನೆಜ್ಜಿನ ಕೋಲೆ

ಆ ಮನೆ ಈ ಮನೆ ಸಂದಿ ನಮ್ಮ ಕರುಗಳ ಕಿಟ್ಟಲು
ಒನ್ನಿ ಕರುಗಳ ಕಟ್ಟಲು ಒನ್ನಿ ನಮ್ಮ ಲೋಲಿಗ ನೆಚ್ಚಿನ ಕೋಲೆ
ಅಡುಗೆ ಮಾಡುವುದು ಹುಚ್ಚು ನಮ್ಮ ಹುಡುಗಿಗೆ
ಹಿಡಿದಿದೆ.ಹುಚ್ಚು ಹುಡುಗೀಗೆ ಹಿಡಿದಿವೆ.
ಹುಚ್ಚು ನಮ್ಮ ಲೋಲು ನೆಚ್ಚಿನ ಕೋಲೆ

**ದೋಣಿ ಕೋಲು** – II

ಪುಟ್ಟ ಪುಟ್ಟ ರೊಟ್ಟಿ ಸುಟ್ಟು ಗಂಗಾಳಕ್ಕೆ ತುಪ್ಪ ಬಿಟ್ಟು
ಮೊಟ್ಟರೆ ಕರೆಯೋ ಎನ್ನವಳೇ
ಕೋಲು ಕೋಲ ನೀರೆ
ಆವಿನ ಕೋಲು ಕೋಲನೀರೆ
ಹಸವನು ಕಟ್ಟಿದ
ಕರವನು ಬಿಚ್ಚಿದ
ಹಸದಲಿ ಹಾಲು ಕರೆತಿದ್ದ
ಕೋಲು ಕೋಲು ನೀರೆ
ಊರ ಗೌಡನ ಮಗಳು ನೀರಿಗೆ ಹೋಗುವಾಗ
ಏರಿಕೆಳಗೆ ಒಬ್ಬ ಇಳಿಬಿದ್ದ
ಏರಿಕೆಳಗೆ ಒಬ್ಬ ಇಳಿಬಿದ್ದ ರಾಜನು
ಚೊಚ್ಚಲು ಮೀನಂಗೆ ಹೊರಳಾಡಿ
ಗದ್ದೀಯಾ ಕಲಯ್ಯಕ್ಕೆ ಗೌಡಿನ ವರಕೈರ
ಮುಂದಿನ ಉಂಗುರ ಚಲುವಯ್ಯ
ಕೋಲು ಕೋಲ ನೀರೆ

**ಕೋಲಾಟದ ಕುರಿತು ೧೨ ವಿಧಾನದಲ್ಲಿ ಹಾಡುಗಳಿವೆ**

೧. ಮನೆ ಕೋಲು

೨. ಒಳಗೆ ಬರಪರಿ ಕೋಲು

೩. ದೋಣಿ ಕೋಲು

೪. ನಾರಿಕೋಲು

೫. ಎರಂಗಡಿ ಕೋಲು

೬. ಅಡಕ್ಕೆ ಬಲಗ್ಗೆ ಕೋಲು

೭. ದರಡಿತಾರ ಕೋಲು

೮. ಅರುವಣಿಗ ಕೋಲು

೯. ಕೋಲಾಟ - I

೧೦. ಕುರುಮಂಜಿ ಕೋಲು

೧೧. ಕೋಲಾಟ - II

೧೨. ೧೨ನೇ ಕೋಲು

**ಮನೆ ಕೋಲು ಕುರಿತ ಹಾಡು**

ಕೋಲೋ ಕೋಲು ಕಟ್ಟಿಗೆ ಸ್ವಾಮಿ
ಕೋಲಯ್ಯ ಕೋಲು ಕಟ್ಟಿಗೆ
ಕೋಲುವಯ್ಯ ಗುಡುಮಕ್ಕಿ ಬಾಗಿಲಿಗೆ ಬಂದರು
ರಾಯರು ದೊಡ್ಡಯ್ಯ ಹೊರಗಿಣಿ ಕೋಲೆ
ರಾಯರು ದೊಡ್ಡಯ್ಯ ಹೊರಗಿಣಿ ಕೋಲೆ ||ಹಿಮ್ಮೇಳ||
ಹೊರಗಿದ್ದ ಇಳೇವ ಇಳೇಯಾ ಕೊಟ್ಟು
ಕಳಸಿಯನ್ನು ಕೋಲೆ
ಕೋಳಿಯ ಲಾಡುವ ಕೋರಲು ಮಲ್ಲಿಗೆ

ಜೇಕೇರು ದೇವರಪ್ಪ ಜೇನುನಾಡಿ ಕೋಲೆ

ಜೇಕೇರು ದೇವರಪ್ಪ ಜೇಣವಾಡಿ ಬರುವಾಗ ||

ಸಾಲೂರು ದಿಂಡಿಗೆ ಬೇಳಕಾರು ಕೋಲೆ

ನಿಂಬಿಯಾ ವನದಲ್ಲಿ ಹಬ್ಬಿತೋ ನಮ್ಮ ಕೋಲು

ನಮ್ಮಾಣೆ ಕೋರಲಸವರೆಡ್ಡು ಕಟ್ಟಕೊಂಡು

ಚೆಲ್ಲುಕ್ಕಾ ಹೋದ ರಾಜಮಂದ್ರೆ ಕೋಲೆ

ಬಿದ್ದ ಕೋಲು ಎತ್ತಲಾರೆ

ಬಿದಿರು ಕೋಲು ಹೊರಲಾರೆ

ಮುತ್ತಿನಂತ ಕೋಲು ಉಯ್ಯಲಾರ ಕೋಲೆ

ಮುತ್ತಿನಂತ ಕೋಲು ಉಯ್ಯುಲಾರೆ ಕೊರಲಾರೆ ||

ಪಟ್ಟದಲ್ಲಿ ಗೆದ್ದ ಪಗತಿಯ ಕೋಲೆ

ದೆವಸಪ್ಪ ಕಟ್ಟಿಸಿದ ಬಿರುನಲ್ಲ ಸವರಲ್ಲಿ

ಕಂಬಗಳುಂಟು ತಲೆಉಂಟು ಕೋಲೆ

ಕಂಬಗಳ ಉಂಟು ತಲೆಯಿಂದ ||

ಅರಮನೆ ರಾಟೆರ ಬೇಳೇಕಾರು ಕೋಲೆ

ದೇವಸಪ್ಪನ ದೋರಿಯಲ್ಲ ದೇವರ ಮಂದೆ

ಗುಡಿ ಮುಂದೆ ||

**ಒಳಗೆ ಬರಪರಿ ಕೋಲಿನ ಕುರಿತ ಹಾಡು**

ಕಿನ್ನರಿ ..... ಗೆಜ್ಜೆ ತೋಳೆತ್ತುವ

ಬರಪಲಸೇ ವಾಲು ಸಾಕುವಿರು ||ಹಿಮ್ಮೇಳ||

ಅಕ್ಕಿ ಬಾ ರುಕ್ಕ ಬರುವೇನು ತಾಯಿ .....

ತಂಗಿಯಾ ಕರೆದು ಬರುವೆನು

ಅಕ್ಕನ ಎಂಟು ತಾಳಾಡಿ ಮುಳುಗುವೇ

ಜಾಳಾನೇನಂತಿ ಏನತರಿ ಕೋಗುಲ
ಕೋಗುಲ ಕೋಗುಲ ಏನತರಿ ಕೋಗುಲ ||
ದಾದಿಗಳೋ ನಮ್ಮ ದತ್ತಿಗಳು
ಸೀರೆಗಳಪ್ಪನ ಸಿಂದಿಗಳೋ
ಭಾವ ಜೈವಗಳೋ ಭಾವನ ಸವಾರಿ ಜೈವಗಲೋ ||
ನಿಂಬೆ ಹುಟ್ಟಾಲಿ ಇಂಬಿ ಬೇಳಿಯಾಲಿ
ನಿಂದಿತಂದ ತೇರು ಎಳಿಯಾಲಿ
ಭಾವ ಜೈನಗಳೋ ಭಾವನ ಸವಾಲಿ ಜೈವಗಲೋ ||
ನಿಲ್ಲು ನಿಲ್ಲಯ್ಯ ರಾಜ ಗೀಜು ಕೂಳೆನ್ನುತ್ತಾರೆ
ಕಾತು ವಿತ್ತು ಮಲ್ಲೆ ತರುವ ನಿಲ್ಲಯ್ಯ ರಾಜ
ಭಾವ ಜೈವಗಲ್ಲೋ ||

**ದೋಣಿ ಕೋಲು ಕುರಿತ ಹಾಡು**

ಕೋಲು ಕೂಲಂಡಿಗೇ ಅವಿನ ಕೋಲು
ಕೋಲಾಂಡಿದೇ
ಚೆನ್ನಗಡಿ ತರಿಗೇ ಹೊಳೆದವ್ಗೆ ಬಿತ್ತಲೆ ಬೆನ್ನಡಿ
ಎರಡು ಗಿಣಿ ರಾಮು
ನಿಂಬಿಯಾ ವನವೂ ತಂದಾವೋ
ರಾಮಾಲೇ ಗಿಣಿರಾಮಾಲೇ ರಾಮಾಲೆಜ್ಜಾಡಿ... ರಾಮಾಲೇ
ಹಲಸಿನ ವನಕೆ ಹೋದಾವ ಗಿಳಿರಾಮು
ಹಲಸೀನಾ ಹೊಲವೂ....ತಂದಾವೂ
ಓಮ್ಮೆಳ ರಾಮಾರೇ ಗಿಣಿ ರಾಮಾಲೇ... ಜ್ಜಾಡಿ ರಾಮಾ
ರಾಮಾಲೇ ಗಿಣಿರಾಮಾಲೇ ರಾ.... ಮಾಲೆಜ್ಜಾಡಿ
ರಾ... ಮಾ... ಲೇ...

**ನಾರಿಕೋಲಿನ ಕುರಿತ ಹಾಡು**

ಬಲಿಯಾಕೋ ಕಲಿಯಾಕೋ ತೆಲಿಯಾಕು ನಾರಿ

ನಾರಿಕೇಳು ನಾರಿ ಮಾಡಲು ನಾರಿ

ಮುಂಡುಗಲ್ಲು ಸಾದೆವ್ವ ಮುರುದು ಮಾಚಿಯಕಿಟ್ಟಿ

ಮುಂಡುಗಂನ ಕುಸಿ ಸುಕ್ಕ ಸುಕ್ಕ ನಾರಿ ಹಿಮ್ಮೇಳ

ನಾರಿ ಕೇಳು ನಾರಿ ಮಾದವನಾರಿ

ಮುಕ್ಕುತ್ತಿ ಒತ್ತು ಮುಕ್ಕುತ್ತಿ ಎಲ್ಲೆ ಇರುವ ಮುಕ್ಕುತ್ತು

ಒಲಿಯಾಕು ತೆಲಿಯಾಕು ತೆಲಿಯಾಕು ಮಾರಿ

ನಾರಿ ಕೇಳು ದಾರಿ ಮಾದವ ನಾರಿ

**ಅಡಗೈ (ಎಡಗೈ) ಬಲಗೈ ಕೋಲಿನ ಕುರಿತು ಹಾಡು**

ಶರಣು ಶರಣುವರೇ ಗಣನಾಯಕ

ಸ್ವಾಮಿ ಶರಣು ಕಲ್ಯಾಣ ಪುರಿ ಗಣನಾಯಕ

ಹಾಲುಬೆಲ್ಲ ಹಾಲುಬೆಲ್ಲ ಗಣನಾಯಕ

ಅಡಗೈ ಬಲಗೈ ಗಣನಾಯಕ

ಶರಣು ಶರಣುವರೇ ಗಣನಾಯಕ

ಸ್ವಾಮಿ ಶರಣು ಕಲ್ಯಾಣ ಪುರಿ ಗಣನಾಯಕ

**ದಂಡಿಕಾರ ಕೋಲಿನ ಕುರಿತು ಹಾಡು**

ದಂಡಿಕಾರ ದಂಡಿಗಳೋ ಸ್ವಾಮಿ ದಂಡೆ

ಮುಚ್ಚಿನ ದಂಡಿಗಳೋ

ದಂಡಿನ ಕುದುರೆ ಸವಾರಿಗೋಯಿತು ದಂಡಿಕಾರ್

ದಂಡಿಗಳೋ

ದಂಡಿಕಾರ ದಂಡಿಗಳೋ ಸ್ವಾಮಿ ದಂಡಿ ||ಹಿಮ್ಮೇಳ||

ಮುಚ್ಚಿನ ದಂಡಿಗಳೋ

ದಂಡೆಕಾರ ದಂಡಿಗಳೋ ಸ್ವಾಮಿ ದಂಡೆ ಮುಚ್ಚಿದ ದಂಡಿಗಳೋ

ದಂಡೆಕಾರ ದಂಡಿಗಳೋ ಸ್ವಾಮಿ ದಂಡೆ ಮುಚ್ಚಿನ ದಂಡಿಗಳೋ

ಕೂಗುಕೂತು ಕೋಲು ಕೋರುವೋ ಹೆವ್ವ

ಮುಗಿದ ಬಾಲೇಶ ತೋಗ ಮುಚ್ಚ

ತುಮಕೇರಿ ಬಾಗ ಲೆತ್ತೀಗೇರ

ಬಾಗು ಬಾಗು ಹೊನ್ನೆ ಮರವೇ ನೆಲವೇ ಬಾಗು

ಜಾಜಿನ ಮಗಳ ಜೋಜಿನ ಕಂಬ

ನೆಲವೇ ಬಾಗು

ಒಲೆದು ಒಲೆದು ಕೋಲು ಸೋಕುವೋ

ದೆವ್ವ ಮಲಗಿದ್ದು ಬಾಲೇಶ ತೋಗು ಮುಚ್ಚು

ತುಮಕೇರಿ ಬಾಗಲೆತೀಗೇರ

ಬಾಗು ಬಾಗು ಹೊನ್ನೆಮರವೇ ನೋವೇ ಬಾಗು

ದಾಜಿನ ಮಗಳ ಜೂಜಿನ ಕಂಬ ನೆಲವೇ ಬಾಗು

ಒಲೆದು ಒಲೆದು ಕೋಲು ಸೋಂಡುವೋ

ದೆವ್ವ ಮಲಗಿದ್ದು ಬಾಲೇರ ತೋಗು ಮುಚ್ಚು

ತುಮಕೇರಿ ಬಾಗಲೆತಿಗೇಶ

ಬಾಗು ಬಾಗು ಹೊನ್ನೆ ಮರವೇ ನೆಲವೇ ಬಾಗು

ಡಾಜಿನ ಮಗಳ ಜೂಜಿನ ಕಂಬ ನೆಲವೇ ಬಾಗು

**ಆರುವಣಿಗೆ ಕೋಲಿನ ಕುರಿತು ಹಾಡು**

ಅರುವಣಿಗೆ ಅರುವಣಿಗೆ ಕಾಲುಗಗ್ಗರ ಕೋಲೆ

ವರುಷದ ದನಿ ನಮ್ಮಗ ಮ್ಯಾಲೆ ಹಿಮ್ಮೆಳ

ವರುಷದ ದನಿ ನಮ್ಮನ ಮ್ಯಾಲೆ  ಬಿಟ್ಟು

ಕೊಂಡು ಹೋರಾಟರೋ ಕೋಲೆ

ಕಾಲಿಗೇ ಸುಂಗೂರ ಕತ್ತೀಗೇಸುಂಗುರ ಕೋಲೆ

ವರುಷದ ದನಿ ನಮ್ಮದ ಮ್ಯಾಲೆ

ವರುಷದ ದನಿ ನಮ್ಮನ ಮ್ಯಾಲೆ ದನ ಬಂತು

ಏಳಿರಣ್ಣಾ ಕೋಲೆ

**ಕೋಲಾಟ ಕೋಲಿನ ಹಾಡು**

ಕೋರಣಿಗೆ ಭಾವ ಕೂರಾಣಿ

ಮುಂದಾಳಾದ ಭಾಗಿಲೆನಗ ಹಿಮ್ಮೆಳ ಕೊಣಗಿ

ನಿಂಗ ಮೋರೋದೇ ನಡಿನ ಕೊರಣಿ

ಕೋರ ಕಾಯ್ಯು ತಿನಕ ಕೊರಣಿ

ಕೋರುಮಂಜಿ ಕೋಲು

ಬಾರಲೋ ಬಾರಲೋ ಕುರುಮಂಜಿ ಬಾರಲೋ ಮಲ್ಲಿಗೆ ||ಹಿಮ್ಮೇಳ||

ಹಲಸಿನ ಮರದಡಿತ ಮಲಗಿದ ಮಲ್ಲಿಗೆ

ಹಿಮ್ಮೆಳ ಬಾರಯ್ಯೋ ಕುರಮಂಜಿ ಬಾರಲ್ಲೋ ಮಲ್ಲಿಗೆ

ನಮ್ಮ ಕೂರಂಬಿ ಎಲ್ಲಿಗೆ ಹೋದ ||

ಬಾರಲೋ ಕುರಮಂಜಿ ಬಾರಲೋ ಮಲ್ಲಿಗೆ ||

ಈ ಹಾಡನ್ನು ಬಿಸು ಹಬ್ಬದಲ್ಲಿ ಹಾಡುತ್ತಾರೆ. ಈ ಹಾಡನ್ನು ಹಾಡುವವರನ್ನು 'ಭಾಗವತ' ಎಂದು ಕರೆಯುತ್ತಾರೆ. ಅವರು ಹಾಡನ್ನು ಹಾಡುತ್ತ ಕೋಲಾಟ ನಡೆಸುತ್ತಾರೆ (ಮಾ : ಚಂದ್ರಪ್ಪ ಟಿ ಟಿ ಭಾಗವತ, ಕಡ್ಡಿ ಜೆ ಕೆ, ಮರಿ).

ಜೇನುಕುರುಬರಲ್ಲಿ ಪ್ರಚಲಿತವಿರುವ ಒಂದು ಪ್ರಮುಖ ಜನಪದ ಕಲೆ ಕೋಲಾಟ. ಆಟ ಗಳಲ್ಲಿಯೇ ಕಲಾತ್ಮಕವೂ ಜನಪ್ರಿಯವೂ ಆದ ಆಟವೆಂದರೆ ಕೋಲಾಟ. ಸುಗ್ಗಿಯ ಕಾಲದಲ್ಲಿ, ಹಬ್ಬ ಹರಿದಿನಗಳಲ್ಲಿ, ಇರುಳು ಬೆಳದಿಂಗಳಿನಲ್ಲಿ ಈ ಆಟ ಆಡುತ್ತಾರೆ. ಈ ಆಟ ಕಣ್ಣಿಗೆ ಹಬ್ಬ, ಕಿವಿಗೆ ಇಂಪು ಕೊಟ್ಟು ಉಲ್ಲಾಸಕರವೂ, ಆನಂದದಾಯಕವೂ ಆದ ಆಟ. ಹುಡುಗರಿಂದ ಮುದುಕರವರೆಗೆ ಪ್ರಿಯವಾದುದು. ಆಟದ ಸಾಮಾನುಗಳೆಂದರೆ ಕೋಲುಗಳು, ಕೋಲುಗಳ ಮೂಲಕವೇ ಆಟ ವಿವಿಧ ಭಂಗಿಯಲ್ಲಿ ಸಾಗುವುದರಿಂದ ಇದಕ್ಕೆ ಕೋಲಾಟವೆಂದು ಕರೆಯುತ್ತಾರೆ. ಕೋಲುಗಳನ್ನು ನೀರಗಂಜಿ ಮರದಿಂದ ಮಾಡಿರುತ್ತಾರೆ.

ಬೇಸಿಗೆಯ ದಿನಗಳನ್ನು ವಿಶೇಷವಾಗಿ ದೇವರ ಹಬ್ಬಗಳನ್ನು ಆಚರಿಸುವುದಕ್ಕೆ ಆಯ್ಕೆ ಮಾಡುವ ಹಿನ್ನೆಲೆಯಲ್ಲಿ ವೈಯಕ್ತಿಕ ಅನುಕೂಲಗಳು ಹಾಗೂ ಹವಾಮಾನದ ಅನುಕೂಲಗಳು ಸೇರಿಕೊಳ್ಳುತ್ತವೆ. ಅಂದರೆ ಮಳೆಗಾಲ ಬರುವ ಮುಂಚೆ ಈ ಕುಣಿತ ಜರುಗುತ್ತದೆ. ಅಂದರೆ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ, ಬರುವ ನೆಂಟರು ಇಳಿದುಕೊಳ್ಳಲಿಕ್ಕೆ ಹಾಗೂ ಇವುಗಳನ್ನು ವೀಕ್ಷಿಸಲು ಅನುಕೂಲವಾಗಲಿ ಎಂಬ ಯೋಚನೆ ಸಹಜವಾಗಿಯೇ ಬುಡಕಟ್ಟು ಜನರ ಈ ಆಯ್ಕೆಗೆ ಒಂದು ಅರ್ಥವನ್ನು ಕೊಡುತ್ತದೆ.

ವರ್ಷವೆಲ್ಲ ಶ್ರಮಗೈದು ಜನವರಿ-ಫೆಬ್ರುವರಿ-ಮಾರ್ಚ್ ತಿಂಗಳ ವೇಳೆಗೆ ಅಂದರೆ ಬೇಸಗೆಯ ದಿನಗಳು ದೇವರ ಹಬ್ಬ ನಡೆಯುವ ಸಂದರ್ಭದಲ್ಲಿ ತಮಗೆ ಪ್ರೀತಿಪಾತ್ರರಾದವರ ಹೆಸರು ಹೇಳುತ್ತಾ ಕೋಲು ಹುಯ್ಯುವುದು. ನಿಜಕ್ಕೂ ಅವರಿಗೆ ದೈಹಿಕ ಶ್ರಮದ ಆಯಾಸವನ್ನು ಮರೆಯಿಸಿ ಮಾನಸಿಕ ಸಂತೋಷವನ್ನು ತಂದುಕೊಡುವ ಒಂದು ಸುಸಂದರ್ಭವಾಗಿದೆ. ಜೇನುಕುರುಬರು ಬಿಸು-ಸಂಕ್ರಾಂತಿ ಹಾಗೂ ಯುಗಾದಿಯ ವೇಳೆಗೆ ತಮ್ಮಲ್ಲೇ ಎಂಟು ಅಥವಾ ಹತ್ತು ಜನರು ಸೇರಿ ಗುಂಪುಗಳಾಗಿ ವಿಂಗಡಿಸಿಕೊಂಡು ಸುಮಾರು ಒಂದು ವಾರದವರೆಗೂ, ಪ್ರತಿದಿನ ವಿವಿಧ ಬಣ್ಣವನ್ನು ಹಾಕಿಕೊಂಡು, ವೇಷಭೂಷಣವನ್ನು ತೊಟ್ಟುಕೊಂಡು ಒಬ್ಬ ಕೋಡಂಗಿ ವೇಷಧಾರಿ ಹಾಗೂ ಸೂಳೆ ವೇಷಧಾರಿಯೊಂದಿಗೆ ವಿವಿಧ ಬಣ್ಣಗಳಿಂದ ಸಿಂಗಾರ ಮಾಡಿದ ಕೋಲುಗಳನ್ನು ಹಿಡಿದು ವೃತ್ತಾಕಾರದಲ್ಲಿ ಕುಣಿಯುತ್ತಾ ಕೋಲು ಹುಯ್ಯುವ ದೃಶ್ಯ ನೋಡುವವರ ಕಣ್ಣಿಗೆ ಆನಂದವನ್ನು ಕೊಡುತ್ತದೆ. ಪ್ರತಿಯೊಬ್ಬರು ಒಬ್ಬರ ಕೋಲಿಗೆ ಮತ್ತೊಬ್ಬರ ಕೋಲನ್ನು ತಾಕಿಸುತ್ತಾ ಸುತ್ತುವುದು ಆಕರ್ಷಣೀಯವಾಗಿರುತ್ತದೆ. ಕೋಲಾಟ ನೃತ್ಯ ಜನಪದ ಕಲೆಯಾದರೆ, ಕೋಲಾಟದ ಕೋಲು ಪದಗಳು ಜನಪದ ಸಾಹಿತ್ಯದಲ್ಲಿ ಬರುತ್ತವೆ. ಕೋಲಾಟದಲ್ಲಿ ಕೋಲುಗಳೇ ಪ್ರಧಾನವಾಗಿರುವದರಿಂದ ಹಾಡು ನೃತ್ಯ ಹಾಗೂ ವೇಷಭೂಷಣವೂ ಇದರಲ್ಲಿ ಸೇರಿರುವುದರಿಂದ ಈ ಕಲೆಗೆ ಮತ್ತಷ್ಟು ಶೋಭೆ ಬಂದಿದೆ. ವಿವಿಧ ಹೆಸರಿನಲ್ಲಿ ಈ ಕೋಲಾಟದ ಪದಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರಕಿವೆ. ದೇವರ ಕೋಲು, ಅಕ್ಕಮ್ಮ ಚಿಕ್ಕಮ್ಮ ಕೋಲು, ನೀರು ತೆಗೆದುಕೊಂಡು ಬರುವ ಕೋಲು ಇತ್ಯಾದಿ.

### ೪. ೫. ೩. ಕಥೆಗಳು

ಜೇನುಕುರುಬರಲ್ಲಿ ಹಾಡುಗಳಷ್ಟೇ ಅಲ್ಲದೇ ನಾಟಕ, ಕಥೆಗಳೂ ಪ್ರಾಮುಖ್ಯತೆಯನ್ನು ಪಡೆದಿದೆ. ಇವುಗಳು ಪರಂಪರಾಗತವಾಗಿ, ಮೌಖಿಕವಾಗಿ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಬಂದಿದೆ.

ಕಥೆ ೧.

ಜೇನುಕುರುಬರು ಪ್ರತಿದಿನ ಸಾಮಾನ್ಯವಾಗಿ ಬೆಳಗಿನ ಜಾವ ನಾಲ್ಕು ಗಂಟೆಗೆ ಏಳುತ್ತಾರೆ. ಮೊದಲಿಗೆ ಕಾಡುಕೋಳಿ, ಕಬುಟ ಪಕ್ಷಿ ಕೂಗು ಕೇಳಿಸುತ್ತದೆ. ಅವಕ್ಕೆ ಕಣ್ಣು ಕಾಣುವುದಿಲ್ಲ. ನಂತರ ಗೂಬೆ, ನವಿಲುಗಳು ಕೂಗುತ್ತವೆ.

ಜೇನುಕುರುಬರಲ್ಲಿ ದೂರದ ಹಾಡಿಗಳಲ್ಲಿ ಸಾವು ಸಂಭವಿಸಿರುವ ದಿಕ್ಕಿಗೆ ಆಳುಕೂಗು ಪಕ್ಷಿ ಸತತವಾಗಿ ಕೂ... ವ್... ಕೂ... ವ್..... ಕೂ... ವ್... ಕೂ... ವ್ ಎಂದು ಕೂಗುತ್ತದೆ. ಆ ದಿಕ್ಕಿನಲ್ಲಿ ಸಾವು ಸಂಭವಿಸಿರುತ್ತದೆ. ಸಾವಿನ ಮಾಹಿತಿಯನ್ನು ಈ ಪಕ್ಷಿ ಸಾಂಕೇತಿಕವಾಗಿ ಸೂಚಿಸುತ್ತದೆ ಎಂದು ಹೇಳುತ್ತಾರೆ. ಹಿಂದೆ ನಮ್ಮ ತಾತ ಮುತ್ತಾತಂದಿರು ಆ ಪಕ್ಷಿ ಕೂಗಿದ ಕಡೆಗೆ ಬೀಡಿಯೊಂದನ್ನು ಎಸೆಯುತ್ತಿದ್ದರು. ಆಗ ಆ ಪಕ್ಷಿ ಬಂದು ಎಸೆದ ಬೀಡಿಯನ್ನು ತೆಗೆದುಕೊಂಡು ಹೋಗುತ್ತಿತ್ತು. ಅದಕ್ಕೆ ಒಂದು ಕಥೆಯೇ ಇದೆ.

ಏಳು ಜನ ಜೇನುಕುರುಬರ ಅಣ್ಣ ತಮ್ಮಂದಿರಿದ್ದರು, ಏಳನೇ ತಮ್ಮನ ಹೆಂಡತಿ ಅತಿ ಸುಂದರಿ ಎಲ್ಲ ಭಾವಂದಿರಿಗೂ ಅವಳ ಮೇಲೆ ಆಸೆ ಇತ್ತು. ಹೇಗಾದರೂ ಮಾಡಿ ಅವಳನ್ನು ಹೆಂಡತಿಯಾಗಿ ಪಡೆಯಬೇಕು ಎಂದು ಮೊದಲ ಆರು ಜನ ಅಣ್ಣಂದಿರು ಒಂದು ಯೋಜನೆ ಮಾಡಿ ಏಳನೇ ತಮ್ಮನನ್ನು ಜೇನುಕುಯ್ಯಲು ಕರೆದುಕೊಂಡು ಹೋಗುವುದಾಗಿ ಯೋಚಿಸುತ್ತಾರೆ. ಮಾರ್ಗ ಮಧ್ಯದಲ್ಲಿ ಒಂದು ಮುಳ್ಳಂದಿಯ ದೊಡ್ಡ ಬಿಲ ಇರುತ್ತದೆ. ತಮ್ಮ ಈ ದೊಡ್ಡ ಬಿಲದಲ್ಲಿ ಸಾಕಷ್ಟು ಮುಳ್ಳಂದಿಗಳಿವೆ. ನೀನು ಮೊದಲು ನುಗ್ಗಿ ಒಳಗೆ ಹೋಗಿ ಮಾಂಸವನ್ನು ಎಳೆದು ಹೊರಗೆ ಹಾಕು. ನಾವು ತೆಗೆದುಕೊಳ್ಳುತ್ತೇವೆ. ಎಲ್ಲರೂ ಮಾಂಸದ ಊಟ ಮಾಡಿ ಮುಂದೆ ಹೋಗೋಣ ಎಂದರು. ಏಳನೇ ತಮ್ಮ ಒಪ್ಪಿಗೆ ನೀಡಿದನು. ಆಗ ಎರಡು ಮೂರು ಜನ ಒಂದು ಕಡೆ ಬಿಲದ ದ್ವಾರಕ್ಕೆ ದರ್ಬೆ ಹುಲ್ಲು ಕಸಕಡ್ಡಿ ತುರುಕಿ ಬೆಂಕಿ ಹಚ್ಚಿದರು. ಮುಳ್ಳಂದಿ ಸಾಯಲಿ ಎಂದು ಮತ್ತೊಂದು ಕಡೆ ಎರಡು ಮೂರು ಜನ ನಿಂತರು. ಮಾಂಸವನ್ನು ಎಳೆದು ಕೊಂಡು ಏಳನೇ ತಮ್ಮನನ್ನು ಬಿಲದೊಳಗೆ ಸಿಲುಕಿಸಿದರು. ಏಳನೇ ತಮ್ಮ ಒಳಗೆ ಹೋದ ಮೇಲೆ ಮೇಲಿನಿಂದ ಎಲ್ಲರೂ ಮಣ್ಣನ್ನು ಮುಚ್ಚಿದರು. ಹೊಗೆಗೆ ಸಾಯಲಿ ಎಂದು ಅಷ್ಟು ಮಾಡಿ ಮನೆಗೆ ಆರು ಜನ ಬರುತ್ತಾರೆ. ಏಳನೇ ತಮ್ಮನ ಹೆಂಡತಿ ಭಾವಂದಿರಿಗೆ ನನ್ನ ಗಂಡ ಎಲ್ಲಿ ಎಂದು ಕೇಳಿದಾಗ ಭಾವಂದಿರು ನಮಗೆ ಗೊತ್ತಿಲ್ಲ. ನಿನ್ನ ಗಂಡ ಬರುವುದಿಲ್ಲ. ಬಂದು ನನ್ನ ಕಾಲು ತೊಳೆ ಇಂದಿನಿಂದ ನಾವೇ ನಿನ್ನ ಗಂಡಂದಿರು ಎಂದು ಒಟ್ಟೊಟ್ಟಾಗಿ ಎಲ್ಲರೂ ಹೇಳುತ್ತಾರೆ. ಆದರೆ ಅವಳು ಒಪ್ಪುವುದಿಲ್ಲ. ಬಿದಿರಿನ ಕೊಟ್ಟದಲ್ಲಿ ಅನ್ನ ಮಾಡಿ ಬುತ್ತಿ ತೆಗೆದುಕೊಂಡು ಭಾವಂದಿರು ಹಿಂದಿರುಗಿದ ದಾರಿ ಹಿಡಿದು ಹೋಗುತ್ತಾಳೆ.

ಮಾರ್ಗ ಮಧ್ಯೆ ಬಿಲದಲ್ಲಿ ಹೊಗೆ ಬರುತ್ತಿತ್ತು. ಮರಳನ್ನು ನೇವರಿಸಿ ಗಂಡ ಹೊರ ಬಂದು ಬಿದ್ದಿರುವುದನ್ನು ನೋಡುತ್ತಾಳೆ. ಅವನಿಗೆ ಆರೈಕೆ ಮಾಡಿ ಇಬ್ಬರೂ ದೂರ ಹೋಗುತ್ತಾರೆ. ಒಂದು

ದೊಡ್ಡ ಮರದ ಕೆಳಗೆ ದೊಡ್ಡ ಬಂಡೆ ಇರುತ್ತದೆ. ಬಂಡೆಯ ಸಂದಿಯಲ್ಲಿ ಅವರಿಬ್ಬರೂ ವಾಸ ಮಾಡುತ್ತಾರೆ. ಮತ್ತೆ ಆರು ಜನ ಅಣ್ಣಂದಿರು ದೊಡ್ಡ ಮರದಲ್ಲಿರುವ ಜೇನು ಕುಯ್ಯಲು ಬರುತ್ತಾರೆ.ಇವರು ಅಲ್ಲಿ ವಾಸ ಮಾಡುವುದನ್ನು ನೋಡಿ ತಮ್ಮ ಈ ಮರದಲ್ಲಿ ಜೇನು ಜಾಸ್ತಿ ಇದೆ. ಅಲ್ಲಿಗೆ ಹೋಗೋಣ ಒಂದು ದಿನ ಬರುತ್ತೇವೆ ಎಂದು ಹೇಳಿ ವಾಪಸ್ ಹೋಗುತ್ತಾರೆ.

ಏಳನೇ ತಮ್ಮ ತನ್ನ ಹೆಂಡತಿಗೆ ಈ ಆರು ಜನ ಅಣ್ಣಂದಿರು ನನ್ನ ಬಿಡುವುದಿಲ್ಲ. ನೀನು ನಿಮ್ಮ ಅಪ್ಪ ಅಮ್ಮನ ಮನೆಗೆ ಹೋಗು ಕೆಂಚಿ ಎಂದು ಹೇಳಿ ಕಡವೆಯನ್ನು ಕುದುರೆ ಮಾಡಿ ನಾಗರಹಾವು ಓಡಿದು ಕಡೆವೆಗೆ ಜೇನು ಜಿಗಿದು ಕಟ್ಟಿ ಅದರ ಮೇಲೆ ಕೆಂಚಿಯನ್ನು ಕೂರಿಸಿ ಅವರ ತಂದೆ ಮನೆಗೆ ಕಳುಹಿಸುತ್ತಾನೆ. ಈ ಕಡೆ ಅವನಿಗೆ ಜ್ವರ ಬಂದು ಕಣ್ಣು ಬಾತು ಕೊಂಡಿರುತ್ತದೆ. ಈಗಲೂ ಆ ಪಕ್ಷಿ ಆಳುಕೂಗು ಜ್ವರ ಬಂದಾಗಲೆ ಕೂಗುವುದು. ಅಣ್ಣಂದಿರು ಬಂದು ಏಳು ಕಂಡಿಗ ಹಗ್ಗ ಕಟ್ಟಿ ಏಣಿ ಹಾಕಿ ನೂರಾಒಂದು ಕೊಟ್ಟ ಕೊಟ್ಟು ತಮ್ಮನನ್ನು ಮರಕ್ಕೆ ಹತ್ತಿಸುತ್ತಾರೆ. ಎರಡು ವಾರ, ಮೂರು ವಾರಗಳಾದರೂ ಅವನು ಅಲ್ಲೇ ಇರಬೇಕಾಗುತ್ತದೆ. ತುಪ್ಪ ಕಿತ್ತು ಕಿತ್ತು ಅವನು ಕೊಟ್ಟವನ್ನು ಕಿಟ್ಟಿ, ಕೆಳಗೆ ಕೊಟ್ಟ ಹಾಗೆ ಇವರು ಗಾಡಿಯಲ್ಲಿ ಮನೆಗೆ ಹೊಡೆಯುತ್ತಿರುತ್ತಾರೆ. ಏಣಿಯನ್ನು ತೆಗೆದಿರುತ್ತಾರೆ. ಏಣಿ ಹಾಕಿದರೆ ಅವನು ಇಳಿಯುತ್ತಾನೆ ಎಂದು ಅವನು ಮರದ ಮೇಲೆ ಇರಬೇಕೆಂಬ ಉದ್ದೇಶದಿಂದ ಹಾಗೆ ಮಾಡಿರುತ್ತಾರೆ. ಹಗ್ಗವನ್ನು ಕತ್ತರಿಸಿರುತ್ತಾರೆ. ಈ ಕಡೆ ಕೆಂಚಿ ಅವರ ಅವ್ವ ಅಪ್ಪನನ್ನು ಕರೆದುಕೊಂಡು ಮತ್ತೆ ಮರದ ಬಳಿ ಬರುತ್ತಾಳೆ. ಗಂಡ ಮರದ ಮೇಲೆ ಹೊಗೆ ಮತ್ತು ಜ್ವರದಿಂದ ಕಿರುಚುತ್ತಿರುತ್ತಾನೆ. ಅವಳಿಗೆ ಗಂಡನ ಸ್ಥಿತಿ ನೋಡಿ ಅಸಹಾಯಕಳಾಗಿ ಅಳುತ್ತಾಳೆ. ಕೆಂಚಿ ನೀನು ನನ್ನ ನೋಡಬೇಡ ನಾನು ಸಾಯುವುದು ಖಚಿತ. ನಿಮ್ಮ ಅವ್ವ ಅಪ್ಪನ ಜೊತೆ ಹಿಂದಕ್ಕೆ ಹೋಗು ಎಂದು ಹೇಳುತ್ತಾನೆ. ಅವಳಿಗೆ ಮರಳಿ ಹೋಗಲು ಮನಸ್ಸಾಗುವುದಿಲ್ಲ. ಅವಳಿಗೆ ಅವರ ಅವ್ವ ಅಪ್ಪ ಮದುವೆಯ ಹೆಣ್ಣಿನಂತೆ ಅಲಂಕಾರ ಮಾಡಿ ಮದುವೆ ತಿನಿಸನ್ನು ತಂದು ಅವಳಿಗೆ ತಿನ್ನಲು ಕೊಡುತ್ತಾರೆ. ಚಾಪೆಯ ಮೇಲೆ ಮರದ ಕೆಳಗೆ ಕೂರಿಸುತ್ತಾರೆ. ಬೀಡಿ ಮೊಟು ಒಂದು ಕಡೆ ಇಟ್ಟು ಕೆಂಚಿ ಆ ಕಡೆ ಬೀಡಿ ಮೋಟು ಇದೆ ನೋಡು ಎಂದು ಹೇಳಿ ಅವಳು ತಿರುಗಿದ ಮೇಲೆ ಅವಳು ಕುತ್ತಿಗೆಯನ್ನು ಅವರ ಅಪ್ಪ ಕತ್ತರಿಸುತ್ತಾನೆ. ಈಗ ನೀವು ಒಂದಾಗಿ ಎಂದು ಹೇಳಿ ಅವಳಿಗೆ ರೆಕ್ಕೆ ಪುಕ್ಕ ಕಟ್ಟುತ್ತಾನೆ. ಆ ಕಡೆ ಮರದ ಮೇಲೆ ಅಳಿಯ ಸತ್ತಿರುತ್ತಾನೆ. ಆಗ ಇಬ್ಬರೂ ಪಕ್ಷಿಯ ರೂಪತಾಳಿ ಹಾರಿ ಹೋಗುತ್ತಾರೆ. ಕೆಂಚಿ ಪಕ್ಷಿಯಾಗಿ ತನ್ನ ಭಾವಂದಿರ ಮನೆಯ ಮೇಲೆ ಹಾರಿ ನೋಡಿ ನಾನು ನನ್ನ ಗಂಡ ಈಗ ಪಕ್ಷಿಯಾಗಿದ್ದೇವೆ. ಈಗ ನಮ್ಮನ್ನು ನೀವು ದೂರಮಾಡಲು ಸಾಧ್ಯವಿಲ್ಲ. ಈಗ ನಿಮಗೆ ಸಂತೋಷವಾಯಿತೇ ನಾವು ಕೂಗಿದ ಕಡೆ ನಿಮ್ಮ ಹೆಣ ಬೀಳಲಿ ಎಂದು ಶಾಪ ಕೊಟ್ಟು ಹಾರಿ ಹೋಗುತ್ತಾರೆ. ಈಗಲೂ ಅದಕ್ಕೆ ಅವುಗಳಿಗೆ ಆಳುಕೂಗು ಎಂದು ಕರೆಯುವುದು. ಅವು ಕೂಗಿದ ಕಡೆಯೆ ಸಾವು ಸಂಭವಿಸುತ್ತದೆ. ಈ ರೀತಿಯಾಗಿ ಅವರ ಸಾಹಿತ್ಯಕ್ಕೆ ಇಂತಹ ಹಲವಾರು ಐತಿಹ್ಯದ ನಿದರ್ಶನಗಳಿವೆ.

**ಕಥೆ ೨**

ಇದೊಂದು ಕರಿರಾಜನ ಕಥೆ. ಅವನಿಗೆ ಉರಿಸಿಂಗ ಮತ್ತು ಮರಿಸಿಂಗ ಎಂಬ ಮಕ್ಕಳಿದ್ದರು.

ಸಖಿ : ವನದಲ್ಲಿ ಹಾಡುತ್ತಾ ಬರುತ್ತಿರುತ್ತಾಳೆ ಹೂಮಾಲೆ ಪೋಣಿಸಿಕೊಂಡು ತಂದು ಕರಿರಾಜನ ಅರಮನೆಯನ್ನು ಸಿಂಗರಿಸುತ್ತಾಳೆ. (ಕರಿರಾಜನು ಮಲಗಿರುತ್ತಾನೆ)

ಹೆಂಡತಿ: ಏಳೋ ಏಳೋನೇ ಪ್ರಾಣಾಕಾಂತನೇ ಎಷ್ಟೋಂದು ಸುಖ ನಿದ್ರೆ..

ರಾಜ: ನಾ ಏಳೋ ವಲ್ಲೇನೇ ಪ್ರಾಣಾಕಾಂತೆಯೇ, ನಾ ಸುಖ ನಿದ್ರೆ ಪಡೆಯೋದೇ ನಿನಗೇಕೆ ಸಿಡಿಕೋಪ, ಪ್ರಾಣಾಕಾಂತೇಯೇ (ನಿದ್ರೆಗಣ್ಣಿನಲ್ಲಿ ಹೆಂಡತಿಗೆ ಸಮಾಧಾನ ಪಡಿಸುತ್ತಾನೆ.)

(ಕರಿರಾಜನ ತಾಯಿಯ ಪ್ರವೇಶ)

ಪದುಮತಿ ದೇವಿ : ಕಂದಾ ಏಳೂ ಎಷ್ಟೋಂದು ಸುಖ ನಿದ್ರೆ..

ರಾಜ : ನಾ ಸುಖ ನಿದ್ರೆ ಮಾಡುವುದು ನಿನಗೇಕೆ ಉರಿಕೋಪ

ತಾಯಿ : ಗಿರಿಜನರು ಅಳಲು ತೋಡುತ್ತಾಲಿಹರು, ನಿನಗೀನ್ನು ಏಕೆ ಎಚ್ಚಾರಾಗಾದು ಮಗನೇ.

ರಾಜ : ಗಿರಿಜನರ ಬವಣೆ ನನಗಿಂತ ಮಿಗಿಲೇನು

ತಾಯಿ : ಕಾಡಿನ ಕಂದರಾ ಬವಣೆಯೂ ಕೇಳು

ರಾಜ : ಕೊಂಚಾ ನೀ ತಡೆಯಾಕು ನಾ ಏಳುತಲಿಹೆನು

(ಸಖಿ ಪ್ರವೇಶ)

ಸಖಿ : ಏಳಾ ಏಳನೇ ಪ್ರಜೆಗಳಾ ಒಡೆಯಾ, ನಿನ್ನ ಪ್ರಜೆಗಳು ಕಾಯುತಲಿಹರು.

ರಾಜ : ನನ್ನ ಮೇಲೆ ನಿನಗೇಕೆ ಉರಿಕೋಪ, ನಾ ಬಳಲಿದೇನು ನನಗೇನು ನಿದ್ರೆ ಬೇಡಾವೇನು

ಸಖಿ : ನಿನಗಾಗಿ ನೂರಾರು ಮಂದಿ ಕಾದಿಹರು, ಅವರ ಅಳಲನೂ ನೀಕೇಳಾ ಒಡೆಯ

(ಕೋಡಂಗಿ ಪ್ರವೇಶ – ಕೋಡಂಗಿ ಹೆಣ್ಣು ವೇಷಧರಿಸಿದ ಗಂಡು)

ಕೋಡಂಗಿ : ನಾವಾ ಕಾಡಿನಾ ಮಕ್ಕಳು ಬಂದೀವಿ ಏಳು, ಇಲ್ಲಿಗೆ ನಮ್ಮ ಗೋಳಾತೋಡಾಕಾ

ಸಖಿ : ರಾಜನಿಗೆ ಸುಖ ನಿದ್ರೆ ಬಳಲಿ ಬೆಂಡಾಗಿಹನು, ನೀ ಕೊಂಚ ತಡೆಯಾಕು

ಕೋಡಂಗಿ : ನಾ ಬಂದು ಬಹಳ ಹೊತ್ತಾಯ್ತು ತಾಯಿ ನಮ್ಮವರ ನೋವಾ ನೀ ಕೇಳಾಕು

ಸಖಿ : ನಾ ಕೇಳಿ ಏನಾ ಮಾಡಲೀ ಅಕ್ಕ, ನಾನು ನಿನ್ನ ಅಕ್ಕಾ ಪಕ್ಕಾ

ಹೀಗೆ ಬಹಳ ಹೊತ್ತು ಸಂಭಾಷಣೆ ನಡೆದ ನಂತರ ಕರಿರಾಜ ಎದ್ದು ಬಂದು ಗಿರಿಜನರ ಅಳಲನ್ನು ಕೇಳುತ್ತಾನೆ. ಹೀಗೆ ನಾಟಕ ಮುಂದುವರೆಯುತ್ತದೆ. ಕರಿರಾಜನ ತಾಯಿ ಪದುಮತಿದೇವಿ ಕಾಡಿನ ಜನರ ನೋವು ನಲಿವಿಗೆ ಸ್ಪಂದಿಸಲೆಂದು ಮಗನಿಗೆ ಹೇಳುತ್ತಾಳೆ.

**೪. ೬. ಜನಪದ ಕಲೆಗಳು**

ಬುಡಕಟ್ಟಿನಲ್ಲಿ ವೈವಿಧ್ಯಮಯವಾದ ಜನಪದ ಕಲೆಗಳು ಕಂಡು ಬರುತ್ತವೆ. ಅನಾದಿಕಾಲದಿಂದಲೂ ಬೆಳೆದು ಬಂದ ಜನಪದ ಕಲೆ ಆಯಾ ಜನರ ಸಂಸ್ಕೃತಿಯ ಪ್ರತೀಕ ಗಳಾಗಿವೆ. ಬದುಕಿನ ಮುನ್ನಡೆಗಾಗಿ ದುಡಿವ ಜೀವಗಳು ತಮ್ಮ ಆಯಾಸವನ್ನು ಕಳೆದುಕೊಳ್ಳಲು ಹಾಡು, ಕುಣಿತ, ಕ್ರೀಡೆ, ನಾನಾ ಬಗೆಯ ಕೈಕಸುಬಿನ ಕಲೆಗಳನ್ನು ತಮ್ಮೊಂದಿಗೆ ಜೀವಂತವಾಗಿ ಉಳಿಸಿಕೊಂಡು ಬಂದಿರುತ್ತಾರೆ. ಇದಕ್ಕೆ ಜೇನುಕುರುಬರು ಹೊರತಲ್ಲ. ಜೇನುಕುರುಬ ಹಿರಿಯರು ಮತ್ತು ಮಕ್ಕಳು ಸಹ ತಮ್ಮದೆ ಆದ ವೈಶಿಷ್ಟ್ಯ ಪೂರ್ಣವಾದ ಕಲೆ, ಕ್ರೀಡೆಗಳನ್ನು ಉಳಿಸಿಕೊಂಡು ಬಂದಿದ್ದಾರೆ.

**೪. ೭. ಕ್ರೀಡೆಗಳು**



ಕ್ರೀಡೆಗಳು ದಣಿದ ದೇಹಕ್ಕೂ, ಮನಸ್ಸಿಗೂ ಮನೋರಂಜನೆ, ಉಲ್ಲಾಸ ಮತ್ತು ಹರ್ಷ ಕೊಡುತ್ತದೆ. ಆಟ ಆಡುವ ಗುಣ ನೈಸರ್ಗಿಕವಾಗಿದೆ. ಇದಕ್ಕೆ ಪ್ರಾಣಿ-ಪಕ್ಷಿಗಳೇ ಸಾಕ್ಷಿ, ನಾಯಿ, ಬೆಕ್ಕು, ಹುಲಿ, ಚಿರತೆ ಮುಂತಾದ ಪ್ರಾಣಿಗಳು ತಮ್ಮ ತಾಯಿಯೊಂದಿಗೆ ಸ್ವಲ್ಪ ಕಾಲ ಆಟವಾಡುತ್ತವೆ. ಇಂಥ ಚಿಣ್ಣಾಟದಿಂದ ಮರಿಗೆ ಸಂತೋಷವಾಗುತ್ತದೆ. ಆಟದ ಮನೋಧರ್ಮದ ಹಿಂದೆ ವಿನೋದಕ್ಕಿಂತ ಹಿರಿದಾದ ಮತ್ತೊಂದು ಉದ್ದೇಶವೂ ಇರುವಂತೆ ಕಾಣುತ್ತದೆ. ಕೇವಲ ಮನೋರಂಜನೆಗಾಗಿ ತೋರುವ ಆಟ ಅದಕ್ಕೆ ಜೀವನ ನಿರ್ವಹಣೆಯಲ್ಲಿ ಪಾಲ್ಗೊಳ್ಳುವ, ಗೆಲ್ಲುವ ವರಸೆಗಳನ್ನು ಕಲಿಸುತ್ತದೆ. ಪ್ರಾಣಿ ಸಹಜವಾದ ಗುಣ ಮಾನವನಲ್ಲಿಯೂ ಇದೆ.

ಜಾನಪದ ಆಟಗಳು ತಲೆತಲಾಂತರದಿಂದಲೂ ಬೆಳೆದು ಬಂದಿವೆ. ಅವುಗಳ ಹುಟ್ಟನ್ನು ಕೆದಕುವುದು ಕಷ್ಟ. ಇನ್ನು ಬೆಳೆದು ಬಂದ ಬಗೆಗೆ ಆಧಾರ ಕೊಡುವುದು ಅಷ್ಟೆ ಕಷ್ಟಕರ. ಅನಾದಿ ಕಾಲದಿಂದಲೂ ಬುಡಕಟ್ಟು ಜನರು ಕ್ರೀಡೆಗೆ ಮಹತ್ವ ಕೊಟ್ಟಿದ್ದಾರೆ. ಜೇನುಕುರುಬ ಸಮುದಾಯ ತಮ್ಮವೇ ಆದಂತಹ ಕೆಲವೊಂದು ಕ್ರೀಡೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಹಬ್ಬ-ಹರಿದಿನ, ಜಾತ್ರೆಗಳಲ್ಲಿ

ಮನರಂಜನೆಗಾಗಿ ಕೆಲವೊಂದು ಕ್ರೀಡೆಗಳನ್ನು ಆಡುತ್ತಾರೆ. ಪ್ರಸ್ತುತ ಜೇನುಕುರುಬ ಬುಡಕಟ್ಟಿನ ಹಾಡಿಗಳಲ್ಲಿ ಕಂಡುಬರುವ ಮಕ್ಕಳ, ವಯಸ್ಕರ ಮತ್ತು ಸ್ತ್ರೀಯರ ಆಟಗಳೆಂದರೆ ಕಪ್ಪೆ ಆಟ, ಚೌಕಾಬಾರ, ಅಳಗುಳಿಮನೆ, ಚಿನ್ನಿದಾಂಡು, ಮರಕೋತಿ ಆಟ, ಜೋಕಾಲಿ, ಕುಂಟೆಬಿಲ್ಲೆ, ಒಬ್ಬರ ಮೇಲೆ ಒಬ್ಬರು ಹತ್ತುವ ಸವಾರಿ ಮಾಡುವುದು, ಬುಗುರಿ ಆಟ, ಹಗ್ಗದ ಆಟ, ಕಣ್ಣಾ ಮುಚ್ಚಾಲೆ, ಕಡ್ಡಿಯಾಟ ಮುಂತಾದವುಗಳು ಕಂಡುಬರುತ್ತವೆ.

ಜೇನುಕುರುಬರು ರೂಢಿಸಿಕೊಂಡ ಆಟಗಳು, ವಿಶೇಷವಾಗಿ ಮಕ್ಕಳ ಆಟಗಳು ಕಾಡಿನ ಬದುಕಿನ ಪಾಠಗಳೂ ಸಹ ಆಗಿವೆ ಎಂಬುದನ್ನು ಮರೆಯುವಂತಿಲ್ಲ. ಪ್ರಸ್ತುತ ಜೇನುಕುರುಬ ಬುಡಕಟ್ಟುಗಳಲ್ಲಿ ಕಂಡು ಬರುವ ಕ್ರೀಡೆಗಳು, ಉಪ ಜೀವನಕ್ಕಾಗಿ ಜನಪದ ಕಲೆಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಇತರ ಸಮುದಾಯದ ಹುಡುಗರು ಹಾಗೂ ಮಾಧ್ಯಮಗಳ ಪ್ರಭಾವದಿಂದಾಗಿ ಕೆಲವೊಂದು ಹಾಡಿಗಳಲ್ಲಿ ಕ್ರಿಕೆಟ್‌ನಂತಹ ಆಧುನಿಕ ಆಟಗಳನ್ನು ಆಡುತ್ತಿದ್ದಾರೆ. ಇತ್ತೀಚೆಗೆ ಮರಕೋತಿ ಆಟ, ಕುಂಟೆಬಿಲ್ಲೆ, ಕಣ್ಣಾಮುಚ್ಚಾಲೆ ಮೊದಲಾದ ಆಟಗಳು ನಿಧಾನವಾಗಿ ಕಣ್ಮರೆ ಯಾಗುತ್ತಿವೆ.

**ಪಾಳಿ ಆಟ**

ಹತ್ತು ರಿಂದ ಹದಿನೈದು ಮಕ್ಕಳು ಸೇರಿ ತಮಗೆ ಇಷ್ಟ ಬಂದ ಹಣ್ಣು, ಗಿಡ, ಮರ, ಪ್ರಾಣಿ, ಪಕ್ಷಿಯ ಹೆಸರನ್ನು ಇಟ್ಟು ಕೊಳ್ಳುತ್ತಾರೆ. ಜೂಟಾದವರು ಕಣ್ಣು ಮುಚ್ಚಿ ಇವರು ಬಿಟ್ಟು ಅವರು ಬಿಟ್ಟು ಇವರು ಯಾರು ಎಂದು ಕೇಳುತ್ತಾರೆ. ಆಗ ಜೂಟಾದವರು ಹೇಳುವ ಹೆಸರು ಮಗು ಇಟ್ಟು ಕೊಂಡ ಹೆಸರು ಒಂದೇ ಆಗಿದ್ದರೆ ಆ ಮಗು ಔಟಾಗುತ್ತದೆ. ಚೋರಿಯಾಗಿದ್ದವರು ಆಟಕ್ಕೆ ಸೇರಿಕೊಳ್ಳುತ್ತಾರೆ. ಈ ಆಟವು ಹೀಗೇ ಮುಂದುವರೆಯುತ್ತದೆ.

**ಗದ್ದೆ ಮೂಲೆ ಆಟ**

ಈ ಆಟಕ್ಕೆ ಐದು ಜನ ಇರಬೇಕು. ನಾಲ್ಕು ಜನ ನಾಲ್ಕು ಮೂಲೆಯಲ್ಲಿ ನಿಂತಿರುತ್ತಾರೆ, ಮಧ್ಯೆ ಒಬ್ಬರು ನಿಂತಿರುತ್ತಾರೆ. ಮಧ್ಯೆ ನಿಂತಿರುವವರು ಚೋರಿಯಾಗಿರುತ್ತಾರೆ. ನಾಲ್ಕು ಮೂಲೆಯಲ್ಲಿದ್ದವರು ಸುತ್ತಲು ಓಡುತ್ತಿರಬೇಕು. ಮಧ್ಯೆ ನಿಂತವರಿಗೆ ಮೂಲೆ ಬಿಡಬಾರದು. ಆದರೆ ಮಧ್ಯೆ ಇದ್ದವರು ಮೂಲೆ ಹಿಡಿಯಲು ಪ್ರಯತ್ನಿಸುತ್ತಿರಬೇಕು, ಮಧ್ಯೆ ಇದ್ದವರಿಗೆ ಮೂಲೆ ಸಿಕ್ಕಿದಾಗ, ಯಾರಾದರೊಬ್ಬರಿಗೆ ಮೂಲೆ ಸಿಗುವುದಿಲ್ಲ. ಅವರು ಮಧ್ಯೆ ನಿಂತು ಚೋರಿಯಾಗುತ್ತಾರೆ, ಹೀಗೆ ಆಟ ಮುಂದುವರಿಯುತ್ತದೆ. ಮಕ್ಕಳು ಸಾಕು ಎನಿಸುವವರೆಗೂ ಈ ಆಟವನ್ನು ಮುಂದುವರಿಸುತ್ತಾರೆ.

**ನೆಲ್ಲಿಕಾಯಿ ತಿಂದು ನೀರಾಡಿ ಆಟ**

ಮದುವೆಯ ಪ್ರಚಾರಕ್ಕೂ ಜೇನುಕುರುಬರು ಪಾರಂಪರಿಕ ಜ್ಞಾನವನ್ನು ಬಳಸುತ್ತಿದ್ದರು. ೧೦ ರಿಂದ ೧೫ ಜನ ಮಕ್ಕಳು ಈ ಆಟ ಆಡುವ ಮೂಲಕ ಹುಡುಗ - ಹುಡುಗಿಯನ್ನು ಅಥವಾ ಹುಡುಗಿ - ಹುಡುಗನನ್ನು ಇಷ್ಟ ಪಟ್ಟಿರುವ ಬಗ್ಗೆ ತಮ್ಮ ಬಯಕೆಯನ್ನು ವ್ಯಕ್ತಪಡಿಸುತ್ತಿದ್ದರು.

ಇಬ್ಬರು ಕೋಟೆ ಕಟ್ಟಿದ ಹಾಗೆ ಕೈ ಮೇಲೆ ಎತ್ತಿ ನಿಲ್ಲುತ್ತಾರೆ. ಉಳಿದವರೆಲ್ಲಾ ಒಬ್ಬರ ಹಿಂದೆ ಒಬ್ಬರು ರೈಲಿನ ತರಹ ಸುತ್ತುತ್ತಿರುತ್ತಾರೆ. ಆಗ ಹೀಗೆ ಹೇಳುತ್ತಾರೆ,

"ನೆಲ್ಲಿಕಾಯಿ ತಿಂದು, ನೀರಾಡಿ ಬಿದ್ದು, ಬಸವನಗುಡಿ ಯಾವುದು? ಎಂದು ಯಾರಾದರೊಬ್ಬರು ಕೇಳುತ್ತಾರೆ.

ಅಲ್ಲಿದ್ದವರೆಲ್ಲಾ 'ಇದೆ' ಎಂದು ಹೇಳುತ್ತಾರೆ.

ಆಗ ಪ್ರಶ್ನೆ ಕೇಳಿದವರೊಬ್ಬರು ಅದು ಯಾಕೆ ಪಾಳು ಬಿದ್ದಿದೆ? ಎಂದು ಕೇಳುತ್ತಾರೆ.

ಉಳಿದವರೆಲ್ಲಾ ಹಣ್ಣು ಕಾಯಿ ಇಲ್ಲ ಎನ್ನುತ್ತಾರೆ.

ಪ್ರಶ್ನೆ ಕೇಳಿದವರು. ಹಣ್ಣು ಕಾಯಿ ಕೊಡುತ್ತೇವೆ ಎನ್ನುತ್ತಾರೆ.

ಹೀಗೆ ಎರಡು, ಮೂರು, ನಾಲ್ಕು ಸಾರಿ ಇದೇ ರೀತಿ ಕೇಳುತ್ತಾರೆ. ಯಾವ ಹುಡುಗನಿಗೆ ಯಾವ ಹುಡುಗಿ ಇಷ್ಟವಿರುತ್ತದೆಯೋ, ಆ ಹುಡುಗಿಯನ್ನು ಇಷ್ಟ ಪಡುವ ಹುಡುಗ ಎರಡೂ ಕೈಗಳಿಂದ ಬಂಧಿಸುತ್ತಾನೆ. ಆಗ ಅವರಿಬ್ಬರು ಮದುವೆಯಾಗುತ್ತಾರೆ ಎಂಬುದು ಅಲ್ಲಿ ಆಟ ಆಡುವ ಮಕ್ಕಳಿಗೆ ತಿಳಿಯುತ್ತದೆ. ಮಕ್ಕಳು ಹಾಡಿಯ ಹಿರಿಯರಿಗೆಲ್ಲಾ ವಿಷಯ ಮುಟ್ಟಿಸುತ್ತಾರೆ. ಸ್ವಲ್ಪ ದಿನಗಳಲ್ಲಿಯೇ ಆ ಮಕ್ಕಳು ವಿವಾಹವಾಗುತ್ತಾರೆ. ಜೊತೆಗೆ ಕಾಡಿಗೆ ಹೋಗಿ ಒಂದು ದಿನ ಕಳೆದು ಬರುತ್ತಾರೆ. ಅಲ್ಲಿಗೆ ಅವರ ವಿವಾಹವಾದಂತೆಯೇ.

**ಹುಡುಗನನ್ನು ಇಷ್ಟ ಪಡಲು ಕಾರಣಗಳು.**

ಹುಡುಗರು ಕೊಳಲು ನುಡಿಸುವ ಸಾಮರ್ಥ್ಯವನ್ನು ಮೆಚ್ಚಿ ಹೆಣ್ಣು ಮಕ್ಕಳು ಹುಡುಗರನ್ನು ಆರಿಸಿಕೊಳ್ಳುತ್ತಾರೆ. ಹುಡುಗರು ಮರ ಹತ್ತುವ ಸಾಮರ್ಥ್ಯವನ್ನು ಮೆಚ್ಚಿ ಹುಡುಗಿಯರು ಹುಡುಗರನ್ನು ವಿವಾಹವಾಗಲು ಇಚ್ಚಿಸುತ್ತಾರೆ. ಹುಡುಗರು ಮರ ಹತ್ತುವ ಸಾಮರ್ಥ್ಯವನ್ನು ಮೆಚ್ಚಿ ಹುಡುಗಿಯರು ಹುಡುಗರನ್ನು ವಿವಾಹವಾಗಲು ಇಚ್ಚಿಸುತ್ತಾರೆ.

**ಉಯ್ಯಾಲೆ** :

ಕಾಡಿನಲ್ಲಿ ಸಿಗುವ ಮರಗಳ ಬಳ್ಳಿಯನ್ನು ಉಪಯೋಗಿಸಿ ಮರದಿಂದ ಮರಕ್ಕೆ ಕಟ್ಟಿ ಮಕ್ಕಳು ಉಯ್ಯಾಲೆ ಆಟ ಆಡುತ್ತಾರೆ.

**ಹೂತುಯ್ಯಾಲೆ** – ಬಿದಿರಿನಿಂದ ಉಯ್ಯಾಲೆಯನ್ನು ಮಾಡುತ್ತಿದ್ದರು ಇದನ್ನು 'ಹೂತುಯ್ಯಾಲೆ' ಎಂದು ಕರೆಯುತ್ತಿದ್ದರು.

**ರಾಟೆ ಉಯ್ಯಾಲೆ** – ಬಿದಿರನ್ನು ನೆಟ್ಟು ಅದಕ್ಕೆ ತೂತು ಮಾಡಿ ಉಯ್ಯಾಲೆ ಮಾಡುತ್ತಿದ್ದರು ಇದನ್ನು 'ರಾಟೆ ಉಯ್ಯಾಲೆ' ಎಂದು ಕರೆಯುತ್ತಿದ್ದರು

**ಪೆಟ್ಲು ಆಟ**

ಗೌರಿಹಬ್ಬ ಮತ್ತು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪೆಟ್ಲು ಎಂದು ಕರೆಯುವ ಪಟಾಕಿಯ ಸದ್ದನ್ನು ಮಾಡುವ ಆಟವನ್ನು ಆಡುತ್ತಾರೆ. ಪೆಟ್ಲು ಎಂಬುವುದನ್ನು ಬಿದಿರಿನಿಂದ ಮಾಡುತ್ತಿದ್ದರು. ಗಂಧದಕಾಯಿ, ಗಂಗುಡೆಕಾಯಿ ಉಪಯೋಗಿಸಿ ದಪ್ಪವಾದ ಗಟ್ಟಿ ಬಿದಿರಿಗೆ ತುದಿ ಚೂಪು ಮಾಡಿ ಸಮನಾಂತರವಾಗಿ ಕತ್ತರಿಸಿರುತ್ತಾರೆ. ಬಿದಿರಿನ ಪ್ರತ್ಯೇಕ ಕಡ್ಡಿ ಮಾಡಿ ಕೈಯಿಂದ ಬೀಜವನ್ನು ತಳ್ಳಿ ಇನ್ನೊಂದು ಕಾಯಿಯನ್ನು ಹಿಂದಿನಿಂದ ತಳ್ಳಿದರೆ ಮುಂದಿನ ಕಾಯಿಯು ಹೊಡೆದು ಹೋಗಿ ಡಬ್ ಡಬ್ ಎಂಬ ಶಬ್ದ ಬರುತ್ತದೆ. ಇದನ್ನು ಕಂಡು ಮಕ್ಕಳು ಸಂತೋಷಗೊಳ್ಳುತ್ತಾರೆ.

ಬಿದಿರನ್ನು ಸುಮಾರು ಐದು ಇಂಚು ಕತ್ತರಿಸಿ ಎರಡು ಬೆರಳಿನ ಅಗಲಕ್ಕೆ ದಾರ ಕಟ್ಟಿ ಬಿದಿರನ್ನು ತಿರುಗಿಸಿದರೆ 'ಬೊಂಬ್ ಬೊಂಬ್' ಎಂಬ ಶಬ್ಧ ಬರುತ್ತದೆ. ಆ ಶಬ್ದ ಕೇಳಿದ ಮಕ್ಕಳು ಸಂತೋಷದಿಂದ ನಲಿಯುತ್ತಾರೆ.

**ಕಡ್ಡಿ ಆಟ**

ಇದಕ್ಕೆ ಸಾಮಾನ್ಯವಾಗಿ ಹತ್ತರಿಂದ ಇಪ್ಪತ್ತು ಕಡ್ಡಿಗಳು ಬೇಕು. ಈ ಆಟವನ್ನು ಇಬ್ಬರು ಅಥವಾ ಹೆಚ್ಚು ಜನ ಆಡುತ್ತಾರೆ. ಕಡ್ಡಿಗಳನ್ನು ಅಂಗೈಯಲ್ಲಿ ಹಿಡಿದು ಮೇಲಕ್ಕೆಸೆಯುವರು. ಅವು ನೆಲದ ಮೇಲೆ ಬಿದ್ದಾಗ ಆಟಗಾರ ಆ ಕಡ್ಡಿಗಳನ್ನು ಒಂದಕ್ಕೊಂದು ತಾಕಿಸುವುದು. ಇದರಿಂದ ಮತ್ತೊಂದು ಕಡ್ಡಿ ಅಲುಗಾಡಬಾರದು. ಹೀಗೆ ತಾಕಿಸಿದ ಕಡ್ಡಿಗಳನ್ನು ಗೆದ್ದಂತೆ. ಹೀಗೆ ಗುರಿ ತಪ್ಪುವ ತನಕ ಅಥವಾ ಇತರ ಕಡ್ಡಿಗಳು ಅಲುಗಾಡದೇ ಇರುವ ತನಕ ಆಟ ಮುಂದುವರಿಯುತ್ತದೆ. ತಪ್ಪಿದಲ್ಲಿ ಬೇರೆಯವರು ಅದೇ ರೀತಿಯಾಗಿ ಆಟ ಮುಂದುವರಿಸುವರು. ಎಲ್ಲವನ್ನು ಗೆದ್ದಮೇಲೆ ತಮ್ಮ ತಮ್ಮ ಪಾಲಿಗೆ ಬಂದ ಕಡ್ಡಿಗಳನ್ನು ಎಣಿಸಿದರೆ ಎಷ್ಟು ಕಡಿಮೆಯಾಗಿದೆಯೊ, ಅಷ್ಟು ಸೋತಂತೆ; ಹೆಚ್ಚಾದರೆ ಗೆದ್ದಂತೆ, ಮುಂದಿನ ಆಟಕ್ಕೆ ಇಬ್ಬರೂ ಸಮವಾಗಿ ಕಡ್ಡಿಗಳನ್ನು ಹಾಕಬೇಕು. ಯಾರ ಹತ್ತಿರ ಕಡಿಮೆ ಕಡ್ಡಿಗಳು ಇರುವವೋ ಅವರು ಸೋತಂತೆ, ಹೆಚ್ಚು ಕಡ್ಡಿಗಳು ಇದ್ದವರು ಗೆದ್ದಂತೆ.

**ಗಜ್ಜುಗದಾಟ**

ಗಜ್ಜುಗದಾಟವು ಜೇನುಕುರುಬ ಹುಡುಗರು ಹೆಚ್ಚು ಇಷ್ಟಪಡುವ ಆಟವಾಗಿದೆ. ಇದು ಹಳ್ಳಿಗಾಡಿನ ಗೋಲಿಯನ್ನು ಹೋಲುತ್ತದೆ. ಕಾಡಿನಲ್ಲಿ ಬೆಳೆಯುವ ಗಜ್ಜುಗದ ಗಿಡದಿಂದ ಗಜ್ಜುಗಗಳನ್ನು

ಸಂಗ್ರಹಿಸುತ್ತಾರೆ. ಗೋಲಿಯಾಕಾರದಲ್ಲಿ ದುಂಡಗೆ ಇರುವ ಈ ಬೀಜಗಳನ್ನು ಔಷಧಿಯಾಗಿಯೂ ಜೇನುಕುರುಬರು ಉಪಯೋಗಿಸುತ್ತಾರೆ. ಒಂದು ಚಿಕ್ಕ ಕುಣಿ ತೆಗೆದು ಅದರೊಳಗೆ ಗಜ್ಜುಗಗಳನ್ನು ಬೀಳಿಸುವ ಆಟವನ್ನು ಆಡುತ್ತಾರೆ, ಇಲ್ಲವೆ ಆಟದಲ್ಲಿ ಎದುರು ಗುಂಪಿನ ಆಟಗಾರರ ಗಜ್ಜುಗಕ್ಕೆ ಇನ್ನೊಬ್ಬ ಆಟಗಾರ ಗುರಿಯಿಟ್ಟು ಹೊಡೆಯುವ ಆಟವನ್ನು ಆಡುತ್ತಾರೆ. ಈ ಆಟವು ಜೇನುಕುರುಬ ಮಕ್ಕಳಿಗೆ ಬೇಟೆಯಲ್ಲಿ ಗುರಿಯನ್ನಿಡುವ ಪ್ರಾಥಮಿಕ ಪಾಠವನ್ನು ಹೇಳಿಕೊಡುತ್ತದೆ ಎನ್ನಬಹುದು.

**ಮರಕೋತಿ ಆಟ**



ಇದು ಗಂಡುಮಕ್ಕಳು ಆಡುವ ಆಟ. ಆಡುವವರೆಲ್ಲರೂ ಮೂವರಂತೆ ಕೂಡಿಕೊಂಡು ಚಪ್ಪಾಳೆ ಹಾಕುವರು. ಇಬ್ಬರೂ ಒಂದು, ಇನ್ನೊಬ್ಬ ಬೇರೆ ಚಪ್ಪಾಳೆ ಹಾಕಿದ ಎಂದರೆ ಆತ ಗೆದ್ದಂತೆ. ಹೀಗೆ ಎಲ್ಲರೂ ಹಾಕುತ್ತಾ ಹೋಗುವರು. ಯಾರು ಇಬ್ಬರಿಗಿಂತ ಭಿನ್ನ ಹಾಕುವನೋ ಆತ ಗೆದ್ದಂತೆ. ಹೀಗೆ ಎಲ್ಲರೂ ಗೆದ್ದನಂತರ ಒಬ್ಬ ಹಿಡಿಯುವನು ಇರುತ್ತಾನೆ. ಗೆದ್ದ ಎಲ್ಲರೂ ಮಂಗಗಳಂತೆ ಮರವನ್ನು ಏರುತ್ತಾರೆ. ಅವರನ್ನು ಹಿಡಿಯುವನು ಕೆಳಗೆ ನೆಲದ ಮೇಲಿರುತ್ತಾನೆ. ಅವನು ಎದುರಾಳಿಗಳು ಎಸೆದ ಸುಮಾರು ಒಂದು ಅಂಗುಲ ಉದ್ದದ ಕೋಲನ್ನು ತಂದು ಎದುರಾಳಿಗಳು ನಿಗದಿಪಡಿಸಿದ ಜಾಗದಲ್ಲಿ ಇಟ್ಟು ಮರ ಹತ್ತುವನು. ಆತ ಮರ ಹತ್ತುವ ಪೂರ್ವದಲ್ಲಿಯೇ ಮರ ಹತ್ತಿದವರಲ್ಲೊಬ್ಬ ಆ ಕೋಲನ್ನು ಮುಟ್ಟಿದರೆ ಆತ ಸೋತಂತೆ. ನಂತರ ಮೊದಲಿನ ಹಾಗೆ ಮರದಲ್ಲಿರುವವನೊಬ್ಬ ಕೋಲನ್ನು ಎಸೆಯುವನು. ಅವರನ್ನು ಹಿಡಿಯುವವ ಓಡಿಹೋಗಿ ತಂದು, ಅದನ್ನು ನಿಗದಿಪಡಿಸಿದ ಕೋಲು ಮುಟ್ಟುವುದಕ್ಕಿಂತ ಪೂರ್ವದಲ್ಲಿ ಹಿಡಿದರೆ ಆತ ಗೆದ್ದಂತೆ. ಹಿಡಿದವ, ಅವನಂತೆ ಕೋಲನ್ನು ತಂದು ಮರ ಹತ್ತಿದವರನ್ನು ಹಿಡಿಯಬೇಕು. ಆಟವು ಹೀಗೆಯೆ ಮುಂದುವರಿಯುತ್ತದೆ.

**ಬುಗುರಿ ಆಟ**



ಬುಗುರಿಯನ್ನು ಮರದ ತುಂಡಿನಿಂದ ಮಾಡುವರು. ಮರದ ತುಂಡಿಗೆ ಸಣ್ಣದಾದ ಕಬ್ಬಿಣದ ಮೊಳೆಯನ್ನು ನೆಟ್ಟು, ಅದರ ತುದಿಯನ್ನು ಚೂಪಾಗಿ ಕೆತ್ತಿ, ಕಬ್ಬಿಣದ ಮೊಳೆ ಕಾಣಿಸುವ ಹಾಗೆ ಮಾಡಿ, ಬುಗುರಿ ತಯಾರು ಮಾಡುತ್ತಾರೆ. ಇದು ಯಾರು ಬೇಕಾದರೂ ಮಾಡಬಹುದು. ಬುಗುರಿಗೆ

ದಾರ ಬೇಕು. ಎಲ್ಲರೂ ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಒಂದೇ ಸಲ ಬುಗುರಿ ಆಡಿಸಬೇಕು. ಆಡುತ್ತಿದ್ದಂತೆಯೆ ಯಾರು ಬುಗುರಿಯನ್ನು ದಾರ ಸುತ್ತಿ ಮೇಲೆಸೆದು ಆಡಲು ತಪ್ಪುತ್ತಾನೋ ಆತನೇ ಮಧ್ಯ(ವೃತ್ತ)ದಲ್ಲಿ ಬುಗುರಿಯಿಡಬೇಕು. ಉಳಿದವರು ನೇರವಾಗಿ ಹೊಡೆದು ಅಥವಾ ಆಡುತ್ತಿದ್ದ ಬುಗುರಿಯನ್ನು ಹಾಗೆಯೇ ಬೆರಳುಗಳಿಂದ ಉಪಾಯವಾಗಿ ಎತ್ತಿಯೋ ಅದರ ಮೇಲೆಸೆದು ಅದನ್ನು ವೃತ್ತದಿಂದ ಹೊರಗೋಡಿಸಬೇಕು.

ಅದು ಹೊರಟ ತಕ್ಷಣವೇ ಮಿಂಚಿನ ವೇಗದಲ್ಲಿ ಎಲ್ಲರೂ ಬುಗುರಿಯಿಟ್ಟವರು ತಮ್ಮ ತಮ್ಮ ಬುಗುರಿಗೆ ದಾರ ಸುತ್ತಿ ಆಡಿಸಿ ಮೇಲೆತ್ತಬೇಕು. ಬುಗುರಿ ಹೊರಡಿಸಿದವನ ಬುಗುರಿ ಇನ್ನೂ ಆಡುತ್ತಿದ್ದರೆ ಅದನ್ನು ಅವನು ಮೇಲೆತ್ತಬಹುದು. ಕೊನೆಯಲ್ಲುಳಿದವನೆ ಕಳ್ಳ.ಆಟ ಹೀಗೆಯೇ ಮುಂದುವರೆಯುತ್ತದೆ. ಸೋತವನ ಬುಗುರಿಗೆ ಗುನ್ನ ಹಾಕಿ ಒಡೆಯುತ್ತಾರೆ.

**ಚಿನ್ನಿ ದಾಂಡು ಆಟ**

ಈ ಆಟದಲ್ಲಿ ಎರಡು ತಂಡಗಳು ಇರುತ್ತವೆ. ಎರಡು ತಂಡದಲ್ಲಿ ಸಮ ಸದಸ್ಯರಿರುವರು. ವಾಟೇ ಮರದ ಸಣ್ಣ ರೆಂಬೆಯನ್ನು ತಂದು ಅದನ್ನು ಒಂದು ಸಣ್ಣಭಾಗ, ಮತ್ತೊಂದು ದೊಡ್ಡಭಾಗವಾಗಿ ಕತ್ತರಿಸುವರು. ನಂತರ ಸಣ್ಣಭಾಗದ ಎರಡು ಕಡೆಗೆ ಚೂಪಾಗಿ ಕೆತ್ತಿ ಅದನ್ನು ಚಿನ್ನಿ ಎಂದು ಕರೆಯುತ್ತಾರೆ. ಅದೇ ರೀತಿಯಾಗಿ ದೊಡ್ಡದಾದ ತುಂಡನ್ನು ಒಂದು ಕಡೆ ಮಾತ್ರ ಚೂಪಾಗಿ ಕೆತ್ತಿ ಅಂಗಳದಲ್ಲಿ ಒಂದು ಸಣ್ಣ ರಂಧ್ರವನ್ನು ಕೊರೆದು ಆ ರಂಧ್ರದ ಮೇಲೆ ಚಿನ್ನಿಯನ್ನು ಇಟ್ಟು, ದೊಡ್ಡದಾದ ಕೋಲಿನಿಂದ ಒಂದು ತಂಡದ ಸದಸ್ಯನು ರಭಸವಾಗಿ ನೂಕುವನು. ಇದನ್ನು ಇನ್ನೊಂದು ತಂಡದ ಸದಸ್ಯರು ಹಿಡಿಯಲು ಪ್ರಯತ್ನಿಸುವರು. ಹಿಡಿದರೆ ಆಟ ಮುಂದುವರಿಯುವಂತಿಲ್ಲ. ಹಿಡಿಯದಿದ್ದರೆ ಚಿನ್ನಿಯ ಒಂದು ತುದಿಗೆ ಹೊಡೆದಾಗ ಅದು ಪುಟಿಯುವುದು. ಪುಟಿದಾಗ ಅದಕ್ಕೆ ದಂಡಿನಿಂದ ಹೊಡೆಯುವನು. ಅದು ಎಷ್ಟು ದೂರದಲ್ಲಿ ಬೀಳುವುದೋ ಅದರ ಮೇಲಿಂದ ಇದು ಇಷ್ಟು ದೂರ ಹೋಗಿದೆ ಎಂದು ಹೇಳುವದನ್ನು, ಒಂದು ವೇಳೆ ಆತ ಹೇಳಿದ ದೂರ ಹೋಗದೆ ಇದ್ದರೆ ಅವನು ಆಟ ಮುಂದುವರಿಸುವಂತಿಲ್ಲ. ಇದು ಹೀಗೆ ಎಲ್ಲರ ಸರದಿ ಮುಗಿಯುವವರೆಗೂ ಆಟ ಮುಂದು ವರೆಯುತ್ತದೆ. ಎಲ್ಲರ ಸರದಿ ಮುಗಿದಾಗ ಎದುರಾಳಿ ತಂಡದ ಸದಸ್ಯರು ದಾಂಡು ಹಿಡಿದು ಆಡುವರು. ಇವರು ಮೊದಲಿನವರಕ್ಕಿಂತ ಹೆಚ್ಚಿನ ದೂರಗಳನ್ನು ಮಾಡಿದರೆ ಇವರೇ ಗೆದ್ದಹಾಗೆ.

**ಕಣ್ಣು ಮುಚ್ಚಾಲೆ ಆಟ**

ಈ ಆಟವನ್ನು ಅವಿತುಕೊಳ್ಳುವ ಆಟವೆಂತಲೂ ಕರೆಯುತ್ತಾರೆ. ಕಣ್ಣು ಮುಚ್ಚುವ ಅಜ್ಜಿಗೆ ಬದಲಾಗಿ ಹಿಡಿಯಬೇಕಾದವರು ಒಂದು ಕಡೆ ನಿಂತು ಮುಚ್ಚಿಟ್ಟುಕೊಂಡಿದ್ದು ಬಚ್ಚಿಟ್ಟುಕೊಂಡಿರುವವರನ್ನು ಕಂಡಾಗ ಕೂಗಿಕೊಳ್ಳುವ ಗುಲ್ಜಾರಿಯೋ ಎಂದು ಕರೆಯುತ್ತಾರೆ.

ಇದೊಂದು ಸಾಮೂಹಿಕ ಆಟ. ಒಬ್ಬರು ಕಣ್ಣುಮುಚ್ಚಿಕೊಳ್ಳುವವರು ಉಳಿದವರು ಅಪಿತುಕೊಳ್ಳುವವರು, ಹಿಡಿಯುವವರ ಕಣ್ಣು ಮುಚ್ಚಲು ಒಬ್ಬ ಅಜ್ಜಿ ಬೇಕು.

**ಕುಂಟುಬಿಲ್ಲೆ ಆಟ**

ಇದು ಹೆಣ್ಣುಮಕ್ಕಳು ಆಡುವ ಆಟ. ಚೌಕಾಕಾರದ ನಾಲ್ಕು ಅಥವಾ ಎಂಟು ಮನೆಗಳು, ತಮ್ಮ ಅನುಕೂಲಕ್ಕೆ ತಕ್ಕಂತೆ ಎರಡು ಸಾಲಾಗಿ ಬರೆದುಕೊಳ್ಳುವುದು. ಮಡಿಕೆಯ ಚೂರೊಂದನ್ನು ವೃತ್ತಾಕಾರವಾಗಿ ಕಟೆದು ಕಾಯಿಯನ್ನು ತಯಾರು ಮಾಡುವರು. ನಂತರ ಅದನ್ನು ಅನುಕ್ರಮವಾಗಿ ಮೊದಲನೆ ಮನೆ, ಎರಡನೆ ಮನೆ ಹೀಗೆ ಇಟ್ಟುಕೊಂಡು ಕುಂಟಬೇಕು. ಈ ಕಾಯಿಯನ್ನು ಹಣೆಯ ಮೇಲೆ ಇಟ್ಟುಕೊಂಡು ಸರಿಯೋ? ಎಂದು ಕೊಂಡು ಕಡೆಗೆ ಹೋಗಿ ಮನೆಗಳನ್ನು ನೋಡದೇ ಕಾಯಿಯನ್ನು (ಮಡಕೆ ಚೂರು) ಹಿಂದಕ್ಕೆ ಯಾವುದಾದರೊಂದು ಮನೆಗೆ ಬೀಳುವಂತೆ ಎಸೆಯಬೇಕು. ಆಗ ಅದು ಯಾವುದಾದರೊಂದು ಮನೆಗೆ ಸರಿಯಾಗಿ ಬಿದ್ದರೆ, ಅದು ಅವರ ಮನೆ. ನಂತರ ಕಾಯಿಯನ್ನು ಒಗೆದು ಕುಂಟುತ್ತಾ ತನ್ನ ಮನೆಯಲ್ಲಿ ಕಾಲನ್ನೂರಿ ನಂತರ ಕುಂಟುತ್ತಾ ಅದರ ಮೇಲೆ ಪಾದ ಹಾಕಬೇಕು. ಒಂದು ವೇಳೆ ಗುರಿ ತಪ್ಪಿದರೆ, ಮತ್ತೊಬ್ಬರು ಆಟ ಆಡುವರು. ಅವರು ಕುಂಟುತ್ತಾ ಕಾಯಿಯನ್ನು ಸರಿಯಾಗಿ ಮನೆಯಲ್ಲಿಯೇ ಎಸೆಯಬೇಕು. ಆಗ ಅದು ಅವರ ಮನೆಯಾಗುತ್ತದೆ. ಹೀಗೆ ಅವರು ಮನೆಯನ್ನು ತಮ್ಮದನ್ನಾಗಿಸಿ ಕೊಳ್ಳುತ್ತಾ ಆಟ ಸಾಗುವುದು. ಯಾರು ಹೆಚ್ಚು ಮನೆಗಳನ್ನು ತಮ್ಮದನ್ನಾಗಿಸಿಕೊಳ್ಳುವರೋ ಅವರು ಗೆದ್ದಂತೆ. ಯಾರು ಕಡಿಮೆ ಮನೆಗಳನ್ನು ತಮ್ಮದನ್ನಾಗಿರಿಸಿ ಕೊಂಡಿರುವರೋ ಅವರು ಸೋತಂತೆ.

## ೪. ೮. ಮತಾಂತರ

ಕ್ರೈಸ್ತ ಮಿಷನರಿಗಳು ಈ ಮಧ್ಯೆ ಜನರ ಮುಗ್ಧತೆ ಹಾಗೂ ಬಡತನವನ್ನೇ ಬಂಡವಾಳವಾಗಿಸಿಕೊಂಡು ಅವರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸುತ್ತಿವೆ. ಹಾಡಿಯ ಹಂತದಲ್ಲಿಯೇ ಜೇನುಕುರುಬರಲ್ಲಿ ಜಾಗೃತರಾದವರು ಜನರನ್ನು ಸೇರಿಸಿ ಮತಾಂತರವಾಗುವುದು ಬೇಡ, ನಮ್ಮ ಸಂಸ್ಕೃತಿಯೇ ಉತ್ತಮವಾದುದು ಎಂದು ಹೇಳಿದ್ದರೂ ಕೂಡ ನಾಣಚ್ಚಿ ಗದ್ದೆ ಹಾಡಿಯಲ್ಲಿಯೇ ೬೨ ಕುಟುಂಬಗಳ ಪೈಕಿ ೨೦ಕ್ಕಿಂತ ಹೆಚ್ಚು ಕುಟುಂಬಗಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದ್ದಾರೆ. ಇವರು ನಮ್ಮ ಹಬ್ಬಗಳ ಆಚರಣೆಯನ್ನು ಬಿಟ್ಟಿದ್ದಾರೆ. ಮಕ್ಕಳಲ್ಲಿ ಕೆಲವು ಜನರು ಈ ರೀತಿಯ ಭಾವನೆ ಬರುವಂತೆ ಮಾಡಿ, ಕ್ರೈಸ್ತ ಧರ್ಮದ ಗಂಡಸರು ಹಾಡಿಯ ಹೆಣ್ಣು ಮಕ್ಕಳನ್ನು ವಿವಾಹವಾಗಿ ಕೆಲವು ಜನರು ಮೋಸ ಮಾಡಿ ಹೋಗಿದ್ದಾರೆ ಎನ್ನುತ್ತಾರೆ (ಮಾ : ಇಂದ್ರ, ಮಾದೇವಮ್ಮ, ರಮೇಶ್, ಕುಟ್ಟ).

ಕ್ರೈಸ್ತರಾಗಿ ಮತಾಂತರಗೊಂಡು ಈಗ ಸ್ಥಳಾಂತರವಾಗಿರುವ ಜೇನುಕುರುಬರ ಕುಟುಂಬಗಳು ಇಂದು ಹುಣಸೂರಿನ ನಾಗಪುರಹಾಡಿ ಬಳಿ ನೆಲೆಸಿವೆ. ಅವರನ್ನು ಕ್ರೈಸ್ತರು ಭೇಟಿಯಾಗಿ ನಿಮ್ಮ

ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಾಸಿಲ್ಲದೆ ಕೊಡಿಸುತ್ತೇವೆಂದು ಹೇಳಿ ಬಿಳಿ ಕಾಗದದ ಮೇಲೆ ಹೆಬ್ಬೆಟ್ಟು ಹೊತ್ತಿಸಿಕೊಂಡಿದ್ದು, ಅದರಲ್ಲಿ ನಾವು ಸ್ವ ಇಚ್ಛೆಯಿಂದ ಕಾಡನ್ನು ಬಿಟ್ಟು ಬಂದಿದ್ದೇವೆ. ಕಾಡಿಗೂ ನಮಗೂ ಯಾವ ಸಂಬಂಧವೂ ಇಲ್ಲ. ಅಲ್ಲಿನ ಭೂಮಿ ನಮಗೆ ಸೇರಿಲ್ಲ ಎಂದು ಬರೆದು ಕೊಂಡಿದ್ದಾರೆ. ಮತ್ತೆ ಕೆಲವರು ನಾಗಪುರದಿಂದ ನಾಣಚಿ ಗದ್ದೆ ಹಾಡಿಗೆ ವಾಪಸ್ ಬಂದಾಗ ಈ ಪತ್ರ ತೋರಿಸಿ ಮತ್ತೇ ನಾಗಪುರಕ್ಕೆ ಕರೆದುಕೊಂಡು ಹೋಗಿ ಮತಾಂತರ ಮಾಡಿದ್ದಾರೆ. ಇದರಿಂದ ನಮ್ಮ ಸಂಸ್ಕೃತಿಯನ್ನು ನಮಗೆ ಉಳಿಸಿ ಕೊಳ್ಳುವುದು ಕಷ್ಟವಾಗುತ್ತದೆ. ಇಂದು ಅವರ ಸ್ಥಿತಿ ಅತಂತ್ರದ್ದಾಗಿದೆ ಎನ್ನುತಾರೆ (ಮಾ : ರಾಮಕೃಷ್ಣ, ನಾಣಚ್ಚಿಗದ್ದೆ ಹಾಡಿ).

ಇಂದು ಜೇನುಕುಬರ ಕಾಡಿನ ನಂಟಿನ ಅಗಲಿಕೆಯ ಜೊತೆಗೆ ಅನೇಕ ಕಾರಣಗಳು ಪಾರಂಪರಿಕ ಜೀವನ ನಿರ್ವಹಣೆಗೆ ಭಂಗ ಉಂಟಾಗಿದೆ. ಅದರಲ್ಲಿ ಮತಾಂತರ ಕಾರ್ಯವು ಒಂದು ಬಲವಾದ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಈ ರೀತಿಯ ಹೊರಗಿನ ಶಕ್ತಿಗಳ ಪ್ರಭಾವ. ಅವರ ಮೂಲ ಮನಸ್ಥಿತಿಯನ್ನು ಕಲಕುತ್ತಿವೆ. ಇದರಿಂದ ಉಂಟಾದ ಪರಿಣಾಮವೇ ಪಾರಂಪರಿಕ ಜ್ಞಾನ ಕ್ಷೀಣವಾಗುತ್ತಿರುವುದನ್ನು ಕಾಣಬಹುದು.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕು, ಪೈಸಾರಿಯಲ್ಲಿನ ಕಟ್ಟೆ ಹಾಡಿಯ ಕುಟುಂಬಗಳಲ್ಲಿ ಎರಡು ಕುಟುಂಬಗಳು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿವೆ. ಅಕ್ಕಿ ಮಾಳ ಹಾಡಿಯ ಎಂಟು ಕುಟುಂಬ, ಕಾರೆ ಅಡ್ಡುವಿನ ಎಂಟು ಕುಟುಂಬ, ದೊಡ್ಡ ರೇಷ್ಮೆಯ ನಲವತ್ತು ಕುಟುಂಬ, ಕೆಸುವಿನ ಕೆರೆಯ ನಾಲ್ಕು ಕುಟುಂಬ, ದಿಟ್ಟಳ್ಳಿಯಲ್ಲಿ ಎಂಟು ಕುಟುಂಬ, ತಟ್ಟಳ್ಳಿಯಲ್ಲಿ ಮೂವತ್ತು ಕುಟುಂಬ, ಗೇಟ್ ಹಾಡಿಯ ಒಂಭತ್ತು ಕುಟುಂಬ, ದುಬಾರೆಯ ಎರಡು ಕುಟುಂಬ, ಮಜ್ಜಿಗೆ ಹಳ್ಳ ಪಾರಂ ಹಾಡಿಯ ಐದು ಕುಟುಂಬ, ಜಂಗಲ್ ಹಾಡಿಯ ಇಪ್ಪತ್ತೈದು ಕುಟುಂಬ, ಬೊಮ್ಮಡು ಸಂಪಿಗೆ ಕೊಲ್ಲಿಯ ಮೂರು ಕುಟುಂಬ, ಗದ್ದೆ ಹಾಡಿಯ ಬೇಗೂರು ಹಾಡಿ ಹದಿನೇಳು ಕುಟುಂಬ, ಸಿದ್ದಾಪುರ ಹಾಡಿಯ ಒಂದು ಕುಟುಂಬ, ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿವೆ.

ಸೋಮವಾರ ಪೇಟೆಯ ಒಟ್ಟು ನಲವತ್ತೆರಡು ಹಾಡಿಗಳಲ್ಲಿ ಬಹುತೇಕ ಕುಟುಂಬಗಳು ಮತಾಂತರ ಗೊಂಡಿವೆ. ಯಡವನ ನಾಡಿನಲ್ಲಿ ಏಳು ಕುಟುಂಬಗಳು, ಏರೂರಿನ ಇಪ್ಪತ್ತೇಳು ಕುಟುಂಬ, ಕಬ್ಬಿನ ಗದ್ದೆಯ ಮೂರು ಕುಟುಂಬ, ಹೊಸಪಟ್ಟಣದ ಹದಿನೈದು ಕುಟುಂಬಗಳು, ಕಲಾಪಾಡಿಯ ಮೂರು ಕುಟುಂಬಗಳು, ಮತಾಂತರಗೊಂಡು ಜೇನುಕುರುಬರ ಸಂಸ್ಕೃತಿಯನ್ನು ಬಹುತೇಕ ತಳ್ಳಿದ್ದಾರೆ.

ಹುಣಸೂರಿನ ಒಟ್ಟು ಹಾಡಿಗಳಲ್ಲಿ ಹಳ್ಳದ ಕೊಪ್ಪಲಿನ ಹನ್ನೆರಡು ಕುಟುಂಬ, ತರಿಕಲ್ಲು ರಂಗಯ್ಯನ ಕೊಪ್ಪಲಿನ ಆರು. ಬಲ್ಲೇನಹಳ್ಳಿ ಹತ್ತು, ಕಾಳೇನಹಳ್ಳಿಯ ಎರಡು, ಕೊಳವಿಗೆ ಎರಡು, ವಿಜಯಗಿರಿಯ ಹತ್ತು, ಭರತವಾಡಿಯ ಆರು. ಕೆರೆಹಾಡಿ ಆರು. ವೀರನಹೊಸಳ್ಳಿಯ ಇಪ್ಪತ್ತೆಂಟು, ಹಳೇ ಪುಟ್ಟಹಳ್ಳಿಯ ಐದು. ಅಯ್ಯನಕೆರೆಯ ನೂರ ಎರಡು. ನೇರಳಕುಪ್ಪೆ ಬಿ ಹಾಡಿಯ ಒಂದು.

ಸೋನಳ್ಳಿ ಏಳು, ಪೆಂಜಳ್ಳಿ ಹನ್ನೆರಡು, ಕೊಟ್ಟಗೆ ಕಾವಲ ನಾಲ್ಕು, ನಾಗಾಪುರ ಒಂದನೇ ಬ್ಲಾಕಿನ ಎಂಟು, ಎರಡೇನೆ ಬ್ಲಾಕಿನ ಐವತ್ತಾರು, ಮೂರನೇ ಬ್ಲಾಕಿನ ಆರು ಕುಟುಂಬಗಳು ಮತಾಂತರ ಗೊಂಡಿವೆ.

ಹೆಚ್ ಡಿ ಕೋಟೆಯಲ್ಲಿ ಕೆರೆಹಾಡಿಯ ಮೂರು ಕುಟುಂಬ, ಬಸವರಾಜನ ಕಟ್ಟೆಯ ಐದು ಕುಟುಂಬ, ಸೊಳ್ಳೆಪುರ ಹಾಡಿಯಲ್ಲಿ ಮೂವತ್ತು, ಬಸವನಗಿರಿ 'ಎ' ಹಾಡಿಯಲ್ಲಿ ನಾಲ್ಕು, ಹೆಬ್ಬಾಳದ ಹಾಡಿಯಲ್ಲಿ ಒಂದು, ಪೆಂಜಳ್ಳಿ ಇಪ್ಪತ್ತು, ನಾಗನಹಳ್ಳಿ ಒಂಭತ್ತು, ಮಾರನ ಹಾಡಿ ಹತ್ತು, ಕಾರಾಪುರ ನಾಲ್ಕು, ಸೀಗೂರು ಇಪ್ಪತ್ತು, ಬಳ್ಳೆ ನಲವತ್ತು, ಆನೆಮಾಳ ಮೂರು, ಹನುಮಂತನಗರದ ಇಪ್ಪತ್ತು ಕುಟುಂಬಗಳು ಮತಾಂತರ ಹೊಂದಿ. ಪ್ರತಿ ಭಾನುವಾರ ಕ್ರೈಸ್ತ ಧರ್ಮದ ಪ್ರಾರ್ಥನೆಯನ್ನು ಮಾಡುತ್ತಾರೆ.

ಈ ರೀತಿ ಮತಾಂತರ ಗೊಂಡಂತಹ ಜೇನುಕುರುಬರು ದೈವದ ಆಚರಣೆಯಾಗಲಿ, ಹಬ್ಬ ಹರಿದಿನಗಳಾಗಲೀ, ಪೂಜೆ, ಪುರಸ್ಕರ ಇನ್ನುಳಿದ ಎಲ್ಲಾ ಆಚರಣೆಗಳನ್ನು ಸಂಪೂರ್ಣವಾಗಿ ಬಿಡುತ್ತಿರುವುದು ಕ್ಷೇತ್ರ ಕಾರ್ಯದಲ್ಲಿ ಕಂಡು ಬಂದಿದೆ.

ಜೇನುಕುರುಬರು ತಮ್ಮ ಪಾರಂಪರಿಕ ನೆಲೆಗಳನ್ನು ಕ್ರಮೇಣವಾಗಿ ಕಳೆದುಕೊಳ್ಳುತ್ತಿರುವುದು ಒಂದೆಡೆಯಾದರೆ, ಇದರ ಪರಿಣಾಮವಾಗಿ ಇವರು ತಮ್ಮ ಸಾಂಸ್ಕೃತಿಕ ಪರಂಪರೆಯನ್ನೇ ಕಳೆದುಕೊಳ್ಳುವಂತಾಗಿದೆ. ಬಾಹ್ಯ ಸಮಾಜದ ತೋರ್ಪಡಿಕೆ ಜೀವನ ಕ್ರಮಗಳು ಇವರ ಪಾರಂಪರಿಕ ಬದುಕನ್ನು ಬುಡಮೇಲು ಮಾಡುತ್ತಿವೆ. ಈ ವಿಚಾರವಾಗಿ ಸಂಸ್ಕೃತಿಯ ಬಲವಂತ ಹೇರಿಕೆಗಳೂ ನಡೆಯುತ್ತಿರುವುದು ದುರ್ದೈವವೇ ಸರಿ.

### ೪. ೯. ಧಾರ್ಮಿಕ ಸಮಸ್ಯೆಗಳು

ಧಾರ್ಮಿಕ ಆಚರಣೆಗಳು ಇವರ ಸಂಸ್ಕೃತಿಯ ಮೂಲ ಬೇರನ್ನು ಗಟ್ಟಿಯಾಗಿ ಹಿಡಿದಿಟ್ಟು ಕೊಂಡಿರುವಂತಹವು. ಬದಲಾದ ಸನ್ನಿವೇಶಗಳಿಂದಾಗಿ ಧಾರ್ಮಿಕ ನೆಲೆಗಟ್ಟಿನಲ್ಲಿ ಇವರ ಜೀವನದ ಸತ್ವವನ್ನು ಉಳಿಸಿಕೊಳ್ಳಲು ಕಷ್ಟ ಸಾಧ್ಯವಾಗಿದೆ.

- ಜೇನುಕುರುಬರ ಮೂಲ ದೈವದ ನೆಲೆಗಳು ದಟ್ಟ ಅರಣ್ಯದೊಳಗೆ ಇವೆ. ಪುನರ್ವಸತೀಕರಣದಿಂದ ಹೊರಬಂದ ಇವರಿಗೆ ಇವರ ದೈವದ ನೆಲೆಗಳಿಗೆ ಹೋಗಿ ಪೂಜಿಸಲು ಅರಣ್ಯ ಇಲಾಖೆಯ ಅನುಮತಿ ಕಡ್ಡಾಯವಾಗಿದೆ. ಕೆಲವೊಮ್ಮೆ ಅನುಮತಿ ಸಿಗುತ್ತದೆ, ಕೆಲವು ಸಂದರ್ಭದಲ್ಲಿ ಅನುಮತಿ ಕೊಡುವುದಿಲ್ಲ. ಇದರಿಂದ ಇವರಿಗೆ ತಮ್ಮ ದೇವರ ಮೂಲಸ್ಥಾನಗಳಲ್ಲಿಗೆ ಹೋಗಿ ಕಷ್ಟ ತೊಂದರೆಗಳನ್ನು ಹೇಳಿಕೊಂಡು ಪೂಜೆ, ಅರಕೆ ಮಾಡಿಕೊಳ್ಳಲು ಸ್ವತಂತ್ರವಿಲ್ಲದಂತಾಗಿರುವುದು ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ.

* ಹೊರದಟ್ಟಲ್ಪಟ್ಟ ಬುಡಕಟ್ಟುಗಳಲ್ಲಿ ಜೇನುಕುರುಬ, ಕಾಡುಕುರುಬ ಯರವ ಪಣಿಯ ಸೋಲಿಗ ಮುಂತಾದವರುಗಳಿಗೆ ಒಂದೇ ನೆಲೆಯನ್ನು ನೀಡಿರುವುದರಿಂದ ಅವರವರ ಧಾರ್ಮಿಕ ಆಚರಣೆಗಳಿಗೆ ಮಹತ್ವದ ಸ್ಥಾನ ನೀಡಲು ಹಾಗೂ ಆಚರಣೆಯಲ್ಲಿ ಮುಕ್ತ ಭಾವನೆಯಿಂದ ಪಾಲ್ಗೊಳ್ಳಲು, ಆಚರಿಸಲು ಸಾಧ್ಯವಾಗದೇ ಧಾರ್ಮಿಕ ಹಬ್ಬ, ಹರಿದಿನಗಳನ್ನು ಸರಳೀಕರಿಸಬೇಕಾದ ಒತ್ತಾಯ ಪೂರ್ವಕ ಒತ್ತಡಗಳು ಇರುತ್ತವೆ. ಇದರಿಂದ ಧಾರ್ಮಿಕ ವಿಧಿ ವಿಧಾನಗಳ ಮೂಲ ಮೌಲ್ಯ ಕಳೆದು ಹೋಗುತ್ತಿದೆ.
* ಕಾಡಿನೊಳಗೆ ಇದ್ದ ಜೇನುಕುರುಬರು ಪ್ರಕೃತಿಯ ಆರಾಧಕರು. ಪರಿಸರದಿಂದ ದೂರ ಇರಿಸಿರುವುದರಿಂದ ಮೂಲ ದೈವಗಳ ನೆಲೆಯೂ ಇವರಿಂದ ದೂರವಾಗಿ ಅವುಗಳ ಆಚರಣೆಗೆ ಮಹತ್ವದ ಸ್ಥಾನವೂ ಇಲ್ಲದಂತಾಗಿ, ಹೊರಜಗತ್ತಿನ ದೈವಗಳ ಆಕರ್ಷಣೆಗೆ ಕಟ್ಟು ಬಿದ್ದು ಅವುಗಳನ್ನು ಆಚರಿಸುವ ಪರಿಪಾಠ ರೂಢಿಸಿಕೊಳ್ಳುವಂತಾಗಿದೆ.
* ಕಾಡಿನ ಒಳಗೆ ಹಾಡಿಯ ರಚನಾ ಮಾದರಿಯು ಧಾರ್ಮಿಕ ನೆಲೆಗೆ ಸೂಕ್ತವಾಗುವ ರೀತಿಯಲ್ಲಿ ಇವರೇ ನಿರ್ಮಿಸಿಕೊಳ್ಳುತ್ತಿದ್ದರು. ಈಗ ವಾಸಿಸುವ ವಸತೀಕರಣದ ಮನೆಗಳಲ್ಲಿ ಮೂಲ ರಚನಾ ಮಾದರಿ ಇಲ್ಲದೇ ಇರುವುದು. ಪೂಜಾ ಮಾದರಿಯನ್ನು ಬದಲಾಯಿಸಿಕೊಳ್ಳುವ ಸಂದರ್ಭ ಎದುರಿಸುತ್ತಿದ್ದಾರೆ. ಹಾಡಿಗಳಲ್ಲಿ ದೈವದ ನೆಲೆಗೆ ಪ್ರತ್ಯೇಕ ಗುಡಿಸಲನ್ನು ವಾಸಿಸುವ ಗುಡಿಸಲಿನಿಂದ ಹದಿನೈದು- ಇಪ್ಪತ್ತು ಮಾರು ದೂರದಲ್ಲಿ ನಿರ್ಮಿಸುತ್ತಿದ್ದರು. ಮುಟ್ಟಾದ ಹೆಂಗಸರು ಅವಿವಾಹಿತ ವಯಸ್ಕ ಹೆಣ್ಣು ಮಕ್ಕಳು ಏಳು ದಿನಗಳು ಆ ಕಡೆ ಹೋಗುತ್ತಿರಲಿಲ್ಲ. ಅನಂತರ ಸಗಣಿಯಿಂದ ಸಾರಿಸಿ ಗೋಮೂತ್ರ ಹಾಕಿಕೊಂಡು ಸೂತಕ ಕಳೆದ ಮೇಲೆಯೇ ಧಾರ್ಮಿಕ ಗುಡಿಯ ಗುಡಿಸಲನ್ನು ಪ್ರವೇಶಿಸುತ್ತಿದ್ದರು. ಪುನರ್ವಸತೀಕರಣದ ನೆಲೆಯಲ್ಲಿ ಎಲ್ಲವೂ ಒಂದೇ ಮಾಡಿನೊಳಗೆ ಇರುವುದರಿಂದ ದೇವರ ಗುಡಿಗೆ ಪ್ರತ್ಯೇಕ ನೆಲೆ ಇಲ್ಲ. ಇದು ಇವರಿಗೆ ಕಸಿವಿಸಿ ಉಂಟು ಮಾಡುವ ಮೂಲಕ ಮೂಲ ಆಚರಣೆಗೆ ಅವಕಾಶ ಇಲ್ಲದಂತಾಗಿದೆ.
* ಹೊರ ಜಗತ್ತಿನೊಂದಿಗೆ ಬೆರೆಯುತ್ತಿರುವ ಜೇನುಕುರುಬರ ಯುವ ಸಮೂಹ ಇಂದು ಪ್ರಕೃತಿ ಆರಾಧನೆ, ಕುಲದೈವಗಳ ಆಚರಣೆ, ದೈವದ ಬಗೆಗಿನ ನಂಬಿಕೆಯ ಪಾಲನೆಯನ್ನು ಬಿಟ್ಟು ಹೊರಜಗತ್ತಿನ ದೇವರುಗಳನ್ನು ಚಿತ್ರಪಟದಲ್ಲಿರುವ ದೇವರುಗಳನ್ನು ಪೂಜಿಸುವ ಅನಿವಾರ್ಯತೆ ಉಂಟಾಗಿದೆ.
* ಕ್ರೈಸ್ತ ಧರ್ಮದವರ ಪ್ರಚಾರ ಕಾರ್ಯ ಜೇನುಕುರುಬರ ಹಾಡಿ, ಪುನರ್ವಸತೀಕರಣದ ಕಾಲೋನಿಗಳನ್ನು ಬಿಟ್ಟಿಲ್ಲ. ಇವರ ನಯವಾದ ಮಾತುಗಾರಿಕೆಯಿಂದ ಪ್ರಭಾವಿತರಾದ ಮುಗ್ಧ ಮನಸ್ಸಿನ ಜೇನುಕುರುಬರು ಬಹಳಷ್ಟು ಕಡೆ ಮತಾಂತರವಾಗುತ್ತಿದ್ದಾರೆ. ಮತಾಂತರಗೊಳಿಸಿದ

ಕ್ರೈಸ್ತರು ಜೇನುಕುರುಬರನ್ನು ಅಷ್ಟಕ್ಕೆ ಸುಮ್ಮನಿರಲು ಬಿಡುತ್ತಿಲ್ಲ. ಪದೇ ಪದೇ ಅವರು ವಾಸಿಸುವ ನೆಲೆಗಳಿಗೆ ಹೋಗಿ ಕ್ರೈಸ್ತ ಧರ್ಮದ ಆಚರಣೆ ನಂಬಿಕೆಗಳ ಬಗೆಗೆ ಬೋಧಿಸುವುದರ ಜೊತೆಗೆ ಇವರು ಸಂಪೂರ್ಣವಾಗಿ ಮೂಲ ದೈವವನ್ನು ಮರೆತು ಕ್ರೈಸ್ತ ಧರ್ಮದ ವಿಧಿಗಳಿಗೆ ಅನುಗುಣವಾಗಿ ಜೀವನ ವಿಧಾನವನ್ನು ಬದಲಾಯಿಸಿಕೊಳ್ಳುವಂತೆ ಮಾಡಿವೆ. ಕ್ಷೇತ್ರ ಕಾರ್ಯದಲ್ಲಿ ಕಂಡುಬಂದಂತೆ ಮತಾಂತರಗೊಂಡ ಜೇನುಕುರುಬರು ಸಂಪೂರ್ಣ ಉಡುಗೆ ತೊಡುಗೆಯನ್ನು ಕ್ರೈಸ್ತ ಧರ್ಮದ ರೀತಿಗೆ ಬದಲಾಯಿಸಿಕೊಂಡು ಜೇನುಕುರುಬರ ಮೂಲ ಆಚರಣೆಗಳನ್ನು ನಿರ್ದಾಕ್ಷಿಣ್ಯವಾಗಿ ಮಾರಣಹೋಮ ಮಾಡಿವೆ.

ಮಾಹಿತಿದಾರರು.

ಇಂದ್ರ, ಮಜ್ಜನಕುಪ್ಪೆ ಹಾಡಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.

ಕಡ್ಡಿ ಜೆ ಕೆ, ಕೊಲ್ಲಿ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಚಂದ್ರಪ್ಪ ಟ ಟ ಭಾಗವತ, ಗದ್ದೆ ಹಾಡಿ. ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ತಿಮ್ಮ ಭಾಗವತಜೆಟ,ನಾಗರಹೊಳೆ ಗದ್ದೆಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ತಿಮ್ಮಿ, ಆಲಂದೋಡು ಪೈಸಾರಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಪುಟ್ಟಮ್ಮ, ಆಲದ ಕಟ್ಟೆ ಹಾಡಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ಮರಿ, ತಟ್ಟೆಕೆರೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಮಾದೇವಮ್ಮ, ಸೋನಳ್ಳಿ ಹಾಡಿ, ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.

ರಮೇಶ್, ಕುಟ್ಟ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ರಾಮಕೃಷ್ಣ, ನಾಣಚ್ಚಿಗದ್ದೆ ಹಾಡಿ, ವಿರಾಜಪೇಟೆ ತಾಲೂಕು, ಕೊಡುಗು ಜಿಲ್ಲೆ.

ಅಧ್ಯಾಯ ಐದು..........

# ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನ

# ಅಧ್ಯಾಯ ಐದು

## ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನ

೫. ೧. ಜೇನು ಕುರುಬರ ಮೂಲ ವೃತ್ತಿ

೫. ೧. ೧. ಜೇನುಕುರುಬ ಸಮುದಾಯದ ಲಿಂಗವಾರು ವಯೋಗುಂಪು ವಿವರ

೫. ೨. ಜೇನುಕುರುಬರ ಕಾಯಕರ್ಹವಾದ ಹಾಗೂ ಕಾಯಕರ್ಹವಲ್ಲದ ಜನರ ವಿವರ

೫. ೩. ಜೇನುಕುರುಬರ ಕಾಯಕಾರ್ಹ ಹಾಗೂ ಕಾಯಕಸ್ಥ ಗುಂಪಿನ ವಿವರ

೫. ೪. ಮೈಸೂರು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

೫. ೫. ಚಾಮರಾಜನಗರ ಜಿಲ್ಲೆಯ ತಾಲೂಕು ವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

೫. ೬. ಕೊಡಗು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

೫. ೭. ಜೇನುಕುರುಬ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ

೫. ೮. ಕುಮ್ರಿ ಬೇಸಾಯ

೫. ೯. ಯೋಜನೆಗಳು

೫. ೧೦. ಭೂ ಹಿಡುವಳಿ

೫. ೧೧. ಆರ್ಥಿಕ ಸಮಸ್ಯೆಗಳು

# ಅಧ್ಯಾಯ ಐದು

## ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನ

ಯಾವುದೇ ಒಂದು ಸಮುದಾಯದ ಆರ್ಥಿಕತೆ ಅದು ಅವಲಂಬಿತಗೊಂಡ ವೃತ್ತಿಯ ಮೇಲೆ ನಿರ್ಧರಿತವಾಗುತ್ತದೆ. ಧರ್ಮವನ್ನೊಳಗೊಂಡಂತೆ ಸಮುದಾಯದ ಎಲ್ಲಾ ಸಾಂಸ್ಕೃತಿಕ ಅಂಶಗಳೂ ಕೂಡ ಆರ್ಥಿಕ ಶಕ್ತಿಗಳ ವಿಕಾಸದಿಂದಲೇ ನಿರ್ಧರಿತವಾಗುತ್ತದೆಂದು ಕಾರ್ಲ್ ಮಾರ್ಕ್ಸ್ ತಿಳಿಸುತ್ತಾರೆ. ಆಯಾ ಬುಡಕಟ್ಟುಗಳ ಆರ್ಥಿಕ ಚಟುವಟಿಕೆಗಳು ಆಯಾ ಬುಡಕಟ್ಟುಗಳ ಸಾಮಾಜಿಕ ರಾಜಕೀಯ ಶೈಕ್ಷಣಿಕ ಸ್ಥಿತಿಗತಿಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಆರ್ಥಿಕ ಉತ್ಪಾದನೆಯ ರೂಪವೇ ಸಾಮಾಜಿಕ ಪರಿವರ್ತನೆಯ ಮೂಲವೆಂಬ ಮಾರ್ಕ್ಸ್‌ನ ಹೇಳಿಕೆಯಿಂದ ಸ್ಪಷ್ಟವಾಗುವುದು. ದುಡಿಮೆಯನ್ನು ಅವಲಂಬಿಸಿದ ಜನರು ತಮ್ಮ ಉತ್ಪಾದನಾ ರೀತಿಯ ವೈಶಿಷ್ಟ್ಯತೆಗೆ ಅನುಸಾರವಾಗಿ ನಿರ್ದಿಷ್ಟ ರೀತಿಯ ಸಾಮಾಜಿಕ ಸಂಘಟನಾ ವ್ಯವಸ್ಥೆಯನ್ನು ನಿರ್ಮಿಸುತ್ತಾರೆ. ಆದಿಮ ಕಾಲದ ಮಾನವನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಯಿದ್ದಿ ತೆಂಬುದು ತಿಳಿದುಬರುವುದಾದರೂ ನಂತರದ ಹಂತದ ಮಾನವನ ಸಾಮಾಜಿಕ ವ್ಯವಸ್ಥೆ ಹೆಚ್ಚು ಹೆಚ್ಚು ಅಸಮಾನತೆಯಿಂದ ಕೂಡಿದ್ದಿತು. ಅದು ನಿರಂತವಾಗಿ ಮುಂದುವರೆದಿದೆ ಎಂಬುದು ಸ್ಪಷ್ಟ. ಬಹುಶಃ ಈ ರೀತಿಯ ಅಸಮಾನತೆಗೆ ಶ್ರಮ ವಿಭಜನೆಯೇ ಕಾರಣವೆಂಬುದು ಅಷ್ಟೇ ಸ್ಪಷ್ಟ. "ಮಿಗುತಾಯದ ಮೇಲೆ ಒಡೆತನವನ್ನು ಹೊಂದಿದ ವರ್ಗವು ಉತ್ಪಾದನಾ ಸಾಧನಗಳ ಮೇಲೂ ತನ್ನ ಏಕಸ್ವಾಮ್ಯವನ್ನು ನಿರ್ದಿಷ್ಟ ಸ್ಥರಗಳಿಗೆ ಸೀಮಿತಗೊಳಿಸಿಕೊಳ್ಳುತ್ತದೆ. ಈ ಕಾರಣಕ್ಕಾಗಿ ಆರ್ಥಿಕತೆಯು ಲೌಕಿಕ ಅಧಿಕಾರ ರಚನೆಯನ್ನು ಮತ್ತು ಅಧೀನ ಸ್ಥಿತಿಯನ್ನು ರೂಪಿಸುತ್ತದೆ" (ಪ್ರಭಾಕರ ಎ ಎಸ್: ೨೦೧೦: ೧೩೨)

ಬುಡಕಟ್ಟುಗಳನ್ನು ಮುಖ್ಯವಾಹಿನಿಯಲ್ಲಿಲ್ಲದ ಪ್ರತ್ಯೇಕವಾದ ಸಮುದಾಯಗಳೆಂದು ಪರಿಗಣಿಸಿದರೂ ಕೂಡ ಇಂದು ಕಾಡಿನಿಂದ ಹೊರದೂಡಲ್ಪಟ್ಟ ಬುಡಕಟ್ಟುಗಳ ಮೇಲೆ ಮುಖ್ಯವಾಹಿನಿಗೆ ಒಳಗಾದ ಎಲ್ಲಾ ಜಾತಿ ಸಮುದಾಯಗಳ ಪ್ರಭಾವ ದಟ್ಟವಾಗಿ ಆವರಿಸಿರುವುದನ್ನು ಕಾಣುತ್ತೇವೆ. ಬುಡಕಟ್ಟುಗಳ ಸಂರಚನೆಯು ಸಡಿಲಗೊಂಡಿದ್ದು ಬಹುಶಃ ವಿದೇಶಿ ಮಿಷನರಿಗಳ ಮತ್ತು ಯುರೋಪಿಯನ್ನರ ಆಡಳಿತ ಕ್ರಮದಿಂದ ಎಂದು ಹೇಳಬಹುದು. ಆ ನಂತರ ಭಾರತ ಸ್ವತಂತ್ರಗೊಂಡ ತರುವಾಯ ಭಾರತದ ಸಂವಿಧಾನ ಮತ್ತು ಶಾಸನಗಳ ಕಾನೂನುಗಳಿಂದ ಸಾಮಾಜಿಕ ವೇಗವು ಇನ್ನೂ ಚುರುಕುಗೊಂಡಿತು. ಭಾರತಕ್ಕೆ ಲಗ್ಗೆಯಿಟ್ಟ ಕೈಗಾರೀಕರಣವು ಶ್ರೇಣೀಕೃತ ಜಾತಿ ವ್ಯವಸ್ಥೆ ಹಾಗೂ ವೃತ್ತಿ ರಚನೆಗಳ ನಡುವಿನ ಹೊಂದಾಣಿಕೆಯನ್ನೇ ಬುಡಮೇಲು ಮಾಡಿತು. ಈ ರೀತಿಯ ಚಟುವಟಿಕೆಗಳು ಮುಂದೆ ಹೊಸಬಗೆಯ ಬೆಳವಣಿಗೆಗೆ ಕಾರಣವಾಯಿತು.

## ೫. ೧. ಜೇನುಕುರುಬರ ಮೂಲ ವೃತ್ತಿ

ಜೇನುಕುರುಬರ ಮೂಲ ವೃತ್ತಿಯು ಅವರ ಹೆಸರೇ ಸೂಚಿಸುವಂತೆ ಜೇನನ್ನು ಸಂಗ್ರಹಿಸುವುದಾಗಿದ್ದಿತು. ಜೇನಿನಲ್ಲಿ ವಿವಿಧ ರೀತಿಯ ಜೇನುಗಳಿವೆ. ತುಡುವೆ ಜೇನು, ಕೋಲ್ಜೇನು, ನರಜು ಜೇನು, ಹಾಗೂ ದೊಡ್ಡ ಜೇನು ಹೀಗೆ ವಿವಿಧ ಪ್ರಕಾರದ ಜೇನುಗಳನ್ನು ಗುರುತಿಸುವುದು ಹಾಗೂ ಅದನ್ನು ಬಿಡಿಸುವುದು ಜೇನುಕುರುಬರಿಗೆ ಕರಗತವಾದ ವಿದ್ಯೆಯಾಗಿದೆ. ಇಂದಿಗೂ ಹಳೆಯ ತಲೆಮಾರಿನ ಹಾಗೂ ಮಧ್ಯವಯಸ್ಕರರು ಜೇನನ್ನು ಬಿಡಿಸುವ ಕಾಯಕದಲ್ಲಿ ನಿಪುಣರು. ಮಹಿಳೆಯರು ಸಾಮಾನ್ಯವಾಗಿ ಬೇಲಿ ಸಾಲುಗಳಲ್ಲಿ ಯಾರ ಕಣ್ಣಿಗೂ ಬೀಳದಂತೆ ತಟ್ಟೆಯನ್ನು ಕಟ್ಟುವ ಕೋಲ್ಜೇನು ಹಾಗೂ ತುಡುವೆ ಜೇನನ್ನು ಯಾರ ಸಹಾಯವಿಲ್ಲದೆ ಬಿಡಿಸಬಲ್ಲರು. ಹಾಗೆಯೇ ಮರದ ಪೊಟರೆಗಳಲ್ಲಿ ಜೇನುತಟ್ಟೆ ಕಟ್ಟುವ ನರಜು ಜೇನನ್ನು ಬಿಡಿಸುವುದರಲ್ಲೂ ಮಹಿಳೆಯರು ನಿಪುಣರು. ಅಂದರೆ ಕಿರು ತಟ್ಟೆಗಳನ್ನು ಕೈಗೆ ನಿಲುಕುವಷ್ಟು ಎತ್ತರದಲ್ಲಿ ಕಟ್ಟುವ ಜೇನನ್ನು ಪುರುಷರಂತೆ ಮಹಿಳೆಯರೂ ಕೀಳುತ್ತಾರೆ. ಆದರೆ ಹಿರಿಯ ಜೇನನ್ನು ಕೀಳಲು ಮುಂದಾಗುವವರು ಪುರುಷರಾಗಿರುತ್ತಾರೆ. ಪುರುಷರಿಗೆ ಸಹಕಾರಿಯಾಗಿ ಸಹಾಯಕ ಕೆಲಸಗಳನ್ನು ಮಕ್ಕಳು ಹಾಗೂ ಮಹಿಳೆಯರು ನಿರ್ವಹಿಸುತ್ತಾರೆ. ಸಾಮಾನ್ಯವಾಗಿ ಹಿರಿಯ ಜೇನನ್ನು ಬಿಡಿಸಲು ಸಂಜೆ ಹೊತ್ತನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಜೇನುಕುರುಬರಲ್ಲಿ ಈ ರೀತಿಯ ಯಾವುದೇ ಕೆಲಸವನ್ನು ನಿರ್ವಹಿಸಲು ಇಡೀ ಕುಟುಂಬ ಅಂದರೆ ಗಂಡ, ಹೆಂಡತಿ, ಮಕ್ಕಳು ಹೀಗೆ ಕುಟುಂಬವೇ ಕಾಡಿಗೆ ತೆರಳುತ್ತದೆ. ಗಂಡ ಜೇನನ್ನು ಬಿಡಿಸಲು ಮರವೇರಿದರೆ ಹೆಂತಿಯಾದವಳು ಹಗ್ಗದ ಸಹಾಯದಿಂದ ಬಕೀಟನ್ನು ಮರದ ಮೇಲಕ್ಕೆ ಕಳಿಸುವುದು, ಜೇನು ಕೊಯ್ದಾದ ತರುವಾಯ ಆ ಬಕೀಟನ್ನು ಹಗ್ಗದ ಸಹಾಯದಿಂದ ಕೆಳಗೆ ಇಳಿಸುವುದು. ಜೇನನ್ನು ಜೇನು ತಟ್ಟೆಯಿಂದ ಬೇರ್ಪಡಿಸಿ ಮೇಣವನ್ನು ಪ್ರತ್ಯೇಕಗೊಳಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಾಳೆ.

ಪುರುಷನಾದವನು ಹಸಿ ಸೊಪ್ಪನ್ನು ತೆಂಗಿನ ನಾರಿನೊಂದಿಗೆ ಸೇರಿಸಿ ಜೇನನ್ನು ತಟ್ಟೆಯಿಂದ ದೂರ ಓಡಿಸಲು ಹೊಗೆ ಸೃಷ್ಟಿಸುವುದು ಹಾಗೂ ತಟ್ಟೆಯನ್ನು ಕೊಯ್ಯುವ ಕೆಲಸವನ್ನು ಮಾಡುತ್ತಾನೆ. ಸಾಮಾನ್ಯವಾಗಿ ಹಿರಿ ಜೇನು ದೊಡ್ಡ ದೊಡ್ಡ ಮರಗಳಲ್ಲಿ ಕಟ್ಟುತ್ತವೆ. ಹಾಗೆಯೇ ಗುಂಪು ಗುಂಪಾಗಿ ತಟ್ಟೆಗಳನ್ನು ಕಟ್ಟಿರುತ್ತವೆ. ಒಂದು ಜೇನುತಟ್ಟೆಯಿಂದ ಒಮ್ಮೊಮ್ಮೆ ನಾಲ್ಕೈದು ಬಕೀಟಿನಷ್ಟಾದರೂ ಜೇನು ಸಿಗುವುದುಂಟು. ಹೀಗಿದ್ದಾಗ ತಮ್ಮ ಕುಟುಂಬ ಹೊತ್ತಯ್ಯಲು ಎಷ್ಟು ಸಾಧ್ಯವಾಗುತ್ತದೋ ಅಷ್ಟು ಜೇನನ್ನು ಮಾತ್ರ ಕೊಯ್ಯುತ್ತಾರೆ. ತಮ್ಮ ಆಹಾರಕ್ಕಾಗಿ ಉಪಯೋಗಿಸಲು ಕೊಯ್ಯುವ ಜೇನನ್ನು ಕುಟುಂಬಕ್ಕೆ ಹೆಚ್ಚಾದ ಜೇನನ್ನು ಪೇಟೆಯ ಅಂಗಡಿಗಳಿಗೆ ಇಲ್ಲವೆ ಲ್ಯಾಂಪ್ಸ್ ಸೊಸೈಟಿಗೆ ಮಾರುತ್ತಾರೆ.

ಹೀಗೆ ಜೇನನ್ನು ಕೀಳುವ ಕಾಯಕದಲ್ಲಿ ಜೇನುಕುರುಬರು ನಿಪುಣರಾಗಿದ್ದಾರೆ. ಇಲ್ಲಿ ವೃತ್ತಿಯ ವಿಚಾರವಾಗಿ ಪುರುಷ ಮಹಿಳೆ ಎಂದು ವಿಭಾಗಿಸಲಾಗುವುದಿಲ್ಲ.

ಹಾಗೆಯೇ ಆಹಾರ ಸಂಗ್ರಹಣೆಗಾಗಿ ಕಾಡನ್ನೇ ಅವಲಂಭಿಸಿದವರು ಜೇನುಕುರುಬರು. ಮುಖ್ಯವಾಗಿ ಕಾಡಿನಲ್ಲಿ ನೈಸರ್ಗಿಕವಾಗಿ ಬೆಳೆಯುವ ವಿವಿಧ ರೀತಿಯ ಗೆಣಸುಗಳನ್ನು ಸಂಗ್ರಹಿಸುತ್ತಾರೆ. ಗೆಣಸುಗಳ ಸಂಗ್ರಹಕ್ಕೂ ಹೆಣ್ಣು ಗಂಡೆಂಬ ಭೇದವಿಲ್ಲದೆ ಇಡೀ ಕುಟುಂಬವೇ ತೆರಳುತ್ತದೆ. ಗೆಣಸಿಗಾಗಿ ಭೂಮಿಯನ್ನು ಅಗೆಯಲು ಚೂಪಾದ ಉದ್ದನೆಯ ಕೋಲು, ಹಂಬು ಬಿಡಿಸಲು ಕತ್ತಿ, ದೊರೆತ ಗೆಣಸನ್ನು ತರಲು ಬಳಸುವ ಜೋಳಿಗೆ ಇಷ್ಟಿದ್ದರೆ ಸಾಕು. ಗೆಣಸನ್ನು ಸಂಗ್ರಹಿಸಲು ಹೊರಡುತ್ತಾರೆ. ಮರಗೆಣಸನ್ನು ಹೆಚ್ಚಾಗಿ ಸಂಗ್ರಹಿಸುವ ಜೇನುಕುರುಬರು ಮರಗೆಣಸಿನ ಹೊರತಾಗಿ ಇಪ್ಪತ್ತಕ್ಕೂ ಹೆಚ್ಚಿನ ರೀತಿಯ ಗೆಣಸನ್ನು ಸಂಗ್ರಹಿಸಿ ಬಳಸುತ್ತಾರೆ. ಹಾಗೆಯೇ ಕಾಡಿನಲ್ಲಿ ಸಿಗುವ ಸೀಗೆ ಸೊಪ್ಪು, ಕೀರೆ, ರಾಜಗಿರಿ ಸೊಪ್ಪು ಹಾಗೂ ರಾಜಗಿರಿ ಬೀಜ, ಬಿದಿರ ಕಳಲೆ, ವಿವಿಧ ರೀತಿಯ ಸೊಪ್ಪು ಮತ್ತು ಹಣ್ಣುಗಳನ್ನೂ ಆಹಾರಕ್ಕಾಗಿ ಬಳಸುತ್ತಾರೆ. ಈ ರೀತಿ ಆಹಾರ ಸಂಗ್ರಹಿಸುವಾಗ ಆಹಾರದ ಮೂಲವನ್ನು ನಾಶಗೊಳಿಸದೆ ಮುಂದಿನ ವರ್ಷಕ್ಕೂ ಅದರ ಬೆಳೆ ಸಮೃದ್ಧವಾಗಿರುವಂತೆ ನೋಡಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಜೀವನಾಧಾರವಾದ ಆಹಾರ ಸಂಗ್ರಹಣೆ, ಬಳಕೆಯಿಂದ ತೃಪ್ತರಾಗುವ ಜೇನುಕುರುಬರ ಮೂಲ ಉದ್ದೇಶ ಮತ್ತು ವೃತ್ತಿಯು ಕಾಡನ್ನು ಅವಲಂಭಿಸಿದ್ದಾಗಿದೆ. ಜೇನುಕುರುಬರ ಮನೆಗಳು ಸಹ ಕಾಡಿನ ಮಧ್ಯದಲ್ಲಿದ್ದು ಅದರ ರಚನೆ ತುಂಬಾ ಸರಳವಾಗಿರುತ್ತದೆ. ಕಾಡಿನಲ್ಲಿ ದೊರೆಯುವ ಮರ, ಬಿದಿರು, ಹುಲ್ಲನ್ನು ಬಳಸಿ ತುಂಬಾ ಸರಳವಾದ ಮನೆಗಳನ್ನು ರಚಿಸಿಕೊಳ್ಳುತ್ತಾರೆ. ಈ ಮನೆಗಳ ರಚನೆಗಾಗಿ ಯಾವುದೇ ಅಂಗಡಿಯಿಂದ ಯಾವ ವಸ್ತುವನ್ನೂ ಖರೀದಿ ಮಾಡುವುದಿಲ್ಲ. ಹೀಗಾಗಿ ಸರಳ ಜೀವನವನ್ನೇ ಮಂತ್ರವಾಗಿಸಿಕೊಂಡ ಜೇನುಕುರುಬರು ಅವಶ್ಯಕತೆಗಿಂತ ಹೆಚ್ಚಾಗಿ ಏನನ್ನೂ ಸಂಗ್ರಹಿಸುವುದಿಲ್ಲ. ಇವರ ಮೂಲ ವೃತ್ತಿ ಇವರ ಜೀವನ ಶೈಲಿಯನ್ನು ಅವಲಂಬಿಸಿದೆ. ಈ ವೃತ್ತಿಯಲ್ಲಿ ಮಹಿಳೆ, ಪುರುಷ ಮಕ್ಕಳು ಎಂಬ ಯಾವ ಭೇದವೂ ಇರುವುದಿಲ್ಲ. ಅವರವರ ಸಾಮಾರ್ಥ್ಯಕ್ಕೆ ಅನುಗುಣವಾಗಿ ಕೆಲಸವನ್ನು ಹಂಚಿಕೊಂಡು ಸಂತೃಪ್ತಿಯ ಬದುಕನ್ನು ನಡೆಸುವ ಜಾಯಮಾನದವರು ಜೇನುಕುರುಬರಾಗಿದ್ದಾರೆ.

### ೫. ೧. ೧. ಜೇನುಕುರುಬ ಸಮುದಾಯದ ಲಿಂಗವಾರು ವಯೋಗುಂಪು ವಿವರ.

ಜೇನುಕುರುಬರ ಮೂರು ಜಿಲ್ಲೆಗಳನ್ನು ಸೇರಿಸಿ ಒಟ್ಟು ಜನಸಂಖ್ಯೆ ೩೭,೬೩೮ ಇದೆ. ಇದರಲ್ಲಿ ಪುರುಷರು ೧೯೭೨೮ ಹಾಗೂ ಮಹಿಳೆಯರು ೧೮೯೧೦ ರಷ್ಟಿದ್ದಾರೆ. ಈ ಒಟ್ಟು ಜನಸಂಖ್ಯೆಯಲ್ಲಿ ೦-೬ ವಯೋಮಾನದವರ ಸಂಖ್ಯೆಯು ಒಟ್ಟು ೭೧೨೪ (ಶೇ. ೧೮.೯೩) ಇದೆ. ಇದರಲ್ಲಿ ಗಂಡುಮಕ್ಕಳ ಸಂಖ್ಯೆಯು ೩೪೯೨ ಹಾಗೂ ಹೆಣ್ಣುಮಕ್ಕಳ ಸಂಖ್ಯೆಯು ೩೨೩೨ ಇದೆ.

ಅದೇ ರೀತಿ ೭ನೇ ವಯಸ್ಸಿನ ಮೇಲ್ಪಟ್ಟು ೧೭ನೇ ವಯೋಮಾನದವರವರೆಗೆ ಇರುವವರ ಸಂಖ್ಯೆಯು ಒಟ್ಟು ೧೦೭೨೪ (ಶೇ. ೨೮.೪೯) ಇದೆ. ಇದರಲ್ಲಿ ಗಂಡುಮಕ್ಕಳ ಸಂಖ್ಯೆಯು ೫೬೮೪ ಹಾಗೂ ಹೆಣ್ಣುಮಕ್ಕಳ ಸಂಖ್ಯೆಯು ೫೦೪೦ ಇದೆ. ಹಾಗೆಯೇ ೧೮ ವರ್ಷಕ್ಕಿಂತ ಮೇಲ್ಪಟ್ಟ ೪೦ ವರ್ಷದೊಳಗಿನ ವಯೋಮಾನದವರು ಒಟ್ಟು ೧೪೪೮೭ (ಶೇ. ೩೮.೪೯) ಇದ್ದಾರೆ. ಇವರಲ್ಲಿ ಪುರುಷರು ೧೯೭೬ ಹಾಗೂ ಮಹಿಳೆಯರು ೧೮೫೫ ಇದ್ದಾರೆ.


ಹಾಗೆಯೇ ೪೧ ವರ್ಷಕ್ಕಿಂತ ಮೇಲ್ಪಟ್ಟ ೬೦ ವರ್ಷದೊಳಗಿನ ವಯೋಮಾನದವರು ಒಟ್ಟು ೩೮೩೧ (ಶೇ. ೧೦.೧೮) ಇದ್ದಾರೆ. ಇವರಲ್ಲಿ ಪುರುಷರು ೧೯೭೬ ಹಾಗೂ ಮಹಿಳೆಯರು ೧೮೫೫ ಇದ್ದಾರೆ. ೬೧ ವರ್ಷಕ್ಕಿಂತ ಮೇಲ್ಪಟ್ಟ ವಯೋಮಾನದವರು ಒಟ್ಟು ೧೪೭೨ (ಶೇ. ೩.೯೧) ಇದ್ದು ಪುರುಷರು ೮೬೯ ಹಾಗೂ ಮಹಿಳೆಯರು ೬೦೩ ಇರುವರು.

**ಕೋಷ್ಟಕ : ೫. ೧. ಜೇನುಕುರುಬ ಸಮುದಾಯದ ಲಿಂಗವಾರು ವಯೋಗುಂಪು ಪ್ರಮಾಣ**

| ವಯೋಗುಂಪು | ಗಂಡು | ಹೆಣ್ಣು | ಒಟ್ಟು | % |
|---|---|---|---|---|
| ೦-೬ | ೩೮೯೨ | ೩೨೩೨ | ೭೧೨೪ | ೧೮.೯೨೭೭ |
| ೭-೧೭ | ೫೬೮೪ | ೫೦೪೦ | ೧೦೭೨೪ | ೨೮.೪೯೨೫ |
| ೧೮-೪೦ | ೭೩೦೭ | ೭೧೮೦ | ೧೪೪೮೭ | ೩೮.೪೯೦೪ |
| ೪೧-೬೦ | ೧೯೭೬ | ೧೮೫೫ | ೩೮೩೧ | ೧೦.೧೭೮೫ |
| ೬೧ ರ ಮೇಲ್ಪಟ್ಟ | ೮೬೯ | ೬೦೩ | ೧೪೭೨ | ೩.೯೧೦೯೪ |
| ಒಟ್ಟು | ೧೯೭೨೮ | ೧೭೯೧೦ | ೩೭೬೩೮ | |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

**ಲಂಬಚಿತ್ರ : ೫. ೧. ಜೇನುಕುರುಬ ಲಿಂಗವಾರು ವಯೋಗುಂಪು**



### ೫. ೨. ಜೇನುಕುರುಬರ ಕಾಯಕರ್ಹವಾದ ಹಾಗೂ ಕಾಯಕರ್ಹವಲ್ಲದ ಜನರ ವಿವರ

ಸರ್ಕಾರದ ನಿಯಮದ ಪ್ರಕಾರ ಸಾಮಾನ್ಯವಾಗಿ ಹುಟ್ಟಿದ ಮಗುವಿನಿಂದ ೧೭ ವರ್ಷದೊಳಗಿನ ಹುಡುಗರನ್ನು ಯಾವುದೇ ಕೆಲಸಕ್ಕೆ ನಿಯೋಜಿಸುವಂತಿಲ್ಲ ಎಂಬ ಕಾನೂನಾತ್ಮಕ ನಿಯಮವಿದೆ. ಈ ವಯೋಮಾನದ ಮಕ್ಕಳು ಯಾವುದೇ ಕಾಯಕದಲ್ಲಿ ತೊಡಗಿದ್ದರೆ ಅಂಥವರನ್ನು ಬಾಲ ಕಾರ್ಮಿಕರೆಂದು ಪರಿಗಣಿಸಲಾಗುತ್ತದೆ. ಈ ರೀತಿಯ ಬಾಲ ಕಾರ್ಮಿಕರನ್ನು ಯಾರಾದರೂ ದುಡಿಮೆಗೆ ಹಚ್ಚಿದ್ದರೆ ಆ ವ್ಯಕ್ತಿ ಅಥವಾ ಸಂಸ್ಥೆಯನ್ನು ಅಪರಾಧಿಗಳೆಂದು ಕಾನೂನು ಪರಿಗಣಿಸುತ್ತದೆ. ಹಾಗೆಯೇ ಸರ್ಕಾರದ ನಿಯಮದ ಪ್ರಕಾರ ಯಾವುದೇ ವ್ಯಕ್ತಿಯ ನಿವೃತ್ತಿಯ ವಯಸ್ಸನ್ನು ೬೦ ವರ್ಷಗಳೆಂದು ಪರಿಗಣಿಸಲಾಗಿದೆ. ಹೀಗಾಗಿ ಸರ್ಕಾರದ ಸೇವೆಯಲ್ಲಿರುವವರನ್ನು ೬೦ ವರ್ಷ ಪೂರ್ಣಗೊಳ್ಳುತ್ತಿದ್ದಂತೆ ನಿವೃತ್ತಿಗೊಳಿಸಲಾಗುತ್ತದೆ. ನಿವೃತ್ತಿ ಹೊಂದಿದ ವ್ಯಕ್ತಿಯು ಯಾವುದೇ ಕೆಲಸದಲ್ಲಿ ತೊಡಗದೆ ವಿಶ್ರಾಂತ ಜೀವನ ಸಾಗಿಸಬೇಕೆಂಬುದೇ ಇದರ ಉದ್ದೇಶವಾಗಿದೆ. ಹೀಗಾಗಿ ೦-೧೭ ವಯೋಮಾನದವರು ಹಾಗೂ ೬೦ ವರ್ಷ ಮೇಲ್ಪಟ್ಟವರನ್ನು ಕಾಯಕಾರ್ಹರಲ್ಲದ ಗುಂಪಿನವರೆಂದು ಪರಿಗಣಿಸಲಾಗಿದೆ. ಈ ವಯೋಮಾನದವರ ಹೊರತಾದವರು ಕಾಯಕಾರ್ಹ ಗುಂಪಿಗೆ ಸೇರಿದವರಾಗುತ್ತಾರೆ.

| ಕ್ರಸಂ | ವಿವರ | ಜನಸಂಖ್ಯೆ | | |
|---|---|---|---|---|
| | | ಗಂಡು | ಹೆಣ್ಣು | ಒಟ್ಟು |
| ೧ | ಕಾಯಕಾರ್ಹವಲ್ಲದವರು | ೧೦೪೪೫ | ೮೮೭೫ | ೧೯೩೨೦ |
| ೨ | ಕಾಯಕಾರ್ಹರಾದವರು | ೯೨೮೩ | ೯೦೩೫ | ೧೮೩೧೮ |

ಒಟ್ಟಾರೆಯಾಗಿ ಮೂರು ಜಿಲ್ಲೆಗಳನ್ನು ಪರಿಗಣಿಸಿ ನೋಡಿದಾಗ ಕಾಯಕಾರ್ಹರಲ್ಲದವರ ಒಟ್ಟು ಸಂಖ್ಯೆಯು ೧೯೩೨೦ ಇದೆ. ಇದರಲ್ಲಿ ಪುರುಷರು ೧೦೪೪೫ ಹಾಗೂ ೮೮೭೫ ಮಹಿಳೆಯರಿದ್ದಾರೆ. ಕಾಯಕಾರ್ಹರಾದವರ ಒಟ್ಟು ಜನಸಂಖ್ಯೆಯು ೧೮೩೧೮ ಇದೆ. ಇದರಲ್ಲಿ ಪುರುಷರು ೯೨೮೩ ಹಾಗೂ ಮಹಿಳೆಯರು ೯೦೩೫ ಇದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹರಾದವರ ಪ್ರಮಾಣವು ಶೇಕಡ ೪೮.೬೭ ಇದ್ದರೆ ಕಾಯಕಾರ್ಹರಲ್ಲದವರ ಪ್ರಮಾಣ ಶೇಕಡ ೫೧.೩೩ ಇದೆ.

**ಕೋಷ್ಟಕ : ೫. ೨. ಜೇನುಕುರುಬ ಸಮುದಾಯದ ಜಿಲ್ಲಾವಾರು, ತಾಲೂಕುವಾರು, ಕುಟುಂಬ ಲಿಂಗವಾರು ಕಾಯಕರ್ತರು, ಕಾಯಕಸ್ಥರು ಮತ್ತು ನಿರುದ್ಯೋಗಿಗಳ ವಿವರ**

| ಕ್ರ ಸಂ. | ಜಿಲ್ಲೆ | ತಾಲೂಕುಗಳು | ಕುಟುಂಬ | ಕಾಯಕರ್ತರು | | | ಕಾಯಕಸ್ಥರು | | | ನಿರುದ್ಯೋಗಿಗಳು | | |
|---|---|---|---|---|---|---|---|---|---|---|---|---|
| | | | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಮೈಸೂರು | ಎಚ್.ಡಿ. ಕೋಟೆ | ೩೮೮೧ | ೩೯೭೨ | ೩೭೬೨ | ೭೭೩೪ | ೪೨೭೦ | ೪೪೬೩ | ೮೭೩೩ | ೨೯೮ | -೭೦೧ | -೯೯೯ |
| | | ಪಿರಿಯಾಪಟ್ಟಣ | ೧೦೦೬ | ೧೦೪೧ | ೯೮೬ | ೨೦೨೭ | ೧೧೬೨ | ೧೨೦೭ | ೨೩೬೯ | ೧೨೧ | ೨೨೧ | -೩೪೨ |
| | | ಹುಣಸೂರು | ೧೭೦೯ | ೧೫೮೯ | ೧೫೯೪ | ೩೧೮೩ | ೧೪೨೯ | ೧೯೩೩ | ೩೩೬೨ | ೧೬೦ | -೩೩೯ | -೧೭೯ |
| | | ನಂಜನಗೂಡು | ೧೭೩ | ೧೫೩ | ೧೬೧ | ೩೧೪ | ೧೯೩ | ೨೩೬ | ೪೨೯ | -೪೦ | -೭೫ | ೧೧೫ |
| ಮೈಸೂರು ಜಿಲ್ಲೆ | | | ೬೭೬೯ | ೬೭೫೫ | ೬೫೦೩ | ೧೩೨೫೮ | ೭೦೫೪ | ೭೮೩೯ | ೧೪೮೯೩ | ೨೯೯ | ೧೩೩೬ | ೧೬೩೫ |
| ೨ | ಕೊಡಗು | ಸೋಮವಾರಪೇಟೆ | ೮೭೨ | ೯೧೫ | ೮೮೬ | ೧೮೦೧ | ೧೦೦೫ | ೧೧೩೩ | ೨೧೩೮ | -೯೦ | -೨೪೭ | -೩೩೭ |
| | | ವಿರಾಜಪೇಟೆ | ೧೧೫೯ | ೯೭೬ | ೧೦೦೭ | ೧೯೮೩ | ೧೧೫೫ | ೧೩೮೮ | ೨೫೪೩ | ೧೭೯ | -೩೮೧ | -೫೬೦ |
| | | ವಿರಾಜಪೇಟೆ(ಲೈ) | ೪೯ | ೪೮ | ೪೫ | ೯೩ | ೪೪ | ೪೮ | ೯೨ | ೪ | -೩ | ೧ |
| | | ವಿರಾಜಪೇಟೆ(ಪೈ) | ೨೩೩ | ೨೧೫ | ೨೨೯ | ೪೪೪ | ೧೮೭ | ೧೪೦ | ೩೨೭ | ೨೮ | ೮೯ | ೧೧೭ |
| ಕೊಡಗು ಜಿಲ್ಲೆ | | | ೨೩೧೩ | ೨೧೫೪ | ೨೧೬೭ | ೪೩೨೧ | ೨೩೯೧ | ೨೭೦೯ | ೫೧೦೦ | ೨೩೭ | -೫೪೨ | -೭೭೯ |
| ೩ | ಚಾ. ನ. | ಗುಂಡ್ಲುಪೇಟೆ | ೩೩೯ | ೩೭೪ | ೩೬೫ | ೭೩೯ | ೩೮೪ | ೩೭೦ | ೭೫೪ | -೧೦ | -೫ | -೧೫ |
| ಚಾಮರಾಜನಗರ ಜಿಲ್ಲೆ | | | ೩೩೯ | ೩೭೪ | ೩೬೫ | ೭೩೯ | ೩೮೪ | ೩೭೦ | ೭೫೪ | -೧೦ | -೫ | -೧೫ |
| ಒಟ್ಟಾರೆ ಜೇನುಕುರುಬರು | | | ೯೪೨೧ | ೯೨೮೩ | ೯೦೩೫ | ೧೮೩೧೮ | ೯೮೨೯ | ೧೦೯೧೮ | ೨೦೭೪೭ | ೫೪೬ | ೧೮೮೩ | ೨೪೨೯ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

## ೫. ೩. ಜೇನುಕುರುಬರ ಕಾಯಕಾರ್ಹ ಹಾಗೂ ಕಾಯಕಸ್ಥ ಗುಂಪಿನ ವಿವರ

ಮೈಸೂರು ಜಿಲ್ಲೆಯ ಎಚ್ ಡಿ ಕೋಟೆಯಲ್ಲಿ ಒಟ್ಟು ೩೮೮೧ ಜೇನುಕುರುಬ ಕುಟುಂಬಗಳಿವೆ. ಒಟ್ಟು ಜನಸಂಖ್ಯೆಯು ೧೫೩೪೫ ಇದೆ. ಇದರಲ್ಲಿ ಪುರುಷರು ೭೯೮೭ ಹಾಗೂ ಮಹಿಳೆಯರು ೭೩೫೮ ಜನರಿದ್ದಾರೆ. ಇದರಲ್ಲಿ ಕಾಯಕಾರ್ಹರಾದವರ ಒಟ್ಟು ಸಂಖ್ಯೆಯು ೭೭೩೪ ಇದೆ. ಇದರಲ್ಲಿ ಕಾಯಕಾರ್ಹ ಪುರುಷರು ೩೯೭೨ ಇದ್ದಾರೆ. ಕಾಯಕಾರ್ಹ ಮಹಿಳೆಯರು ೩೭೬೨ ಇದ್ದಾರೆ. ಹಾಗೆಯೇ ಜೇನುಕುರುಬರಲ್ಲಿ ಕಾಯಕಸ್ಥರು ಒಟ್ಟು ೮೭೩೩ ಇದ್ದಾರೆ. ಕಾಯಕಸ್ಥ ಪುರುಷರು ೪೨೭೦ ಇದ್ದರೆ ಕಾಯಕಸ್ಥ ಮಹಿಳೆಯರು ೪೪೬೩ ಇದ್ದಾರೆ. ಹಾಗೆಯೇ ಜೇನುಕುರುಬರಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಒಟ್ಟು ೯೯೯ ಇದೆ. ಇದರಲ್ಲಿ ಪುರುಷರು ೨೯೮ ಇದ್ದರೆ ಮಹಿಳೆಯರು ೭೦೧ ರಷ್ಟಿದ್ದಾರೆ.

ಇದೇ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ಜೇನುಕುರುಬ ಕುಟುಂಬಗಳು ೧೦೦೬ ಇವೆ. ಇದರಲ್ಲಿ ಕಾಯಕರ್ಹ ಸಂಖ್ಯೆಯು ಒಟ್ಟು ೨೦೨೭ ಇದೆ.ಕಾಯಕಾರ್ಹ ಪುರುಷರು ೧೦೪೧ ಇದ್ದರೆ ಮಹಿಳೆಯರು ೯೮೬ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೨೩೬೯ ಇದೆ. ಇದರಲ್ಲಿ ಪುರುಷರು ೧೨೦೭ ಇದ್ದರೆ ಮಹಿಳೆಯರು ೨೩೬೯ ಇದ್ದಾರೆ.

ಹುಣಸೂರು ತಾಲೂಕಿನಲ್ಲಿ ಜೇನುಕುರುಬರ ಒಟ್ಟು ಕುಟುಂಬಗಳು ೧೭೦೯ ಇವೆ. ಇದರಲ್ಲಿ ಕಾಯಕರ್ಹ ಸಂಖ್ಯೆಯು ಒಟ್ಟು ೩೧೮೩ ಇದೆ. ಕಾಯಕಾರ್ಹ ಪುರುಷರು ೧೫೮೯ ಇದ್ದರೆ ಮಹಿಳೆಯರು ೧೫೯೪ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೩೩೬೨ ಇದೆ. ಇದರಲ್ಲಿ ಪುರುಷರು ೧೧೪೨೯ ಇದ್ದರೆ ಮಹಿಳೆಯರು ೧೯೩೩ ಇದ್ದಾರೆ.

ನಂಜನಗೂಡು ತಾಲೂಕಿನಲ್ಲಿ ಜೇನುಕುರುಬರ ಒಟ್ಟು ಕುಟುಂಬಗಳು ೧೭೩ ಇವೆ. ಇದರಲ್ಲಿ ಕಾಯಕರ್ಹ ಸಂಖ್ಯೆಯು ಒಟ್ಟು ೩೧೪ ಇದೆ. ಕಾಯಕಾರ್ಹ ಪುರುಷರು ೧೫೩ ಇದ್ದರೆ ಮಹಿಳೆಯರು ೧೬೧ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೪೨೯ ಇದೆ. ಇದರಲ್ಲಿ ಪುರುಷರು ೧೯೩ ಇದ್ದರೆ ಮಹಿಳೆಯರು ೨೩೬ ಇದ್ದಾರೆ.

ಒಟ್ಟಾರೆಯಾಗಿ ಮೈಸೂರು ಜಿಲ್ಲೆಯಲ್ಲಿರುವ ಜೇನುಕುರುಬರ ಕುಟುಂಬಗಳು ೬೭೬೯ ಇವೆ. ಇದರಲ್ಲಿ ಕಾಯಕರ್ಹರ ಸಂಖ್ಯೆಯು ಒಟ್ಟು ೧೩೨೫೮ ಇದೆ. ಕಾಯಕಾರ್ಹ ಪುರುಷರು ೬೭೫೫ ಇದ್ದರೆ ಮಹಿಳೆಯರು ೬೫೦೩ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೧೪೮೯೩ ಇದೆ.ಇದರಲ್ಲಿ ಪುರುಷರು ೭೦೫೪ ಇದ್ದರೆ ಮಹಿಳೆಯರು ೭೮೩೯ ಇದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹರ ಪ್ರಮಾಣವು ಶೇಕಡ ೫೧.೩೩ ರಷ್ಟಿದೆ. ಆದರೆ ಕಾಯಕಸ್ಥರ ಪ್ರಮಾಣವು ಶೇಕಡ ೫೫.೩೮ ಇದೆ. ಅಂದರೆ ಕಾಯಕಾರ್ಹರಿಗಿಂತ ಕಾಯಕಸ್ಥರ ಪ್ರಮಾಣವು ಶೇಕಡ ೪.೦೫ ರಷ್ಟು ಹೆಚ್ಚಾಗಿರುವುದು ಗೋಚರಿಸುತ್ತದೆ. ಒಟ್ಟು ಪುರುಷರಲ್ಲಿ ಕಾಯಕಾರ್ಹರಾದವರು ಶೇಕಡ ೪೮.೦೪ ಇದ್ದಾರೆ. ಆದರೆ ಕಾಯಕಸ್ಥ ಪುರುಷರು ಶೇಕಡ ೫೦.೬೧ ರಷ್ಟಿದ್ದಾರೆ. ಅದೇ ರೀತಿ ಮಹಿಳೆಯರಲ್ಲಿ

ಕಾಯಕಾರ್ಹತೆ ಹೊಂದಿದವರು ಶೇಕಡ ೫೦.೬೯ ರಷ್ಟಿದ್ದಾರೆ. ಆದರೆ ಕಾಯಕಷ್ಟ ಮಹಿಳೆಯರು ೬೧.೧೧ ರಷ್ಟಿದ್ದಾರೆ. ಅಂದರೆ ಪುರುಷ ಕಾಯಕಷ್ಟರಿಗಿಂತ ಮಹಿಳಾ ಕಾಯಕಷ್ಟರೇ ಹೆಚ್ಚಿನ ಪ್ರಮಾಣದಲ್ಲಿರುವುದು ಮೈಸೂರು ಜಿಲ್ಲೆಯಲ್ಲಿ ಕಂಡುಬರುತ್ತದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ ನೆಲೆಸಿದ ಒಟ್ಟು ಕುಟುಂಬಗಳು ೮೭೨ ಇವೆ. ಈ ತಾಲೂಕಿನಲ್ಲಿ ಇವರ ಒಟ್ಟು ಜನಸಂಖ್ಯೆಯು ೩೮೩೯ ಇದೆ. ಪುರುಷರು ೨೦೧೮, ಮಹಿಳೆಯರು ೧೮೨೧ ಇದ್ದಾರೆ. ಈ ಜನಸಂಖ್ಯೆಯಲ್ಲಿ ಕಾಯಕರ್ಹರ ಸಂಖ್ಯೆಯು ಒಟ್ಟು ೧೮೦೧ ಇದೆ. ಕಾಯಕಾರ್ಹ ಪುರುಷರು ೯೧೫ ಇದ್ದರೆ ಮಹಿಳೆಯರು ೮೮೬ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೨೧೩೮ ಇದೆ.ಇದರಲ್ಲಿ ಪುರುಷರು ೧೦೦೫ ಇದ್ದರೆ ಮಹಿಳೆಯರು ೧೧೩೩ ಇದ್ದಾರೆ.


ವಿರಾಜಪೇಟೆ ತಾಲೂಕಿನಲ್ಲಿ ನೆಲೆಸಿದ ಹಾಡಿ, ಲೈನ್ ಮನೆ, ಪೈಸಾರಿಗಳು ಸೇರಿ ಒಟ್ಟು ಕುಟುಂಬಗಳು ೧೪೪೧ ಇವೆ. ಈ ತಾಲೂಕಿನಲ್ಲಿ ಇವರ ಒಟ್ಟು ಜನಸಂಖ್ಯೆಯು ೫೪೬೧ ಇದೆ. ಪುರುಷರು ೨೮೯೪, ಮಹಿಳೆಯರು ೨೫೬೭ ಇದ್ದಾರೆ. ಈ ಜನಸಂಖ್ಯೆಯಲ್ಲಿ ಕಾಯಕರ್ಹರ ಸಂಖ್ಯೆಯು ಒಟ್ಟು ೨೫೨೦ ಇದೆ. ಕಾಯಕಾರ್ಹ ಪುರುಷರು ೧೨೩೯ ಇದ್ದರೆ ಮಹಿಳೆಯರು ೧೨೮೧ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೨೯೬೨ ಇದೆ. ಇದರಲ್ಲಿ ಪುರುಷರು ೧೩೮೬ ಇದ್ದರೆ ಮಹಿಳೆಯರು ೧೫೭೬ ಇದ್ದಾರೆ.

ಕೊಡಗು ಜಿಲ್ಲೆಯಲ್ಲಿ ನೆಲೆಸಿದ ಜೇನುಕುರುಬರ ಒಟ್ಟು ಕುಟುಂಬಗಳು ೨೩೧೩ ಇವೆ. ಈ ಜಿಲ್ಲೆಯಲ್ಲಿ ಇವರ ಒಟ್ಟು ಜನಸಂಖ್ಯೆಯು ೯೩೦೦ ಇದೆ.ಪುರುಷರು ೪೯೧೨ ಮಹಿಳೆಯರು ೪೩೮೮ ಇದ್ದಾರೆ. ಈ ಜನಸಂಖ್ಯೆಯಲ್ಲಿ ಕಾಯರ್ಕಾರ ಸಂಖ್ಯೆಯು ಒಟ್ಟು ೪೩೨೧ ಇದೆ. ಕಾಯಕಾರ್ಹ ಪುರುಷರು ೨೧೫೪ ಇದ್ದರೆ ಮಹಿಳೆಯರು ೨೧೬೭ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೫೧೦೦ ಇದೆ. ಇದರಲ್ಲಿ ಪುರುಷರು ೨೪೯೧ ಇದ್ದರೆ ಮಹಿಳೆಯರು ೨೬೦೯ ಇದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹರ ಪ್ರಮಾಣ ಶೇಕಡ ೪೬.೪೬ ಇದೆ. ಕಾಯಕಾರ್ಹ ಪುರುಷರು ಶೇಕಡ ೨೩.೧೬ ಮಹಿಳೆಯರು ಶೇಕಡ ೨೩.೩೦ ಇದ್ದಾರೆ. ಆದರೆ ಕಾಯಕಸ್ಥರ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೪.೮೩ ರಷ್ಟಿದ್ದಾರೆ. ಇದರಲ್ಲಿ ಪುರುಷ ಕಾಯಕಸ್ಥರು ಒಟ್ಟು ಶೇಕಡ ೨೫.೭೦ ಇದ್ದರೆ ಮಹಿಳಾ ಕಾಯಕಸ್ಥರು ಶೇಕಡ ೨೯.೧೨ ರಷ್ಟಿದ್ದಾರೆ. ಅಂದರೆ ಒಟ್ಟು ಕಾಯಕಾರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಅಧಿಕವಾಗಿದೆ. ಅದರಲ್ಲೂ ಕಾಯಕಸ್ಥ ಮಹಿಳೆಯರು ಪುರುಷ ಪ್ರಮಾಣಕ್ಕಿಂತ ಅಧಿಕವಾಗಿರುವುದು ಕಂಡು ಬರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನಲ್ಲಿ ಮಾತ್ರ ಜೇನುಕುರುಬರು ನೆಲೆಸಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದು ಬಂದಿತು. ಅಂದರೆ ಚಾಮರಾಜನಗರದಲ್ಲಿ ನೆಲೆಸಿದ ಜೇನುಕುರುಬರ ಒಟ್ಟು ಕುಟುಂಬಗಳು ೩೯ ಆಗಿವೆ. ಇವರ ಒಟ್ಟು ಜನಸಂಖ್ಯೆಯು ೧೪೫೦ ಇದೆ.

ಇದರಲ್ಲಿ ಪುರುಷರು ೭೫೫ ಹಾಗೂ ಮಹಿಳೆಯರು ೬೯೫ ರಷ್ಟಿದ್ದಾರೆ. ಈ ಜಿಲ್ಲೆಯಲ್ಲಿ ಕಾಯಕಾರ್ಹ ಜೇನುಕುರುಬರ ಒಟ್ಟು ಸಂಖ್ಯೆಯು ೭೩೯ ಇದೆ. ಕಾಯಕಾರ್ಹ ಪುರುಷರು ೩೭೪ ಇದ್ದರೆ ಮಹಿಳೆಯರು ೩೬೫ ಇದ್ದಾರೆ. ಕಾಯಕಸ್ಥರ ಒಟ್ಟು ಸಂಖ್ಯೆಯು ೭೫೪ ಇದೆ. ಇದರಲ್ಲಿ ಪುರುಷರು ೩೮೪ ಇದ್ದರೆ ಮಹಿಳೆಯರು ೩೭೦ ಇದ್ದಾರೆ.

**ಲಂಬಚಿತ್ರ: ೫. ೨. ಜೇನುಕುರುಬ ಸಮುದಾಯದ ಕಾಯಕಸ್ಥರು ಮತ್ತು ನಿರುದ್ಯೋಗಿಗಳ ಪ್ರಮಾಣ**




ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಜಿಲ್ಲೆಯಲ್ಲಿರುವ ಜೇನುಕುರುಬ ಕಾಯಕಾರ್ಹರ ಪ್ರಮಾಣ ಶೇಕಡ ೫೦.೯೬ ಇದೆ. ಕಾಯಕಾರ್ಹ ಪುರುಷರು ಶೇಕಡ ೨೫.೭೯, ಮಹಿಳೆಯರು ಶೇಕಡ ೨೫.೧೯ ರಷ್ಟಿದ್ದಾರೆ. ಆದರೆ ಕಾಯಕಸ್ಥರ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೫೫.೧೨ ರಷ್ಟಿದ್ದಾರೆ. ಇದರಲ್ಲಿ ಪುರುಷ ಕಾಯಕಸ್ಥರು ಒಟ್ಟು ಶೇಕಡ ೨೬.೧೧ ರಷ್ಟಿದ್ದರೆ ಮಹಿಳಾ ಕಾಯಕಸ್ಥರು ಶೇಕಡ ೨೯.೦೦ ರಷ್ಟಿದ್ದಾರೆ. ಅಂದರೆ ಒಟ್ಟು ಕಾಯಕಾರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಅಧಿಕವಾಗಿದೆ. ಅದರಲ್ಲೂ ಕಾಯಕಸ್ಥ ಮಹಿಳೆಯರು ಪುರುಷ ಪ್ರಮಾಣಕ್ಕಿಂತ ಹೆಚ್ಚಾಗಿರುವುದು ಕಂಡು ಬರುತ್ತದೆ.

ಕೋಷ್ಟಕ : ೫. ೩. ಮೈಸೂರು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

| ತಾಲೂಕು | ಪಾರಂಪರಿಕ ವೃತ್ತಿ | | | ಕೃಷಿಕೂಲಿ | | | ಕೃಷಿಯೇತರ ಕೂಲಿ | | | ಸರ್ಕಾರಿ | | | ಇತರೆ | | |
|---|---|---|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಹೆಚ್ ಡಿ ಕೋಟೆ | ೧೬೭೨ | ೧೭೫೦ | ೩೪೨೨ | ೧೪೬೮ | ೧೫೮೪ | ೩೧೦೬ | ೧೦೪೨ | ೧೦೮೪ | ೨೪೨೬ | ೬೪ | ೧೦ | ೭೪ | ೨೪ | ೩೫ | ೫೯ |
| ಪಿರಿಯಾಪಟ್ಟಣ | ೧೫೨ | ೧೩೨ | ೨೮೪ | ೬೧೨ | ೬೮೪ | ೧೨೯೬ | ೩೭೪ | ೪೨೪ | ೭೯೮ | – | ೩೨ | ೩೨ | ೨೪ | ೧೫ | ೩೯ |
| ಹುಣಸೂರು | ೫೫೨ | ೪೫೨ | ೧೦೦೪ | ೫೯೩ | ೯೬೨ | ೧೮೫೫ | ೨೮೪ | ೪೩೨ | | – | ೧೫ | ೧೫ | – | ೭೨ | ೭೨ |
| ನಂಜನಗೂಡು | ೧೨ | ೧೦ | ೨೨ | ೯೭ | ೧೦೬ | ೧೪೩ | ೮೪ | ೧೦೨ | ೧೮೬ | – | ೧೩ | ೧೩ | – | ೦೫ | ೦೫ |
| ಒಟ್ಟು | ೨೩೮೮ | ೨೩೪೪ | ೪೭೩೨ | ೨೮೨೪ | ೩೩೩೬ | ೬೧೬೦ | ೨೦೮೪ | ೨೦೪೨ | ೪೧೨೬ | ೬೪ | ೭೦ | ೧೩೪ | ೪೮ | ೧೨೭ | ೧೭೫ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

## ೫. ೪. ಮೈಸೂರು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

ಮೈಸೂರು ಜಿಲ್ಲೆಯ ತಾಲೂಕುವಾರು ಜೇನುಕುರುಬರು ಅನುಸರಿಸುತ್ತಿರುವ ವೃತ್ತಿಗಳು ಈ ಕೆಳಗಿನಂತಿವೆ.

**ಹೆಗ್ಗಡದೇವನಕೋಟೆ ತಾಲೂಕು**

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ೮೦ ಹಾಡಿಗಳಲ್ಲಿ ಜೇನುಕುರುಬರು ನೆಲೆಸಿದ್ದಾರೆ. ಈ ಹಾಡಿಗಳೆಲ್ಲ ಕಾಡಿನ ಮಧ್ಯ, ಕಾಡಿನಂಚಿನ ಭಾಗಗಳಲ್ಲಿಯೇ ಹೆಚ್ಚಾಗಿರುವುದು. ಕಾಡಂಚಿನ ಭಾಗಗಳಲ್ಲಿ ಜೇನುಕುರುಬರ ನೆಲೆಗಳ ಹತ್ತಿರದಲ್ಲಿ ಇತರ ಸಮುದಾಯಗಳು ಸಹ ನೆಲೆಸುತ್ತಿವೆ. ಕಾಡಿನ ಮಧ್ಯದಲ್ಲಿರುವವರು ಇಂದಿಗೂ ಜೇನು ಕೀಳುವುದು, ಮರಗಳ ಮೇಲೆ ಇರುವ ಪಾಚಿ ತೆಗೆಯುವುದು, ಅರಣ್ಯದೊಳಗೆ ದೊರೆಯುವ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಗುತ್ತಿಗೆದಾರರಿಗೆ ನೀಡುವ ಪಾರಂಪರಿಕ ಕಸುಬಿನಲ್ಲಿ ನಿರತ ರಾಗಿದ್ದಾರೆ. ಇದಕ್ಕೆ ವಯಸ್ಸಿನ ಅಂತರವಾಗಲೀ, ಹೆಣ್ಣು ಗಂಡೆಂಬ ವ್ಯತ್ಯಾಸ ಇಲ್ಲ. ಹೆಚ್.ಡಿ. ಕೋಟೆಯಲ್ಲಿ ಕಾಯಕಾರ್ಹ ಜೇನುಕುರುಬರ ಸಂಖ್ಯೆಯು ೭೭೩೪ ಇದೆ. ಆದರೆ ಕಾಯಕನಿರತರು ೮೭೩೩ ರಷ್ಟಿದ್ದಾರೆ. ಈ ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸು ತ್ತಿರುವವರ ಸಂಖ್ಯೆಯು ಒಟ್ಟು ೩೪೨೨ ಇದೆ. ಇದರಲ್ಲಿ ಪುರುಷರು ೧೬೭೨ ಹಾಗೂ ಮಹಿಳೆಯರು ೧೭೫೦ ರಷ್ಟಿದ್ದಾರೆ. ಜೇನು ಕೀಳುವ ಕಾಯಕದಲ್ಲಿ ಸಾಮಾನ್ಯವಾಗಿ ಗಂಡ ಹೆಂಡತಿ ಮಕ್ಕಳು ಸಮವಾಗಿ ಪಾಲ್ಗೊಳ್ಳುತ್ತಾರೆ. ಗಂಡ ಮರಹತ್ತಿ ಜೇನುಕಿತ್ತರೆ ಹೆಂಡತಿ ಮರದಿಂದ ಜೇನು ತಟ್ಟೆಯನ್ನು ಹೊತ್ತ ಬಕೀಟನ್ನು ಹಗ್ಗದ ಸಹಾಯದಿಂದ ಇಳಿಸಿಕೊಳ್ಳುವುದು ಮಕ್ಕಳು, ಹೆಂಡತಿ, ಗಂಡ ಒಟ್ಟಾಗಿ ಸೇರಿ ಜೇನು ಮೇಣವನ್ನು ಪ್ರತ್ಯೇಕಗೊಳಿಸುವುದು, ಜೇನನ್ನು ಮನೆಗೆ ಹೊತ್ತುಕೊಂಡು ಬರುವುದು ಮಾಡುತ್ತಾರೆ. ಪುರುಷರ ಹೊರತಾಗಿ ಮಹಿಳೆಯರು ಅಂಟು ಸಂಗ್ರಹಣೆ, ಅಂಟುವಾಳ, ಸೀಗೆಕಾಯಿ, ನೆಲ್ಲಿಕಾಯಿ, ವನಸ್ಪತಿ, ಬೀಡಿ ಎಲೆ, ತಾರೆ, ತೇಗ ಮುಂತಾದ ಮರದ ಬೀಜಗಳ ಸಂಗ್ರಹಣೆಯಲ್ಲಿ ತೊಡಗುತ್ತಾರೆ.

ಪಾರಂಪರಿಕ ಕಸುಬಿನ ಹೊರತಾಗಿ ಇತರರ ಜಮೀನುಗಳ ಕೆಲಸಗಳಲ್ಲಿ ಜೇನುಕುರುಬರು ಕೂಲಿಕಾರ್ಮಿಕರಾಗಿ ಕಾರ್ಯನಿರ್ವಹಿಸುತ್ತಾರೆ. ಈ ರೀತಿ ಕೃಷಿಕೂಲಿಕಾರರಾಗಿ ಕಾರ್ಯ ನಿರ್ವಹಿಸುವವರು ಈ ತಾಲೂಕಿನಲ್ಲಿ ಒಟ್ಟು ೩೧೦೬ ಜೇನುಕುರುಬ ಕೂಲಿಕಾರರಿದ್ದಾರೆ. ಇದರಲ್ಲಿ ಪುರುಷರು ೧೪೬೮ ಹಾಗೂ ೧೫೮೪ ಮಹಿಳೆಯರಿದ್ದಾರೆ. ಕೃಷಿಯೇತರ ಕೂಲಿಕಾರರಾಗಿಯೂ ಜೇನುಕುರುಬರು ಬಳಕೆಗೊಳ್ಳುತ್ತಾರೆ. ಸಾಮಾನ್ಯವಾಗಿ ಕಾಡಿನೊಳಗೆ ಮರದ ದಿಮ್ಮಿಗಳನ್ನು ಕಡಿಯುವುದು, ಅವುಗಳನ್ನು ಟ್ರಕ್‌ಗಳಿಗೆ ತುಂಬಲು ಸಹಾಯಕರಾಗಿ ಪುರುಷರು ಕಾರ್ಯ ನಿರ್ವಹಿಸುತ್ತಾರೆ. ಈ ರೀತಿ ಕಾರ್ಯನಿರ್ವಹಿಸುವ ಪುರುಷರು ೧೦೪೨ ಇದ್ದಾರೆ. ಪುರುಷರ ಈ ಕಾರ್ಯಗಳಿಗೆ ಸಹಾಯಕರಾಗಿ ಹಾಗೂ ಇತರ ಕೃಷಿಯೇತರ ಕೂಲಿಗಳಾಗಿ ಮಹಿಳೆಯರು

ಕಾರ್ಯನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೧೦೮೪ ಇದೆ. ಒಟ್ಟಿನಲ್ಲಿ ಕೃಷಿಯೇತರ ಕೂಲಿಕಾರರಾಗಿ ಕಾರ್ಯನಿರ್ವಹಿಸುವ ಜೇನುಕುರುಬರ ಒಟ್ಟು ಸಂಖ್ಯೆಯು ೨೪೨೬ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಮಾವುತ, ಕಾವಾಡಿ ಮುಂತಾಗಿ ಕೆಲಸದಲ್ಲಿ ನಿರತರಾದ ಪುರುಷರು ೬೪ಜನ ಇದ್ದಾರೆ. ಹಾಗೆಯೇ ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿಯರಾಗಿ ಮಹಿಳೆಯರು ಒಟ್ಟು ೧೦ ಜನರಿದ್ದಾರೆ. ಒಟ್ಟಾರೆಯಾಗಿ ಸರ್ಕಾರದ ಸೇವೆಯಲ್ಲಿ ಕಾರ್ಯನಿರ್ವಹಿಸವವರ ಒಟ್ಟು ಸಂಖ್ಯೆಯು ಇದೆ. ಮಾವುತ, ಕಾವಾಡಿ, ಅಂಗನವಾಡಿ ಕಾರ್ಯಕರ್ತೆ, ಸೇವಕಿಯಂತಹ ಕೆಲಸದ ಹೊರತಾಗಿ ಹೆಚ್ಚಿನ ಪ್ರಮಾಣದ ಸರ್ಕಾರಿ ನೌಕರಿಯಲ್ಲಿರುವವರು ಒಬ್ಬರೂ ಕಂಡು ಬರುವುದಿಲ್ಲ.

ಹೆಗ್ಗಡದೇವನಕೋಟೆಯಲ್ಲಿರುವ ಕಾಯಕಸ್ಥ ಜೇನುಕುರುಬರು ಒಟ್ಟು ೮೭೩೩ ಜನರಿದ್ದಾರೆ. ಇದರಲ್ಲಿ ಪುರುಷರು ೪೨೭೦ ಹಾಗೂ ಮಹಿಳೆಯರು ೪೪೬೩ ರಷ್ಟಿದ್ದಾರೆ. ಈ ತಾಲೂಕಿನ ಕಾಯಕಸ್ಥರ ಒಟ್ಟು ಜನಸಂಖ್ಯೆಯಲ್ಲಿ ಪಾರಂಪರಿಕ ಕಸುಬನ್ನು ಆಧರಿಸಿದವರ ಪ್ರಮಾಣ ಶೇಕಡ ೩೯.೧೮ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೧೯.೧೪ ಮಹಿಳೆಯರು ಶೇಕಡ ೨೦.೦೪ ರಷ್ಟಿದ್ದಾರೆ. ಕೃಷಿ ಕೂಲಿಗಳು ಶೇಕಡ ೩೪.೯೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೧೬.೮೦ ಹಾಗೂ ಮಹಿಳೆಯರು ಶೇಕಡ ೧೮.೧೪ ರಷ್ಟಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರಲ್ಲಿ ಒಟ್ಟು ಶೇಕಡ ೧೧.೯೩ ಹಾಗೂ ಮಹಿಳೆಯರು ಶೇಕಡ ೧೧.೮೧ ರಷ್ಟಿದ್ದಾರೆ. ಅಂದರೆ ಒಟ್ಟು ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೨೩.೭೪ ರಷ್ಟಿದ್ದಾರೆ. ಸರ್ಕಾರದ ಕನಿಷ್ಠತಮ ಕೆಲಸದಲ್ಲಿ ನಿರತರಾದವರು ಶೇಕಡ ೦.೮೪ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೭೩ ರಷ್ಟಿದ್ದರೆ ಮಹಿಳೆಯರು ೦.೧೧ ರಷ್ಟಿದ್ದಾರೆ. ಇತರೆ ಕೆಲಸದಲ್ಲಿ ನಿರತರಾದವರು ಒಟ್ಟು ೦.೬೭ ರಷ್ಟಿದ್ದಾರೆ. ಇದರಲ್ಲಿ ಪುರುಷರು ಶೇಕಡ ೦.೨೭ ಹಾಗೂ ಮಹಿಳೆಯರು ಶೇಕಡ ೦.೪೦ ರಷ್ಟಿದ್ದಾರೆ.

**ಪಿರಿಯಾಪಟ್ಟಣ ತಾಲೂಕು**

ಪಿರಿಯಾಪಟ್ಟಣ ತಾಲೂಕಿನಲ್ಲಿರುವ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿ ದವರು ೨೮೪ ಜನರಿದ್ದಾರೆ. ಇದರಲ್ಲಿ ಪುರುಷರು ೧೫೨ ಜನ ಹಾಗೂ ಮಹಿಳೆಯರು ೧೩೨ ಜನರಿದ್ದಾರೆ. ಕೃಷಿ ಕೂಲಿಕಾರರಾಗಿ ಕಾರ್ಯನಿರ್ವಹಿಸುವವರು ಒಟ್ಟು ೧೨೯೬ ಜನರಿದ್ದಾರೆ. ಇದರಲ್ಲಿ ಪುರುಷರು ೬೧೨ ಜನ ಹಾಗೂ ಮಹಿಳೆಯರು ೬೮೪ ಜನರಿದ್ದಾರೆ. ಈ ಬುಡಕಟ್ಟಿನವರು ಆಕಳನ್ನು ಸಾಕುವರಾದರೂ ಎತ್ತುಗಳನ್ನು ಉಳುಮೆಗಾಗಿ ಸಾಕಿದ ಉದಾಹರಣೆ ಇಲ್ಲ. ಇವರೇನಿದ್ದರೂ ಕಳೆಕೀಳುವ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿಯೂ ಜೇನುಕುರುಬರು ಬಳಕೆಗೊಳ್ಳುತ್ತಾರೆ. ಸಾಮಾನ್ಯವಾಗಿ ಕಾಡಿನೊಳಗೆ ಮರದ ದಿಮ್ಮಿಗಳನ್ನು ಕಡಿಯುವುದು, ಅವುಗಳನ್ನು

ಟ್ರಕ್‌ಗಳಿಗೆ ತುಂಬಲು ಸಹಾಯಕರಾಗಿ, ಹಮಾಲಿಗಳಾಗಿ ಪುರುಷರು ಕಾರ್ಯ ನಿರ್ವಹಿಸುತ್ತಾರೆ. ಈ ರೀತಿ ಕಾರ್ಯ ನಿರ್ವಹಿಸುವ ಪುರುಷರು ೩೭೪ ಜನ ಇದ್ದಾರೆ.

ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೪೨೪ ಇದೆ. ಒಟ್ಟಿನಲ್ಲಿ ಕೃಷಿಯೇತರ ಕೂಲಿಕಾರರಾಗಿ ಕಾರ್ಯ ನಿರ್ವಹಿಸುವ ಜೇನುಕುರುಬರ ಒಟ್ಟು ಸಂಖ್ಯೆಯು ೭೯೮ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ಒಬ್ಬರೂ ಇರುವುದಿಲ್ಲ. ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯ ನಿರ್ವಹಿಸುವ ಮಹಿಳೆಯರು ಒಟ್ಟು ೩೨ ಜನರಿದ್ದಾರೆ.

ಪಿರಿಯಾ ಪಟ್ಟಣ ತಾಲೂಕಿನಲ್ಲಿ ಒಟ್ಟು ೧೦೦೬ ಕುಟುಂಬಗಳಿವೆ. ಇದರಲ್ಲಿ ಕಾಯಕಸ್ಥರು ಒಟ್ಟು ೨೩೯೯ ಜನರಿದ್ದಾರೆ. ಕಾಯಕಸ್ಥ ಪುರುಷರು ೧೦೪೧ ಹಾಗೂ ಮಹಿಳೆಯರು ೯೮೬ ಜನರಿದ್ದಾರೆ. ಇಷ್ಟು ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸುವ ಜೇನುಕುರುಬರು ಒಟ್ಟು ಶೇಕಡ ೧೧.೯೮ ಜನರಿದ್ದಾರೆ. ಕೃಷಿ ಕೂಲಿಯನ್ನವಲಂಬಿಸಿದವರು ಶೇಕಡ ೫೪.೭೦ ರಷ್ಟಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೩೩.೬೮ ರಷ್ಟಿದ್ದಾರೆ. ಸರ್ಕಾರದ ಕನಿಷ್ಠತಮ ಕೆಲಸದಲ್ಲಿ ನಿರತರಾದವರು ಶೇಕಡ ೧.೩೫ ರಷ್ಟು ಹಾಗೂ ಇತರೆ ಕೆಲಸಗಳಲ್ಲಿ ತೊಡಗಿದವರು ಶೇಕಡ ೧.೬೫ ರಷ್ಟು ಜನರಿದ್ದಾರೆ.

**ಹುಣಸೂರು ತಾಲೂಕು**

ಹುಣಸೂರು ತಾಲೂಕಿನಲ್ಲಿ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿದವರ ಒಟ್ಟು ಸಂಖ್ಯೆಯು ೧೦೦೪ ಇದೆ. ಇದರಲ್ಲಿ ಪುರುಷರು ೫೫೨ ಜನ ಹಾಗೂ ಮಹಿಳೆಯರು ೪೫೨ ಜನರಿದ್ದಾರೆ. ಇವರು ಜೇನು ಕೊಯ್ಯುವುದು, ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ ಮುಂತಾದ ಕಾಯಕದಲ್ಲಿ ತೊಡಗಿದವರಾಗಿದ್ದಾರೆ. ಕೃಷಿ ಕೂಲಿಕಾರರಾಗಿ ಕಾರ್ಯ ನಿರ್ವಹಿಸುವವರು ಒಟ್ಟು ೯೬೨ ಜನರಿದ್ದಾರೆ. ಇದರಲ್ಲಿ ಪುರುಷರು ೫೯೩ ಜನ ಹಾಗೂ ಮಹಿಳೆಯರು ೯೬೨ ಜನರಿದ್ದಾರೆ. ಈ ಬುಡಕಟ್ಟಿನವರು ಪರರ ಗದ್ದೆ, ಹೊಲಗಳಲ್ಲಿ ವಿವಿಧ ಕೂಲಿ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿ ಒಟ್ಟು ೭೧೬ ಜೇನುಕುರುಬರು ಕಾರ್ಯ ನಿರ್ವಹಿಸುತ್ತಾರೆ. ಸಾಮಾನ್ಯವಾಗಿ ಕಾಡಿನೊಳಗೆ ಮರದ ದಿಮ್ಮಿಗಳನ್ನು ಕಡಿಯುವುದು, ಅವುಗಳನ್ನು ಟ್ರಕ್‌ಗಳಿಗೆ ತುಂಬಲು ಸಹಾಯಕರಾಗಿ, ಹಮಾಲಿಗಳಾಗಿ ಪುರುಷರು ಕಾರ್ಯ ನಿರ್ವಹಿಸುತ್ತಾರೆ. ಈ ರೀತಿ ಕಾರ್ಯನಿರ್ವಹಿಸುವ ಪುರುಷರು ೨೮೪ ಜನ ಇದ್ದಾರೆ. ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯ ನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೪೩೨ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ಒಬ್ಬರೂ ಇರುವುದಿಲ್ಲ. ಅಂಗನವಾಡಿ

ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯ ನಿರ್ವಹಿಸುವ ಮಹಿಳೆಯರು ಒಟ್ಟು ೧೫ ಜನರಿದ್ದಾರೆ.

ಹುಣಸೂರು ತಾಲೂಕಿನಲ್ಲಿ ಜೇನುಕುರುಬರ ಒಟ್ಟು ೧೦೦೬ ಕುಟುಂಬಗಳಿವೆ. ಇದರಲ್ಲಿ ಕಾಯಕಸ್ಥರು ಒಟ್ಟು ೩೩೬೨ ಜನರಿದ್ದಾರೆ. ಕಾಯಕಸ್ಥ ಪುರುಷರು ೧೪೨೯ ಹಾಗೂ ಮಹಿಳೆಯರು ೧೯೩೩ ಜನರಿದ್ದಾರೆ. ಇಷ್ಟು ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸುವ ಜೇನುಕುರುಬರು ಒಟ್ಟು ಶೇಕಡ ೨೯.೮೬ ಜನರಿದ್ದಾರೆ. ಕೃಷಿಕೂಲಿಯನ್ನು ಅವಲಂಭಿಸಿದವರು ಶೇಕಡ ೫೫.೧೭ ರಷ್ಟಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೨೧.೩೦ ರಷ್ಟಿದ್ದಾರೆ. ಸರ್ಕಾರಿ ಕನಿಷ್ಠ ಕೆಲಸವನ್ನು ಮಾಡುವವರು ಶೇಕಡ ೦.೪೪ ಇತರೆ ಕೆಲಸಗಳಲ್ಲಿ ತೊಡಗಿದವರು ಶೇಕಡ ೨.೧೪ ರಷ್ಟು ಜನರಿದ್ದಾರೆ.

**ನಂಜನಗೂಡು ತಾಲೂಕು**

ನಂಜನಗೂಡು ತಾಲೂಕಿನ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿದವರ ಒಟ್ಟು ಸಂಖ್ಯೆಯು ೨೨ ಇದೆ. ಇದರಲ್ಲಿ ಪುರುಷರು ೧೨ ಜನ ಹಾಗೂ ಮಹಿಳೆಯರು ೧೦ ಜನರಿದ್ದಾರೆ. ಇವರು ಜೇನು ಕೊಯ್ಯುವುದು, ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ ಮುಂತಾದ ಕಾಯಕದಲ್ಲಿ ತೊಡಗಿದವರಾಗಿದ್ದಾರೆ. ಕೃಷಿ ಕೂಲಿಕಾರರಾಗಿ ಕಾರ್ಯ ನಿರ್ವಹಿಸುವವರು ಒಟ್ಟು ೧೪೩ ಜನರಿದ್ದಾರೆ. ಇದರಲ್ಲಿ ಪುರುಷರು ೯೭ ಜನ ಹಾಗೂ ಮಹಿಳೆಯರು ೧೦೬ ಜನರಿದ್ದಾರೆ. ಈ ಬುಡಕಟ್ಟಿನವರು ಪರರ ಗದ್ದೆ, ಹೊಲಗಳಲ್ಲಿ ವಿವಿಧ ಕೂಲಿ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿ ಒಟ್ಟು ೧೮೬ ಜೇನುಕುರುಬರು ಕಾರ್ಯನಿರ್ವಹಿಸುತ್ತಾರೆ. ಈ ರೀತಿ ಕಾರ್ಯನಿರ್ವಹಿಸುವ ಪುರುಷರು ೮೪ ಜನರಿದ್ದಾರೆ. ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೧೦೨ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ಒಬ್ಬರೂ ಇರುವುದಿಲ್ಲ. ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುವ ಮಹಿಳೆಯರು ಒಟ್ಟು ೧೩ ಜನರಿದ್ದಾರೆ.

ನಂಜನಗೂಡು ತಾಲೂಕಿನಲ್ಲಿ ಜೇನುಕುರುಬರ ಒಟ್ಟು ೧೭೩ ಕುಟುಂಬಗಳಿವೆ. ಇದರಲ್ಲಿ ಕಾಯಕಸ್ಥರು ಒಟ್ಟು ೪೨೯ ಜನರಿದ್ದಾರೆ. ಕಾಯಕಸ್ಥ ಪುರುಷರು ೧೯೩ ಹಾಗೂ ಮಹಿಳೆಯರು ೨೩೬ ಜನರಿದ್ದಾರೆ. ಇಷ್ಟು ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸುವ ಜೇನು ಕುರುಬರು ಒಟ್ಟು ಶೇಕಡ ೨೨.೬೧ ಜನರಿದ್ದಾರೆ. ಕೃಷಿಕೂಲಿಯನ್ನು ಅವಲಂಬಿಸಿದವರು ಶೇಕಡ ೩೩.೩೪ ರಷ್ಟಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೪೩.೩೫ ರಷ್ಟಿದ್ದಾರೆ. ಸರ್ಕಾರಿ ಕನಿಷ್ಠ ಕೆಲಸವನ್ನು

ಮಾಡುವವರು ಶೇಕಡ ೩.೦೩ ರಷ್ಟಿದ್ದಾರೆ. ಇತರೆ ಕೆಲಸಗಳಲ್ಲಿ ತೊಡಗಿದವರು ಶೇಕಡ ೧.೧೬ ರಷ್ಟು ಜನರಿದ್ದಾರೆ.

## ೫. ೫. ಚಾಮರಾಜನಗರ ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

ಚಾಮರಾಜನಗರವು ೧೯೯೭ ರ ಪೂರ್ವದಲ್ಲಿ ಮೈಸೂರು ಜಿಲ್ಲೆಯೊಳಗೆ ಇದ್ದಿತು. ೧೯೯೭ ರಲ್ಲಿ ಜಿಲ್ಲಾ ಪುನರ್ವಿಂಗಡಣೆಯಾದಾಗ ಚಾಮರಾಜನಗರವು ಪ್ರತ್ಯೇಕ ಜಿಲ್ಲೆಯಾಯಿತು. ಚಾಮರಾಜ ನಗರ, ಯಳಂದೂರು, ಗುಂಡ್ಲುಪೇಟೆ, ಕೊಳ್ಳೆಗಾಲಗಳು ಈ ಜಿಲ್ಲೆಯೊಳಗೆ ಬರುವ ತಾಲೂಕುಗಳು.ಈ ತಾಲೂಕುಗಳಲ್ಲಿ ಗುಂಡ್ಲುಪೇಟೆ ತಾಲೂಕಿನ ಅರಣ್ಯದ ಅಂಚಿನಲ್ಲಿ ಜೇನುಕುರುಬರು ನೆಲೆಸಿದ್ದಾರೆ. ಈ ತಾಲೂಕಿನಲ್ಲಿ ನೆಲೆಸಿರುವ ಕಾಯಕಸ್ಥ ಜೇನುಕುರುಬರ ವಿವರ ಈ ಕೆಳಗಿನಂತಿದೆ.

ಗುಂಡ್ಲುಪೇಟೆ ತಾಲೂಕಿನಲ್ಲಿ ಜೇನುಕುರುಬರ ೩೩೯ ಕುಟುಂಬಗಳು ನೆಲೆಸಿವೆ. ೨೦೧೧ರ ಜನಗಣತಿ ಪ್ರಕಾರ ಈ ತಾಲೂಕಿನಲ್ಲಿ ನೆಲೆಸಿರುವ ಜೇನುಕುರುಬರಲ್ಲಿ ಕಾರ್ಯನಿರ್ವಹಿಸಲು ಅರ್ಹವಾದವರ ಸಂಖ್ಯೆಯು ಒಟ್ಟು ೭೩೯ ಇದೆ. ಇದರಲ್ಲಿ ಪುರುಷರು ೩೩೯ ಹಾಗೂ ಮಹಿಳೆಯರು ೩೭೪ ರಷ್ಟಿದ್ದಾರೆ. ಆದರೆ ಕಾಯಕದಲ್ಲಿ ನಿರತರಾದವರ ಪ್ರಮಾಣವು ಇಲ್ಲಿಯೂ ಕಾಯಕಾರ್ಹರಿಗಿಂತ ಹೆಚ್ಚಿನ ಪ್ರಮಾಣದಲ್ಲಿದೆ.

ಗುಂಡ್ಲುಪೇಟೆ ತಾಲೂಕಿನಲ್ಲಿ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿದವರ ಒಟ್ಟು ಸಂಖ್ಯೆಯು ೨೫ ಇದೆ. ಇದರಲ್ಲಿ ಪುರುಷರು ೧೫ ಜನ ಹಾಗೂ ಮಹಿಳೆಯರು ೧೦ ಜನರಿದ್ದಾರೆ. ಇವರು ಜೇನು ಕೊಯ್ಯುವುದು, ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ ಮುಂತಾದ ಕಾಯಕದಲ್ಲಿ ತೊಡಗಿದವರಾಗಿದ್ದಾರೆ. ಕೃಷಿಕೂಲಿಕಾರರಾಗಿ ಕಾರ್ಯನಿರ್ವಹಿಸುವವರು ಒಟ್ಟು ೩೦೦ ಜನರಿದ್ದಾರೆ. ಇದರಲ್ಲಿ ಪುರುಷರು ೧೫೨ ಜನ ಹಾಗೂ ಮಹಿಳೆಯರು ೧೪೮ ಜನರಿದ್ದಾರೆ. ಈ ಬುಡಕಟ್ಟಿನವರು ಬೇರೆಯವರ ಗದ್ದೆ, ಹೊಲಗಳಲ್ಲಿ ವಿವಿಧ ಕೂಲಿ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿ ಒಟ್ಟು ೩೧೩ ಜೇನುಕುರುಬರು ಕಾರ್ಯನಿರ್ವಹಿಸುತ್ತಾರೆ.ಈ ರೀತಿ ಕಾರ್ಯನಿರ್ವಹಿಸುವ ಪುರುಷರು ೧೬೩ ಜನರಿದ್ದಾರೆ. ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೧೫೦ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ೧೯ ಜನರಿದ್ದಾರೆ. ಇವರು ಆನೆ ಸಾಕಣಿಕಾ ಕೇಂದ್ರಗಳಲ್ಲಿ ಮಾವುತ, ಕಾವಾಡಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುವ ಮಹಿಳೆಯರು ಒಟ್ಟು ೧೪ ಜನರಿದ್ದಾರೆ.

## ಕೋಷ್ಟಕ : ೫. ೪. ಚಾಮರಾಜನಗರ ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವಿವಿಧ ವೃತ್ತಿಗಳ ವಿವರ

| ತಾಲೂಕು | ಪಾರಂಪರಿಕ ವೃತ್ತಿ | | | ಕೃಷಿಕೂಲಿ | | | ಕೃಷಿಯೇತರ ಕೂಲಿ | | | ಸರ್ಕಾರಿ | | | ಇತರೆ | | |
|---|---|---|---|---|---|---|---|---|---|---|---|---|---|---|---|
| | ಗಂ | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಗುಂಡ್ಲುಪೇಟೆ | ೧೫ | ೧೦ | ೨೫ | ೧೫೨ | ೧೪೮ | ೩೦೦ | ೧೬೩ | ೧೫೦ | ೩೧೩ | ೧೯ | ೧೪ | ೩೩ | – | ೧೦ | ೧೦ |
| ಒಟ್ಟು | ೧೫ | ೧೦ | ೨೫ | ೧೫೨ | ೧೪೮ | ೩೦೦ | ೧೬೩ | ೧೫೦ | ೩೧೩ | ೧೯ | ೧೪ | ೩೩ | – | ೧೦ | ೧೦ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ಗುಂಡ್ಲುಪೇಟೆ ತಾಲೂಕಿನಲ್ಲಿ ಜೇನುಕುರುಬರ ಒಟ್ಟು ೩೩೯ ಕುಟುಂಬಗಳಿವೆ. ಇದರಲ್ಲಿ ಕಾಯಕಸ್ಥರು ಒಟ್ಟು ೭೫೪ ಜನರಿದ್ದಾರೆ. ಕಾಯಕಸ್ಥ ಪುರುಷರು ೩೩೮ ಹಾಗೂ ಮಹಿಳೆಯರು ೩೭೦ ಜನರಿದ್ದಾರೆ. ಇಷ್ಟು ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸುವ ಜೇನುಕುರುಬರು ಒಟ್ಟು ಶೇಕಡ ೩.೩೧ ಜನರಿದ್ದಾರೆ. ಕೃಷಿಕೂಲಿಯನ್ನು ಅವಲಂಬಿಸಿದವರು ಶೇಕಡ ೩೯.೭೮ ರಷ್ಟಿದ್ದಾರೆ. ಕೃಷಿಯೇತರ ಕೂಲಿ ಕಾರ್ಮಿಕರು ಶೇಕಡ ೪೧.೫೨ ರಷ್ಟಿದ್ದಾರೆ. ಸರ್ಕಾರಿ ಕನಿಷ್ಠ ಕೆಲಸವನ್ನು ಮಾಡುವವರು ಶೇಕಡ ೪.೩೭ ಇತರೆ ಕೆಲಸಗಳಲ್ಲಿ ತೊಡಗಿದವರು ಶೇಕಡ ೧.೩೨ ರಷ್ಟು ಜನರಿದ್ದಾರೆ.

## ೫. ೬. ಕೊಡಗು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವೃತ್ತಿ ವಿವರ

ಕೊಡಗು ಜಿಲ್ಲೆಯು ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ ತಾಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲೂಕುಗಳಲ್ಲಿ ಜೇನುಕುರುಬರು ನೆಲೆಸಿದ್ದಾರೆ. ಈ ಎರಡು ತಾಲೂಕುಗಳಲ್ಲಿ ಕಾರ್ಯನಿರತ ಜೇನುಕುರುಬರ ವಿವರಗಳು ಈ ಕೆಳಗಿನಂತಿವೆ.

**ಸೋಮವಾರಪೇಟೆ ತಾಲೂಕು**

ಸೋಮವಾರಪೇಟೆ ತಾಲೂಕಿನಲ್ಲಿ ಜೇನುಕುರುಬರ ಒಟ್ಟು ಕುಟುಂಬಗಳು ೮೭೨ ಇವೆ. ಇದರಲ್ಲಿ ಕಾಯಕಾರ್ಹರ ಸಂಖ್ಯೆ ಒಟ್ಟು ೧೮೦೧ ಇದೆ.ಕಾಯಕಾರ್ಹ ಪುರುಷರು ೯೧೫ ಜನ ಹಾಗೂ ಮಹಿಳೆಯರು ೮೮೬ ಜನರಿದ್ದಾರೆ. ಕಾಯಕನಿರತ ಗುಂಪು ಕಾಯಕಾರ್ಹರ ಪ್ರಮಾಣಕ್ಕಿಂತ ಅಧಿಕವಾಗಿದೆ.

ಸೋಮವಾರಪೇಟೆ ತಾಲೂಕಿನ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿದವರ ಒಟ್ಟು ಸಂಖ್ಯೆಯು ೧೬೦ ಇದೆ. ಇದರಲ್ಲಿ ಪುರುಷರು ೭೫ ಜನ ಹಾಗೂ ಮಹಿಳೆಯರು ೮೫ ಜನರಿದ್ದಾರೆ. ಇವರಲ್ಲಿ ಪುರುಷರು ಜೇನು ಕೊಯ್ಯುವುದು, ಪಾಚಿ ತೆಗೆಯುವುದನ್ನು ಮಾಡಿದರೆ ಮಹಿಳೆಯರು ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ ಮುಂತಾದ ಕಾಯಕದಲ್ಲಿ ತೊಡಗಿದ್ದಾರೆ. ಕೃಷಿಕೂಲಿಕಾರರಾಗಿ ಕಾರ್ಯನಿರ್ವಹಿಸುವವರು ಒಟ್ಟು ೬೭೧ ಜನರಿದ್ದಾರೆ. ಇದರಲ್ಲಿ ಪುರುಷರು ೩೩೨ ಜನ ಹಾಗೂ ಮಹಿಳೆಯರು ೩೩೯ ಜನರಿದ್ದಾರೆ. ಈ ಬುಡಕಟ್ಟಿನವರು ಬೇರೆಯವರ ಗದ್ದೆ, ಹೊಲಗಳಲ್ಲಿ ವಿವಿಧ ಕೂಲಿ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿ ಒಟ್ಟು ೬೪೩ ಜೇನುಕುರುಬರು ಕಾರ್ಯನಿರ್ವಹಿಸುತ್ತಾರೆ.

### ಕೋಷ್ಟಕ : ೫. ೫. ಕೊಡಗು ಜಿಲ್ಲೆಯ ತಾಲೂಕುವಾರು ವೃತ್ತಿನಿರತ ಜೇನುಕುರುಬರ ವಿವಿಧ ವೃತ್ತಿಗಳ ವಿವರ

| ತಾಲೂಕು | ಪಾರಂಪರಿಕ ವೃತ್ತಿ | | | ಕೃಷಿಕೂಲಿ | | | ಕೃಷಿಯೇತರ ಕೂಲಿ | | | ಲೈನ್/ ಎಸ್ಟೇಟ್ ಕೂಲಿ | | | ಸರ್ಕಾರಿ | | | ಇತರೆ | | |
|---|---|---|---|---|---|---|---|---|---|---|---|---|---|---|---|---|---|---|
| | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ | ಗಂ | ಹೆ | ಒ |
| ಸೋಮವಾರಪೇಟೆ | ೭೫ | ೮೫ | ೧೬೦ | ೩೩೨ | ೩೩೯ | ೬೭೧ | ೩೧೮ | ೩೨೫ | ೬೪೩ | ೨೧೨ | ೨೦೦ | ೪೧೨ | ೩೪ | ೮೫ | ೧೧೯ | ೩೪ | ೯೯ | ೧೩೩ |
| ವಿರಾಜಪೇಟೆ | ೧೦೪ | ೧೦೩ | ೨೦೭ | ೪೧೨ | ೪೭೦ | ೮೮೨ | ೪೩೨ | ೪೭೨ | ೯೦೪ | ೩೩೨ | ೩೬೦ | ೬೯೨ | ೫೬ | ೬೫ | ೧೨೧ | ೫೦ | ೯೮ | ೧೪೮ |
| ಒಟ್ಟು | ೧೭೯ | ೧೮೮ | ೩೬೭ | ೭೭೪ | ೮೦೯ | ೧೫೫೩ | ೭೫೦ | ೭೯೭ | ೧೫೪೭ | ೫೪೪ | ೫೬೦ | ೧೧೦೪ | ೯೦ | ೧೩೦ | ೨೨೦ | ೮೪ | ೧೯೭ | ೨೮೧ |

ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

ಈ ರೀತಿ ಕಾರ್ಯನಿರ್ವಹಿಸುವ ಪುರುಷರು ೩೧೮ ಜನ ಇದ್ದಾರೆ. ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೩೨೫ ಇದೆ. ಇದರ ಹೊರತಾಗಿ ಈ ತಾಲೂಕಿನಲ್ಲಿ ಕಾಫಿ ಪ್ಲಾಂಟ್‌ಗಳಲ್ಲಿ ವಂಶಪಾರಂಪಾರ್ಯವಾಗಿ ಜೀತಗಾರಿಕೆ ಮಾಡುವವರು ೪೧೨ ಜನರಿದ್ದಾರೆ. ಇವರಲ್ಲಿ ಪುರುಷರು ೨೧೨ ಹಾಗೂ ಮಹಿಳೆಯರು ೨೦೦ ಜನರಿದ್ದಾರೆ. ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ೩೪ ಜನರಿದ್ದಾರೆ. ಇವರು ಆನೆ ಸಾಕಣಿಕಾ ಕೇಂದ್ರಗಳಲ್ಲಿ ಮಾವುತ, ಕಾವಾಡಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುವ ಮಹಿಳೆಯರು ಒಟ್ಟು ೮೫, ಒಟ್ಟು ೧೧೯ ಜನರಿದ್ದಾರೆ. ಇವುಗಳ ಹೊರತಾಗಿ ಇತರ ಕೆಲಸಗಳಲ್ಲಿ ನಿರತರಾದವರು ಒಟ್ಟು ೧೩೩ ಜನರಿದ್ದಾರೆ. ಆನೆ ಸಾಕಾಣಿಕ ಕೇಂದ್ರದಲ್ಲಿ ಕೂಲಿಗಳಾಗಿ ೩೪ ಜನ ಪುರುಷರು ಕಾರ್ಯನಿಹಿಸುತ್ತಾರೆ.

ಸೋಮವಾರಪೇಟೆ ತಾಲೂಕಿನಲ್ಲಿ ಜೇನುಕುರುಬರ ಒಟ್ಟು ೮೭೨ ಕುಟುಂಬಗಳಿವೆ. ಇದರಲ್ಲಿ ಕಾಯಕಸ್ಥರು ಒಟ್ಟು ೨೧೩೮ ಜನರಿದ್ದಾರೆ. ಕಾಯಕಸ್ಥ ಪುರುಷರು ೧೦೦೫ ಹಾಗೂ ಮಹಿಳೆಯರು ೧೧೩೩ ಜನರಿದ್ದಾರೆ. ಇಷ್ಟು ಕಾಯಕಸ್ಥರಲ್ಲಿ ಪಾರಂಪರಿಕ ಕಸುಬನ್ನು ಅನುಸರಿಸುವ ಜೇನುಕುರುಬರು ಒಟ್ಟು ಶೇಕಡ ೭.೪೮ ಜನರಿದ್ದಾರೆ. ಕೃಷಿಕೂಲಿಯನ್ನು ಅವಲಂಬಿಸಿದವರು ಶೇಕಡ ೩೧.೩೯ ರಷ್ಟಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೩೦.೦೭ ರಷ್ಟಿದ್ದಾರೆ. ಸರ್ಕಾರಿ ಕನಿಷ್ಠ ಕೆಲಸವನ್ನು ಮಾಡುವವರು ಶೇಕಡ ೫.೫೬ ಇತರೆ ಕೆಲಸಗಳಲ್ಲಿ ತೊಡಗಿದವರು ಶೇಕಡ ೬.೨೨ ರಷ್ಟು ಜನರಿದ್ದಾರೆ.

**ವಿರಾಜಪೇಟೆ ತಾಲೂಕು**

ವಿರಾಜಪೇಟೆ ತಾಲೂಕಿನಲ್ಲಿ ಜೇನುಕುರುಬರ ಒಟ್ಟು ಕುಟುಂಬಗಳು ೧೪೪೧ ಇವೆ. ಇದರಲ್ಲಿ ಕಾಯಕಸ್ಥರ ಸಂಖ್ಯೆ ಒಟ್ಟು ೨೯೬೨ ಇದೆ. ಕಾಯಕಾರ್ಹ ಪುರುಷರು ೧೩೮೬ ಜನ ಹಾಗೂ ಮಹಿಳೆಯರು ೧೫೭೬ ಜನರಿದ್ದಾರೆ.

ಈ ತಾಲೂಕಿನಲ್ಲಿ ಜೇನುಕುರುಬರಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿದವರ ಒಟ್ಟು ಸಂಖ್ಯೆಯು ೨೦೭ ಇದೆ. ಇದರಲ್ಲಿ ಪುರುಷರು ೧೦೪ ಜನ ಹಾಗೂ ಮಹಿಳೆಯರು ೧೦೩ ಜನರಿದ್ದಾರೆ. ಇವರಲ್ಲಿ ಪುರುಷರು ಜೇನು ಕೊಯ್ಯುವುದು, ಪಾಚಿ ತೆಗೆಯುವುದನ್ನು ಮಾಡಿದರೆ ಮಹಿಳೆಯರು ಅರಣ್ಯದ ಕಿರು ಉತ್ಪನ್ನಗಳ ಸಂಗ್ರಹಣೆ ಮುಂತಾದ ಕಾಯಕದಲ್ಲಿ ತೊಡಗಿದ್ದಾರೆ. ಕೃಷಿಕೂಲಿಕಾರರಾಗಿ ಕಾರ್ಯನಿರ್ವಹಿಸುವವರು ಒಟ್ಟು ೮೮೨ ಜನರಿದ್ದಾರೆ. ಇದರಲ್ಲಿ ಪುರುಷರು ೪೩೨ ಜನ ಹಾಗೂ ಮಹಿಳೆಯರು ೪೭೦ ಜನರಿದ್ದಾರೆ. ಈ ಬುಡಕಟ್ಟಿನವರು ಬೇರೆಯವರ ಗದ್ದೆ, ಹೊಲಗಳಲ್ಲಿ ವಿವಿಧ ಕೂಲಿ ಕೆಲಸಗಳನ್ನಷ್ಟೇ ನಿರ್ವಹಿಸುತ್ತಾರೆ. ಕೃಷಿಯೇತರ ಕೂಲಿಕಾರರಾಗಿ ಒಟ್ಟು ೯೦೪ ಜೇನುಕುರುಬರು ಕಾರ್ಯನಿರ್ವಹಿಸುತ್ತಾರೆ. ಈ ರೀತಿ ಕಾರ್ಯನಿರ್ವಹಿಸುವ ಪುರುಷರು

೪೩೨ ಜನ ಇದ್ದಾರೆ. ಕೃಷಿಯೇತರ ಕೂಲಿಗಳಾಗಿ ಮಹಿಳೆಯರು ಕಾರ್ಯನಿರ್ವಹಿ ಸುತ್ತಿದ್ದು ಅಂತಹ ಮಹಿಳೆಯರ ಸಂಖ್ಯೆಯು ೪೭೨ ಇದೆ.ಇದರ ಹೊರತಾಗಿ ಕಾಫಿ ಪ್ಲಾಂಟರ್‌ಗಳಲ್ಲಿ ಜೀತಗಾರಿಕೆ ಮಾಡುವವರು ಒಟ್ಟು ೬೯೨ ಜನರಿದ್ದಾರೆ. ಇದರಲ್ಲಿ ಪುರುಷರು ೩೩೨ ಹಾಗೂ ಮಹಿಳೆಯರು ೩೬೦ ಜನರಿದ್ದಾರೆ. ಈ ತಾಲೂಕಿನಲ್ಲಿ ಸರ್ಕಾರದ ಕೆಲಸವನ್ನು ನಿರ್ವಹಿಸುವ ಪುರುಷರು ೫೬ ಜನರಿದ್ದಾರೆ. ಇವರು ಆನೆ ಸಾಕಾಣಿಕಾ ಕೇಂದ್ರಗಳಲ್ಲಿ ಮಾವುತ, ಕಾವಾಡಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅಂಗನವಾಡಿ ಕಾರ್ಯಕರ್ತೆ, ಅಂಗನವಾಡಿ ಸಹಾಯಕಿ, ಆಶಾ ಕಾರ್ಯಕರ್ತೆಯರಾಗಿ ಕಾರ್ಯನಿರ್ವಹಿಸುವ ಮಹಿಳೆಯರು ಒಟ್ಟು ೬೫ ಜನರಿದ್ದಾರೆ. ಒಟ್ಟು ೧೨೧ ಜನ ಸರ್ಕಾರದ ಕನಿಷ್ಠ ಕೆಲಸದಲ್ಲಿ ನಿರತರಾಗಿದ್ದಾರೆ. ಇವುಗಳ ಹೊರತಾಗಿ ಸರ್ಕಾರ ಒಂದೆರಡು ಎಕರೆ ಜಮೀನು ಕೊಟ್ಟಿರುವ ಕುಟುಂಬಗಳು ೨೩೩ ಇವೆ. ಇವುಗಳನ್ನು ಸ್ಥಳೀಯರು ಪೈಸಾರಿಗಳೆಂದು ಕರೆಯುತ್ತಾರೆ.ಈ ಜಮೀನು ಇವರಿಗೆ ಅಷ್ಟೇನು ಉಪಯುಕ್ತವಾಗಿಲ್ಲ. ಮಳೆಗಾಲದಲ್ಲಿ ಸಣ್ಣ ಪ್ರಮಾಣದ ಕೃಷಿ ಮಾಡುವರಾದರೂ ಅವರು ಬೇರೆ ವೃತ್ತಿ ಮಾಡದೆ ಜೀವನ ಸಾಗಿಸುವುದು ದುಸ್ತರವೇ ಸರಿ. ಇಂತಹ ಜನರನ್ನು ಇತರರ ಗುಂಪಿನಲ್ಲಿ ಸೇರಿಸಲಾಗಿದೆ. ಈ ರೀತಿ ಕಾರ್ಯನಿರ್ವಹಿಸುವ ಪುರುಷರು ಒಟ್ಟು ೫೦ ಜನರಿದ್ದಾರೆ. ಮಹಿಳೆಯರು ೯೮ ಒಟ್ಟು ೧೪೪೮ ಜನರಿದ್ದಾರೆ.

## ೫. ೭. ಜೇನುಕುರುಬ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ

ಸಮೀಕ್ಷೆಗೊಳಪಡಿಸಿದ ಮೂರು ಜಿಲ್ಲೆಗಳ ಒಟ್ಟು ಕಾಯಕಸ್ಥರು ೨೧೦೯ ಜನರಿದ್ದಾರೆ. ಇದರಲ್ಲಿ ಪುರುಷರು ೧೦೧೭೮ ಹಾಗೂ ಮಹಿಳೆಯರು ೧೦೯೩೨ ಜನರಿದ್ದಾರೆ. ಅಂದರೆ ಒಟ್ಟು ಕಾಯಕಸ್ಥರಲ್ಲಿ ಪುರುಷರು ಶೇಕಡ ೪೮.೨೪ ಹಾಗೂ ಮಹಿಳೆಯರು ಶೇಕಡ ೫೧.೭೬ ರಷ್ಟಿದ್ದಾರೆ.

## ಕೋಷ್ಟಕ : ೫. ೬. ಜೇನುಕುರುಬ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ

| ಜಿಲ್ಲೆ | ಪಾರಂಪರಿಕ ವೃತ್ತಿ | | | ಕೃಷಿಕೂಲಿ | | | ಕೃಷಿಯೇತರ ಕೂಲಿ | | | ಲೈನ್ / ಎಸ್ಟೇಟ್ ಕೂಲಿ | | | ಸರ್ಕಾರಿ | | | ಇತರೆ | | |
|---|---|---|---|---|---|---|---|---|---|---|---|---|---|---|---|---|---|---|
| | ಗಂ | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ಮೈಸೂರು | ೨೩೮೮ | ೨೩೪೪ | ೪೭೩೨ | ೨೮೨೪ | ೩೩೩೬ | ೬೧೬೦ | ೨೦೮೪ | ೨೦೪೨ | ೪೧೨೬ | – | – | – | ೬೪ | ೭೦ | ೧೩೪ | ೪೮ | ೧೨೭ | ೧೭೫ |
| ಚಾ.ನಗರ | ೧೫ | ೧೦ | ೨೫ | ೧೫೨ | ೧೪೮ | ೩೦೦ | ೧೬೩ | ೧೫೦ | ೩೧೩ | – | – | – | ೧೯ | ೧೪ | ೩೩ | – | ೧೦ | ೧೦ |
| ಕೊಡಗು | ೧೭೯ | ೧೮೮ | ೩೬೭ | ೭೭೪ | ೮೦೯ | ೧೫೮೩ | ೭೫೦ | ೭೯೭ | ೧೫೪೭ | ೫೪೪ | ೫೬೦ | ೧೧೦೪ | ೯೦ | ೧೩೦ | ೨೨೦ | ೮೪ | ೧೯೭ | ೨೮೧ |
| ಒಟ್ಟು | ೨೫೮೨ | ೨೫೪೨ | ೫೧೨೪ | ೩೭೫೦ | ೪೨೯೩ | ೮೦೪೩ | ೨೯೯೭ | ೨೯೮೯ | ೫೯೮೬ | ೫೪೪ | ೫೬೦ | ೧೧೦೪ | ೧೭೩ | ೨೧೪ | ೩೮೭ | ೧೩೨ | ೩೩೪ | ೪೬೬ |


ಆಧಾರ : ಸಮೀಕ್ಷೆ ಏಪ್ರಿಲ್–ಮೇ, ೨೦೧೩.

**ಕೋಷ್ಟಕ : ೫. ೭. ಜೇನುಕುರುಬ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ**

| ಕಸುಬುಗಳು | ಗಂಡು | ಹೆಣ್ಣು | ಒಟ್ಟು |
|---|---|---|---|
| ಪಾರಂಪರಿಕ ವೃತ್ತಿ | ೨೫೮೨ | ೨೫೪೨ | ೫೧೨೪ |
| ಕೃಷಿಕೂಲಿ | ೩೭೫೦ | ೪೨೯೩ | ೮೦೩೨ |
| ಕೃಷಿಯೇತರ ಕೂಲಿ | ೨೯೯೭ | ೨೯೮೯ | ೫೯೮೬ |
| ಎಸ್ಟೇಟ್ ಕೂಲಿ | ೫೪೪ | ೫೬೦ | ೧೧೦೪ |
| ಸರ್ಕಾರಿ | ೧೭೩ | ೨೧೪ | ೩೮೭ |
| ಇತರೆ | ೧೩೨ | ೩೩೪ | ೪೬೬ |
| ಒಟ್ಟು | ೧೦೧೭೮ | ೧೦೯೩೨ | ೨೧೦೯೯ |

ಆಧಾರ : ಸಮೀಕ್ಷೆ ಏಪ್ರಿಲ್-ಮೇ, ೨೦೧೩.

**ವೃತ್ತಚಿತ್ರ : ೫. ೧. ಜೇನುಕುರುಬ ಸಮುದಾಯದ ಲಿಂಗವಾರು ಕಸುಬುಗಳ ಪ್ರಮಾಣ**




ಒಟ್ಟು ಜೇನುಕುರುಬ ಕಾಯಕಸ್ಥರಲ್ಲಿ ಇಂದಿಗೂ ಪಾರಂಪರಿಕ ಕಸುಬನ್ನು ಅನುಸರಿಸುತ್ತಿರುವವರು ಶೇಕಡ ೨೪.೨೮ ಜನರಿದ್ದಾರೆ. ಕೃಷಿಕೂಲಿಕಾರರು ಶೇಕಡ ೩೮.೦೬ ಜನರಿದ್ದಾರೆ. ಕೃಷಿಯೇತರ ಕೂಲಿಕಾರ್ಮಿಕರು ಶೇಕಡ ೨೮.೩೭ ಜನ, ಜೀತಗಾರಿಕೆಯಲ್ಲಿ ಮುಂದುವರೆದವರು ಶೇಕಡ ೫.೨೩, ಸರ್ಕಾರದ ಸೇವೆಯಲ್ಲಿ ಶೇಕಡ ೧.೮೩, ಇತರೆ ಕಾರ್ಯಗಳಲ್ಲಿ ಶೇಕಡ ೨.೨೦ ಜನರಿರುವುದು ಕಂಡು ಬರುತ್ತದೆ.

ಒಟ್ಟಾರೆಯಾಗಿ ಮೂರು ಜಿಲ್ಲೆಗಳ ಜೇನುಕುರುಬ ಕಾಯಕಸ್ಥರನ್ನು ಅವಲೋಕಿಸಿದರೆ ಶೇಕಡ ೨೫ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮೂಲವೃತ್ತಿಯನ್ನು ಮಾಡುವವರು ದೊರೆಯುತ್ತಾರೆ. ಪ್ರಸ್ತುತ ಈ

ಬುಡಕಟ್ಟಿನಲ್ಲಿ ಕೃಷಿಕೂಲಿಗಳಾಗಿ ಮುಂದುವರೆದವರ ಪ್ರಮಾಣವೇ ಹೆಚ್ಚಾಗಿದೆ. ಸರ್ಕಾರಿ ಸೇವೆಯಲ್ಲಿರುವವರ ಪ್ರಮಾಣವು ಅತ್ಯಂತ ಕಡಿಮೆ ಇದೆ. ಅದರಲ್ಲೂ ಸರ್ಕಾರದ ಕೆಲಸವೆಂದರೆ ನಾಲ್ಕನೇ ದರ್ಜೆಯ ನೌಕರನಿಗಿಂತಲೂ ಕನಿಷ್ಠವಾದ ಮಾವುತ, ಕಾವಾಡಿ, ಅಂಗನವಾಡಿ ಸಹಾಯಕಿ, ಕಾರ್ಯಕರ್ತೆ, ಆಶಾ ಕಾರ್ಯಕರ್ತೆಯರ ಕೆಲಸಗಳಾಗಿವೆ. ಇತರೆ ಕಾರ್ಯಗಳಲ್ಲಿ ತೊಡಗಿರುವವರ ಪ್ರಮಾಣವು ಸರ್ಕಾರಿ ಸೇವೆಯಲ್ಲಿರುವವರಿಗಿಂತ ಸ್ವಲ್ಪ ಮಾತ್ರ ಹೆಚ್ಚಿದೆ.

ಮೇಲಿನ ಒಟ್ಟಾರೆ ಅಂಕಿ ಅಂಶಗಳನ್ನು ಗಮನಿಸಿದರೆ ಬಹುತೇಕ ಜೇನುಕುರುಬರು ಆರ್ಥಿಕವಾಗಿ ಸಂಕಷ್ಟದಲ್ಲಿದ್ದು ಆರ್ಥಿಕವಾಗಿ ತುಂಬಾ ಕಷ್ಟದ ಜೀವನವನ್ನು ಸಾಗಿಸುತ್ತಾರೆಂಬುದು ಸಾಬೀತಾಗುತ್ತದೆ.

ಕಾಡನ್ನೇ ಅವಲಂಬಿಸಿದ್ದ ಜೇನುಕುರುಬರು ಕಾಡಿನ ನಂಟನ್ನು ಪೂರ್ಣವಾಗಿ ತ್ಯಜಿಸಿಲ್ಲ ವಾದರೂ ಇಂದಿನ ಸಮಾಜದ ಅವಶ್ಯಕತೆಗನುಗುಣವಾಗಿ ತಮ್ಮ ವೃತ್ತಿಗಳನ್ನು ಬದಲಿಸಿ ಕೊಂಡಿದ್ದಾರೆ.

ಕಾಡಿನೊಳಗೆ ಮರಗಳನ್ನು ಕೊಯ್ಯುವ ಕಾಂಟ್ರಾಕ್ಟರ್‌ಗಳ ಬಳಿ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಮರಮುಟ್ಟುಗಳನ್ನು ಸಾಗಿಸಲು, ಮರದ ದಿಮ್ಮಿಗಳನ್ನು ಎತ್ತಲು ಈ ಗುತ್ತಿಗೆದಾರರು ಆನೆಗಳ ಸಹಾಯ ಪಡೆಯುತ್ತಾರೆ. ಕಾಡಿನ ಪ್ರಾಣಿಗಳ ಗುಣಧರ್ಮವನ್ನು ಅರಿತ ಜೇನುಕುರುಬರನ್ನು ಆನೆಯ ಮಾವುತ, ಕಾವಾಡಿಗರನ್ನಾಗಿ ಮಾಡಿಕೊಳ್ಳಲಾಗುತ್ತದೆ. ಆನೆಯ ಮಾವುತ, ಕಾವಾಡಿಗರಾಗಿ, ಕೃಷಿ ಕೂಲಿಗಳಾಗಿ, ಮೂಟೆ ಹೋರುವ ಕೃಷಿಯೇತರ ಕೂಲಿಗಳಾಗಿ ಹಾಗೆಯೇ ಕಾಡೊಳಗಿನ ಕಿರು ಉತ್ಪನ್ನಗಳ ಗುತ್ತಿಗೆ ಪಡೆದ ಗುತ್ತಿಗೆದಾರರಿಗೆ ಕಿರು ಉತ್ಪನ್ನಗಳನ್ನು ಸಂಗ್ರಹಿಸಿಕೊಡುವ ಆಳುಗಳಾಗಿ ಕೆಲಸ ನಿರ್ವಹಿಸುತ್ತಾರೆ. ಮಹಿಳೆಯರು ಸೀಗೆಕಾಯಿ, ನೆಲ್ಲಿಕಾಯಿ, ಅಂಟುವಾಳ, ಬೀಡಿ ಎಲೆ, ಮುತ್ತುಗದ ಎಲೆ, ಸಾಗುವಾನಿ ಬೀಜ ಹಾಗೂ ಇತರ ಕಾಡೋತ್ಪನ್ನ ಬೀಜಗಳನ್ನು ಸಂಗ್ರಹಿಸುವ ಕೆಲಸಗಳೊಂದಿಗೆ ಕೃಷಿ, ಕೃಷಿಯೇತರ ಕೂಲಿಗಳಾಗಿಯೂ ಕಾರ್ಯ ನಿರ್ವಹಿಸುತ್ತಾರೆ. ಹಾಗೆಯೇ ಜೇನುಕುರುಬ ಪುರುಷ ಮತ್ತು ಮಹಿಳೆ, ಮಕ್ಕಳು ಸಹ ಕೊಡಗಿನಲ್ಲಿ ಕಾಫಿ ಪ್ಲಾಂಟರ್‌ಗಳ ತೋಟಗಳಲ್ಲಿ ಆಳುಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಪ್ರಾಯಶಃ ಬ್ರಿಟೀಷರು ಭಾರತಕ್ಕೆ ಬಂದ ತರುವಾಯ ಜೇನುಕುರುಬರ ಬದುಕಿನಲ್ಲಿ ನಿಧಾನವಾಗಿ ಬದಲಾವಣೆಗಳಾಗ ತೊಡಗಿದವು. ಬ್ರಿಟೀಷರು ಧಾರ್ಮಿಕ ಪ್ರಚಾರ, ಮತಾಂತರ ಮಾಡಲು ಅನುಕೂಲವಾದ ವಾತಾವರಣ ಇರುವುದು ಮುಗ್ಧ ಬುಡಕಟ್ಟುಗಳ ನೆಲೆಯಲ್ಲಿ ಎಂಬುದನ್ನು ಅರಿತು ಆಧುನಿಕ ಜ್ಞಾನ ಕೊಡುವ ನೆಪದಲ್ಲಿ ಭಾರತದ ಕಾಡಿನಲ್ಲಿ ನೆಲೆಸಿದ ಬುಡಕಟ್ಟುಗಳ ಬಳಿಗೆ ತೆರಳಿದರು. ಹೀಗೆ ತೆರಳಿದ ಬ್ರಿಟೀಷರು ತಮ್ಮ ವ್ಯಾಪಾರ ವಹಿವಾಟಿಗೆ ಅನುಕೂಲವಾಗುವಂತೆ ಸ್ಥಳೀಯ ನೀತಿ ನಿಯಮಗಳನ್ನು ಜಾರಿಗೆ ತರತೊಡಗಿದರು. ಹೀಗೆ ನಿಧಾನವಾಗಿ ಸ್ಥಳೀಯ ಬುಡಕಟ್ಟುಗಳನ್ನು ಕಾಡಿನಿಂದ ಒಕ್ಕಲೆಬ್ಬಿಸುವ ಪ್ರಯತ್ನ ನಡೆಯತೊಡಗಿತು. ಈ ತಂತ್ರವು ಅಷ್ಟಾಗಿ ಕಾರ್ಯಗತಗೊಳ್ಳಲಿಲ್ಲವಾದರೂ ಅದರ ಸಂಪೂರ್ಣ ಅಭಿಲಾಷೆ ಈಡೇರಲು ಭಾರತ

ಸ್ವಾತಂತ್ರ್ಯವಾಗಬೇಕಾಯಿತು. ಭಾರತ ಸ್ವಾತಂತ್ರ್ಯಗೊಂಡ ತರುವಾಯ ಬ್ರಿಟೀಷರು ಉಳಿಸಿಹೋದ ಕಾರ್ಯವನ್ನು ಭಾರತೀಯ ರಾಜಕಾರಣಿಗಳು, ಇಲಾಖೆಗಳು, ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಪೂರ್ಣಗೊಳಿಸಿದರು.

ಕಸುಬುಗಳಲ್ಲಿ ಇಂದು ಸ್ಥಿತ್ಯಂತರವಾಗಿರುವುದರಿಂದ ಬದಲಾದ ಪರಿಸ್ಥಿತಿಗೆ ಅನುಗುಣವಾಗಿದೆ. ಆದರೆ ಇಂದು ಕೃಷಿ ಕೂಲಿ ಮಾಡುವವರ ಸಂಖ್ಯೆ ಶೇ ೫೫% ಇರುವುದರಿಂದ ಒಟ್ಟಾರೆ ಜನಸಂಖ್ಯೆಯ ಅರ್ಧದಷ್ಟಿದೆ. ಇದರಿಂದ ತಿಳಿದು ಬರುವುದೇನೆಂದರೆ ಇಂದು ಜೇನುಕುರುಬರು ಅವರ ಹಾಡಿಗಳ ಸುತ್ತ ಮುತ್ತ ಇರುವ ಊರುಗಳ ರೈತರ ಹೊಲ ಗದ್ದೆಗಳಲ್ಲಿ ಕೃಷಿ ಚಟುವಟಿಕೆಗಳನ್ನು ಕೂಲಿಗಾಗಿ ಅವಲಂಬಿಸಿರುವುದರಿಂದ ಅವರಿಗೆ ಕೃಷಿ ಮಾಡುವ ವಿಧಾನ ತಿಳಿದಿದ್ದಾರೆ, ಬೀಜ ಬಿತ್ತುವ, ಕಳೆ ತೆಗೆಯುವ, ಉಳುವ, ಬಿಡಿಸುವ, ಸಂಗ್ರಹಿಸುವ ಎಲ್ಲಾ ಕಾರ್ಯ ಯೋಜನೆಗಳನ್ನು ಇವರು ತಿಳಿದವರಾಗಿರುವುದರಿಂದ ಇವರಿಗೆ ಸರ್ಕಾರ ಕೃಷಿ ಭೂಮಿಯನ್ನು ನೀಡಿದರೆ ಉತ್ತಮ ರೈತರೆನಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಇದರಿಂದ ಭೂಮಿಯ ಒಡೆತನ ಸಿಗುತ್ತದೆ ಹಾಗೂ ಅವರಿಗೆ ಬೇಕಾದ ಫಸಲನ್ನು ಬೆಳೆಯುತ್ತಾರೆ. ಅವರವರ ನಡುವೆಯೇ ವಸ್ತುಗಳ ವಿನಿಮಯ ಕೆಲಸವೂ ನಡೆದು ಪರಸ್ಪರಾವಲಂಬಿಗಳಾಗಿ ಸಹಬಾಳ್ವೆಯಿಂದ ಜೀವಿಸಲು ನೆರವಾಗುತ್ತದೆ.

### ೫. ೮. ಕುಮ್ರಿ ಬೇಸಾಯ

ಕಾಡನ್ನೇ ನಂಬಿ ಬದುಕುವ ಜೇನುಕುರುಬರು ಆಹಾರವಾಗಿ ಕಾಡಿನ ಗಡ್ಡೆಗೆಣಸುಗಳನ್ನು ಮಾತ್ರ ಅವಲಂಬಿಸದೆ ಬಹುತೇಕ ಬುಡಕಟ್ಟುಗಳು ಅನುಸರಿಸುವ ಕುಮ್ರಿ ಬೇಸಾಯವನ್ನೂ ಸಹ ಮಾಡುತ್ತಿದ್ದರು. ಕಾಡಿನಲ್ಲಿ ಇಳಿಜಾರಾದ ಭಾಗದಲ್ಲಿ ಬೆಳೆದಿದ್ದ ಮರ–ಗಿಡ, ಕುರುಚಲು ಗಿಡ, ಪೊದೆ, ಇತ್ಯಾದಿಗಳನ್ನು ಕಡಿದು ಹಾಕಿ, ಆ ಸ್ಥಳದಲ್ಲಿ ರಾಗಿ, ಅಲಸಂದೆ, ಅವರೆ ಇತ್ಯಾದಿ ಧಾನ್ಯಗಳನ್ನು ಚೆಲ್ಲುತ್ತಿದ್ದರು. ಅವು ಮಳೆಗಾಲದಲ್ಲಿ ಮಳೆ ನೀರನ್ನು ಬಳಕೆ ಮಾಡಿಕೊಂಡು ಸಮೃದ್ಧವಾಗಿ ಬೆಳೆಯುತ್ತಿದ್ದವು. ಈ ರೀತಿ ಬೆಳೆದ ಧಾನ್ಯಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದರು. ಅನಂತರ ಆ ಸಾಗುವಳಿ ಮಾಡಿದ್ದ ಸ್ಥಳವನ್ನು ಬಿಟ್ಟು ಕಾಡಿನ ಇನ್ನೊಂದು ಭಾಗಕ್ಕೆ ಹೋಗಿ ಅಲ್ಲಿಯೂ ಅದೇ ಕ್ರಮವನ್ನು ಅನುಸರಿಸಿ ಬೆಳೆಯನ್ನು ಬೆಳೆದು ಕೊಳ್ಳುತ್ತಿದ್ದರು. ನೇಗಿಲು ಎತ್ತು ಇತ್ಯಾದಿ ಯಾವುದನ್ನು ಬಳಸದೆ ಬೇಸಾಯ ಮಾಡುತ್ತಿದ್ದರು. ಅಂದರೆ ಕೇವಲ ಕೊಡಲಿ, ಕೊಕ್ಕೆ ಕೆಳೆಗುದ್ದಲಿಗಳನ್ನು ಮಾತ್ರ ಬಳಸಿ ಉಳುವ ಕಾರ್ಯ ಕೈಗೊಳ್ಳುತ್ತಿದ್ದರು. ಆದರೆ ಈಗ ಅರಣ್ಯ ಕಾಯ್ದೆಯಿಂದಾಗಿ ಕುಮ್ರಿ ಬೇಸಾಯ ಪದ್ಧತಿಯನ್ನು ಬಿಡಬೇಕಾಗಿದೆ.

ಜೇನುಕುರುಬರು ಕಾಡಿನಲ್ಲಿ ಜೀವನ ನಡೆಸಿಕೊಂಡು. ಅಲ್ಲಲ್ಲಿ ಕುಮ್ರಿ ಬೇಸಾಯ ಮಾಡಿಕೊಂಡು ಬೇಟೆಯನ್ನು ಅವಲಂಬಿಸಿ ಬದುಕುತ್ತಿದ್ದರು. ಗೆಡ್ಡೆಗೆಣಸುಗಳನ್ನು ಆಹಾರಕ್ಕಾಗಿ ಬಳಸುತ್ತಾ ಬಂದರು. ತದನಂತರದಲ್ಲಿ ಅರಣ್ಯಾಧಿಕಾರಿಗಳ ಕಣ್ಣಿಗೆ ಬಿದ್ದು ಅವರನ್ನು ಕುಮ್ರಿ ಬೇಸಾಯ

ಮಾಡಿಸುತ್ತಾ ಕಾಡನ್ನು ಅಂತಹ ಪ್ರದೇಶದಲ್ಲಿ ಬೆಳೆಸುತ್ತಾ, ತೇಗದ ಮರಗಳ ನೆಡುತೋಪು (ಪ್ಲಾಂಟೇಷನ್) ಮಾಡುತ್ತಿದ್ದರು. ಇವರನ್ನು ಅರಣ್ಯಾಧಿಕಾರಿಗಳು ಇದ್ದಂತಹ ಕಾಡನ್ನು ಕಡಿದು ಅಲ್ಲಿ ಒಂದು ವರ್ಷ ರಾಗಿಯನ್ನು ಚೆಲ್ಲಿಸಿ ಬೆಳೆ ತೆಗೆಸಿ ನಂತರ ಅದೇ ಸ್ಥಳದಲ್ಲಿ ಮರಗಳನ್ನು ಬೆಳೆಸಲು ಮುಂದಾದರು.

ಶ್ರೀಮತಿ ಗೌರಮ್ಮ, ಮಜ್ಜಿಗೆ ಹಳ್ಳ, ಇವರು ಹೇಳುವಂತೆ, ಒಂದೊಂದು 'ಕೂಪು' (ತೇಗದ ಮರಗಳು ನೆಟ್ಟಿರುವ ಜಾಗ) ಹಾರೆಯಲ್ಲಿ ಸಾಲು ಮಾಡಿ ತೇಗದ ಬೀಜ ನೆಡುತ್ತಿದ್ದರು. ಹೆಬ್ಬೆರಳಿನಿಂದ ಸಾಲು ಮಾಡುತ್ತಿದ್ದರು. ಕೂಪು ಕೆಲಸಕ್ಕೆ ಹೋದಾಗ ಎಂಟಾಣೆ, ಹನ್ನೆರಡಾಣೆ, ಹದಿನಾಲ್ಕಾಣೆ, ಒಂದಾಣೆ ಸಂಪಾದಿಸುತ್ತಿದ್ದೆವು. ಗುದ್ದಲಿಯಲ್ಲಿ ಕೆತ್ತಿ ರಾಗಿ ಬೆಳೆದು ಕೊಳ್ಳುತ್ತಿದ್ದರು. ಹೀಗೆ ಕಾಡಿನಲ್ಲಿ ಗಂಧ, ತೇಗ, ಜೀಟೆ, ಹೊನ್ನೆ, ಕ್ಯಾಸಿ ಮರಗಳನ್ನು ಬೆಳೆಸಿದರು. ಮನರಂಜನೆಯೊಂದಿಗೆ ಕೆಲಸ ಮಾಡುತ್ತಿದ್ದರು. ರಾಗಿಯನ್ನು ಒಣಗಿಸಲು ಒಂದು ನಿರ್ದಿಷ್ಟ ಜಾಗವನ್ನು ಮಣ್ಣು ಹಾಕಿ ಗಟ್ಟಿಗೊಳಿಸಿ ದೊಣ್ಣೆಯಿಂದ ಬಡಿಯುತ್ತಿದ್ದೇವು. ಆ ಮೇಲೆ ಸಗಣಿಯಿಂದ ಸಾರಿಸುತ್ತಿದ್ದೇವು. ರಾಗಿಯ ತೆನೆಯನ್ನು ಅದರ ಮೇಲೆ ಹಾಕಿ ಕಾಲಿನಿಂದ ತುಳಿಯುವಾಗ ಹಾಡುತ್ತಿದ್ದೇವು. ರಾಗಿಯನ್ನು ತುಳಿಯುವಾಗ 'ದಿದ್ದಿ... ಮಾಲೆ' ಹಾಡನ್ನು ಹಾಡುತ್ತಿದ್ದರು. ರಾತ್ರಿಯಿಂದ ಬೆಳಗಾಗುವವರೆಗೂ ಈ ರೀತಿ ಹಾಡುತ್ತಾ ಮನರಂಜನೆಯೊಂದಿಗೆ ರಾಗಿ ತುಳಿಯುತ್ತಿದ್ದರು.

ದಿದ್ದಿ ಮಾ... ಲೇ ನಗಿಲಾ...

ಎಲ್ಲಾ ಸೇರಿ ತುಳಿಯೋಳು ಬಾರಾ

ದಿದ್ದಿ ಮಾ... ಲೇ

ಎಂದು ಹಾಡುತ್ತಾ, ಗುಡ್ಡೆ ಹಾಕಿ ತೂರುತ್ತಿದ್ದೆವು. ಮೊರದಲ್ಲಿ ಕಡ್ಡಿ, ಕಸ ತೆಗೆದು ರಾಗಿ ಗೋಚಿ ಬೀಸುತ್ತಿದ್ದೆವು. ರಾಗಿ ಬೀಸಿ ಹಿಟ್ಟು ಮಾಡಿ ಕಾಡಲ್ಲಿ ಸಿಗುವ ಅಂದಾಗಣ್ಣು (ಚಿಕ್ಕಟಮೋಟಾ), ಸಾಸಿವೆ ಸೊಪ್ಪು, ಗಣಕೆ ಸೊಪ್ಪು, ಕೀರೆಸೊಪ್ಪು, ಕುಂಬಳಕಾಯಿ ಉದುಕ (ಸಾರು), ಉಪ್ಪು ಹಾಕಿ ಮುದ್ದೆ ಮಾಡಿ ತಿನ್ನುತ್ತಾರೆ.

ಹೀಗೆ ಕಾಲ ಕಳೆದಂತೆ ಕುಮ್ರಿ ಬೇಸಾಯ ಪದ್ಧತಿ ನಶಿಸಲು ಪ್ರಾರಂಭವಾಯಿತು.

**ಕೃಷಿಗೆ ಬಳಸುವ ಉಪಕರಣಗಳು**

ಇತ್ತೀಚೆಗೆ ಜೇನುಕುರುಬರು ಕಾಫಿ, ರಾಗಿ, ಭತ್ತ ಬೆಳೆಯಲು ನೇಗಿಲು, ಹಾರೆ, ಗುದ್ದಲಿ, ಹಗ್ಗ, ನೊಗ, ಹಸು ಮುಂತಾದ ಉಪಕರಣ ಉಪಯೋಗಿಸುತ್ತಾರೆ.

೫. ೯. ಯೋಜನೆಗಳು

ಸರ್ಕಾರ ಇಂದು ಇವರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಅನೇಕ ಯೋಜನೆಗಳನ್ನು ರೂಪಿಸಿದೆ ಜೇನುಕುರುಬ ಸಮುದಾಯದ ಆರ್ಥಿಕ ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ಸರ್ವತೋಮುಖ ಬೆಳವಣಿಗೆಯ ಕಡೆಗೆ ಗಮನ ಹರಿಸಬೇಕೇಂಬುದನ್ನು ಹೇಳಬಹುದಾಗಿದೆ. ಅಧ್ಯಯನದ ಅವಶ್ಯಕತೆಯಲ್ಲಿ ಭಾರತ ಸರ್ಕಾರ ಹತ್ತು ಪಂಚ ವಾರ್ಷಿಕ ಯೋಜನೆಯನ್ನು ಪೂರ್ಣಗೊಳಿಸಿ ಹನ್ನೊಂದು, ಹನ್ನೆರಡನೇ ಯೋಜನೆಗಳು ಜಾರಿಗೆ ಬಂದರು ಕೂಡ ಆದಿಮ ಬುಡಕಟ್ಟುಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳಲ್ಲಿಅಂತಹ ಮಹತ್ವದ ಬದಲಾವಣೆ ಏನು ಕಂಡು ಬರುವುದಿಲ್ಲ

ಬೇರೆ ಬುಡಕಟ್ಟಿಗೆ ಹೋಲಿಸಿದರೆ ಕಳೆದ ೨೦೧೨ ರಿಂದ ಆರು ತಿಂಗಳಿಗೆ ವಿಶೇಷ ಪ್ಯಾಕೇಜಿನಲ್ಲಿ ಆಹಾರ ಒದಗಿಸುತ್ತಿದೆ. ಇದರಲ್ಲಿ ಹದಿನೈದು ಕೆ.ಜಿ.ರಾಗಿ, ಮುವತ್ತು ಕೆ.ಜಿ. ಅಕ್ಕಿ, ಒಂದು ಕೆ.ಜಿ. ಬೆಲ್ಲ, ಒಂದು ಕೆ.ಜಿ. ಹೆಸರುಕಾಳು, ಒಂದು ಕೆ.ಜಿ. ಎಣ್ಣೆ, ಮೂವತ್ತು ಮೊಟ್ಟೆ ಪ್ರತಿ ತಿಂಗಳು ತಲುಪುತ್ತಿತ್ತು. ಈಗಲೂ ಮುಂದುವರೆದಿದೆ. ಇದರಿಂದ ಆರೋಗ್ಯ ಸ್ಥಿತಿ ಸುಧಾರಿಸಿದೆ. ಅಪೌಷ್ಟಿಕತೆಯು ಕಡಿಮೆಯಾಗುತ್ತಿದೆ.

ಸರ್ಕಾರವು ಇಂದು ನೀಡುತ್ತಿರುವ ಆಹಾರ ಯೋಜನೆ (food package) ಯ ದವಸ ಧಾನ್ಯಗಳನ್ನು ಅನಿವಾರ್ಯವಾಗಿ ಅವರು ತಿನ್ನಲೇಬೇಕಾಗಿದೆ ಏಕೆಂದರೆ ಕಾಡಿನಿಂದ ಹೊರಗೆ ತಂದು ಬಿಟ್ಟಿರುವ ಸರ್ಕಾರ ಕಾಡಿನಲ್ಲಿ ಸಿಗುವ ಪೌಷ್ಟಿಕಾಂಶ ಭರಿತ ಸೊಪ್ಪು, ಗೆಣಸು, ಹಣ್ಣು, ಕಾಯಿಗಳ ಉಪಯೋಗ ಸಿಗದ ಹಾಗೆ ಮಾಡಿ ಆಹಾರ ಯೋಜನೆಯಲ್ಲಿ ಕೆಲವೊಂದು ಆಹಾರ ಪದಾರ್ಥಗಳನ್ನು ನೀಡುತ್ತಿದೆ. ಇಷ್ಟವಿಲ್ಲದಿದ್ದರೂ ಇದನ್ನು ಪಡೆಯಲೇಬೇಕಾಗಿದೆ. ಇದರಿಂದ ಅವರ ಪಾರಂಪರಿಕ ಜ್ಞಾನವು ನಶಿಸುತ್ತಿದೆ. ಜೊತೆಗೆ ಅವರಿಗೆ ಇರುವ ರೋಗ ನಿರೋಧಕ ಶಕ್ತಿ (resistence power) ಭವಿಷ್ಯದಲ್ಲಿ ಇಲ್ಲವಾಗುತ್ತಿದೆ. ಆನಂತರ ಸಾಮಾನ್ಯ ಜನರಂತೆ ಇವರೂ ಕೂಡ ಆಸ್ಪತ್ರೆಗಳಿಗೆ ಅಲೆಯುತ್ತಾ ಆಧುನಿಕ ಔಷಧೋಪಚಾರಕ್ಕೆ ಹೊಂದಿ ಕೊಳ್ಳಲಾರದೆ ಅವರಿಗೆ ಹೇಳುವ 'ಆದಿಮ ಬುಡಕಟ್ಟು' ಎಂಬ ಗುರುತಿಸುವಿಕೆಯೇ (identity) ಇಲ್ಲವಾಗುತ್ತದೆ.

ಹೈನುಗಾರಿಕೆ ಹಂದಿ ಸಾಕಾಣಿಕೆ, ಕುರಿ, ಕೋಳಿ ಸಾಕಾಣಿಕೆಗೆ ಸರ್ಕಾರ ಲೋನುಕೊಡುತ್ತಿದೆ. ಒಂದು ಕುಟುಂಬಕ್ಕೆ ಐವತ್ತು ಸಾವಿರ ರೂಪಾಯಿ ಅನುದಾನವಿದೆ. ಕೋಳಿ ಸಾಕಾಣಿಕೆಗೆ ರೂ.೧.೦೦ ಲಕ್ಷಗಳು. ಹಸು ಸಾಕಾಣಿಕೆಗೆ ಒಂದು ಲಕ್ಷ ರೂಪಾಯಿ ಅನುದಾನವಿದೆ. ಕೃಷಿಗೆ ಅನುಕೂಲವಾಗಲೆಂದು ಕೊಳವೆಬಾವಿ ಮಾಡಿದ್ದಾರೆ. ಕುಡಿಯುವ ನೀರಿಗೆ ನಲ್ಲಿಗಳು, ಟ್ಯಾಂಕರ್ ವ್ಯವಸ್ಥೆ ಇದೆ.ಸಿಮೆಂಟ್ ರಸ್ತೆ ಇದೆ. ಚರಂಡಿ ವ್ಯವಸ್ಥೆ ಇದೆ. ವಸತಿ ಸೌಲಭ್ಯಕ್ಕಾಗಿ ಒಂದು ಕುಟುಂಬಕ್ಕೆ ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿ ನೀಡುತ್ತಿದ್ದಾರೆ. ಹೀಗೆ ಇತ್ತೀಚೆಗೆಬೆಳವಣಿಗೆ ಕಾಣುತ್ತಿದ್ದಾರೆ.

ಸರ್ಕಾರ ಸ್ವಯಂ ಉದ್ಯೋಗಕ್ಕೆ ಲೋನ್ ಕೊಡುತ್ತಿದೆ. ಉದಾ: ವ್ಯಾಪಾರ, ಗ್ಯಾರೇಜ್, ಆಟೋ, ಟ್ರಾಕ್ಟರ್, ಟಾಟಾ ಸುಮೋ ಕೊಳ್ಳಲು ಸಾಲ ಸೌಲಭ್ಯಗಳು ದೊರೆಯುತ್ತಿವೆ. ರೇಷ್ಮೆ ಹಾಡಿಗೆ ಟ್ರಾಕ್ಟರ್, ಟ್ರಲ್ಲರ್, ಆಟೋ ಮುಂಜೂರಾಗಿದೆ.

ಮೈಸೂರು ಜಿಲ್ಲೆಯಲ್ಲಿ ಮೆಟ್ರಿಕ್ ನಂತರದ ಓದುವ ಮಕ್ಕಳಿಗೆ ವರ್ಷವೊಂದಕ್ಕೆ ಐದು ಸಾವಿರ ರೂಪಾಯಿ ಮಂಜೂರಾಗಿದೆ. ಜೇನುಕುರುಬ ಮಕ್ಕಳಿಗೆ ವಿದ್ಯಾರ್ಥಿವೇತನ ಪ್ರತ್ಯೇಕವಾಗಿದೆ. ಈಗ ಮೂರು ನೂರು ರೂಪಾಯಿ ರಿಂದ ಏಳು ಸಾವಿರ ರೂಪಾಯಿವರೆಗೂ ಇದೆ (ಎರಡನೇ ತರಗತಿಯಿಂದ ಉನ್ನತ ವ್ಯಾಸಂಗಕ್ಕೆ) ಕೃಷಿಗೆ – ಲೋನ್ ಕೊಡುತ್ತಿದ್ದಾರೆ. ಶುಂಠಿಗೆ ಸಹಾಯ ಧನ ಇದೆ. ಹಕ್ಕು ಪತ್ರ ಇಲ್ಲದವರಿಗೆ ಕೊಡುವುದಿಲ್ಲ. ಹಾಡಿಗಳಿಗೆ ಸೋಲಾರ್ ದೀಪದ ವ್ಯವಸ್ಥೆ ಇದೆ. ವಿದ್ಯುತ್ ಇಲ್ಲದ ಕಡೆ ಸೋಲಾರ್ ಅಳವಡಿಸಿದ್ದಾರೆ. ಇದರ ಮೇಲುಸ್ತುವಾರಿಯನ್ನು ಸಮಾಜ ಕಲ್ಯಾಣ ಇಲಾಖೆಯು ನೋಡಿಕೊಳ್ಳುತ್ತಿದೆ.

ದೊಡ್ಡ ಪ್ರಮಾಣದ ಗಿರಿಜನರ ವಿವಿದೋದ್ದೇಶ ಸಹಕಾರ ಸಂಘ (ಲ್ಯಾಂಪ್ಸ್) ಗಳಿಗೆ ಇಲ್ಲಿ ಅರಣ್ಯಗಳ ಉತ್ಪನ್ನಗಳ ಸಂಗ್ರಹ, ಜೇನು, ನೆಲ್ಲಿಕಾಯಿ, ಮರಪಾಚಿ, ಸೀಗೆಕಾಯಿ, ಉರವಲು, ಮರದ ಸಿಪ್ಪೆ, ಅರಗು, ಅಂಟು, ಜೇನು ಮೇಣ, ಗೋಂದು (ದಿಂಡಿಲು ಮರದ ಮೇಣ), ಹರಳೇಕಾಯಿ, ಸೀಗೆ ಚಕ್ಕೆ, ಬೇರೆ ಬೇರೆ ಔಷಧಿ ಬಳಕೆಯ ಗಿಡಮೂಲಿಕೆಗಳು ಮುಂತಾದವುಗಳನ್ನು ಕಾಡಿನಿಂದ ಸಂಗ್ರಹಿಸಿ ಇಲ್ಲಿ ಮಾರಾಟ ಮಾಡುತ್ತಾರೆ. ಪ್ರತಿ ವಸ್ತುವಿಗೂ ಇಲ್ಲಿ ಬೆಲೆ ನಿಗದಿ ಇರುತ್ತದೆ. ಲ್ಯಾಂಪ್ಸ್ ಸೊಸೈಟಿಯಿಂದ ಇವರಿಗೆ ಗುರುತಿನ ಚೀಟಿ ನೀಡಿದ್ದಾರೆ. ಅದನ್ನು ತೋರಿಸಿದರೆ ಅರಣ್ಯ ಇಲಾಖೆಯವರು ಇವರಿಗೆ ಕಾಡಿನ ಒಳಗೆ ಹೋಗಲು ಬಿಡುತ್ತಾರೆ. ಅರಣ್ಯದಲ್ಲಿ ಸಂಗ್ರಹಿಸಿದ್ದ ವಸ್ತುಗಳನ್ನು ಲ್ಯಾಂಪ್ಸ್‌ಗೆ ಕೊಡುತ್ತಾರೆ.

ಲ್ಯಾಂಪ್ಸ್‌ನಿಂದಾಗಿ ಗಿರಿಜನರಿಗೆ ರಕ್ಷಣೆ ಇದೆ. ಸಣ್ಣ ತೊಂದರೆಗಳಿಗೆ ಯಶಸ್ವಿನಿ ಕಾರ್ಡ್ ಇದೆ.ಆ ಮುಖಾಂತರ ಆರೋಗ್ಯ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾರೆ. ಅರಣ್ಯ ಉತ್ಪನ್ನಗಳ ಸಂಗ್ರಹವು ಆಯಾ ಋತುಮಾನಕ್ಕೆ ಅನುಗುಣವಾಗಿರುತ್ತದೆ. ಜೂನ್ ತಿಂಗಳಿನಿಂದ ಫೆಬ್ರವರಿವರೆಗೆ ನೆಲ್ಲಿಕಾಯಿ, ಸೀಗೆಕಾಯಿ ಇರುತ್ತದೆ. ಮಾರ್ಚಿಯಿಂದ ಮೇ ತಿಂಗಳವರೆಗೂ ಯಾವುದೇ ಉತ್ಪನ್ನವಿರುವುದಿಲ್ಲ. ಆಗ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಅರಣ್ಯ ಇಲಾಖೆಯಲ್ಲಿಯೂ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಫಾರೆಸ್ಟ್ ಕ್ಲೀನ್ ಮಾಡುವುದು, ಲೈನ್ ಕ್ಲೀನ್ ಮಾಡುವುದು, ಪ್ಲಾಂಟೇಶನ್ ಮಾಡುವುದು ಇತ್ಯಾದಿ. ಒಂದು ದಿನಕ್ಕೆ ಇನ್ನೂರೈವತ್ತು ರೂಪಾಯಿ ರಿಂದ ಮುನ್ನೂರೈವತ್ತು ರೂಪಾಯಿ ಕೂಲಿಸಿಗುತ್ತದೆ. ೨೦೦೮ರಲ್ಲಿ ಮೈಸೂರು ಜಿಲ್ಲೆಯ ಕೆಬ್ಬೆಪುರ ಹಾಡಿಯ ಹೆಂಗಸರಿಗೆ ಹೊಲಿಗೆ ಯಂತ್ರಗಳನ್ನು ಕೊಟ್ಟು ತರಬೇತಿಯನ್ನು ನೀಡುತ್ತಾ ಬಂದಿದ್ದಾರೆ. ಈ ರೀತಿ ಮಾಡುವುದರಿಂದ ಅವರ ಪಾರಂಪರಿಕ ಜ್ಞಾನ ನಶಿಸಲು ಕಾರಣವಾಗುತ್ತಿದೆ.

## ೫. ೧೦. ಭೂ ಹಿಡುವಳಿ

ಜೇನುಕುರುಬರು ಕಾಡಿನಲ್ಲಿ ನೆಲೆಸಿದಾಗ ಆಹಾರಕ್ಕಾಗಿ ಕಾಡಿನಲ್ಲಿ ದೊರೆಯುವ ಗಡ್ಡೆ ಗೆಣಸುಗಳನ್ನು, ಚಿಕ್ಕಪುಟ್ಟ ಪ್ರಾಣಿಗಳನ್ನು ಬೇಟೆಯಾಡಿ ಆಹಾರ ದೊರಕಿಸಿಕೊಳ್ಳುತ್ತಿದ್ದರು. ತರುವಾಯ ತಮಗೆ ಅವಶ್ಯವಾದ ಆಹಾರ ಧಾನ್ಯಗಳನ್ನು ಕಾಡಿನಲ್ಲಿಯೇ ಕುಮ್ರಿ ಬೇಸಾಯ ಪದ್ಧತಿಯಲ್ಲಿ ಬೆಳೆದುಕೊಳ್ಳುತ್ತಿದ್ದರು.

ಅಂದರೆ ಇವರು ಕಾಡಿನಲ್ಲಿ ಒಂದು ಭಾಗದಲ್ಲಿ ಬೆಳೆದಿದ್ದ ಮರ-ಗಿಡ, ಕುರುಚಲು ಗಿಡ, ಪೊದೆ, ಇತ್ಯಾದಿಗಳನ್ನು ಕಡಿದು ಹಾಕಿ, ಆ ಸ್ಥಳವನ್ನು ಸ್ವಚ್ಛ ಮಾಡಿಕೊಂಡು ಅಲ್ಲಿ ರಾಗಿ, ಜೋಳ ಇತ್ಯಾದಿ ಧಾನ್ಯಗಳನ್ನು ಆ ನೆಲದಲ್ಲಿ ಚೆಲ್ಲಿ ಅವು ನೈಸರ್ಗಿಕವಾಗಿ ಬೆಳೆದು ಫಲ ಕೊಟ್ಟ ತರುವಾಯ ಕೊಯ್ಲು ಮಾಡಿಕೊಳ್ಳುತ್ತಿದ್ದರು. ಫಸಲು ಬಂದ ತರುವಾಯ ಸಾಗುವಳಿ ಮಾಡಿದ್ದ ಆ ಪ್ರದೇಶವನ್ನು ಬಿಟ್ಟು ಕಾಡಿನ ಇನ್ನೊಂದು ಭಾಗಕ್ಕೆ ಹೋಗಿ ಅಲ್ಲಿಯೂ ಅದೇ ಕ್ರಮವನ್ನು ಅನುಸರಿಸಿ ಬೆಳೆಯನ್ನು ಬೆಳೆದುಕೊಳ್ಳುತ್ತಿದ್ದರು. ಆದರೆ ಸರ್ಕಾರದ ಅರಣ್ಯ ನೀತಿ ಯಿಂದಾಗಿ ಅರಣ್ಯ ಇಲಾಖೆಯು ಕುಮ್ರಿ ಬೇಸಾಯ ಪದ್ಧತಿಯನ್ನು ನಿರ್ಬಂಧಿಸಿತು. ಸರ್ಕಾರವು ಇತ್ತೀಚೆಗೆ ಇವರ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಮೂಲ ಬುಡಕಟ್ಟುಗಳಿಗಾಗಿ ನಿರ್ಮಿಸಿದ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ ಕೆಲವು ಕುಟುಂಬಗಳಿಗೆ ಒಂದೆರಡು ಎಕರೆಯಷ್ಟು ಕೃಷಿ ಭೂಮಿಯನ್ನು ನೀಡಿದೆ. ಆದರೆ ಈ ಭೂಮಿ ಅಷ್ಟೇನೂ ಕೃಷಿಗೆ ಯೋಗ್ಯವಾದ ಭೂಮಿ ಯಲ್ಲವೆಂದು ವಕ್ತೃಗಳು ಅಭಿಪ್ರಾಯ ಪಡುತ್ತಾರೆ. ಆದರೆ ಭೂಮಿಯೇ ಇರದ ಈ ಬುಡಕಟ್ಟಿಗೆ ಕೆಲವಾದರೂ ಕುಟುಂಬಗಳಿಗೆ ಸರ್ಕಾರ ಸ್ವಲ್ಪಮಟ್ಟಿಗಾದರೂ ಜಮೀನನ್ನು ಮಂಜೂರು ಮಾಡಿದೆ ಎಂಬುದಷ್ಟೇ ಸಮಾಧಾನಕರ ವಿಚಾರ. ಪ್ರಸ್ತುತ ಈ ಜಮೀನುಗಳನ್ನು ಪಡೆದ ಫಲಾನುಭವಿ ಕುಟುಂಬಗಳು ತಮ್ಮ ಜಮೀನಿನೊಳಗೆ ಮನೆಗಳನ್ನು ಮಾಡಿಕೊಂಡಿವೆ. ಇವರನ್ನೇ ಸ್ಥಳೀಯರು ಪೈಸಾರಿಗಳು ಎಂದು ಕರೆಯುವುದು. ಮಳೆಗಾಲದ ಕೆಲವು ತಿಂಗಳು ಮಾತ್ರ ತಮ್ಮ ಜಮೀನಿನಲ್ಲಿ ರಾಗಿ, ನವಣೆ, ತರಕಾರಿ ಮುಂತಾದವುಗಳನ್ನು ಬೆಳೆಯುವ ಜೇನುಕುರುಬರು ತಮ್ಮ ಜಮೀನಿನ ಅತ್ಯಲ್ಪ ಉತ್ಪನ್ನವನ್ನು ಮಾತ್ರ ನೆಚ್ಚಿಕೊಂಡು ಕೂಡುವಂತಿಲ್ಲ. ಹೀಗಾಗಿ ಇನ್ನುಳಿದ ತಿಂಗಳುಗಳಲ್ಲಿ ಸರ್ಕಾರದ ಅರಣ್ಯ ಹಾಗೂ ಪರರ ಭೂಮಿಗಳಲ್ಲಿ ಕೂಲಿಕಾರರಾಗಿ, ಕಾವಲುಗಾರರಾಗಿ ಅಥವಾ ತಾತ್ಕಾಲಿಕ ಉದ್ಯೋಗಿಗಳಾಗಿ ಕೆಲಸ ಮಾಡುತ್ತಾರೆ. ಕೆಲವರು ಮಾವುತರಾಗಿ ಸೇವೆ ಮಾಡುತ್ತಾರೆ. ಆನೆ ಗಳನ್ನು ಹಿಡಿಯುವುದರಲ್ಲಿ ನಿಪುಣರಿವರು.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಜೇನುಕುರುಬರ ಹೊರತಾಗಿ ಬೇರೆ ಯಾವ ಜಿಲ್ಲೆಯಲ್ಲಿಯೂ ಈ ಬುಡಕಟ್ಟಿನವರಿಗೆ ಭೂಮಿಯು ಸರ್ಕಾರದಿಂದ ದೊರೆತಿರುವುದಿಲ್ಲ. ಕೊಡಗಿನಲ್ಲಿ ಭೂಮಿ ಹೊಂದಿದವರ ವಿವರ ಈ ಕೆಳಗಿನಂತಿದೆ. ವಿರಾಜಪೇಟೆ ತಾಲೂಕಿನಲ್ಲಿ ಮಾತ್ರ ಇನ್ನೂರ ಮುವತ್ತಮೂರು ಕುಟುಂಬಗಳಿಗೆ ಸರ್ಕಾರವು ಒಂದೆರಡು ಎಕರೆಯಷ್ಟು ಕೃಷಿಯೋಗ್ಯವಲ್ಲದ

ಜಮೀನನ್ನು ಮಂಜೂರು ಮಾಡಿದೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ.

### ೫. ೧೧. ಆರ್ಥಿಕ ಸಮಸ್ಯೆಗಳು

ಜೇನುಕುರುಬರು ಸಾಮಾಜಿಕ ಸಮಸ್ಯೆಯೊಂದಿಗೆ ಇಂದು ಆರ್ಥಿಕವಾಗಿಯೂ ನೆಲೆ ಇಲ್ಲದೇ ಒದ್ದಾಡುವಂತಹ ಪರಿಸ್ಥಿತಿ ಮುಂದುವರೆದಿದೆ. ಏಕೆಂದರೆ ಕಾಡಂಚಿನಲ್ಲಿರುವ ಕುಟುಂಬಗಳು ಕಾಡಿನ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುವ ಪರವಾನಗಿಯನ್ನು ಸರ್ಕಾರ ಇವರಿಗೆ ನೀಡಿದೆ. ಜೊತೆಗೆ ಕಾಡಿನಾಚೆಗೆ ವಾಸಿಸುತ್ತಿರುವ ಕೆಲವೊಂದು ವಿರಳ ಜನರಿಗೆ ಪಾರವಾನಗಿ ನೀಡಿದೆಯಾದರೂ ಅರಣ್ಯ ಇಲಾಖೆಯ ಸಿಬ್ಬಂದಿಗಳ ಜೊತೆಗೆ ನಿತ್ಯ ಹೋರಾಟವಿದ್ದೇ ಇರುತ್ತದೆ. ಕಾಡಿನೊಳಗೆ ಪ್ರವೇಶ ಪಡೆಯಲು ಗುರುತಿನ ಪತ್ರದ ಪರಿಶೀಲನೆ ಇರುತ್ತದೆ. ಕೆಲವೊಮ್ಮೆ ಇಲಾಖೆಯ ಸಿಬ್ಬಂದಿಗಳು ಗುರುತು ಪತ್ರಗಳಿದ್ದರೂ ಕೂಡ ಕಾಡನ್ನು ಪ್ರವೇಶಿಸಲು ಅನುಮತಿ ನೀಡುವುದಿಲ್ಲ. ಪ್ರವೇಶಿಸುವ ಒಂದು ಹಂತದ ಹೋರಾಟದೊಂದಿಗೆ ಒಳಗೆ ಹೋಗಬೇಕು.

- ಪರಿಸರ ನಾಶದಿಂದ ಋತುಮಾನದಲ್ಲಿನ ಬದಲಾವಣೆಯಿಂದಾಗಿ ಕೂಡ ಕಿರು ಅರಣ್ಯದ ಉತ್ಪನ್ನಗಳಾದ ಅಂಟ್ವಾಳಕಾಯಿ, ಸೀಗೆಕಾಯಿ, ನೆಲ್ಲಿಕಾಯಿ, ತೇಗಮರದ ಸಿಪ್ಪೆ ಮುಂತಾದವು ಫಲವಂತಿಕೆ ಇಲ್ಲದಿರುವುದು ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಾರೆ.
- ಕಿರು ಅರಣ್ಯ ಉತ್ಪನ್ನಗಳಿಗೆ ಗರಿಷ್ಠ ಮುಖಬೆಲೆ ನೀಡದೇ ಅತೀ ಕಡಿಮೆ ಬೆಲೆಯನ್ನು ನಿಗಧಿ ಪಡಿಸಿರುವುದು ಇದು ಇವರ ಜೀವನ ನಿರ್ವಹಣೆಗೆ ಸಾಕಾಗದಂತಹ ಪರಿಸ್ಥಿತಿ ಕಂಡು ಬಂದಿದೆ.
- ಕೊಡಗು ಜಿಲ್ಲೆಯ ಲೈನ್ ಮನೆಗಳಲ್ಲಿ ವಾಸಿಸುವ ಜೇನುಕುರುಬರಿಗೆ ಅಲ್ಲಿನ ಎಸ್ಟೇಟ್ ಮಾಲಿಕರು ಕನಿಷ್ಠ ಕೂಲಿಯನ್ನು ನೀಡಿ ಪಾರಂಪರಿಕವಾಗಿ ಇವರ ದುಡಿಮೆಯನ್ನು ನಿರೀಕ್ಷಿಸುತ್ತಿರುವುದು. ಇವರ ಜೀವಮಾನವೆಲ್ಲಾ ಎಸ್ಟೇಟ್‌ಗಳಲ್ಲಿಯ ಲೈನ್ ಮನೆಗಳಲ್ಲಿ ಕನಿಷ್ಠ ಮಟ್ಟದ ಜೀವನವನ್ನು ಸಾಗಿಸುವುದೇ ಆಗಿದೆ.
- ಕಾಡಂಚುಗಳಲ್ಲಿ ವಾಸಿಸುವ, ಕಾಡಿನ ಹೊರಗೆ ವಾಸಿಸುವ ಜೇನುಕುರುಬರನ್ನು ಎಸ್ಟೇಟ್‌ಗಳ ಕೆಲಸಕ್ಕೆ ಕರೆದುಕೊಂಡು ಹೋಗಲು ಒಬ್ಬ ಮೇಲ್ವಿಚಾರಕನನ್ನು ಎಸ್ಟೇಟ್‌ನವರು ನೇಮಿಸಿರುತ್ತಾರೆ. ಮೇಲ್ವಿಚಾರಕನು ಪ್ರತಿನಿತ್ಯ ವಾಹನವನ್ನು ಜೇನುಕುರುಬರ ಹಾಡಿಗೆ ತಂದು ಅವರನ್ನು ಕೂಲಿಗೆಲಸಕ್ಕೆ ಕರೆದುಕೊಂಡು ಹೋಗಿ ಮತ್ತೆ ಹಾಡಿಗೆ ತಂದು ಬಿಡುತ್ತಾರೆ. ಈ ಸಂದರ್ಭದಲ್ಲಿ ಸರಿಯಾದ ಕೂಲಿ ನೀಡದೇ ಅವರ ಕೂಲಿಯ ಮೂರನೇ ಒಂದು ಭಾಗ,

ಹೆಂಡವನ್ನು ನೀಡುತ್ತಾರೆ. ಇದು ಇವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರೊಂದಿಗೆ ಮೂರನೇ ಒಂದು ಭಾಗದ ಕೂಲಿಯನ್ನು ಮಾಲಿಕರು ಉಳಿಸಿಕೊಂಡು ಒಂದು ವಾರದ ಬಟವಾಡಿಯನ್ನು ನೀಡುತ್ತಾರೆ. ಅಂದರೆ ದುಡಿತದ ಅರ್ಧ ಭಾಗ ಹೆಂಡ ಮತ್ತು ಮಾಲಿಕನ ಕೈಯಲ್ಲಿರುತ್ತದೆ. ಇನ್ನು ಉಳಿದ ಅರ್ಧ ಭಾಗದ ಹಣದಲ್ಲಿ ಹೊಟ್ಟೆ ಬಟ್ಟೆಗೆ ಹೊಂದಿಸಿಕೊಳ್ಳಬೇಕಾಗುತ್ತದೆ. ಮತ್ತೆ ಮುಂದಿನ ವಾರ ಅವರ ಎಸ್ಟೇಟ್‌ಗೆ ಕೂಲಿ ಕೆಲಸಕ್ಕೆ ಹೋಗಬೇಕು. ಇದು ಇವರ ನಿಕೃಷ್ಟ ಬದುಕಿಗೆ ಸಾಕ್ಷಿಯಾಗಿದೆ.

- ಜೇನುಕುರುಬರಿಗೆ ಅವರು ವಾಸಿಸುವ ಸ್ಥಳದಲ್ಲಿ ಕೂಲಿ ಸಿಗದೆ, ಕೂಲಿ ಕೆಲಸ ಸಿಗುವ ಕಡೆ ಹೋಗಿ ಕೆಲಸ ಮುಗಿಯುವವರೆಗೂ ನಾಲ್ಕಾರು ದಿನಗಳಲ್ಲಿಯೇ ಉಳಿಯಬೇಕಾದ ಪರಿಸ್ಥಿತಿ ಉಂಟಾಗಿ ಭೂಮಾಲೀಕರಿಂದ ಶೋಷಣೆಗೆ ಸಿಲುಕುತ್ತಾರೆ.
- ಮಹಿಳೆಯರನ್ನು ಪುರುಷರಿಗೆ ಸಮಾನವಾದ ಕೆಲಸದಲ್ಲಿ ತೊಡಗಿಸುವುದು ಕಾಣುತ್ತೇವೆ. ಆದರೆ ಕೂಲಿಯಲ್ಲಿ ತಾರತಮ್ಯ ನೀಡುತ್ತಾರೆ. ಇದರಿಂದ ಮಹಿಳೆಯರು ಪುರುಷರ ಸಮಾನ ಕೆಲಸ ಮಾಡಿದರೂ ಕೂಲಿಯು ಸರಿಯಾಗಿ ದೊರೆಯದೆ ಜೀವನ ನಿರ್ವಹಣೆ ಕಷ್ಟ ಮಟ್ಟದ್ದಾಗಿದೆ.
- ಮೂಲ ವೃತ್ತಿಗಳನ್ನು ಮೂಡಲು ಸರಿಯಾದ ಸಾಲ ಸೌಲಭ್ಯಗಳು ತಲುಪದೇ ಇರುವುದು ಮತ್ತು ಮೂಲ ವೃತ್ತಿಗೆ ಪ್ರಾಮುಖ್ಯತೆ ದೊರೆಯದೇ ಇರುವುದು ಇವರ ಆರ್ಥಿಕ ಸ್ಥಿತಿ ನಿಕೃಷ್ಟ ಮಟ್ಟದ್ದಾಗಿದೆ.
- ಜೇನುಕುರುಬ ಮಹಿಳೆಯರು ಪಾರಂಪರಿಕ ಜ್ಞಾನದಿಂದ ತಯಾರಿಸಿದ ವಸ್ತುಗಳಿಗೆ ಸರಿಯಾದ ಮಾರುಕಟ್ಟೆಯ ವ್ಯವಸ್ಥೆ ಇಲ್ಲ ಮತ್ತು ಪ್ರಚಾರದ ಕೊರತೆಯೂ ಇವರನ್ನು ಎಲೆ ಮರೆಯ ಕಾಯಿಯಂತೆ ಬದುಕುವಂತೆ ಮಾಡಿದೆ.

ಪಶುಪಾಲನೆ ಇವರಿಗೆ ಗೊತ್ತಿದ್ದರೂ ಕೂಡ ಪಶುಪಾಲನೆ ಮಾಡಲು ಸೂಕ್ತ ವಾತಾವರಣ ಇಲ್ಲ. ಆಡು ಸಾಕಣೆಗೆ ಸರ್ಕಾರ ಅನುದಾನ ಕನಿಷ್ಟ ಮಟ್ಟದಲ್ಲಿ ನೀಡುತ್ತಿದ್ದೆಯಾದರೂ ಅವುಗಳನ್ನು ನಿರ್ವಹಣೆ ಮಾಡಲು ಕಾಡಿನೊಳಗೆ ಹೋಗುವಂತಿಲ್ಲ. ಪುನರ್ವಸತೀಕರಣದ ಮನೆಗಳಲ್ಲಿ ಇವುಗಳಿಗೆ ಪ್ರತ್ಯೇಕ ಕೊಠಡಿ ಇಲ್ಲದೇ ಇರುವುದು. ಆಡು ಸಾಕಣೆಯನ್ನು ಕೈ ಬಿಡುವ ಮನೋಭಾವ ಬೆಳಸಿಕೊಂಡಿದ್ದಾರೆ.

**ಆಧಾರಗಳು**


ಪ್ರಭಾಕರ ಎ ಎಸ್, ೨೦೦೬, ಆದಿವಾಸಿ ಆಖ್ಯಾನ, ಪು.ಸ. ೧೩೨.

ಜನಗಣತಿ ವರದಿ, ಭಾರತ ಸರ್ಕಾರ, ೨೦೧೧

ಜೇನುಕುರುಬರ ಸಮೀಕ್ಷೆ, ಏಪ್ರಿಲ್-ಮೇ, ೨೦೧೩

ಅಧ್ಯಾಯ ಆರು ..........

# ಜೇನುಕುರುಬರ ಪಾರಂಪರಿಕ ಜೀವನ ಮತ್ತು ಆಧುನಿಕತೆ

# ಅಧ್ಯಾಯ ಆರು

# ಜೇನುಕುರುಬರ ಪಾರಂಪರಿಕ ಜ್ಞಾನ ಮತ್ತು ಆಧುನಿಕತೆ

ಪ್ರತಿಯೊಬ್ಬ ಮನುಷ್ಯನೂ ಹೊಸತನಗಳಿಗೆ ತೆರೆದುಕೊಳ್ಳುತ್ತ ಹಳೆಯದನ್ನು ನೆನಪಿಸಿಕೊಳ್ಳುತ್ತ ಹೊಸ ಮತ್ತು ಹಳೆಯದರ ಸಂಘರ್ಷದಲ್ಲಿಯೇ ಜೀವನ ನಿರ್ವಹಣೆ ಮಾಡುತ್ತಾ ಸಾಗುತ್ತಾನೆ. ತಾನು ನಂಬಿದ, ಅನಾದಿ ಕಾಲದಿಂದಲೂ ಹಿರಿಯರಿಂದ ಬಳುವಳಿಯಾಗಿ ಬಂದ ಪಾರಂಪರಿಕ ಬದುಕಿನ ಕುರಿತು ಮಾನವನಿಗೆ ಕಾಳಜಿ ಹೆಚ್ಚಾಗಿರುತ್ತದೆ. ಆದರೆ ಸುತ್ತಲ ಪರಿಸರದಲ್ಲಿ ನಡೆಯುವ ಬದಲಾವಣೆಗೂ ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯು ಪರಂಪರೆಯ ಪಕ್ಷಪಾತಿಯಾಗಿ ನಿಲ್ಲುತ್ತಾನೆ. ಅವನು ಎಷ್ಟೆಲ್ಲಾ ಆಧುನಿಕವೆನಿಸಿದರೂ ಅವನೊಳಗೆ ಪರಂಪರೆಯ ಬೇರುಗಳು ಆಳವಾಗಿಯೇ ನೆಲೆಯೂರಿರುತ್ತವೆ. ಈ ರೀತಿಯ ಪಾರಂಪರಿಕತೆ ಆಧುನಿಕ ಪಟ್ಟಣವಾಸಿಗಳಿಗಿಂತ ಬುಡಕಟ್ಟುಗಳಲ್ಲಿ ದಟ್ಟವಾಗಿರುವುದು ಗೋಚರಿಸುತ್ತದೆ. ಪ್ರಸ್ತುತ ಜೇನುಕುರುಬರ ಪಾರಂಪರಿಕ ಜೀವನ ಕ್ರಮ ಮತ್ತು ಆಧುನಿಕತೆ ಹೇಗಿದೆ ಎಂಬುದನ್ನು ನೋಡುವ ಉದ್ದೇಶ ಈ ಅಧ್ಯಾಯದ್ದಾಗಿದೆ.

## ೬. ೧. ಬೆಂಕಿ ಉತ್ಪಾದಿಸಿಕೊಳ್ಳುವ ಜ್ಞಾನ

- ಉಣ್ಣೆ ಕಡ್ಡಿಗಳನ್ನು ಒಂದಕ್ಕೊಂದು ಉಜ್ಜಿದರೆ ಬೆಂಕಿ ಬರುತ್ತದೆ. ಬೆಂಕಿಯನ್ನು ತೆಗೆದ ಚಕ್ಕೆ ಅಥವಾ ಸಿಪ್ಪೆಗೆ ಹಚ್ಚಿ ಬೆಂಕಿ ಕಾಯಿಸಿಕೊಳ್ಳುತ್ತಾರೆ. ಜೊತೆಗೆ ಬೆಂಕಿ ಉರಿಯಲು ಆನೆ ಲದ್ದಿ ಅಥವಾ ಹರಿದ ಹಳೆಯ ಬಟ್ಟೆಯನ್ನು ಬಳಸುತ್ತಾರೆ.
- ಬೆಂಕಿಯನ್ನು ಮಾಡುವುದಕ್ಕೆ ಬೆಂಡೆ ಮರದ ಎರಡು ಕಡ್ಡಿಯನ್ನು ತೆಗೆದುಕೊಂಡು ಕತ್ತಿಯ ಮೇಲೆ ಒಂದಕ್ಕೊಂದು ಉಜ್ಜುತ್ತಿದ್ದರು. ಬೆಂಕಿ ಕೆಂಡ ಬಿದ್ದ ಮೇಲೆ ಬೆಂಡೆ ಮರದ ಎಲೆ ಮತ್ತು ಒಣಗಿದ ಆನೆ ಲದ್ದಿಗೆ ಸೇರಿಸಿದರೆ ಬೆಂಕಿಯಾಗಿ ಉರಿಯುತ್ತಿತ್ತು.
- ಉಣ್ಣೆ ಗುಲಾಬಿ ಕಡ್ಡಿ ತೆಗೆದು ಕತ್ತರಿಸಿದ ಒಣ ಬೆಂಡು ಮರದ ತುಂಡಿಗೆ ಉಜ್ಜಬೇಕು. ಅದಕ್ಕೆ ಒಣ ಆನೆಲದ್ದಿಯನ್ನು ಜೊತೆಯಾಗಿ ಬಳಸುತ್ತಾರೆ.
- ಬೆಂಡೆ ಮರದ ಕಡ್ಡಿಗೆ ತೂತು ಮಾಡಿ ಉಜ್ಜಿದರೆ ಹೊಗೆ ಬರುತ್ತದೆ. ನಂತರ ಬೆಂಕಿಯಾಗುತ್ತದೆ.

- ಜೀಟೆ ಮತ್ತು ತೇಗದ ಮರದ ಸೌದೆಯಲ್ಲಿ ಬೆಂಕಿ ಹಾಕುತ್ತಾರೆ. ಜೀಟೆ ಮರ ಮತ್ತು ತೇಗದ ಮರ ಕೆಂಡವಾಗುವುದಿಲ್ಲ. ಅದು ದೀಪದ ತರಹ ಉರಿಯುತ್ತದೆ.
- ಕಾಡಿನಲ್ಲಿರುವ ಕಾಟೋವರ ಬಳ್ಳಿಯನ್ನು ಕತ್ತರಿಸಿ, ಜೋಡಿಸಿ ಕಟ್ಟು ಕಟ್ಟಿ, ಮನೆಯ ಪಕ್ಕದಲ್ಲಿ ನಿಲ್ಲಿಸಿ ಅದಕ್ಕೆ ಬೆಂಕಿ ಹಚ್ಚಿದರೆ ಕೆಂಡವಾಗಿ ಉದುರದೇ ಅದೇ ದೀಪವಾಗಿ ಉರಿಯುತ್ತದೆ.

**ಮಹಿಳೆಯರ ಪಾತ್ರ** : ಪುರುಷ ಪ್ರಧಾನ ಕುಟುಂಬವಾದರೂ, ಮಹಿಳೆಯರೂ ಸ್ವತಂತ್ರರು ಇವರು ಪುರುಷರಷ್ಟೆ ಜ್ಞಾನವನ್ನು ಹೊಂದಿದ್ದಾರೆ. ಬೆಂಕಿಯ ಅವಶ್ಯಕತೆ ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚು ಇದೆ. ಬೆಂಕಿಯನ್ನು ಹೊತ್ತಿಸಲು ಬೇಕಾದ ಅಗತ್ಯ ಪರಿಕರಗಳನ್ನು ಇವರು ಸದಾ ಇಟ್ಟು ಕೊಳ್ಳುತ್ತಿದ್ದರು. ಹಾಡಿಯಲ್ಲಿ ಒಮ್ಮೆ ಹೊತ್ತಿಸಿದ ಬೆಂಕಿಯನ್ನು ಕಾಯ್ದುಕೊಳ್ಳುವಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದುದು. ಪುರುಷರಿರದ ಸಮಯದಲ್ಲಿ ಮಹಿಳೆಯರೇ ತಮ್ಮ ಪಾರಂಪಾರಿಕ ಜ್ಞಾನದಿಂದ ಆಧುನಿಕ ಉಪಕರಣಗಳಿಲ್ಲದೆ, ಬೆಂಕಿಯನ್ನು ಸೃಷ್ಟಿಸಿಕೊಂಡು, ತಮ್ಮ ನಿತ್ಯದ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ತೊಡಗುವುದನ್ನು ಕಾಣುತ್ತೇವೆ.

**ಆಧುನಿಕತೆ** : ಪಾರಂಪರಿಕ ಜ್ಞಾನದಿಂದ ಬೆಂಕಿ ಕಂಡು ಕೊಳ್ಳುವುದು ಈಗ ಇತಿಹಾಸದ ಪುಟಗಳಲ್ಲಿ ಸೇರುತ್ತಿದೆ. ಹಾಡಿಯಲ್ಲಿ ಹಾಡಿಯೇತರರು ಕುತೂಹಲಕ್ಕಾಗಿ ಅಥವಾ ಸಂಶೋಧಕರು ಸಂಶೋಧನೆಗಾಗಿ ಪರೀಕ್ಷಿಸಲೆಂದು ಹಾಡಿಯಲ್ಲಿರುವ ಯಜಮಾನರುಗಳನ್ನು ಕೇಳಿಕೊಂಡಾಗಲಷ್ಟೇ ಪಾರಂಪರಿಕ ಜ್ಞಾನದಿಂದ ಬೆಂಕಿ ಉತ್ಪಾದಿಸಿಕೊಳ್ಳುವ ವಿಧಾನವನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳೆಂದರೆ ಹಾಡಿಯಲ್ಲಿರುವ ಹಿರಿಯರಷ್ಟೇ ಈ ಜ್ಞಾನವನ್ನು ಉಳಿಸಿಕೊಂಡಿರುವುದನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಪ್ರತಿಯೊಂದು ಗುಡಿಸಲಿನಲ್ಲಿ ಬೆಂಕಿಪೊಟ್ಟಣ ಕಾಣುತ್ತೇವೆ. ಅಡುಗೆ ಮಾಡಲು ಗ್ಯಾಸ್ ಒಲೆಗಳು ಹಾಡಿಯನ್ನು ಪ್ರವೇಶಿಸಿದೆ. ಇದರಿಂದ ಪಾರಂಪರಿಕ ಬೆಂಕಿ ಕಂಡು ಹಿಡಿಯುವ ವಿಧಾನಗಳು ಮುಂದಿನ ಪೀಳಿಗೆಗೆ ತಿಳಿಯದೇ ಹೋದರೂ ಅಚ್ಚರಿ ಪಡುವಂತಿಲ್ಲ.

### ೬. ೨. ಬೆಂಕಿ ನಂದಿಸುವ ವಿಧಾನ

ಕಾಡಿನಲ್ಲಿ ಬೆಂಕಿ ಬಿದ್ದಾಗ ದೂರದಲ್ಲಿ ಕಾಣುವ ಹೊಗೆಯನ್ನು ಆಧರಿಸಿ, ಬೆಂಕಿ ಬಿದ್ದಿರುವ ದಿಕ್ಕನ್ನು ಕಂಡು ಹಿಡಿಯಲು ಮೊದಲು ಮರದ ಮೇಲೆ ಹತ್ತಿ ನೋಡಿ ಅನಂತರ ಇಂತಹ ಜಾಗದಲ್ಲಿ ಬೆಂಕಿ ಬಿದ್ದಿದೆ ಎಂದು ತಿಳಿಯುತ್ತಿದ್ದರು. ಜೇನು ಕುರುಬರೇ ಕಾಡಿನಲ್ಲಿ ಬೆಂಕಿಯನ್ನು ಪತ್ತೆ ಹಚ್ಚುತ್ತಾರೆ. ಕಾಡಿಗೆ ಬೆಂಕಿ ತಗುಲಿ, ಬೆಂಕಿಯ ಪ್ರಮಾಣ ಕಡಿಮೆ ಇದ್ದಾಗ ಆ ಬೆಂಕಿಯನ್ನು ಆರಿಸಲು ಮತ್ತಿ ಮರದ ಸೊಪ್ಪು, ಕಕ್ಕೆ ಮರದ ಸೊಪ್ಪು ಹಾಗೂ ಮಣ್ಣನ್ನು ಎರಚಿ ಬೆಂಕಿಯನ್ನು ನಂದಿಸುತ್ತಿದ್ದರು.

**ಮಹಿಳೆಯರ ಪಾತ್ರ** : ಕಾಡಿನಲ್ಲಿ ಆಕಸ್ಮಿಕವಾಗಿ ಬೀಳುವ ಬೆಂಕಿಯನ್ನು ನಂದಿಸುವುದರಲ್ಲಿ ಮಹಿಳೆಯರು ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಜೇನುಕುರುಬ ಮಹಿಳೆಗೆ ಕಾಡೇ ತನ್ನ ನಿವಾಸಸ್ಥಾನ, ಅದನ್ನು ಜೋಪಾನವಾಗಿ ಕಾಪಾಡಿಕೊಳ್ಳುವುದು ತನ್ನ ಕುಟುಂಬವನ್ನು ರಕ್ಷಿಸಿಕೊಂಡಷ್ಟೇ ಸಮಾನವೆಂದು ನಂಬಿದ್ದಳು.

**ಆಧುನಿಕತೆ** : ಕಾಡಿನ ವಾಸಿಗಳ ಪ್ರಮಾಣ ವಿವಿಧ ಕಾರಣಗಳಿಂದಾಗಿ ಗಣನೀಯವಾಗಿ ಕಡಿಮೆಯಾಗಿದ್ದು, ಸುಲಭವಾಗಿ ದೊರೆಯುವ ಅಗ್ನಿಶಾಮಕ ವಾಹನ, ಇನ್ನೂ ಮುಂತಾದ ಆಧುನಿಕ ಉಪಕರಣಗಳ ಬಳಕೆಯಿಂದಾಗಿ ಪಾರಂಪರಿಕ ಜ್ಞಾನವು ತನ್ನ ಮಹತ್ವವನ್ನು ಕಳೆದುಕೊಂಡಿದೆ.

## ೬. ೩. ಸಮಯವನ್ನು ತಿಳಿಯುವ ವಿಧಾನ

ಜೇನುಕುರುಬರು ಪಾರಂಪರಿಕ ಜ್ಞಾನದ ಮೂಲಕ ಸಮಯವನ್ನು ಗೊತ್ತುಪಡಿಸಿಕೊಳ್ಳುತ್ತಿದ್ದರು. ಆಗ ಯಾವುದೇ ರೀತಿಯ ಆಧುನಿಕ ಸಮಯ ನಿರ್ಧಾರಕ ವಸ್ತುಗಳು ಇರಲಿಲ್ಲ. ಪ್ರಾಚೀನ ಕಾಲದ ಜೇನುಕುರುಬರ ಸಮಯ ನಿರ್ಧಾರಕ ಅಂಶಗಳು.

- ಪ್ರಾಣಿ ಪಕ್ಷಿಗಳ ಕೂಗು
- ಪ್ರಾಣಿ ಪಕ್ಷಿಗಳ ಚಲನ ವಲನ
- ಗಿಡ ಮರಗಳ ನೆರಳು
- ಸೂರ್ಯನ ಕಿರಣಗಳ ಸಹಾಯದಿಂದ ಸಮಯವನ್ನು ಗೊತ್ತು ಮಾಡಿಕೊಳ್ಳುತ್ತಿದ್ದರು.
- ಗಿಡ ಮರಗಳಲ್ಲಿ ಬಿಡುವ ಚಿಗುರು, ಕಾಯಿ, ಹಣ್ಣುಗಳನ್ನು ಆಧರಿಸಿ ಕಾಲವನ್ನು ಗೊತ್ತುಮಾಡಿಕೊಳ್ಳುತ್ತಿದ್ದರು.

ಕಾಡಿನಲ್ಲಿರುವ ಕಾಡುಕೋಳಿಯು ಸುಮಾರು ಮೂರು ಗಂಟೆಯ ನಸುಕಿನಲ್ಲಿ ಕೂಗುತ್ತದೆ. ಆ ನಂತರ ನವಿಲು ಕೂಗುತ್ತದೆ. ನವಿಲು ಕೂಗಿದ ಸುಮಾರು ಒಂದು ಗಂಟೆಯ ನಂತರ ನಾಡಕೋಳಿ ಕೂಗುತ್ತಿದ್ದವು. ಆಗ ಸಮಯ ಬೆಳಗಿನ ಜಾವ ಐದು ಗಂಟೆಯಾಗಿರುತ್ತಿತ್ತು. ಬೆಳಕಾಗುತ್ತಿದೆ ಎಂದು ತಿಳಿದು ಎದ್ದು ಕೆಲಸ ಕಾರ್ಯದಲ್ಲಿ ತೊಡಗುತ್ತಿದ್ದೆವು. ಅವತ್ತಿನ ಒಂದು ರಾತ್ರಿ ಇಂದಿನ ಎರಡು ರಾತ್ರಿಗೆ ಸಮ. ಹಿಂದಿನ ಕಾಲದಲ್ಲಿ ರಾತ್ರಿಯು ದೀರ್ಘವಾಗಿರುತ್ತಿತ್ತು. ಕತ್ತಲೆ ಹೆಚ್ಚಾಗಿರುತ್ತಿತ್ತು ಎಂದು ಹೇಳುತ್ತಾರೆ.

ಮಧ್ಯಾಹ್ನ ಸೂರ್ಯನ ಬಿಸಿಲಿನ ನೆರಳಿಂದ ತಿಳಿಯುತ್ತಿದ್ದರು. ಸಂಜೆ ಕಾಡಿಗೆ ಹೋದಾಗ 'ಕುಟರೆಕ್ಕೆ' ಎಂಬ ಪಕ್ಷಿಯ ಕೂಗಿನಿಂದ ಸಮಯ ತಿಳಿದು ಹಾಡಿ ಸೇರಿಕೊಳ್ಳುತ್ತಿದ್ದರು. ಕುಟರೆಕ್ಕೆ ಪಕ್ಷಿ

ಗೂಡು ಸೇರಲು ಶಬ್ದ ಮಾಡುತ್ತಿತ್ತು. ಇದರಿಂದ ಇನ್ನೇನು ಕತ್ತಲಾಗುವುದು ಎಂದು ಹಾಡಿಗೆ ಮರಳುತ್ತಿದ್ದರು.

ಹೆಜ್ಜೆಯ ಗುರುತಿನಿಂದ ದೂರವನ್ನು ಕಂಡುಹಿಡಿಯುತ್ತಿದ್ದರು. ಕೈ ಅಳತೆಯಿಂದ ವಸ್ತುಗಳನ್ನು ಅಳತೆ ಮಾಡುತ್ತಿದ್ದರು. ಇದಕ್ಕೆ ಮಾರು ಎಂಬ ಲೆಕ್ಕವನ್ನು ಇಡುತ್ತಿದ್ದರು.

**ಮಹಿಳೆಯರ ಪಾತ್ರ** : ದಿನನಿತ್ಯದ ಕ್ರಮವನ್ನು ಪ್ರಾರಂಭಿಸುವುದೇ ಮಹಿಳೆಯರು. ಹಾಡಿಯಲ್ಲಿತಾವು ನೆಲೆಸಿರುವ ಪರಿಸರದಲ್ಲಿನ, ಪ್ರಾಣಿ–ಪಕ್ಷಿಗಳ ಕೂಗು, ಸೂರ್ಯನ ಕಿರಣಗಳ ಸಹಾಯದಿಂದ ಸಮಯವನ್ನುಗೊತ್ತು ಪಡಿಸಿಕೊಳ್ಳುವುದರಲ್ಲಿ ಜೇನುಕುರುಬ ಮಹಿಳೆಯರು ನಿಪುಣರು.

**ಆಧುನಿಕತೆ** : ಕೈಗೊಂದು ವಾಚ್, ಗೋಡೆಗೊಂದು ಗಡಿಯಾರ, ಜೇಬಿಗೊಂದು ಮೊಬೈಲ್‌ಗಳಿರುವ ಪ್ರಸ್ತುತ ಸನ್ನಿವೇಶಗಳು, ಜೇನುಕುರುಬರಿಗೂ ಹೊರತಾಗಿಲ್ಲ.

### ೬. ೪. ನೀರು ಕಂಡು ಹಿಡಿಯುವ ವಿಧಾನ

ತುರ್ತು ಸಂದರ್ಭಗಳಲ್ಲಿ ಜೇನುಕುರುಬರು ಕುಡಿಯುವ ನೀರನ್ನು ಹುಡುಕಿಕೊಳ್ಳುತ್ತಾರೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಕಾಡಿನಲ್ಲಿ ಮಳೆ ನೀರು ಹರಿಯುವ ತಗ್ಗು ಪ್ರದೇಶ (ತೋಡು) ಗಳನ್ನು ಹುಡುಕಿ ಬೇಸಿಗೆಯಲ್ಲಿ ನೀರು ಇಲ್ಲದ ಸ್ಥಳದಲ್ಲಿ ನೀರಿದ್ದ ಸಂಕೇತಗಳನ್ನು ಈ ರೀತಿ ಗುರುತಿಸಿಕೊಳ್ಳುತ್ತಾರೆ.

- ಅಲ್ಲಿ ಮರಳು, ಬಂಡೆ ಕಲ್ಲು ಇರುತ್ತದೆ.
- ಆ ಭಾಗದಲ್ಲಿ ಶೀತ ವಾತಾವರಣ ಕಂಡು ಬರುತ್ತದೆ.
- ಸಣ್ಣ ಕೀಟಗಳು, ಅಟ್ವೆಕಾ ಹುಳು, ಕೋಲು ತುಡುವೆ, ದುಂಬಿಗಳು ಆ ವಾತಾವರಣದಲ್ಲಿ ಜೀ... ಯ್ ಎಂಬ ಶಬ್ದ ಮಾಡುತ್ತಾ ಇರುತ್ತವೆ.

ನೀರು ಇದ್ದ ಜಾಗವೆಂದು ಪಕ್ವವಾದ ಮೇಲೆ ಪಕ್ಕದಲ್ಲಿ ಗುಂಡಿ ತೋಡಿ ಸ್ವಲ್ಪ ಸಮಯ ಬಿಟ್ಟಾಗ ನೀರು ಶೇಖರಣೆಯಾಗಿರುತ್ತದೆ. ಇದನ್ನು 'ತೋಡುಗುಂಡಿ' ಎಂದು ಕರೆಯುತ್ತಾರೆ. ಹಾಡಿಯ ಒಳಗೆ ಗುಡಿಸಲಿನಲ್ಲಿಯೇ ಜಲ ಸಿಕ್ಕಿರುವ ಎಷ್ಟೋ ಉದಾಹರಣೆಗಳಿವೆ.

ಉದಾ:– ನಾಗರಹೊಳೆ ಹಾಡಿ, ಇಲ್ಲಿ ಆಳಕ್ಕೆ ಗುಂಡಿತೋಡಿ ಸ್ವಲ್ಪಹೊತ್ತು ಬಿಟ್ಟರೆ ಜಲ ಉತ್ಪತ್ತಿಯಾಗಿರುತ್ತಿತ್ತು.

ಕಾಡಿನಲ್ಲಿ ಸಿಗುವ ಕರಿಬೇಲದ ಮರದಲ್ಲಿರುವ ಕಾಯಿಯನ್ನು ಜಜ್ಜಿ ಒಣಗಿಸಿಟ್ಟುಕೊಂಡು ಕುಡಿಯುವ ನೀರಿನ ಪಾತ್ರೆಗೆ ಒಂದು ಚಮಚದಷ್ಟು ಹಾಕಿದರೆ ನೀರಿನಲ್ಲಿರುವ ಕಲ್ಮಶ ಪಾತ್ರೆಯ ತಳದಲ್ಲಿ ಶೇಖರಣೆಯಾಗುತ್ತದೆ. ಹೀಗೆ ಜೇನುಕುರುಬರು ಕುಡಿಯುವ ನೀರನ್ನು ಶುದ್ಧೀಕರಿಸಿಕೊಳ್ಳುತ್ತಾರೆ.

ಜೇನುಕುರುಬರು ಕಾಡಿನಲ್ಲಿರುವ ಮರಗಳಿಂದಲೂ ಸಹಾ ನೀರನ್ನು ಪಡೆದುಕೊಳ್ಳುತ್ತಾರೆ. ಕೊತ್ತುಳ್ಳಿ ಪಟ್ಟು, ಮತ್ತಿಮರ, ಬೂರಗದ ಮರ, ಮರಳೆ ಹಂಬು (ಕಾಡು ಮಲ್ಲಿಗೆ ಬಳ್ಳಿ), ಬಿದಿರು, ಬೆಂಡೆ ಮರ, ತಡಸಲು ಮರ, ಮುಲ್ಲೆ ಹಂಬು, ಕೂಲುಕೊಪ್ಪೆ (ಕೂಳು ಕೊಟ್ಟೆ) ಹಂಬು, ಸುಳ್ಳು ಸೊಪ್ಪು ಗಿಡ, ಮುತ್ತಿ ಹಂಬು, ಹತ್ತಿಮರ, ಕಲ್ಲತ್ತಿ ಮರ ಈ ಮರಗಳಲ್ಲಿ ಶೇಖರಣೆಯಾಗಿರುವ ನೀರನ್ನು ಇವರು ಸಂದರ್ಭಾನುಸಾರವಾಗಿ ಬಳಸಿಕೊಳ್ಳುತ್ತಾರೆ.

**ಕೊತ್ತುಳ್ಳಿ ಪಟ್ಟು**

ತುರ್ತು ಸಂದಂರ್ಭಗಳಲ್ಲಿ ಕಾಡಿನಲ್ಲಿ ನೀರು ಸಿಗದಿದ್ದಾಗ ಜೇನುಕುರುಬರು ಕುಡಿಯುವ ನೀರಿಗಾಗಿ ಅನ್ಯ ಮಾರ್ಗಗಳನ್ನು ಹುಡುಕುತ್ತಾರೆ. ಇದರಲ್ಲಿ ಮೊದಲಿಗೆ ತಮ್ಮ ಅಕ್ಕ ಪಕ್ಕದಲ್ಲಿ ಕೊತ್ತಳ್ಳಿ ಹಂಬು ಇದೆಯೇ ಎಂದು ತಿಳಿದುಕೊಳ್ಳುತ್ತಾರೆ. ಏಕೆಂದರೆ ಪ್ರಕೃತಿ ದತ್ತವಾಗಿ ಯಾವುದೇ ಋತುವಿನಲ್ಲಿ ಈ ಹಂಬಿನಲ್ಲಿ ಹೇರಳವಾಗಿ ನೀರು ಸಂಗ್ರಹವಾಗಿರುತ್ತದೆ. ಈ ಹಂಬನ್ನು ಕತ್ತರಿಸಿ ಇದರ ಒಳಗೆ ಇರುವ ನೀರನ್ನು ಕುಡಿಯುತ್ತಾರೆ.

**ಮತ್ತಿಮರದ ನೀರು**

ಸಮುದಾಯದ ಮಹಿಳೆಯರು ಕಾಡಿನಲ್ಲಿ ಗಿಡ ಮೂಲಿಕೆಗಳು ಹಾಗೂ ಗೆಡ್ಡೆ ಗೆಣಸುಗಳ ಸಂಗ್ರಹಣೆಗೆ ಹೋದಾಗ ಬಾಯಾರಿಕೆಯಾದರೆ ಮತ್ತಿ ಮರದ ಉಬ್ಬಿರುವ ಭಾಗ ನೋಡಿ ತೂತು





ಮಾಡಿ ಅದರಲ್ಲಿ ಸಂಗ್ರಹವಾಗಿರುವ ನೀರನ್ನು ಮುತ್ತುಗದ ಎಲೆಯನ್ನು ಜೊನ್ನೆಯಂತೆ ಮಾಡಿ ಅದರ ಸಹಾಯದಿಂದ ನೀರು ಕುಡಿಯುತ್ತಾರೆ. ಈ ನೀರು ತಿಳಿ ಹಳದಿ ಬಣ್ಣದಿಂದ ಕೂಡಿರುತ್ತದೆ. ಮತ್ತಿ ಮರದ ಕೊಂಬೆಯಲ್ಲಿ ನೀರು ಇರುವುದಿಲ್ಲ. ಮರದಲ್ಲಿ ಕಾಂಡದಲ್ಲಿ ನೆಲದಿಂದ ಮೇಲೆ ಹತ್ತರಿಂದ

ಇಪ್ಪತ್ತು ಅಡಿಗಳಷ್ಟು ಮೇಲೆ ನೀರು ಶೇಖರಣೆಯಾಗಿರುತ್ತದೆ. ಒಂದು ಮರದಲ್ಲಿ ಸುಮಾರು ಇಪ್ಪತ್ತರಿಂದ ಮೂವತ್ತು ಲೀಟರ್‌ನಷ್ಟು ನೀರು ದೊರೆಯುತ್ತದೆ. ಈ ನೀರಿನಲ್ಲಿ ಗೋಮೂತ್ರದ ವಾಸನೆ ಬರುತ್ತದೆ. ಇದರಲ್ಲಿ ಎರಡು ಮೂರು ತರಹ ರುಚಿ ಇರುತ್ತದೆ. ಎಪ್ಪತ್ತು-ಎಂಬತ್ತು ವರ್ಷದ ಮರದಲ್ಲಿನ ನೀರಿನಲ್ಲಿ ಹೆಚ್ಚು ವಾಸನೆ ಇರುತ್ತದೆ. ಕಡಿಮೆ ವಯಸ್ಸಿನ ಮರದ ನೀರಿನಲ್ಲಿ ಅಷ್ಟು ವಾಸನೆ ಇರುವುದಿಲ್ಲ. ಈ ನೀರನ್ನು ಕುಡಿದಾಗ ಕೈ ಉರಿ, ಕಾಲು ಉರಿ ಕಡಿಮೆಯಾಗುತ್ತದೆ. ಸಾರಾಯಿ ಕುಡಿದು ಹೊಟ್ಟೆ ಉರಿ ಬಂದರೆ ಮತ್ತಿ ಮರದ ನೀರು ಕುಡಿದರೆ ಹೊಟ್ಟೆ ಉರಿ ಕಡಿಮೆಯಾಗುತ್ತದೆ. ಎದೆ ನೋವಿಗೆ ಉತ್ತಮ ಔಷಧಿಯಾಗಿದೆ. ಎಂಟು-ಹತ್ತು ವರ್ಷದ ಮರದಲ್ಲಿ ನೀರು ಕಹಿ ಇರುತ್ತದೆ.

**ಬೂರಗದ ಮರ**

ಬೂರಗದ ಮರದಲ್ಲಿ ಉಬ್ಬಿದ ಭಾಗಕ್ಕೆ ಕೈ ಬೆರಳಿನಿಂದ ಹೊಡೆದರೆ 'ಗಲೆ ಗಲೆ' ಎಂಬ ಶಬ್ದ ಬರುತ್ತದೆ. ಆಗ ನೀರು ಇರುವುದು ಖಾತ್ರಿಯಾಗುತ್ತದೆ. ಆ ಜಾಗದಲ್ಲಿ ಸಣ್ಣ ತೂತು ಮಾಡಿದರೆ ಮೊದಲು ಲೋಳೆ ಬರುತ್ತದೆ. ಆಮೇಲೆ ತಿಳಿ ನೀರು ಸಿಗುತ್ತದೆ. ಈ ನೀರು ಮೂತ್ರ ಕೋಶವನ್ನು ಸ್ವಚ್ಛಗೊಳಿಸುತ್ತದೆ. ಬೆಟ್ಟ ಹತ್ತುವಾಗ, ಮರ ಹತ್ತುವ ಸ್ವಲ್ಪ ಸಮಯದ ಮುಂಚೆ ಈ ನೀರನ್ನು ಕುಡಿದರೆ ಸುಸ್ತಾಗುವುದಿಲ್ಲ.

**ಸುಳ್ಳುಸೊಪ್ಪು**

ಈ ಗಿಡದ ಸೊಪ್ಪಿನಲ್ಲಿ ನೀರು ಹೆಚ್ಚಾಗಿರುವುದರಿಂದ ಇದನ್ನು ಕಾಡಿನಲ್ಲಿ ಕೈ ತೊಳೆಯಲು ಉಪಯೋಗಿಸುತ್ತಾರೆ.

**ಹತ್ತಿ ಮರದ ನೀರು**

ಹತ್ತಿ ಮರದ ಬೇರಿನಲ್ಲಿ ನೀರು ಸಂಗ್ರಹವಾಗಿರುತ್ತದೆ. ಬೇರನ್ನು ಕಡಿದು ಬೇಕಾದಷ್ಟು ನೀರನ್ನು ತೆಗೆದು ಕೊಳ್ಳುವರು. ಈ ನೀರನ್ನು ಕುಡಿದರೆ ಸಾರಾಯಿ ಕುಡಿದು ಅಮಲೇರಿದಂತೆ ಆಗುತ್ತದೆ.

**ಕಲ್ಲತ್ತಿ ಮರ**

ಈ ಮರದ ನೀರು ಬೇರಿನಲ್ಲಿ ಸಂಗ್ರಹವಾಗಿರುತ್ತದೆ. ಈ ನೀರನ್ನು ಅತಿ ಹೆಚ್ಚು ಸೂಕ್ಷ್ಮವಾಗಿ ಇಡುತ್ತಾರೆ. ಎದೆಯಲ್ಲಿ ಕಫ ಕಟ್ಟಿಕೊಂಡರೆ ಈ ನೀರನ್ನು ಕುಡಿಸಿ ಕಫ ನಿವಾರಿಸುತ್ತಾರೆ. ಈ ನೀರು ಅತೀ ವಿರಳವಾಗಿ ಸಿಗುವುದರಿಂದ ಇದನ್ನು ಬಹಳ ಜೋಪಾನವಾಗಿ ಸಂಗ್ರಹಿಸಿ ಇಟ್ಟು ಕೊಳ್ಳುತ್ತಾರೆ.

**ಬಿದಿರು**

ಮರಳುಕಟ್ಟೆ ಹಾಡಿಯ ಶ್ರೀಯುತ ಎಮ್ ಟಿ ಕುಮಾರ್ ರವರ ಮಾಹಿತಿಯಂತೆ ಬೇಟೆಯ ಸಂದರ್ಭದಲ್ಲಿ ನೀರಿನ ಸಮಸ್ಯೆಯಿಂದ ಬಾಯಾರಿಕೆ ಆದಾಗ ಕಾಡು ಮಲ್ಲಿಗೆ ಬಳ್ಳಿ, ಮತ್ತಿಮರ,

ಹೊಂದಿದ್ದರು. ಒಂದು ಬೇರಿನ ರಸ ಬಟ್ಟೆಯಲ್ಲಿ ಕಟ್ಟಿ ಇಟ್ಟರೆ ಅಲ್ಲಿ ಮಳೆ ಬರುತ್ತಿರಲಿಲ್ಲ ಎಂದು ಬೇರಿನ ಹೆಸರು ಹೇಳ ಬಯಸುವುದಿಲ್ಲ.

**ಮಹಿಳೆಯರ ಪಾತ್ರ** : ಜೇನುಕುರುಬ ಮಹಿಳೆಯರು ಪ್ರಾಣಿಪಕ್ಷಿಗಳ ಚಲನ-ವಲನ, ಕೂಗು, ಪರಿಸರದಲ್ಲಿನ ವಾತಾವರಣದ ಬದಲಾವಣೆಗೆ ಅನುಗುಣವಾಗಿ ಪ್ರಸಕ್ತ ಋತುವಿನಲ್ಲಿ ಇಂತಿಷ್ಟೇ ಮಳೆಯಾಗುವ ಸಂಭವವಿದೆ ಎಂದು ಕಂಡು ಕೊಳ್ಳುತ್ತಿದ್ದರು.

**ಆಧುನಿಕತೆ** : ದಿನದಿಂದ ದಿನಕ್ಕೆ ಪ್ರಕೃತಿಯ ಮೇಲಾಗುತ್ತಿರುವ ದೌರ್ಜನ್ಯದಿಂದಾಗಿ, ಪ್ರಾಕೃತಿಕವಾಗಿ ಇಂತದ್ದೇ ಸಮಯದಲ್ಲಿ ಮಳೆಯಾಗುತ್ತದೆ ಎಂಬುದನ್ನು ಹೇಳುವಲ್ಲಿ ಸೋಲುತ್ತಿದೆ. ಈಗ ಕ್ಯಾಲೆಂಡರ್, ಜ್ಯೋತಿಷ್ಯಗಳಿಂದಾಗಿ ಸುಲಭವಾಗಿ ತಿಳಿಯುತ್ತಿದ್ದಾರೆ.

## ೬. ೬. ಅರಣ್ಯ ಜ್ಞಾನ

ಸಾಮಾನ್ಯವಾಗಿ ಜೇನುಕುರುಬರ ಆವಾಸ ಸ್ಥಾನ ಕಾಡು, ಈ ಕಾಡಿನ ಪ್ರಾಣಿ, ಪಕ್ಷಿ, ಗಿಡ, ಮರ ಪ್ರತಿಯೊಂದರ ಉಪಯೋಗ, ಅವಶ್ಯಕತೆಯನ್ನು ತಿಳಿದಿರುತ್ತಾರೆ. ಉದಾ: ಸೀಬೆಮರ, ಮಾವುಮರ, ನೇರಳೆಮರ, ನೆಲ್ಲಿಮರ ಮುಂತಾದವುಗಳು. ಹಣ್ಣಿನ ಮರಗಳಾಗಿರುವ ಅವುಗಳು ಹಣ್ಣು ಬಿಡುವ ಋತುಮಾನವನ್ನು ತಿಳಿದವರಾಗಿದ್ದು, ಆಯಾ ಋತುವಿನಲ್ಲಿ ಇಂತಹ ಹಣ್ಣುಗಳನ್ನು ಸಂಗ್ರಹಿಸುತ್ತಾರೆ. ತಿನ್ನುತ್ತಾರೆ, ಇನ್ನು ಕೆಲವು ವಿಷಪೂರಿತ ಮರಗಳ ಜ್ಞಾನವೂ ಇವರಿಗಿದೆ. ಜಾಲಿಮರ ಇವುಗಳ ಮಾಹಿತಿ ತಿಳುವಳಿಕೆ ಪೂರ್ವಜರಿಂದಲೇ ತಿಳಿದಿರುವುದರಿಂದ ಇವುಗಳಿಂದ ದೂರ ಉಳಿಯುತ್ತಾರೆ. ಅಂಟ್ವಾಳಮರ, ಸೀಗೆಮರ, ತೇಗಮರ, ಇಪ್ಪೆಮರ, ಅಂಟಾಟಿಮರ, ಗೋಂದುಮರ ಮುಂತಾದವುಗಳ ಸಂಗ್ರಹ ಮಾಡಿ ಸ್ನಾನಕ್ಕೆ ಇನ್ನಿತರ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ. ಅರಣ್ಯದಲ್ಲಿ ದೊರೆಯುವ ಸೊಪ್ಪಿನ ಜ್ಞಾನವೂ ಚೆನ್ನಾಗಿ ಬಲ್ಲವರಾದ್ದರಿಂದಲೇ ಪ್ರತಿ ದಿನವೂ ಸೊಪ್ಪಿನ ಸಂಗ್ರಹ, ಸೊಪ್ಪಿನ ಊಟ ಇದ್ದೇ ಇರುತ್ತದೆ.

ಕಾಡಿನ ಯಾವ ಯಾವ ಭಾಗದಲ್ಲಿ ಗೆಣಸು, ಅಣಬೆ, ಸೊಪ್ಪು, ಸಿಗುತ್ತದೆಂಬ ಜ್ಞಾನ ಇವರಿಗೆ ತಿಳಿದಿರುವುದರಿಂದಲೇ ಅವುಗಳ ಬಳಕೆಯನ್ನು ಸಂಪೂರ್ಣವಾಗಿ ಮಾಡುತ್ತಾ ಆಹಾರದ ಕ್ರಮದಲ್ಲಿ ಇವುಗಳ ಬಳಕೆಯಿಂದ ಪೌಷ್ಠಿಕಾಂಶಯುತ ಊಟವನ್ನು ಮಾಡುತ್ತಾರೆ.

**ಮಹಿಳೆಯರ ಪಾತ್ರ** : ಮಹಿಳೆಯರು ಅರಣ್ಯದೊಂದಿಗೆ ಸದಾ ಒಡನಾಟದಲ್ಲಿ ಇರುವುದರಿಂದ ಆರೋಗ್ಯ ಪೂರ್ಣ ಮರಗಿಡಗಳು, ವಿಷಪೂರಿತ ಗಿಡಮರಗಳು, ಸೊಪ್ಪು ಸದೆಗಳ ಜ್ಞಾನ ಇವರಿಗಿದೆ. ಕಾಡಿನ ಯಾವ ಭಾಗದಲ್ಲಿ ತಮಗೆ ಮತ್ತು ತಮ್ಮ ಕುಟುಂಬಕ್ಕೆ ಅಗತ್ಯವಿರುವ ಆಹಾರ ಪದಾರ್ಥಗಳನ್ನು ಅರಣ್ಯದಿಂದ ಪಡೆಯಬಹುದು ಎಂಬ ಜ್ಞಾನವನ್ನು ಹೊಂದಿದ್ದಾರೆ.

**ಆಧುನಿಕತೆ** : ಬಲವಂತವಾಗಿ ಕಾಡಿನಿಂದ ಹೊರದಬ್ಬಲ್ಪಡುತ್ತಿರುವ ಇವರ ಇಂದಿನ ಪೀಳಿಗೆಯ ಮತ್ತು ಅರಣ್ಯದ ನಡುವಿನ ಅಂತರ ಹೆಚ್ಚುತ್ತಲೇ ಹೋಗುತ್ತಿದೆ. ಇದರ ಪರಿಣಾಮ ಇಂದಿನ ಪೀಳಿಗೆಗೆ ಕಾಡಿನಲ್ಲಿರುವ ಮರಗಿಡಗಳು, ದಾರಿಗಳು, ಸರಹದ್ದುಗಳ ಜ್ಞಾನ ಇಲ್ಲವಾಗುತ್ತಿದೆ.

### ೬. ೬. ೧. ಆಹಾರಾನ್ವೇಷಣೆಗೆ ಹೋಗುವಾಗ ಕಾಡಿನಲ್ಲಿ ದಾರಿಯನ್ನು ಗುರುತಿಸುವ ಕ್ರಮ

ಜೇನುಕುರುಬರು ಆಹಾರವನ್ನು ಅರಸಿ ಕಾಡಿಗೆ ಹೋಗುವಾಗ ಒಟ್ಟಿಗೆ ಹೊರಟರೂ ಮುಂದೆ ಹೋದಂತೆ ಬೇರೆ ಬೇರೆ ಆಗುವ ಸಾಧ್ಯತೆಗಳೇ ಹೆಚ್ಚಿರುತ್ತವೆ. ಆದರೂ ಇವರು ಕೂಗಳತೆ ದೂರದಲ್ಲೇ ತಮ್ಮ ತಮ್ಮ ಕಾಯಕದಲ್ಲಿ ತೊಡಗಿಕೊಂಡಿರುತ್ತಾರೆ. ಬಗೆ ಬಗೆಯ ಶಬ್ದಗಳನ್ನು ಮಾಡುವ ಮುಖಾಂತರ ತಮ್ಮ ಇರುವಿಕೆಯನ್ನು ಇನ್ನೊಬ್ಬರಿಗೆ ತಿಳಿಸಲೆತ್ನಿಸುತ್ತಾರೆ. ದಾರಿ ತಪ್ಪಿದಾಗ ಕೂ...ವ್...ಕೂ...ವ್ ಎಂದು ಕೂಗುತ್ತಾರೆ. ಆಗ ಧ್ವನಿ ಬಂದ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಾರೆ. ಏಕೆಂದರೆ ಕಾಡಿನಲ್ಲಿ ಧ್ವನಿ ಪ್ರತಿಧ್ವನಿಯಾಗುವುದರಿಂದ ಒಂದು ದಿಕ್ಕಿನಲ್ಲಿ ಕೂಗಿದಾಗ ಇನ್ನೊಂದು ವಿರುದ್ಧ ದಿಕ್ಕಿಗೆ ಶಬ್ಧ ಬರುತ್ತದೆ. ಅದನ್ನು ಗಮನಿಸಿ ಕಾಡಿನಲ್ಲಿ ಮುಂದೆ ಸಾಗುತ್ತಾರೆ. ಇಷ್ಟಾದರೂ ಅವರು ಒಬ್ಬರಿಗೊಬ್ಬರು ಸಂಪರ್ಕ ಕಡಿದುಕೊಳ್ಳುವ ಸಾಧ್ಯತೆಗಳು ಸಾಮಾನ್ಯವಾಗಿರುತ್ತದೆ.

ಒಬ್ಬರಿಗೊಬ್ಬರು ಕಾಡಿನ ಮಧ್ಯೆ ತಪ್ಪಿಸಿಕೊಂಡಾಗ ಧೃತಿಗೆಡದೆ ಇನ್ನೇನು ಹಾಡಿಗೆ ಮರಳಬೇಕೆಂದುಕೊಂಡಾಗ ಹಾಡಿಯ ಕಡೆಗೆ ತಮ್ಮ ನಡಿಗೆಯನ್ನು ಪ್ರಾರಂಭಿಸುತ್ತಾರೆ. ದಾರಿಯಲ್ಲಿ ಮುಂದೆ ಹೋಗಿರುವವರ ಹೆಜ್ಜೆ ಗುರುತನ್ನು ಗುರುತಿಸಲು ಪ್ರಯತ್ನಿಸುತ್ತಾರೆ. ನಂತರ ಮುಂದೆ ದಾರಿಯಲ್ಲಿ ಸಿಗುವ ಕೂಡು ರಸ್ತೆಗಳಲ್ಲಿ ಸೊಪ್ಪನ್ನು ಮುರಿದು ಹಾಕುತ್ತಾರೆ. ಅವರುಯಾವ ದಾರಿಯಲ್ಲಿ ಸಾಗಿದ್ದೇವೆಯೋ, ಆ ದಾರಿಗೆ ಎಷ್ಟು ಜನ ಮುಂದೆ ಸಾಗಿದ್ದೇವೆ ಎಂಬುದನ್ನು ಸೂಚಿಸಲು ತಮ್ಮದೇ ಜ್ಞಾನವನ್ನು ಇವರು ಬಳಸುತ್ತಾರೆ. ಮೂರು ಜನ ಮುಂದೆ ಹೋಗಿದ್ದರೆ ಮೂರು ಕೊನೆ ಸೊಪ್ಪನ್ನು ಮುರಿದು ಹಾಕುವುದು ಹಾಗೆಯೇ ಇಬ್ಬರು ಮುಂದೆ ಸಾಗಿದರೆ ಎರಡು ಕೊನೆ ಸೊಪ್ಪು ಮುರಿದು ಹಾಕುತ್ತಾರೆ. ಇದನ್ನು ಹಿಂದಿನಿಂದ ಬಂದವರು ಗಮನಿಸಿ, ತನ್ನ ಮುಂದಿನವರು ಯಾವ ದಾರಿಯಲ್ಲಿ ಹೋಗಿದ್ದಾರೆ? ಎಷ್ಟು ಜನ ಹೋಗಿದ್ದಾರೆ? ಇನ್ನೆಷ್ಟು ಜನ ಹಿಂದುಳಿದಿದ್ದಾರೆ? ಎಂಬುದನ್ನು ಅರಿತುಕೊಳ್ಳುತ್ತಾರೆ. ತದನಂತರ ತಾನು ಮುಂದೆ ಹೋಗಿರುವ ಸೂಚನೆಗಾಗಿ ಮತ್ತೊಂದು ಸೊಪ್ಪನ್ನು ಹಾಕುತ್ತಾರೆ. ಹೀಗೆ ಜೇನುಕುರುಬರು ದಟ್ಟ ಅರಣ್ಯಗಳ ನಡುವೆಯೂ ಅಳುಕಿಲ್ಲದೇ ತಮ್ಮ ಜೀವನ ಕ್ರಮವನ್ನು ನಡೆಸುತ್ತಾರೆ.

### ೬. ೭ ಮರಗಳ ವಿವರ

ಜೇನುಕುರುಬ ಮಹಿಳೆಯರು ಕಾಡಿನ ಒಂದು ಅವಿಭಾಜ್ಯ ಅಂಗವಾದ ಮರಗಳ ಹೆಸರು ಮತ್ತು ಅವುಗಳ ಉಪಯೋಗಗಳನ್ನು ತಿಳಿದಿದ್ದಾರೆ. ಕಾಡಿನ ಬಹುತೇಕ ಮರಗಳ ಹೆಸರುಗಳನ್ನು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ತಿಳಿಸಿದರು.

ಅಡಲೆ ಮರ, ಅಂಟುವಾಳಕಾಯಿ ಮರ sapindus emarginatus, ಅಂಬಟ್ಟೆ ಮರ Spondia.s mallgifel'a, ಅತ್ತಿ ಮರ ficus glomerata, ಅರಗತಿ ಮರ, ಅರಳಿ ಮರ ficus religiosa, ಅಶೋಕ ಮರ saraca asoca dewilde, ಅಳತಿ (ನಂದಿ) ಮರ Lagerstroemia lanooolata, ಅಳಲಿಕಾಯಿ ಮರ caesalpinia coriari, ಆಮಮಟ್ಟಾಳ ಮರ, ಅರಳೆಕಾಯಿ ಮರ rennmalia chebula, ಆಲತ್ತಿ ಮರ, ಆಲದ ಮರ ficus benghalensis, ಆಲೆ ಮರ, ಇಂಡುಸು ಮರ, ಇಪ್ಪೆ ಮರ madhuhu indica, ಇಸಲೆ ಮರ, ಈಸಲು (ಈಚಲು) ಮರ phonenix acaulis roxb, ಈಲಿ ಮರ, ಉಪ್ಪನೇರಳೆ ಮರ MaTUs nigra, ಉಪುಳ ಮರ, ಉರಿ ಮರ, ಎಕ್ಕದ ಗಿಡ calotropis gigantean, ಓಕ್ ಮರ grevillea rovusta, ಕಕ್ಕೆ ಮರ cassia fistula, ಕಗ್ಲಿ ಮರ acacia catchu roxb willb, ಕಡಬು ಮರ, ಕದಂಬ ಮರ anthocepha cuscadamba, ಕನ್ನಡಿ ಮರ, ಕರಡಿ ಮರ, ಕರಿಕರ್ಜಲೆ ಮರ, ಕರಿಮತ್ತಿ ಮರ 'l'ortniualia. tomentosa., ಕರಿಬೀಳು ಮರ uvaria narum, ಕರಿಬೇವು ಮರ murraya koenigii, ಕಲ್ಲಅಡಲೆ ಮರ, ಕಲ್ಲತ್ತಿ ಮರ ficustomenposa, ಕಲ್ಲುಗರಿಗೆ ಮರ, ಕಂಯ್ಯಸುಂಡೆ ಮರ, ಕಾಡು ಅಡಿಕೆ ಮರ pinanga diksonii roxb, ಕಾಡು ಕಿತ್ತಳೆ ಮರ artaboarys zeeylanicushookthoms, ಕಾಡು ಖರ್ಜೂರ phonenix humillis yorpedunculata, ಕಾಡು ತೆಂಗು ಮರ arenga wightii Griffith, ಕಾಡು ನಿಂಬೆ ಮರ atalantia molophylla, ಕಾಡು ನುಗ್ಗೆ ಮರ breynia vitisidaea, ಕಾಡು ಬೇವು ಮರ clanrenadeemtata, ಕಾಡುಭೂರ ಮರ, ಕಾಡು ಸೀಗೆ ಮರ acacia pennata 1 willd, ಕಾಡು ಸೊಟ್ಟೆ ಮರ, ಕಾಡು ಪರಿವಾಳ ಮರ erythrina subumbrans, ಕಾಡು ಹಿಂಬೆ ಮರ, ಕಾಣೆತೊಂಡೆ ಮರ, ಕಾಫಿಸೊಟ್ಟೆ ಮರ, ಕಾಶಿ ಮರ, ಕಾರ್ಲ್‌ಜಾಲಿ ಮರ Acacia ambicn, ಕಾಂಪಲೆ ಮರ, ಕುತ್ತುಳ್ಳಿ (ಕಿತ್ತಳೆ) ಮರ citrus reticulate, ಕುಂಬಳ ಮರ, ಕುಳಿಮಾವು ಮರ, ಕೆಂಚಗಿ (ಗುಲಗಂಜಿ) ಮರ abrus precatorius, ಕೆಂಪು ಎಕ್ಕದ ಗಿಡ calotropis procera, ಕೈರು ಮರ, ಕಂಡೆ ಮರ, ಕಂಯ್ಯಾಕಡಬು ಮರ, ಕಳ್ಳಿ ಮರ, Cymbopogon paehnodes, ಗಂಧದ ಮರ santealum album, ಗಜನಿಂಬೆ ಮರ citrulimon, ಗಜ್ಜುಗ ಮರ caesalpinia decapetala, ಗರಿಗೆ ಮರ, ಗವಲಿ ಮರ, ಗಾಂಧಾರಿ ಗಿಡ vlumea lacera, ಗಾಳಿ ಮರ, ಗೇಪುರ ಮರ, ಗೇರು ಮರ anacardium occidenteal, ಗೊದ್ದೆ ಮರ, ಗೊಬ್ಬಳಿ ಮರ A.ca.cia o.rabica, ಗೋಣಿ ಮರ, ಗೋರಂಟಿ ಮರ erythroxylum monogynum roxb, ಗೌರಿ ಮರ althea fragrans dalzellbedd, ಜಂಬೂ ಮರ carex, ಜಗಳಗಂಟಿ ಮರ diospyros Montanaroxb, ಜಾಲು ಮರ shoria indica, ಜೀನಲೆ ಮರ, ಜೀರಗೆಮಾವು ಮರ, ತಡಸು ಮರ grewia

tilifolia, ತಾರಿ (ತಾರೆ) ಮರ terminalia bellirica, ತ್ಯಾಗ (ತೇಗ) ಮರ tectona grandis, ತುಗಲಿ ಮರ albizia amara, ತೂಪುರ ಮರ, ತೈಲ (ನೀಲಗಿರಿ) ಮರ eucalyptus tereticornis, ತೋರೆ ಮಾವು, ತಂಬೂಲ ಮರ, ದವಲತ್‌ಕಕ್ಕೆ ಮರ, ದಾಳಿಂಬೆ ಮರ pulica, ದಿಂಡಲು ಮರ alogeissus genulata, ದೊಡ್ಡಸುಂಡೆ ಮರ, ದೊಬ್ಬರ ಮರ, ದೊಪ್ಪ ಮರ, ಧೂಪದ ಮರ vateria indica, ನರ್ವಲ್ ಮರ, ನಾಯಿಬೇಲ ಮರ naring crenulata, ನಿಂಬೆ ಮರ citrus anrantifolia, ನೀರಬಟ್ಟಿ ಮರ, ನೀರಲ ಮರ eugeniajambolana lamb, ನೀರುಹೊನ್ನೆ ಮರ, ನೇರಲ್ (ನೇರಳೆ) ಮರ syzigium cuumini, ನೊಗ ಮರ, ಪಾರಿಜಾತ ಮರ nyctamthesarbor tristis linn, ಪಾರಿವಾಳ ಮರ, ಪೈಯಿಂಬೆ ಮರ, ಪೌಂಸೆ ಮರ, ಬನ್ನಿ ಮರ acacia ferrcuginea, ಬಪ್ಪ ಕಾಯಿ (ಪರಂಗಿ) ಮರ caricapapaya, ಬಸರಿ ಮರ ficus iucescems, ಬಸವನ ಪಾದ (ಕಡುಗ) ಮರ, ಬಳುಬುಡೆ ಮರ, ಬಾಗೇ ಮರ Albizzia amam Lebbek, ಬಾಸಣಿಗೆ ಮರ,. ಬಾಳೆ ಗಿಡ musaparadisiaca, ಬಿಲ್ ಪತ್ರೆ ªÀÄgÀ aegle marmelos, ಬಿಲ್ವರ್ ಮರ alvizzia odoratissima, ಬಿಳಿಕಜ್ಜೆ ಮರ, ಬಿಳಿ ಮತ್ತಿ ಮರ terminalia paniculata, ಬೀಲ್‌ವರ ಮರ Albizzia odoratissima, ಬೂತಳೆ ಮರ grewia tiliae folia, ಬೂರಗ ಮರ bombax ceiba, ಬೆಟ್ಟ ನೆಲ್ಲಿ ಮರ phyllanthus emblica, ಬೇಲದ ಮರ limonia acidissima, ಬೇವು ಮರ azadirachta indica, ಬೈನೆ ಮರ caryotaurens linn, ಭಾಗ್ಯ ಮರ Albizzia Lebbek, ಭೂಡೆ (ಬೀಟೆ) ಮರ dalbergia latifolia, ಭೂತಾಳಿ ಮರ sperculia foetida, ಮತ್ತಿ ಮರ, ಮತ್ತಿಚಟ ಮರ, ಮದರಸಿ ಮರ, ಮಳಲಿ ಮರ, ಮಾಗಳಿ ಮರ suma, ಮಾವು ಮರ mangifera indica, ಮುತ್ತಗೆ (ಮುತ್ತುಗ) ಮರ butca monosperma, ಮುಳ್ಳು ಮತ್ತುಗ ಮರ erytarina indica lamb, ಮೈಲಾಡಿ ಮರ, ಮೊಡತಿಗೆ ಮರ, ರತುಗೋಳಿ ಮರ, ರಾಮಫಲ ಮರ annona reticulate, ಲಕ್ಕಿ ಮರ, ಲಬ್ಬರ್ ಮರ, ವನಕೆ ಹುಳಿ ಮರ, ವರಸೇಂಗ್ ಮರ, ವಿಭೂತಿ ಗಿಡ lagarcea mollis cav, ಸಟ್ಟುಗ ಮರ, ಸಣ್ಣೆಲೆ ಮರ holigarla arnottiana, ಸತಗದ ಮರ elaeocarpus tuberulatus, ಸಪೋಟ ಮರ manilkaraachras, ಸಂಪಗೆ (ಸಂಪಿಗೆ) ಮರ michetra champaka, ಸವುಟಗೆ ಮರ, ಸಾಗಡೆ ಮರ, ಸೀಗೆ ಮರ, ಸೀತಾಫಲ ಮರ annona squamosal, ಸೀಲೆ ಮರ, ಸೇಬುಕಾಯಿ ಮರ, ಸೊಟ್ಟೆ ಮರ, ಸೊಳ್ಳೆ ಮರ Cordia Myxa, ಸೋಕು ಮರ, ಶ್ರೀಗಂಧ ಮರ santalum album, ಹಲಸು ಮರ artocarpus heterophyllus, ಹುಣಸೆ ಮರ tamarindus indica, ಹುಳಿಗೇರು ಮರ holigarna

graham kurz, ಹೆಬ್ಬಲಸು ಮರ artocarpus hirsutus, ಹೊಂಗೆ ಮರ pongamia pinnata lpierre, ಹೊನ್ನೆ ಮರ pterocarpus marsnpi...

**ಮಹಿಳೆಯರ ಪಾತ್ರ** : ಪ್ರತಿಯೊಂದು ಮರಗಳ ಹುಟ್ಟು, ಬೆಳೆವಣಿಗೆಗೆ, ಉಪಯೋಗ, ಬಳಸುವ ವಿಧಾನದ ಸಂಪೂರ್ಣ ಜ್ಞಾನವನ್ನು ಜೇನುಕುರುಬ ಮಹಿಳೆಯರು ಹೊಂದಿದ್ದರು.

**ಆಧುನಿಕತೆ:** ಪುನರ್ವಸತೀಕರಣದಿಂದಾಗಿ ಕಾಡಿನೊಂದಿಗಿನ ಒಡನಾಟ ಕಡಿಮೆ ಆಗಿರುವುದರಿಂದ ಸಹಜವಾಗಿಯೇ ಇಂದಿನ ಮಹಿಳೆಯರಿಗೆ ಕಾಡಿನಲ್ಲಿರುವ ಕೆಲವೇ ಮರಗಳ ಪರಿಚಯ ಕೂಡಾ ಇಲ್ಲವಾಗಿರುವುದನ್ನು ಕ್ಷೇತ್ರಾಧ್ಯಯನದಲ್ಲಿ ಕಂಡು ಬಂದಿದೆ.

### ೬. ೭. ೧. ಮರಗಳ ಉಪಯೋಗಗಳು

ಕಾಡಿನಲ್ಲಿರುವ ಮರಗಳ ಬೇರು, ನಾರು, ಹೂವು, ಕಾಯಿ, ಹಣ್ಣು, ಎಲೆ ಮುಂತಾದ ಭಾಗಗಳಿಂದ ಆಹಾರಕ್ಕೆ ಔಷಧಿಗೆ ಉಪಯೋಗಿಸಿಕೊಂಡು ಹಸಿವನ್ನು ನೀಗಿಸಿಕೊಳ್ಳುತ್ತಾರೆ. ಕಾಯಿಲೆಗಳನ್ನು ಗುಣಪಡಿಸಿಕೊಳ್ಳುತ್ತಾರೆ. ಮರಗಳ ಗುಣಗಳನ್ನು ತಲೆ ತಲಾಂತರದಿಂದಲೂ ತಿಳಿದು ಅವುಗಳಿಂದ ಜೀವನೋಪಾಯಕ್ಕೆ ಬೇಕಾದ ವಸ್ತುಗಳನ್ನು ಪಡೆಯುತ್ತಾ ಕಾಡಿನ ಮದ್ದು ಮಾಡಿಕೊಂಡು ಕಾಯಿಲೆಗಳನ್ನು ಹೋಗಲಾಡಿಸಿಕೊಂಡು ಜೀವನ ನಿರ್ವಹಿಸುತ್ತಾರೆ.

**ಅಂಟಾಟೆಮರ** : ಸಣ್ಣ ಪ್ರಾಣಿಗಳನ್ನು ಬೇಟೆಯಾಡಲು ಇದರ ಅಂಟನ್ನು ಉಪಯೋಗಿಸುತ್ತಾರೆ.

**ಅಳತಿಮರ** : ಈ ಮರವನ್ನು ಸೌದೆಗಾಗಿ ಮತ್ತು ಗುಡಿಸಲು ಕಟ್ಟಲು ಉಪಯೋಗಿಸುತ್ತಿದ್ದರು.

**ಆಲೆಮರ–** ಇದರ ಹಣ್ಣನ್ನು ತಿನ್ನಲು ಉಪಯೋಗಿಸುತ್ತಾರೆ.

**ಇಂಗಳದ ಮರ** : ಹಳ್ಳಗಳ ದಡದಲ್ಲಿರುವ ಇಂಗಳದ ಮರದ ಕಾಯಿಯನ್ನು ಸಾಬೂನಿನಂತೆ ಬಳಸುತ್ತಾರೆ. ಅವುಗಳನ್ನು ಕಿತ್ತು ಜಜ್ಜಿದರೆ ಸಾಬೂನಿನ ತರಹ ಆಗುತ್ತದೆ ಅದನ್ನು ಮೈಗೆ ಉಜ್ಜಿದರೆ ಮೈ ಮತ್ತು ತಲೆಯಲ್ಲಿರುವ ಕೊಳೆ ಹೋಗುತ್ತದೆ.

**ಉಪ್ಪಳಿಗೆ ಹಣ್ಣಿನಮರ** : ಇದರ ಹಣ್ಣನ್ನು ತಿನ್ನಲು ಉಪಯೋಗಿಸುತ್ತಾರೆ.

**ಕಾಡು ಗೇರುಮರ** : ಇದನ್ನು ಉಪಯೋಗಿಸುವುದಿಲ್ಲ. ಈ ಮರದ ಪಕ್ಕದಲ್ಲಿ ಹೋದಾಗ ಕಜ್ಜಿಯಂತಾಗುತ್ತದೆ.

**ಕೈರ್‌ವಾರ ಮರ** : ಇದರ ನಾರನ್ನು ಹೊರೆ ಕಟ್ಟಲು ಮತ್ತು ಮನೆಕಟ್ಟಲು ಉಪಯೋಗಿಸುತ್ತಾರೆ. ಹೊಟ್ಟೆಯೊಳಗಿನ ಜಿಲುಮೆ ಹುಳುಗಳ ನಿವಾರಣೆಗಾಗಿ ಈ ಮರದ ಬೇರನ್ನು ಉಪಯೋಗಿಸುತ್ತಾರೆ. ಕಿವಿಯೊಳಗೆ ಕೀಟಗಳು ಇದ್ದಾಗ ಇದರ ಬೇರಿನ ರಸವನ್ನು ಹಾಕುತ್ತಾರೆ.

**ಕಾಡುಮತ್ತಿ ಮರ** : ಈ ಮರದ ಚಕ್ಕೆಯನ್ನು ಕುಡಿಯುವ ನೀರಿನ ಪಾತ್ರೆಗೆ ಹಾಕಿದರೆ, ನೀರು ಶುದ್ಧವಾಗಿ ಕಲ್ಮಶಗಳು ತಳ ಸೇರುತ್ತವೆ.

**ಗೇಪುರ ಮರ** : ಈ ಮರದಲ್ಲಿ ಏಪ್ರಿಲ್ ತಿಂಗಳಲ್ಲಿ ಹಣ್ಣು ಬರುತ್ತದೆ. ಇದನ್ನು ತಿನ್ನಲು ಉಪಯೋಗಿಸುತ್ತಾರೆ.

**ಗೋಣಿ ಮರ** : ಇದರ ಹಣ್ಣನ್ನು ತಿನ್ನಲು ಉಪಯೋಗಿಸುತ್ತಾರೆ.

**ಗೊದ್ದ ಮರ** : ಈ ಮರದ ಚಕ್ಕೆಯನ್ನು ಬೇಯಿಸಿ ಅದರ ನೀರಿಗೆ ಸ್ವಲ್ಪ ರಾಗಿ ಪುಡಿಯನ್ನು ಹಾಕಿ ನೋವು ಇರುವ ಭಾಗಕ್ಕೆ ಹಚ್ಚುತ್ತಾರೆ. ಹಲ್ಲು ನೋವಿಗೂ ಉಪಯೋಗಿಸುತ್ತಾರೆ.

**ಗೌಜಲ ಎಲೆ** : ಜೀಡಿಯಂತೆ ಮಾಡಿ ಹೊಗೆ ಸೊಪ್ಪು ಹಾಕಿ ಸೇದಬಹುದು. ಘಾಟಾಗಿರಬೇಕು ಎಂದರೆ ಹಸಿ ಎಲೆಯನ್ನು ತೆಗೆದುಕೊಂಡು ಹೊಗೆಸೊಪ್ಪು ಹಾಕಿ ಸೇದಬಹುದು. ಘಾಟು ಕಡಿಮೆ ಇರಬೇಕಂದರೆ ಗೌಜಲ ಎಲೆಯನ್ನು ಬೆಂಕಿಯಲ್ಲಿ ಸುಂಡಿಸಿ ಹೊಗೆಸೊಪ್ಪು ಹಾಕಿ ಸೇದಿದರೆ ಘಾಟು ಕಡಿಮೆ ಇರುತ್ತದೆ.

**ಜಗಳಗಂಟಿ ಮರ** : ಇದನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

**ಜಾಲೆ ಮರ** : ಈ ಮರದ ಹೂವನ್ನು ಪೂಜೆಗಳಿಗೆ ಮತ್ತು ಮಹಿಳೆಯರು ತಲೆಗೆ ಮುಡಿಯಲು ಉಪಯೋಗಿಸುತ್ತಾರೆ.

**ತಡಸ್ ಮರ** : ಇದರ ಹಣ್ಣನ್ನು ತಿನ್ನುತ್ತಾರೆ. ಇದರ ಎಲೆಗಳನ್ನು ಗುಡಿಸಲಿಗೆ ಹೊದಿಸಲು ಉಪಯೋಗಿಸುತ್ತಾರೆ. ಇದರ ಚಕ್ಕೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

**ತೋರೆ ಮಾವು ಮರ** : ಇದರ ಹಣ್ಣನ್ನು ತಂದು ಹುಳಿಗಾಗಿ ಉಪಯೋಗಿಸುತ್ತಾರೆ.

**ನೇರಳೆ ಮರ** : ಈ ಮರದ ಹಣ್ಣು ತುಂಬಾ ಪೌಷ್ಟಿಕವಾದ ಆಹಾರ. ತಿನ್ನಲು ರುಚಿಯಾಗಿರುತ್ತದೆ. ಈ ಮರದ ಚಕ್ಕೆಯನ್ನು. ಔಷಧಿಯಾಗಿ ಉಪಯೋಗಿಸುತ್ತಾರೆ.

**ಬೀಟೆಮರ (ಬೂಟೆಮರ)** : ಈ ಮರವನ್ನು ಸೌದೆ ಮಾಡಿ ದೀಪವಾಗಿ ಉಪಯೋಗಿಸುತ್ತಾರೆ. ಇದು ದೀರ್ಘ ಸಮಯದ ವರೆಗೆ ಉರಿಯುತ್ತದೆ. ಹೆಚ್ಚು ಬೆಳಕು ಬರುತ್ತದೆ.

**ಬಂಟೆಮರ** : ಈ ಮರದ ನಾರನ್ನು ಮನೆಕಟ್ಟಲು ಉಪಯೋಗಿಸುತ್ತಾರೆ. ಮನೆಯ ಕಂಬಗಳನ್ನಾಗಿ ಉಪಯೋಗಿಸುತ್ತಾರೆ.

**ಮಗ್ಗೆ ಮರ** : ಮಗ್ಗೆ ಮರದ ಕಾಯಿಯನ್ನು ಪಾತ್ರೆಯ ನೀರಿಗೆ ಹಾಕಿದರೆ ನೊರೆ ಬರುತ್ತದೆ. ಇದರಲ್ಲಿ ಹತ್ತು ಹದಿನೈದು ನಿಮಿಷ ಬಟ್ಟೆ ನೆನಸಿ ಒಗೆದರೆ ಬಟ್ಟೆಯಲ್ಲಿರುವ ಕೊಳೆ ಹೋಗುತ್ತದೆ.

**ಮತ್ತಿಮರ** : ಸೌದೆಯಾಗಿ ಉಪಯೋಗಿಸುತ್ತಾರೆ. ಗಾಯ ಆದರೆ ಇದರ ಚಕ್ಕೆಯನ್ನು ಜಜ್ಜಿ ಗಾಯಕ್ಕೆ ಹಚ್ಚುತ್ತಾರೆ. ಇದರ ನೀರನ್ನು ಕುಡಿಯಲು ಬಳಸುತ್ತಾರೆ.

**ಮೂಡರಿಗೆ ಮರ** : ಇದರ ಹಣ್ಣುಗಳನ್ನು ಪ್ರಾಣಿಗಳು ತಿನ್ನುತ್ತವೆ. ಇದರ ಚಕ್ಕೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

**ರತವಾಳಮರ** : ಹೊಟ್ಟೆನೋವಿಗೆ ಇದರ ಚಕ್ಕೆಯನ್ನು ಬೇಯಿಸಿ ಉಪಯೋಗಿಸುತ್ತಾರೆ. ಮರದಿಂದ ಬಿದ್ದಾಗ ಆಗುವ ತೊಂದರೆಗಳಿಗೆ ಇದನ್ನು ಉಪಯೋಗಿಸುತ್ತಾರೆ.

**ಹಲಸು ಮರ** : ಇದರ ಹಣ್ಣನ್ನು ತಿನ್ನಲು ಉಪಯೋಗಿಸುತ್ತಾರೆ. ಇದರ ಚಕ್ಕೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

**ಹಿಪ್ಪೆ ಮರ** : ಇದರ ಎಣ್ಣೆಯನ್ನು ಮರದ ಸಾಮಾನುಗಳಿಗೆ ಗೆದ್ದಲು ಹತ್ತದಂತೆ ಬಳಸಲಾಗುತ್ತದೆ. ಅಗಲವಾದ ಎಲೆಯಿರುವ ಹಿಪ್ಪೆಮರದ ಎಲೆಯನ್ನು ನೇರವಾಗಿ ಬೆಂಕಿಯಲ್ಲಿಟ್ಟು ರೊಟ್ಟಿ ಸುಡಲು ಬಳಸುತ್ತಾರೆ.

**ಹುಣಸೆ ಮರ** : ಹುಣಸೆಕಾಯಿ ಹಣ್ಣು ಮತ್ತು ಅದರ ಚಿಗುರನ್ನು ಅರೆದು ಉಪಯೋಗಿಸುತ್ತಾರೆ.

**(ಮಾ : ಲಕ್ಷ್ಮಿ ಜೆ ಎಸ್, ಬೊಮ್ಮಾಡು ಸಂಪಿಗೆ ಕೊಲ್ಲಿ.)**

### ೬. ೭. ೨. ಬಿದಿರು

ಬಿದಿರಿಗೂ ಜೇನುಕುರುಬರಿಗೂ ಅವಿನಾಭಾವ ಸಂಬಂಧವಿದೆ. ಕಾಡಿನಲ್ಲಿ ಜೀವಿಸುವ ಪ್ರತಿಯೊಂದು ಪ್ರಾಣಿಗೂ ಬಿದಿರಿನ ಅವಶ್ಯಕತೆ ಇದ್ದೇ ಇರುತ್ತದೆ. ಜೇನುಕುರುಬರ ಜೀವನ ಕ್ರಮದ ಎಲ್ಲಾ ಹಂತಗಳಲ್ಲಿ ಬಿದಿರನ್ನು ಬಳಸುತ್ತಾರೆ. ಹುಟ್ಟಿನಿಂದ ಸತ್ತು ಚಟ್ಟಕ್ಕೆ ಹೋಗುವವರೆಗೂ ಬಿದಿರಿನ ಬಳಕೆಯನ್ನು ಕಾಣಬಹುದು. ಜೇನುಕುರುಬರಲ್ಲಿ ಬಿದಿರು ಈ ಕೆಳಗಿನಂತೆ ಉಪಯೋಗಿಸಲ್ಪಡುತ್ತವೆ.

**ಹೆರಿಗೆ** : ಹೆರಿಗೆ ಆಗುವ ಸಂದರ್ಭದಲ್ಲಿ ದೊಡ್ಡ ಬಿದಿರನ್ನು ಸೀಳಿ ತಟ್ಟೆಗೆ ಬಿದಿರಿನ ಕಡ್ಡಿಯಿಂದ ಜೋರಾಗಿ ಬಡಿಯುತ್ತಾರೆ. ಆ ಶಬ್ಧ ಗಮನಿಸುವ ಗರ್ಭಿಣಿಗೆ ನೋವಿನ ಬೇನೆ ಕಾಣಿಸುವುದಿಲ್ಲ. ಆಗ ಸುಲಭವಾಗಿ ಹೆರಿಗೆ ಆಗುತ್ತದೆ.

**ಜನನ** : ಜನನ ಸಂದರ್ಭದಲ್ಲಿ ಮಗುವಿನ ಹೊಕ್ಕಳ ಬಳ್ಳಿಯನ್ನು ಕತ್ತರಿಸಲು ಬಿದಿರನ್ನು ಬ್ಲೇಡಿನಂತೆ ಮಾಡಿ ಬಳಸುತ್ತಾರೆ. ಇದರಿಂದ ಯಾವುದೇ ಅಡ್ಡ ಪರಿಣಾಮ ಅಥವಾ ನಂಜು ಆಗುವುದಿಲ್ಲ.

**ಬೇಟೆ** : ಬಿದಿರಿನಿಂದ ತಯಾರಿಸಿದ ಬಿಲ್ಲಿನಿಂದ ಪ್ರಾಣಿಗಳನ್ನು ಕೊಲ್ಲುತ್ತಿದ್ದರು.

**ಉಯ್ಯಾಲೆ** : ಬಿದಿರನ್ನು ಸೀಳಿ ಉಯ್ಯಾಲೆ ಮಾಡುತ್ತಾರೆ.

**ತೊಟ್ಟಿಲು** : ಮಕ್ಕಳ ತೊಟ್ಟಿಲಿಗೆ ಬಳಸುತ್ತಾರೆ.

**ನೀರು** : ತುರ್ತು ಸಂದರ್ಭಗಳಲ್ಲಿ ಪ್ರಾಕೃತಿಕವಾಗಿ ಬಿದಿರಿನಲ್ಲಿ ಸಂಗ್ರಹವಾಗಿರುವ ನೀರನ್ನು ಕುಡಿಯಲು ಬಳಸುತ್ತಾರೆ.

**ಔಷಧಿ** : ಅನೇಕ ಬಗೆಯ ಔಷಧಿಗಳಿಗೆ ಬಿದಿರಿನ ಬಳಕೆ ಮಾಡಲಾಗುತ್ತಿದೆ.

**ಮನೆ** : ವಸತಿ ನಿರ್ಮಾಣದಲ್ಲಿ ಬಿದಿರಿನ ಪಾತ್ರ ಪ್ರಮುಖವಾಗಿದೆ.

**ಅಟ್ಟಣಿಗೆ** : ದೊಡ್ಡ ದೊಡ್ಡ ಮರಗಳ ಮೇಲೆ ಬಿದಿರಿನ ಗುಡಿಸಲನ್ನು ನಿರ್ಮಿಸುತ್ತಾರೆ. ಅಂದಾಜು ಹದಿನೈದರಿಂದ ಇಪ್ಪತ್ತು ಅಡಿ ಎತ್ತರದಲ್ಲಿ ಮರಗಳ ಕೊಂಬೆಗಳ ಆಕೃತಿಯನ್ನು ನೋಡಿಕೊಂಡು ಗುಡಿಸಲು ಕಟ್ಟಲು ಹೊಂದಾಣಿಕೆಯಾಗುವಂತೆ ಕೊಂಬೆಗಳನ್ನು ಒಂದಕ್ಕೊಂದು ಜೋಡಿಸಿ ಸಣ್ಣ ಸಣ್ಣ ಬಿದಿರಿನ ದಬ್ಬೆಗಳನ್ನು ಸೀಳಿಕೊಂಡು ಅಂದಾಜು ಎಂಟರಿಂದ ಹತ್ತು ಅಡಿ ಉದ್ದ ಬಿದಿರಿನ ಸೀಳುಗಳನ್ನು ಕೊಂಬೆಗಳ ಮೇಲೆ ಒಂದರ ಜೊತೆಗೆ ಒಂದರಂತೆ ಜೋಡಿಸುತ್ತಾರೆ. ಅದಕ್ಕೆ ಕೈರೆ ಮರದ ಸಿಪ್ಪೆಯನ್ನು ಸೀಳಿಕೊಂಡು ನಾರುಗಳನ್ನು ಹಗ್ಗದ ರೀತಿ ಉದ್ದವಾಗಿ ಕಟ್ಟಿಕೊಂಡು ಬಿದಿರಿನ ದಬ್ಬೆಗಳಿಗೆ ಒಂದಕ್ಕೊಂದು ಎಣೆಯುತ್ತಾರೆ. ನೆಲಹಾಸು ತಯಾರಾದ ನಂತರ ಗುಡಿಸಲಿನ ಅಕ್ಕಪಕ್ಕಕ್ಕೆ ಸೀಳಿದ ಬಿದಿರನ್ನು ದೊಡ್ಡ ಮರದ **'ಗಳ'** (ಕಂಬ) ಗುಡಿಸಲು ಮುಂದಿನ ತುದಿ ಮತ್ತು ಹಿಂದಿನ ತುದಿ ಕವಲಾಗಿರುವಂತೆ ಇರುವ ಕಂಬಗಳನ್ನು ನಿಲ್ಲಿಸಿ ಕಟ್ಟುತ್ತಾರೆ. ಅದರ ಮೇಲೆ ಮತ್ತೊಂದು ದೊಡ್ಡ ಕಂಬ ಇಟ್ಟು ಗುಡಿಸಲಿನ ಭಾರವನ್ನು ಈ ಕಂಬಗಳು ಹಿಡಿದಿಡುವಂತೆ ಬಿಗಿದು ಕಟ್ಟಿರುತ್ತಾರೆ. ಅನಂತರ ಸೀಳಿದ ಬಿದಿರನ್ನು ಒಂದು ಅಡಿ ಅಳತೆಯ ಅಂತರದಲ್ಲಿ ಜೋಡಿಸಿ ಕೈರೆ ಮರದ ನಾರಿನಿಂದ ಎರಡು ಕಡೆಗಳಲ್ಲಿ ಬಿಗಿಯಾಗಿ ಕಟ್ಟುತ್ತಾರೆ. ಅನಂತರ ಮೇಲ್ಛಾವಣಿಗೆ ಸೇನೆ ಹುಲ್ಲನ್ನು ಗುಡಿಸಲಿಗೆ ಹೊದಿಸುತ್ತಾರೆ. ಗುಡಿಸಲಿನ ಹಿಂದಿನ ಭಾಗ ಸಂಪೂರ್ಣ ಸೇನೆ ಹುಲ್ಲಿನಿಂದ ಮುಚ್ಚುತ್ತಾರೆ. ಮುಂಭಾಗ ಗುಡಿಸಲಿನ ಒಳಗೆ ಪ್ರವೇಶಿಸಲು ತೆರೆದಿರುತ್ತಾರೆ. ಇಬ್ಬರು ವ್ಯಕ್ತಿಗಳು ಮಲಗುವಷ್ಟು ಜಾಗ ಗುಡಿಸಲಿನಲ್ಲಿ ಇರುತ್ತದೆ. ರಾತ್ರಿಯ ವೇಳೆ ಮಲಗಲು ಗುಡಿಸಲನ್ನು ಬಳಸಿಕೊಳ್ಳುತ್ತಾರೆ. ಕಾಡು ಪ್ರಾಣಿಗಳು ಹಾಡಿಯೊಳಗೆ ನುಗ್ಗಿದಾಗ ತಾತ್ಕಾಲಿಕವಾಗಿ ಪ್ರಾಣ ರಕ್ಷಣೆಗೆ ಇಲ್ಲಿ ಗುಡಿಸಲನ್ನು ಕಟ್ಟಿಕೊಂಡಿರುತ್ತಾರೆ. ಮರವನ್ನು ಹತ್ತಲು ಬಿದಿರಿನ ಏಣಿಯನ್ನು ಬಳಸಿಕೊಂಡು ಮರ ಹತ್ತಿ ಗುಡಿಸಲು ಪ್ರವೇಶಿಸಿದ ಮೇಲೆ ಏಣಿಯನ್ನು ತೆಗೆದುಕೊಂಡು ಗುಡಿಸಲಿನ ಒಂದು ಬದಿಯಲ್ಲಿ ಇಟ್ಟುಕೊಳ್ಳುತ್ತಾರೆ. ಇಳಿಯುವಾಗ ಏಣಿಯನ್ನು ಮತ್ತೆ ಬಳಸಿಕೊಳ್ಳುತ್ತಾರೆ. ಶತ್ರುಗಳಿಂದ, ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಮರದ ಮೇಲಿನ ಅಟ್ಟಣಿಗೆಯನ್ನು ಮಾಡಿಕೊಂಡು ಇರುತ್ತಾರೆ.

ತುರ್ತು ಸಂದರ್ಭಗಳಲ್ಲಿ ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯಲು ಬಿದಿರಿನ ಮೆಳೆಯ ಮೇಲೆ ಸಣ್ಣ ಗುಡಿಸಲನ್ನು ಕಟ್ಟುತ್ತಾರೆ.

**ಕೊಟ್ಟ** : ನೀರನ್ನು ಕುಡಿಯಲು ಕೊಟ್ಟ(ಗೊಟ್ಟ) ಬಳಸುತ್ತಾರೆ. ಅಳತೆಗೆ ಅನುಗುಣವಾಗಿ ಬಿದಿರಿನ ಬೊಂಬಿನಲ್ಲಿ ಎರಡೂ ಕಡೆ ಗಂಟುಗಳು ಇರುವುದನ್ನು ನೋಡಿ ಕತ್ತರಿಸಿ, ಒಂದು ಗಂಟನ್ನು ತೆರೆದಾಗ ಆಧುನಿಕ ಲೋಟದ ಹಾಗೆ ಆಗುತ್ತದೆ. ಇದನ್ನು ನೀರು, ಕಾಫಿ ಕುಡಿಯಲೂ ಸಹ ಬಳಸುತ್ತಾರೆ.

**ಸೇರು** : ಧಾನ್ಯಗಳನ್ನು ಅಳೆಯಲು ಪಾವು, ಸೇರುಗಳನ್ನು ಬಿದಿರಿನಿಂದ ಮಾಡಿಕೊಳ್ಳುತ್ತಿದ್ದರು. ಅವುಗಳ ಅಳತೆ ಆಕೃತಿಗಳನ್ನು ಗಮನಿಸಿ ಧಾನ್ಯಗಳ ಸಂಗ್ರಹಣೆಗೆ ಬಳಸುತ್ತಾರೆ. ಚಿಕ್ಕ ಬಿದಿರಿನ ಕೊಟ್ಟಗಳಲ್ಲಿ ಧಾನ್ಯ ಅಳೆಯಲು ದೊಡ್ಡವರಲ್ಲಿ ಆಹಾರ ಸಾಮಾಗ್ರಿಯನ್ನು ಇಟ್ಟುಕೊಳ್ಳುತ್ತಿದ್ದರು.

**ಗೃಹೋಪಯೋಗಿ** : ಮನೆಯಲ್ಲಿ ಉಪ್ಪು, ಸಕ್ಕರೆ, ರಾಗಿಹಿಟ್ಟು ಮೊದಲಾದ ಆಹಾರ ಬಳಕೆ ವಸ್ತುಗಳನ್ನು ಸಂಗ್ರಹಿಸಿಕೊಳ್ಳಲು, ಮೊರದ ನಿರ್ಮಾಣದಲ್ಲಿ ಉಪಯೋಗಿಸಿಕೊಳ್ಳುತ್ತಾರೆ.


**ಧಾನ್ಯ ಸಂಗ್ರಹಣೆ** ; ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ದೊಡ್ಡ ದೊಡ್ಡ ಬಿದಿರಿನ ಬೊಂಬುಗಳನ್ನು ಕತ್ತರಿಸಿ ಬಳಸುತ್ತಿದ್ದರು.

**ಅಡುಗೆ ಪಾತ್ರೆ** : ಆಹಾರವನ್ನು ತಯಾರಿಸಲು, ಬೇಯಿಸಲು ಪಾತ್ರೆಗಳಂತೆ ಉಪಯೋಗಿಸುತ್ತಾರೆ. ಬಿದಿರಿನಲ್ಲಿ ಬೇಯಿಸಿದ ಬೊಂಬು ಬಿರಿಯಾನಿ ಪ್ರಖ್ಯಾತಿಯಾಗಿದೆ.

**ಕಳಲೆ** : ಎಳೆ ಬಿದಿರನ್ನು ಆಹಾರದಲ್ಲಿ ಸಾರು, ಪಲ್ಯ, ಉಪ್ಪಿನಕಾಯಿ ತಯಾರಿಕೆಯಲ್ಲಿ ಬಳಸುತ್ತಾರೆ.

**ಉಪ್ಪು** : ಪ್ರಾಚೀನ ಕಾಲದಲ್ಲಿ ಬಿದಿರಿನ ಬೂದಿಯನ್ನು ಉಪ್ಪಾಗಿ ಬಳಸುತ್ತಿದ್ದರು. ಬಿದಿರನ್ನು ಚೆನ್ನಾಗಿ ಬೆಂಕಿಯಲ್ಲಿ ಉರಿಸಿ ಬೂದಿ ಮಾಡಿಕೊಂಡರೆ, ಆ ಬೂದಿಯಲ್ಲಿ ಉಪ್ಪಿನ ಅಂಶ ಇರುತ್ತದೆ. ಅದನ್ನು ಉಪ್ಪಾಗಿ ಉಪಯೋಗಿಸುತ್ತಿದ್ದರು.

**ಬಿದಿರಕ್ಕಿ** : ಬಿದಿರಿನ ಅಕ್ಕಿಯನ್ನು ಉಪಯೋಗಿಸುತ್ತಾರೆ. ಬಿದಿರಕ್ಕಿಯನ್ನು ಪಡೆಯಲು ಹಿಂದಿನ ದಿನವೇ ಬಿದಿರಿನ ಹಿಂಡ್ಲು ಬಳಿ ಹೋಗಿ ಸುತ್ತಲೂ ಸಗಣಿಯಿಂದ ಸಾರಿಸಿ ಬಂದರೆ, ಬೆಳಕಾಗುವ ಹೊತ್ತಿಗೆ ಬಿದಿರಕ್ಕಿ ನೆಲಕ್ಕೆ ಬಿದ್ದಿರುತ್ತಿದ್ದವು. ಅದನ್ನು ಗುಡಿಸಿಕೊಂಡು ತಂದು ಅನ್ನ ಮಾಡಿ ಊಟ ಮಾಡುತ್ತಿದ್ದರು. ಈಗಲೂ ಇದರ ಉಪಯೋಗ ಕಾಣಬಹುದು.



**ಬೊಂಬು ಬಿರಿಯಾನಿ** : ಪಾತ್ರೆಗಳ ಉಪಯೋಗವಿಲ್ಲದ ಸಮಯದಲ್ಲಿ ಬಳಕೆಯಲ್ಲಿದ್ದ ಬೊಂಬುಗಳ ಬಳಕೆ ಇಂದು ಅಪರೂಪವೆನಿಸಿದೆ. ಬೊಂಬಿನಲ್ಲಿ ಅಕ್ಕಿ, ಮಾಂಸ, ಮಸಾಲೆಗಳು, ಉಪ್ಪು ಮತ್ತು ನೀರನ್ನು ಏಕಕಾಲದಲ್ಲಿ ಹಾಕಿ ಪಾರಂಪರಿಕವಾಗಿ ಬೆಂಕಿಯಲ್ಲಿ ಬೇಯಿಸುತ್ತಾರೆ. ಮೈಸೂರು ದಸರಾ ಸಂದರ್ಭದಲ್ಲಿ ಮರಳುಕಟ್ಟೆ ಹಾಡಿಯ ಜೇನುಕುರುಬ ಯುವಕ ಕುಮಾರ್ ಎಂ ಟಿ ತಯಾರಿಸುವ ಬೊಂಬು ಬಿರಿಯಾನಿಗೆ ಭಾರೀ ಬೇಡಿಕೆ ಇದೆ.



**ಕ್ಷೌರ** : ಬಿದಿರನ್ನು ಚೂಪು ಮಾಡಿ ಕ್ಷೌರ ಮಾಡಿಕೊಳ್ಳಲು ಬ್ಲೇಡಿನಂತೆ ಉಪಯೋಗಿಸುತ್ತಿದ್ದರು.

**ಸಂಗೀತ** : ಸಂಗೀತವನ್ನು ನುಡಿಸಲು ಅಗತ್ಯವಿರುವ ಪರಿಕರಗಳನ್ನು ತಯಾರಿಸಲು ಬಳಸುತ್ತಾರೆ. ಬಿದಿರಿನಿಂದ ಅಂಜಲೆಯನ್ನು ತಯಾರಿಸುತ್ತಿದ್ದರು ಇದರಿಂದ ಹಾಡನ್ನು ನುಡಿಸುತ್ತಿದ್ದರು.

**ಚಟ್ಟ** : ಕೊನೆಗೆ ವ್ಯಕ್ತಿ ಸತ್ತ ನಂತರ ಚಟ್ಟ ಕಟ್ಟಲು ಬಿದಿರಿನ ಬಳಕೆ ಮಾಡಿಕೊಳ್ಳುತ್ತಾರೆ.

## ೬. ೮. ಪ್ರಾಣಿ ಜ್ಞಾನ

ಜೇನು ಕುರುಬರು ಪ್ರಾಣಿ ಪ್ರಿಯರು. ಪ್ರಾಣಿಗಳ ಚಲನ ವಲನ, ಕೂಗು, ಧ್ವನಿ ಮುಂತಾದವುಗಳ ಜ್ಞಾನವನ್ನು ಹೊಂದಿದವರಾಗಿದ್ದಾರೆ. ಬಹಳ ದೂರದಲ್ಲಿ ಪ್ರಾಣಿಗಳು ಕೂಗಿದರೆ ಅದು ಇಂತಹದ್ದೇ ಪ್ರಾಣಿಯ ಕೂಗು ಎಂದು ಖಚಿತವಾಗಿ ಹೇಳಬಲ್ಲವರು. ಪ್ರಾಣಿ ಪಕ್ಷಿಗಳ ಕೂಗಿನ ಧ್ವನಿಯನ್ನು ಗಮನಿಸಿ, ಅವುಗಳು ಸಿಲುಕಿರುವ ಅಪಾಯದ ಪರಿಸ್ಥಿತಿಯನ್ನು ಅರಿಯಬಲ್ಲರು.

**ಕಾಡಿನಲ್ಲಿ ವಾಸಿಸುವ ಪ್ರಾಣಿಗಳು**

ಜೇನುಕುರುಬರು ಕಾಡಿನಲ್ಲಿ ವಾಸಿಸುವ ಬಹಳಷ್ಟು ಪ್ರಾಣಿಗಳನ್ನು ಗುರುತಿಸುವ ಜ್ಞಾನವನ್ನು ಹೊಂದಿದ್ದರು. ಆನೆ, ಕರಡಿ, ಹುಲಿ, ಸಾರಂಗ, ಕಡವೆ, ಕೂರ, ಹಂದಿ, ಉಡ, ಮೊಲ, ಮುಳ್ಳಂದಿ, ಅಳಿಲು, ಮುಚ್ಚ, ಕಪಿ, ನೀರುನಾಯಿ, ನರಿ, ಆಮೆ, ಇತ್ಯಾದಿ.

**ಮರದ ಪೊಟರೆಯಲ್ಲಿ ವಾಸಮಾಡುವ ಪ್ರಾಣಿಗಳು**

ಜೇನುಕುರುಬರು ಮರದ ಪೊಟರೆಗಳಲ್ಲಿ ಯಾವ ಯಾವ ಪ್ರಾಣಿಗಳು ವಾಸ ಮಾಡುತ್ತವೆ? ಮತ್ತು ಯಾವ ಮರದ ಪೊಟರೆಯಲ್ಲಿ? ಯಾವ ಪ್ರಾಣಿ? ಯಾವ ಋತುಮಾನದಲ್ಲಿ ವಾಸಿಸುತ್ತವೆ,

ಎಂಬುದರ ಜ್ಞಾನವು ಪಾರಂಪರಿಕವಾಗಿಯೇ ಇವರಲ್ಲಿ ಮುಂದುವರೆದಿದೆ. ಹಾರ, ಹೆಗ್ಗರ, ಕಾಗುರ, ಸೋಡುಲ, ಸಣ್ಣಲಿ (ಇಲಿ) ಗುವಲ (ಗೂಬೆ), ಇತ್ಯಾದಿ.

**ಗುಹೆಯೊಳಗೆ ವಾಸ ಮಾಡುವ ಪ್ರಾಣಿಗಳು**

ಜೇನುಕುರುಬರು ಗುಹೆಗಳಲ್ಲಿ ವಾಸಿಸುವ ಪ್ರಾಣಿಗಳನ್ನು ಸುಲಭವಾಗಿ ಗುರುತಿಸಿಕೊಳ್ಳುತ್ತಾರೆ. ಉದಾಹರಣೆಗೆ ಮುಳ್ಳಂದಿ, ಇಲಿ, ಕೋಡ, ಹೆಗ್ಗಣ, ತೈರಿಗೆ, ಬಡು(ಉಡ), ಇತ್ಯಾದಿ.

**ನೀರಿನೊಳಗೆ ವಾಸಿಸುವ ಪ್ರಾಣಿಗಳು**

ನೀರಿನಲ್ಲಿ ವಾಸಿಸುವ ಕೆಲವು ಪ್ರಾಣಿಗಳನ್ನು ಜೇನುಕುರುಬರು ಹೆಸರಿಸುತ್ತಾರೆ. ಅವುಗಳೆಂದರೆ ಆಮೆ, ಮೀನು, ನೀರುನಾಯಿ, ಕೋರತಿ (ಚಿಟ್ಟೆ), ಕುಳುಮಂಡು(ಚಿಟ್ಟೆ), ಇತ್ಯಾದಿ.

ಮಿಡತೆಗಳ ಜೇಂಯ್... ಂಯ್... ಂಯ್... ಂಯ್... ಎಂಬ ಶಬ್ದದಲ್ಲಿ ಆಗುತ್ತಿರುವ ಬದಲಾವಣೆಯನ್ನು ಗಮನಿಸಿ ಸಮೀಪದಲ್ಲಿ ಕಾಡು ಪ್ರಾಣಿಗಳು ಇದೆಯೋ? ಇಲ್ಲವೋ? ಎಂಬುದನ್ನು ಗುರ್ತಿಸಿಕೊಳ್ಳುತ್ತಾರೆ. ಶಬ್ಧದ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹಕ್ಕಿ, ಪಕ್ಷಿಗಳ ಕೂಗು ವರ್ತನೆಗಳಲ್ಲಿ ಆಗುವ ಬದಲಾವಣೆಯನ್ನು ಗಮನಿಸಿ ಕ್ರೂರ ಪ್ರಾಣಿಗಳು ಎಷ್ಟು ಅಂತರದಲ್ಲಿವೆ ಎಂಬುದರ ಸೂಕ್ಷ್ಮತೆ ಗೊತ್ತಾಗುತ್ತದೆ ಎಂದು ಹೇಳುತ್ತಾರೆ.

ಪ್ರಾಣಿಗಳ ಚಲನ ವಲನ, ಅವುಗಳು ತಿನ್ನುವ ಆಹಾರ, ಬೇಟೆಯಾಡುವ ವಿಧಾನ ಇವುಗಳನ್ನು ಗುರುತಿಸಲು ಜೇನುಕುರುಬರಿಗೆ ಇದ್ದ ಸೂಕ್ಷ್ಮ ಜ್ಞಾನವನ್ನು ಕಾಣಬಹುದಾಗಿದೆ. ಕಡವೆಯು ಸತ್ತ ಪ್ರಾಣಿಯ ಮಾಂಸ ಮತ್ತು ಆಮೆಯನ್ನು ಹಿಡಿದು ತಿನ್ನುತ್ತದೆ. ಆಮೆಯು ಹಣ್ಣು ಹಂಪಲನ್ನು ತಿನ್ನಲು ನೀರಿನಿಂದ ಹೊರಗೆ ಬಂದಾಗ, ಕಡವೆಯು ಆಮೆಯನ್ನು ಹಿಡಿದು ತಿನ್ನುತ್ತದೆ.

ಹುಲಿಯು ಮಾಂಸಾಹಾರಿ ಆದರೂ ಕಾಯಿಲೆ ಬಂದರೆ ಹುಲ್ಲನ್ನು ತಿಂದು ಕಾಯಿಲೆ ನಿವಾರಣೆ ಮಾಡಿಕೊಳ್ಳುತ್ತದೆ. ಪ್ರಾಣಿಗಳನ್ನು ಬೇಟೆಯಾಡಿ ಹಿಡಿದು ತಿಂದು, ಉಳಿದ ಭಾಗವನ್ನು ಪೊದೆ, ಸೊಪ್ಪು ಸದೆಯೊಳಗೆ ಎಸೆದು ಹೋಗುತ್ತದೆ. ಮತ್ತೆ ಹಸಿವಾದಾಗ ಬಂದು ಉಳಿದ ಮಾಂಸವನ್ನು ತಿನ್ನುತ್ತದೆ. ಗಂಡು ಮತ್ತು ಹೆಣ್ಣು ಹುಲಿಗಳು 'ಕನ್ನೇರಿ' ಎಂಬ ಸಮಯದಲ್ಲಿ ಸೇರುತ್ತವೆ. ಗಂಡು ಮತ್ತು ಹೆಣ್ಣು ಹುಲಿಗಳು ಒಂಟಿಯಾಗಿಯೇ ಸುತ್ತಾಡುತ್ತವೆ. ಆಹಾರ ತಿಂದ ಮೇಲೆ ಹುಲಿಗಳು ನೀರು ಇರುವ ಜಾಗದಲ್ಲಿಯೇ ನಿದ್ರಿಸುತ್ತವೆ.

ಸೀಳುನಾಯಿ(ಕಾಡುನಾಯಿ)ಗಳ ಹಿಂಡುಜಿಂಕೆ, ಕಡವೆಗಳನ್ನು ಸುತ್ತುವರೆದು ಬೇಟೆಯಾಡಿ ಹಿಡಿದು ತಿನ್ನುತ್ತವೆ. ಇವುಗಳು ಮಾಂಸವನ್ನು ಉಳಿಸುತ್ತಿರಲಿಲ್ಲ ಏಕೆಂದರೆ ಕಾಡು ನಾಯಿಗಳು ಗುಂಪಾಗಿ ಬೇಟೆಯಾಡುವುದರಿಂದ ಮಾಂಸ ಉಳಿಯುತ್ತಿರಲಿಲ್ಲ. ಹುಲಿಯು ಹಂದಿಯನ್ನು ಬೇಟೆಯಾಡಲು ತುಂಬಾ ಕಷ್ಟ ಪಡುತ್ತದೆ. ಆದರೆ ಕಾಡುನಾಯಿಗಳು ಹಂದಿಯನ್ನು ಸುಲಭವಾಗಿ

ಹಿಡಿಯುತ್ತವೆ. ಕಾಡು ನಾಯಿಗಳು ತನ್ನ ಬಾಲಕ್ಕೆ ಮೂತ್ರವನ್ನು ಮಾಡಿ, ನಂತರ ಹಂದಿಯನ್ನು ಬೇಟೆಯಡುವ ಸಂದರ್ಭದಲ್ಲಿ ಹಂದಿಯ ಕಣ್ಣಿಗೆ ಬೀಳುವಂತೆ ಮಾಡುತ್ತವೆ. ಅದರ ಕಣ್ಣಿಗೆ ಉರಿಯಾಗಿ, ಕಾಡುನಾಯಿಗಳು ಹಂದಿಯನ್ನು ಸುಲಭವಾಗಿ ಬೇಟೆ ಆಡುತ್ತವೆ.

ಹೆಬ್ಬಾವು ಪ್ರಾಣಿಯನ್ನು ಗಟ್ಟಿಯಾಗಿ ಅದುಮಿ, ಅದರ ದೇಹವನ್ನು ಸುತ್ತಿಕೊಂಡು, ಮೂಳೆಗಳನ್ನು ಮುರಿದು, ಆನಂತರ ತಲೆ ಭಾಗದಿಂದ ನುಂಗುತ್ತದೆ. ಹೆಬ್ಬಾವು ಹೆಚ್ಚಾಗಿ ಮರಿ ಜಿಂಕೆಯನ್ನು ಹಿಡಿದು ತಿನ್ನುತ್ತದೆ. ಹೆಬ್ಬಾವು ಒಂದು ಜಿಂಕೆಯನ್ನು ತಿಂದರೆ ಮತ್ತೆ ಎರಡು ವಾರದ ತನಕ ಆಹಾರ ತಿನ್ನುವುದಿಲ್ಲ.

ಕರಡಿಯು ಜೇನು, ಹತ್ತಿಹಣ್ಣು, ಗೆದ್ದಲಿನ ಹುಳುಗಳನ್ನು ತಿನ್ನುತ್ತದೆ. ಇದು ಹಲಸಿನ ಹಣ್ಣನ್ನು ಹೆಚ್ಚಾಗಿ ತಿನ್ನುತ್ತದೆ. ಆನೆಗಳು ಮರದ ಚಕ್ಕೆ, ಹುಲ್ಲು, ಬಿದಿರನ್ನು ತಿನ್ನುತ್ತವೆ. ಹಂದಿಯು ಕಾಡಿನಲ್ಲಿರುವ ಗೆಡ್ಡೆ ಗೆಣಸನ್ನು ತಿನ್ನುತ್ತದೆ ಮತ್ತು ಮಾಂಸವನ್ನು ತಿನ್ನುತ್ತದೆ. ಮಂಗ ಮುಚ್ಚಸೊಪ್ಪು, ಹಣ್ಣನ್ನು ಹೆಚ್ಚಾಗಿ ತಿನ್ನುತ್ತದೆ,

ಮಂಡಲಹಾವು ಮೊಟ್ಟೆ ಇಡುವುದಿಲ್ಲ. ಇದು ಮರಿಯನ್ನು ಹಾಕುತ್ತದೆ. ಜೇನುಕುರುಬರು ಇದನ್ನು ನೇರವಾಗಿ ನೋಡಿರುವ ಪ್ರಸಂಗಗಳು ಇವೆ ಹಾಗೂ ಎಲ್ಲಾ ಪ್ರಾಣಿಗಳನ್ನು ಶಬ್ದದಿಂದಲೇ ಕಂಡು ಹಿಡಿಯುತ್ತಾರೆ.

**ಮಹಿಳೆಯರ ಪಾತ್ರ :** ಜೇನುಕುರುಬ ಮಹಿಳೆಯರು ಕಾಡಿನೊಂದಿಗೆ ಹೊಂದಿರುವ ಸಂಬಂಧದಂತೆಯೇ ಕಾಡಿನ ಪ್ರಾಣಿಗಳೊಂದಿಗೂ ನಿಕಟ ಸಂಬಂಧ ಹೊಂದಿದವರಾಗಿದ್ದಾರೆ. ಸಾಕು ಪ್ರಾಣಿಗಳ ಬಗೆಗಿನ ಜ್ಞಾನ, ಕ್ರೂರ ಮೃಗಗಳಿಂದ ರಕ್ಷಿಸಿಕೊಳ್ಳುವ ಜ್ಞಾನವನ್ನು ಮಹಿಳೆಯರು ಹೊಂದಿದ್ದರು. ಪ್ರೀತಿ ಪಾತ್ರವಾದ ಸಾಕುಪ್ರಾಣಿಗಳನ್ನು ಬೆಳೆಸುವ ವಿಧಾನ ತಿಳಿದಿದ್ದರು. ಕ್ರೂರ ಪ್ರಾಣಿಗಳು ಜೀವಕ್ಕೆ ಕುತ್ತುತರುವ ಸಂದರ್ಭದಲ್ಲಿ ಅವುಗಳಿಂದ ರಕ್ಷಿಸಿಕೊಳ್ಳುವ ಚಾಣಾಕ್ಷತೆಯನ್ನು ಹೊಂದಿದ್ದಾರೆ.

**ಆಧುನಿಕತೆ :** ಪ್ರಾಣಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಜೇನುಕುರುಬರು ಕಾರಣಾಂತರಗಳಿಂದ ಇಂದು ಮೃಗಾಲಯಗಳಲ್ಲಿ, ಚಿತ್ರ ಪಟಗಳಲ್ಲಿ, ಶಾಲೆಗಳಲ್ಲಿ ಮಕ್ಕಳಿಗೆ ಪ್ರಾಣಿ ಪರಿಚಯ ಮಾಡಿಸಲಾಗುತ್ತಿದೆ. ಮುಂದೊಂದು ದಿನ ಜೇನುಕುರುಬರಲ್ಲಿರುವ ಪ್ರಾಣಿಗಳ ಜ್ಞಾನ ಸಂಪೂರ್ಣವಾಗಿ ನಶಿಸಿಹೋದರೂ ಅಚ್ಚರಿಗೊಳ್ಳುವಂತಿಲ್ಲ.

### ೬. ೮. ೧. ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳುವ ಬಗೆ

ಅಬ್ಬಳತಿ ಹಾಡಿಯ ಶ್ರೀಮತಿ ಜಾನಕಮ್ಮ ನವರ ಮಾಹಿತಿಯಂತೆ, ಕಾಡಿನಲ್ಲಿ ಅಪಾಯಕರವಾದ ಪ್ರಾಣಿಗಳೆಂದರೆ, ಆನೆ, ಹುಲಿ, ಚಿರತೆ, ಕಾಡೆಮ್ಮೆ, ಕರಡಿ, ಹಾವು ಇತ್ಯಾದಿ. ಅಪಾಯ ಸಂಭವಿಸಿದಾಗ ಇವುಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಬುದ್ಧಿವಂತಿಕೆಯನ್ನು ಜೇನುಕುರುಬರು

ಹೊಂದಿರುತ್ತಾರೆ. ಕಾಡಿನಲ್ಲಿ ಎಲ್ಲಿ ಗೆಣಸು, ಸೊಪ್ಪು ಸಂಗ್ರಹಿಸುತ್ತಾರೆಯೋ ಅಲ್ಲಿನ ಸುತ್ತ ಇರುವ ಮರಗಳಿಗೆ ಮೆಟ್ಟಿಲು ಮಾಡಿರುತ್ತಾರೆ. ಕತ್ತಿಯಿಂದ ಮರದ ಕಾಂಡದಲ್ಲಿ ಹತ್ತರಿಂದ ಹನ್ನೆರಡು ಹೆಜ್ಜೆ ಇಡುವಷ್ಟು ಎತ್ತರಕ್ಕೆ ಕೊಚ್ಚಿ, ಮೆಟ್ಟಿಲು ತರಹ ಗುಂಡಿ ಮಾಡಿಕೊಳ್ಳುತ್ತಾರೆ. ಇದರಿಂದ ಮರವನ್ನು ರಭಸವಾಗಿ ಹತ್ತಲು ಸಹಾಯವಾಗುತ್ತದೆ.

**ಆನೆ** : ಆನೆಯು ಸಮೀಪದಲ್ಲಿ ಬರುತ್ತಿದೆ ಎಂಬುದನ್ನು ಹೀಗೆ ತಿಳಿಯಲಾಗುತ್ತದೆ. ಅದರ ವಾಸನೆಯಿಂದ, ಅದು ಕಿವಿ ಬಡಿಯುವ ಶಬ್ದವನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳುತ್ತಾರೆ. ಆನೆಯ ಲದ್ದಿ ಮತ್ತು ಅದರ ಮೂತ್ರದ ವಾಸನೆಯಿಂದ ಇರುವ ದೂರವನ್ನು ತಿಳಿಯುತ್ತಾರೆ. ಆನೆಯ ಕಾಲಿನ ಸಪ್ಪಳ ಬುಸ್... ಬುಸ್... ಎಂದು ಉಸಿರು ತೆಗೆದು ಕೊಳ್ಳುವುದು ಬಿಡುವುದನ್ನು ಕೇಳಿಸಿಕೊಂಡು ಪಕ್ಕದಲ್ಲಿ ಆನೆ ಇರುವುದನ್ನು ಧೃಡಪಡಿಸಿಕೊಳ್ಳುತ್ತಾರೆ. ಆಗ ಹತ್ತಿರದಲ್ಲಿ ಇರುವ ಮರವನ್ನು ಹತ್ತಿ ಕುಳಿತು ಕೊಳ್ಳುತ್ತಾರೆ. ಸೂ... ಹು... ಸೂ... ಹು... ಎಂದು ಹಾಗೂ ಚೂ... ಹ್... ಚೂ... ಹ್... ಎಂದು ಜೋರಾಗಿ ಕೂಗಿದರೆ ಆನೆ ಅಲ್ಲಿಂದ ಹೋಗುತ್ತದೆ. ಆನೆಯು ಮುಂದಕ್ಕೆ ಹೋದ ಮೇಲೆ ಮರ ಇಳಿಯುತ್ತಾರೆ.

ಕಾಡಿನಲ್ಲಿ ಹೋಗುತ್ತಿರುವಾಗ ಆನೆ ಎದುರಾದರೆ, ಅಥವಾ ದಾಳಿ ಮಾಡಿದರೆ, ದಾಳಿ ಮಾಡಲು ಪ್ರಯತ್ನಿಸಿದರೆ, ಆನೆಯ ಬಲ ದೃಷ್ಟಿ ಕಡಿಮೆ ಇರುವುದರಿಂದ ಆನೆಯ ಬಲಭಾಗಕ್ಕೆ ಓಡುತ್ತಾರೆ ಮತ್ತು ಆನೆಯ ಹಿಂದೆ ಬರಲು ಪ್ರಯತ್ನಿಸುತ್ತಾರೆ. ಆನೆಗೆಎಡದ ಕಡೆಯ ದೃಷ್ಟಿ ಹೆಚ್ಚಾಗಿರುವುದರಿಂದ ಯಾವುದೇ ಕಾರಣಕ್ಕೂ ಜೇನುಕುರುಬರು ಆನೆಯ ಎಡಭಾಗಕ್ಕೆ ಓಡುವುದಿಲ್ಲ. ಆನೆಯ ಎದುರು ನೇರವಾಗಿ ಓಡದೇ ಸೊಟ್ಟ ಸೊಟ್ಟಾಗಿ (ಝಿಗ್ ಝಾಗ್ ಮಾದರಿ) ಓಡುತ್ತಾರೆ.

**ಆನೆ ಹಾಡಿಗೆ ನುಗ್ಗಿದಾಗ** : ಆನೆಗಳು ಹಾಡಿಯ ಕಡೆ ದಿಕ್ಕೆಟ್ಟು ಬಂದಾಗ ಹಾಡಿಯ ಗುಡಿಸಲಿನಲ್ಲಿ ಜನರು ಕಿರುಚಿ ಶಬ್ದಮಾಡಿ ಭಯ ಹುಟ್ಟಿಸುತ್ತಾರೆ. ಪ್ರತಿಯೊಂದು ಗುಡಿಸಲಿಗೂ ಎರಡು ಬಾಗಿಲುಗಳಿರುತ್ತವೆ. ಮುಂದಿನ ಬಾಗಿಲ ಕಡೆಯಿಂದ ಆನೆ ಬಂದರೆ ಹಿಂದಿನ ಬಾಗಿಲಿನಿಂದ ಓಡಿ ಹೋಗುತ್ತಾರೆ.

ಹಿಂದಿನ ಬಾಗಿಲಿನಿಂದ ಆನೆ ಬಂದರೆ ಮುಂದಿನ ಬಾಗಿಲಿನಿಂದ ಓಡಿ ಹೋಗಿ ಪ್ರಾಣವನ್ನು ಉಳಿಸಿಕೊಳ್ಳುತ್ತಾರೆ. ಹತ್ತಲು ಸುಲಭವಾಗಲು ಮರಗಳಿಗೆ ಮೆಟ್ಟಿಲುಗಳನ್ನು ಮಾಡಿ ಕೊಂಡಿರುತ್ತಾರೆ. ತಮ್ಮ ತಮ್ಮ ಹಾಡಿಗಳ ಸುತ್ತ ಮುತ್ತಲೂ ಇರುವ ದೊಡ್ಡ ದೊಡ್ಡ ಮರಗಳಿಗೆ ಬಿದಿರಿನ ಉದ್ದನಾದ ಕೊಂಬೆಗೆ ಆಚೆ ಈಚೆ ಸಣ್ಣ ಸಣ್ಣ ಕಡ್ಡಿಗಳಿರುತ್ತವೆ ಅವುಗಳು ಮುಳ್ಳಿನ ರೂಪದಲ್ಲಿರುತ್ತವೆ. ಅವುಗಳನ್ನು ಚೆನ್ನಾಗಿ ಎರೆದು ನಯವಾಗಿ ಮಾಡಿಕೊಂಡು ಉದ್ದವಾದ ಮರಗಳಿಗೆ ಬಿದಿರಿನ ಕೊಂಬೆಯನ್ನು ನಿಲ್ಲಿಸಿ ಉಗಣೆ ಬಳ್ಳಿಯಿಂದ ಬಿಗಿಯಾಗಿ ಕಟ್ಟುತ್ತಾರೆ. ಕಾಡುಪ್ರಾಣಿಗಳಿಂದ ದಾಳಿ ಸಂಭವಿಸಿದ ಸಂದರ್ಭದಲ್ಲಿ ಈ ರೀತಿಯಲ್ಲಿ ಸಿದ್ಧಗೊಳಿಸಿದ ಮರಗಳನ್ನು ಏರುತ್ತಾರೆ. ಆನೆಗಳು ದೂರದವರೆಗೂ ಹೋಗುವುದನ್ನು ಕಾಯುತ್ತ ಕುಳಿತುಕೊಳ್ಳುತ್ತಾರೆ ಆನಂತರ ಇಳಿದು ಬಂದು ಗುಡಿಸಲನ್ನು ಸೇರಿಕೊಳ್ಳುತ್ತಾರೆ.

ಪ್ರತಿಯೊಂದು ಹಾಡಿಯವರೂ ಕೂಡ ಈ ರೀತಿಯಾಗಿ ಸಿದ್ಧತೆ ಮಾಡಿಕೊಂಡಿರುತ್ತಾರೆ. ಇದರ ಜೊತೆಗೆ ತೇಗದ ಮರ, ಬೂರಗಮರ, ಇಂತಹವುಗಳನ್ನು ಸ್ವಲ್ಪ ಚಕ್ಕೆಯನ್ನು ಆಯಾತಾಕಾರದಲ್ಲಿ ಕತ್ತಿಯಿಂದ ಕೆತ್ತುತ್ತಾರೆ. ಈ ರೀತಿ ಕೆತ್ತುವುದರಿಂದ ಇದರಲ್ಲೂ ಕೂಡ ಮರವನ್ನು ಏರಲು ಸಾಧ್ಯವಾಗುತ್ತದೆ. ಈ ರೀತಿ ಕೆತ್ತಿರುವ ಜಾಗದಲ್ಲಿ ಕಾಲುಗಳನ್ನು ಇಟ್ಟು ಮರ ಏರಲು ಪ್ರಾರಂಭಿಸಿದರೆ ಕಾಲು ಜಾರುವುದಿಲ್ಲ ಅಂಗಾಲಿಗೆ ಸುರಕ್ಷತೆ ಇರುತ್ತದೆ ಮತ್ತು ಬೇಗ ಬೇಗ ಮರ ಹತ್ತಲು ಸಹಾಯಕವಾಗುತ್ತದೆ. ಹೆಂಗಸರು ಮಕ್ಕಳು ಪ್ರತಿಯೊಬ್ಬರು ಮರ ಏರುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ.



ಆನೆ ಹಾಡಿಗೆ ಬಂದಾಗ ಅದನ್ನು ಓಡಿಸಲು 'ದಿಂಡಿಲ'ನ್ನು ಬಳಸುತ್ತಾರೆ. ಬಿದಿರಿನ ಕಡ್ಡಿಗಳು ಅಥವಾ ದಬ್ಬೆಗಳಿಗೆ ಹೂಗಿನ ಹಂಬು (ಹುಗಣೆ ಬಳ್ಳಿ) ಅಥವಾ ಕಾಟುವಾರೆ ಬಳ್ಳಿಯನ್ನು ಭದ್ರವಾಗಿ ಸುತ್ತಿ ದೊಡ್ಡ 'ದಿಂಡಿಲು' ಮಾಡಿಟ್ಟು ಕೊಂಡಿರುತ್ತಾರೆ. ಆನೆಗಳು ರಾತ್ರಿಯ ವೇಳೆ ದಾಳಿ ಮಾಡಿದಾಗ ಈ ದಿಂಡಿಲಿಗೆ ಬೆಂಕಿ ಹೊತ್ತಿಸಿ ಆನೆಗೆ ತೋರಿಸಲಾಗುತ್ತದೆ. ಇದರಿಂದ ಬರುವ ಹೊಗೆಯಿಂದ ಆನೆಗೆ ದಾರಿ ತೋಚದಂತಾಗಿ ಹೆದರಿ ಹಿಂದಕ್ಕೆ ಸರಿಯುತ್ತಾ ಹೋಗುತ್ತದೆ. ಹೀಗೆ ಆನೆಯನ್ನು ಓಡಿಸಿ ತಮ್ಮ ಹಾಡಿಯನ್ನು ಮತ್ತು ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ.

**ಕರಡಿ ದಾಳಿ** : ಇವರಿರುವ ಗುಡಿಸಲಿನ ಸುತ್ತಾ ಮುತ್ತಾ ಕರಡಿಗಳು ಆಹಾರಕ್ಕಾಗಿ ರಾತ್ರಿಯ ವೇಳೆ ಅಡ್ಡಾಡುತ್ತಿರುತ್ತವೆ. ಇವುಗಳ ಉಸಿರಾಟದ ಶಬ್ದ, ಕಾಲಿನ ಶಬ್ದವನ್ನು ಗ್ರಹಿಸಿಕೊಂಡು ಅವುಗಳಿಗೆ ಯಾವುದೇ ತೊಂದರೆಯನ್ನುಂಟು ಮಾಡದೇ ಇದ್ದರೆ, ಅವುಗಳು ಯಾವುದೇ ಹಾನಿಯನ್ನು ಮಾಡದೇ ಹೊರಟು ಹೋಗುತ್ತವೆ. ಬೇಟೆ ಸಂದರ್ಭದಲ್ಲಿ ಬೆಂಕಿಯ ಒತ್ತೆಗಳನ್ನು ತೋರಿಸಿ ಕರಡಿಗಳನ್ನು ಓಡಿಸುತ್ತಾರೆ.

**ಹುಲಿ** : ಹುಲಿಯ ಹೆಜ್ಜೆಯ ಗುರುತನ್ನು ಕಂಡು ಹಿಡಿಯುತ್ತಾರೆ. ಹುಲಿಯ ಮಲ ಮೂತ್ರದ ವಾಸನೆಯಿಂದ ಹುಲಿ ಇರುವಿಕೆಯನ್ನು ತಿಳಿದುಕೊಳ್ಳುತ್ತಾರೆ. ಮರಿ ಹುಲಿಯಿದ್ದರೆ ಘರ್ಜಿಸುತ್ತಾ ಓಡಾಡುವ ಸದ್ದನ್ನು ಕೇಳಿ ಕೈಯಿಂದ ನೆಲಕ್ಕೆ ಹೊಡೆದು ಅವುಗಳನ್ನು ಓಡಿಸುತ್ತಾರೆ.

**ಚಿರತೆ** : ಚಿರತೆ ಇರುವ ಸದ್ದು ಕೇಳಿ ನೆಲಕ್ಕೆ ಡಬ್, ಡಬ್ ಎಂದು ಬಡಿದು, ಕೂಗಿ, ಜೋರಾಗಿ ಶಬ್ದ ಮಾಡುವ ಮೂಲಕ ಚಿರತೆಯನ್ನು ಓಡಿಸುತ್ತಾರೆ.

**ಕಾಡೆಮ್ಮೆ** : ದೇವರನ್ನು ನೆನೆದು ಜೋರಾಗಿ ಕೂಗಿಕೊಂಡರೆ ಭಯಗೊಂಡು ಕಾಡೆಮ್ಮೆಗಳು ಓಡಿಹೋಗುತ್ತವೆ.

**ಹಾವು** : ಗುಡಿಸಲುಗಳಲ್ಲಿ ಹಾವುಗಳು ಕಂಡು ಬಂದರೆ ಅವುಗಳನ್ನು ಓಡಿದು ಕಾಡಿಗೆ ಬಿಡುತ್ತಾರೆ. ಅವುಗಳು ಕಚ್ಚಿದರೆ ಕಾಡು ಮದ್ದಿನಿಂದ ವಿಷವನ್ನು ಹೋಗಲಾಡಿಸಿ, ಗುಣಮುಖರಾಗುತ್ತಾರೆ.

### ೬. ೯. ಸಾಕು ಪ್ರಾಣಿ ಪಕ್ಷಿಗಳು

ಜೇನುಕುರುಬರು ತಮ್ಮೊಡನೆ ಅನೇಕ ಪ್ರಾಣಿಗಳನ್ನೂ ಸಹ ಸಾಕುತ್ತಿದ್ದರು. ನಾಯಿ, ಕುರಿ, ಅಳಿಲು, ಗಿಣಿ, ಹೆಗ್ಗರಕ್ಕಿ, ಕಾಗೂರಕ್ಕಿ, ನವಿಲು, ಕೋಳಿ ಸಣ್ಣೆ (ಸಣ್ಣ ಅಳಿಲು), ಆನೆ ಇತ್ಯಾದಿ ಸಾಕುತ್ತಿದ್ದರು.

### ೬. ೧೦. ಹಾವುಗಳ ವಿವರ

ಜೇನುಕುರುಬ ಮಹಿಳೆಯರು ಕಾಡಿನಲ್ಲಿ ವಾಸಿಸುತ್ತಿರುವುದರಿಂದ ತಮ್ಮ ಜೀವ ಮಾನದಲ್ಲಿ ಅನೇಕ ಬಗೆಯ ಹಾವುಗಳನ್ನು ನೋಡಿರುತ್ತಾರೆ ಅವುಗಳ ಹೆಸರು, ಅವುಗಳಿಂದ ಆಗುವ ಅಪಾಯ, ರಕ್ಷಿಸಿಕೊಳ್ಳುಬ ಬಗ್ಗೆಯನ್ನು ತಿಳಿದಿರುವವರಾಗಿರುತ್ತಾರೆ. ಕೆಲವು ಹಾವುಗಳ ಹೆಸರನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ಅರಣೆ ಉಡ ಹಾವು, ಅರಿಶಿನ ಕೇರೆಹಾವು, ಎಲೆನಾಗರ ಹಾವು, ಒಳಮುರಿಹಾವು, ಕಟ್ಟಾವು, ಕಪ್ಪೆ ಹಾವು, ಕಪ್ಪೆಮಂಡಲ ಹಾವು, ಕರಿನಾಗರ ಹಾವು, ಕುರುಡಾವು, ಕೇರೆ ಹಾವು, ಕೊಳಕುಮಂಡಲ, ಕೋಳಿಕುಟುಕ ಹಾವು, ಗೋದೇಹಾವು, ಗೊಬ್ಬರಾವು, ತರಗಾವು, ದಾಸ ಮಂಡಲಹಾವು, ಧೂಳು ಮಂಡಲಹಾವು, ನಾಗರಹಾವು, ನೀರಾಳಾವು, ನೀರುನಾಗರ ಹಾವು, ನೆರನಾಗರಹಾವು, ಬಿಳ್‌ವರಹಾವು, ಮಣ್ಣಾವು, ಮಂಡಲಹಾವು, ಹಸಿರಾವು, ಹಸಿರುನಾಗರ ಹಾವು, ಹುಲ್ಲಾವು, ಹೆಬ್ಬಾವು.

### ೬. ೧೧. ಪಾರಂಪರಿಕ ಹಾಡಿಗಳು

ಜೇನುಕುರುಬರು ವಾಸಿಸುವ ಸ್ಥಳಕ್ಕೆ 'ಪಾಳೆ' ಎಂದು ಕರೆಯುತ್ತಿದ್ದರು. ಮೊದಲು ಪಾಳೆ ಎಂದು ಕರೆದಿರುವ ಉದ್ದೇಶ, ಅವರಿಗೆ ಮನೆಯ ಕಲ್ಪನೆ ಇರಲಿಲ್ಲ. ಕಾಡಿನಲ್ಲಿ ಅಲೆಮಾರಿಗಳಾಗಿದ್ದ ಇವರು ಆಹಾರ ದೊರೆಯುವ ಜಾಗದಲ್ಲಿ ಸ್ವಲ್ಪ ದಿನ ವಾಸಮಾಡುತ್ತಿದ್ದರು. ಅಂದರೆ ಅವರಿಗೆ ಯಾವ ಸ್ಥಳದಲ್ಲಿ ಉಳಿದರೆ ಆಹಾರ ಸಿಗುತ್ತದೆ, ಜೇಟೆ, ಗೆಡ್ಡೆ, ಗೆಣಸು, ಸೊಪ್ಪು, ಜೇನು, ಹಣ್ಣು, ಎಲೆ, ಇತ್ಯಾದಿ ಅಂತಹ ಕಡೆ ನಾಲ್ಕು ಐದು ದಿನ ಉಳಿಯುತ್ತಿದ್ದರು ಮರದ ಕೆಳಗೆ ಜಾಗವನ್ನು ಹಸನು ಮಾಡಿಕೊಂಡು ಬೆಂಕಿ ಹಾಕುತ್ತಿದ್ದರು. ಅಲ್ಲಿ ಉಳಿದ ಅಷ್ಟುದಿನ ಆಹಾರ ಸಂಗ್ರಹಿಸಿ ತಿನ್ನುತ್ತಿದ್ದರು. ಹಾಗೆಯೇ ಇನ್ನೊಂದು ಜಾಗಕ್ಕೆ ಹೋಗಿ ಅಲ್ಪ ಸ್ವಲ್ಪದಿನ ಉಳಿಯುತ್ತಿದ್ದರು ಹೀಗೆ ಕಾಡಿನಾದ್ಯಂತ

ಸಂಚರಿಸುತ್ತಾ ಹೊಟ್ಟೆ ಹೊರೆಯುತ್ತಿದ್ದರು. ಹೀಗೆ ಮೂರು ನಾಲ್ಕು ದಿನ ಅಥವಾ ಒಂದು ತಿಂಗಳು ಹೀಗೆ ಉಳಿಯುತ್ತಿದ್ದ ಜಾಗಕ್ಕೆ 'ಪಾಳೆ' ಎಂದು ಕರೆಯುತ್ತಿದ್ದರು.

ಜೇನುಕುರುಬರು ಕಾಡಿನಲ್ಲಿ ಒಂದೇ ಕಡೆ ಗುಂಪು ಗುಂಪಾಗಿ ಗುಡಿಸಲುಗಳನ್ನು ರಚಿಸಿಕೊಂಡು ವಾಸಿಸುತ್ತಾರೆ. ಈ ರೀತಿಯ ವಾಸದ ನೆಲೆಗಳನ್ನು ಅವರು 'ಹಾಡಿ'ಗಳೆಂದು ಕರೆಯುವರು. ಒಂದೊಂದು ಹಾಡಿಯಲ್ಲಿ ೧೫ ರಿಂದ ೨೦ ಕುಟುಂಬಗಳು ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಸಂಖ್ಯೆಯ ಕುಟುಂಬಗಳು ಕಂಡು ಬರುತ್ತವೆ. ಅವುಗಳನ್ನು ಹೆಚ್ಚಾಗಿ ನೀರಿನ ಸೌಕರ್ಯಗಳಿರುವ ಸ್ಥಳಗಳಲ್ಲಿ ನಿರ್ಮಿಸಿಕೊಳ್ಳುತ್ತಾರೆ. ಜೇನುಕುರುಬರ ಹಾಡಿಗಳು ಚಿಕ್ಕದಾಗಿ ಚೊಕ್ಕವಾಗಿ ಕಂಡುಬರುತ್ತವೆ.

ಹಾಡಿಯೊಳಗೆ ವೃತ್ತಾಕಾರವಾಗಿ ಗುಡಿಸಲು ನಿರ್ಮಿಸಿಕೊಂಡಿರುತ್ತಾರೆ. ಮಧ್ಯಭಾಗದಲ್ಲಿ ಖಾಲಿ ಸ್ಥಳವನ್ನು ಬಿಟ್ಟಿರುತ್ತಾರೆ. ಈ ಸ್ಥಳದಲ್ಲಿ ಸಾಮಾನ್ಯವಾಗಿ ಯಾವುದೇ ಕುಲಪಂಚಾಯತಿ ಇತ್ಯಾದಿ ವಿಧಿ ನಿಷೇಧಗಳು ಈ ಸ್ಥಳದಲ್ಲಿ ಜರಗುತ್ತವೆ. ಹಾಡಿಯ ಈ ಮಧ್ಯಭಾಗದಲ್ಲಿ ಸಾಮಾನ್ಯವಾಗಿ ಬೆಂಕಿ ಹಾಕಿರುತ್ತಾರೆ. ಇದೇ ಅವರಿಗೆ ಬೆಳಕು ಮತ್ತು ದೀಪವಾಗಿರುತ್ತದೆ. ಕೆಲವು ಗುಡಿಸಲುಗಳ ಹೊರ ಭಾಗಗಳಲ್ಲಿ ಒಂದೆಡೆ ಅರೆಯುವ ಕಲ್ಲು ಇನ್ನೊಂದೆಡೆ ಕೋಳಿ ಗೂಡುಗಳು ಇರುತ್ತವೆ.

ಹೀಗೆ ಅನೇಕ ವರ್ಷಗಳು ಕಳೆದ ನಂತರ ಸೊಪ್ಪಿನ ಗುಡಿಸಲು ಮಾಡುವುದು ಅದರಲ್ಲಿ ವಾಸಮಾಡುವ ಕಲ್ಪನೆಯನ್ನು ಮಾಡಿ ಕಾಡಿನಲ್ಲಿರುವ ದೊಡ್ಡ ದೊಡ್ಡ ಪೊಟರೆಯನ್ನು, ಮುಳ್ಳು ಕಲ್ಲುಗಳಿಂದ ಬೇರ್ಪಡಿಸಿ ಇನ್ನಿತರೆ ಮರಗಳ ಸೊಪ್ಪನ್ನು ಕಡಿದು ಆ ಪೊಟರೆಗಳಿಗೆ ಹೊದಿಸುತ್ತಿದ್ದರು ಇದರಿಂದ ಅವರಿಗೆ ಚಳಿ ಗಾಳಿ ಮಳೆಯಿಂದ ರಕ್ಷಣೆ ಸಿಗುತ್ತಿತ್ತು. ಈ ರೀತಿಯ ಪೊಟರೆಗಳಲ್ಲಿ ವರ್ಷಾನು ಗಟ್ಟಲೆ ದಿನ ಕಳೆಯುತ್ತಿದ್ದರು. ಕಾಲ ಕಳೆದ ನಂತರ ಸಂತತಿ ಹೆಚ್ಚಿ ಜನಸಂಖ್ಯೆಯೂ ಹೆಚ್ಚಾಗಿ ಗುಂಪು ಗುಂಪಾಗಿ ವಾಸಿಸುವುದನ್ನು ಕಲಿತರು. ಗುಂಪು ಜನಗಳ ಸಂಖ್ಯೆ ಹೆಚ್ಚಾದಂತೆ ಒಂದು ಕಡೆ ವಾಸಿಸುವುದನ್ನು ಕಲಿತರು. ಗುಂಪು ಗುಂಪು ಗುಡಿಸಲು ನಿರ್ಮಿಸಿಸುತ್ತಿದ್ದರು. ಬಿದಿರಿನ ಮರದ ಕೊಂಬೆಗಳನ್ನು ಸೀಳಿ ಮರಗಳ ಕಾಂಡಭಾಗದ ಸಪೂರಾದ ಭಾಗವನ್ನು ನಯವಾಗಿ ಕತ್ತರಿಸಿಕೊಂಡು ಬಿದಿರಿನ ಬೊಂಬನ್ನು ಹಾಕಿ ಅವುಗಳ ಮೇಲೆ ಕಾಡಿನಲ್ಲಿ ಸಿಗುವ ಸೇನೆಹುಲ್ಲು, ಗರಿಕೆ ಹುಲ್ಲುಗಳಿಂದ ಹೊದಿಸುತ್ತಿದ್ದರು. ಆನಂತರ ಅರಣ್ಯ ಇಲಾಖೆಯ ನಿಯಮಗಳು ಜಾರಿಯಾದಂತೆ ಇವರನ್ನು ಒಕ್ಕಲೆಬ್ಬಿಸಿ ಕಾಡಂಚಿಗೆ ತಂದು ಬಿಟ್ಟು ಸರ್ಕಾರದ ಯೋಜನೆಗಳಲ್ಲಿ ಬಂದ ಅನುದಾನದಲ್ಲಿ ಹೆಚ್ಚಿನ ಮನೆಗಳನ್ನು ನಿರ್ಮಿಸಿ ಅಲ್ಲಿ ವಾಸಿಸುವಂತೆ ಒತ್ತಾಯ ಮಾಡಿದರು. ಇತ್ತೀಚೆಗೆ ಆರ್‌ಸಿಸಿ ಮೇಲ್ಛಾವಣಿಯನ್ನು ಹೊಂದಿದ ಮನೆಗಳನ್ನು ನಿರ್ಮಿಸಿದ್ದಾರೆ. ಕಾಡಿನಲ್ಲಿ ಹಾರಾಡುತ್ತಿದ್ದ ಸ್ವಚ್ಛಂದ ಹಕ್ಕಿಗಳಿಗೆ ಈಗ ಅತಂತ್ರ ಕಾಡುತ್ತಿದೆ.

ಪ್ರತಿಯೊಂದು ಜೇನುಕುರುಬರ ಹಾಡಿಗೆ ಒಬ್ಬರಂತೆ ಯಜಮಾನ ಇರುತ್ತಾನೆ. ಹಾಡಿಯ ಯಾವುದೇ ವಿಚಾರ ಇವನ ತೀರ್ಮಾನವನ್ನು ಅವಲಂಬಿಸಿರುತ್ತದೆ. ಹಾಡಿಯವರ ಹೊರತಾಗಿ ಅನ್ಯರು

ಹಾಡಿಯನ್ನು ಪ್ರವೇಶಿಸಲು ಯಜಮಾನನ ಅಪ್ಪಣೆ ಬೇಕು. ಜೇನುಕುರುಬರಲ್ಲಿ ಹಾಡಿಗಳನ್ನು ಪ್ರವೇಶಿಸಲು ಕೆಲವು ನಿಯಮಗಳಿವೆ. ಅದಕ್ಕೆ ಸಂಬಂಧಿಸಿದಂತೆ ಅವರ ಕುಟುಂಬಗಳಲ್ಲಿ ಒಳಗಿನವರು ಮತ್ತು ಹೊರಗಿನವರು ಎಂಬ ಶಬ್ದಗಳ ಬಳಕೆಯಾಗುತ್ತದೆ. ಗಂಡ ಹೆಂಡತಿ ಹಾಗೂ ಮದುವೆಯಾಗದ ಮಕ್ಕಳು ಒಟ್ಟಾಗಿ ಕುಟುಂಬದ ಸದಸ್ಯರು ಒಳಗಿನವರು ಎನಿಸಿಕೊಂಡರೆ, ಮದುವೆಯಾದ ಮಕ್ಕಳು ತಮ್ಮದೇ ಆದ ನೆಲೆಯನ್ನು ಕಂಡು ಕೊಂಡಿರುವುದರಿಂದ ಹೊರಗಿನವರು ಆಗುತ್ತಾರೆ. ಮದುವೆಯಾಗಿ ಪರರ ಮನೆಗೆ ಹೋದ ಹೆಣ್ಣುಮಕ್ಕಳು ತವರು ಮನೆಯ ಪಾತ್ರೆಗಳನ್ನು ಮುಟ್ಟುವಂತಿಲ್ಲ. ತಟ್ಟೆಯಲ್ಲಿ ಊಟ ಮಾಡುವಂತಿಲ್ಲ. ಊಟ ಮಾಡುವುದಾದರೆ ಗುಡಿಸಲಿನ ಹೊರಗಡೆಯೇ ಎಲೆಯಲ್ಲಿ ಉಣ್ಣ ಬಹುದು. ಆದರೆ ಮದುವೆಯಾದ ಮಗ ಗುಡಿಸಲನ್ನು ಪ್ರವೇಶಿಸಬಹುದು. ಆದರೆ ತಲೆಯ ಕಡೆಯವರೆಗೆ ಮಾತ್ರ ಹೋಗಬಹುದು. ಹಾಗೆಯೇ ಸೊಸೆಯಾದರೂ ತಲೆಯ ಕಡೆಯವರೆಗೆ ಮಾತ್ರ ಹೋಗಬಹುದು. ಅದು ಕೂಡ ಮಾವ ಗುಡಿಸಲಿನಲ್ಲಿ ಇಲ್ಲದಿದ್ದಾಗ ಹಾಗೂ ಹೊರಗಿನಿಂದ ಆಕೆ ಕೂಗಿದಾಗ ಒಳಗಿನಿಂದ ಉತ್ತರ ಬರದಿದ್ದಾಗ ಮಾತ್ರ ಆಕೆ ಗುಡಿಸಲನ್ನು ಪ್ರವೇಶಿಸಬಹುದು.

ಔಪಚಾರಿಕ ಆಹ್ವಾನಗಳನ್ನಿಟ್ಟು ಯಾರನ್ನಾಗಲೀ ಗುಡಿಸಲಿಗೆ ಆಮಂತ್ರಿಸುವುದನ್ನು ಹಾಡಿಗಳಲ್ಲಿ ಕಾಣಲಾಗುವುದಿಲ್ಲ. ಆದರೆ ತಾವಾಗಿಯೇ ಅತಿಥಿಗಳು ಬಂದಾಗ ಸಂಪ್ರದಾಯಕ್ಕನುಗುಣವಾಗಿ ನಡೆದುಕೊಳ್ಳುತ್ತಾರೆ. ಸಂಬಂಧಿಕರು ಬಂದಾಗ ನಡೆಸುವ ಸಂಪ್ರದಾಯಕ್ಕಿಂತ ಭಿನ್ನವಾದ ಸಂಪ್ರದಾಯವನ್ನು ಸಂಬಂಧಿಗಳಲ್ಲದವರು ಗುಡಿಸಲಿಗೆ ಬಂದಾಗ ನಡೆಸುವುದನ್ನು ಕಾಣಬಹುದು. ಹಾಡಿಯ ವ್ಯಕ್ತಿಗೆ ಮತ್ತೊಬ್ಬನನ್ನು ಭೇಟಿಯಾಗಬೇಕು ಎನಿಸಿದರೆ ಅವನ ಗುಡಿಸಲಿನ ಒಳಗೆ ಹೋಗಿ ಕೂಗುತ್ತಾನೆ. ಹಾಗೆ ಕೂಗಿ ಗುಡಿಸಲುಗಳ ಮಧ್ಯದ ಅಗ್ನಿಕುಂಡದ ಹತ್ತಿರ ಕುಳಿತುಕೊಳ್ಳುತ್ತಾನೆ. ಗುಡಿಸಲಿನಲ್ಲಿದ್ದ ಕರೆಸಿಕೊಂಡ ವ್ಯಕ್ತಿ ಹೊರಬಂದು, ಅಗ್ನಿಕುಂಡದ ಬಳಿ ಕಾಯುತ್ತಾ ಕುಳಿತವನ ಹತ್ತಿರ ಹೋಗಿ ಮಾತನಾಡುತ್ತಾನೆ. ಹೀಗೆ ಒಳಗಿನವರು, ಹೊರಗಿನವರು, ಸಂಬಂಧಿಕರು, ಸಂಬಂಧಿಗಳಲ್ಲದವರು ಎಂಬ ಸಾಮಾಜಿಕ ಅಂತರಗಳು ಜೇನುಕುರುಬರಲ್ಲಿ ಕಂಡು ಬರುತ್ತದೆ.

**ಮಹಿಳೆಯರ ಪಾತ್ರ** : ಪಾರಂಪರಿಕ ಹಾಡಿಗಳ ನಿರ್ಮಾಣದಲ್ಲಿ ಮಹಿಳೆಯರು ತಮ್ಮದೇ ಆದ ಜವಾಬ್ದಾರಿಗಳನ್ನು ಹೊಂದಿರುತ್ತಾರೆ. ಕಾಡಿನಲ್ಲಿ ಆಹಾರಾನ್ವೇಷಣೆಗಾಗಿ ಸ್ಥಳವನ್ನು ಆಗಾಗ ಬದಲಾವಣೆ ಮಾಡಬೇಕಾಗಿರುವುದರಿಂದ ಪಾರಂಪರಿಕವಾಗಿ ಅಲ್ಲಿ ಹಾಡಿಗಳನ್ನು ನಿರ್ಮಿಸುವಲ್ಲಿ ಮಹಿಳೆಯರು ಪುರುಷರಿಗೆ ಸಹಾಯ ಮಾಡುತ್ತಾರೆ. ಪ್ರಕೃತಿಗೆ ಹೆಚ್ಚು ಒತ್ತು ಕೊಡುತ್ತಿದ್ದರು.

**ಆಧುನಿಕತೆ** : ಇವತ್ತಿನ ಕಾಂಕ್ರೀಟ್ ಜಗತ್ತಿನಲ್ಲಿ ಕಾಂಕ್ರೀಟು ಕಾಡುಗಳು ನಿರ್ಮಾಣವಾಗುತ್ತಿದೆ. ಇದು ಜೇನುಕುಬರಿಗೂ ಹೊರತಾಗಿಲ್ಲ. ಸಿಮೆಂಟ್, ಕಬ್ಬಿಣ, ಮರಳು ಮುಂತಾದ ಆಧುನಿಕ ಉತ್ಪನ್ನಗಳ ಭರಾಟೆಯಲ್ಲಿ ಪಾರಂಪರಿಕ ಜ್ಞಾನಕ್ಕೆ ಹೊಡೆತ ಬಿದ್ದಿದೆ.

## ೬. ೧೧. ೧. ಆಧುನಿಕ ಕಾಲೋನಿಗಳು





ತಲೆ ತಲಾಂತರಗಳಿಂದ ಕಾಡಿನಲ್ಲಿಯೇ ಹುಟ್ಟಿ ಕಾಡಿನಲ್ಲಿಯೇ ಬೆಳೆದುಬಂದ ಜೇನುಕುರುಬ ಸಾಂಸ್ಕೃತಿಕ ಸಮುದಾಯವನ್ನು ಆಳುವ ಸರ್ಕಾರಗಳು ತನ್ನಿಚ್ಛೆಯಂತಿರುವ ಮುಖ್ಯವಾಹಿನಿ ಎಂಬ ಕಾಂಕ್ರೀಟ್ ಕಾಡಿನ ಬದುಕಿಗೆ ಜೇನುಕುರುಬರನ್ನು ಒಲ್ಲದ ಮನಸ್ಸುಗಳಿಂದ, ಕೆಲವೊಂದು ಕಡೆ ಬಲವಂತವಾಗಿ ಕಾಡಿನಿಂದ ಹೊರ ಹಾಕಲಾಗುತ್ತಿದೆ. ಇಲ್ಲಿ ಎಲ್ಲವೂ ಕಾಂಕ್ರೀಟ್‌ನಿಂದ ಆವೃತವಾಗಿರುತ್ತದೆ. ಇಲ್ಲಿ ಪಾರಂಪರಿಕ ಸಾಂಸ್ಕೃತಿಕ ಹಾಡಿಗಳ ಕಲ್ಪನೆ ಸಾಧ್ಯವಾಗುವುದಿಲ್ಲ. ನಿರ್ದಿಷ್ಟ ಅಳತೆಯ ರಸ್ತೆಗಳು, ಅವುಗಳ ಪಕ್ಕದಲ್ಲಿ ಚರಂಡಿಗಳು, ಏಕರೂಪದಲ್ಲಿ ಸಾಲುಸಾಲಾಗಿ ನಿರ್ಮಿಸಿರುವ ವಸತಿಗಳು. ಇಲ್ಲಿ ನಗರೀಕರಣದ ಪ್ರಾಥಮಿಕ ಹಂತವನ್ನು ಕಾಣುತ್ತೇವೆ.

## ೬. ೧೨. ಪಾರಂಪರಿಕ ವಸತಿ

ಸೊಳ್ಳೆಪುರ ಹಾಡಿಯ ನಿಂಗಮ್ಮ ಇವರ ಮಾಹಿತಿಯಂತೆ ಹತ್ತು ರಿಂದ ಇಪ್ಪತ್ತು ಕುಟುಂಬಗಳು ಒಂದು ಕಡೆ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸ ಮಾಡುತ್ತೇವೆ. ಇದಕ್ಕೆ 'ಹಾಡಿ' ಎಂದು ಕರೆದುಕೊಂಡಿದ್ದೇವೆ. ಗುಡಿಸಲನ್ನು ಯಾವಾಗಲೂ ನಾಲ್ಕು ಕಡೆಯಿಂದ ಗೋಪುರ ಇರುವಂತೆ ನಿರ್ಮಿಸುತ್ತೇವೆ ಅದನ್ನು 'ಮೋತಿ ಮನೆ' ಎನ್ನುತ್ತೇವೆ. ಇದರ ಉದ್ದ ಎಷ್ಟಿರುತ್ತದೆಯೋ ಅಗಲವೂ ಅಷ್ಟೆ ಇರುತ್ತದೆ. ಮಳೆಯು ಹೆಚ್ಚು ಬೀಳುತ್ತಿದ್ದುದರಿಂದ ಗುಡಿಸಲಿನ ಮೇಲೆ ನೀರು ನಿಲ್ಲದಂತೆ ಜಾರಿ ಹೋಗಲೆಂದು ಈ ರೀತಿ ನಿರ್ಮಿಸುತ್ತಿದ್ದರು ಜೊತೆಗೆ ಅಡುಗೆ ಮಾಡಿದಾಗ ಹೊಗೆಯು ಗುಡಿಸಲಿನಲ್ಲಿ ಹರಡಬಾರದು ಎಂಬ ಉದ್ದೇಶದಿಂದ ಬಿದಿರು ಗೋಡೆಯನ್ನು ಮೇಲ್ಭಾಗದಲ್ಲಿ ಸ್ವಲ್ಪ ಜಾಗವನ್ನು ಛಾವಣಿಗೆ ತಗುಲದ ಹಾಗೆ ಕಟ್ಟಿರುತ್ತಾರೆ ಇದರಿಂದ ಬೆಳಗಿನ ವೇಳೆ ಗುಡಿಸಲಿಗೆ ಬೆಳಕು ಬರುತ್ತದೆ ಅಡುಗೆ ಮಾಡುವಾಗ ಹೊಗೆ ಗುಡಿಸಲಿಂದ ಹೊರಗೆ ಹೋಗುತ್ತದೆ ಎಂಬ ಉದ್ದೇಶವಿತ್ತು. ಜೊತೆಗೆ ಹಾಡಿಯಲ್ಲಿ ಗುಡಿಸಲಿನ ಮುಂದೆ ಮರಗಳಿದ್ದರೆ ಮರದ ಬುಡದಲ್ಲಿಯೂ ಅಡುಗೆಯನ್ನು ಮಾಡುವ ವಿಧಾನವಿದೆ. ಪುರಾತನ ಕಾಲದಿಂದಲೂ ಈ ಸಂಪ್ರದಾಯವಿರುವುದರಿಂದ ಇಂದಿಗೂ ಇದನ್ನೇ ರೂಢಿಸಿಕೊಂಡಿದ್ದಾರೆ.

ಕಾಡಿನಲ್ಲಿಯೇ ವಾಸಿಸುವ ಇವರು ಸಹಜವಾಗಿಯೇ ಅಲ್ಲಿ ದೊರೆಯುವ ಬಿದಿರು, ದರ್ಜೆಹುಲ್ಲು, ಗರಿಗಳನ್ನು ಬಳಸಿಕೊಂಡು ಮಣ್ಣು, ನೀರು, ನಾರುಗಳನ್ನು ಸೇರಿಸಿಕೊಂಡು ದುಂಡಾಕೃತಿಯ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಇವರು ಗುಡಿಸಲನ್ನು ನಿರ್ಮಿಸುವ ಮೊದಲು ಕನಿಷ್ಟ ನೆಲ ಮಟ್ಟದಿಂದ ಎರಡರಿಂದ ಮೂರು ಅಡಿಗಳಷ್ಟು ಎತ್ತರವನ್ನು ಕಾಯ್ದುಕೊಳ್ಳುತ್ತಾರೆ. ಇದಕ್ಕೆ ಪಾರಂಪರಿಕ ಕಾರಣಗಳನ್ನು ಈ ರೀತಿ ಹೇಳುತ್ತಾರೆ.

- ಕಾಡಿನಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆಯಾಗುವುದರಿಂದ ಮಳೆ ನೀರು ಸುಲಭವಾಗಿ ಗುಡಿಸಲಿನ ಒಳಗೆ ನುಗ್ಗುವುದನ್ನು ತಡೆಯುವುದು.
- ಯಾವುದೇ ಸರಿಸೃಪಗಳು ಹಾವು, ಚೇಳು ಮೊದಲಾದವುಗಳು ಚಲಿಸಲು ನೆಲಮಟ್ಟದ ಗೋಡೆಯ ಅಂಚನ್ನು ಬಳಸುವುದರಿಂದ ಸುಲಭವಾಗಿ ಮನೆಯೊಳಗೆ ಪ್ರವೇಶಿಸದೇ ಅವುಗಳ ಪಾಡಿಗೆ ಅವು ಕೂಡ ಜೀವಿಸಲು ಸಾಧ್ಯವಾಗುತ್ತದೆ.
- ಜಗುಲಿಯನ್ನು ನಿರ್ಮಿಸುವುದರಿಂದ ಅಲ್ಲಿ ಕುಳಿತುಕೊಳ್ಳಬಹುದು.

ಜೇನುಕುರುಬರ ಗುಡಿಸಲುಗಳಿಗೆ ಎರಡು ಕಿರಿದಾದ ಬಾಗಿಲುಗಳು ಇರುತ್ತವೆ. ಒಳಕ್ಕೆ ಹೋಗಿ ಬರುವುದಕ್ಕೆ ಒಂದು ತಗ್ಗಾದ ಬಾಗಿಲು ಮತ್ತು ಕಾಡು ಪ್ರಾಣಿಗಳಿಂದ ರಕ್ಷಣೆಗಾಗಿ ಹಿಂಬದಿಯಲ್ಲಿ ಮತ್ತೊಂದು ಬಾಗಿಲನ್ನು ಬಿಟ್ಟರೆ ಬೇರೆ ಯಾವ ಪ್ರವೇಶದ್ವಾರವೂ ಇರುವುದಿಲ್ಲ. ಕಿಟಕಿಗಳೂ ಕಂಡು ಬರುವುದಿಲ್ಲ. ಆದರೆ ಇತ್ತೀಚೆಗೆ ಹಾಕಲಾಗಿರುವ ಕೆಲವು ಗುಡಿಸಲುಗಳು ಸ್ವಲ್ಪಮಟ್ಟಿಗೆ ವಿಶಾಲವಾಗಿವೆ. ಕೆಲವು ಗುಡಿಸಲುಗಳಲ್ಲಿ ಮಣ್ಣಿನ ಗೋಡೆಗಳಿವೆ. ಕೆಲವು ಗುಡಿಸಲುಗಳ ಹೊರ ಗೋಡೆಗಳಿಗೆ ಮಣ್ಣನ್ನು ಬಳಸದೇ ಬಿದಿರಿನ ತೆಳುವಾದ ದಬ್ಬೆಗಳನ್ನು ಚಾಪೆಗಳಂತೆ ಹೆಣೆದು, ಆ ಚಾಪೆಯಾಕಾರದ ತಡಿಕೆಗಳನ್ನು ಚೌಕಾಕಾರದ ಆಯಕಟ್ಟಿನ ನಾಲ್ಕು ಮೂಲೆ ಕಂಬಗಳಿಗೆ ಬಿಗಿದು ಕಟ್ಟಿರುತ್ತಾರೆ. ಕಾಡಿನ ಸೊಪ್ಪು ಅಥವಾ ತೊರೆ, ನದಿ ದಂಡೆಗಳಲ್ಲಿ ಬೆಳೆಯುವ ಜೊಂಡು ಹುಲ್ಲನ್ನು ಇಳಿಜಾರಾಗಿ ಹಾಸಿ ಕಟ್ಟಿ ಹೊದಿಸಿರುತ್ತಾರೆ. ಗುಡಿಸಲಿನ ಒಳಗೆ ಮಧ್ಯಭಾಗದಲ್ಲಿ ಬಿದಿರಿನ ತಡಕೆ ಇಟ್ಟು ಎರಡು ಭಾಗಗಳಾಗಿ ಮಾಡಿಕೊಂಡು ಒಂದು ಭಾಗವನ್ನು ಅಡುಗೆ ಮನೆಯಾಗಿ ಬಳಸುತ್ತಾರೆ. ಒಟ್ಟಾಗಿ ಕುಳಿತುಕೊಂಡು ಮಾತನಾಡುವುದಕ್ಕೆ ಹಾಗೂ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಉಳಿದರ್ಧ ಭಾಗವನ್ನು ಉಪಯೋಗಿಸಿಕೊಳ್ಳುತ್ತಾರೆ.

ಗುಡಿಸಲು ಮುಂಭಾಗದಲ್ಲಿ ಗೋಡೆಗೆ ಸೇರಿಸಿದಂತೆ ಮಣ್ಣಿನಿಂದ ನಿರ್ಮಿಸಿದ ಸಗಣಿ ಅಥವಾ ಒರೀ ಸೇರಿಸಿದ ಚೆನ್ನಾಗಿ ಸಾರಿಸಲಾಗಿರುವ ಜಗುಲಿಗಳಿರುವುದು ಕಂಡು ಬರುತ್ತದೆ. ಸಂಪ್ರದಾಯಕ್ಕೆ ಅನುಸಾರವಾಗಿ ಹಾಕಿಕೊಳ್ಳುವ ಗುಡಿಸಲುಗಳನ್ನು ಪ್ರವೇಶಿಸುವ ಸಮಾರಂಭವನ್ನು ಇವರು ಆಚರಣೆ ಮಾಡುತ್ತಾರೆ. ಗುಡಿಸಲುಗಳಲ್ಲಿ ಇವರೇ ಸ್ವತಃ ಹುಲ್ಲಿನಿಂದ ತಯಾರಿಸಿರುವ ಚಾಪೆಗಳನ್ನು ಬಿಟ್ಟರೆ ಬೇರೆ ರೀತಿಯ ಯಾವ ಪೀಠೋಪಕರಣಗಳೂ ಕಂಡು ಬರುವುದಿಲ್ಲ. ಹೊಸದಾಗಿ ವಿವಾಹವಾದ ದಂಪತಿಗಳು ಬೇರೆ ಗುಡಿಸಲನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ನೆಲೆಸುತ್ತಾರೆ. ಇದಕ್ಕೆ ಯಾರ ಅಡೆತಡೆಯೂ ಇರುವುದಿಲ್ಲ.

ಗುಡಿಸಲು ಕಟ್ಟುವಾಗ ನೆಲವನ್ನು ಕಲ್ಲಿನಿಂದ ಒಡೆದು ಚೆನ್ನಾಗಿ ಧಮಸ್ಸು (ಗಟ್ಟಿ ಗೊಳಿಸು) ಮಾಡುತ್ತಾರೆ. ಆ ಮೇಲೆ ತೂಪುರದ ಮರದ ಚಕ್ಕೆಯನ್ನು ಬೇಯಿಸಿ ಬಂದ ನೀರನ್ನು ಮೇಲ್ಪದರದ ಮಣ್ಣಿಗೆ ಸವರಿ ಒಣಗಿಸುತ್ತಾರೆ. ಅದರಲ್ಲಿ ಎಣ್ಣೆಯ ಅಂಶ ಇರುವುದಿಲ್ಲ. ನೀರನ್ನು ಹೀರಿ ಕೊಳ್ಳುವುದಿಲ್ಲ. ಗೋಡೆಗಳಿಗೆ ಮತ್ತು ನೆಲಕ್ಕೆ ಹಳೆಯ ಬ್ಯಾಟರಿಯ ಪೌಡರ್, ಮಣ್ಣು, ಇದ್ದಿಲು, ಸಗಣಿಯನ್ನು ಸೇರಿಸಿ ಸಾರಿಸುತ್ತಾರೆ. ಎರಡನೇ ಸಲ ಒರೆ ಮಣ್ಣನ್ನು ಹಾಕುವುದು ಒರೆಮಣ್ಣು ಎಂದರೆ ಮೊದಲು ಸಾರಿಸಿದ ಜಾಗದಲ್ಲಿ ಬಿರುಕುಗಳಿದ್ದರೆ ಅದಕ್ಕೆ ಎರಡನೆ ಬಾರಿ ಬಿರುಕುಗಳನ್ನು ಮುಚ್ಚುವುದು ಎಂದರ್ಥ.

ಮೂರನೇ ಬಾರಿಗೆ ಸಗಣಿ ಮತ್ತು ಗದ್ದೆಯ ಮರಳು ಮಣ್ಣನ್ನು ಹಾಕಿ ಮಿಶ್ರಣ ಮಾಡಿ ಸಾರಿಸುತ್ತಾರೆ. ಈ ರೀತಿ ಮಾಡಿದ ನೆಲ ಕಪ್ಪು ಬಣ್ಣದಿಂದ ಕೂಡಿದ್ದು, ಸಿಮೆಂಟ್ ನೆಲದಂತೆ ನುಣುಪಾಗಿರುತ್ತದೆ. ಉಲುವಮತ್ತಿ ಮರದ ಚಕ್ಕೆ, ಸೊಪ್ಪು ಕುಟ್ಟಿ ನೀರಿಗೆ ಹಾಕಿ ಮನೆಯನ್ನು ಸಾರಿಸುತ್ತಾರೆ. ಇದರಿಂದ ಕ್ರಿಮಿ ಕೀಟಗಳು ಬರುವುದಿಲ್ಲ.



ಕೆಲವರು ಮನೆಯ ಮುಂದೆ ಹತ್ತು ಹದಿನೈದು ಅಡಿಗಳಷ್ಟು ಎತ್ತರದ ಬಿದಿರಿನ ಅಟ್ಟಣಿಗೆಯನ್ನು ಕಟ್ಟುತ್ತಾರೆ. ಕಾಡು ಪ್ರಾಣಿಗಳು ಸುತ್ತ ಮುತ್ತ ಇರಬಹುದು ಎಂಬುದಾಗಿ ಅನುಮಾನ ಬಂದರೆ, ಅದರ ಮೇಲೆ ಹತ್ತಿ ನೋಡುತ್ತಾರೆ. ಕಾಡು ಪ್ರಾಣಿಗಳು ಇರುವುದು ನಿಜವಾದರೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಾರೆ.

ಗುಡಿಸಲಿನ ಸುತ್ತ ಇರುವ ಮರಗಳು ಗುಡಿಸಲಿನ ಮೇಲೆ ಬೀಳದ ಹಾಗೆ ಗುಡಿಸಲಿನ ಕಡೆ ಬಾಗಿರುವ ಕೊಂಬೆಗಳನ್ನು ಕಡಿದಿರುತ್ತಾರೆ. ಮರ ಬೀಳುವ ಸಂದರ್ಭದಲ್ಲಿ ವಜೆ ಕಡಿಮೆಯಾಗಿ ವಿರುದ್ಧ ದಿಕ್ಕಿಗೆ ಬೀಳುತ್ತದೆ. ಇದರಿಂದ ಗುಡಿಸಲಿಗೆ ಯಾವುದೇ ಹಾನಿಯಾಗುವುದಿಲ್ಲ.

**ಅಡುಗೆ ಒಲೆ** : ಎರಡು ಅಡಿ ಎತ್ತರದಲ್ಲಿ ಮಣ್ಣನ್ನು ಏರಿಸಿ ಅಡುಗೆ ಮಾಡುವ ಒಲೆಗಳನ್ನು ಕಟ್ಟುತ್ತಾರೆ. ಒಲೆಗಾಗಿ ಅಗತ್ಯವಿರುವ ಮೂರು ಗುಮಟುಗಳನ್ನು ತೆಂಗಿನ ಚಿಪ್ಪಿಗೆ ಜೇಡಿ ಮಣ್ಣನ್ನು ತುಂಬಿಸಿ ಅದನ್ನು ಬೋರಲಾಗಿ ಹಾಕಿ ನಿರ್ಮಿಸುತ್ತಾರೆ. ಸಣ್ಣಗೆ ಮೂರು ದುಂಡಗಿನ ಗುಮಟು ಮಾಡಿ ಮೂರು ಕಡೆ ಇಡುತ್ತಾರೆ. ಆಗ ಮಡಕೆಯು ಒಲೆಯಲ್ಲಿ ಜಾರದ ಹಾಗೆ ಸರಿಯಾಗಿ ಕುಳಿತುಕೊಳ್ಳುತ್ತದೆ. ಈ ರೀತಿಯಾಗಿ ಅಡುಗೆ ಒಲೆಯನ್ನು ಸಿದ್ಧ ಮಾಡಿಕೊಳ್ಳುತ್ತಾರೆ.

**ಅಡುಗೆ ಪಾತ್ರೆ** : ತೆಂಗಿನಕಾಯಿ ಒಡೆದು ಕಾಯಿ ತುರಿದು ಉಳಿದ ಕರಟದಲ್ಲಿ ಸೌಟು ಮಾಡಿಕೊಂಡು ಸಾರು ಮಜ್ಜಿಗೆ ಬಡಿಸಿಕೊಳ್ಳಲು ಬಳಸುತ್ತಿದ್ದರು. ಮಡಕೆಗಳಲ್ಲಿ ಅನ್ನ, ಸಾರು ಮಾಡುತ್ತಿದ್ದರು. ಊಟದ ತಟ್ಟೆಗೆ ಬಿದಿರಿನ ಕಾಂಡದಲ್ಲಿ ಬರುವ ಸುರುಳಿ ಸುರುಳಿಯಾದ ಎಲೆಯನ್ನು ತಂದು ಬಳಸಿಕೊಳ್ಳುತ್ತಿದ್ದರು. ಕಳಲೆ (ಬಿದಿರು)ಯಲ್ಲಿ ಬರುವ ಕಡ್ಡಿಗಳು ಮೇಲೆ ಹೋದ ಹಾಗೆ ಕೆಳಗಿನ ಭಾಗ ಸುರುಳಿಯ ತರಹ ಸುತ್ತಿಕೊಂಡು ಪ್ಲೇಟ್ ತರಹ ಇರುತ್ತದೆ. ಇದನ್ನು ಊಟದ ತಟ್ಟೆಯಾಗಿ ಬಳಸುತ್ತಿದ್ದರು.



ಮತ್ತಿಮರದ ಬೂದಿ, ದಿಂಡಾಲು ಮರದ ಬೂದಿಯಿಂದ ಪಾತ್ರೆ ಮಡಿಕೆಯನ್ನು ತೊಳೆಯುತಿದ್ದರು. ಮಾಂಸದ ಸಾರು ಮಾಡಿದ ಪರಿಕರಗಳನ್ನು ಅದರ ವಾಸನೆ ಮತ್ತು ಜಿಡ್ಡನ್ನು ಹೋಗಲಾಡಿಸಲು ಉಣ್ಣಿ ಗುಲಾಬಿ ಸೊಪ್ಪಿನಿಂದ ತೊಳೆಯುತ್ತಾರೆ.

**ದೀಪ** : ದೀಪಕ್ಕೆ ಹರಿದ ಹತ್ತಿ ಬಟ್ಟೆಯನ್ನು ಹೊಸೆದು ದಪ್ಪವಾಗಿ ಮಾಡಿ ಕೈಯೆಣ್ಣೆಯಲ್ಲಿ ನೆನೆಸಿ ದೀಪ ಮಾಡಿ ಉರಿಸುತ್ತಿದ್ದರು. ಇದರಿಂದ ರಾತ್ರಿ ವೇಳೆ ಬೆಳಕು ಇರುತ್ತದೆ. ಈಗಲೂ ವಿದ್ಯುತ್ ಸಂಪರ್ಕ ಇಲ್ಲದ ಹಾಡಿಗಳಲ್ಲಿ, ಗುಡಿಸಲುಗಳಲ್ಲಿ ಈ ದೀಪಗಳನ್ನು ಕಾಣುತ್ತೇವೆ.

**ಮಹಿಳೆಯರ ಪಾತ್ರ** : ಮಹಿಳೆಯರು ತಮ್ಮ ಇಚ್ಛೆಗೆ ಅನುಗುಣವಾಗಿ ವಸತಿಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಪಾರಂಪರಿಕ ವಸತಿ ಅವರ ಬದುಕಿನ ಅವಿಭಾಜ್ಯ ಅಂಗವೆಂದೇ ಭಾವಿಸಿದ್ದರು. ಇಲ್ಲಿನ ಜೀವನಕ್ರಮ ಅವರಿಗೆ ತೃಪ್ತಿ ನೀಡಿತ್ತು.

**ಆಧುನಿಕತೆ** : ಏಕರೂಪ ನಿರ್ಮಾಣದ ವಸತಿಗಳು ಜೇನುಕುರುಬರ ಪಾರಂಪರಿಕ ಜೀವನಕ್ಕೆ ಧಕ್ಕೆಯುಂಟು ಮಾಡಿದೆ.

### ೬. ೧೨. ೧. ಆಧುನಿಕ ವಸತಿ



ಜೇನುಕುರುಬರನ್ನು ಒಂದಿಲ್ಲೊಂದು ಕಾರಣಗಳನ್ನು ಹೇಳಿ ಅಥವಾ ಅವರಿಗೆ ವಿವಿಧ ಬಗೆಯ ಪ್ಯಾಕೇಜುಗಳೆಂಬ ಹಣದ ಆಮಿಷಗಳನ್ನು ಒಡ್ಡಿ ಕಾಡಿನಿಂದ ಹೊರಹಾಕಲು ಸರ್ಕಾರಗಳು ಭಾಗಶಃ ಯಶಸ್ವಿಯಾಗುತ್ತಿವೆ. ಹೀಗೆ ಕಾಡಿನಿಂದ ಹೊರಗೆ ಕಳುಹಿಸುವ ಮೊದಲೇ ಇಲಾಖೆಗಳು ಅವರಿಗೆ ತೋಚಿದಂತಹ ಸ್ಥಳಗಳಲ್ಲಿ ಕಾಲೋನಿಗಳನ್ನು ನಿರ್ಮಿಸಿರುತ್ತಾರೆ, ಸಂಪೂರ್ಣ ಸಿಮೆಂಟ್ ಕಾಂಕ್ರೀಟ್‌ನಿಂದ ನಿರ್ಮಿಸಿದ ವಸತಿಗಳು ಇಲ್ಲಿ ನಿರ್ಮಿಸಲಾಗಿರುತ್ತವೆ. ಸಾಮಾನ್ಯವಾಗಿ ೩೦x೪೦ ಅಥವಾ ೪೦x೬೦ ಅಳತೆಯ ಏಕರೂಪದ ನಿವೇಶನಗಳಲ್ಲಿ ೧೨x೨೦ ಅಳತೆಯ ಒಂದೇ ಬಗೆಯ ವಸತಿಗಳನ್ನು ನಿರ್ಮಿಸಿರುತ್ತಾರೆ. ಇದರಲ್ಲಿ ಒಂದು ಅಡುಗೆ ಕೋಣೆ ಹಾಗೂ ಮತ್ತೊಂದು ದೊಡ್ಡ ಕೋಣೆಯಷ್ಟೇ ಇರುತ್ತದೆ. ನೆಲಹಾಸು ಕೂಡಾ ಸಿಮೆಂಟ್‌ನಿಂದ ಮಾಡಲ್ಪಟ್ಟಿರುತ್ತದೆ. ಇಲ್ಲಿ ಜೇನುಕುರುಬರ ಪಾರಂಂಪರಿಕ ಜ್ಞಾನದ ಯಾವುದೇ ಬಳಕೆಯಾಗಿರುವುದಿಲ್ಲ.

### ೬. ೧೨. ೨. ಪರಿಣಾಮಗಳು

ಒಲ್ಲದ ಮನಸ್ಸಿನಿಂದ ಜೇನುಕುರುಬರನ್ನು ಕಾಡಿನಿಂದ ಬಲವಂತವಾಗಿ ಅಥವಾ ಬೇರೆ ಬೇರೆ ವಿಧದ ಆಮಿಷಗಳನ್ನು ತೋರಿಸಿ ಕಾಡಿನಿಂದ ಹೊರಗೆ ತರಲಾಗುತ್ತಿದೆ. ಅಲ್ಲಿ ನಿರ್ಮಿಸಿರುವ ಕಾಂಕ್ರೀಟ್ ಕಾಲೋನಿಗಳಲ್ಲಿ ಪಾರಂಪರಿಕ ಜೀವನ ವಿಧಾನ ಸಂಪೂರ್ಣವಾಗಿ ನಶಿಸಿ ಹೋಗುತ್ತಿರುವುದನ್ನು ಕಾಣುತ್ತೇವೆ.

**ಕೋಷ್ಟಕ : ೬. ೧. ಪಾರಂಪರಿಕ ಮತ್ತು ಆಧುನಿಕ ವಸತಿಯ ಪರಿಣಾಮಗಳು**

| ಪಾರಂಪರಿಕ ವಸತಿ | ಆಧುನಿಕ ಕಾಲೋನಿಗಳು |
|---|---|
| ೧. ಕಾಡಿನ ಒಳಗೆ ಅಥವಾ ಕಾಡಂಚಿನಲ್ಲಿ ನಿರ್ಮಾಣ ವಾಗುತ್ತಿದ್ದವು. | ಸಾಮಾನ್ಯವಾಗಿ ಕಾಡಿನಿಂದ ಬಹುದೂರ, ಮುಖ್ಯ ರಸ್ತೆಗಳ ಪಕ್ಕದಲ್ಲಿ ನಿರ್ಮಾಣವಾಗುತ್ತವೆ. |
| ೨. ಹಾಡಿಯ ಯಜಮಾನನ ಪಾತ್ರ ಪ್ರಮುಖವಾಗಿರುತ್ತದೆ. | ಸರ್ಕಾರಿ ಅಧಿಕಾರಿಗಳೇ ಪ್ರಮುಖ ಪಾತ್ರ ವಹಿಸುತ್ತಾರೆ. |
| ೩. ವ್ಯಕ್ತಿ ಸ್ವಾತಂತ್ರ್ಯವಿರುತ್ತದೆ. | ಫಲಾನುಭವಿಗಳ ಅಭಿಪ್ರಾಯಕ್ಕೆ ಮನ್ನಣೆ ನೀಡಲಾಗುವುದಿಲ್ಲ. |
| ೪. ಪಾರಂಪರಿಕ ನೆಲೆಗಟ್ಟಿನಲ್ಲಿ ರಚನೆಯಾಗಿರುತ್ತದೆ. | ಸರ್ಕಾರಕ್ಕೆ ಅನುಕೂಲಕರ ವಾತಾವರಣದಲ್ಲಿ ನಿರ್ಮಿಸಲಾಗುತ್ತದೆ. |
| ೫. ಪಾರಂಪರಿಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಜೀವನ ವಿಧಾನ ಉಳಿಯುತ್ತದೆ. | ಪಾರಂಪರಿಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಜೀವನ ವಿಧಾನ ಉಳಿಸಿಕೊಳ್ಳಲು ಯಾವ ಅವಕಾಶಗಳೂ ಇರುವುದಿಲ್ಲ. |

## ೬. ೧೩. ವಸ್ತು ಕಳುವಾದಾಗ ಕಂಡುಕೊಳ್ಳುವ ಬಗೆ

ಜೇನುಕುರುಬರಲ್ಲಿ ಪ್ರಮುಖವಾಗಿ ಕತ್ತಿ, ಬೇಟೆಯ ಪರಿಕರಗಳು, ವಿಧಿ ಆಚರಣಾ ವಸ್ತುಗಳು ಕಾಣೆಯಾದಾಗ ಅಥವಾ ಕಳುವಾದಾಗ ಕೆಲವು ಆಚರಣೆಗಳ ಮೂಲಕ ಅವುಗಳನ್ನು ಹುಡುಕಿಕೊಳ್ಳುತ್ತಾರೆ.

**ಗಂಗಳ ಶಾಸ್ತ್ರ** : ಅರುವತ್ತಳ್ ಅಂಬು ಅಥವಾ ಗಂಗಳ ತಟ್ಟೆ ಶಾಸ್ತ್ರ ಎಂದರೆ ಯಾರದೇ ಮನೆಯಲ್ಲಿ ಕಳ್ಳತನ ಆದರೆ ಗಂಗಳಸಾಸ್ತ ಮಾಡಿ ಕಂಡು ಹಿಡಿಯುತ್ತಾರೆ. ಶಾಸ್ತ್ರವನ್ನು ಕೈಗೊಳ್ಳುವ ಸ್ಥಳವನ್ನು ಮೊದಲು ಸಗಣಿಯಿಂದ ನೆಲ ಸಾರಿಸಿ ದೀಪವನ್ನು ಹಚ್ಚಿ ಸಾರಿಸಿದ ನೆಲದ ಮೇಲೆ ಗಂಗಳ (ಕಂಚಿನ ತಟ್ಟೆ)ವನ್ನು ಇರಿಸುತ್ತಾರೆ. ಪ್ರತಿಯೊಬ್ಬರೂ ಒಬ್ಬೊಬ್ಬರಾಗಿ ತಮ್ಮ ತಮ್ಮ ಹೆಸರನ್ನು ಹೇಳಿ ಅಕ್ಕಿ ಮತ್ತು ಒಂದು ಕಡ್ಡಿಯನ್ನು ಗಂಗಳಕ್ಕೆ ಹಾಕುತ್ತಾರೆ. ಆ ನಂತರ ದೈವದಲ್ಲಿ ಪ್ರಾರ್ಥನೆ ಮಾಡಿ ಕದ್ದಿರುವ ವ್ಯಕ್ತಿಯನ್ನು ತೋರಿಸು ಎಂದು ಬೇಡುತ್ತಾರೆ. ಆಗ ಗಂಗಳ ಯಾರು ಕಳ್ಳತನ ಮಾಡಿರುತ್ತಾರೋ ಅವರ ಬಳಿಗೆ ತಾನಾಗಿಯೇ ಹೋಗುತ್ತದೆ.

**ಕಡ್ಡಿ ಶಾಸ್ತ್ರ** : ಮನೆಯಲ್ಲಿ ದೈವವನ್ನು ಆರಾಧಿಸಿ, ಎರಡು ಕೈಯಲ್ಲಿ ಒಂದೊಂದು ಕಡ್ಡಿ ಹಿಡಿದು, ಅದರ ಮೇಲೆ ಅಡ್ಡಕ್ಕೆ ಇನ್ನೊಂದು ಕಡ್ಡಿಯನ್ನು ಒಬ್ಬೊಬ್ಬರ ಹೆಸರನ್ನು ಹೇಳಿ ಹಾಕುತ್ತಾರೆ. ಕಳ್ಳತನ ಮಾಡಿದ ವ್ಯಕ್ತಿಯ ಹೆಸರು ಬಂದಲ್ಲಿ ಕೈಯಲ್ಲಿರುವ ಎರಡು ಕಡ್ಡಿಗಳು ಎಷ್ಟೇ ಬಲ ಪ್ರಯೋಗಿಸಿದರೂ ದೂರವಾಗದೇ ಒಂದಕ್ಕೊಂದು ಸೇರುತ್ತವೆ. ಮಾಡಿಲ್ಲದಿದ್ದರೆ ಕಡ್ಡಿಗಳು ದೂರ ಹೋಗುತ್ತವೆ. ಎಂಬ ನಂಬಿಕೆ ಇವರಲ್ಲಿದೆ.

**ಸೌಟು ಶಾಸ್ತ್ರ** : ಜೇನು ಭಾಷೆಯಲ್ಲಿ 'ಸಟ್ಟುಗಶಾಸ್ತ್ರ' ಎಂದು ಕರೆಯುತ್ತಾರೆ. ಸಗಣಿ ನೀರಿನಲ್ಲಿ ನೆಲಸಾರಿಸಿ, ಪೂಜೆ ಮಾಡಿ ಮನೆಯ ಒಬ್ಬ ಸದಸ್ಯನ ಕೈಗೆ ಸೌಟನ್ನು ಹಿಡಿಸಿ, ಅದಕ್ಕೆ ಅಕ್ಕಿ ಹಾಕುತ್ತಾರೆ. ಹಾಡಿಯ ಹಿರಿಯರು ಮತ್ತು ಕುಟುಂಬದ ಸದಸ್ಯರು ಮೊದಲು ಸೌಟಗೆ ಅಕ್ಕಿ ಹಾಕುತ್ತಾರೆ. ಯಾರು ವಸ್ತುವನ್ನು ಕದ್ದಿರುತ್ತಾರೋ ಅವರು ಅಕ್ಕಿ ಹಾಕಿದ ತಕ್ಷಣ ವಸ್ತು ಬಚ್ಚಿಟ್ಟಿರುವಲ್ಲಿಗೆ ಸೌಟು ಹಿಡಿದವನನ್ನು ಎಳೆದುಕೊಂಡು ಹೋಗುತ್ತದೆ.

**ಎಂಜಲು ಶಾಸ್ತ್ರ** : ವಸ್ತುವನ್ನು ಕಳೆಗೆ ಬೀಳಿಸಿದಾಗ, ಎಲ್ಲಾದರು ಇಟ್ಟು ಮರೆತಾಗ ಗಾಬರಿಯಿಂದ ಹುಡುಕುತ್ತಾರೆ. ಆಗ ಎಡಗೈ ಅಂಗೈಗೆ ಎಂಜಲು ಉಗಿದುಕೊಂಡು ಬಲಗೈ ತೋರು ಬೆರಳಿನಿಂದ ಎಡಗೈ ಎಂಜಲಿನ ಮೇಲೆ ಹೊಡೆದಾಗ ನಮ್ಮ ವಸ್ತು ಯಾವ ಕಡೆ ಬಿದ್ದಿದೆಯೋ ಆ ಕಡೆಗೆ ಹೆಚ್ಚು ಏಟು ಬೀಳುತ್ತದೆ ಆ ಭಾಗದಲ್ಲಿ ವಸ್ತು ಹುಡುಕಿದರೆ ನಮಗೆ ವಸ್ತು ಸಿಗುತ್ತದೆ.

ಜೇನುಕುರುಬರು ತಮ್ಮ ವಸ್ತುಗಳನ್ನು ಕಳೆದುಕೊಂಡರೆ ಅಥವಾ ಯಾರಾದರು ಕದ್ದರೆ, ಅವರದೇ ಆದ ಪಾರಂಪರಿಕ ತಿಳುವಳಿಕೆಯಿಂದ ಕಳುವಾದ ವಸ್ತುವನ್ನು ಪಡೆಯುತ್ತಾರೆ.

ಇಂತಹ ವೈಜ್ಞಾನಿಕ ಸಲಕರಣೆಗಳು, ವೈವಿಧ್ಯಮಯವಾದ ನೂರಾರು ಬಗೆಯ ಮಾಹಿತಿ ಇಂದು ಎಲ್ಲಾ ಆಧುನಿಕ ಸಮಾಜದಲ್ಲೂ ಸಿಗುತ್ತವೆ. ಅಂತರ್ಜಾಲದಲ್ಲಿ ಕೈ ಆಡಿಸಿದರೆ ಇಂದು ಸಿಗದೇ ಇರುವ ಮಾಹಿತಿಯೇ ಇಲ್ಲ ಎಂದರೂ ತಪ್ಪಿಲ್ಲ. ಇಂತಹ ಸನ್ನಿವೇಶದ ಆಧುನಿಕ ಯುಗದಲ್ಲಿ ಈ ಆದಿವಾಸಿ ಸಮುದಾಯವು ಕೇವಲ ಮನೆ ಬಳಕೆಯ ವಸ್ತುಗಳನ್ನು ಬಳಸಿಕೊಂಡು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡು, ನಿರಾಳ ಭಾವನೆಯನ್ನು ಹೊಂದಿ, ನೆಮ್ಮದಿಯ ಜೀವನ ಸಾಗಿಸುತ್ತಾರೆ ಎಂಬುದು ಇವರ ಪಾರಂಪರಿಕ ಜ್ಞಾನದ ಮಹತ್ವವನ್ನು ಒತ್ತಿ ಹೇಳುತ್ತದೆ.

### ೬. ೧೪. ಪಾರಂಪರಿಕ ಆಹಾರ ಪದ್ಧತಿ

ಶ್ರೀಮತಿ ಯಶೋಧ (೬೦ ವರ್ಷ) ಮರಳುಕಟ್ಟೆ ಹಾಡಿ, ಇವರ ಮಾಹಿತಿಯಂತೆ, ಬಹಳ ಹಿಂದೆ ಸೃಷ್ಟಿಯ ಉಗಮದ ಸಮಯದಲ್ಲಿ ಸೋರೆ ಬುಂಡೆಯೊಂದರಿಂದ ಇಬ್ಬರು ಜೇನುಕುರುಬ ದಂಪತಿಗಳು ಹೊರಬಂದರು. ಅವರು ಒಂದು ಮುಷ್ಠಿ ಮಣ್ಣನ್ನು ತೆಗೆದು ದೇವರನ್ನು ಪ್ರಾರ್ಥಿಸಿ ಭೂಮಿಯಲ್ಲಿ ಚೆಲ್ಲಿದಾಗ ಜೇನುಕುರುಬ ಸಮುದಾಯ ಸೃಷ್ಟಿಯಾಯಿತು. ಸೃಷ್ಟಿಯ ನಂತರ ಮೊದಲು ಕಂಡಿದ್ದು ನೀರು. ಅದನ್ನು ನೋಡಿ ಏನು ಮಾಡಬಹುದೆಂದು ತೋಚದೆ ಕಕ್ಕಾ ಬಿಕ್ಕಿಯಾಗಿ, ಕಂಗಾಲಾಗಿ ಕುಳಿತು ನೋಡುವಾಗ ಅಲ್ಲಿನ ಪರಿಸರದ ಜೀವಿಗಳ ಜೀವನ ಕ್ರಮವನ್ನು ನಿಧಾನವಾಗಿ ಗಮನಿಸಿದಾಗ ಅಲ್ಲಿ ಯಾವ ಯಾವ ಜೀವಿಗಳು ವಾಸ ಮಾಡುತ್ತವೆ ಎಂಬುದು ತಿಳಿಯಿತು. ನಂತರ ಪ್ರಾಣಿ ಜೀವಿಗಳ ಮುಖಾಂತರ ಅವುಗಳು ಯಾವ ಯಾವ ಆಹಾರ ಪದಾರ್ಥಗಳನ್ನು ತಿನ್ನುತ್ತಿವೆ ಎಂಬುದನ್ನು ಕಲಿತರು. ಕಾಡು ಹಂದಿಗಳ ಮೂಲಕ ಭೂಮಿಯಲ್ಲಿ ಯಾವ ಯಾವ ಗೆಡ್ಡೆ ಗೆಣಸುಗಳು

ಸಿಗುತ್ತವೆ ಎಂಬುದು ತಿಳಿದರು. ಅವುಗಳನ್ನು ಭೂಮಿಯಿಂದ ಅಗೆದು ಹಸಿಗೆಣಸನ್ನು ಮೊದಲು ತಿಂದರು. ನಂತರ ಕಾಡುಕೋಳಿಗಳ ಮುಖಾಂತರ ಬೀಜಗಳ ಪರಿಚಯವಾಯಿತು. ಅವುಗಳನ್ನು ಭೂಮಿಯಲ್ಲಿ ಬಿತ್ತುವುದನ್ನು ಕಲಿತರು. ತದನಂತರ ಯಾವಾಗ ಗೆಡ್ಡೆ ಗೆಣಸುಗಳು ಕಡಿಮೆಯಾಗುತ್ತಾ ಬಂದಿತೋ ಆಗ ಹಸಿವಿನ ಭಾದೆ ತಾಳಲಾರದೆ ಆಹಾರ ಹುಡುಕಿಕೊಂಡು ಹೋಗುವಾಗ ಯಾವುದೋ ಒಂದು ಪ್ರಾಣಿ ಸತ್ತು ಬಿದ್ದಂತಹ ದೃಶ್ಯವನ್ನು ನೋಡಿ ಅದನ್ನು ತಿಂದು ಹಸಿವನ್ನು ನಿವಾರಿಸಿ ಕೊಂಡು, ಮಾಂಸವೂ ಸಿಗದಿರುವಾಗ ಪ್ರಾಣಿಗಳನ್ನು ಓಡಿಸಿಕೊಂಡು ಹೋಗಿ ಅದನ್ನು ಯಾವ ರೀತಿ ಕೊಲ್ಲಬೇಕು ಎಂಬುದು ತಿಳಿಯದೆ ಕೊನೆಗೆ ನೀರೊಳಗೆ ಬೀಳಿಸಿ ಸಾಯಿಸಿ ನಂತರ ತಿನ್ನುತ್ತಿದ್ದರು. ಈ ರೀತಿಯಲ್ಲಿ ಬೇಟೆಯಾಡುವುದನ್ನು ಕಲಿತರು.

ಕಾಲ ಕ್ರಮೇಣ ಕಾಳ್ಗಿಚ್ಚಿನಲ್ಲಿ ಸಿಲುಕಿ ಸತ್ತ ಪ್ರಾಣಿಯ ಮಾಂಸವನ್ನು ತಿಂದು ಬೆಂಕಿಯ ಅನಿವಾರ್ಯತೆಯನ್ನು ಕಂಡುಕೊಂಡರು. ಆಗ ಬೆಂಕಿಯನ್ನು ಕಂಡು ಹಿಡಿದು ಆಹಾರವನ್ನು ಬೇಯಿಸಿ/ಸುಟ್ಟು ತಿನ್ನಲು ಪ್ರಾರಂಭಿಸಿಕೊಂಡರು. ನಂತರ ಕಾಡಿನೊಳಗೆ ಓಡಾಡಿಕೊಂಡು ಇರುವ ಸಂದರ್ಭದಲ್ಲಿ ಕಾಡಿನಲ್ಲಿ "ನವಿಲು ಕೊಟ್ಟೆ" ಎಂಬ ಪಕ್ಷಿಯೊಂದು ಜೇನು ಗೂಡಿಗೆ ತನ್ನ ಕೊಕ್ಕಿನಿಂದ ಕುಕ್ಕಿತು. ಆಗ ಜೇನು ಗೂಡಿನ ತುಪ್ಪವು ಮೇಲಿನಿಂದ ಹನಿ-ಹನಿಯಾಗಿ ಬೀಳುತ್ತಿದ್ದಾಗ ಅದನ್ನು ನೋಡಿ ಮೇಲಿನಿಂದ ಏನೋ ಬೀಳುತ್ತಿದೆ ಎಂದು ಅದನ್ನು ಬೆರಳಿನಿಂದ ನೆಕ್ಕಿ ನೋಡಿದಾಗ ಅದರ ಸಿಹಿಯಾದ ಅಮೃತವನ್ನು ತಿಂದು ಬಹಳ ಸಂತೋಷಗೊಂಡು ನಂತರ ಜೇನುಗೂಡಿಗೆ ಕೈ ಹಾಕಿ ಜೇನನ್ನು ತಿಂದು ಅದನ್ನು ಕಂಡು ಕೊಂಡು ಬದುಕುತ್ತಾ ಬಂದರು. ಆ ನಂತರ ಕಾಡಿನಲ್ಲಿ ಬೇಟೆಯಾಡಿ ಜೀವಿಸಿದರು. ಜೇನುಕುರುಬರ ಆಹಾರ ಪದ್ಧತಿಯಲ್ಲಿ ಸಸ್ಯಾಹಾರ ಹಾಗೂ ಮಾಂಸಾಹಾರಗಳೆರಡನ್ನೂ ಕಾಣುತ್ತೇವೆ.

### ೬. ೧೪. ೧. ಸಸ್ಯಾಹಾರ

ಪ್ರತಿಯೊಂದು ಜೀವಿಗೂ ಜೀವಿಸಲು ಆಹಾರ ಬೇಕೇ ಬೇಕು. ಕಾಡನ್ನೇ ನಂಬಿ ಕಾಡಿನಲ್ಲಿಯೇ ಬದುಕುವ ಜೇನುಕುರುಬರು ಆಹಾರಕ್ಕಾಗಿ ಕಾಡಿನಲ್ಲಿ ದೊರೆಯುವ ಜೇನು, ಗೆಡ್ಡೆಗೆಣಸು, ವಿವಿಧ ಬಗೆಯ ಸೊಪ್ಪು, ಅಣಬೆ, ಕಾಯಿ, ಹಣ್ಣುಗಳನ್ನು ಅವಲಂಬಿಸಿದ್ದಾರೆ. ಯಾವ ವೇಳೆಯಲ್ಲಿ ಎಂತಹ ಆಹಾರ ದೊರೆಯುತ್ತದೆಂಬುದನ್ನು ಅವರು ಅನುಭವದಿಂದ ಅರಿತಿದ್ದಾರೆ. ತಲೆಮಾರಿನಿಂದ ತಲೆಮಾರಿಗೆ ಅನುಭವದಿಂದ ಪಡೆದ ಜ್ಞಾನವನ್ನು ಇಲ್ಲಿ ಬಳಕೆ ಮಾಡುತ್ತಾರೆ.

### ೬. ೧೪. ೨. ಗೆಣಸು

ಗೆಣಸು ಜೇನುಕುರುಬರ ಪಾರಂಪರಿಕ ಆಹಾರದಲ್ಲಿ ಪ್ರಮುಖವಾದುದು. ಇವರ ಆಹಾರದ ಮೂಲಾಧಾರವೇ ಗೆಣಸು. ವರ್ಷದಲ್ಲಿ ಆರರಿಂದ ಎಂಟು ತಿಂಗಳು ಇವರಿಗೆ ಗೆಣಸು ಸಿಗುತ್ತದೆ.

ಇವರು ವಾಸಿಸುವ ಹಾಡಿಯ ಸುತ್ತ ಮುತ್ತ ಗೆಣಸಿನ ಗಡ್ಡೆಗಳನ್ನು ಬಹಳ ಹಿಂದಿನಿಂದಲೇ ಸ್ವಲ್ಪ ಬಿಟ್ಟಿರುತ್ತಾರೆ. ಮತ್ತು ಮುಂದಿನ ವರ್ಷಕ್ಕೆ ಸ್ವಲ್ಪ ಉಳಿಸುತ್ತಾರೆ. ಮಹಿಳೆಯರು ಬೆಳಗ್ಗೆ ಎದ್ದ ಕೂಡಲೆ ಗೆಣಸನ್ನು ಸಂಗ್ರಹಿಸಲು ಎರಡು ಮೂರು ಜನರ ಗುಂಪುಗಳಾಗಿ ಹೋಗುತ್ತಾರೆ. ಜೊತೆ ಜೊತೆಯಾಗಿ ಗೆಣಸನ್ನು ಬಿದಿರಿನ ಬುಟ್ಟಿಗಳಲ್ಲಿ ಸಂಗ್ರಹಿಸುತ್ತಾರೆ. ಗೆಣಸನ್ನು ಅಗೆದು ತೆಗೆಯಲು ಚೂಪಾದ ಮರದ ಕೈ ಅಳತೆಯ ದೊಣ್ಣೆಯನ್ನು ಬಳಸಿ ಅಗೆಯುತ್ತಾರೆ. ಅದನ್ನು ಮಣ್ಣಿನಿಂದ ಬೇರ್ಪಡಿಸಿ, ಸೋಸಿ ಸಂಗ್ರಹಿಸಲು ಹೋದ ಮಹಿಳೆಯೆಲ್ಲಾ ಸಮನಾಗಿ ಹಂಚಿಕೊಳ್ಳುತ್ತಾರೆ. ಹಂಚಿಕೊಂಡ ಗೆಣಸನ್ನು ಗುಡಿಸಲಿಗೆ ತಂದು ಬೆಂಕಿಯಲ್ಲಿ ಸುಡುತ್ತಾರೆ. ಮತ್ತು ಬೇಯಿಸುತ್ತಾರೆ. ಸುಟ್ಟ ಗೆಣಸನ್ನು ಸಿಪ್ಪೆ ಬಿಡಿಸಿ ತಿನ್ನುತ್ತಾರೆ. ಬೇಯಿಸಿದ ಗೆಣಸನ್ನು ಸಿಪ್ಪೆ ಸಹಿತವಾಗಿ ತಿನ್ನುತ್ತಾರೆ. ಹೀಗೆ ಅನೇಕ ವಿಧದ ಗೆಣಸುಗಳನ್ನು ಸಂಗ್ರಹಿಸುತ್ತಾರೆ.

ಅಡಕುಮೂಡೆ ಗಾಸು, ಆಂಪೆ ಗಾಸು, ಆಲೆ ಗಾಸು, ಕಾಟೋವರ ಗಾಸು (ತಿನ್ನುವುದಿಲ್ಲ), ಕಾಡುಸೇನೆ ಗಾಸು (ತಿನ್ನುವುದಿಲ್ಲ) , ಕಾಡು ಹುತ್ತರಿ ಗಾಸು, ಕಾಲು ಗಾಸು, ಕುವ್ವಾಲೆ ಗಾಸು, ಕೆಂಜುಗ ಗಾಸು, ಕೊರಣೆ ಗಾಸು , ತಳುಪ ಗಾಸು, ನಡೆ ಗಾಸು, ನರಿಗೆ ಗಾಸು, ನಾರ ಗಾಸು, ನಾರಬೆಲ್ಲದ ಗಾಸು, ನೂರೆ ಗಾಸು, ಪೂಳೆ ಗಾಸು, ಮಂಜುಕೊರಣೆ ಗಾಸು, ಬೆಲ್ಲದ ಗಾಸು, ಮರ ಗಾಸು, ವಾಲೆ ಗಾಸು, ಸಾಲ್ ಗಾಸು, ಸುರಾಲು ಗಾಸು, ಸುಳ್ಳಿ ಗಾಸು, ಸೇಬು ಗಾಸು, ಸೊಡ್ಡಿ ಗಾಸು, ಹುತ್ತರಿ ಗಾಸು, ಹೆಕ್ಕು ಗಾಸು.

ಇವರು ಬಳಸುವ ಆಹಾರ ಪದಾರ್ಥಗಳ ಕುರಿತು ಪೂರ್ಣ ತಿಳುವಳಿಕೆ ಇರುವ ಜೇನುಕುರುಬರು ಆಹಾರ ತಯಾರಿಸುವ ಪೂರ್ವದಲ್ಲಿ ಅವುಗಳನ್ನು ಹೇಗೆ ಸಂಸ್ಕರಿಸಬೇಕು, ಸಂಗ್ರಹಿಸಿ ಇಡುವುದಾದರೆ ಅವುಗಳನ್ನು ಹೇಗೆ ಸಂಗ್ರಹಿಸಬೇಕು ಇತ್ಯಾದಿ ವಿಚಾರಗಳು ಅವರಿಗೆ ಪರಂಪರೆಯ ಮೂಲಕ ತಿಳಿದಿದೆ.

ಉದಾಹರಣೆಗೆ ನೊರೆಗೆಣಸು ಇದರ ಬೇರಿನಲ್ಲಿ ಮುಳ್ಳು ಮತ್ತು ಸಣ್ಣ ಸಣ್ಣ ಎಲೆ ಇರುತ್ತವೆ. ಇದನ್ನು ಕಾಡಿನಲ್ಲಿ ಸಂಗ್ರಹಿಸಿ ತಂದು ನೀರಿನಲ್ಲಿ ಹಾಕಿ ಬೇಯಿಸಿ ತೊಳೆದು ತಿನ್ನುತ್ತಾರೆ. ಈ ಗೆಣಸು ಸಿಹಿಯಾಗಿರುವುದಿಲ್ಲ. ಆದರೆ ಆಲೂಗಡ್ಡೆಯಷ್ಟು ರುಚಿಯಾಗಿರುತ್ತದೆ. ಈ ಗೆಣಸನ್ನು ಹಸಿಯಾಗಿ ತಿನ್ನುವುದಿಲ್ಲ. ತಿಂದರೆ ಬಾಯಿಯಲ್ಲಿ ನವೆ ಬರುತ್ತವೆ.

ತಳುಪ ಗೆಣಸು ಕಾಡಿನಲ್ಲಿ ಬೆಳೆಯುವ ಒಂದು ಬಗೆಯ ಗೆಣಸು. ಕಾಡಿಗೆ ಆಹಾರ ಸಂಗ್ರಹಣೆಗೆ ಹೋದಾಗ ಈ ಗೆಣಸನ್ನು ತಂದು ವಿವಿಧ ರೀತಿಯ ಕಾಳುಗಳ ಜೊತೆಯಲ್ಲಿ ಬೇಯಿಸಿ ತಿನ್ನುತ್ತಾರೆ. ತಳುಪ ಗೆಣಸು ಸಾಮಾನ್ಯವಾಗಿ ಸಣ್ಣದಾಗಿ ಸಣ್ಣ ಬೇರುಗಳಿಂದ ಭೂಮಿಯ ಒಳಗೆ ಹಬ್ಬಿಕೊಂಡಿರುತ್ತದೆ. ಈ ಗೆಣಸು ಭೂಮಿಯ ಒಳಗಡೆ ಹಬ್ಬಿಕೊಂಡಿರುವುದರಿಂದ ಇದನ್ನು ಅಗೆದು

ತೆಗೆಯುತ್ತಾರೆ. ಈ ಗೆಣಸನ್ನು ಹಸಿರು ಕಾಳು, ಹುರುಳಿ, ಮಡಿಕೆಕಾಳು ಮುಂತಾದ ಕಾಳುಗಳ ಜೊತೆ ಬೆರೆಸಿ ಬೇಯಿಸಿ ತಿನ್ನುತ್ತಾರೆ.

ನಾರಿಗೆ ಗೆಣಸು ಕಾಡಿನಲ್ಲಿ ಬೆಳೆಯುವ ಒಂದು ಬಗೆಯ ಗೆಣಸು. ಮೇಲ್ಭಾಗವು ಮುಳ್ಳುಗಳಿಂದ ಹಾಗೂ ಅಗಲವಾದ ಎಲೆಗಳಿಂದ ಕೂಡಿರುತ್ತದೆ. ಇದನ್ನು ಸಂಗ್ರಹಿಸಿ ತಂದು ಬೇಯಿಸಿ ತಿನ್ನುತ್ತಾರೆ. ಒಂದು ಗೆಣಸನ್ನು ನಾಲ್ಕರಿಂದ ಐದು ಜನರು ತಿನ್ನಬಹುದು.

ಆಲೆ ಗೆಣಸು ಆರೋಗ್ಯದ ದೃಷ್ಟಿಯಿಂದ ತುಂಬಾ ಒಳ್ಳೆಯದು. ಅದನ್ನು ಸುಟ್ಟು ಸಿಪ್ಪೆ ತೆಗೆದು ಕಾಡಿನಲ್ಲಿ ಸಿಗುವ ಮುತ್ತುಗದ ಎಲೆಯಲ್ಲಿ ಕಿವುಚಿ, ಜೇನುತುಪ್ಪ ಹಿಂಡಿಕೊಂಡು ತಿನ್ನುವುದು ಒಳ್ಳೆಯದು.

ಹೀಗೆ ಹಲವು ಬಗೆಯ ಗೆಣಸುಗಳನ್ನು ಸಂಗ್ರಹಿಸುವ ಇವರು ಅವುಗಳನ್ನು ವರ್ಷಪೂರ್ತಿ ಕಾಯ್ದಿರಿಸಿಕೊಳ್ಳುತ್ತಾರೆ. ತಮಗೆ ಅವಶ್ಯವಿದ್ದಾಗ ಅವುಗಳನ್ನು ಬೇಯಿಸಿ ತಿನ್ನುತ್ತಾರೆ. ಗೆಣಸು ಸಿಕ್ಕಿದೆಯೆಂದು ಪೂರ್ಣವಾಗಿ ಕಿತ್ತು ತರುವುದಿಲ್ಲ. ಅವುಗಳ ಸ್ವಲ್ಪ ಭಾಗ ಭೂಮಿಯಲ್ಲಿ ಬಿಟ್ಟು ಬಂದಿರುತ್ತಾರೆ. ಆ ಭಾಗವು ಮುಂದೆ ಬೆಳೆದು ಮುಂದಿನ ವರ್ಷಕ್ಕೆ ಇವರಿಗೆ ಆಹಾರವಾಗುತ್ತದೆ.

ಎರೆಗಾಸು ಮೇಲೆ ಬಳ್ಳಿ ಇಲ್ಲದಿದ್ದರೂ ಭೂಮಿಯ ಒಳಗೆ ಗೆಣಸು ಇರುವುದನ್ನು ಕಂಡು ಹಿಡಿಯಲು ಭೂಮಿಗೆ ಬಡಿದರೆ 'ಬಡ್ ಬಡ್' ಶಬ್ದ ಬರುತ್ತದೆ.ಇಲ್ಲದಿದ್ದರೆ ಶಬ್ದ ಕಡಿಮೆ ಇರುತ್ತದೆ. ಈ ಶಬ್ದವನ್ನು ಆಧರಿಸಿ ಎರೆಗಾಸು ತೆಗೆಯುತ್ತಾರೆ.

ಈ ಎಲ್ಲಾ ಗೆಣಸುಗಳು ಕಾಡಿನಲ್ಲಿ ನೈಸರ್ಗಿಕವಾಗಿ ಬೆಳೆಯುವಂಥವು. ಆ ಗೆಣಸುಗಳನ್ನು ಯಾವ ರೀತಿಯಾಗಿ ಆಹಾರವಾಗಿ ಬಳಸ ಬಹುದೆಂಬುದರ ಕುರಿತು ತಿಳುವಳಿಕೆ ಜೇನುಕುರುಬರಿಗಿದೆ.

### ೬. ೧೪. ೩. ಬಿದಿರು ಕಳಲೆ



ಗೆಡ್ಡೆ ಗೆಣಸುಗಳಂತೆ ಬಿದಿರ ಕಳಲೆಯನ್ನೂ ಇವರು ಸಂಸ್ಕರಿಸಿ ಸಂಗ್ರಹಿಸುತ್ತಾರೆ. ಕಳಲೆಯನ್ನು ನೇರವಾಗಿ ಅಡುಗೆಗೆ ಬಳಸುವುದಿಲ್ಲ. ಕಳಲೆಯನ್ನು ತಂದು ಚಿಕ್ಕಗಾತ್ರಕ್ಕೆ ಕೊಯ್ದು ನೀರಿನಲ್ಲಿ ನೆನೆಹಾಕುತ್ತಾರೆ. ನೆನೆ ಹಾಕಿದ ಕಳಲೆಯನ್ನು ಒಂದೆರಡು ತಾಸು ಬಿಟ್ಟು ಹೊರತೆಗೆದು ಚೆನ್ನಾಗಿ ತೊಳೆದು ಮರಳಿ ಹೊಸ ನೀರಿಗೆ ಕಳಲೆಯನ್ನು ಹಾಕುತ್ತಾರೆ. ಹೀಗೆ ಅರ್ಧ ದಿನ ಎರಡೆರಡು ಬಾರಿ ನೆನೆಹಾಕಿ ಹೊರತೆಗೆದು ಸ್ವಚ್ಛವಾಗಿ ತೊಳೆದು ಅಡುಗೆಗೆ ಬಳಸುತ್ತಾರೆ. ಅಡುಗೆ ಮಾಡಿ ಮಿಕ್ಕಿದ ಕಳಲೆಗೆ ಉಪ್ಪನ್ನು ಬೆರಸಿ ಒಂದು ಮಣ್ಣಿನ ಗಡಿಗೆಗೆ ಹಾಕಿ

ಮೇಲೆ ಜಾಡಿ ಕಟ್ಟಿ ಇಟ್ಟುಬಿಡುತ್ತಾರೆ. ಹೀಗೆ ಕಾಚ್ಚಿರಿಸಿದ ಕಳಲೆಯನ್ನು ಮೇಲೋಗರವಾಗಿ ಸಾರನ್ನು ಮಾಡಲು ಬಳಸುತ್ತಾರೆ. ಕೆಲವೊಮ್ಮೆ ಉಪ್ಪಿನಕಾಯಿಯಂತೆಯೂ ಬಳಸುತ್ತಾರೆ. ಕಳಲೆಗೆ ಉಪ್ಪು ಹಾಕಿ ಒಣಗಿಸಿದರೆ ಒಂದು ವರ್ಷ ಬಳಸಬಹುದು ಎಂದು ಹೇಳುತ್ತಾರೆ.

ಅದೇ ರೀತಿ ಕಾಡಿನಲ್ಲಿ ದೊರೆಯುವ ಕವಳೆಕಾಯಿಯನ್ನು ತಂದು ಜಜ್ಜಿ ಒಣಗಿಸಿಟ್ಟುಕೊಳ್ಳುತ್ತಾರೆ. ಹುಣಸೆ ಹಣ್ಣಿನ ಬದಲು ಸಾರಿಗೆ ಈ ಕವಳೆ ಹುಳಿಯನ್ನು ಬಳಸುತ್ತಾರೆ. ಇನ್ನೂ ಕೆಲವೊಮ್ಮೆ ಕಳಲೆಯಂತೆ ಉಪ್ಪಿನೊಂದಿಗೆ ಬೆರಸಿ ಗಡಿಗೆಗಳಲ್ಲಿ ತುಂಬಿಟ್ಟುಕೊಳ್ಳುತ್ತಾರೆ. ಇದನ್ನು ಉಪ್ಪಿನಕಾಯಿಯಂತೆ ಬಳಕೆ ಮಾಡುತ್ತಾರೆ.

ಅದೇ ರೀತಿ ನೆಲ್ಲಿಕಾಯಿಯನ್ನು ತಂದು ಕಲ್ಲಿನಲ್ಲಿ ಜಜ್ಜಿ ಬಿಸಿಲಿನಲ್ಲಿ ಒಣಗಿಸಿಟ್ಟುಕೊಳ್ಳುತ್ತಾರೆ. ಹುಳಿಗೆ ನೆಲ್ಲಿಕಾಯಿಯನ್ನೂ ಬಳಸುತ್ತಾರೆ, ಉಪ್ಪಿನಕಾಯಿಯಂತೆಯೂ ಬಳಕೆಯಾಗುತ್ತದೆ.

ಹೀಗೆ ಕಾಡಿನಲ್ಲಿ ದೊರೆಯುವ ಆಹಾರ ಪದಾರ್ಥಗಳನ್ನು ಸಂಸ್ಕರಿಸುವ, ಸಂಗ್ರಹಿಸುವ ಗುಣವನ್ನು ಜೇನುಕುರುಬ ಮಹಿಳೆ ಹೊಂದಿದ್ದಾಳೆ.

### ೬. ೧೪. ೪. ಸೊಪ್ಪುಗಳ ವಿವರ

ಇದೇ ರೀತಿ ಕಾಡಿನಲ್ಲಿ ದೊರೆಯುವ ತಾವು ಆಹಾರವಾಗಿ ಬಳಸುವ ಕೆಲವು ಸೊಪ್ಪುಗಳನ್ನೂ ಜೇನುಕುರುಬರು ಹೆಸರಿಸುತ್ತಾರೆ. ಅವುಗಳು ಈ ಕೆಳಗಿನಂತಿವೆ

ಅಣ್ಣೆ ಸೊಪ್ಪು celosia argentea, ಆರ ತೊಂಬೆ ಸೊಪ್ಪು, ಎಲೆಕಿವಿ ಸೊಪ್ಪು, ಎಲೆಹುರಿ ಸೊಪ್ಪು, ಎಳವು ಸೊಪ್ಪು, ಒಂದೇಲಗ ಸೊಪ್ಪು indian penny wort cenpella assiatica, ಕಾಡು ನುಗ್ಗೆ ಸೊಪ್ಪು Moringa oleifera, ಕೆಂಜುಗ ಸೊಪ್ಪು, ಕೆಂಪು ದಂಟಿನ ಸೊಪ್ಪು Amaranthus cruentus, ಕೊಂಗಪಟ್ಟೆ ಸೊಪ್ಪು, ಗಂಡು ವನಗಲೆ ಸೊಪ್ಪು, ಗಣಕೆ ಸೊಪ್ಪು solanum nigrum, ಗರುಗದ ಸೊಪ್ಪು ecliptaalba, ಗುಡ್ಡೆ ಸೊಪ್ಪು allmania nodiflora, ಗೋಣಿ ಸೊಪ್ಪು portulaca qua drifida, ಚಕ್ರಮುನಿ ಸೊಪ್ಪು sauropus androgynous , ಚಿಕ್ಕಿ ಸೊಪ್ಪು tetragonia tetragonioides, ತುಂಬೆ ಸೊಪ್ಪು leucas aspera (willd) spreng , ತೊಗತೆ ಸೊಪ್ಪು, ತೊರಮೆ ಸೊಪ್ಪು, ದೊಡ್ಡಗೋಣಿ ಸೊಪ್ಪು portulaca oleracea, ದೊಡ್ಡ ಉಪ್ಪುಳಿಕೆ ಸೊಪ್ಪು, ದೊಡ್ಡಪಾತ್ರೆ ಸೊಪ್ಪು coleus amboimicus, ನುಗ್ಗೆ ಸೊಪ್ಪು Moringa oleifera, ಪಾಲ್‌ಕೀರೆ ಸೊಪ್ಪು holostemna annularis, ಬೆಟ್ಟದ ತೊರಮೆ ಸೊಪ್ಪು, ಬಸಳೆ ಸೊಪ್ಪು Basella albavar rubra, ಬೆಳೆ ಸೊಪ್ಪು rothia indica, ಬಳ್ಳಿ ಸೊಪ್ಪು, ಮಂಡೆ ಸೀಗೆ ಸೊಪ್ಪು,

ಮುಳ್‌ಕೀರೆ ಸೊಪ್ಪು amaranthus spinous, ಮುಳ್ಳು ಹೊನ್ನಗೊನೆ ಸೊಪ್ಪು alternanthera pungens, ಸಬ್ಬಸಿಗೆ ಸೊಪ್ಪು Anethum graveolens, ಸಾಸಿವೆ ಸೊಪ್ಪು Brassica Campestris, ಸೀಗೆ ಸೊಪ್ಪು acacia sinuate, ಸೀರಣಿಗೆ ಸೊಪ್ಪು, ವನಗಲೆ ಸೊಪ್ಪು, ವನಾಲಿ ಸೊಪ್ಪು Achlys triphylla, ಹರವೆ ಸೊಪ್ಪು amaranthus tricolor, ಹಾಲಸೊಪ್ಪು waatsonia volublis, ಹುರಿ ಕೀರೆ ಸೊಪ್ಪು Amaranthus spinosus ಹೊನಗೊನೆ ಸೊಪ್ಪು alternanthera sessilis

ಮುಂತಾದ ಸೊಪ್ಪನ್ನೂ ಇವರು ಆಹಾರವಾಗಿ ಬಳಸುತ್ತಾರೆ. ನಾಡಿನಲ್ಲಿ ನೈಸರ್ಗಿಕವಾಗಿ ಬೆಳೆದ ಸೊಪ್ಪನ್ನೇ ಹೆಚ್ಚಾಗಿ ಆಹಾರವಾಗಿ ಬಳಸುತ್ತಾರೆ.

### ೬. ೧೪. ೫. ಅಣಬೆ



ಮಳೆಗಾಲದಲ್ಲಿ ಹುಟ್ಟುವ ಅಣಬೆಗಳಲ್ಲಿ ನೂರಾರು ಪ್ರಭೇದಗಳಿವೆ. ಈ ರೀತಿ ಹುಟ್ಟಿದ ಅಣಬೆಗಳಲ್ಲಿ ಕೆಲವನ್ನು ಇವರು ಆಹಾರವಾಗಿ ಬಳಸುತ್ತಾರೆ. ಜೇನುಕುರುಬರು ಆಹಾರವಾಗಿ ಬಳಕೆ ಮಾಡುವ ಅಣಬೆಗಳು ಈ ಕೆಳಗಿನಂತಿವೆ.

ಆನೆಕೆಚ್ಚಲುಅಣಬೆ, ಕಡಲೆಅಣಬೆ, ಕರಡಿಅಣಬೆ, ಕರಿಕುಟ್ಟಅಣಬೆ, ಕಾರೆಅಣಬೆ, ಕಾಸಣಬೆ, ಕುಳಿಮಾವಣಬೆ, ಕೋಟೆಸುತ್ತಣಬೆ, ಕೋಳಿಅಣಬೆ, ಗೊಬ್ಬರಣಬೆ, ಗೋಣಿಅಣಬೆ, ತಡಸುಅಣಬೆ, ತರಗಣಬೆ, ನರ್ವಲ್‌ಅಣಬೆ, ನೇತೆಅಣಬೆ, ನೇರಲಣಬೆ, ನೇರುಅಣಬೆ, ಬಸರಿ ಅಣಬೆ, ಬೀಕಣಬೆ, ಬುರಜಣಬೆ, ಬೇರುಅಣಬೆ, ಬೊಳ್ಳಣಬೆ, ಮಂಜುಅಣಬೆ, ಮಳಲಿಅಣಬೆ, ಮಾಲೆನೇತಣಬೆ, ಮಾವುಅಣಬೆ, ಸುಂಡು ಬೀಕಣಬೆ, ಸೂಜಿನೇಕಣಬೆ, ಹಣ್ಣೆಣಬೆ, ಹುಳಿ ನೇರಲಣಬೆ.

ಅಣಬೆಗಳನ್ನು ಆಹಾರವಾಗಿ ಬಳಸುವ ಕ್ರಮವೂ ವೈವಿಧ್ಯಮಯವಾಗಿದೆ. ಕೆಲವು ಅಣಬೆಗಳನ್ನು ಬೆಂಕಿಯಲ್ಲಿ ಬಾಡಿಸಿ ತಿಂದರೆ ಇನ್ನೂ ಕೆಲವು ಅಣಬೆಗಳನ್ನು ಮಾಂಸದ ಸಾರಿನಂತೆ ಮಾಡಿ ತಿನ್ನುತ್ತಾರೆ. ಮತ್ತೆ ಕೆಲವು ಅಣಬೆಗಳನ್ನು ಹಸಿಯಾಗಿಯೇ ತಿನ್ನುತ್ತಾರೆ.

ಕನ್ನಡದಲ್ಲಿ ತರಗು ಅಣಬೆಯನ್ನು ಜೇನುಕುರುಬ ಭಾಷೆಯಲ್ಲಿ 'ಮಂಜಣಬೆ' ಎಂದು ಕರೆಯುತ್ತಾರೆ. ಮಂಜಣಬೆ ತರಹವೇ ಇದ್ದು, ಕಾಫಿ ಬಣ್ಣ ಇರುವ ಅಣಬೆಯನ್ನು 'ಕೋಳಿ ಅಣಬೆ' ಎನ್ನುವರು.

**ತರಗು ಅಣಬೆಗೆ ಸಂಬಂಧಿಸಿದಂತೆ ಒಂದು ಕಥೆ**



ಒಂದು ಸಲ ಜೇನುಕುರುಬರ ಒಬ್ಬ ವ್ಯಕ್ತಿಯು ಕೂಲಿ ಕೆಲಸಕ್ಕೆ ಹೋಗಿದ್ದ ಅಲ್ಲಿ ತರಗಣಬೆಗಳು ಯತೇಚ್ಛವಾಗಿ ಸಿಕ್ಕಿದವು. ಆತನ ಮನಸ್ಸಿನಲ್ಲಿ ಇವನ್ನೆಲ್ಲಾ ಕಿತ್ತುಕೊಂಡು ಹೋಗಿ ನನ್ನ ಹೆಂಡತಿಯ ಕೈಯಿಂದ ರುಚಿಯಾಗಿ ಸಾರು ಮಾಡಿಸಿ, ಗಂಜಿ ಅನ್ನ ಮಾಡಿಸಿ ಚೆನ್ನಾಗಿ ಊಟ ಮಾಡಬೇಕು ಎಂದುಕೊಂಡು, ಬಹಳ ಕಷ್ಟಪಟ್ಟು ಅವನ್ನೆಲ್ಲಾ ತರಗು ಗರಿಕೆಯಿಂದ ಬಿಡಿಸಿ ಒಂದು ಬಿದಿರಿನ ತಟ್ಟೆಯಷ್ಟು ಕಿತ್ತುಕೊಂಡು ಹೋಗಿ ಹೆಂಡತಿಗೆ ಹೇಳಿದ. ನೋಡು ಇವನ್ನೆಲ್ಲಾ ಬಿಡಿಸಿ ಚೆನ್ನಾಗಿ ತೊಳೆದು ಉಪ್ಪು-ಖಾರ ಹಾಕಿ ಸಾರು ಮಾಡು ಮತ್ತು ಗಂಜಿ ಅನ್ನ ಮಾಡು ಎಂದು ಹೇಳಿ, ಹಾಡಿಯ ಕಡೆ ಓಡಾಡಿಕೊಂಡು ಬರಲು ಹೋದನು. ಆಗ ಹೆಂಡತಿಯು ಅವನ್ನೆಲ್ಲಾ ಚೆನ್ನಾಗಿ ಸೋಸಿ, ಬಿಡಿಸಿ ಸಾರುಮಾಡಿ ಅಡುಗೆ ಮಾಡಿ ಗಂಡ ಬಂದ ಮೇಲೆ ಎಲ್ಲರೂ ಸೇರಿ ಊಟ ಮಾಡೋಣವೆಂದು ತಿಳಿದು ಮನೆಯ ಎಲ್ಲಾ ಕೆಲಸವನ್ನು ಮುಗಿಸಿದಳು. ಗಂಡ ಹೊರಗಿನಿಂದ ಬಂದು ಊಟ ಬಡಿಸು ಎಂದು ಕೇಳಿದ. ತರಗಣಬೆ ಬೆಂದು ಸಣ್ಣಗಾಗಿತ್ತು. ಇಷ್ಟೆನಾ ಎಂದು ಗಂಡ ಕೇಳಿದ. ಅದಕ್ಕೆ ಹೆಂಡತಿ ಬೆಂದು ಇಷ್ಟಾಗಿದೆ ಎಂದಿದ್ದಕ್ಕೆ ಗಂಡ ಇಲ್ಲ. ನೀನು ಎಲ್ಲಾ ತಿಂದು ನನಗೆ ಇಷ್ಟು ಉಳಿಸಿದ್ದೀಯಾ ಎಂದು ಜೋರು ಮಾತನಾಡಿದ. ಹೆಂಡತಿ ಇಲ್ಲ ಇಷ್ಟೇ ಆಗಿದ್ದು ಎಂದು ಬೇಡಿಕೊಂಡಳು. ಹೊಡೆಯಲು ಮುಂದಾಗಿ ಕತ್ತಿಯಿಂದ ಹೊಟ್ಟೆಯನ್ನು ಬಗೆದ, ಅದರೆ ಹೆಂಡತಿ ಹೊಟ್ಟೆಯಲ್ಲಿ ಅಣಬೆ ಇರಲಿಲ್ಲ. ಕರಳು ಮಾತ್ರ ಇತ್ತು. ಆಕೆ ಬೆಳಗಿನಿಂದ ಏನೂ ತಿಂದಿರಲಿಲ್ಲ. ಆಗ ಗಂಡ ಅಯ್ಯೋ ನಾನೆಂತಹ ಪಾಪಿ ಎಂದು ಗೋಳಾಡಿದ. ಹಾಡಿಯ ಜನರೆಲ್ಲಾ ಬಂದು ಗಂಡನನ್ನು ಬೈದು ಅನ್ಯಾಯವಾಗಿ ಒಳ್ಳೆಯ ಹೆಂಡತಿಯನ್ನು ಕೊಂದು ಹಾಕಿದೆಯ ನೀಚ ಎಂದು ಬೈದು ಹೋದರು. ಹೆಂಡತಿಯ ರಕ್ತದ ಮಡುವಿನಲ್ಲಿ ಅವನೂ ಕೊನೆಯುಸಿರೆಳೆದಿದ್ದನು.

ಹೀಗೆ ತರಗಣಬೆ ತರಗು ತರಹ ಇರುತ್ತದೆ. ಬೇಯಿಸಿದಾಗ ಅದು ತುಂಬಾ ಕಡಿಮೆಯಾಗುತ್ತದೆ ಅದು ಅದರ ಗುಣ.

## ೬. ೧೪. ೬. ಹಣ್ಣುಗಳ ವಿವರ

ಕಾಡಿನಲ್ಲಿ ನೈಸರ್ಗಿಕವಾಗಿ ದೊರೆಯುವ ಹಣ್ಣುಗಳನ್ನೂ ಬಳಸುತ್ತಾರೆ ಹಾಗೂ ಸಂಗ್ರಹಿಸುತ್ತಾರೆ. ಸಾಮಾನ್ಯವಾಗಿ ಜೇನುಕುರುಬರು ಬಳಸುವ ಕಾಡಿನ ಹಣ್ಣುಗಳು ಹೀಗಿವೆ.

ಅಡಾವಣ್ಣು, ಅತ್ತಿ ಹಣ್ಣು, ಆಲೆ ಹಣ್ಣು, ಈಚಲು ಹಣ್ಣು, ಉಣ್ಣೆ ಹಣ್ಣು, ಉಪ್ಪಳಿಕೆ ಹಣ್ಣು, ಉಳಿಪ ಹಣ್ಣು, ಎಲ್ಚಿ ಹಣ್ಣು Ziziphus mauritiana/ Ziziphus jujuba, ಒಂದಾರಿ ಹಣ್ಣು, ಕಾರೆ ಹಣ್ಣು, ಗಣಿಕೆ ಹಣ್ಣು Solanum nigrum, ಗ್ವಾಜಿ ಹಣ್ಣು, ಗುಮಟೆ ಹಣ್ಣು, ಗೇಪುರದಣ್ಣು, ಗೇರುಹಣ್ಣು anacardium occidentale, ಚೊಳ್ಳೆ ಹಣ್ಣು, ಜಮ್ಮ ನೇರಳೆ ribes nigrum, ತಡಸಿ ಹಣ್ಣು, ತೂಪುರದಣ್ಣು, ನಾಯಿ ಗುಮಟೆ ಹಣ್ಣು, ನೆಲ್ಲಿ ಕಾಯಿ, ನೇರಳೆ ಹಣ್ಣು Syzygium cumini, ಬಂಜಳಿಕೆ ಹಣ್ಣು, ಬಾಳೆ ಹಣ್ಣು, ಬೇಲದ ಹಣ್ಣು Limonia acidissima, ಮಾವಿನಹಣ್ಣು mangifera indica, ರಾಂಪಲೆ ಹಣ್ಣು, ಸಾಗಡೆ ಹಣ್ಣು, ಸುಂಡೆ ಹಣ್ಣು, ಸೊಟ್ಟೆ ಹಣ್ಣು, ಸೊಡಲೆ ಹಣ್ಣು, ಸೊಳ್ಳೆ ಹಣ್ಣು, ಹಲಸಿನ ಹಣ್ಣು Artocarpus heterophylluss. ಹಿಪ್ಪೆ ಹಣ್ಣು ಇವುಗಳಲ್ಲದೆ ಹುಣಸೆ, ತೂಪುರಕಾಯಿ, ನೆಲ್ಲಿಕಾಯಿ ಮುಂತಾದ ಸ್ವಾಭಾವಿಕ ಕಾಯಿ ಹಾಗೂ ಹಣ್ಣುಗಳನ್ನು ಆಹಾರವಾಗಿ ತೆಗೆದುಕೊಳ್ಳುತ್ತಾರೆ.

ಕಾರಲೆ ಹಣ್ಣಿನಲ್ಲಿ ಹಣ್ಣು ಮತ್ತು ಬೀಜ ಬೇರೆ ಬೇರೆಯಾಗಿರುತ್ತದೆ. ಬೀಜ ಹಣ್ಣಿನ ಹಿಂಭಾಗದಲ್ಲಿರುತ್ತದೆ. ಹಣ್ಣಿನಿಂದ ಬೇರ್ಪಡಿಸಿದ ಬೀಜಗಳನ್ನು ಬಿಸಿಲಿನಲ್ಲಿ ಒಣಗಿಸಿ ತಿನ್ನುತ್ತಾರೆ. ಈ ಬೀಜಗಳು ಬೆಲ್ಲದಂತೆ ಸಿಹಿಯಾಗಿರುತ್ತವೆ. ಆದರೂ ಅಭ್ಯಾಸವಿಲ್ಲದವರು ಈ ಹಣ್ಣಿನ ಮರವನ್ನು ಹತ್ತುವುದು ಅಥವಾ ಮೈಗೆ ಸೋಂಕಿಸಿಕೊಂಡರೆ ಮೈಯೆಲ್ಲಾ ಬೊಬ್ಬೆಗಳೇಳುವುದುಂಟು. ಮೈಮೇಲೆದ್ದ ಗುಳ್ಳೆಗಳನ್ನು ಹೋಗಲಾಡಿಸಲು ತುಪ್ಪರದ ಎಲೆ ಮತ್ತು ಅದರ ಗಿಡದಲ್ಲಿನ ಬುಡದ ಮಣ್ಣನ್ನು ಮೂರು ನಾಲ್ಕು ಸಾರಿ ದೇಹಕ್ಕೆ ಸವರಿಕೊಂಡರೆ ಬೊಬ್ಬೆಗಳು ಮಾಯವಾಗಿ ಬಿಡುತ್ತವೆ.

ತುಪ್ಪದ ಗಿಡದ ಹಣ್ಣುಗಳನ್ನು ಸಹ ತಿನ್ನುತ್ತಾರೆ. ಅದೇ ರೀತಿ ಗೇರು ಹಣ್ಣಿನ ಬೀಜಗಳು ಕಪ್ಪಾಗಿ ಹೊಳೆಯುತ್ತಿರುತ್ತವೆ. ಅವುಗಳೂ ಸಹ ಹಣ್ಣಿನ ಹಿಂಭಾಗದಲ್ಲಿ ಇರುತ್ತವೆ. ಗೇರು ಹಣ್ಣಿನ ಬೀಜಗಳನ್ನು ಮಾಂತ್ರಿಕ ವಿದ್ಯೆಗಳಿಗೆ, ಮುಳ್ಳು ಇತ್ಯಾದಿ ತುಳಿದಾಗ ಉಂಟಾಗುವ ಗಾಯಕ್ಕೆ ಈ ಬೀಜವನ್ನು ಸುಟ್ಟು ಅದರ ಎಣ್ಣೆಯನ್ನು ಗಾಯಕ್ಕೆ ಹಚ್ಚುತ್ತಾರೆ. ಗೇರು ಹಣ್ಣನ್ನು ಯಾವುದಾದರೂ ನಾರಿಗೆ ಪೋಣಿಸಿ ಬಿಸಿಲಿಗೆ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ತಮಗೆ ಬೇಕಾದಾಗ ಜೇನಿನೊಂದಿಗೆ ಗೇರು ಹಣ್ಣನ್ನು ತಿನ್ನುತ್ತಾರೆ.

ಜೊಳ್ಳೆ ಹಣ್ಣು ಮುಳ್ಳಿನಿಂದ ಕೂಡಿದ ಒಂದು ಮರದ ಹಣ್ಣು. ಕೆಲವು ಮರಗಳಲ್ಲಿ ಬಿಡುವ ಹಣ್ಣು ಸಿಹಿಯಾಗಿಯೂ ಮತ್ತು ಇನ್ನು ಕೆಲವು ಮರಗಳ ಹಣ್ಣುಗಳು ಹುಳಿಯಾಗಿಯೂ ಇರುತ್ತವೆ.

ದೊಡ್ಡ ಮಾಗಳಿ ಬೇರು (ದೊಡ್ಡಕಂಬಳ ಹಂಬು)ಕಾಫಿಯ ಜೊತೆ ಬೆರೆಸಿ ಕುಡಿದರೆ ಸುವಾಸನೆ ಇರುತ್ತದೆ.

**೬. ೧೫. ಜೇನು ಸಂಗ್ರಹಣೆ**

ಮೈಸೂರು, ಚಾಮರಾಜನಗರ, ಕೊಡಗಿನಲ್ಲಿರುವ ಜೇನುಕುರುಬರು ಹೆಸರೇ ಸೂಚಿಸುವಂತೆ ಇವರು ತಮ್ಮ ಜೀವನದ ಬಹುಕಾಲವನ್ನು 'ಜೇನಿನ ಬೇಟೆ'ಯಲ್ಲಿ ಕಳೆಯುತ್ತಾರೆ. ಇವರು ಜೇನು ನೊಣಗಳು ಹಾರುವುದನ್ನು ನೋಡಿಯೇ ಅದೆಷ್ಟು ದೂರದಲ್ಲಿ ಯಾವ ದಿಕ್ಕಿನಲ್ಲಿ ಜೇನುಗೂಡು ಕಟ್ಟಿದೆ ಎಂಬುದನ್ನು ಗುರುತಿಸಬಲ್ಲರು. ಯಾವ ಕಾಲದಲ್ಲಿ ಯಾವ ತರಹದ ಜೇನು ಸಿಗುತ್ತದೆಂದೂ ಹೇಳಬಲ್ಲರು. ಆದರೆ ಕಂಡ ಕಂಡಲ್ಲಿ ಯಾವಾಗಲೂ ಜೇನನ್ನು ಕೀಳುವುದಿಲ್ಲ. ಹಾಗಾಗಿ ಜೇನು ಇಳಿಸುವುದು ಒಂದು ಜಾಣ್ಮೆಯ ವಿಧಾನವಾಗಿದೆ.

ನಾಣಚಿಗದ್ದೆ ಹಾಡಿಯ ಜಿಮ್ಮಿ ಮತ್ತು ಸುಬ್ಬ ಇವರ ಮಾಹಿತಿಯಂತೆ, ಜೇನು ಕೀಳಲು ಹೋಗುವವರು ಮೊದಲು'ಮೂಡ ಮುಳಗ ದೈವ'ಕ್ಕೆ ನಮಸ್ಕರಿಸಿ, ಪೂಜೆಯನ್ನು ಮಾಡಿ ಜೇನು ಕುಯ್ಯುವವನು (ಬರೆಕಾರ) ಏಣಿಯನ್ನು ಹತ್ತಿ ಜೇನನ್ನು ಕುಯ್ಯುತ್ತಾನೆ. ಆಗ ಈ ರೀತಿ ಹಾಡುತ್ತಾನೆ

ಜೇನೇ ಬರೆಕಾರ ಬಂದನಂತೆ

ಜೇನು ಬರೆಕಾರನ ಹೆಡ್‌ತಿ ಮುಂಡೆಗೋಳು

ಜೇನು ಮುಂದೆ ಬರಾದ್ ವೀಣಾ ತಟ್ಟೆ ॥ಜೇನೇ ॥

ಜೇನು ಹಿಂದೆ ಬರದ್ ತಲೆಯ ತುಪ್ಪ ಜೇನೇ

ಗುಳು... ಗುಳು.

ಜೇನೇ ಆಕಾಶದ ಅರಮನೆ ॥

ಜೇನೇ ಏಳೋನೊರದ ಏಣಿ ಕಟ್ಟಿ ಜೇನೇ

ಗುಳು...ಗುಳು

ಜೇನೇ ಬರೆಕಾರ ಬಂದನಂತೆ ॥

ಜೇನು ಬರೆಕಾರನ ಹೆಡ್ತಿ ಮುಂಡೆಗೋಳು

ಜೇನು ಮುಂದೆ ಬರಾದ್ ವೀಣಾ ತಟ್ಟೆ ॥

ಜೇನು ಹಿಂದೆ ಬರದ್ ತಲೆಯ ತುಪ್ಪ ಜೇನೇ

ಗುಳು... ಗುಳು ॥

ಜೇನೇ ಸುಳಿಗೊಂಡಿ ನೀರ್ ಎತ್ತಿ ॥

ಜೇನೆ ಸುಳಿದಾಡಿ ಬರಾ ಜೆನು

ಜೇನೇ ಸೌಂತೆಯ ಹೂವ ಕೀದ್ ॥

ಜೇನೇ ಸ್ವಂತ ಬೂತು ನಾಡಾದಲ್ಲ

ಜೇನೇ ಅಡವಾಯ ಹೂವ ಕೀದ್ ॥

ಜೇನೇ ಅಡರ್ ತಿಂಗಕ್ಕೆ ನಾಡಾದೆಲ್ಲಾ ಜೇನೇ

ಗುಳು... ಗುಳು ॥

ಜೇನೇ ಬಂಡೆಯ ಹೂವ ಕೀದ್ ॥

ಜೇನೇ ಬಂಡಾರ್ ತಿಂಗಕ್ಕೆ ನಾಡಾದಲ್ಲ

ಗುಳು... ಗುಳು ॥

ಜೇನೇ ಇಂಬಿಯ ಹೂವ ಕೀದ್॥

ಜೇನೇ ಇಂಬರ್ ತಿಂಗಕ್ಕೆ ನಾಡಾದೆಲ್ಲಾ

ಗುಳು... ಗುಳು ॥

ಜೇನೆ ಮಲ್ಲಿಗೆ ಹೂವ ಕೀದ್ ॥

ಜೇನೇ ಮುಂಗಾರ ತಿಂಗಕ್ಕೆ ನಾಡಾದಲ್ಲಾ

ಜೇನು ಹುಟ್ಟುವ ಏಳಾಳು ಅಣ್ಣ ತಮ್ಮ ॥

ಜೇನು ಬೇಲಿವಾಗ ರಾಗಿಸಾಲ್ ॥

ಜೇನುತುಪ್ಪ ಹುಡುಕುತ್ತಾ ಕಾಡಿಗೆ ಹೋಗುವ ಸಂದರ್ಭದಲ್ಲಿ ಮನೆಯಿಂದ ಹೊರಡುವವರೆಲ್ಲರೂ ಯಾವುದಾದರೊಂದು ದಿಕ್ಕಿನಲ್ಲಿ ಕಾಡಿಗೆ ಹೋಗಬೇಕೇಂದು ತೀರ್ಮಾನಿಸಿ ಕಾಡಿನಲ್ಲಿ ಬೇರೆ ಬೇರೆ ದಾರಿ ಹಿಡಿದು ಹೋಗುತ್ತಾರೆ. ಎಲ್ಲರೂ ಒಂದೇ ಕಡೆ ಸೇರಲು ಮರದ ಬುಡಕ್ಕೆ ಹೊಡೆದು ಶಬ್ದ ಮಾಡುತ್ತಾರೆ. ಆ ಶಬ್ದ ಆಲಿಸಿ ಎಲ್ಲರೂ ಒಂದು ಕಡೆ ಸೇರುತ್ತಾರೆ.

### ೬. ೧೫. ೧. ಜೇನು ಬೇಟೆಯಲ್ಲಿ ರಾತ್ರಿಯ ವಾಸ


ಸಾಮಾನ್ಯವಾಗಿ ಹತ್ತರಿಂದ ಹದಿನೈದು ಜನರ ಗುಂಪು ಜೇನು ಬೇಟೆಗೆ ಹೋಗುತ್ತಾರೆ. ಕಾಡಿನಲ್ಲಿ ಜೇನು ಇರುವ ಅಕ್ಕ ಪಕ್ಕದಲ್ಲಿ ರಾತ್ರಿಯನ್ನು ಕಳೆಯಲು ಒಂದು ಸ್ಥಳವನ್ನು

ನಿರ್ಧರಿಸಿಕೊಳ್ಳುತ್ತಾರೆ. ಅಲ್ಲಿ ಬೆಂಕಿಯನ್ನು ಹಾಕಿ ತಂಗಲು ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಾರೆ. ಮಲಗಲು ನೆಲಕ್ಕೆ ಬಳ್ಳಮುತ್ತಾಯಿ ಹಂಬು ಮತ್ತು ಸುಳ್ಳಿ ಸೊಪ್ಪನ್ನು ಮುರಿದು ಹಾಕಿ ಅದರ ಮೇಲೆ ಮಲಗುತ್ತಾರೆ. ಸೊಪ್ಪನ್ನೇ ಹೊದಿಕೆಯಾಗಿ ಬಳಸಿಕೊಳ್ಳುತ್ತಾರೆ.

ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ನಾವು ತಂಗುವ ಜಾಗದಲ್ಲಿನ ಸುತ್ತ ಇರುವ ಮರಗಳಿಗೆ ಮೊದಲೇ ಕತ್ತಿಯಿಂದ ಮೆಟ್ಟಲು ಹೊಡೆದಿರುತ್ತಾರೆ. ಇದು ಪ್ರಾಣಿಗಳು ಬರುತ್ತಿವೆ ಎಂಬ ಶಬ್ಧವನ್ನು ಕೇಳಿದಾಗ ಬೇಗ ಮರವೇರಲು ಅನುಕೂಲವಾಗುತ್ತದೆ.

ಅವೆಲ್ಲಾ ಅವರನ್ನು ರಕ್ಷಿಸಿಕೊಳ್ಳುವ ಮುನ್ಸೂಚನೆ, ಗುಂಪು ಗುಂಪಾಗಿ ಬೇಟೆಗೆ ಹೋದಾಗ ದೂರ ದೂರ ಇದ್ದಾಗ ಪ್ರಾಣಿಗಳು ಬರುವ ಮುನ್ಸೂಚನೆ ಕಂಡು, ಒಬ್ಬರಿಗೊಬ್ಬರು ಮಾತನಾಡಿಕೊಳ್ಳದೇ, ಕೇವಲ ಪ್ರಾಕೃತಿಕ ಶಬ್ದಗಳಿಂದ ಮಾತನಾಡಿಕೊಳ್ಳುತ್ತಾರೆ. ಅಂದರೆ *"ಅತ್ತವಾಗಬೇಡ. ನಂಗ ಜೊತೆಗೆ ಬಾರ"* ಎಂದು ಕರೆಯಲು ಕಾಡಿನಲ್ಲಿರುವ ಹಳೆಯ ಬಿದ್ದು ಹೋಗಿರುವ ಮರಕ್ಕೆ ಕತ್ತಿಯಲ್ಲಿ ತಟ್ಟುತ್ತಾರೆ. ಆಗ ಮುಂದೆ ಹೋಗಿರುವ ವ್ಯಕ್ತಿ ಹಿಂದಕ್ಕೆ ಬರುತ್ತಾನೆ. ಇನ್ನೂ ಬೇರೆ ಬೇರೆ ಶಬ್ದಗಳನ್ನು ಮಾಡುತ್ತಾರೆ. ಬಿದ್ದಿರುವ ಮರದ 'ದದ್ದು' [ಗಂಟು] ಗೆ ಹೊಡೆಯುವುದು. ಹಳೆಯ ಬಿದಿರಿನ ಕೊರಟಿಗೆಯನ್ನು ಉರುಳಿಸಿ ಶಬ್ದ ಉಂಟು ಮಾಡುತ್ತಾರೆ.

### ೬. ೧೫. ೨. ಜೇನು ಜಾಡು ಕಂಡು ಹಿಡಿಯುವುದು



ಜೇನು ನೊಣ ಹೋಗಿ ಬರುವ ಹಾದಿಯನ್ನೇ ಕ್ರಮಿಸಿ ಅದರ ಗೂಡುಗಳನ್ನು ಕಂಡುಹಿಡಿಯುತ್ತಾರೆ. ಗುಂಯ್... ಗುಂ... ಯ್ ಶಬ್ಧದಲ್ಲಿ ಜೇನುಹುಳುವಿನ ಚಲನ ವಲನವನ್ನು ಕಂಡುಹಿಡಿಯುತ್ತೇವೆ.

ಸಾಮಾನ್ಯವಾಗಿ ಜೇನುನೊಣಗಳು ಮದ್ಯಾಹ್ನ ೨.೩೦ ರಿಂದ ೩.೦೦ ಗಂಟೆಯಲ್ಲಿ ಗೂಡಿನಿಂದ ಹರಿದಾಡುವುದನ್ನು **'ಮುದಿಲು'** ಎನ್ನುತ್ತಾರೆ. ಜೇನುನೊಣಗಳು ಸ್ಥಳಾಂತರಗೊಳ್ಳದೇ ಇರಲೆಂದು ಜೇನುತುಪ್ಪವನ್ನು ಸಂಪೂರ್ಣವಾಗಿ ತೆಗೆಯದೇ ಸ್ವಲ್ಪ ತುಪ್ಪವನ್ನು ಅಲ್ಲಿಯೇ ಬಿಡುತ್ತಾರೆ. ಇದರಿಂದ ಜೇನುನೊಣಗಳು ಅಲ್ಲಿಯೇ ಉಳಿದುಕೊಳ್ಳುತ್ತವೆ.

### ೬. ೧೫. ೩. ಜೇನು ವಿಧಗಳು

ಜೇನುಹುಳುಗಳ ಬಗ್ಗೆ ಅವರ ತಿಳುವಳಿಕೆ ಅಪಾರವಾದುದು. ಕಾಳ ಎಂಬ ವಕ್ತೃವಿನ ಪ್ರಕಾರ ಹಲವು ಬಗೆಯ ಜೇನು ಹುಳುಗಳಿವೆ.

**ಧೂಳು ಜೇನು** : ಬೇಸಿಗೆ ಸಂದರ್ಭದಲ್ಲಿ ಕಾಡು ಬೆಂದು ಹೆಚ್ಚು ಗಾಳಿ ಬೀಸುತ್ತಿರುವಾಗ ಆ ಗಾಳಿಯ ರಭಸಕ್ಕೆ ಜೇನುಹುಳು ಗೂಡು ಕಟ್ಟಲು ಪ್ರಾರಂಭಿಸುತ್ತವೆ. ಇದಕ್ಕೆ 'ಧೂಳು ಜೇನು' ಎಂದು ಕರೆಯುತ್ತಾರೆ. ಜೇನು ಕಟ್ಟುವ ಪ್ರಾರಂಭದ ದಿನಗಳಾದ್ದರಿಂದ ಮುಂದಿನ ದಿನಗಳಿಗೆ ಜೇನಿನ ಉತ್ಪತ್ತಿ ಹೆಚ್ಚಾಗಲು ಧೂಳು ಜೇನು ಕಿತ್ತರೂ ಸಹಿತ ಮರಿಗಳನ್ನು ಸಾಯಿಸುವುದಿಲ್ಲ.

**ಹೆಜ್ಜೇನು** : ಅರಣ್ಯದ ಮಧ್ಯದಲ್ಲಿರುವ ದೊಡ್ಡ ಮರಗಳಲ್ಲಿ ಮತ್ತು ಕಲ್ಲು ಬಂಡೆಗಳಲ್ಲಿ ಈ ಜೇನು ಗೂಡುಗಳಿರುತ್ತವೆ. ಈ ಜೇನುಗೂಡಿನಲ್ಲಿ ಹೆಚ್ಚಿನ ತುಪ್ಪವಿರುತ್ತದೆ. ಜೇನು ಮೇಣವು ಸಹ ಅತಿಯಾಗಿ ದೊರೆಯುತ್ತದೆ. ಹೆಜ್ಜೇನಿನಲ್ಲಿ ಮತ್ತೆ ಎರಡು ವಿಧಗಳನ್ನು ಗುರುತಿಸುತ್ತಾರೆ.

**ಕನ್ನೇರಿ ಜೇನು** : ಈ ಜೇನನ್ನು ಹಗಲು ವೇಳೆಯಲ್ಲಿ ತೆಗೆಯಬಹುದಾಗಿದೆ. ಇದು ಮರದ ಕೊಂಬೆಗಳಲ್ಲಿ ಇರುತ್ತದೆ. ಮರದ ಕೆಳಗೆ ಬೆಂಕಿ ಹಾಕಿದರೆ ಹೊಗೆಯ ಬೇಗೆಗೆ ಜೇನುಹುಳುಗಳು ಹಾರಿಹೋಗುತ್ತದೆ. ಈ ಜೇನು ಸಿಹಿಯೂ ಆಗಿರುತ್ತದೆ. ನೀರು ಇರುತ್ತದೆ. ಮರಿ ಜೇನು ಎರಡನ್ನೂ ಸುಟ್ಟು ತಿನ್ನುತ್ತಾರೆ. ನಾರಾಗೆಣಸನ್ನು ಸುಟ್ಟು ಜೇನುತುಪ್ಪದಲ್ಲಿ ಅದ್ದಿಕೊಂಡು ತಿನ್ನುತ್ತಾರೆ. ಕನ್ನೇರಿ ತಿಂಗಳಿನಲ್ಲಿ ಜೇನು ಗೂಡು ಕಟ್ಟುವುದರಿಂದ ಇದನ್ನು ಕನ್ನೇರಿ ಜೇನು ಎಂದು ಕರೆಯುತ್ತಾರೆ. ಜೇನು ಭಾಷೆಯಲ್ಲಿ ಕನ್ನೇರಿ ಎಂಬುದು ತಿಂಗಳಿನ ಹೆಸರು ಇದು ಇಂಗ್ಲೀಷ್ ಭಾಷೆಯ ಸೆಪ್ಟಂಬರ್ ಮಾಹೆಯಾಗಿರುತ್ತದೆ.

**ಮುಂಗಾರು ಜೇನು** : ಮುಂಗಾರು ಜೇನಿನಲ್ಲಿ ಐವತ್ತು-ಅರವತ್ತು ರಷ್ಟು ಜೇನುಹುಟ್ಟುಗಳು ಇರುತ್ತವೆ.

**ತುಡೆ ಜೇನು** : ಇದು ಕೊಂಬೆಯಲ್ಲಿ ಗೂಡು ಕಟ್ಟಿಕೊಂಡಿರುವ ಜೇನು. ಸಾಮಾನ್ಯವಾಗಿ ಹೆಚ್ಚು ತುಪ್ಪವನ್ನು ಒಳಗೊಂಡಿರುವ ಜೇನುಗೂಡು. ತುಡೆ ಜೇನು ಮರದ ಪೊಟರೆಯ ಒಳಗೆ ಇದ್ದರೆ ಮರದ ಕಾಂಡವನ್ನು ತಟ್ಟಿ ಕಿವಿಯನ್ನು ಮರಕ್ಕೆ ತಗುಲಿಸುತ್ತಾರೆ. ಜೇನು ಇದ್ದರೆ, ಕಿವಿಗಳಿಗೆ ಗುಂಯ್... ಂಯ್... ಂಯ್... ಎಂದು ಗುಂಯಿಗುಡುವ ಶಬ್ಧ ಕೇಳಿ ಬರುತ್ತದೆ. ಇದರಿಂದ ಜೇನು ಇದೆ ಎಂಬುವುದು ತಿಳಿಯುತ್ತದೆ. ಜೇನುಹುಳು ಕಚ್ಚಿದರೆ ಇಪ್ಪತ್ತ್ನಾಕು ಗಂಟೆಯವರೆಗೂ ಬಾತು ಕೊಂಡಿರುತ್ತದೆ. ಮುಳ್ಳು ಚುಚ್ಚಿದ್ದರೆ ಚುಚ್ಚಿದ ತಕ್ಷಣವೇ ಮುಳ್ಳನ್ನು ಕೀಳಬಾರದು. ಊತ ಜಾಸ್ತಿಯಾಗುತ್ತದೆ. ಕಪ್ಪು ತುಡೆಬೆ ಜೇನು ಹೆಚ್ಚು ಕಚ್ಚುತ್ತದೆ.

ತುಡೆ ಜೇನಿನಲ್ಲಿ ಅಡವಿ ತುಡೆ, ಬಿಳಿತುಡೆ, ಕೊಂಬು ತುಡೆ, ಎಂಬ ವಿಧಗಳಿವೆ.

**ಅಡವಿ ತುಡೆ** : ಇದು ಮರದ ಪೊಟರೆ, ಹುತ್ತದ ಒಳಗೆ ಕಟ್ಟುತ್ತದೆ. ಹುಳು ಕಡಿಮೆ ಇರುತ್ತದೆ. ತಟ್ಟೆಯು ಕಡಿಮೆ ತುಪ್ಪವೂ ಕಡಿಮೆಯೇ ಇದು ಮಾರ್ಚಿನಿಂದ ಜೂನ್‌ವರೆಗೂ ಇರುತ್ತದೆ. ಅರ್ಧಲೀಟರ್‌ಗಿಂತಲೂ ಕಡಿಮೆ ಇರುತ್ತದೆ. ತುಪ್ಪ ತಿನ್ನಲು ಬಳಸಿಕೊಳ್ಳುತ್ತಾರೆ.

**ಬಿಳಿತುಡೆ** : ಬಿಳಿಬಣ್ಣದಲ್ಲಿರುತ್ತವೆ. ಹುಳುಗಳು ಎಳೆ ಮರಿಗಳು.

**ಕೊಂಬುತುಡೆ** : ಇದು ಮರದ ಕೊಂಬೆಯಲ್ಲಿ ಕಟ್ಟುತ್ತದೆ. ಐದು ಆರು ತಟ್ಟೆಗಳನ್ನು ಮಾತ್ರ ಇಟ್ಟಿರುತ್ತದೆ. ಮಾರ್ಚಿಯಲ್ಲಿ ಇಡುವ ಈ ಜೇನನ್ನು ಏಪ್ರಿಲ್ – ಮೇ ತಿಂಗಳಿನಲ್ಲಿ ಕೀಳಲು ಯೋಗ್ಯವಾಗಿರುತ್ತದೆ, ಇದು ಕಚ್ಚುವುದಿಲ್ಲ. ಹೆಚ್ಚು ಎಂದರು ಎಂಟರಿಂದ ಹತ್ತು ಲೀಟರ್ ತುಪ್ಪ ಸಿಗುತ್ತದೆ.

**ನಸರೇ ಜೇನು** : ನಸರೇ ಜೇನನ್ನು ತಿನ್ನುವ ಮಾರಾಟ ಮಾಡುವ ಉದ್ದೇಶದಿಂದ ಕೇಳುವುದಿಲ್ಲ. ಇದು ಔಷಧಿಗೆ ತುಂಬಾ ಉಪಯುಕ್ತವಾಗುತ್ತದೆ. ಆದ್ದರಿಂದ ಒಂದು ಕಡೆ ನಸರೇ ಜೇನು ಇದೆ ಎಂದೂ ಗೊತ್ತಾದರೂ ಅದನ್ನು ಅಲ್ಲಿಯೇ ಬಿಟ್ಟಿರುತ್ತಾರೆ. ಸುಟ್ಟಗಾಯಕ್ಕೆ ನೇರವಾಗಿ ಇದನ್ನು ಹಚ್ಚಬೇಕು. ಮಕ್ಕಳಿಗೆ ದೊಡ್ಡವರಿಗೆ ಕೆಮ್ಮು, ಶೀತ, ಆದರೆ ಇದನ್ನು ಬಳಸುವುದರಿಂದ ಕೆಮ್ಮು, ಶೀತ ವಾಸಿಯಾಗುತ್ತದೆ. ನಸರೇ ಮೇಣವನ್ನು ತೆಗೆದು ಕಯ್ಯಾಸೊರೆಬುರುಡೆಯ ತೂತು ಮುಚ್ಚಲು ಬಳಸುತ್ತಾರೆ. ಇದು ಕಡುಕಪ್ಪಾಗಿರುತ್ತದೆ. ಎಷ್ಟೇವರ್ಷವಾದರೂ ಕೆಡುವುದಿಲ್ಲ. ಕರಗುವುದಿಲ್ಲ. ಇದರ ಮೇಣವನ್ನು ಉಂಡೆಕಟ್ಟಿ ಇಟ್ಟುಕೊಂಡು ಅವಶ್ಯಕತೆಗೆ ಇರುವ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಆರು ವರ್ಷದಿಂದ ಹಾಗೆಯೇ ಇಟ್ಟಿರುವ ಉದಾಹರಣೆ ಕ್ಷೇತ್ರಕಾರ್ಯದಲ್ಲಿ ದೊರೆತಿದೆ.

**ಕಡ್ ಜೇನು** :

ಕಡ್ ಜೇನಿನಲ್ಲಿ ಮೂರು ವಿಧಗಳಿವೆ. ಕಡ್ಡಿಜೇನು, ಎಮ್ಮೆ ಕಡ್‌ಜೇನು, ಸತ್ತವರ ಕಡ್‌ಜೇನು.

**ಕಡ್ಡಿಜೇನು** : ಇದು ಕಡ್ಡಿಯಲ್ಲಿ ಮರದ ಪೊಟರೆ ದದ್ದು (ಗಂಟು)ವಿನಲ್ಲಿ ಕಟ್ಟುತ್ತದೆ. ಬಿದಿರು ಕಡ್ಡಿ ಒಣಗಿದ್ದರೆ ಮರದ ಪಡಸೆ (ಪೊದೆ)ಯಲ್ಲಿ ಕಟ್ಟುತ್ತದೆ. ಇದು ಮಾರ್ಚ್ – ಏಪ್ರಿಲ್ ತಿಂಗಳಿನವರೆಗೂ ಇರುತ್ತದೆ. ಬೆಳಗ್ಗೆ ಹೊತ್ತು ಮಾತ್ರ ಕೀಳುತ್ತಾರೆ, ಸಣ್ಣ ಮಕ್ಕಳಿಗೆ ಔಷಧಿಗೆ ಬಳಸುತ್ತಾರೆ. ಒಂದರಿಂದ ಎರಡು ಲೀಟರ್ ತುಪ್ಪ ಇರುತ್ತದೆ.

**ಎಮ್ಮೆ ಕಡ್‌ಜೇನು** : ಇದರ ಹುಳುಗಳು ದೊಡ್ಡ ಜಾತಿಯ ಹುಳುಗಳು. ಆದ್ದರಿಂದ ಇದಕ್ಕೆ ಎಮ್ಮೆ ಕಡಜೇನು ಎಂದು ಹೆಸರು ಬಂದಿದೆ.

**ಸತ್ತವರ ಕಡ್‌ಜೇನು** : ಇದರ ವಿಶೇಷವೇನೆಂದರೆ ಇದು ತುಪ್ಪ ಕಟ್ಟುವುದೇ ಇಲ್ಲ ಇದರ ಸಂತತಿ ಕಡಿಮೆ ಆಹಾರ ತಿಂದು ಬಂದು ಕೂರುತ್ತದೆ ಅಷ್ಟೇ. ತುಪ್ಪ ಮಾಡುವುದಿಲ್ಲ. ಅಗತ್ಯಕ್ಕೆ ತಕ್ಕಷ್ಟು ಸಂತಾನೋತ್ಪತ್ತಿ ಮಾಡಿಕೊಳ್ಳುತ್ತದೆ.

**ಅಟ್ಟೆಕಾ** : ಅಟ್ಟೆಕಾ [ಜೇನು ಹುಳದ ಮರಿ] ಇದನ್ನು ತಿನ್ನುತ್ತಾರೆ. ಇದು ಎಲ್ಲಾ ಕಾಲ ಋತುಮಾನದಲ್ಲಿಯೂ ಸಿಗುವಂತಹದ್ದು. ಮರದ ಕೊಂಬೆಯ ತುದಿಯಲ್ಲಿ ಕಟ್ಟುತ್ತದೆ. ಒಂದೂವರೆ ಅಡಿಯಷ್ಟು ಉದ್ದ ಮತ್ತೇ ದಪ್ಪ ಇರುತ್ತದೆ. ಜೇನುಮರಿಯನ್ನು ಜಾಸ್ತಿ ಉತ್ಪತ್ತಿ ಮಾಡುತ್ತದೆ. ಅಟ್ಟೆಕಾದಲ್ಲಿ ವಿಷ ಜಾಸ್ತಿ ಇರುತ್ತದೆ. ಬೆಂಕಿ ಹಾಕಿ ತಟ್ಟೆ ಸಹಿತವಾಗಿ ಜೇನು ಮರಿಯನ್ನು ಸುಟ್ಟು ತಿನ್ನುತ್ತಾರೆ.



ಇದನ್ನು ಹೆಚ್ಚು ಬಳಸುವುದೇ ಇಲ್ಲ. ಇದು ತುಂಬಾ ಕಹಿಯಾಗಿರುವುದರಿಂದ ತಿನ್ನುವುದೇ ಬಹಳ ವಿರಳ.

ಈ ರೀತಿಯಾಗಿ ಕಾಡಿನಲ್ಲಿ ಸಿಗುವ ಜೇನನ್ನು ಹುಡುಕಿ ತಮ್ಮ ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳುವ ಜೇನುಕುರುಬರು ಅದನ್ನೇ ಮೂಲ ವೃತ್ತಿಯಾನ್ನಾಗಿ ಬಹಳ ಹಿಂದಿನಿಂದಲೂ ಅನುಸರಿಸುತ್ತಾ ಬಂದಿರುವುದರಿಂದಲೇ ಜೇನುಕುರುಬರು ಎಂಬ ಹೆಸರನ್ನು ಪಡೆದಿದ್ದಾರೆ. ಇವರಿಗೆ ಜೇನುಹುಳುಗಳ ಚಲನ ವಲನ ಜೇನುಸಂಗ್ರಹ ವಿಧಾನ ಅದನ್ನು ಬಹಳ ದಿನಗಳವರೆಗೂ ಕೆಡದಂತೆ ಇಟ್ಟು ಕೊಳ್ಳುವ ತಂತ್ರಗಾರಿಕೆಯನ್ನು ಹಿರಿಯರಿಂದಲೇ ಪಡೆದಿದ್ದಾರೆ.

### ೬. ೧೫. ೪ ಜೇನು ಕೀಳಲು ಅಗತ್ಯವಿರುವ ವಸ್ತುಗಳು

ಜೇನು ತೆಗೆಯಲು ಹೋಗುವ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅವುಗಳೆಂದರೆ

ವರಜಿ : ಜೇನು ಇಳಿಸುವಾಗ ಸೊಂಟಕ್ಕೆ ಕಟ್ಟಿಕೊಳ್ಳುವ ಹಗ್ಗ.

ಮೂಣಿಯ ಪಾತ್ರೆ : ಜೇನು ಇಳಿಸುವ ಪಾತ್ರೆ.

ಕಂಬು ಕಣಿಹಗ್ಗ : ಸಂಗ್ರಹಿಸಿದ ತುಪ್ಪವನ್ನು ಮೂಣೆಗೆ ಹಾಕಿ ಮರದ ಮೇಲಿಂದ ಕೆಳಗೆ ಇಳಿಸಲು ಮೂಣಿಗೆ ಕಟ್ಟುವ ಹಗ್ಗ

ಬೂಳು ಕಚವಾರಿ : ಒತ್ತೆಗೆ ಕಟ್ಟವ ಹಗ್ಗ

ಕೈರೆನಾರು : ಕೈರೆ ಮರದ ನಾರಿನ ಹಗ್ಗ. ಕೈರೇನಾರನ್ನು ಹದಿನೆಂಟು, ಇಪ್ಪತ್ತು ಮಾರು ಉದ್ದ ಸೀಳಿ ಅದನ್ನೇ ಹಗ್ಗವಾಗಿ ಬಳಸುತ್ತಾರೆ.

ಬಂಡೆನಾರು : ಬಿದಿರಿನ ವಸ್ತು.

ಕೊಟ್ಟ : ಜೇನು ತುಪ್ಪವನ್ನು ತುಂಬಿಸಲು ಬಿದಿರಿನಿಂದ ತಯಾರಿಸಿದ ಸೇರಿನಂತಿರುವ ವಸ್ತು.

ಇತ್ತೀಚೆಗೆ ಸಿಲ್ವರ್ ಪಾತ್ರೆ ಮತ್ತು ಕೊಡಗಳನ್ನು ತೆಗೆದುಕೊಂಡು ಹೋಗುತ್ತಾರೆ. ಜೇನನ್ನು ಕುಯ್ಯುವ ಸಂದರ್ಭದಲ್ಲಿ ಪೂಜೆ ಸಾಮಾಗ್ರಿಗಳನ್ನು ತೆಗೆದು ಕೊಂಡು ಹೋಗುತ್ತಾರೆ. ದೈವಗಳು ಮತ್ತು ತಮ್ಮ ಪೂರ್ವಜರನ್ನು ನೆನೆಸಿ ಪೂಜೆ ಮಾಡುತ್ತಾರೆ. ಹುಳುಗಳು ಹಗಲಿನ ಹೊತ್ತಿನಲ್ಲಿ ಎಚ್ಚರದಿಂದಿದ್ದು, ಹೆಚ್ಚು ಕಚ್ಚಬಹುದೆಂದು ರಾತ್ರಿ ಒಂಬತ್ತು ಗಂಟೆಯ ವೇಳೆಯಲ್ಲಿ ಜೇನನ್ನು ತೆಗೆಯುತ್ತಾರೆ. ಜೇನನ್ನು ತೆಗೆಯುವ ವ್ಯಕ್ತಿ ವರಜ (ಹಗ್ಗ)ಯನ್ನು ತೆಗೆದುಕೊಂಡು ಮರದ ಮೇಲೆ ಹೋಗುತ್ತಾನೆ. ಅದಕ್ಕೆ ಪೂಣೆಯ ಪಾತ್ರೆಯನ್ನು ಕಟ್ಟಿ ಕುಯ್ದು ಜೇನನ್ನು ಇಳಿಸುತ್ತಾನೆ. ಇಳಿಸುವಾಗ ಮರದ ಕೆಳಗಿರುವವನಿಗೆ ಜೇನು ಇಳಿಸಿಕೊಳ್ಳಲು ತಯಾರಿರುವಂತೆ ಶ್‌ಲ್‌ಶ್‌ಲ್‌ಲ್...ಶ್‌ಶ್‌ಲ್‌ಲ್.... ಎಂದು 'ಶಿಳ್ಳೆ' ಯನ್ನು ಮಾಡಿ ಸೂಚನೆಯನ್ನು ಕೊಡುತ್ತಾನೆ.

## ೬. ೧೫. ೫. ಒತ್ತೆ ಕಟ್ಟುವುದು

ಜೇನು ಕೀಳಲು ಬೇಕಾದ ಹೊಗೆಯನ್ನು ಸೃಷ್ಟಿಸಲು ಬಳಸುವ ಮುಖ್ಯವಾದ ಸಾಧನವೇ ಒತ್ತೆ. ಜೇನುನೊಣಗಳಿಗೆ (ಜೇನುಕುನ್ನಿ) ಯಾವುದೇ ಹಾನಿಯಾಗದ ರೀತಿಯಲ್ಲಿ ಪಾರಂಪರಿಕವಾಗಿ ಈ ಒತ್ತೆಯನ್ನು ತಯಾರಿಸುತ್ತಾರೆ. ಇದಕ್ಕೆ ಗಾಂಧಾರಿ ಕಡ್ಡಿ, ಉಣ್ಣೆ ಕಡ್ಡಿ, ದೌಲತ್ ಕಡ್ಡಿ ಮತ್ತು ಹಸಿರು ಸೊಪ್ಪನ್ನು ಬಳಸುತ್ತಾರೆ. ಹುಳುವಿಗೆ ಹತ್ತಿರಕ್ಕೆ ಹಿಡಿದರೆ ಆ ಹೊಗೆಗೆ ಹುಳುಗಳು ಹಾರಿಹೋಗುತ್ತವೆ. ಗಾಳಿಸೊಪ್ಪು ಬಿಟ್ಟು ಕಾಡಿನಲ್ಲಿ ಸಿಗುವ ಎಲ್ಲಾ ಹಸಿರು ಸೊಪ್ಪುಗಳನ್ನು ಈ ಒತ್ತೆಗೆ ಬಳಸಬಹುದಾಗಿದೆ. ಗಾಳಿ ಸೊಪ್ಪಿನಲ್ಲಿ ಖಾರದ ಅಂಶ ಹೆಚ್ಚಾಗಿರುವುದರಿಂದ ಜೇನುಹುಳುಗಳು ಸತ್ತುಹೋಗುತ್ತವೆ. ಆದ್ದರಿಂದ ಈ ಸೊಪ್ಪನ್ನು ಬಳಸುವುದಿಲ್ಲ.

**ಬಂಡೆನಾರಿನ ಒತ್ತೆ** : ಬಂಡೆ ಮರದ ಸಣ್ಣ ಸಣ್ಣ ಕಡ್ಡಿಯನ್ನು ಜೋಡಿಸಿ ಅದರ ನಾರನ್ನು ಕಡ್ಡಿಗೆ ಸೇರಿಸಿ ಕಟ್ಟಿ, ಅದಕ್ಕೆ ಪೂಜೆ ಮಾಡಿ ಜೇನುಕೀಳಲು ಬೆಳಕು ಹಚ್ಚುತ್ತಾರೆ.

**ಬೂಡೆ ಒತ್ತೆ** : ಬೆರಳಿನ ದಪ್ಪದ ಬೂಡೆ ಮರದ ಕಡ್ಡಿಗಳನ್ನು ಅರ್ಧ ಮಾರು ಒಂದು ಹಿಡಿಗೆ ಇಡಿಯುವಷ್ಟು ಕಟ್ಟಿ ಅದನ್ನು ಕೈರೇನಾರು, ಕಾಟೋವರ ನಾರು ಅಥವಾ ಬಂಡೆನಾರಿನಲ್ಲಿ ಬಿಗಿಯಾಗಿ ಎರಡು ಮೂರು ಕಡೆ ಕಟ್ಟುತ್ತಾರೆ.

**ಬದಿರು ಒತ್ತೆ** : ಬೂಡೆ ಮರದ ಒತ್ತೆಯ ತರಹವೇ ಬಿದಿರು ಕಡ್ಡಿಯನ್ನು ಸೀಳಿ ಒಂದು ಹಿಡಿಕೆಯಷ್ಟು ಬಿಗಿಯಾಗಿ ಹಿಡಿದು ಕಾಟೋವರ ಹಂಬಿನಿಂದ ಕಟ್ಟಿ ಅದಕ್ಕೆ ಬೆಂಕಿಯನ್ನು ಹಚ್ಚಿದರೆ ಎರಡು ಮೂರು ಗಂಟೆಗಳ ಕಾಲ ಕಾಡಿನಲ್ಲಿ ಬೆಂಕಿಯನ್ನು ಉರಿಸಲು ಇದು ಸಹಾಯಕವಾಗುತ್ತದೆ.

**ಬಟ್ಟೆ ಒತ್ತೆ** : ಬೂಡೆ ಮರದ ದಪ್ಪದ ದಿಮ್ಮಿಗೆ ಅಷ್ಟೇ ದೊಡ್ಡ ಗಾತ್ರದ ಬಟ್ಟೆಯನ್ನು ಸುಮಾರು ಸುತ್ತು ಸುತ್ತುತ್ತಾ ಹೋಗಬೇಕು. ಒಂದಷ್ಟು ಎರಡು ಕೈಹಿಡಿಯಷ್ಟು ಆದ ಮೇಲು ಬಟ್ಟೆಯನ್ನು ಸಿಗಿದು ಗಂಟು ಹಾಕಿ ಅದನ್ನು ಬೆಂಕಿ ಹಚ್ಚಿ ಬೆಳಕಿಗೆ ಉಪಯೋಗಿಕೊಳ್ಳುತ್ತಾರೆ.

ಜೇನು ಇರುವ ಮರಕ್ಕೆ ಪೂಜಿಸುತ್ತಾರೆ. ತೆಂಗಿನಕಾಯಿ, ಅವಲಕ್ಕಿ, ಬಾಳೆಹಣ್ಣು, ಹೂವು, ಗಂಧಕಡ್ಡಿ ಇಟ್ಟು ಪೂಜೆ ಮಾಡುತ್ತಾರೆ. ಅದರೊಂದಿಗೆ ಅಜ್ಜಯ್ಯನಿಗೆ ಎಲೆ ಅಡಿಕೆ ಸುಣ್ಣ ಹೊಗೆಸೊಪ್ಪನ್ನು ಜೇನು ಇರುವ ಮರದ ಬುಡಕ್ಕೆ ಇಟ್ಟು ನಮಸ್ಕಾರಿಸುತ್ತಾರೆ. ಜೇನು ಕೀಳಲು ಬಿದಿರಿನಿಂದ ಕತ್ತಿಯನ್ನು ತಯಾರಿಸಿಕೊಳ್ಳುತ್ತಾರೆ. ಬಿದಿರನ್ನು ಸೀಳಿ ಚೂಪು ಮಾಡಿಕೊಳ್ಳುತ್ತಾರೆ. ಅದರ ಜೊತೆಗೆ ಕಬ್ಬಿಣದ ಕತ್ತಿಯನ್ನು ರಕ್ಷಣೆಗಾಗಿ ಹಿಡಿದಿರುತ್ತಾರೆ. ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ನೆರವಾಗಲೀ ಎಂಬುದು ದೊಡ್ಡ ಮರದಲ್ಲಿ ಮೆಟ್ಟಿಲು ಮಾಡಿಕೊಳ್ಳಲು ಪೊದೆಗಳನ್ನು ಕಡಿದು ಮಲಗಲು ಜಾಗ ಮಾಡಿಕೊಳ್ಳಲು ಕಬ್ಬಿಣದ ಕತ್ತಿಯನ್ನು ಸಿದ್ದವಾಗಿಟ್ಟು ಕೊಂಡಿರುತ್ತಿದ್ದರು. ಜೇನು ಹಿಡಿದಿರುವ ಮರ ತುಂಬಾ ದೊಡ್ಡದೇನಾದರೂ ಆಗಿದ್ದರೆ ಮರವನ್ನು ಹತ್ತಲು ಜೇನು ಹಿಡಿದಿರುವ ಮರದ ಅಕ್ಕ ಪಕ್ಕದಲ್ಲಿರುವ ಸಣ್ಣ ಸಣ್ಣ ಮರಗಳನ್ನೇರಿ ಅವುಗಳ ಸಹಾಯದಿಂದ ದೊಡ್ಡ ಮರದ ಕೊಂಬೆಗಳನ್ನು ಹಿಡಿದು, ಹಿಡಿದು ದೊಡ್ಡಮರ ಹತ್ತುತ್ತಾರೆ. ಬಿದಿರಿನ ಕೊಕ್ಕೆಗಳನ್ನು ಸಿದ್ಧಪಡಿಸಿಕೊಂಡಿರುತ್ತಾರೆ. ಮೊದಲು ಕಿತ್ತ ಜೇನನ್ನು ತ್ಯಾಗಮರದ ಎಲೆ, ಮುತ್ತುಗ ಎಲೆ, ಸುಳ್ಳಿಎಲೆಯನ್ನು ಯಾವುದಾದರೊಂದನ್ನು ಬಳಸಿಕೊಂಡು ಈ ಹಾಳೆಯ ಮೇಲೆ ಕಿತ್ತಂತಹ ಜೇನನ್ನು ಸ್ವಲ್ಪ ಇಟ್ಟು ಮರದ ಬುಡದಲ್ಲಿ ಅಜ್ಜಯ್ಯನಿಗೆ ಎಡೆ ಎಂದು ಇಡುತ್ತಾರೆ. ಕಿತ್ತಂತಹ ಜೇನನ್ನು ಹಾಡಿಗೆ ಬಂದು ಎಲ್ಲರೂ ಸಮ ಭಾಗವಾಗಿ ಹಂಚಿಕೊಳ್ಳುತ್ತಾರೆ.

### ೬. ೧೫. ೬. ಜೇನು ಇಳಿಸುವುದು

ಜೇನು ಇರುವ ಮರದ ಕೆಳಗೆ ಬೆಂಕಿಹಾಕಿ ಹೊಗೆ ಸೃಷ್ಟಿ ಮಾಡುತ್ತಾರೆ. ಒಬ್ಬ ಮರದ ನಾರಿನಿಂದ ಮಾಡಿಕೊಂಡಿರುವ ಬುಟ್ಟಿ 'ಪೂಣಿ'ಗೆ ಅಗಲವಾದ ಎಲೆಗಳನ್ನು ತುಂಬುತ್ತಾನೆ. ಮತ್ತೊಬ್ಬ 'ಒತ್ತೆ' ಕಟ್ಟುತ್ತಾನೆ. ಮರ ಹತ್ತುವವನು ನಾರಿನಿಂದ ಮಾಡಿದ ಪೂಣಿಗೆ ಕಟ್ಟಿದ ಬಹಳ ಉದ್ದವಾದ ಹಗ್ಗವನ್ನು ಸೊಂಟಕ್ಕೆ ಕಟ್ಟಿಕೊಂಡು ಮರ ಹತ್ತುತ್ತಾನೆ. ಬಹಳ ದೊಡ್ಡ ಮರವಾಗಿದ್ದರೆ ಒಂದೇ ಮರದಲ್ಲಿ ಹತ್ತು ಹದಿನೈದಕ್ಕಿಂತಲೂ ಹೆಚ್ಚು ಜೇನುಗೂಡುಗಳು ಕಟ್ಟಿರುತ್ತವೆ. ಒತ್ತೆಯನ್ನು ಬೆಂಕಿಯಲ್ಲಿ ಹತ್ತಿಸಿಕೊಂಡಾಗ ಅದರಿಂದ ದಟ್ಟವಾದ ಹೊಗೆ ಬರುತ್ತಿರುತ್ತದೆ. ಅದನ್ನು ಅವನ ಸೊಂಟದ ಹಗ್ಗಕ್ಕೆ ಕಟ್ಟುತ್ತಾರೆ. ಮರದ ಮೇಲಿನ ಕೊಂಬೆಯ ಮೇಲೆ ಕೂತು ಅದನ್ನು ಮೇಲಕ್ಕೆ ಎಳೆದುಕೊಂಡು ಹೊಗೆ ಕೊಡುತ್ತಾನೆ. ಆಗ ಅಲ್ಲಿದ್ದ ಜೇನು ಹುಳುಗಳು ತಟ್ಟೆಯನ್ನು ಬಿಟ್ಟು ಮೇಲೆ ಏಳುತ್ತವೆ. ಜೇನುಹುಳ ಜೇನುತಟ್ಟೆಯಿಂದ ದೂರಾದ ನಂತರ ಕೊಂಬೆಯನ್ನು ಸವರಿ ಅದಕ್ಕೆ ಕಟ್ಟಿರುವ ಜೇನು ಹುಟ್ಟನ್ನು ಕತ್ತರಿಸುತ್ತಾರೆ. ಆಗ ಪೂಣೆಯನ್ನು ಕಟ್ಟಿದ ಹಗ್ಗವನ್ನು ಮೇಲಕ್ಕೆ ಎಳೆದುಕೊಂಡು ಅದರಲ್ಲಿ ಜೇನುಹುಟ್ಟನ್ನು ಇಟ್ಟು ಕೆಳಗೆ ಬಿಡುತ್ತಾರೆ. ಸಂಪೂರ್ಣವಾಗಿ ಜೇನನ್ನು ಇಳಿಸಿ ಅವನು ಕೆಳಗೆ ಇಳಿದು ಬರುವವರೆಗೂ ಕೆಳಗಿರುವವರು ಮಾತನಾಡುತ್ತಲೋ, ಹಾಡು ಹಾಡುತ್ತಲೋ ಶಬ್ಧ

ಹೊಮ್ಮಿಸುತ್ತಿರುತ್ತಾರೆ. ಪ್ರಾಯಶಃ ಈ ರೀತಿಯಲ್ಲಿ ಧ್ವನಿಹೊರಡಿಸುವ ಉದ್ದೇಶ ಬೇರೆ ಕಾಡು ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ವಿಧಾನವಾಗಿರುತ್ತದೆ.

ಸಂಗ್ರಹಿಸಿದ ಜೇನನ್ನು ಬಿದಿರಿನ ಕೊಟ್ಟಗಳನ್ನು ಎರಡು ಮೂರು ನಾಲ್ಕು ಹೀಗೆ ಒಟ್ಟಾಟ್ಟಾಗಿ ಜೋಡಿಸಿ ಕೈರೇನಾರಸಿಂದ ಕಟ್ಟಿ ಬೆನ್ನಿಗೆ ಹಾಕಿಕೊಂಡು ತುಪ್ಪವನ್ನು ಹೀಗೆ ತರುತ್ತಾರೆ. ಬಿದಿರಿನ ಕೊಟ್ಟ ಮೂರು ಗಿಣ್ಣು ಇದ್ದರೆ ನಾಲ್ಕು ಅಡಿ ಎತ್ತರ ಇರುತ್ತದೆ, ಇದರಲ್ಲಿ ಇಪ್ಪತ್ತು ಕೆ ಜಿ ಜೇನು ತುಪ್ಪವನ್ನು ಸಂಗ್ರಹಿಸಬಹುದು. ಧೂಳು ಜೇನು ಕಿತ್ತ ನಂತರ ಹುಳುಗಳು ಬಂದು ಹಾಗೆ ಕೂರುತ್ತವೆ. ಮುಂಗಾರಿನ ಸಮಯದಲ್ಲಿ ಒಂದೇ ಮರದಲ್ಲಿ ನೂರು ನೂರೈವತ್ತು ಕಡೇ ಜೇನು ಇರುವುದನ್ನು ಕಾಣಬಹುದು. ಬಿದಿರಿನ ಕೊಟ್ಟದ ಜೊತೆಗೆ ಸಿಹಿ ಸೊರೆಬುರುಡೆಯನ್ನು ಕೂಡ ಜೇನುತುಪ್ಪ ಸಂಗ್ರಹಿಸಲು ಬಳಸಿಕೊಳ್ಳುತ್ತಾರೆ. ಬಿದಿರಿನ ಬುಟ್ಟಿಯನ್ನು ಮಾಡಿ ಅದಕ್ಕೆ ತೇಗದ ಎಲೆ, ಮುತ್ತುಗ ಎಲೆಗಳನ್ನು ಬುಟ್ಟಿಯೊಳಗೆ ಹಾಕಿ ಜೇನು ತುಪ್ಪದ ತಟ್ಟೆಯನ್ನು ಹಾಯೆಗೇ ಬಿದಿರು ಬುಟ್ಟಿಗೆ ಇಟ್ಟುಕೊಂಡು ಬಂದು ಹಾಡಿಯಲ್ಲಿಯೇ ತುಪ್ಪವನ್ನು ತಟ್ಟೆಯಿಂದ ಬೇರ್ಪಡಿಸುತ್ತಾರೆ.

### ೬. ೧೫. ೭. ಜೇನುತುಪ್ಪ ಸೋಸುವುದು

ಕಾಡಿನಿಂದ ತಂದ ಜೇನನ್ನು ಮೊದಲು ಸೋಸುತ್ತಾರೆ. ಜೇನುತುಪ್ಪವನ್ನು ಸೋಸಲು ಪಾತ್ರೆಯ ಬಾಯಿಗೆ ಬಟ್ಟೆಕಟ್ಟಿ, ಮೇಣದ ತಟ್ಟೆಯನ್ನು ಮಧ್ಯ ಭಾಗಕ್ಕೆ ಸೀಳಿ ಅದನ್ನು ಬಟ್ಟೆಯ ಮೇಲೆ ಇಟ್ಟರೆ ಜೇನುತುಪ್ಪ ತಾನೆ ತಾನಾಗಿ ಬಸಿಯುತ್ತದೆ. ರಾತ್ರಿ ಈ ವಿಧಾನದಲ್ಲಿ ಜೇನು ಇಟ್ಟರೆ ಬೆಳಗಾಗುವಷ್ಟರಲ್ಲಿ ತುಪ್ಪ ಮತ್ತು ಮೇಣ ಪ್ರತ್ಯೇಕವಾಗಿರುತ್ತದೆ. ಈ ರೀತಿ ಸೋಸಿದ ತುಪ್ಪವನ್ನು ಪಾತ್ರೆಯಲ್ಲಿಟ್ಟು ಸ್ವಲ್ಪ ಕೆಂಡದಲ್ಲಿ ಬಿಸಿ ಮಾಡುತ್ತಾರೆ. ಈ ರೀತಿ ಬಿಸಿ ಮಡುವುದರಿಂದ ತುಪ್ಪದಲ್ಲಿರುವ ನೀರಿನಾಂಶ ನೊರೆಯಾಗಿ ಮೇಲಕ್ಕೆ ಬರುತ್ತದೆ. ಹೀಗೆ ಶುದ್ಧೀಕರಿಸಿದ ತುಪ್ಪ ಎಷ್ಟು ದಿನ ಇಟ್ಟರೂ ಕೆಡುವುದಿಲ್ಲ, ಕಲ್ಲು ಸಕ್ಕರೆಯ ತರಹ ಗಟ್ಟಿಯಾಗುತ್ತದೆ. ಅದು ಪೌಷ್ಟಿಕಾಂಶ ಭರಿತವಾಗಿರುತ್ತದೆ.

ಜೇನು ಸಂಗ್ರಹಿಸುವುದು ಬಹಳ ಕಷ್ಟದ ಕೆಲಸ ಆದರೂ ಕಷ್ಟಗಳನ್ನು ಲೆಕ್ಕಿಸದೇ ಜೇನು ತಟ್ಟೆಯನ್ನು ಮತ್ತು ತುಪ್ಪವನ್ನು ಪಡೆಯುವ ಸಾಹಸ ಇವರದಾಗಿದೆ.

ಮೊದಲು ಸಲ ಕಿತ್ತ ಜೇನನ್ನು ಹಾಡಿಯ ಪ್ರತಿಯೊಂದು ಮನೆಯವರಿಗೂ ಸ್ವಲ್ಪ ಸ್ವಲ್ಪ ಕೊಟ್ಟು ಎಲ್ಲರ ಮನಸ್ಸಿಗೂ ಸಂತೋಷ ಪಡಿಸುತ್ತಾರೆ. ಆನಂತರ ತರುವ ಜೇನನ್ನು ಜೀವನ ನಿರ್ವಾಹಣೆಗೆ ಮಾರಾಟ ಮಾಡಿ ಅಕ್ಕಿ ರಾಗಿಯನ್ನು ತಂದು ಊಟವನ್ನು ತಯಾರಿಸಿಕೊಂಡು ತಿನ್ನುತ್ತಾರೆ.

ಜೇನು ಕೀಳುವ ವೃತ್ತಿಯನ್ನು ಮಾಡಲು ಇತ್ತೀಚಿನ ದಿನಗಳಲ್ಲಿ ಯುವಕರು ಹಿಂಜರಿಯುತ್ತಾರೆ. ಕಾಡು ನಿಧಾನವಾಗಿ ಜೇನುಕುರುಬರಿಂದ ದೂರವಾಗುತ್ತಿದೆ. ಕಾಡಿನಿಂದ ಸ್ವಲ್ಪ ದೂರದ ಬಯಲು

ಪ್ರದೇಶದಲ್ಲಿ ಸರ್ಕಾರ ನಿರ್ಮಿಸಿರುವ ಆಶ್ರಯ ಮನೆಗಳಿಗೆ ಜೇನುಕುರುಬರನ್ನು ವರ್ಗಾಯಿಸಿರುವುದು ಇದಕ್ಕೆ ಕಾರಣವಿರಬಹುದು.

### ೬. ೧೬. ಬೇಟೆ

ಕಾಡನ್ನೇ ನಂಬಿ ಬದಕುವ ಜೇನುಕುರುಬರು ಕಾಡಿನೊಳಗೆ ದೊರೆಯುವ ಗೆಡ್ಡೆ ಗೆಣಸುಗಳಲ್ಲದೆ ಮಾಂಸಾಹಾರವನ್ನು ಸೇವಿಸುತ್ತಾರೆ.ನಾಡಿನ ಜನರಂತೆ ಮಾಂಸವನ್ನು ಮಾರುಕಟ್ಟೆಯಲ್ಲಿ ಕಾಸುಕೊಟ್ಟು ಪಡೆಯಲು ಇವರು ಇಷ್ಟಪಡುವುದಿಲ್ಲ. ಕಾಡಿನೊಳಗೆ ದೊರೆಯುವ ಚಿಕ್ಕಪುಟ್ಟ ಪ್ರಾಣಿಗಳನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುವುದನ್ನು ರೂಢಿಸಿಕೊಂಡಿದ್ದಾರೆ. ಚಿಕ್ಕಪುಟ್ಟ ಹಕ್ಕಿ ಪಕ್ಷಿಗಳಲ್ಲದೆ ಮೀನು ಹಿಡಿಯುವುದು ಇವರ ಇನ್ನೊಂದು ಕಸುಬಾಗಿದೆ.

### ೬. ೧೬. ೧. ಮೀನು ಬೇಟೆ

ಬಿದಿರಿನಿಂದ ಮಾಡಲಾದ ಬಕೀಟಿನಾಕಾರದಲ್ಲಿರುವ ಸಾಡೆ ಅಥವಾ ತಡಕೆಯನ್ನು ಬಳಸಿ ಮೀನುಗಳನ್ನು ಹಿಡಿದು ಆಹಾರವಾಗಿ ಬಳಸುತ್ತಾರೆ.ಗಂಡಸರು ಹೆಂಗಸರು ಎಂಬ ಭೇದವಿಲ್ಲದೆ ಮೀನುಬೇಟೆ ಮಾಡುತ್ತಾರೆ. ಗಂಡಸರು ಸಾಮಾನ್ಯವಾಗಿ ದೊಡ್ಡ ಮೀನನ್ನು ಬೇಟೆಯಾಡಲು ಉದ್ದನೆಯ ಬಿದಿರನ್ನು ಉಪಯೋಗಿಸುತ್ತಾರೆ. ಬಿದಿರಿನ ಮುಂಭಾಗವನ್ನು ಭರ್ಜಿಯಂತೆ ಚೂಪಾಗಿ ಕೆತ್ತಿರುತ್ತಾರೆ. ತೆಳ್ಳಗೆ ಹರಿಯುವ ನೀರಿನಲ್ಲಿ ಒಂದೇ ಕಡೆ ಕಾದಿದ್ದು ದೊಡ್ಡ ಮೀನು ಬಂದಾಗ ಬಿದಿರಿನ ಕೋಲನ್ನು ಜೋರಾಗಿ ಮೀನಿಗೆ ಚುಚ್ಚುತ್ತಾರೆ. ಮೀನು ಅವರ ಬಿದರಿಗೆ ಸಿಕ್ಕುತ್ತದೆ. ಕೊರಮ ಮೀನು, ಮಳಲು ಮೀನು, ಗೆಂಡೆ ಮೀನು, ಬಾಳೆ ಮೀನು, ಮುಳ್ಳು ಮೀನು ಮುಂತಾದ ಮೀನುಗಳನ್ನು ಬೇಟೆಯಾಡುತ್ತಾರೆ.

ಮೀನು ಹಿಡಿಯಲು ಗೋರಿ ಬಿದಿರಿನಬುಟ್ಟಿಯನ್ನು ಬಳಸುತ್ತಾರೆ. ಇದನ್ನು **'ಕೂಳಿ'** ಅಥವಾ **'ಇರುಗುಳಿ'** ಎಂದು ಕರೆಯುತ್ತಾರೆ.

**'ಚಿಕ್ಕ ಕೂಳಿ'**ಯನ್ನು ಹಳ್ಳ ಮುಂತಾದ ತೆಳ್ಳಗೆ ಹರಿಯುವ ನೀರಿನಲ್ಲಿ ಚಿಕ್ಕ ಗಾತ್ರದ ಮೀನನ್ನು ಹಿಡಿಯಲು ಬಳಕೆ ಮಾಡುತ್ತಾರೆ. ಹರಿಯುವ ನೀರಿಗೆ ಅಭಿಮುಖವಾಗಿ ಚಿಕ್ಕ ಕೂಳೆಯನ್ನು ಇಟ್ಟು ಬರುತ್ತಾರೆ. ಈ ಕೂಳೆಯೊಳಗೆ ಮೀನು ಸಿಕ್ಕಿಹಾಕಿಕೊಂಡರೆ ಹೊರಗೆ ಬರಲು ಸಾಧ್ಯವಾಗುವುದಿಲ್ಲ.

**'ದೊಡ್ಡ ಕೂಳಿ'**ಯನ್ನು ಕೆರೆ ಕುಂಟೆಗಳಲ್ಲಿ ಮೀನು ಬೇಟೆಯಾಡಲು ಉಪಯೋಗಿಸುತ್ತಾರೆ. ಇದರ ಕೆಳಭಾಗ ಅಗಲವಿರುತ್ತದೆ. ಮೇಲ್ಭಾಗ ಕಿರಿದಾಗಿ ಕೈತೂರುವಷ್ಟಿರುತ್ತದೆ. ಮೀನು ಬಂದ ತಕ್ಷಣ ಅದರ ಮೇಲೆ ಕೂಳೆಯನ್ನು ಅಮುಕಿ ಒಳಗೆ ಸಿಕ್ಕಿಬಿದ್ದ ಮೀನನ್ನು ಕೈಯಿಂದ ತೆಗೆದು ಜೋಳಿಗೆಗೆ ಹಾಕಿಕೊಳ್ಳುತ್ತಾರೆ.

ಮಹಿಳೆಯರೂ ಸಹ ಕೂಳಿಗಳನ್ನು ಬಳಸಿ ಮೀನು ಹಿಡಿಯುತ್ತಾರೆ. ಮಹಿಳೆಯರು ಹೆಚ್ಚಾಗಿ ಚಿಕ್ಕ ಗಾತ್ರದ ಕುಚ್ಚು, ಸೋಸಲು ಮೀನುಗಳನ್ನು ಹಿಡಿಯುತ್ತಾರೆ. ಈ ಮೀನುಗಳು ಗಾತ್ರದಲ್ಲಿ ತುಂಬಾ ಚಿಕ್ಕವಿರುತ್ತವೆ. ಇವುಗಳು ನೀರಿನಲ್ಲಿ ಗುಂಪಾಗಿ ಓಡಾಡುತ್ತಿರುತ್ತವೆ. ಸೀರೆ ಅಥವಾ ಲುಂಗಿಯನ್ನು ಬಳಸಿ ಮೀನು ಹಿಡಿಯಲಾಗುತ್ತದೆ.ನೀರು ಹರಿಯುವ ಜಾಗದಲ್ಲಿ ಗೋಣಿ ಚೀಲವನ್ನು ಒಡ್ಡಿ ಮೀನನ್ನು ಹಿಡಿಯುತ್ತಾರೆ. ಬೇಸಿಗೆಯಲ್ಲಿ ಕಟ್ಟೆ ಹಾಕಿ ನೀರು ಖಾಲಿ ಮಾಡಿ ಇರುವ ಮೀನನ್ನು ಸಂಗ್ರಹಿಸುತ್ತಾರೆ.

**ಕಾರೇಕಾಯಿ** : ಮೀನನ್ನು ಹಿಡಿಯಲು ಇವರು ಬಳಸುವ ಮತ್ತೊಂದು ವಿಧಾನ ಕಾರೇಕಾಯಿಗಳನ್ನು ಅಥವಾ ಕಳ್ಳಿಯನ್ನು ಜಜ್ಜಿ ಹೊಳೆ ಅಥವಾ ನದಿ ನೀರಿನ ಮಡುಗಳಲ್ಲಿ ಹಾಕಿಬಿಡುತ್ತಾರೆ. ಕಾರೇಕಾಯಿ ಬೆರೆತ ನೀರನ್ನು ಕುಡಿದಾಗ ಮೀನುಗಳಿಗೆ ಒಂದು ಬಗೆಯ ಮತ್ತು ಬಂದು ಅವುಗಳು ನೀರಿನ ಮೇಲೆ ತೇಲ ತೊಡಗುತ್ತವೆ. ಆಗ ಅವುಗಳನ್ನು ಸುಲಭವಾಗಿ ಹಿಡಿಯುತ್ತಾರೆ. ಈ ರೀತಿಯಲ್ಲದೆ ಸೀರೆ ಬಟ್ಟೆ ಬಳಸಿ ಚಿಕ್ಕ ಸೂಸಲು, ಗುಚ್ಚೆ ಮೀನನ್ನೂ ಸಹ ಹಿಡಿಯುತ್ತಾರೆ. ದೊಡ್ಡ ಮೀನಾದರೆ ಗೆಣಸಿನಂತೆ ಸುಟ್ಟು ಕಾರ ಉಪ್ಪನ್ನು ಬೆರೆಸಿ ತಿನ್ನುತ್ತಾರೆ. ಸಣ್ಣ ಮೀನುಗಳಾದರೆ ಸಾರನ್ನು ಮಾಡಿ ಮುದ್ದೆಯೊಳಗೆ ಊಟ ಮಾಡುತ್ತಾರೆ. ಸಾಮಾನ್ಯವಾಗಿ ಗೆಂಡೆಮೀನು, ಮಳಲಿ ಮೀನು, ಗೋದಮ ಮೀನು, ಕೊರಮ ಮೀನು, ಬರೆ ಮೀನು, ಹಾವು ಮೀನು, ಸೀಗಡಿ ಮೀನು ಇದಲ್ಲದೆ ಮೀನಿನೊಂದಿಗೆ ಏಡಿಯನ್ನೂ ಹಿಡಿದು ನಾನಾ ಪದಾರ್ಥಗಳನ್ನು ತಯಾರಿಸುತ್ತಾರೆ. ಕಲ್‌ನಳ್ಳಿ, ಗುಂಡುಪನಳ್ಳಿ, ಅಸಪ್‌ನಳ್ಳಿ, ಗದ್ದೆನಳ್ಳಿ ಅಥವಾ ಏಡಿಗಳನ್ನೂ ಆಹಾರವಾಗಿ ಬಳಸುತ್ತಾರೆ. ಇತ್ತೀಚೆಗೆ ಗಾಳ, ಬಲೆಗಳನ್ನು ಬಳಸಿ ಮೀನು ಹಿಡಿಯುತ್ತಾರೆ.

### ೬. ೧೬. ೨. ಪಕ್ಷಿ ಬೇಟೆ

ಇವರು ಪಕ್ಷಿಗಳನ್ನು ಬೇಟೆಯಾಡುವ ಕ್ರಮಗಳು ಎರಡು ಬಗೆಯವಾಗಿವೆ. ತಾವೇ ಹುತ್ತದ ಮಣ್ಣಿನಿಂದ ತಯಾರಿಸಿದ ಚಿಕ್ಕ ಗೋಲಿಯ ಗಾತ್ರದ ಮಣ್ಣಿನ ಉಂಡೆಗಳನ್ನು ಬಿದಿರಿನಿಂದ ಮಾಡಿದ ಬಿಲ್ಲಿನ ಹಗ್ಗಕ್ಕೆ ಇರಿಸಿ ಗುರಿಯಿಟ್ಟು ಪಕ್ಷಿಗೆ ಹೊಡೆಯುತ್ತಾರೆ. ಪಕ್ಷಿಗೆ ಜೋರಾಗಿ ಮಣ್ಣಿನ ಉಂಡೆ ತಾಗಿ ಮೂರ್ಛೆ ಹೋಗುತ್ತವೆ ಇಲ್ಲವೆ ಸತ್ತು ಹೋಗುತ್ತವೆ. ಆ ಪಕ್ಷಿಯನ್ನು ಆಹಾರವಾಗಿ ಬಳಕೆ ಮಾಡುತ್ತಾರೆ. ಪಕ್ಷಿಗಳನ್ನು ಹಿಡಿಯುವ ಮತ್ತೊಂದು ಕ್ರಮ ಹೀಗಿದೆ.

ಹೊಂಗೆ ಮರದ ನಾರನ್ನು ತೆಗೆದು ಅದರಿಂದ ಚಿಕ್ಕ ದಾರವಾಗಿ ಹೊಸೆಯುತ್ತಾರೆ. ಅರಳಿಮರದ ಹಾಲು ಸಂಗ್ರಹಿಸಿ ಹಾಲಿಗೆ ಬೆಲ್ಲ ಹಾಕಿ ಅಂಟು(ಕಳಿ) ತಯಾರಿಸುತ್ತಾರೆ ತಾವು ಹೊಸೆದು ತಯಾರಿಸಿಕೊಂಡ ಹೊಂಗೆ ದಾರದ ತುದಿಗೆ ಅಂಟನ್ನು ಸವರುತ್ತಾರೆ. ತಾವು ಹಿಡಿಯಬೇಕೆಂದಿರುವ ಪಕ್ಷಿಯು ಯಾವ ಮರಕ್ಕೆ ಆಹಾರವನ್ನು ಹುಡುಕಿಕೊಂಡು ಬರುತ್ತದೆ ಎಂಬುದನ್ನು ಗುರುತಿಸಿಕೊಂಡು ಆ ಮರಕ್ಕೆ ಅಂಟನ್ನು ಸವರಿದ ದಾರವನ್ನು ಒಂದು ಕೊಂಬೆಗೆ ಕಟ್ಟಿ ದಾರವನ್ನು ಮರಕ್ಕೆ ಜೋಡಿಸಿರುತ್ತಾರೆ. ಹಣ್ಣುಗಳನ್ನು ತಿನ್ನುವ ಆಸೆಯಿಂದ ಬರುವ ಪಕ್ಷಿಗಳು ಆಕಸ್ಮಾತ್ತಾಗಿ ಆ ಅಂಟಿನ

ಮೇಲೆ ಕುಳಿತುಬಿಟ್ಟರೆ ಮೇಲಕ್ಕೆ ಹಾರಲಾಗದೇ ರೆಕ್ಕೆಗಳನ್ನು ಬಡಿಯುತ್ತಾ ಅಲ್ಲಿಯೇ ಇರುತ್ತವೆ. ಹೀಗೆ ಅಂಟಿನ ದಾರಕ್ಕೆ ಸಿಕ್ಕು ಹಾರಲಾಗದ ಪಕ್ಷಿಗಳನ್ನು ಹಿಡಿಯುತ್ತಾರೆ.

ಚಿಕ್ಕ ಪಕ್ಷಿಗಳನ್ನು ಹಿಡಿಯಲು ಬಿದಿರಿನ ಕಡ್ಡಿಯನ್ನು ವೃತ್ತಾಕಾರವಾಗಿ ಸೈಕಲ್ಲಿನ ಗಾಲಿಯ ಆಕಾರದಲ್ಲಿ ಕಟ್ಟುತ್ತಾರೆ. ಆ ಗಾಲಿಯ ಮೇಲ್ಭಾಗದಲ್ಲಿಯೂ ಅರ್ಧ ವೃತ್ತಾಕಾರವಾಗಿ ಬಿದಿರ ಕಡ್ಡಿಯನ್ನು ಕೆಳಗಿನ ವೃತ್ತಾಕಾರದ ಬಿದಿರಿನ ಗಾಲಿಗೆ ಹೊಂದುವಂತೆ ಕಟ್ಟುತ್ತಾರೆ. ಈ ಅರ್ಧ ವೃತ್ತಾಕಾರದ ಬಿದಿರಿಗೆ ಹೊಂಗೆ ಮರದ ನಾರನ್ನು ಕಟ್ಟಿ ಅದಕ್ಕೆ ತಾವೇ ತಯಾರಿಸಿಕೊಂಡ ಅಂಟನ್ನು ಸವರಿ ಪಕ್ಷಿಗಳು ಬರುವ ಸ್ಥಳದಲ್ಲಿ ಇರಿಸುತ್ತಾರೆ. ಗಾಲಿಯ ಮಧ್ಯಭಾಗದಲ್ಲಿ ಪಕ್ಷಿಗಳನ್ನು ಆಕರ್ಷಿಸಲೆಂದು ಕಾಳನ್ನು ಚೆಲ್ಲಿರುತ್ತಾರೆ. ಕಾಳಿನ ಆಸೆಗೆ ಬಂದು ಈ ಚಕ್ರದೊಳಗೆ ಪಕ್ಷಿಗಳು ಸಿಕ್ಕಿ ಬೀಳುತ್ತವೆ. ಹೀಗೆ ಚಕ್ರದೊಳಗೆ ಸಿಕ್ಕಿಬಿದ್ದ ಪಕ್ಷಿಗಳನ್ನು ಹಿಡಿದುಕೊಳ್ಳುತ್ತಾರೆ.

ಜೇನುಕುರುಬರಿಗೆ ಪ್ರಾಣಿ ಪಕ್ಷಿಗಳ ಧ್ವನಿಯನ್ನು ಅನುಕರಿಸುವ ಜಾಣ್ಮೆ ಇದೆ. ತಾವು ಮರೆಯಾಗಿದ್ದುಕೊಂಡು ಹಕ್ಕಿಗಳಂತೆ ಕೂಗಿ, ಅವುಗಳನ್ನು ಆಕರ್ಷಿಸಿ ಮೋಸಗೊಳಿಸಿ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡುತ್ತಾರೆ.

**ಪಕ್ಷಿಗಳು**

ಜೇನುಕುರುಬ ಮಹಿಳೆಯರು ಅನೇಕ ಕಾಡಿನ ಪಕ್ಷಿಗಳ ಹೆಸರನ್ನು ಹೇಳಬಲ್ಲರು, ಕೆಲವೊಂದು ಪಕ್ಷಿಗಳ ಹೆಸರನ್ನು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ಉಣ್ಣೆ ಹಕ್ಕಿ, ಕಟಾಟಿಯಾ ಹಕ್ಕಿ, ಕರಿಪೋಳೆ ಹಕ್ಕಿ, ಕಾಡುಕೋಳಿ, ಕಾಗುರ ಹಕ್ಕಿ, ಕುಗ್ಗುಲೆ ಹಕ್ಕಿ, ಕುಟರಕ್ಕಿ, ಕುದುರೆ ಹಕ್ಕಿ, ಕುರುಳೆ ಹಕ್ಕಿ, ಕುವ್ವಾಕೋಳಿ, ಕೆಂಬೂತ, ಕೊಳೆಕೊರ ಹಕ್ಕಿ, ಕೋಗಿಲೆ, ಕೋಲಾಂಡಿ ಹಕ್ಕಿ, ಕಂಬುಗುಬ್ಬಾಣಿ (ಕೆಂಪು ಗೂಬೆ), ಗಾಳಿಗೆಣಸಕ್ಕಿ, ಗಿಜಗ ಹಕ್ಕಿ, ಗಿಡುಗ, ಗೀಣಕ್ಕಿ, ಗುಬ್ಬಾಣಿ ಹಕ್ಕಿ, ಜೇನಬಿಜ್ಜು ಹಕ್ಕಿ, ಜೇನು ಕುಟುರೆ ಹಕ್ಕಿ, ದೊಡ್ಡ ಹಕ್ಕಿ, ನವಿಲು, ನವಿಲು ಕೋಳಿ (ಆಲುಕೂಗ), ನುಚ್ಚರೆ ಹಕ್ಕಿ, ನುಜೆ ಕೆಂಬೂತ, ಪಿರಕೋಳಿ, ಪೊಕ್ಕ ಹಕ್ಕಿ, ಪೋಳ ಹಕ್ಕಿ, ಬಾಲೆ ಸಿಡುಬ, ಬಾವುಲಕ್ಕಿ, ಬಿಳಿಪೋಳಿ, ಮನೆ ಹಕ್ಕಿ, ಮರಬಳಸಕ್ಕಿ, ಮಾದು, ಗೀಣಕ್ಕಿ, ಮಾಪುಳ್ಳಕ್ಕಿ, ಮೀನಕ್ಕಿ (ಮುಳ್ಳಕ್ಕಿ), ಮೂಗುಗಿಣ, ಯಗ್ಗರ ಹಕ್ಕಿ, ರಾಣಿ ಹಕ್ಕಿ, ಸಣ್ಣಬೊಡ್ಡೆ ಹಕ್ಕಿ, ಸಣ್ಣಕೊಲ್ಲಕ್ಕಿ, ಸಿಟ್ಟಕ್ಕಿ, ಸುಂಡೆಗೀಣಕ್ಕಿ, ಸುಳ್ಳಾಲಕ್ಕಿ, ಸೊಕ್ಕಣಹಕ್ಕಿ, ಸೊರಟ, ಸೋಕುನಕ್ಕಿ, ಸೋರೆ ಹಕ್ಕಿ, ಸೋರೆಬಿಜ್ಯ, ಸೋಲಕ್ಕಿ, ಹುಲ್ಲು ಗೀಣಕ್ಕಿ, ಹೇರಿಸಿಡುಬ...

## ೬. ೧೬. ೩. ಪ್ರಾಣಿ ಬೇಟೆ

ಒಂದೊಂದು ಪ್ರಾಣಿ ಪಕ್ಷಿಯ ಬೇಟೆಯನ್ನು ಒಂದೊಂದು ರೀತಿಯ ಉಪಾಯದಿಂದ ಬೇಟೆಯಾಡುತ್ತಿದ್ದರು.

**ಉರುಳು ಬೇಟೆ** : ಕಾಡಿನಲ್ಲಿ ಕೌರಿನಾರು, ತಕ್ಕಳೆ ನಾರುಗಳಿಂದ ಉರುಳು ಮಾಡಿ ಪ್ರಾಣಿಗಳು ಓಡಾಡುವಂತಹ ಸ್ಥಳಗಳಲ್ಲಿ ಭದ್ರವಾದ ಗಿಡಗಳಿಗೆ ಕಟ್ಟಿ, ಪ್ರಾಣಿಗಳು ಬಂದು ಸಿಕ್ಕಿ ಹಾಕಿಕೊಂಡು ಸಾಯುತ್ತಿದ್ದವು. ಅವನ್ನು ಹಿಡಿದು ತಿನ್ನುತ್ತಿದ್ದರು. ಬಹಳ ಚಿಕ್ಕ ಪ್ರಾಣಿಗಳನ್ನು ಚಿಕ್ಕ ದಾರದ ಸಹಾಯದಿಂದ ಹಿಡಿಯುವುದನ್ನು ಕಲಿತರು. ಮೊಲ, ಕೂರ್ಪಂದಿ, ಕಾಡುಕುರಿ, ಕಾಡುಕೋಳಿ, ನವಿಲು ಇಂತಹ ಪ್ರಾಣಿಗಳನ್ನು ಹಿಡಿಯಲು ಬಳಸುತ್ತಿದ್ದರು. ಮೊಲ, ಜಿಂಕೆ, ಕಾಟ, ಕಡವೆ, ಕೆಂಜರಿ, ಉಡ, ಮುಳ್ಳಂದಿ, ಗದ್ದೆಇಲಿ, ನೆರಲ್‌ಹೊರಿ, ತೈರಿಗೆ, ಹಂದಿ ಮುಚ್ಚ, ಪುನುಗು ಬೆಕ್ಕು, ಕೂರ, ಕೀರ, ಕಟೇಕೀರ, ಕಾಡುಬೆಕ್ಕು, ಕರಿ ಆಮೆ, ಸಣ್ಣೆ, ತೋಡ, ಬಿಳಿ ಆಮೆ, ಮುಂತಾದ ಪ್ರಾಣಿಗಳನ್ನು ಬೇಟೆಯಾಡಿ ತಿನ್ನತ್ತಿದ್ದರು. ಹಾಗೆಯೇ ಜಾಲರಿಯಾಕಾರದ ತಂತಿ ಬಲೆಗಳ ಸಹಾಯದಿಂದ ಮುಂಗಸಿ, ಮೊಲಗಳಂತಹ ಪ್ರಾಣಿಗಳನ್ನು ಹಿಡಿಯುತ್ತಾರೆ ತಾವು ಹಿಡಿಯುವ ಕೆಲವು ಪಕ್ಷಿ-ಪ್ರಾಣಿಗಳನ್ನು ರೋಗ ನಿವಾರಣಾ ಮದ್ದನ್ನಾಗಿಯೂ ಬಳಸುತ್ತಾರೆ.

**ಬಿದಿರಿನ ಕತ್ತರಿ ಬೇಟೆ** : ಚಿಕ್ಕ ಮೊಲ, ಕಾಡುಕುರಿ, ಕಾಡುಬೆಕ್ಕು ನವಿಲುಗಳಿಗೆ ಬಿದಿರಿನ ಕತ್ತರಿಯನ್ನು ಮಾಡಿ ಬಿದಿರಿಗೆ ಹಗ್ಗ ಕಟ್ಟಿ ಚಿಕ್ಕ ಕಡ್ಡಿ ಸಿಕ್ಕಿಸಿ ಬಿಡುತ್ತಿದ್ದರು. ಅದನ್ನು ಮುಟ್ಟಿದ ಪ್ರಾಣಿಯು ಬುಟ್ಟಿಯೊಳಗೆ ಬೀಳುತ್ತದೆ.

**ಬಿಡಿ ಬೇಟೆ** : ಬಿಡಿಯನ್ನು ದಾರದಿಂದ ಮಾಡುತ್ತಾರೆ. ಕಡ್ಡಿಗೆ ದಾರ ಕಟ್ಟಿ ಪ್ರಾಣಿ ಪಕ್ಷಿ ಓಡಾಡುವ ದಾರಿಗೆ ಅಕ್ಕಿಯನ್ನು ಹಾಕಿ ಬಿಡಿಯನ್ನು ಕಟ್ಟುತ್ತಾರೆ. ಕಾಡುಕೋಳಿ, ದಪ್ಪ ಅಳಿಲು, ಚಿಕ್ಕ ಅಳಿಲು, ಪಕ್ಷಿಗಳು, ಜಿಂಕೆ ಹಿಂದಿನ ಕಾಲುಗಳು ಸಿಕ್ಕಿದರೆ ಅದೂ ಕೂಡ ಬೀಳುತ್ತದೆ.

**ಬಿಲ್ಲು ಬೇಟೆ** : ಬಿದಿರಿನ ಎರಡು ಕಡ್ಡಿಯನ್ನು ಸೀಳಿ ಅದಕ್ಕೆ ದಾರಕಟ್ಟಿ ಮಣ್ಣಿನ ಉರುಣೆಯನ್ನು ಸಿಕ್ಕಿಸಿ ಪಕ್ಷಿಗೆ ಹೊಡೆದರೆ ಮಣ್ಣಿನ ಉರುಣೆಯ ರಭಸಕ್ಕೆ ಹೆಚ್ಚು ಏಟು ತಗುಲಿ ಪ್ರಾಣಿಯು ತಲೆ ತಿರುಗಿ ಬೀಳುತ್ತಿತ್ತು. ಅದನ್ನು ಹಿಡಿದು ತರುತ್ತಿದ್ದರು.



**ದೊಡ್ಡ ಪ್ರಾಣಿ ಬೇಟೆ** : ಬಿದಿರಿನ ಕಳಲೆಯನ್ನು ಬಳಸಿಕೊಂಡು ಮತ್ತಿನ ನೀರನ್ನು ತಯಾರಿಸಿ ಪ್ರಾಣಿಗಳಿಗೆ ಕುಡಿಯಲು ಇಡುತ್ತಿದ್ದರು. ಆ ನೀರನ್ನು ಯಾವ ಪ್ರಾಣಿ ಕುಡಿಯುತ್ತದೆಯೋ ಅದಕ್ಕೆ ಮತ್ತು ಬಂದು ಸಾಯುತ್ತದೆ. ಕಾಡುಕೋಣ (ಕಾಟಿ), ಕಡವೆ, ಜಿಂಕೆ, ಸಾರಂಗ ಮೊದಲಾದ ಪ್ರಾಣಿಗಳನ್ನು ಈ ರೀತಿ ಬೇಟೆಯಾಡುತ್ತಿದ್ದರು.

**ಬಿಲದ ಬೇಟೆ** : ಚಿಪ್ಪುಹಂದಿ, ಮುಳ್ಳುಹಂದಿಯನ್ನು ಹಿಡಿಯಲು ಬಿಲದ ಪ್ರವೇಶ ದ್ವಾರಕ್ಕೆ ಬೆಂಕಿ ಹಾಕಿ, ಬಿಲದೊಳಗೆ ಹೊಗೆ ಆವರಿಸುವಂತೆ ಮಾಡುತ್ತಾರೆ. ಆಗ ಬಿಲದಲ್ಲಿರುವ ಪ್ರಾಣಿಗಳು ಉಸಿರುಗಟ್ಟಿ ಸಾಯುತ್ತವೆ. ಪ್ರಾಣಿ ಸತ್ತಿರುವುದನ್ನು ತಿಳಿದು ಅಲ್ಲಲ್ಲಿ ತೂತು ಮಾಡಿ ಹೊಗೆಯನ್ನು ಹೊರಗೆ ಬಿಡುತ್ತಾರೆ. ಹೊಗೆ ಆರಿದ ಮೇಲೆ ಸತ್ತು ಹೋಗಿರುವ ಪ್ರಾಣಿಯನ್ನು ಎಳೆದು ಹೊರಗೆ ತರುತ್ತಿದ್ದರು.

**ಗುಂಡಿ ಬೇಟೆ** : ಸಣ್ಣ ಸಣ್ಣ ಗುಂಡಿ ಮಾಡಿ ಗುಂಡಿಗೆ ಪ್ರಾಣಿಗಳನ್ನು ಬೀಳಿಸಿ ಚಿಕ್ಕ ಚಿಕ್ಕ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.

ಅರಣ್ಯಾಧಾರಿತ ಬಿಗಿಯಾದ ಕಾನೂನುಗಳ ಜಾರಿಯಿಂದಾಗಿ ಇಂದು ಕಾಡುಗಳಲ್ಲಿ ಪ್ರಾಣಿ ಬೇಟೆಯು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿದೆ.

**ಎಲೆ ಅಡಿಕೆ**

ಜೇನುಕುರುಬ ಪುರುಷರು ಮತ್ತು ಮಹಿಳೆಯರು ಸಾಮಾನ್ಯವಾಗಿ ಎಲೆ ಅಡಿಕೆ ಜಗಿಯುತ್ತಾರೆ. ಜೊತೆಗೆ ಹೊಗೆಸೊಪ್ಪು, ಕಡ್ಡಿಪುಡಿಯ ಬಳಕೆ ಹೆಚ್ಚಾಗಿದೆ. ಕಾಡಿನಲ್ಲಿ ಉಣ್ಣೆಗಿಡದ ಎಲೆ, ಗಂಧದ ಮರದ ಚಕ್ಕೆಗೆ ಸುಣ್ಣ ಸೇರಿಸಿ ತಿಂದರೆ ಎಲೆಅಡಿಕೆ ತಿಂದಂತೆಯೇ ಆಗುತ್ತದೆ.

**ಹೆಂಡ ತಯಾರಿಕೆ**

ಕಾಡಿನಲ್ಲಿ ಸಿಗುವ ಕೆಲವು ಹಣ್ಣುಗಳಿಂದ ಸಾರಾಯಿ ಅಥವಾ ಹೆಂಡವನ್ನು ತಯಾರಿಸುತ್ತಾರೆ. ಹುಣಸೆ ಹಣ್ಣು, ತಡಸಿಹಣ್ಣು, ಸಾಗಣೆ ಹಣ್ಣುಗಳನ್ನು ಚೆನ್ನಾಗಿ ಎರಡು ಮೂರು ದಿನ ನೀರಿನಲ್ಲಿ ನೆನೆ ಹಾಕಿದರೆ ಅದು ಹುಳಿಬರುತ್ತದೆ. ಅದನ್ನು ಸೋಸಿದರೆ ಅದು ಸಾರಾಯಿ ಆಗುತ್ತಿತ್ತು, ಅದನ್ನು ಕುಡಿಯುತ್ತಾರೆ. ಹೆಂಗಸರೂ ಕುಡಿಯುತ್ತಾರೆ.

ಕಪ್ಪು ಬೆಲ್ಲ, ಅವಲು(ಅವಲಕ್ಕಿ), ಕಳ್ಳಂಬುಬಳ್ಳಿ ಕತ್ತರಿಸಿ ತಡಸಲು ಮರದ ಚಕ್ಕೆಯನ್ನು ಕಳಲಿನಲ್ಲಿ ನಾಲ್ಕು ದಿನ ನೆನೆ ಹಾಕುತ್ತಾರೆ. ನಂತರ ಅದು ಹುಳಿ ಬರುತ್ತದೆ. ಆ ಮೇಲೆ ಅದರ ಮೇಲೆ ಇರುವ ನೊರೆಯನ್ನು ತೆಗೆದು ಸೋಸಿಕೊಂಡು ಅದನ್ನು ಸಾರಾಯಿಯಾಗಿ ಉಪಯೋಗಿಸುತ್ತಾರೆ.

ಬೈನೆ ಮರದ ಕೊನೆಗಳಿಗೆ ಮಡಿಕೆಯನ್ನು ಕಟ್ಟಿ ಬಂದರೆ ಸಂಜೆವರೆಗೆ ನೀರು ಸಂಗ್ರಹವಾಗುತ್ತಿತ್ತು. ಅದು ತುಂಬಾ ಹುಳಿ ಇರುವುದರಿಂದ ಅದನ್ನು ಸೇಂದಿಯಾಗಿ ಕುಡಿಯಲು ಉಪಯೋಗಿಸುತ್ತಿದ್ದರು.

**ದಾಸ ಕೊಬ್ಬಳ** : ಇದನ್ನು ಪುಡಿ ಮಾಡಿ ಕಾಫಿಯ ಪುಡಿಯಂತೆ ಮಾಡಿ ಇದನ್ನು ಹಾಕಿ ಕಾಫಿಯಂತೆ ಕುಡಿಯಬಹುದು.

**ಆಲೆಗಿಡ** : ಆಲೆಬೇರಿನ ಪುಡಿಯ ಹಿಟ್ಟನ್ನು ಚಪಾತಿ ತರಹ ಮಾಡಿ ತಿನ್ನಬಹುದು ಇದರ ಬೇರಿನಲ್ಲಿ ಗೆಣಸು ಇರುತ್ತದೆ ಇದನ್ನೂ ತಿನ್ನಬಹುದು.

## ೭. ೧೭. ಆಹಾರ ಸಂಸ್ಕರಣೆ

ಪ್ರಾಣಿಗಳ ಆಹಾರದಂತೆ ಗಡ್ಡೆಗೆಣಸುಗಳನ್ನು ಸಂಗ್ರಹಿಸಿ ಕೆಡದಂತೆ ಕಾಯ್ದಿರಿಸಿಕೊಳ್ಳುವ ಜಾಣ್ಮೆ ಜೇನುಕುರುಬ ಮಹಿಳೆಯರಿಗಿದೆ. ಪುರುಷರು ಬೇಟೆಯಾಡಿ ಅಥವಾ ಕಾಡಿನಲ್ಲಿ ತಿರುಗಾಡಿ ಆಹಾರ ಸಂಗ್ರಹಣೆ ಮಾಡಿದರೆ ಮಹಿಳೆಯರು ಆಹಾರವನ್ನು ಸಂಸ್ಕರಿಸಿ ಸಂಗ್ರಹಿಸುವಲ್ಲಿ ತುಂಬಾ ಜಾಣ್ಮೆಯನ್ನು ತೋರುತ್ತಾರೆ. ವರ್ಷದಲ್ಲಿ ಆರು ತಿಂಗಳು ಮಾತ್ರ ಆಹಾರ ಸಂಗ್ರಹಿಸಲು ಬಳಸಲಾಗುತ್ತದೆ. ಇನ್ನೂ ಆರು ತಿಂಗಳು ಆಹಾರ ಸಂಗ್ರಹಿಸಲು ಸಾಧ್ಯವಾಗದ ರೀತಿಯಲ್ಲಿ ಮಳೆ ಇರುತ್ತದೆ. ಹೀಗಾಗಿ ಮಳೆಗಾಲದಲ್ಲಿ ಸಂಗ್ರಹಿಸಿ ಇರಿಸಿಕೊಂಡ ಆಹಾರವನ್ನು ಬಳಕೆ ಮಾಡುವುದಷ್ಟೆ ಕೆಲಸ ಇವರದು.

ಜೇನುಕುರುಬರು ಕಿರು ಮತ್ತು ದೊಡ್ಡಗಾತ್ರದ ಪ್ರಾಣಿಗಳನ್ನೆಲ್ಲಾ ತಿನ್ನುತ್ತಾರೆ. ಕಿರುಗಾತ್ರದ ಪ್ರಾಣಿಗಳಲ್ಲಿ ಅಳಿಲು, ಮುಂಗಸಿ, ಮರಬೆಕ್ಕು, ಕಾಡುಬೆಕ್ಕು, ಕಬ್ಬಲಕ್ಕಿ (ಬಾವುಲಿ), ಗವುಜಲಕ್ಕಿ, ಬೆಳವ, ಪಾರಿವಾಳ, ಕಾಡುಕೋಳಿ, ಊರುಕೋಳಿ, ನೀರುಹಕ್ಕಿ, ಬುರಲೆ, ಮುಂತಾದ ಪ್ರಾಣಿ ಪಕ್ಷಿಗಳನ್ನು ತಿನ್ನುತ್ತಾರೆ. ಇವುಗಳ ಮಾಂಸ ತುಂಬಾ ಕಡಿಮೆ ಇರುವುದರಿಂದ ಇವುಗಳನ್ನು ಸಂಗ್ರಹಿಸಿ ಇಡಲು ಅಪೇಕ್ಷೆಪಡುವುದಿಲ್ಲ. ಆದರೆ ಕಡವೆ, ಸಾರಗ, ಚಿಗರೆ, ಹಂದಿ, ಮುಳ್ಳುಹಂದಿ, ಉಡ ಮುಂತಾದ ಪ್ರಾಣಿಗಳು ಗಾತ್ರದಲ್ಲಿ ದೊಡ್ಡವಿರುತ್ತವೆ. ಇಂಥ ಪ್ರಾಣಿಗಳನ್ನು ಬೇಟೆಯಾಡಿದಾಗ ತಮಗೆ ಒಂದು ದಿನಕ್ಕೆ ಎಷ್ಟು ಬೇಕೋ ಅಷ್ಟು ಮಾಂಸವನ್ನು ಅಡುಗೆಗೆ ಬಳಸಿ ಇನ್ನುಳಿದುದನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಸಾಮಾನ್ಯವಾಗಿ ದೊಡ್ಡಗಾತ್ರದ ಪ್ರಾಣಿಯನ್ನು ಬೇಟೆಯಾಡಿದಾಗ ಅದರ ಮಾಂಸವನ್ನು ತೆಳ್ಳಗೆ ಕೊಯ್ದು ಬೆಂಕಿಯ ಝಳ ಬರುವಲ್ಲಿ ಒಣಗಿ ಹಾಕುತ್ತಾರೆ. ದಿನಾಲು ಮಾಂಸವನ್ನು ತಿರುವಿ ಹಾಕುತ್ತ ಅದು ಕೊಳೆಯದಂತೆ ನೋಡಿಕೊಳ್ಳುತ್ತಾರೆ. ಹೀಗೆ ಒಣಗಿಸಿದ ಮಾಂಸವು ಸಂಪೂರ್ಣ ನೀರಿನಂಶ ಕಳೆದುಕೊಂಡು ಚೆನ್ನಾಗಿ ಒಣಗಿದಮೇಲೆ ಯಾವುದಾದರೂ ಮಣ್ಣಿನ ಪಾತ್ರೆಯಲ್ಲಿ ಸಂಗ್ರಹಿಸುತ್ತಾರೆ. ಬೇರೆ ಬೇರೆ ಪ್ರಾಣಿಯ ಮಾಂಸವನ್ನು ಪ್ರತ್ಯೇಕವಾದ ಮಣ್ಣಿನ ಪಾತ್ರೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಬೇಟೆಯಾಡಲು ಸಾಧ್ಯವಾಗದ ದಿನಗಳಲ್ಲಿ ಈ ಪದಾರ್ಥವನ್ನು ಆಹಾರವಾಗಿ ಬಳಕೆ ಮಾಡುತ್ತಾರೆ.

ಪ್ರಾಣಿಗಳ ಮಾಂಸದಂತೆ ಮೀನನ್ನು ಸಂಸ್ಕರಿಸಿ ಇರಿಸಿಕೊಳ್ಳುವ ಜಾಣ್ಮೆ ಜೇನುಕುರುಬ ಮಹಿಳೆಯರಲ್ಲಿದೆ. ದೊರೆತ ಮೀನುಗಳಲ್ಲಿ ಅಡುಗೆ ಮಾಡಿ ಮಿಕ್ಕಬಹುದಾದ ಮೀನುಗಳ ಹೊಟ್ಟೆ ಸೀಳಿ ಹೊಟ್ಟೆಯೊಳಗಿನ ಕಸುರನ್ನು ತೆಗೆದು ಮೀನಿಗೆ ಉಪ್ಪನ್ನು ಸವರಿ ಬಿಸಿಲಿಗೆ ಒಣ ಹಾಕುತ್ತಾರೆ. ಹೀಗೆ ಬಿಸಿಲಿಗೆ ಒಣಹಾಕಿದ ಮೀನುಗಳನ್ನು ಪೂರ್ಣವಾಗಿ ಒಣಗಿದ ತರುವಾಯ ಗಡಿಗೆಯಲ್ಲಿ ತೆಗೆದಿಡುತ್ತಾರೆ. ತಮಗೆ ಬೇಕೆನಿಸಿದಾಗ ಅವನ್ನು ಅಡುಗೆಗೆ ಬಳಸುತ್ತಾರೆ. ಕೆಲವೊಮ್ಮೆ ಒಣಗಿಸಿದ ಮೀನನ್ನು ಸುಟ್ಟು ಗಂಜಿಯೊಂದಿಗೆ ನಂಜಿಕೊಳ್ಳಲು ಬಳಸುವುದುಂಟು.

### ೬. ೧೭. ೧ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡುವ ವಿಧಾನ

ಧಾನ್ಯಗಳನ್ನು ಸಂಗ್ರಹಿಸಲು ಸುನಿಗಲು ಮರದ ಚಕ್ಕೆ ಮತ್ತು ಬಿದಿರು ತಟ್ಟಿಯನ್ನು ಉಪಯೋಗಿಸುತ್ತಿದ್ದರು. ಭತ್ತ, ರಾಗಿಯನ್ನು ಸಂಗ್ರಹಿಸಲು ನೆಲಕ್ಕೆ ಬಿದಿರು ಹಾಸುವ ಸಲುವಾಗಿ ಗುಂಡಿಯನ್ನು ತೋಡುತ್ತಿದ್ದರು. ನಾಲ್ಕರಿಂದ ಐದು ಅಡಿಯಷ್ಟು ಗುಂಡಿ ಇರುತ್ತಿತ್ತು. ಅದಕ್ಕೆ ಸುನಿಗಲು ಮರದ ಚೆಕ್ಕೆಯನ್ನು ಜೋಡಿಸುತ್ತಿದ್ದರು. ಆ ಮೇಲೆ ಸಗಣಿಯಿಂದ ಸಾರಿಸುತ್ತಿದ್ದರು. ಅದರೊಳಗೆ ಪ್ರತ್ಯೇಕ ಸುನಿಗಲಿನಲ್ಲಿ ರಾಗಿ, ಭತ್ತ ಹಾಕಿ ತುಂಬಿಸಿ ಸಣ್ಣ ತೂತು ಇರುತ್ತಿತ್ತು. ಅದಕ್ಕೆ ಮಣ್ಣು ಮೆತ್ತಿ ಮುಚ್ಚುತ್ತಿದ್ದರು. ಧಾನ್ಯಗಳು ಬೇಕಾದಾಗ ಮಣ್ಣು ಮೆತ್ತಿದ ತೂತನ್ನು ತೆಗೆದು ಧಾನ್ಯ ಹೊರಗೆ ತೆಗೆದುಕೊಳ್ಳುತ್ತಿದ್ದರು.

### ೬. ೧೮. ಆಧುನಿಕ ಆಹಾರ ಪದ್ಧತಿ

ಕಾಡಿಗೂ ಜೇನುಕುರುಬರಿಗೂ ಪೂರ್ವ ಕಾಲದ ನಂಟೇ ಇದೆ. ತಮ್ಮ ಪರಂಪರಾಗತವಾದ ಬದುಕು ಪ್ರಾರಂಭವಾದದ್ದೇ ಕಾಡಿನ ಮೂಲಕ, ಆದರೆ ಇಂದು ಕಾಡು ಮತ್ತು ಜೇನುಕುರುಬರ ನಡುವಿನ ಅಂತರ ಹೆಚ್ಚುತ್ತಲೇ ಹೋಗುತ್ತಿದೆ. ಈ ಅಂತರ ಜೇನುಕುರುಬರಿಗೂ ಮತ್ತು ಕಾಂಕ್ರೀಟ್ ಕಾಡಿನ ನಾಗರೀಕರಿಗೂ ಇರುವ ಅಂತರವನ್ನು ಕಡಿಮೆ ಮಾಡಿದೆ ಎಂದರೆ ತಪ್ಪಾಗಲಾರದು. ಇದರ ಪರಿಣಾಮ ಸಹಜವಾಗಿಯೇ ನಾಡಿನವರ ಜೀವನಾಭ್ಯಾಸ ಕ್ರಮಗಳನ್ನು ಜೇನುಕುರುಬರು ತಮ್ಮ ಜೀವನ ಕ್ರಮವಾಗಿಸಿಕೊಳ್ಳಲು ಪ್ರಾರಂಭಿಸಿದರು. ಜೊತೆಗೆ ಸರ್ಕಾರಗಳು ಕೂಡಾ ವಿವಿಧ ಯೋಜನೆಗಳ ಮೂಲಕ ಆಧುನಿಕ ಆಹಾರ ವಿಧಗಳನ್ನು ಜೇನುಕುರುಬರಿಗೆ ಪರಿಚಯಿಸಿವೆ. ತಮ್ಮ ಆಹಾರವನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುತ್ತಿದ್ದ ಅಥವಾ ಪ್ರಕೃತಿ ಸಹಜವಾಗಿ ದೊರಕಿಸಿಕೊಳ್ಳುತ್ತಿದ್ದ ಜೇನುಕುರುಬರಿಗೆ ಇಂದು ರೆಡಿಮೇಡ್ ಆಹಾರ ಕ್ರಮವನ್ನು ಅನುಸರಿಸಿಕೊಳ್ಳಲೇಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ಅಕ್ಕಿ , ಜೋಳ, ಗೋಧಿ, ವಿವಿಧ ಬಗೆಯ ಮಸಾಲೆಗಳು, ತಿಂಡಿ ತಿನಿಸುಗಳು ಜೇನುಕುರುಬ ಕಾಲೋನಿಗಳಿಗೆ ಮುಟ್ಟಿವೆ. ಕಾಡು ಮಾಂಸವನ್ನೇ ತಿನ್ನುತ್ತಿದ್ದ ಜೇನುಕುರುಬರು ಇಂದು ಕುರಿ, ಕೋಳಿ, ಹಂದಿ ಮೊದಲಾದ ಪ್ರಾಣಿಗಳ ಮಾಂಸಗಳ ಜೊತೆಗೆ ಆಧುನಿಕ ಆಹಾರಕ್ಕೆ ಹೊಂದಿಕೊಳ್ಳಬೇಕಾಗಿದೆ.

### ೬. ೧೮. ೧ ಆರು ತಿಂಗಳ ಪೌಷ್ಟಿಕ ಆಹಾರ ವಿತರಣಾ ಯೋಜನೆ

ಜೇನುಕುರುಬ ಕುಟುಂಬದ ಸದಸ್ಯರ ಬದುಕಿಗೆ ಆಸರೆಯಾಗಲು ವರ್ಷದಲ್ಲಿ ೬ ತಿಂಗಳು ಪೂರ್ತಿಯಾಗಿ ಜೀವನಾವಶ್ಯಕ ಆಹಾರ ಪದಾರ್ಥಗಳನ್ನು ಉಚಿತವಾಗಿ ಪೂರೈಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ತಮ್ಮ ಆಹಾರವನ್ನು ಮಳೆಗಾಲದಲ್ಲಿ ಹುಡುಕಿಕೊಳ್ಳುವುದು ಇವರಿಗೆ ಕಷ್ಟ ಸಾಧ್ಯ. ಬಿಟ್ಟು ಬಿಡದೇ ಸುರಿಯುವ ಮಳೆಯಿಂದಾಗಿ ಎಷ್ಟೋ ದಿನಗಳವರೆಗೆ ಕುಟುಂಬ ಸದಸ್ಯರು

ಹಾಡಿಯಿಂದ ಹೊರಗೆ ಬರಲು ಸಾಧ್ಯವಾಗದ ಸ್ಥಿತಿಯಿರುತ್ತದೆ. ಇಂತಹ ಎಷ್ಟೋ ಸಂದರ್ಭಗಳಲ್ಲಿ ಮಹಿಳೆಯರು, ಮಕ್ಕಳು ಆಹಾರ ಕೊರತೆಯನ್ನು ಎದುರಿಸುತ್ತಾರೆ. ಈ ಕಾರಣದಿಂದ ಸಮಾಜಕಲ್ಯಾಣ ಇಲಾಖೆಯು ಪೌಷ್ಠಿಕ ಆಹಾರವನ್ನು ಒದಗಿಸಲು ಈ ಯೋಜನೆಯನ್ನು ರೂಪಿಸಿದೆ.

ಮೂರು ಜಿಲ್ಲೆಗಳಲ್ಲಿ ೨೦೦೧ ರ ಜನಗಣತಿ ಪ್ರಕಾರ ೯೮೬೧ ಜೇನು ಕುರುಬ ಕುಟುಂಬಗಳಿಗೆ ಕೊಡಗಿನಲ್ಲಿ ೨೦೫೦, ಚಾಮರಾಜನಗರದಲ್ಲಿ ೩೭೬, ಮೈಸೂರಿನಲ್ಲಿ ೭೪೦೫, ಪ್ರತಿ ತಿಂಗಳು ಕುಟುಂಬವೊಂದಕ್ಕೆ ಅಕ್ಕಿ ೧೫ ಕೆ.ಜಿ, ರಾಗಿ ೧೫ ಕೆ.ಜಿ,ಬೇಳೆ ೨ ಕೆ.ಜಿ, ಹೆಸರು ಬೇಳೆ ೧ ಕೆ.ಜಿ, ಎಣ್ಣೆ ೧ಲೀ, ಸಕ್ಕರೆ ೨ ಕೆ ಜಿ., ೪೫ ಮೊಟ್ಟೆ ನೀಡಲಾಗುವುದು. ಈ ಯೋಜನೆಗೆ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳು ಅನುಷ್ಠಾನಾಧಿಕಾರಿಗಳು ಇರುತ್ತಾರೆ.

**ಮಹಿಳೆಯರ ಪಾತ್ರ** : ಪಾರಂಪರಿಕ ಆಹಾರ ಪದ್ಧತಿಯು ಪ್ರಕೃತಿದತ್ತವಾದ ಆಹಾರವಾಗಿತ್ತು. ಇವುಗಳ ಹುಡುಕಾಟ, ಸಂಗ್ರಹಣೆ, ಸಂಸ್ಕರಣೆ, ಸೇವನೆಯಲ್ಲಿ ಜೇನುಕುರುಬ ಮಹಿಳೆಯರು ವಿಶೇಷ ಕಾಳಜಿಯನ್ನು ಹೊಂದಿರುವರು. ಬೇಟೆಯಾಡುವುದು ಪುರುಷರ ಕಾಯಕವಾದರೆ, ಅದನ್ನು ಸಂಸ್ಕರಿಸುವುದು, ಅಣಿಗೊಳಿಸುವುದು ಮಹಿಳೆಯರು.

**ಆಧುನಿಕತೆ** : ಕಾನೂನಿನ ನೀತಿ ನಿಯಮಗಳು ಇವರನ್ನು ಪಾರಂಪರಿಕ ಆಹಾರ ಪದ್ಧತಿಯಿಂದ ದೂರ ಸರಿಯುವಂತೆ ಮಾಡಿವೆ. ಇಂದಿನ ಫಾಸ್ಟ್ ಫುಡ್ ಸಂಸ್ಕೃತಿ ಜೇನುಕುರುಬರನ್ನೂ ಬಿಟ್ಟಿಲ್ಲ. ಬಣ್ಣಗಳು, ರುಚಿಗಳಿಗೆ ಮಾರುಹೋಗುತ್ತಿದ್ದಾರೆ. ಇದು ಆರೋಗ್ಯದ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತಿದೆ.

### ೬. ೧೯. ಔಷಧಿಯ ಜ್ಞಾನ

ಕಾಡಿನ ಮಕ್ಕಳಾಗಿ ಹುಟ್ಟಿ ಬೆಳೆದು ಬಾಳುತ್ತಿರುವ ಜೇನುಕುರುಬರಿಗೆ ಸಹಜವಾಗಿ ಅರಣ್ಯದ ಪ್ರತಿ ಗಿಡ, ಮರ, ಬಳ್ಳಿಗಳ ಪರಿಚಯ ದಟ್ಟವಾಗಿದೆ. ಕಾಡಿನೊಳಗಿನ ಪ್ರತಿ ಮರ, ಗಿಡ, ಬಳ್ಳಿಗಳ ದೇಶೀಯ ಹೆಸರು, ಅವುಗಳು ಯಾವ ಕಾಲದಲ್ಲಿ ಬೆಳೆಯುತ್ತವೆ, ಫಲ ಕೊಡುತ್ತವೆ, ಅವುಗಳ ಉಪಯೋಗವೇನು, ಯಾವ ಗಿಡದ ಫಲವನ್ನು ಯಾವ ಪಕ್ಷಿ ತಿನ್ನುತ್ತವೆ, ಎಲೆ ಉದುರುವ ಕಾಲ ಯಾವುದು, ಅಕಸ್ಮಾತ್ ಮರಗಿಡಗಳು ಸೊರಗಿದರೆ ಅದಕ್ಕೆ ಕಾರಣ ಏನಿರಬಹುದು ಹೀಗೆ ಇಡೀ ಕಾಡಿಗೆ ಸಂಬಂಧಿಸಿದ ಜ್ಞಾನವು ಇವರಲ್ಲಿದೆ. ಒಂದು ರೀತಿಯಲ್ಲಿ ಕಾಡಿಗೆ ಸಂಬಂಧಿಸಿದ ವಿಶ್ವಕೋಶವೇ ಜೇನುಕುರುಬ ಸಮುದಾಯವೆಂದರೆ ತಪ್ಪಾಗಲಾರದು. ಸ್ಥಳೀಯವಾಗಿ ದೊರೆಯುವ ಮರಗಿಡ ಬಳ್ಳಿಗಳನ್ನು ಬಳಸಿ ನಾಟಿ ಔಷಧಗಳನ್ನು ತಯಾರಿಸುವ ತಿಳುವಳಿಕೆ ಇವರಿಗಿದೆ. ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸ್ವಯಂ ಸಿದ್ಧಪಡಿಸುವ ಈ ಔಷಧಗಳಿಂದ ಸುತ್ತ ಮುತ್ತಲ ಜನರಿಗೂ ನಾಟಿ ಔಷಧವನ್ನು ನೀಡುವ ಮೂಲಕ ತಮ್ಮ ಪರಿಸರದ ಇತರ ಜನಗಳ ಕಾಯಿಲೆಗಳನ್ನು ಗುಣಪಡಿಸುತ್ತಾರೆ.

ಚಿಕಿತ್ಸೆ ನೀಡುವಾಗ ಅನುಭವದ ಮೂಲಕ ರೋಗಗಳನ್ನು ಪತ್ತೆ ಹಚ್ಚುತ್ತಾರೆ. ಹೊಟ್ಟೆನೋವು, ಜ್ವರ, ಶೀತ, ಕೆಮ್ಮುಪಿತ್ತ, ತಲೆಸುತ್ತು, ತೊನ್ನು ಮೊದಲಾದ ರೋಗಗಳಿಗೆ ಗಿಡಮೂಲಿಕೆಗಳಿಂದ ನಾಟಿ ಔಷಧಿ ತಯಾರಿಸಿ ಕೊಡುತ್ತಾರೆ.

ಜೇನುಕುರುಬರು ಸಾಮಾನ್ಯವಾಗಿ ರೋಗ-ರುಜಿನಗಳಿಗೆಲ್ಲಾ ನಾರು ಬೇರು, ಗಿಡಮೂಲಿಕೆ ಮುಂತಾದ ನೈಸರ್ಗಿಕ ವಸ್ತುಗಳನ್ನು ಬಳಸಿ ಔಷಧಿಗಳನ್ನು ತಯಾರಿಸಿಕೊಳ್ಳುತ್ತಾರೆ.

### ೬. ೧೯. ೧. ಸೊಪ್ಪುಗಳು

ಇವರು ಔಷಧಿಗಳಿಗಾಗಿ ಬಳಸುವ ಕೆಲವು ಸೊಪ್ಪುಗಳೆಂದರೆ, ಅಕ್ಕಿಕಾಳು ಸೊಪ್ಪು, ಅಣ್ಣೆ ಸೊಪ್ಪು, ಅಂದಾಲ್ ಸೊಪ್ಪು, ಅವರೆಳೆ ಸೊಪ್ಪು, ಉರಿ ಕೀರೆ ಸೊಪ್ಪು, ಉರಿಮೇಣಸ್ ಸೊಪ್ಪು, ಎಲಿಕಿವಿ ಸೊಪ್ಪು, ಎಲಿರೆಂಬಿ ಸೊಪ್ಪು, ಎಲಿಲುರಿ ಸೊಪ್ಪು, ಎಳುವು ಸೊಪ್ಪು, ಏರಿ ಸಾಸಿ ಸೊಪ್ಪು, ಕಟ್ಟೆ ಸೊಪ್ಪು, ಕನ್ನೆ ಸೊಪ್ಪು, ಕರಿಬೇವು ಸೊಪ್ಪು, ಕಾಡವರೆ ಸೊಪ್ಪು, ಕಾಡಾಗಲ ಸೊಪ್ಪು, ಕಾಡುತುಂಬೆ ಸೊಪ್ಪು, ಕಾಡು ನುಗ್ಗೆ ಸೊಪ್ಪು, ಕೂಳೆ ಸೊಪ್ಪು, ಕೀರೆ ಸೊಪ್ಪು, ಕಂಯ್ಯಾಬೇವು ಸೊಪ್ಪು, ಕೆಂಜುಗ ಸೊಪ್ಪು, ಕೆಂಪು ಕೀರೆ ಸೊಪ್ಪು, ಕೊಂಗಪಟ್ಟಿ ಸೊಪ್ಪು, ಕೊಳಲಿಕೆ ಸೊಪ್ಪು, ಗಣಕೆ ಸೊಪ್ಪು, ಗುಡ್ಡೆವನಗಲೆ ಸೊಪ್ಪು, ಗಂಡುವನನಗಲೆ ಸೊಪ್ಪು, ಗುಮಟೆ ಸೊಪ್ಪು, ತುಂಬಳ ಸೊಪ್ಪು, ತುಂಬೆಸೊಪ್ಪು, ತೊರಮೆಸೊಪ್ಪು, ತೊಗತೆ ಸೊಪ್ಪು, ತೊಂಡೆ ಸೊಪ್ಪು, ದೊಡ್ಡಗುಮಟೆ ಸೊಪ್ಪು, ದೊಡ್ಡತರಸಿ ಸೊಪ್ಪು, ದೊಡ್ಡುಪ್ಪಳಿಕೆ ಸೊಪ್ಪು, ದೋಣಿ ಸೊಪ್ಪು, ನುಗ್ಗೆ ಸೊಪ್ಪು, ಬಳ್ಳಿ ಸೊಪ್ಪು, ಬಾಯಿಬಸಳೆ ಸೊಪ್ಪು, ಬಿಳಿಕೀರೆ ಸೊಪ್ಪು, ಬೂದಿ ಸೊಪ್ಪು, ಬೇಲಿತೊಂಡೆ ಸೊಪ್ಪು, ಬೇಲಿಸೌತೆ ಸೊಪ್ಪು, ಬೇಳೆ ಸೊಪ್ಪು, ಬೊಡ್ಡಣಿಕೆ ಸೊಪ್ಪು, ಬೊಡ್ಡೆ ಸೊಪ್ಪು, ಮಕ್ಕಾಳ ಕೀರೆ ಸೊಪ್ಪು, ಮದ್ದು ಸೊಪ್ಪು, ಮಣ್‌ಸುಸೊಪ್ಪು, ಮರ ಕೀರೆ ಸೊಪ್ಪು, ಮರಸೇಬು ಸೊಪ್ಪು, ಮುಳ್ಳಂದಿ ಸೊಪ್ಪು, ಮುಳ್ಳುಕೀರೆ ಸೊಪ್ಪು, ಮುಳ್ಳುಸಂಬಾರ ಸೊಪ್ಪು, ಮೊಲೆಗಣಿಕೆ ಸೊಪ್ಪು, ವಡ್ಡನ ಸೊಪ್ಪು, ಸಣ್ಣತರುಷ ಸೊಪ್ಪು, ಸಾಸಿವೆ ಸೊಪ್ಪು, ಸೀಗೆ ಸೊಪ್ಪು, ಸೀರಣಿಗೇ ಸೊಪ್ಪು, ಸೂರಲುಕುಡಿ ಸೊಪ್ಪು, ಸೇನೆಗಾಸುಸೊಪ್ಪು, ಹೀರೆ ಸೊಪ್ಪು, ಹುಣಸೆ ಸೊಪ್ಪು, ಹುರಿಕೀರೆ ಸೊಪ್ಪು ಮುಂತಾದವುಗಳನ್ನು ಔಷಧಿಗಾಗಿ ಬಳಕೆ ಮಾಡಿಕೊಳ್ಳುತ್ತಾರೆ.

### ೬. ೧೯. ೨. ಬೇರುಗಳು

ಜೇನುಕುರುಬ ಮಹಿಳೆಯರು ಔಷಧಿಗಾಗಿ ಉಪಯೋಗಿಸುವ ಬೇರುಗಳ ವಿವರಗಳನ್ನು ಕೊಟ್ಟಿದ್ದಾರೆ. ಅವುಗಳೆಂದರೆ, ಅಡಲಿ ಬೇರು, ಅತ್ತಿ ಬೇರು, ಆಲೆ ಬೇರು, ಇಂಡಸ್ ಬೇರು, ಈಲಿ ಬೇರು, ಕಟ್ಟಾ ಬೇರು, ಕಲ್ತಿ ಬೇರು, ಕನ್ನಡಿ ಬೇರು, ಕಯ್ಯಾ ಬೇರು, ಕಳ್ಳಂಗಿ ಬೇರು, ಕಾರೆ ಬೇರು, ಕಾಫಿಸೊಟ್ಟೆ ಬೇರು, ಕೂಳಿ ಬೇರು, ಕೆಂಬರೆ ಬೇರು, ಕೆಂಜಿಗೆ ಬೇರು, ಕೈರೆಬೇರು, ಕೊಂಗಪಟ್ಟಿ ಬೇರು,

ಗವಲೆ ಬೇರು, ಗಾಳಿ ಬೇರು, ಗಿಣಗದ ಬೇರು, ಗಂಡ್‌ಸೀಪೆ ಬೇರು, ಗೌರಿ ಬೇರು, ಜಗಳಗಂಟಿ ಬೇರು, ತವಸಿಗೆ ಬೇರು, ದುರಬಿ ಬೇರು, ದೊಡ್ಡಿ ಬೇರು, ನಳ್ಳಿ ಬೇರು, ನೆಲತಾವರೆ ಬೇರು, ನೆಲಸಂಪಗೆ ಬೇರು, ನಂಜಿನ ಬೇರು, ಬಂಡೆ ಬೇರು, ಬಿಲವಾರ ಬೇರು, ಬೈನೆ ಬೇರು, ಬೊಡ್ಡೆ ಬೇರು, ಭೂರ ಬೇರು, ಮಡದಿಗೆ ಬೇರು, ಮಳಲಿ ಬೇರು, ರತ್ತುಗೊಳ್ಳ ಬೇರು, ಸಣ್ಣಕೀರೆ ಬೇರು , ಸುರಲೆ ಬೇರು , ಸುರಾಲು ಬೇರು, ಸೊಟ್ಟೆ ಬೇರು, ಸೊಡಲಿ ಬೇರು, ಸಂಪಿಗೆ ಬೇರು, ಹುನ್ನಿ ಬೇರು, ಹೊಂಗೆ ಬೇರು, ಹೊನ್ನೆ ಬೇರು ಮುಂತಾದವುಗಳು

ಸ್ನಾನಕ್ಕಾಗಿ ಕಾಡಿನಲ್ಲಿ ಸೀಗೆ ಕಾಯಿಯನ್ನು ನೆನೆಹಾಕಿ ಜಜ್ಜಿ ಅದನ್ನು ಕಲ್ಲಿನಿಂದ ಅರೆದು ತಲೆಗೆ ಮೆತ್ತಿಕೊಂಡು ಸ್ನಾನ ಮಾಡುತ್ತಿದ್ದರು. ಅಂಟುವಾಳ ಕಾಯಿಯನ್ನೂ ಸಹ ಬಳಸುತ್ತಾರೆ.

### ೬. ೧೯. ೩. ರೋಗಗಳು ಮತ್ತು ಅವುಗಳಿಗೆ ಚಿಕಿತ್ಸೆ

ಜೇನುಕುರುಬರಲ್ಲಿ ಕೆಲವೊಂದು ಕಾಯಿಲೆಗಳಿಗೆ ಈ ಕೆಳಕಂಡಂತೆ ಚಿಕಿತ್ಸೆಯನ್ನು ಕೈಗೊಳ್ಳುತ್ತಾರೆ (ಮಾ : ಭೋಜಮ್ಮ, ಮರಳು ಕಟ್ಟೆ ಎ ಹಾಡಿ).

**ಹೊತ್ತು ಸನ್ನಿ :** ಸೂರ್ಯ ಉದಯವಾಗುವಾಗ ಬೀಳುವ ಎಳೆಯ ಬಿಸಿಲಿಗೆ ಜೇನುಕುರುಬರಲ್ಲಿ ಕೆಲವರಿಗೆ ತಲೆಯಲ್ಲಿ ನೋವು ಕಾಣಿಸಿಕೊಳ್ಳುತ್ತದೆ ಮತ್ತು ಸೂರ್ಯ ಮುಳುಗುವ ಸಮಯದವರೆಗೂ ತಲೆ ನೋಯುತ್ತಿರುತ್ತದೆ. ಅಂತಹ ಸಂದರ್ಭದಲ್ಲಿ ತಲೆ ನೋವು ಆದ ವ್ಯಕ್ತಿಯ ಎಡದ ಕಿವಿಯ ಮೇಲ್ಭಾಗದ ಸ್ವಲ್ಪ ಕೂದಲು ಮತ್ತು ಬಲದ ಕಿವಿಯ ಮೇಲ್ಭಾಗದ ಸ್ವಲ್ಪ ಕೂದಲನ್ನು ತೋರು ಬೆರಳಿಗೆ ಸುತ್ತಿಕೊಂಡು ಎಳೆಯುತ್ತಾರೆ. ಆಗ ನರ ಸಡಿಲವಾಗಿ ತಲೆನೋವು ಹೊಗುತ್ತದೆ. ಎಂದು ತಿಳಿಸುತ್ತಾರೆ.

**ಕಿರುನಾಲಿಗೆ ಜಾರುವುದು :** ಕಿರು ನಾಲಿಗೆಯು ಗಂಟಲಿನಿಂದ ಕೆಳಗೆ ಜಾರಿ ದೊಡ್ಡ ನಾಲಿಗೆಯ ಮೇಲೆ ಕುಳಿತಾಗ ಭಯಂಕರ ನೋವು ಕಾಣಿಸುತ್ತದೆ. ಊಟ ತಿನ್ನಲು, ನೀರು ಕುಡಿಯಲು ಆಗುವುದಿಲ್ಲ. ಅಂತಹ ಸಮಸ್ಯೆ ಇರುವುವವರನ್ನು ಒಂದು ಕಡೆ ಕೂರಿಸಿ ಸೇಬಿನ (ಕೆಸ) ದಂಟನ್ನು ಒಂದು ಅಡಿಯಷ್ಟು ಕತ್ತರಿಸಿ ಅದರ ರಸವನ್ನೆಲ್ಲಾ ಒಂದು ತುದಿಗೆ ಎಳೆದು ಬಟ್ಟೆಯನ್ನು ಬಿಗಿಯಾಗಿ ಕಟ್ಟಿ ಕಿರು ನಾಲಿಗೆ ಜಾರಿರುವ ಭಾಗಕ್ಕೆ ಮುಟ್ಟಿಸುತ್ತಾರೆ. ಆ ರಸಕ್ಕೆ ಸುಣ್ಣವನ್ನು ಸವರಿರುತ್ತಾರೆ. ಸುಣ್ಣದ ಬಿಸಿ ಕೆಸದ ರಸದೊಡನೆ ಸೇರಿ ನಾಲಿಗೆಯನ್ನು ಮೇಲಕ್ಕೆ ಎಳೆಯುವಂತೆ ಮಾಡುತ್ತದೆ. ಕಿರು ನಾಲಿಗೆ ಜಾರಿದ ವ್ಯಕ್ತಿಗೆ ದಿನಕ್ಕೆ ಎರಡು ಸಲ ಬೆಳಿಗ್ಗೆ, ಸಂಜೆ ಮೂರು ದಿನ ಮಾಡಿದರೆ ಕಿರುನಾಲಿಗೆ ಮೇಲಕ್ಕೆ ಕುಳಿತುಕೊಳ್ಳುತ್ತದೆ. ಕೆಮ್ಮು (ಗೂರಲು) ಬಂದಾಗಲೂ ಈ ರೀತಿ ಮಾಡುತ್ತಾರೆ. ಇದರಿಂದ ಕೆಮ್ಮು ವಾಸಿಯಾಗುತ್ತದೆ.

ಮಕ್ಕಳಿಗಾಗಲೀ, ದೊಡ್ಡವರಿಗಾಗಲೀ ಏನಾದರೂ ಕೆಲಸ ಮಾಡುವಾಗ, ನಡೆದಾಡುವಾಗ ಕಡ್ಡಿ, ಎಲೆ, ಅಥವಾ ಬಟ್ಟೆ ಏನಾದರೂ ತಾಗಿ ನೋವಾದರೆ ತಗುಲಿದ ಕಡ್ಡಿ, ಎಲೆ, ಬಟ್ಟೆಯಿಂದಲೇ ಮೂರು ಬಾರಿ ನೀವಾಳಿಸುತ್ತಾರೆ. ಇದರಿಂದ ತಗಲಿ ನೋವಾದ ಜಾಗದಲ್ಲಿ ನೋವು ಕಡಿಮೆಯಾಗುತ್ತದೆ.

ದೊಡ್ಡವರಿಗೆ ತಲೆ ನೊವು ಬಂದರೆ ಬೆಳ್ಳುಳ್ಳಿಯನ್ನು ಜಜ್ಜಿ ಹಣೆಯ ಎರಡೂ ಕಡೆ ಚೆನ್ನಾಗಿ ತಿಕ್ಕುತ್ತಾ, ಎಡ ಭಾಗದ ಚರ್ಮವನ್ನು ಎಳೆದು ಹಣೆಯ ಮುಂದೆ ನರವನ್ನು ಎಳೆದು ಹಿಡಿದು, ಒಂದು ಬಟ್ಟೆಯಲ್ಲಿ ನರವನ್ನು ಹಿಡಿದು ನಟಿಗೆಯನ್ನು ತೆಗೆದರೆ ತಲೆನೋವು ಹೋಗುತ್ತದೆ. ಎಂದು ತಿಳಿಸುತ್ತಾರೆ.

**ಅಜೀರ್ಣ ದೋಷ** : ಒಂದು ಲೋಟ ನೀರಿನಲ್ಲಿ ದೊಡ್ಡಪತ್ರೆ ಎಲೆಹಾಕಿ ಕುದಿಸಿ ಸೋಸಿ ಕುಡಿದರೆ ಅಜೀರ್ಣ ದೋಷ ನಿವಾರಣೆಯಾಗುತ್ತದೆ.

**ಅರೆತಲೆನೋವು** : ಬೆಟ್ಟದುಂಡೆಕಾಯಿ ಮತ್ತು ಪಾರಿವಾಳ ಮರದ ಚಿಗುರನ್ನು ಅರೆದು, ಎದೆಹಾಲಿನೊಂದಿಗೆ ಬೆರೆಸಿ ಕುಡಿಸಿದರೆ ಅರೆತಲೆನೋವು ವಾಸಿಯಾಗುತ್ತದೆ.

**ಅಸ್ತಮ ರೋಗ** : ನಿತ್ಯ ಪುಷ್ಪದ ಹೂವುಗಳನ್ನು ಜೇನುತುಪ್ಪದೊಂದಿಗೆ ತಿಂದರೆ ಅಸ್ತಮ ರೋಗ ವಾಸಿಯಾಗುತ್ತದೆ.

**ಇಸುಬು** : ಇಸುಬು ಆದಾಗ ಈಶ್ವರ ತೊಟ್ಟಿಲ ಹಂಬಿನ ಬೇರನ್ನು ತೇಯ್ದು, ನಿಂಬೆ ಹಣ್ಣಿನ ರಸದಲ್ಲಿ ಬೆರೆಸಿ ಸವರಬೇಕು.

**ಉರಿ ಮೂತ್ರ** : ಮಜ್ಜಿಗೆ, ಗೆಣಸು, ಎಳನೀರು, ಕಲ್ಲುಸಕ್ಕರೆ, ಜೀರಿಗೆ ಕಷಾಯ ಇವುಗಳನ್ನು ಸೇವಿಸಿದರೆ ಉರಿ ಮೂತ್ರ ಕ್ರಮೇಣ ನಿಲ್ಲುತ್ತದೆ.

**ಉಳುಕು** : ಹೊಂಗೆಬಳ್ಳಿಯನ್ನು ಸುತ್ತಿ ಕೊರಳಿಗೆ ಕಟ್ಟಿಕೊಂಡರೆ ಉಳುಕು ವಾಸಿಯಾಗುತ್ತದೆ. ಅದನ್ನು 'ಜೇನುನುಡಿ' ಯಲ್ಲಿ ಕೊಂಗಾಪಟ್ಟ (ಹೊಂಗೆನಾರು) ಎಂದು ಕರೆಯುತ್ತಾರೆ. ಉಳುಕು ವಾಸಿಯಾದಂತೆ ಈ ನಾರು ತಾನಾಗಿಯೇ ಬಿದ್ದು ಹೋಗುತ್ತದೆ (ಮಾ : ಸಾವಿತ್ರಿ, ಕೊಳಂಗೇರಿ ಹಾಡಿ)

**ಉಷ್ಣ** : ದೇಹವು ಉಷ್ಣದಿಂದ ಬಳಲುತ್ತಿದ್ದರೆ ಜವನದ ಸೊಪ್ಪನ್ನು ಅರೆದು ತಲೆಗೆಹಾಕಿ ಕಟ್ಟಿದರೆ ದೇಹದ ಉಷ್ಣಾಂಶ ಕಡಿಮೆಯಾಗಿ ಜ್ವರ ನಿಯಂತ್ರಣಕ್ಕೆ ಬರುತ್ತದೆ. ದೇಹದಲ್ಲಿ ಉಷ್ಣಾಂಶ ಜಾಸ್ತಿ ಇದ್ದರೆ ಜವನ ಸೊಪ್ಪನ್ನು ರಾತ್ರಿ ಬೇಯಿಸಿ ಬೆಳಿಗ್ಗೆ ಎದ್ದು ತಿನ್ನುವುದು. ನೆಲ್ಲಿಮಳೆ ಇದರ ಚಕ್ಕೆ ಅರೆದು ಕುಡಿದರೆ ಮೂತ್ರ ವಿಸರ್ಜನೆ ಮಾಡುವಾಗ ಆಗಿರುವಂತಹ ಉಷ್ಣ ಕಡಿಮೆಯಾಗುತ್ತದೆ. ಉಷ್ಣಾಂಶ ಜಾಸ್ತಿ ಇದ್ದರೆ ಕೊಂಟಗೆ ಸೊಪ್ಪನ್ನು ಅರೆದು ಉಪ್ಪಿನಲ್ಲಿ ಹಾಕಿ ಕುಡಿಸಬೇಕು.

**ಎದೆ ನೋವು** : ಮತ್ತಿಮರದ ಚಕ್ಕೆಯ ರಸ ಮತ್ತು ಈ ನೀರು ಕುಡಿದರೆ ಎದೆ ನೋವು ವಾಸಿಯಾಗುತ್ತದೆ. ಈಶ್ವರಿಸೊಪ್ಪು, ಕೆಂಪುಸೊಪ್ಪು ಅರೆದು ಕುಡಿದರೆ ಎದೆನೋವು ವಾಸಿಯಾಗುತ್ತದೆ.

**ಎದೆಹಾಲು ಹೆಚ್ಚಲು** : ಎದೆಹಾಲು ಹೆಚ್ಚಲು ಹೊನಗೊನೆ ಸೊಪ್ಪನ್ನು ಹೆಚ್ಚಾಗಿ ಸೇವಿಸಬೇಕು.

**ಕಡಜ ಕಡಿತ :** ಉದುರುಂಜಿ ಕಾಯಿಯನ್ನು ಕಡಜ ಕಡಿದ ಜಾಗಕ್ಕೆ ಅರೆದು ಲೇಪಿಸಬೇಕು.

**ಕಜ್ಜಿ :** ಬೇವಿನ ಸೊಪ್ಪಿನ ಜೊತೆಗೆ ಅರಿಶಿಣ ಪುಡಿ ಸೇರಿಸಿ ತೇಯ್ದು ಮೈಗೆ ಸವರಿ ಸ್ವಲ್ಪ ಹೊತ್ತು ಬಿಸಿಲಿನಲ್ಲಿ ನಿಲ್ಲಿಸಿ ಸ್ನಾನ ಮಾಡಿಸಿದರೆ ಕಜ್ಜಿ ವಾಸಿಯಾಗುತ್ತದೆ. ಕರಿಮಾವು ಸೊಪ್ಪನ್ನುಅರೆದು ಕಜ್ಜಿಗೆ ಹಚ್ಚಬೇಕು. ಜಿಗಟೆ ಸೊಪ್ಪನ್ನು ಉಪ್ಪಿನಲ್ಲಿ ಸೇರಿಸಿ ತೇಯ್ದು ಹಚ್ಚಿದರೆ ಕಜ್ಜಿ ವಾಸಿಯಾಗುತ್ತದೆ. ತಾತಿ ಸೊಪ್ಪನ್ನು ಉಪ್ಪು ಅರಿಶಿಣದಲ್ಲಿ ಬೆರೆಸಿ ಗುಂಪು ಕಜ್ಜಿಯಾಗಿರುವ ಮಕ್ಕಳ ದೇಹಕ್ಕೆ ಸವರಬೇಕು. ಕೆಂಜುಗದ ಗಿಡದ ಕಾಯಿ ಮತ್ತು ಚಿಗುರನ್ನು ಬೆಣ್ಣೆಯಲ್ಲಿ ತೇಯ್ದು, ಮೈಗೆ ಹಚ್ಚಬೇಕು. ಸ್ವಲ್ಪ ಚಿಗುರನ್ನು ಹೊಟ್ಟೆಗೆ ತಿನ್ನಿಸಬೇಕು ಆಗ ಕಜ್ಜಿ ವಾಸಿಯಾಗುತ್ತದೆ. ನಂದಿ ಮರದ ಚಕ್ಕೆಯನ್ನು ಸುಟ್ಟು ಬೂದಿ ಮಾಡಿ, ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಕಜ್ಜಿಗೆ ಹಚ್ಚಿದರೆ ಕಜ್ಜಿಯು ವಾಸಿಯಾಗುತ್ತದೆ. ಉಪ್ಪು, ಅರಿಸಿಣ, ಬೇವಿನಸೊಪ್ಪು ಹಚ್ಚಿದರೆ ಕಜ್ಜಿ ವಾಸಿಯಾಗುತ್ತದೆ.

**ಕಣ್ಣು ಚೆನ್ನಾಗಿ ಕಾಣಿಸಲು :** ಕಣ್ಣು ಚೆನ್ನಾಗಿ ಕಾಣಿಸಲು ಹೊನಗೊನೆ ಸೊಪ್ಪನ್ನು ಹೆಚ್ಚಾಗಿ ಸೇವಿಸಬೇಕು.

**ಕಣ್ಣು ನೋವು :** ಮರಾಲೆ ಹಂಬಿನ ಹಾಲನ್ನು ಕೈಎಣ್ಣೆಯಲ್ಲಿ ಹಾಕಿ ತಿಕ್ಕಿ, ಎಡಗಣ್ಣಿಗೆ ನೋವಿದ್ದಾಗ ಎಡಗಣ್ಣಿನ ಬಲಭಾಗಕ್ಕೆ ಇಡಬೇಕು. ಬಲಗಣ್ಣಿಗೆ ನೋವಿದ್ದಾಗ ಬಲಗಣ್ಣಿನ ಎಡಭಾಗಕ್ಕೆ ಹಚ್ಚಬೇಕು. ಸೂಜಿ ಮಲ್ಲಿಗೆಯ ಬಳ್ಳಿಯ ನೀರನ್ನು ಕಣ್ಣು ನೋವಿಗೆ ಬಿಟ್ಟರೆ ನೋವು ವಾಸಿಯಾಗುತ್ತದೆ. ಕಣ್ಣು ಕೆಂಪಗಿದ್ದರೆ ಬಿಳಿಯ ಬಣ್ಣಕ್ಕೆ ತಿರುಗುತ್ತದೆ.

**ಕಣ್ಣಿನ ಹುಣ್ಣು :** ಬಸಳೆಸೊಪ್ಪು, ಬುಗುಡಿ ಸೊಪ್ಪಿನ ರಸವನ್ನು ಎದೆಹಾಲಿನೊಂದಿಗೆ ಹಚ್ಚಿದರೆ ಕಣ್ಣಿನ ಹುಣ್ಣು ವಾಸಿಯಾಗುತ್ತದೆ.

**ಕರುಳಿನ ರೋಗ :** ಕರುಳಿನ ರೋಗಕ್ಕೆ ಪುದೀನ ಸೊಪ್ಪು ಹೆಚ್ಚು ತಿನ್ನಬೇಕು.

**ಕಾಮಾಲೆ ರೋಗ :** ಅರೆನಲ್ಲಿ, ಕಿರುನಲ್ಲಿ, ನೆಲನೆಲ್ಲಿ, ಈ ಕಾಯಿಗಳನ್ನು ಕಾಮಾಲೆ ರೋಗ ಬಂದಾಗ ತಿನ್ನಬೇಕು.

**ಕಿವಿ ಸೋರುವುದು :** ಕಿವಿ ಸೋರಿದಾಗ ಚಿಕ್ಕೆ ಆಲೆ ಗಿಡವನ್ನು ಕೊಬ್ಬರಿ ಎಣ್ಣೆಯಲ್ಲಿ ಅರೆದು ಹಾಕುವುದು.

**ಕುರ :** ಹರಳು ಗಿಡದ ಎಲೆಗೆ ಎಣ್ಣೆ ಸವರಿ ಬೆಂಕಿಯಲ್ಲಿ ಬಿಸಿ ಮಾಡಿ ಕುರಕ್ಕೆ ಹಾಕಿ ಕಟ್ಟಿದರೆ ಕುರ ಒಡೆದು ಗಾಯ ವಾಸಿಯಾಗುತ್ತದೆ. ಭೂರಗದ ಚಕ್ಕೆಯನ್ನು ಅರೆದು ಹಾಕಬೇಕು. ಕಸಬರಿಕೆ ಗಿಡವನ್ನು ಅರೆದು ಹಚ್ಚಬಹುದು. ಕುರ ಎದ್ದಾಗ ಕಾಡುಮಲ್ಲಿಗೆಯ ಎಲೆಗೆ ಕೈಎಣ್ಣೆ ಹಚ್ಚಿ ಅಂಟಿಸಬೇಕು.

**ಕೆಮ್ಮು :** ಕೆಮ್ಮು ವಾಸಿಯಾಗಲು ಕರಿತುಳಸಿ, ಜೇನುತುಪ್ಪ ಬೆರೆಸಿ ತಿನ್ನಬೇಕು. ಕೆಮ್ಮು ಬಂದಾಗ ಗಣಿಕೆಸೊಪ್ಪನ್ನು ಬೇಯಿಸಿ ತಿನ್ನಬೇಕು. ತುಪ್ಪಕೀರೆ ಸೊಪ್ಪಿನ ರಸ ಹಿಂಡಿ ಒಂದು ದಿನಕ್ಕೆ ಒಂದು ಸಲ ಮೂರು ದಿನದವರೆಗೂ ಕೊಟ್ಟರೆ ಕೆಮ್ಮು ವಾಸಿಯಾಗುತ್ತದೆ. ನಾಗದಾಳಿ ಸೊಪ್ಪನ್ನು ಹಾಲಿನಲ್ಲಿ ಬೆರೆಸಿ

ಕುಡಿದರೆ ಕೆಮ್ಮು ವಾಸಿಯಾಗುತ್ತದೆ, ಬೇವಿನ ಎಣ್ಣೆ ಚಕ್ಕೆ ಸೊಪ್ಪು, ಸುಂಡೆಕಾಯಿ ರಸದೊಂದಿಗೆ ಬೆರೆಸಿ ಕುಡಿದರೆ ಗೂರಲು ಕೆಮ್ಮು ವಾಸಿಯಾಗುತ್ತದೆ.

**ಕೆಮ್ಮು ಶೀತ** : ಕೆಮ್ಮು ಶೀತ ಬಂದಾಗ ನಸರೆ ಹಕ್ಕಿಯನ್ನು ಸುಟ್ಟು ಅಥವಾ ಬೇಯಿಸಿ ತಿನ್ನುತ್ತಿದ್ದರು. ಆಮೆಯ ತಲೆಯನ್ನು ಬೇಯಿಸಿ ತಿನ್ನುತ್ತಿದ್ದರು.

**ಕೆಮ್ಮು ಜ್ವರ** : ಕೆಮ್ಮು ಜ್ವರ ಜಾಸ್ತಿಯಾದರೆ ಸಾಗರ ಬಳ್ಳಿಯನ್ನು ಅರೆದು ಕುಡಿಸುತ್ತಾರೆ.

**ಕೈ ಮದ್ದು ಹಾಕಿದರೆ** : ಕೈ ಮದ್ದು ಹಾಕಿದರೆ ಅದನ್ನು ತೆಗೆಯಲು ಕಕ್ಕೆ ಗಿಡದ ಚಿಗುರು ಮತ್ತು ಬೇಲದ ಮರದ ಚಕ್ಕೆಯನ್ನು ಸೇರಿಸಿ ಅರೆದು ಕುಡಿಸುತ್ತಾರೆ.

**ಗದ್ದ ಮಾರಿ** : ಗಂಧದ ಚಕ್ಕೆ ಗದ್ದ ಮಾರಿ ಬಂದಾಗ ಗಂಧದ ಚಕ್ಕೆಯನ್ನು ಅರೆದು ಕೆನ್ನೆಗೆ ಲೇಪಿಸಬೇಕು.

**ಗಂಟಲು ನೋವು** : ಉತ್ತರಾಣಿ ಬೇರನ್ನು ಅರೆದು ಕತ್ತಿಗೆ ಹಚ್ಚಿದಾಗ ಗಂಟಲು ನೋವು ವಾಸಿಯಾಗುತ್ತದೆ.

**ಗಾಯ** : ಗೌಲದ ಮರದ ಚಕ್ಕೆ ಅಥವಾ ಬೇವಿನಮರದ ಸೊಪ್ಪನ್ನು ಅರೆದು ಗಾಯದ ಮೇಲೆ ಹಚ್ಚುವುದರಿಂದ ಗಾಯ ಕಡಿಮೆಯಾಗುವುದು. ಕಾಶಿಂ ಬೇರುವಿನ ಹಾಲನ್ನು ತೆಗೆದು ಗಾಯವಾದ ಭಾಗಕ್ಕೆ ಹಚ್ಚಿದರೆ ಗಾಯ ವಾಸಿಯಾಗುತ್ತದೆ. ನಂಜು ಆಗುವುದಿಲ್ಲ ಗಾಯ ಒಣಗಿ ಹೋಗುತ್ತದೆ. ಗಾಂಧಿ ಗಿಡ ಇದರ ಸೊಪ್ಪಿನ ಜೊತೆಗೆ ಉಪ್ಪನ್ನು ಅರೆದು ಗಾಯಕ್ಕೆ ಹಚ್ಚಬೇಕು. ಕತ್ತರಿಸಿದ ಗಾಯಕ್ಕೆ ಜಗಳಗಂಟಿ ಗಿಡದ ಸೊಪ್ಪನ್ನು ಅರೆದು ಗಾಯಕ್ಕೆ ಹಚ್ಚಿದರೆ ಗಾಯ ಕೀವು ಕಟ್ಟುವುದಿಲ್ಲ. ಕಾಸಿಕಣಗಿಲೆ ಗಿಡದ ಸೊಪ್ಪನ್ನು ಅರೆದು ಕತ್ತರಿಸಿದ ಗಾಯದ ಜಾಗಕ್ಕೆ ಹಚ್ಚಿದರೆ ರಕ್ತ ಸ್ರಾವ ನಿಲ್ಲುತ್ತದೆ.

**ಚಳಿಜ್ವರ** : ಇಟ್ಟಿಗೆ ಮರದ ಬೇರನ್ನು ತೇಯ್ದು ಮೈಗೆ ಹಚ್ಚಿದರೆ ಚಳಿಜ್ವರ ವಾಸಿಯಾಗುತ್ತದೆ.

**ಜ್ವರ** : ಜ್ವರ ಬಂದಾಗ ಪರ್ವತ ಗಿಡದ ಹಾಲನ್ನು ಮೈ ಕೈಗೆ ಸವರುತ್ತಾರೆ. ಜ್ವರ ಬಂದಾಗ ಪುಳ್ಳಂಪರಚೆ ಸೊಪ್ಪನ್ನು ಅರೆದು ಕುಡಿಸಬೇಕು. ಉತ್ತರಾಣಿಯ ಬೇರನ್ನು ಹಾಕಿ ಕಾಯಿಸಿದ ನೀರನ್ನು ಕುಡಿಸಿದರೆ ಜ್ವರ ವಾಸಿಯಾಗುತ್ತದೆ. ಸಣ್ಣ ಸೂರಾಲ್ ಸೊಪ್ಪಿನ ಕಷಾಯ ಕುಡಿಯುವುದರಿಂದ ಜ್ವರ ಕಡಿಮೆಯಾಗುವುದು.

**ಜಂತುಹುಳು** : ಆಷಾಡ ಗಿಡದ ಚಿಗುರರನ್ನು ಹೊಟ್ಟೆಯಲ್ಲಿ ಜಂತುಹುಳು ಕಾಣಿಸಿಕೊಂಡಾಗ ಸುಟ್ಟು ತಿನ್ನಬೇಕು. ಹಾಗಲಕಾಯಿ ಸೊಪ್ಪನ್ನು ಅರೆದು, ಇಂಗು ಹಾಕಿ ಬೆಳಗ್ಗೆ ಕುಡಿಸಬೇಕು. ಆಗ ಹೊಟ್ಟೆಯಲ್ಲಿರುವ ಹುಳು ಸಾಯುತ್ತದೆ. ಗರಿಕೆ ಗಿಡದ ಬೇರನ್ನು ಜಿಸಿ ನೀರಿನಲ್ಲಿ ಕುದಿಸಿ ಅದರ ನೀರನ್ನು ಕುಡಿದರೆ ಹೊಟ್ಟೆಯಲ್ಲಿರುವ ಹುಳು ಸಾಯುತ್ತದೆ.

**ತಂಪು** : ಸೂರ್ಯದೇವನ ಕುಡಿ ಇದರ ಕುಡಿಯನ್ನು ಸಾಂಬಾರಿಗೆ ಜಜ್ಜಿ ಉಪಯೋಗಿಸುತ್ತಾರೆ. ಇದು ದೇಹಕ್ಕೆ ತಂಪು ನೀಡುತ್ತದೆ.

**ತಲೆ ಉರಿ** : ತಲೆ ಉರಿ ಬಂದರೆ ಆಲೆ ಬೇರು ಜೀರಿಗೆ ಬೆರೆಸಿ ತಲೆಗೆ ಲೇಪನ ಮಾಡಬೇಕು.

**ತಲೆನೋವು** : ನೀಲಗಿರಿ ಕುಡಿ ಇದನ್ನು ತಲೆನೋವು ಬಂದಾಗ ಅರೆದು ಹಚ್ಚಬೇಕು. ಮೂರು ಮೆಣಸಿನ ಹಂಬು ತಲೆನೋವು ಬಂದಾಗ ಇದರ ಬೇರನ್ನು ಮೂಸಿದರೆ ವಾಸಿಯಾಗುತ್ತದೆ. ತವಸದ ಚಕ್ಕೆಯ ಒಳನಾರನ್ನು ತೇಯ್ದು ತಲೆನೋವು ಬಂದಾಗ ಹಣೆಯ ಎರಡೂ ಪಕ್ಕದಲ್ಲೂ ಚಿಕ್ಕ ಚುಕ್ಕೆ ಇಡಬೇಕು. ಕಾರೆ ಮೆಳೆಯ ಬೇರನ್ನು ಅರೆದು ತಲೆಗೆ ತಿಕ್ಕಿದರೆ ತಲೆನೋವು ಹೋಗುತ್ತದೆ. ಅರೆಳೆಕಾಯಿ ಮರದ ಕಾಯಿಯನ್ನು ಬೆಳ್ಳುಳ್ಳಿ ಸೇರಿಸಿ ಅರೆದು ತಲೆಗೆ ಹಚ್ಚಿದರೆ ತಲೆನೋವು ವಾಸಿಯಾಗುತ್ತದೆ. ಕಾಸಳ್ಳಿಗಿಡದ ಚಕ್ಕೆಯನ್ನು ಜಜ್ಜಿ ಸೋಸಿ ಸಾರಿಗೆ ಹಾಕಿ ಊಟ ಮಾಡಿದರೆ ತಲೆನೋವು ವಾಸಿಯಾಗುತ್ತದೆ.

**ತಲೆಸುತ್ತು** : ನೆಲ್ಲಿಕಾಯಿಯನ್ನು ಬಿಸಿ ನೀರಿನಲ್ಲಿ ಒಂದು ಲೋಟ ಆಗುವಷ್ಟು ಕುದಿಸಿ ಆ ಬಿಸಿನೀರಿಗೆ ಜೇನುತುಪ್ಪ ಬೆರೆಸಿ ಕುಡಿದರೆ ತಲೆಸುತ್ತು ಕಡಿಮೆಯಾಗುತ್ತದೆ. ನೆಲ್ಲಿಕಾಯಿಯನ್ನು ಒಣಗಿಸಿ ಬಿಸಿ ನೀರಿನಲ್ಲಿ ಕುದಿಸಿ ಆ ನೀರನ್ನು ಕುಡಿದರೆ ತಲೆ ಸುತ್ತುವಿಕೆ ವಾಸಿಯಾಗುತ್ತದೆ.

**ತಲೆಹೊಟ್ಟು** : ವೀಳ್ಯದ ಎಲೆಯನ್ನು ಅರೆದು, ತೆಂಗಿನೆಣ್ಣೆಯೊಂದಿಗೆ ಹಚ್ಚಿದರೆ ತಲೆಹೊಟ್ಟು ಹೋಗುತ್ತದೆ.

**ದಡಾರ** : ಮಕ್ಕಳಿಗೆ ದಡಾರ, ಗಂಜಲ ಬಂದಾಗ ಬೇವಿನ ಸೊಪ್ಪು, ಉಣ್ಣೆಗಿಡದ ಸೊಪ್ಪನ್ನು ಹಚ್ಚಿದರೆ ಮೂರು ದಿನದೊಳಗೆ ದಡಾರ, ಗಂಜಲ ಮಾಯವಾಗುತ್ತವೆ.

**ದಮ್ಮು** : ಬಿಳಿ ಉಮ್ಮತ್ತಿ ಎಲೆಯನ್ನು ದುಂಡಾಗಿ ಸುತ್ತಿ ಬೀಡಿಯಂತೆ ಸೇದಿದರೆ ದಮ್ಮು ವಾಸಿಯಾಗುತ್ತದೆ. ದಮ್ಮು ಬಂದಾಗ ಮುಟ್ಟಿದರೆ ಮುನಿ ಗಿಡದ ಬೇರಿಗೆ ಜೀರಿಗೆ ಸೇರಿಸಿ ಬಿಸಿ ಮಾಡಿ ಕುಡಿಸುತ್ತಾರೆ. ಮತ್ತು ಬೋಳಬುಂಡೆ ತೊಗಟೆಯನ್ನು ಬಳಸುತ್ತಾರೆ.

**ನಂಜು** : ಕತ್ತಿ ಇನ್ನಿತರ ಅಸ್ತ್ರಗಳಲ್ಲಿ ಗಾಯ ಮಾಡಿಕೊಂಡಾಗ ಮೂರು ಎಲೆಸಾಗ ಗಿಡವನ್ನು ಅರೆದು ಹಾಕಬೇಕು.

**ನರವಾಯು ಮತ್ತು ಕೀಲುವಾಯು** : ಕೆಂಪು ಮತ್ತಿ ಮತ್ತು ಬಿಳಿ ಮತ್ತಿಯ ಮರದ ಚಕ್ಕೆಯನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ಒರಳಲ್ಲಿ ಹಾಕಿ ಕುಟ್ಟಿ ರಸ ತೆಗೆದು ಹಾಲಿನಲ್ಲಿ ಮೂರು ದಿನ ಕುಡಿಸಿದರೆ ನರವಾಯು ಮತ್ತು ಕೀಲುವಾಯು ರೋಗ ಕಡಿಮೆಯಾಗುತ್ತದೆ.

**ನಾಯಿ ಕಡಿತ** : ನಂಜಿನ ಚಕ್ಕೆಯನ್ನು ನಿಂಬೆ ರಸದಲ್ಲಿ ಅರೆದು ನಾಯಿ ಕಡಿದ ಜಾಗಕ್ಕೆ ಹಚ್ಚಿದರೆ ಗಾಯ ಕಡಿಮೆಯಾಗುವುದು.

**ನಾಲಿಗೆ ಹೊಡೆದರೆ** : ಜಿಬ್ಬಣ್ಣು ತಿಂದರೆ ಹೊಡೆದ ನಾಲಿಗೆಯ ಗಾಯ ವಾಸಿಯಾಗುತ್ತದೆ

**ನಿದ್ರಾ ಹೀನತೆ** : ಮುಟ್ಟಿದರೆ ಮುನಿ ಇದರ ಎಲೆಯನ್ನು ಅರೆದು ಕಣ್ಣಿನ ಮೇಲೆ ಹಾಕಲಾದ ತೆಳುವಾದ ಬಟ್ಟೆಯ ಮೇಲೆ ಹಾಕಿದರೆ ಒಳ್ಳೆಯ ನಿದ್ರೆ ಬರುತ್ತದೆ.

**ನೆಗಡಿ** : ಮಗುವಿಗೆ ನೆಗಡಿಯಾದಾಗ ಕಹಿ ಸುಂಡೆಕಾಯಿಯನ್ನು ಅರೆದು ಕುಡಿಸಬೇಕು.

**ಬಾಣಂತಿ ರೋಗ** : ಹೆರಿಗೆಯಾದ ಮಹಿಳೆಯರಿಗೆ ಸನ್ನೆ ರೋಗ ಅಥವಾ ಬಾಣಂತಿ ರೋಗವಾದರೆ ಎಲ್ಲುರಿ ಗಿಡದ ಎಲೆ, ಕರಳೆ ಎಲೆಗಳನ್ನು ಬೆರೆಸಿ ರುಬ್ಬಿ ಚಿಕ್ಕ ಉಂಡೆಗಳಾಗಿ ಮಾಡಿ ನುಂಗಿದರೆ ಬಾಣಂತಿ ರೋಗ ವಾಸಿಯಾಗುತ್ತದೆ.

**ಬಾಣಂತಿ, ಮಗುವಿಗೆ ಹೊಟ್ಟೆ ನೋವು ಬಂದಾಗ** : ಕಟ್ಟ ಬೇರು, ಗಂಗುವೆ ಬೇರು, ಅವಲಪುರಿ, ಮರಕೀರೆ ಬೇರು ಇವುಗಳನ್ನು ತೇಯ್ದು ಹೊಟ್ಟೆಗೆ ಕುಡಿಸುವುದು.

**ಬಾಯಿ ಹುಣ್ಣು** : ಬಸರಿ ಮರದ ತಿರುಳನ್ನು ಬಾಯಿಯಲ್ಲಿ ಒತ್ತರಿಸಿದರೆ ಬಾಯಿ ಹುಣ್ಣು ವಾಸಿಯಾಗುತ್ತದೆ. ಬಸಳೆ ಸೊಪ್ಪನ್ನು ತಿಂದರೆ ಬಾಯಿ ಹುಣ್ಣು ವಾಸಿಯಾಗುತ್ತದೆ

**ಬಾವು** : ಮಕ್ಕಳಿಗೆ ಬಾವು ಇದ್ದಾಗ ಮುಲ್ಲೆ ಗಿಡದ ಎಲೆಗೆ ಕೈಯೆಣ್ಣೆ ಹಚ್ಚಿ ಕಾಯಿಸಿ ಬಾವಿನ ಮೇಲೆ ಅಂಟಿಸಿದರೆ ವಾಸಿಯಾಗುತ್ತದೆ. ಬಾವು ಇದ್ದಾಗ ಕೊಂಟಿಗೆ ಸೊಪ್ಪನ್ನು ಅರೆದು ಹಚ್ಚಬೇಕು.

**ಬಿಳಿಸೆರಗು** : ಬಿಳಿಸೆರಗು ನಿಲ್ಲಲು ಬಿಳಿದಾಸವಾಳದ ಹೂವುಗಳನ್ನು ತಿನ್ನಬೇಕು.

**ಭೇಧಿ** : ಮಕ್ಕಳಿಗೆ ಭೇಧಿಯಾದಾಗ ಅತ್ತಿಮರದ ಹಾಲಿನಲ್ಲಿ ಬೆತ್ತಾಸನ್ನು ನೆನೆಹಾಕಿ ತಿನ್ನಿಸಿದರೆ ಭೇದಿ ನಿಲ್ಲುತ್ತದೆ. ಕಕ್ಕೆ ಎಲೆಯನ್ನು ಜೀರಿಗೆಯೊಂದಿಗೆ ಅರೆದು ಕುಡಿಸಿದರೆ ಭೇದಿ ನಿವಾರಣೆ. ಗೊಟ್ಟಿಚಕ್ಕೆ, ನೇರಿಚಕ್ಕೆ, ಮಾವುಚಕ್ಕೆ ಭೇಧಿಯಾದಾಗ ಈ ಚಕ್ಕೆಗಳನ್ನು ಅರೆದು ಕುಡಿಯಬಹುದು. ಸೊಟ್ಟಿಮಳೆ ಮತ್ತು ಕಗ್ಗಲಿ ಮೆಳೆಯ ಚಕ್ಕೆಯನ್ನು ಜಜ್ಜಿ ನೀರಿನಲ್ಲಿ ನೆನೆ ಹಾಕಿ ಇದರ ನೀರನ್ನು ಕುಡಿಸಿದಾಗ ಭೇಧಿ ನಿಲ್ಲುತ್ತದೆ. ಪೇಣ್ಣು ಮರದ ಎಲೆಯನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಅರೆದು ೨ ಗುಳಿಗೆಗಳನ್ನು ಎರಡು ಹೊತ್ತು ಎರಡು ದಿನ ಕೊಡಬೇಕು ಆಗ ಭೇಧಿ ನಿಲ್ಲುತ್ತದೆ. ತೆಣ್ಣು ಚಿಗುರು. ಗೌಜಲು ಚಿಗುರು, ಸೀಬೆ ಚಿಗುರು, ಸಿಹಿಗಾರೆ ಚಿಗುರು ಇವುಗಳನ್ನು ಅರೆದು ನೀರಿನಲ್ಲಿ ಹಾಕಿ ಕುಡಿಸಬೇಕು ಆಗ ಭೇಧಿ ನಿಲ್ಲುತ್ತದೆ. ಕಾಕಿ ಮರದ ಎಲೆಯನ್ನು ಅರೆದು ಗುಳಿಗೆ ಮಾಡಿ ತಿಂದರೆ ಬೇಧಿ ನಿಲ್ಲುತ್ತದೆ. ಮೆಣಸಿನ ಚಿಗುರನ್ನು ಅರೆದು ತಿನ್ನಿಸಿದರೆ ಭೇಧಿ ನಿಲ್ಲುತ್ತದೆ. ಕಕ್ಕೆ ಸೊಪ್ಪಿನ ಚಿಗುರನ್ನು ಸ್ವಲ್ಪ ಕೈಯೆಣ್ಣೆಯಲ್ಲಿ ಬೆರೆಸಿ ಕುಡಿಸಿದರೆ ಭೇಧಿಯು ನಿಲ್ಲುತ್ತದೆ. ಪುದೀನ ಎಲೆಯನ್ನು ಮಜ್ಜಿಗೆಯಲ್ಲಿ ಅರೆದು ಕುಡಿಸಿದರೆ ಭೇಧಿ ನಿಲ್ಲುತ್ತದೆ.

**ಭಯ ಭೀತಿಗೊಂಡಾಗ** : ಭೀತಿಯಲ್ಲಿದ್ದಾಗ ಕಳ್ಳನ ಮೆಳೆಯ ಬಳೆ ಮಾಡಿ ಕುತ್ತಿಗೆಗೆ ಹಾಕಿಕೊಳ್ಳುತ್ತಾರೆ.

**ಮಕ್ಕಳಿಗೆ ಹಸಿರು ಮದ್ದು** : ಆಲವಾಣದ ಸೊಪ್ಪು, ಹಾಗಲ ಸೊಪ್ಪು, ಕಕ್ಕೆ ಸೊಪ್ಪು, ಬುಡ್ಡೆ ಸೊಪ್ಪು ಮಿಶ್ರಣ ಮಾಡಿ ಕುಟ್ಟಿ ತಾಯಿಯ ಎದೆಹಾಲಿನಲ್ಲಿ ಬೆರೆಸಿ ಕುಡಿಸಬೇಕು. ನಂತರ ಮೈ ಕೈಗೆ ಅದೇ

ಸೊಪ್ಪನ್ನು ಹಚ್ಚಿ ಸ್ನಾನ ಮಾಡಿಸಬೇಕು. ಮಗು ಹುಟ್ಟಿ ಮೂರು ದಿನ, ಐದು ದಿನ, ಒಂಭತ್ತು ದಿನ, ಹನ್ನೊಂದು ದಿನ ಮತ್ತು ಹದಿನಾರು ದಿನದಲ್ಲಿ ಹಸಿರು ಮದ್ದು ಕುಡಿಸಿದರೆ ಮುಂದೆ ಯಾವ ರೋಗಗಳೂ ಮಕ್ಕಳಿಗೆ ಬರುವುದಿಲ್ಲ.

**ಮಕ್ಕಳಿಗೆ ಬಾಲಗ್ರಹ** : ಬಾಗ್ಯ ಮರ, ತಾರೆ ಮರ, ಅರಳಿ ಮರ, ಬಿಳಿ ಎಕ್ಕೆಯ ಗಿಡದ ಚೆಕ್ಕೆಗಳನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ಪುಡಿ ಮಾಡಿ ಮಕ್ಕಳಿಗೆ ಆ ಪುಡಿಯ ಹೊಗೆ ಹಾಕಿದರೆ ಬಾಲಗ್ರಹ ದೋಷ ಕಡಿಮೆಯಾಗುತ್ತದೆ.

**ಮಕ್ಕಳಿಗೆ ರಕ್ತ ಬೇಧಿ** : ಅತ್ತಿಮರ ಈ ಮರದ ಹಾಲನ್ನು ಮಕ್ಕಳಿಗೆ ರಕ್ತ ಬೇಧಿಯಾದಾಗ ಕುಡಿಸುತ್ತಾರೆ.

**ಮಾಟ** : ಮಾಟ ಮಾಡಿಸಿ ಕಾಲು ಊದಿದೆ ಎಂದಾಗ ಸಣ್ಣ ಕಬ್ಬಳಿ ಎಲೆಯನ್ನು ಅರೆದು ಕಾಲಿಗೆ ಹಚ್ಚುತ್ತಾರೆ.

**ಮುಖ ಊದಿದಾಗ** : ಮುಖ ಊದಿದಾಗ ಕಾಡು ಮೆಣಸಿನ ಸೊಪ್ಪನ್ನು ಕುಡಿಕೆಯಲ್ಲಿ ಹಾಕಿ ನೀರಿನಲ್ಲಿ ಕುದಿಸಿ ಆ ನೀರಿಗೆ ಸುಟ್ಟ ಇಟ್ಟಿಗೆಯನ್ನು ಹಾಕಿ ಸ್ನಾನ ಮಾಡಬೇಕು.

**ಮುಳ್ಳು ಚುಚ್ಚಿದಾಗ** : ಎಕ್ಕದ ಹಾಲನ್ನು ಹಾಕಿದರೆ ಚುಚ್ಚಿಕೊಂಡಿರುವ ಮುಳ್ಳು ಹೊರಗೆ ಬರುತ್ತದೆ.

**ಮೈ ಚುಚ್ಚುವುದು** : ಕರಿಬೆಲ್ಲದ ಮರದ ಚಕ್ಕೆಯನ್ನು ಬೆಳ್ಳುಳ್ಳಿಯ ಜೊತೆ ಅರೆದು ಲೇಪ ಹಾಕಬೇಕು.

**ಮೈ ನೋವು** : ಬಿಲ್ಲಪತ್ರೆ ಮರದ ತಿರುಳನ್ನು ಗ್ಯಾಸ್ಟ್ರಿಕ್ ಸಂಬಂಧಿಸಿದ ಕಾಯಿಲೆಗೆ ತಿನ್ನಬೇಕು. ಮೈ ನೋವಾದಾಗ ಇದರ ತಿರುಳನ್ನು ಮೈಗೆ ಉಜ್ಜಬೇಕು.

**ಮುಟ್ಟು ದೋಷಕ್ಕೆ** : ಗುಬ್ಬಿಕಾಲಿನ ಬೇರನ್ನು ನೀರಿನೊಂದಿಗೆ ತೇಯ್ದು ಹಾಲು ಹೊಟ್ಟೆಗೆ ತೆಗೆದುಕೊಂಡರೆ ಮುಟ್ಟು ಸಂಬಂಧಿ ದೋಷಗಳ ಮಾಯವಾಗತ್ತವೆ.

**ಮುಟ್ಟು ಸಂಬಂಧಿ ಹೊಟ್ಟೆ ನೋವು** : ವಾಲೆಗಿಡದ ನಾಲ್ಕೈದು ಚಿಗುರೆಲೆ ಮತ್ತು ಗೆಜ್ಜುಗ ಮರದ ಕುಡಿಗಳು, ಒಂದು ಕರಿಮೆಣಸು, ಒಂದು ಇಲುಕು ಬೆಳ್ಳುಳ್ಳಿಯನ್ನು ಅರೆದು ಒಂದು ಅವರೆಕಾಳಿನ ಗಾತ್ರದ ಮೂರು ಗುಳಿಗೆಗಳನ್ನು ಮಾಡಿ ಊಟಕ್ಕಿಂತ ಮುಂಚೆ ಬೆಳಗ್ಗೆ, ಮದ್ಯಾಹ್ನ, ರಾತ್ರಿ ತಿನ್ನಿಸಬೇಕು ಆಗ ಮುಟ್ಟು ಸಂಬಂಧಿ ಹೊಟ್ಟೆ ನೋವು ನಿವಾರಣೆ ಆಗುತ್ತದೆ.

**ರಕ್ತಬೇಧಿ** : ರಕ್ತಬೇಧಿಯಾದರೆ ದಾಳಿಂಬೆ ಸಿಪ್ಪೆಯನ್ನು ತಿನ್ನಬೇಕು. ರಕ್ತ ಬೇಧಿಯಾದಾಗ ಮುತ್ತಗದ ಮರದ ಚಕ್ಕೆ ಮತ್ತು ಕಾಡು ಮಾವಿನ ಚಕ್ಕೆ ಸೇರಿಸಿ ಅರೆದು ಹೊಟ್ಟೆಗೆ ಕುಡಿಸಬೇಕು. ರಕ್ತ ಭೇದಿಯಾದಾಗ ಕಾಡು ಬಳ್ಳಿಯ ಕಾಯಿಯನ್ನು ಬಿಸಿ ನೀರಿನಲ್ಲಿ ಬೇಯಿಸಿ ತಿನ್ನಬೇಕು. ರಕ್ತ ಬೇಧಿ ನಿಲ್ಲಲು ಬಿಲ್ವಾರ ಮರದ ಚಕ್ಕೆಯನ್ನು ಅರೆದು ಕುಡಿಸಬೇಕು.

**ರಕ್ತ ಸ್ರಾವ** : ಕತ್ತರಿಸಿದ ಗಾಯಕ್ಕೆ ಕಡಸಲು ಮರದ ಮುಳ್ಳನ್ನು ಅರೆದು ಗಾಯಕ್ಕೆ ಅಂಟಿಸಿದರೆ ರಕ್ತ ಸ್ರಾವ ನಿಲ್ಲುತ್ತದೆ, ಕಾಸಳ್ಳಿಗಿಡದ ಹಾಲನ್ನು ಹಾಕಿದರೆ ರಕ್ತಸ್ರಾವ ನಿಲ್ಲುತ್ತದೆ.

**ವಾಂತಿ** : ವಾಂತಿಯಾದಾಗ ವಾಕರಿಕೆ ಬೇಲದ ಸೊಪ್ಪು, ಮೆಣಸು ಮತ್ತು ಬೆಳ್ಳುಳ್ಳಿ ಇವುಗಳನ್ನು ಸೇರಿಸಿ ನಡುವಿಗೆ ಕಟ್ಟುತ್ತಾರೆ.

**ವಾಂತಿ ಬೇಧಿ** : ವಾಂತಿ, ಬೇಧಿ, ಸಂಕಟ, ಸುಸ್ತು ಇದ್ದಾಗ ಸೊಂಕೆಗಿಡ (ನಾಗದಾಳಿ)ವನ್ನು ಸಾಸಿವೆ ಬೆಳ್ಳುಳ್ಳಿಯ ಜೊತೆಗೆ ಸೇರಿಸಿ ಬಟ್ಟೆಯಲ್ಲಿ ಸುತ್ತಿ ಕತ್ತಿಗೆ ಕಟ್ಟಿದರೆ ವಾಸಿಯಾಗುತ್ತದೆ.

**ವಿಷ ಜಂತು ಕಡಿತಕ್ಕೆ** : ಚಕ್ರದ ಬೇರನ್ನು ಲಿಂಬೆ ರಸದಲ್ಲಿ ತೇಯ್ದು ಹಚ್ಚಿದರೆ ವಿಷ ಜಂತುವಿನ ಕಡಿತದಿಂದ ಉಪಶಮನ ದೊರೆಯುತ್ತದೆ.

**ಸಿಹಿ ಮೂತ್ರರೋಗ** : ನಿತ್ಯ ಪುಷ್ಪದ ಎಲೆಗಳು ಸಿಹಿ ಮೂತ್ರರೋಗ ನಿವಾರಣೆಗೆ ಸಹಕಾರಿಯಾಗಿವೆ.

**ಸಕ್ಕರೆ ಕಾಯಿಲೆ** : ಒಂದೆಲಗ ಸೊಪ್ಪಿನ ಸಾರು ಅಥವಾ ಚಟ್ನಿ ಮಾಡಿ ತಿಂದರೆ ದೇಹದಲ್ಲಿ ರೋಗ ತಡೆಗಟ್ಟುವ ಶಕ್ತಿ ವೃದ್ಧಿಸುತ್ತದೆ. ಇದಕ್ಕೆ ಸಕ್ಕರೆ ಕಾಯಿಲೆ ಬರದಂತೆ ತಡೆಗಟ್ಟು ಶಕ್ತಿ ಇದೆ. ಮಧುನಾಸಿನಿ ಸೊಪ್ಪು, ಮೆಣಸು, ಬೆಳ್ಳುಳ್ಳಿ ಅರೆದು ಕೊಟ್ಟರೆ ಕ್ರಮೇಣ ಸಕ್ಕರೆ ಕಾಯಿಲೆ ವಾಸಿಯಾಗುತ್ತದೆ.

**ಸುಟ್ಟಗಾಯ** : ಕಾಡು ಚೆಂಡಿನ ಗಿಡದ ಎಲೆಗಳನ್ನು ಅರೆದು ಬಿಸಿಮಾಡಿ ಗಾಯಕ್ಕೆ ಹಚ್ಚುವುದರಿಂದ ಸುಟ್ಟಗಾಯ ಕಡಿಮೆಯಾಗುವುದು. ದಿಂಡಾಲು ಮರದ ಚಕ್ಕೆಯನ್ನು ತಂದು ಬೆಂಕಿಯಲ್ಲಿ ಬೆಚ್ಚಗೆ ಮಾಡಿ ಅದನ್ನು ಪುಡಿಮಾಡಿ ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಸುಟ್ಟ ಗಾಯಕ್ಕೆ ಹಚ್ಚಿದರೆ ಸುಟ್ಟಗಾಯ ವಾಸಿಯಾಗುತ್ತದೆ.

**ಶೀತ** : ದೊಡ್ಡ ಸುಂಡೆ ಕಾಯಿಯ ಮಾಲೆ ಮಾಡಿ ಮಕ್ಕಳ ಕೊರಳಿಗೆ ಹಾಕಿದರೆ, ಶೀತ ವಾಸಿಯಾಗುತ್ತಿತ್ತು. ಸುಂಡೆಕಾಯಿಯನ್ನು ತೇಯ್ದು ನೆತ್ತಿಗೆ ಹಾಕಿದರೆ ಶೀತ ಹೋಗುತ್ತದೆ.

**ಶೀತ ಜ್ವರ** : ಶೀತ ಜ್ವರ ಬಂದಾಗ ಪರ್ವತ ಗಿಡದ ಚಕ್ಕೆ, ಉತ್ತರಾಣಿ ಬೇರು, ಜೀರಿಗೆ, ಮೆಣಸು ಹಾಕಿ ಸಾರು ಮಾಡಿಸಿ ಊಟ ಮಾಡಿಸಿದರೆ ಕಾಯಿಲೆ ವಾಸಿಯಾಗುತ್ತದೆ.

**ಹಲ್ಲುನೋವು** : ಬುಗಡಿ ಗಿಡದ ಹಾಲನ್ನು ಹಲ್ಲು ನೋವಾದ ಸ್ಥಳಕ್ಕೆ ಬಿಟ್ಟರೆ ನೋವು ಕಡಿಮೆಯಾಗುತ್ತದೆ. ಹಲ್ಲು ನೋವಿಗೆ ಚಿಕ್ಕೆಆಲೆ ಗಿಡದ ಹಾಲನ್ನು ಹಾಕಬೇಕು. ಹಲ್ಲು ನೋವಿಗೆ ಕೊಂಟಗೆ ಗಿಡದ ಹಾಲನ್ನು ಹಾಕುತ್ತಾರೆ. ಬುಗುಡಿ ಗಿಡದ ಹಾಲನ್ನು ಹಲ್ಲು ನೋವಾದ ಸ್ಥಳಕ್ಕೆ ಸವರಬೇಕು.

**ಹಸಿರು ಹುಣ್ಣು** : ಪಟ್ಟುಕಾಯಿ, ಅರಿಶಿಣ, ಉಪ್ಪು ಇವುಗಳನ್ನು ಬೆರೆಸಿ ಕಾಲಿನ ಹಸಿರು ಹುಣ್ಣಿಗೆ ಹಚ್ಚಿದರೆ ಬೇಗ ವಾಸಿಯಾಗುತ್ತದೆ.

**ಹಸಿವು ತಡೆಯಲು** : ಉತ್ತರಾಣಿ ಬೀಜದ ಪಾಯಸವನ್ನು ಮಾಡಿ ಕುಡಿದರೆ ಹಸಿವನ್ನು ತಡೆಯಬಹುದು.

**ಹಸಿವು ಹೆಚ್ಚಲು** : ಪುದೀನ ಸೊಪ್ಪು ಹೊಟ್ಟೆಯ ಹಸಿವು ಹೆಚ್ಚಿಸಲು ಹಾಗೂ ಜೀರ್ಣವಾಗಲು ಸಹಕಾರಿಯಾಗಿದೆ.

**ಹಳೆ ಗಾಯಕ್ಕೆ** : ಗುಂಗರು ಮರದ ಎಲೆಯನ್ನು ಅರೆದು ಗಾಯಕ್ಕೆ ಹಾಕಿ ಕಟ್ಟಿದರೆ ಹಳೆ ಗಾಯವಿದ್ದರೂ ವಾಸಿಯಾಗುತ್ತದೆ.

**ಹುಚ್ಚು** : ಹುಚ್ಚು ಬಂದವರಿಗೆ ಕೀರೆಯ ಬೇರನ್ನು ನಿಂಬೆ ರಸದಲ್ಲಿ ತೇಯ್ದು ಬೆಳಿಗ್ಗೆ ರಾತ್ರಿ ಹೀಗೆ ದಿನಂಪ್ರತಿ ನೆಕ್ಕಿಸಿದರೆ ಹುಚ್ಚು ವಾಸಿಯಾಗುತ್ತದೆ.

**ಹುಣ್ಣು ಗಾಯ** : ಹುಣ್ಣು ಗಾಯಗಳಾದಾಗ ಏಳು ಎಲೆ ಬೇರುವಿನ ಎಲೆಯನ್ನು ಅರೆದು ಹಚ್ಚಬೇಕು.

**ಹುಳುಕಲ್ಲು** : ತೂತು ಬಿದ್ದ ಹಲ್ಲುಗಳಿಗೆ ಅಳಲೆಕಾಯಿ ಮರದ ಪುಡಿಯನ್ನು ತುಂಬಿದರೆ ಹಲ್ಲು ನೋವು ವಾಸಿಯಾಗುತ್ತದೆ. ಇದರ ಕಾಯಿಯನ್ನು ತೇಯ್ದು ಹಣೆಗೆ ಹಚ್ಚಿದರೆ ತಲೆ ನೋವು ವಾಶಿಯಾಗುತ್ತದೆ.

**ಹುಳು ಭಾದೆಗೆ** : ಗರಿಕೆ ಬೇರನ್ನು ನೀರಿನಲ್ಲಿ ಕುದಿಸಿ ಕಷಾಯ ಮಾಡಿ ತಣ್ಣಗಾದ ನಂತರ ಕುಡಿದರೆ ಹೊಟ್ಟೆಯೊಳಗಾಗುವ ಜಂತು ಇತ್ಯಾದಿ ಹುಳುಗಳು ಇಲ್ಲವಾಗುತ್ತವೆ.

**ಹೆರಿಗೆ** : ಉತ್ತರಾಣಿ ಸೊಪ್ಪು ಮತ್ತು ಬೇರು, ಬೇಲದ ಚಕ್ಕೆ, ಕೊಬ್ಬರಿಎಣ್ಣೆ, ಇವುಗಳನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ಕುಡಿಸಿದರೆ ಹೆರಿಗೆ ಸುಲಭವಾಗಿ ಆಗುತ್ತದೆ.

**ಹೊಟ್ಟೆ ಉಬ್ಬರ** : ವೀಳ್ಯದ ಎಲೆಯನ್ನು ಅರೆದು, ತೆಂಗಿನೆಣ್ಣೆಯೊಂದಿಗೆ ಕುಡಿಸಿದರೆ ಹೊಟ್ಟೆ ಉಬ್ಬರ ವಾಸಿಯಾಗುತ್ತದೆ. ಕಕ್ಕೆ ಬೇರನ್ನು ತೇಯ್ದು ಕುಡಿಸಿದರೆ ಹೊಟ್ಟೆ ಉಬ್ಬರ ವಾಸಿಯಾಗುತ್ತದೆ. ನೆಲದವರೆ ಸೊಪ್ಪನ್ನು ಅರೆದು ತಣ್ಣೀರಿನಲ್ಲಿ ಕುಡಿಯಲು ಕೊಟ್ಟರೆ ಹೊಟ್ಟೆ ಉಬ್ಬರ ನಿವಾರಣೆಯಾಗುತ್ತದೆ.

**ಹೊಟ್ಟೆ ಉರಿ** : ಹೊಟ್ಟೆ ಉರಿ ಬಂದಾಗ ನಾಯಿಬೇಲದ ಚಕ್ಕೆ ಅರೆದು ರಸವನ್ನು ಬೆಳಗ್ಗೆ ಕುಡಿಸಬೇಕು.

**ಹೊಟ್ಟೆನೋವು** : ಪಿಂಟಲು ಮರದ ಚಕ್ಕೆಯನ್ನು ನೀರಿನೊಂದಿಗೆ ಸೇರಿಸಿ ಕುದಿಸಿ ಒಂದು ಲೋಟದಷ್ಟು ಆ ನೀರನ್ನು ಕುಡಿದರೆ ಹೊಟ್ಟೆನೋವು ನಿವಾರಣೆಯಾಗುತ್ತದೆ. ಕಾಡುಕಳ್ಳಿಗಿಡ ಇದರ ಸೊಪ್ಪು ಅರೆದು ಕುಡಿದರೆ ಹೊಟ್ಟೆನೋವು ನಿಲ್ಲತ್ತದೆ. ಇಟ್ಟಿಮರ ಇದರ ಬೇರನ್ನು ಪುಡಿ ಮಾಡಿ ನೀರಿನಲ್ಲಿ ಹಾಕಿ ಬಸುರಿ ಹೆಂಗಸರು ಕುಡಿದರೆ ದೇಹ ಜಿಡ್ಡುಗಟ್ಟುವುದಿಲ್ಲ, ಲವಲವಿಕೆಯಿಂದ ಇರುತ್ತಾರೆ. ಹೊಟ್ಟೆ ನೋವು ಕೂಡ ವಾಸಿಯಾಗುತ್ತದೆ. ದಿಂಡಿಲು ಮರದ ಚಕ್ಕೆಯನ್ನು ಅರೆದು ರಸ ಕುಡಿಯಬೇಕು. ತಣ್ಣಿಸಿ ಬೇರು ಮತ್ತು ಚಕ್ಕೆಯನ್ನು ಅರೆದು ಲೇಪ ಹಾಕಬೇಕು. ಹೊಟ್ಟೆ ನೋವು ಬಂದಾಗ ಮುಳ್ಳುಂದಿಯ ಮಾಂಸವನ್ನು ತಿನ್ನುತ್ತಿದ್ದರು. ಹೊಟ್ಟೆನೋವು ಬಂದಾಗ ಸೀಬೆ ಎಲೆ ಚಿಗುರನ್ನು ತಿನ್ನುತ್ತಾರೆ.

ಈ ರೀತಿಯ ನೂರಾರು ಔಷಧಿಗಳ ವಿವರ ಜೇನುಕುರುಬರಲ್ಲಿ ದೊರೆಯುತ್ತದೆ. ಆದರೆ ಔಷಧಿಯ ವಿವರ ನೀಡಲು ಅವರು ಒಪ್ಪುವುದಿಲ್ಲ. ಔಷಧಿ ಸಸ್ಯಗಳ ಹೆಸರು, ಕೊಡುವ ಕ್ರಮ ಹೇಳಿದರೆ ಔಷಧಿಯ ಸತ್ವ ಮಾಯವಾಗುತ್ತದೆ, ತಮಗೆ ಔಷಧಿ ಕೊಡುವ ಶಕ್ತಿ ಇಲ್ಲವಾಗುತ್ತದೆಂದು ವಕ್ತೃಗಳು ತಿಳಿಸಿದರು.

**"ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ವಕ್ತೃಗಳಿಂದ ಮೌಖಿಕವಾಗಿ ಸಂಗ್ರಹಿಸಲಾದ ಮಾಹಿತಿಯಾಗಿರುತ್ತದೆ. ಈ ಮೇಲಿನ ಯಾವುದೇ ಔಷಧಿ ಕ್ರಮಗಳು ಪರೀಕ್ಷಾರ್ಥ ರೂಪದಲ್ಲಿ ಸಾಬೀತು ಪಡಿಸಿಕೊಂಡಿರುವುದಿಲ್ಲ. ಎಂಬುದನ್ನು ಸ್ಪಷ್ಟಪಡಿಸಲಾಗಿದೆ."**

**ಮಹಿಳೆಯರ ಪಾತ್ರ :** ಕಾಡಿನಲ್ಲಿ ಸಿಗುವ ನಾರು-ಬೇರು, ಸೊಪ್ಪು-ಸೊದೆ ಇವುಗಳ ಶೇಖರಣೆ ಸಂಸ್ಕರಣೆಯಲ್ಲಿ ಮಹಿಳೆಯರು ಪ್ರಮುಖಪಾತ್ರ ನಿರ್ವಹಿಸುತ್ತಾರೆ. ಪುರುಷರಿಗಿಂತ ಮಹಿಳೆಯರೇ ಹೆಚ್ಚು ಔಷಧಿ ಜ್ಞಾನ ತಿಳಿದಿರುವುದನ್ನು ಕ್ಷೇತ್ರಾಧ್ಯಯನದಲ್ಲಿ ಕಂಡು ಬಂದಿದೆ.

**ಆಧುನಿಕತೆ :** ಇಂಜೆಕ್ಷನ್, ಮಾತ್ರೆಗಳು, ಮತ್ತು ಕೆಲವು ವಿಷಯಗಳಲ್ಲಿ ಆಧುನಿಕ ಆಸ್ಪತ್ರೆಗಳನ್ನು ಬಲವಂತವಾಗಿ ಅವಲಂಬಿಸುವಂತಾಗಿದೆ.

## ೬. ೨೦. ಆನೆ ಮತ್ತು ಜೇನುಕುರುಬರು

ಮಜ್ಜಿಗೆ ಹಳ್ಳ ಆನೆ ಕ್ಯಾಂಪಿನ ಗೋಪಾಲಸ್ವಾಮಿ ಆನೆಯ ಮಾವುತರಾದ ಶ್ರೀಯುತ ರಾಜು ರವರ ಮಾಹಿತಿಯಂತೆ, ಆನೆಯು ಹೂ ಹೂ... ಎ, ಹೂಹೂ... ಎ, ಹೂ... ಎ ಹೂಹೂಹೂ... ಎ ಎಂದು ಶಬ್ದ ಮಾಡಿದರೆ ಜೇನುಕುರುಬರು ಇರುವ ಹಾಡಿಯ ಅಕ್ಕ ಪಕ್ಕದ ಯಾವುದಾದರೊಂದು ಕೆರೆಯಲ್ಲಿ ಆನೆ ಬಿದ್ದಿದೆ ಅಥವಾ ಸಂಕಷ್ಟದಲ್ಲಿದೆ ಎಂದು ಭಾವಿಸಿ ತಕ್ಷಣ ಆನೆಯ ರಕ್ಷಣೆಗೆ ಕಾರ್ಯ ಪ್ರವೃತ್ತರಾಗುತ್ತಾರೆ.



ಒಂದು ಆನೆಯನ್ನು ನೋಡಿಕೊಳ್ಳಲು ಒಬ್ಬ ಮಾವುತ ಮತ್ತೊಬ್ಬ ಕಾವಾಡಿ ಇಬ್ಬರೂ ಇರುತ್ತಾರೆ. ಕಾವಾಡಿ ಮಾವುತನಿಗೆ ಸಹಾಯಕನಾಗಿರುತ್ತಾನೆ. ಕಾವಾಡಿಯು ಆನೆಗೆ ಬೇಕಾದ ಆಹಾರವನ್ನು ಸಿದ್ಧಪಡಿಸುತ್ತಾನೆ. ಭತ್ತದ ಹುಲ್ಲನ್ನು ಒಂದಷ್ಟು ಹಿಡಿದು ಗುಂಡಿ ಮಾಡಿ ಬೊಗಸೆಯಲ್ಲಿ ಭತ್ತ ಹಾಕಿ, ಅದನ್ನು

ಮಡಚಿ ಗುಂಡಿಗೆ ಸುತ್ತುವುದು ಅದನ್ನು ಮತ್ತೆ ಪೆಂಡಿಯ ತರಹದಲ್ಲಿ ಮಡಿಚಿ ಆನೆಗೆ ತಿನ್ನಿಸಲು ಅಣಿಗೊಳಿಸುವುದು. ಇದನ್ನು'ಕುಸುರೆ ಕಟ್ಟುವುದು' ಎಂದು ಕರೆಯುತ್ತಾರೆ. ಈ ರೀತಿ ಆಹಾರ ತಿನ್ನಿಸುವುದನ್ನು ಕೇರಳ ಮಾದರಿ ಎನ್ನುತ್ತಾರೆ.

ಆನೆಗೆ ವಯಸ್ಸಾದರೆ ಹಲ್ಲು ಬಿದ್ದು ಹೋಗುತ್ತದೆ ಮತ್ತು ಬಾಲದ ಕೂದಲು (ಜೀವಿ) ಬಿದ್ದು ಹೋದರೆ ಅಥವಾ ಬಾಲದ ಜೀವಿ ಬೆಳ್ಳಾಗಾದರೆ ಆನೆಗೆ ವಯಸ್ಸಾಗಿದೆ ಎಂದು ತಿಳಿಯುತ್ತದೆ. ಆನೆಗಳ ಮೇಲೆ ಹಾಸುವ ಗಾದಿ (ಹಾಸಿಗೆ)ಯನ್ನು 'ಸಕ್ಕಳ ಗಾದಿ' ಎಂದು ಕರೆಯುತ್ತಾರೆ.

### ೬. ೨೦. ೧. ಆನೆ ಪಳಗಿಸುವ ವಿಧಾನ

ಹಿಂದೆ ಆನೆಯನ್ನು ಪಳಗಿಸಲು ೧೦ ರಿಂದ ೧೨ ಅಡಿಆಳದ ಗುಂಡಿಯನ್ನು ತೆಗೆದು ಅದರ ಮೇಲೆ ಸೊಪ್ಪು ಹಾಕುತ್ತಿದ್ದರು. ಗುಂಡಿಗೆ 'ಕಪ್ಪ' ಎಂದು ಕರೆಯುತ್ತಾರೆ. ಮಾವುತರಿಬ್ಬರನ್ನು ಕಪ್ಪದ ಕಾವಲಿಗೆ ಬಿಡುತ್ತಾರೆ. ಆನೆಯು ಆಹಾರ ಹುಡುಕಿಕೊಂಡು ಬಂದು ಗುಂಡಿಯೊಳಗೆ ಬೀಳುತ್ತದೆ. ಆಗ ಅರಣ್ಯ ಇಲಾಖೆಗೆ ತಿಳಿಸಿ ಆನೆಯನ್ನು ಕಿರಾಲಕ್ಕೆ ತೆಗೆದುಕೊಂಡು ಬಂದು ಪಳಗಿಸುತ್ತಾರೆ.

ಆನೆ ಪಳಗಿಸುವ ಕಿರಾಲಕ್ಕೆ ಹಾಕುವ ಬೀಗಕ್ಕೆ "ಮುಂಡೋಲಾ"ಎಂದು ಕರೆಯುತ್ತಾರೆ. ಗುಂಡಿಗೆ ಬಿದ್ದ ಆನೆಗೆ ಮೂಗೇಟು ಆದಾಗ ಮತ್ತಿಮರದ ಚಕ್ಕೆಯನ್ನು ಸುಟ್ಟು ಆ ಬೂದಿಯನ್ನು ಬಟ್ಟೆಯಲ್ಲಿ ಸೋಸಿ ಬೇವಿನ ಎಣ್ಣೆಯಲ್ಲಿ ಬೆರೆಸಿ ಮೂಗೇಟಾದ ಜಾಗಕ್ಕೆ ಹಚ್ಚಿದರೆ ನೋವು ಕಡಿಮೆಯಾಗುತ್ತದೆ ಮತ್ತು ಕೈಯೆಣ್ಣೆಯಿಂದ ನೀವುತ್ತಾರೆ. ಬಿಸಿ ನೀರಿನಿಂದ ನೇವರಿಸುತ್ತಾರೆ. ವಿಶ್ರಾಂತಿ ಕೊಡಲಾಗುತ್ತದೆ.



ಕಾಡಿನಿಂದ ಹಿಡಿದು ತರುವ ಆನೆಗಳನ್ನು ಪಳಗಿಸಲು ದೊಡ್ಡ ದೊಡ್ಡ ಮರಗಳ ದಿಮ್ಮಿಗಳನ್ನು ಗೋಡೆಯಂತೆ ಒಂದರ ಮೇಲೊಂದು ಜೋಡಿಸಿದ ಚೌಕಾಕಾರದ ಕೊಠಡಿಯನ್ನು **'ಕಿರಾಲು'** ಎಂದು ಕರೆಯುತ್ತಾರೆ. ಈ ಕಿರಾಲಿನಲ್ಲಿ ಕೂಡಿಡುವ ಕಾಡು ಆನೆಗಳನ್ನು ಸಾಕಿದ ಆನೆಗಳ ಸಹಕಾರದಿಂದ ಪಳಗಿಸುತ್ತಾರೆ. ಈ ರೀತಿಯ ಕಿರಾಲುಗಳನ್ನು ಕುಶಾಲನಗರದ ಬಳಿ ಇರುವ ದುಬಾರೆ ಆನೆ ಕ್ಯಾಂಪ್ ಮತ್ತು ಮತ್ತಿಗೋಡು ಆನೆಕ್ಯಾಂಪ್‌ಗಳಲ್ಲಿ ಕಾಣಬಹುದಾಗಿದೆ. ಒಂದು ಆನೆಯನ್ನು ಪಳಗಿಸಲು ಇಬ್ಬರನ್ನು ನಿಯೋಜಿಸಲಾಗಿರುತ್ತದೆ.

ಕಿರಾಲಿನಲ್ಲಿರುವ ಆನೆಗೆ ಬೆಳಿಗ್ಗೆ ೮ ರಿಂದ ೯ ಘಂಟೆಯೊಳಗೆ ಕನಿಷ್ಟ ಪ್ರಮಾಣದಲ್ಲಿ ಆಹಾರವನ್ನು ನೀಡುತ್ತಾರೆ. ಬೆಳಿಗ್ಗೆ ಮತ್ತು ಸಂಜೆಯ ಸಮಯದಲ್ಲಿ ತರಬೇತಿ ನೀಡಲಾಗುತ್ತದೆ.

ಮಧ್ಯಾಹ್ನದ ವೇಳೆ ವಿಶ್ರಾಂತಿಗಾಗಿ ಬಿಡಲಾಗುತ್ತದೆ. ಕೋಪ ಬಂದಾಗ ಉಸಿರನ್ನು ಜೋರಾಗಿ ಬಿಡುತ್ತದೆ. ಆಗ ಪ್ರೀತಿಯಿಂದ ನೇವರಿಸಿ ಮೈ ಸವರಿ ಬೆಲ್ಲ, ತೆಂಗಿನಕಾಯಿ ನೀಡಿ 'ಆರೆ ಆರೆ' (ಶಹಭಾಷ್) ಎಂದು ಹೇಳಿ ಕೋಪವನ್ನು ಹೋಗಲಾಡಿಸುತ್ತಾರೆ.

ಮತ್ತಿಗೋಡು ಆನೆ ಕ್ಯಾಂಪಿನ ಅಶೋಕ ಆನೆಯ ಮಾವುತ ಶ್ರೀಯುತ ಅಣ್ಣಯ್ಯ ನವರ ಮಾಹಿತಿಯಂತೆ, ಆನೆಗಳು ಸರಾಸರಿ ೧೦೦ ವರ್ಷ ಬದುಕುತ್ತವೆ. ಅಶೋಕ ಆನೆಯನ್ನು ಪಳಗಿಸಲು ಇವರು ದೈವದ ಮೊರೆ ಹೋಗಿದ್ದರು. ನಾಗರಹೊಳೆಯಲ್ಲಿನ ಜೇನುಕುರುಬ ದೈವವಾದ 'ಅಮ್ಮಾಳೆಯಮ್ಮ' ನಿಗೆ ಹರಿಕೆ ಹೊತ್ತ ನಂತರ ಈ ಆನೆಯನ್ನು ಪಳಗಿಸಲು ಸಾಧ್ಯವಾಯಿತು ಎನ್ನುತ್ತಾರೆ.

**ಮುಂಡೋಲಾ**

ಕಿರಾಲಿಗೆ ಅಳವಡಿಸುವ ಬೀಗ ಅಂದರೆ ಕಿರಾಲಿನಲ್ಲಿರುವ ಕಾಡು ಆನೆಗಳು ಹೊರಗೆ ಬರದಿರಲು ಎರಡು ದೊಡ್ಡ ಮರದ ದಿಮ್ಮಿಗಳನ್ನು ಒಂದಕ್ಕೊಂದು ಸೇರಿಸಿ ಭದ್ರಗೊಳಿಸುವುದನ್ನು ಮುಂಡೋಲಾ ಎನ್ನುತ್ತಾರೆ.

**ಡೋಲಗ್ಗ**

ಆನೆಯನ್ನು ಕಟ್ಟುವ ಹಗ್ಗಕ್ಕೆ 'ಡೋಲಗ್ಗ' ಎಂದು ಕರೆಯುತ್ತಾರೆ.

**ಬಂಡ**

ಮದವೇರಿದ ಆನೆಯ ಕಾಲಿಗೆ ಕಟ್ಟುವ ಮರದ ದಿಮ್ಮಿಗೆ "ಬಂಡ" ಎನ್ನುತ್ತಾರೆ. ಇದು ಮುಂಡುವಿನ ಗಾತ್ರಕ್ಕಿಂತ ದೊಡ್ಡದಾಗಿರುತ್ತದೆ.

**ಮುಂಡು**

ಸುಮಾರು ಎರಡು ಅಡಿ ಉದ್ದದ ಮರದ ದಿಮ್ಮಿಯನ್ನು ಆನೆಯ ಕಾಲಿಗೆ ಕಟ್ಟುತ್ತಾರೆ. ಆನೆಯು ಓಡಿ ಹೋಗದಿರಲಿ ಎಂದು ಈ ರೀತಿ ಭಾರವನ್ನು ಕಟ್ಟುತ್ತಾರೆ ಇದನ್ನು ಮುಂಡು ಎನ್ನುತ್ತಾರೆ.

**ಅಂಕುಶ**



ಆನೆಯನ್ನು ಪಳಗಿಸಲು ಮತ್ತು ಹತೋಟಿಯಲ್ಲಿ ಇಡಲು ಅಂಕುಶ ಬಹಳ ಮುಖ್ಯವಾದದ್ದು. ಇದು ಮಾರುದ್ದ ಬಿದಿರಿನ ಕಡ್ಡಿಯ ಅಂಚಿಗೆ ಚೂಪಾದ ಕೊಡಲಿಯಾಕಾರದ ಕಬ್ಬಿಣದ ಸಲಾಕೆಯಂತೆ ಇರುತ್ತದೆ.

**ಆನೆಯನ್ನು ಪಳಗಿಸಲು ಹರಕೆ ಕಟ್ಟಿ ಕೊಳ್ಳುವ ಒಂಭತ್ತು ದೈವಗಳು.**

ಈ ದೈವಗಳಿಗೆ ಸ್ನಾನ ಮಾಡಿ, ಹಾಲುತುಪ್ಪ ತಂದು ಪೂಜೆ ಮಾಡುತ್ತಾರೆ. ಆನೆಗೆ ಹಾಲುತುಪ್ಪ ಕೊಡುತ್ತಾರೆ. ಉಪವಾಸ ಇದ್ದು ದೇವರ ಪೂಜೆ ಮಾಡುತ್ತಾರೆ. ಇಷ್ಟವಾದ ಜನರ ಮೇಲೆ ದೇವರು ಬಂದು ಏನು ಮಾಡಬೇಕು ಎಂದು ಹೇಳುತ್ತದೆ. ಈ ರೀತಿ ಹರಕೆ ಒಪ್ಪಿಸಿ ಆದ ಮೇಲೆ ಆನೆಯನ್ನು ಪಳಗಿಸಲು ಸಾಧ್ಯವಾಗುತ್ತದೆ.

- ψ ಅಮ್ಮಾಳಮ್ಮ
- ψ ಹಂದಿಗೆರೆ ಚೌಡಮ್ಮ
- ψ ಗಣಗೂರು ದೇವರು
- ψ ಮಾಸ್ತಮ್ಮಾ
- ψ ಬೊಮ್ಮಾಡಮ್ಮ
- ψ ಶೆಟ್ಟಿಗದ್ದೆ ದೇವರು
- ψ ಕಾಣರು ಮಹಾಕಾಳಿ
- ψ ಕಾರೆಕಟ್ಟೆ ಅಯ್ಯ
- ψ ದೊಡ್ಡು ತುಡು ದೇವರು

**ಆನೆಯ ದೃಷ್ಟಿ**

ಕೆಲವು ಆನೆಗಳಿಗೆ ದೃಷ್ಟಿ ಚೆನ್ನಾಗಿರುತ್ತದೆ. ಕೆಲವು ಆನೆಗಳಿಗೆ ದೃಷ್ಟಿ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ಎಲ್ಲಾ ಆನೆಗಳಿಗೆ ಎಡಗಣ್ಣಿನ ದೃಷ್ಟಿ ಚೆನ್ನಾಗಿರುತ್ತದೆ. ಬಲಗಣ್ಣಿನ ದೃಷ್ಟಿ ಕಡಿಮೆ ಇರುತ್ತದೆ.

**ಬಾಣಂತಿ ಆನೆ**

ಬಾಣಂತಿ ಆನೆಗೆ ದಿನಕ್ಕೆ ಎರಡು ಸಲ ಸ್ನಾನ ಮಾಡಿಸುತ್ತಾರೆ. ಆನೆಯ ಮರಿಯು ಎರಡು ವರ್ಷ ತುಂಬುವವರೆಗೂ ತಾಯಿಯ ಹಾಲನ್ನು ಕುಡಿಯುತ್ತದೆ.

### ೬. ೨೦. ೨. ಆನೆ ನಾಮಕರಣ

ಹಿಂದೆ ಆನೆಗೆ ಹೆಸರನ್ನು ಇಡಲು ಕವಡೆಯನ್ನು ಚೀಸಿ, ಜಾತಕ ನೋಡಿ ಹೆಸರು ಇಡುತ್ತಿದ್ದರು. ಆದರೆ ಇಂದು ಆನೆಯು ಹುಟ್ಟಿದ ಗಳಿಗೆ, ನಕ್ಷತ್ರ, ದಿನದ ಆಧಾರದ ಮೇಲೆ ಅರಣ್ಯ ಇಲಾಖೆಯವರು ಜಾತಕ ನೋಡಿ ಆನೆಯ ಹೆಸರನ್ನು ನಿಶ್ಚಯಿಸುತ್ತಾರೆ. ಉದಾ :- ಚಾಮುಂಡಿ, ವರಲಕ್ಷ್ಮಿ, ಜಾಕಿ, ಲಕ್ಷ್ಮಿ, ಗೀತಾ, ಬಲರಾಮ, ಅರ್ಜುನ, ಭೀಷ್ಮ, ಗೋಪಾಲಸ್ವಾಮಿ, ಅಶೋಕ ಮೊದಲಾದವು.

ಎರಡು ಮೂರು ಆನೆಗಳನ್ನು ಒಂದರ ಹಿಂದೆ ಮತ್ತೊಂದು ಕಟ್ಟಿ 'ಮತ್ ಮತ್' ಎಂದರೆ ಮುಂದಿನ ಆನೆಯು ಚಲಿಸುತ್ತದೆ.

'ಲಗೇ ಲಗೇ' ಎಂದು ಹಿಂದೆ ಇರುವವರು ಹೇಳಿದರೆ ಹಿಂದಿನ ಆನೆಯು ಮುಂದಿನ ಆನೆಯನ್ನು ನೂಕುತ್ತದೆ. ಆಗ ಎಲ್ಲಾ ಆನೆಗಳು ಸಾಲಾಗಿ ಒಂದರ ಹಿಂದೆ ಒಂದು ಚಲಿಸುತ್ತವೆ. ಹೀಗೆ ತರಬೇತಿಯನ್ನು ನೀಡಿದ ನಂತರ ಆನೆಗಳಿಗೆ ಸ್ನಾನ ಮಾಡಿಸಿ ಊಟ ಕೊಟ್ಟು ಕಿರಾಲ್‌ಗೆ ಸೇರಿಸುತ್ತಾರೆ.

### ೬. ೨೦. ೩. ಆನೆ ಭಾಷೆ

ಜೇನುಕುರುಬರು ಬಹಳ ಹಿಂದಿನಿಂದಲು ಆನೆಯನ್ನು ಪಳಗಿಸುವಲ್ಲಿ ನಿಪುಣರು. ಆದರೆ ಅವರು ಆನೆಯನ್ನು ಪಳಗಿಸಲು ಬಳಸುವ ಭಾಷೆ ಹಿಂದಿ ಮತ್ತು ಉರ್ದು ಭಾಷೆಯ ಪದಗಳಂತೆ ಇದೆ. ಮತ್ತಿಗೋಡು ಆನೆ ಕ್ಯಾಂಪಿನ ಅಶೋಕ ಆನೆಯ ಮಾವುತರಾದ ಶ್ರೀಯುತ ಅಣ್ಣಯ್ಯರವರು ಹೇಳುವಂತೆ ರಾಜ ಮಹಾರಾಜರ ಕಾಲದಲ್ಲಿ ಆಸ್ಥಾನಗಳಿಗೆ ಬೇಕಾಗುವ ಆನೆಗಳನ್ನು ಕಾಡಿನಲ್ಲಿ ಖೆಡ್ಡಾಗಳ ಮೂಲಕ ಹಿಡಿಯಲು ಜೇನುಕುರುಬರನ್ನು ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಕಾರಣ ಕಾಡಿನ ಸಂಪೂರ್ಣ ಜ್ಞಾನ ಮತ್ತು ಆನೆಗಳು ಇರುವಿಕೆಯ ಬಗ್ಗೆ ಜೇನುಕುರುಬರಿಗಷ್ಟೇ ಮಾಹಿತಿ ಇತ್ತು. ಹೀಗೆ ಹಿಡಿದ ಆನೆಗಳನ್ನು ಆಸ್ಥಾನಗಳಲ್ಲಿ ಪಳಗಿಸಲಾಗುತ್ತಿತ್ತು. ಹೀಗಾಗಿ ಮುಸಲ್ಮಾನರು ಬಳಸುವ ಪದಗಳು ಈಗಲೂ ಚಾಲ್ತಿಯಾಲಿವೆ.

| | | |
|---|---|---|
| ಬಾ | - | ನನ್ನ ಕಡೆಗೆ ಬಾ |
| ಲ್ಯಾ | - | ಬಾ |
| ಲೇ ಲಗೆ | - | ಹೊಡಿ |
| ಲಗೇ ಲಗೇ | - | ಮುಂದಕ್ಕೆ ನೂಕು |
| ಧರೆ | - | ತಿನ್ನು |
| ಧರೇ ಧರೇ | - | ವಸ್ತುಗಳನ್ನು ಎತ್ತು |

ಶೀ – ಬಿಸಾಕು

ಅಲಾ ಅಲಾ – ಎತ್ತು

ಆರೇ – ನಿಲ್ಲು

ಅಲಾ – ಮುಂದಿನ ಕಾಲುಗಳನ್ನು ಎತ್ತುತ್ತದೆ.

ಆದಿ – ಹಿಂದಿನ ಕಾಲುಗಳನ್ನು ಎತ್ತುತ್ತದೆ.

ಕುಲೆ – ಹಿಂದಿನ ಕಾಲುಗಳನ್ನು ಮಡಚಿಕೊಳ್ಳುತ್ತದೆ

ಮತ್ ಮತ್ – ಮುಂದಕ್ಕೆ ನಡೆ, ಹೋಗು

ಜೂಕ್ – ತಲೆಬಗ್ಗಿಸಲು

ಬೈಟ್ – ಕುಳಿತು ಕೋ

ಕುಲೆ – ಬೀಳಿಸಲು

ಸಲಾಂ – ನಮಸ್ಕಾರ

ಬೈಟ್‌ಕರ್ – ಮಲಗು

ಸರಕ್ – ಹಿಂದೆ ಸರಿಯಲು

ವಂತ್ – ಮುಂದೆ ಬಾ

ಉಟ್ – ಎದ್ದೇಳು

ಧರೇ ಧರೇ ಎಂದು ಆನೆಯ ಕಾಲನ್ನು ತಟ್ಟುತ್ತಾ ಹೇಳಿದರೆ – ಕಾಲಿನಲ್ಲಿ ವಸ್ತುವನ್ನು ಒದ್ದು ಕೊಂಬುಗಳಲ್ಲಿ ತೆಗೆದುಕೊಂಡು ಹೋಗುತ್ತದೆ.

ಆದಿ ಅಲಾ ಸಲಾಂ – ಮುಂದಿನ ಕಾಲುಗಳನ್ನು ಮಡಚಿ ಕುಳಿತುಕೊಂಡು ಸೊಂಡಿಲನ್ನು ಮೇಲಕ್ಕೆ ಎತ್ತಿ ನಮಸ್ಕಾರದ ಭಂಗಿಯನ್ನು ಪ್ರದರ್ಶಿಸುತ್ತದೆ.

### ೬. ೨೦. ೪. ಆನೆ ಜಾಡು ಕಂಡು ಹಿಡಿಯುವುದು

ಕಾಡಿನಲ್ಲಿ ಮೇಯಲು ಬಿಟ್ಟ ಆನೆಯು ತಪ್ಪಿಸಿಕೊಂಡಲ್ಲಿ ಅದರ ಕಾಲಿಗೆ ಕಟ್ಟಿದ ಸರಪಳಿಯ ಗುರುತನ್ನು ಹಿಂಬಾಲಿಸಿಕೊಂಡು ಹೋಗಿ ಹಿಡಿಯುತ್ತಾರೆ. ಮಣ್ಣಿನಲ್ಲಿ ಸರಪಳಿ ಗುರುತು ಕಾಣುತ್ತದೆ. ಆನೆಯ ಲದ್ದಿಯ ಗುರುತು ಹಿಡಿದು ಆನೆಯನ್ನು ಗುರುತ್ತಿಸುತ್ತಾರೆ. ಆನೆಯ ಮಾವುತ ಮತ್ತು ಕಾವಾಡಿಗೆ ತಮ್ಮ ಆನೆಯ ಎಲ್ಲಾ ಬಗೆಯ ಚಲನ ವಲನದ ಮಾಹಿತಿ ಇರುತ್ತದೆ. ಅದು ಸೊಪ್ಪು ಮುರಿಯುವ ವಿಧಾನದಿಂದಲೂ ಆನೆ ಹೋಗಿರುವ ಮಾರ್ಗವನ್ನು ಗುರುತಿಸಿಕೊಳ್ಳುತ್ತಾರೆ. ಆನೆ ವಾಸನೆಯ ಮೂಲಕ ಮಾವುತ ಕವಾಡಿಯನ್ನು ಗುರ್ತಿಸುತ್ತದೆ.

## ೬. ೨೦. ೫. ಆನೆ ಆಹಾರ

ಆನೆಗಳಿಗೆ ನೀಡಲಾಗುವ ಹೆಚ್ಚುವರಿ ಆಹಾರವನ್ನು ನೀಡಲು ಅಗತ್ಯವಿರುವ ಆಹಾರ ಧಾನ್ಯಗಳನ್ನು ಸರ್ಕಾರ ಕೊಡುತ್ತದೆ.





ಬಾಳೆಹಣ್ಣು, ಬೆಲ್ಲ, ಭತ್ತ, ತೆಂಗಿನಕಾಯಿ, ಕಬ್ಬು, ತೊಗರಿಬೇಳೆ, ಅವರೆಬೇಳೆ, ಹೆಸರುಬೇಳೆ, ರಾಗಿ, ಅಕ್ಕಿ, ಉದ್ದಿನಬೇಳೆ ಎಲ್ಲವನ್ನೂ ಒಡಪು ಮಾಡಿ ಒಂದು ದೊಡ್ಡ ಪಾತ್ರೆಯಲ್ಲಿ ನೀರು ಇಟ್ಟು ಚೆನ್ನಾಗಿ ಕುದಿಸಿ ಈ ಎಲ್ಲಾ ಬೇಳೆಗಳ ಮಿಶ್ರಣವನ್ನು ಹಾಕಿ ಮುದ್ದೆ ಮಾಡಿ ನೀಡುತ್ತಾರೆ. ಆನೆಯು ಗರಿಕೆ ಹುಲ್ಲನ್ನು ಕಿತ್ತು ತಿನ್ನುತ್ತಿದ್ದರೆ ಅದಕ್ಕೆ ತುಂಬಾ ಹಸಿವಾಗಿದೆ ಎಂದು ಭಾವಿಸುತ್ತಾರೆ. ಹಾಗೆಯೇ ಬಾಯಾರಿಕೆಯಾದಾಗ ಆನೆಗಳು ಏನನ್ನು ಕೊಟ್ಟರೂ ತಿನ್ನುವುದಿಲ್ಲ. ಪ್ರತಿ ದಿನ ಒಂದು ಆನೆ ೨೦ ರಿಂದ ೨೫ ಬಿಂದಿಗೆ ನೀರು ಕುಡಿಯುತ್ತದೆ.





ಕುದಿಸಿದ ನೀರಿಗೆ ರಾಗಿ ಹಿಟ್ಟು ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮುದ್ದೆ ಮಾಡುತ್ತಾರೆ. ಇದನ್ನು ರಾಗಿ ಹುರುಳಿ ಕಟ್ಟುವುದು ಎನ್ನುತ್ತಾರೆ. ಪ್ರತಿದಿನ ೨೦ ರಿಂದ ೨೫ ಮುದ್ದೆ ತಿನ್ನಿಸುತ್ತಾರೆ.

ಮಾವುತರು ಕಾರಣಾಂತರಗಳಿಂದ ಆಹಾರ ಕೊಡಲು ಆಗದಿದ್ದಾಗ ಅಂದರೆ ಅನಾರೋಗ್ಯ ಅಥವಾ ಪರ ಊರಿಗೆ ಹೋದಾಗ ಮಾವುತ, ಕಾವಾಡಿಯರ ಹೆಂಡತಿಯರೇ ಆನೆಗೆ ಆಹಾರ ನೀಡುತ್ತಾರೆ. ಆನೆಯು ತುಂಬಾ ಇಷ್ಟ ಪಡುವ ಆಹಾರವೆಂದರೆ ಬಿದಿರು, ಭತ್ತ, ಬೆಲ್ಲ, ಕಬ್ಬು ಇತ್ಯಾದಿ.

### ೬. ೨೧. ಪ್ರಾಣಿ ವೈದ್ಯ

ಮನುಷ್ಯರಂತೆ ತಾವು ಸಾಕುವ ಪ್ರಾಣಿಗಳಿಗೂ ಔಷಧಿಯನ್ನು ನೀಡುತ್ತಾರೆ. ವಿಶೇಷವಾಗಿ ಆನೆಗಳನ್ನು ಪಳಗಿಸುವುದರಲ್ಲಿ, ಸಾಕುವುದರಲ್ಲಿ ಪ್ರಾವೀಣ್ಯತೆ ಪಡೆದ ಜೇನುಕುರುಬರು ಅವುಗಳಿಗೆ ಬರುವ ರೋಗಗಳಿಗೂ ಔಷಧಿ ಕೊಡಬಲ್ಲರು.

### ೬. ೨೧. ೧. ಆನೆಯ ಉತ್ತಮ ಆರೋಗ್ಯದ ಲಕ್ಷಣಗಳು

ಪಶುಪಾಲಕನಿಗೆ ತನ್ನ ಪಶುಗಳ ಆರೋಗ್ಯದ ಕುರಿತಾಗಿ ಇರುವ ಕಾಳಜಿಯು ಆನೆಯ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುವ ಜೇನುಕುರುಬರು ಹೊಂದಿದ್ದಾರೆ.

- ಆನೆಯು ಸತತವಾಗಿ ಸೊಂಡಿಲನ್ನು ಹೊಯ್ದಾಡಿಸುವುದು
- ಬಾಲ ಬೀಸುವುದು
- ಕಿವಿಗಳನ್ನು ಬಡಿಯುವುದು
- ಮೈ ಇಲ್ಲವೇ ತಲೆಯನ್ನು ಒಂದು ಬದಿಯಿಂದ ಮತ್ತೊಂದು ಬದಿಗೆ ತೂಗಿಸುವುದು
- ಕಾಲನ್ನು ಇನ್ನೊಂದು ಕಾಲಿಗೆ ತಿಕ್ಕುವುದು
- ಕಾಲನ್ನು ಗಾಳಿಯಲ್ಲಿ ಅಲ್ಲಾಡಿಸುವುದು

ಇವು ಆನೆಯ ಉತ್ತಮ ಆರೋಗ್ಯದ ಲಕ್ಷಣಗಳು ಎಂದು ಮಾವುತ, ಕಾವಾಡಿಗಳಾದ ಜೇನುಕುರುಬರು ತಿಳಿಸುತ್ತಾರೆ.

### ೬. ೨೧. ೨ ಆನೆಯ ಅನಾರೋಗ್ಯದ ಲಕ್ಷಣಗಳು

- ಆನೆಗಳು ಗಲಿಬಿಲಿಗೊಂಡಿರುವುದು
- ಖಿನ್ನವಾಗಿರುವುದು
- ಅತ್ತಿಂದಿತ್ತ ಹೊಯ್ದಾಡದೇ ಇರುವುದು

- ಆನೆಯ ನಾಲಿಗೆ ಮೇಲೆ ಗುಳ್ಳೆಗಳೇಳುವವು
- ಕಿವಿಯ ಕೆಳಭಾಗ ತಂಪಿನಿಂದ ಕೂಡಿರುವುದು
- ಕಣ್ಣುಗಳು ಕಾಂತಿ ಕಳೆದುಕೊಳ್ಳುವುದು
- ಕಣ್ಣುಗಳಿಂದ ನೀರು ಸುರಿಯುವುದು
- ಆಹಾರ ಸೇವಿಸದಿರುವುದು
- ವಿಶ್ರಾಂತಿಯನ್ನು ಪಡೆಯದೆ ಹಲವು ಸಲ ಮಲಗದೆ ಎದ್ದು ನಿಲ್ಲುವುದು
- ಕಡಿಮೆ ಪ್ರಮಾಣದಲ್ಲಿ ಮೂತ್ರ ಮಾಡುವುದು
- ಲದ್ದಿಯು ಗಟ್ಟಿಯಾಗಿದ್ದು ಸಿಂಬಳದ ಪೊರೆಯನ್ನು ಹೊಂದಿರುವುದು.
- ಕೆಲವೊಮ್ಮೆ ಭೇದಿಯನ್ನು ಮಾಡಿಕೊಳ್ಳುವುದು

ಮುಂತಾದ ಲಕ್ಷಣಗಳು ಆನೆಯ ಆರೋಗ್ಯ ಹದಗಟ್ಟಿದೆ ಎಂಬುದನ್ನು ಸೂಚಿಸುತ್ತವೆ. ಆನೆಗಳಿಗೆ ಒಗ್ಗದಿರುವ ಆಹಾರ ಕೊಡುವುದರಿಂದ, ತಿಂದ ಆಹಾರ ಜೀರ್ಣವಾಗದೆ ಇರುವುದು, ಅತಿಯಾದ ಶ್ರಮದ ಕೆಲಸ, ಆನೆಗಳು ಅನಾರೋಗ್ಯ ಹೊಂದುವುದಕ್ಕೆ ಕಾರಣಗಳಾಗಿರುತ್ತವೆ.

### ೬. ೨೧. ೩. ಆನೆಗಳಿಗೆ ಕಂಡುಬರುವ ಸಾಮಾನ್ಯ ಕಾಯಿಲೆಗಳು

- ಜ್ವರ
- ನೆಗಡಿ
- ಕಾಮಾಲೆ
- ಕಾಲುಬಾಯಿ ರೋಗ
- ಚಪ್ಪೆರೋಗ
- ಸಂಧಿವಾತ
- ಗಂಟಲು ಬೇನೆ
- ಆನೆಯ ದೇಹದೊಳಗೆ ಜಂತು ಹಾಗೂ ಲಾಡಿ ಹುಳಗಳಾಗುವುದುಂಟು.

ಆ ಸಂದರ್ಭದಲ್ಲಿ ಅವುಗಳಿಂದ ಪಾರಾಗಲು ಆನೆಗಳು ನಿಸರ್ಗದಲ್ಲಿ ದೊರಕುವ ಖನಿಜ ಲವಣಗಳಿಂದ ಕೂಡಿದ ಜೇಡಿಮಣ್ಣನ್ನು ತಿಂದು ಜಂತು ಭಾದೆಯಿಂದ ಪಾರಾಗುತ್ತವೆ. ಇಂಥ ನೆಲವನ್ನು ಉಪ್ಪು ಗುಂಡಿಗಳೆಂದು ಕರೆಯುತ್ತಾರೆ. ಔಷಧದ ಗುಣವಿರುವ ಮತ್ತಿ, ಜಾಲರ ಮರಗಳ ತೊಗಟೆಯನ್ನು ತಿಂದು ಆನೆಗಳು ಹಲವು ಕಾಯಿಲೆಗಳನ್ನು ತಾವೇ ಪರಿಹರಿಸಿಕೊಳ್ಳುತ್ತವೆ.

### ೬. ೨೧. ೪. ಆನೆಗಳಿಗೆ ನೀಡಲಾಗುವ ಚಿಕಿತ್ಸಾ ವಿಧಾನಗಳು

**ಕಫ ವಾತ ದೋಷಕ್ಕೆ :** ಲಕ್ಕಿಗಿಡ, ತುಳಸಿ, ದೇವದಾರು, ಕೊನ್ನಾರಿಗಡ್ಡೆ, ಚುಂಗಲ್‌ಕೋಷ್ಠ, ಬೆಳ್ಳುಳ್ಳಿ, ಅತಿಮಧುರ, ವಾಯುವಿಳಂಗ, ಗಂಟುಬಾರಂಗಿ, ಕರಿಸಾಸಿವೆ, ಬಿಳಿಸಾಸಿವೆ, ಮೂಲಂಗಿ, ಪಂಚಕೋಲ, ಹೊಂಗೆ ಮರದ ತೊಗಟೆಯ ರಸವನ್ನು ಸಮಪ್ರಮಾಣದಲ್ಲಿ ಬೆರೆಸಿ ಬೆಲ್ಲದೊಂದಿಗೆ ಆನೆಗಳಿಗೆ ಕೊಡುವುದರಿಂದ ಅವುಗಳಿಗೆ ಬರುವ ಕಫ ಮತ್ತು ವಾತದೋಷಗಳು ದೂರವಾಗುತ್ತವೆಂದು ಹೇಳುತ್ತಾರೆ.

**ವಾತ ಪಿತ್ತ ದೋಷಕ್ಕೆ :** ಅಮೃತಬಳ್ಳಿ, ಒಂದೆಲೆಹೊನ್ನೆ, ಮೂರೆಲೆಹೊನ್ನೆ, ಅಶ್ವಗಂಧಿ, ನೆಲಗುಂಬಳಗಡ್ಡೆ, ಆಷಾಢಿಬೇರು ಇವುಗಳನ್ನು ಚೆನ್ನಾಗಿ ಅರೆದು ಪುಡಿಮಾಡಿ ನೀರಿನಲ್ಲಿ ಬೆರೆಸಿ ಕುಡಿಸುವುದರಿಂದ ಆನೆಗಳ ವಾತ ಪಿತ್ತಗಳಿಂದ ಉಂಟಾಗುವ ಎಲ್ಲಾ ರೋಗಗಳು ವಾಸಿಯಾಗುತ್ತವೆ.

**ಕಫ ಪಿತ್ತ ದೋಷಕ್ಕೆ :** ಇದೇ ರೀತಿ ಕಹಿಪಡುವಲ, ಅಗಳುಶುಂಠಿ, ಬೇವು, ನೆಲ್ಲಿಕಾಯಿ, ಅಮೃತಬಳ್ಳಿ, ಭಜೆ, ಧನಿಯ, ಕಟುಕರೋಹಿಣಿ ಮತ್ತು ಕೊಡಸಿಗೆ ಬೀಜ ಇವು ಕಫ ಮತ್ತು ಪಿತ್ತದೋಷಗಳಿಂದ ಉಂಟಾಗುವ ರೋಗಗಳನ್ನು ನಾಶಪಡಿಸುತ್ತವೆ.

**ಉದರಶೂಲೆ ದೋಷಕ್ಕೆ :** ಹಿಂಗು, ಶುಂಠಿ ಮತ್ತು ಬೆಲ್ಲಗಳನ್ನು ಬೆರೆಸಿ ಆನೆಗೆ ತಿನ್ನಿಸಬೇಕು. ಕಣ್ಣುಗಳಿಗೆ ಶುಂಠಿಚೂರ್ಣದಿಂದ ಮಾಡಿದ ಅಂಜನ ಹಚ್ಚುವುದರಿಂದ ಆನೆಗಳಲ್ಲಿ ಉಂಟಾಗುವ ಉದರಶೂಲೆ ಇಲ್ಲವಾಗುತ್ತದೆ.

**ಆಮವಾತ ದೋಷಕ್ಕೆ :** ಕೊಡಸಿಗೆ ತೊಗಟೆ, ಶುಂಠಿ, ಯವಕ್ಷಾರ, ಚಿತ್ರಮೂಲ, ಮೆಣಸು, ಹಿಪ್ಪಲಿ, ಬಿಳಿಸಾಸುವೆ, ವಾಯುವಿಳಂಗ, ಅತಿಬಜೆ, ಕೊನ್ನಾರಿಗಡ್ಡೆ, ಮೋಡಿ, ಅರಿಶಿಣ, ನುಗ್ಗೆ, ಸೈಂಧ್ರ ಲವಣ ಇವೆಲ್ಲವನ್ನೂ ಕುಟ್ಟಿ ಪುಡಿ ಮಾಡಿಕೊಂಡು ಆನೆಗೆ ತಿನ್ನಿಸಿದರೆ ಅದರ ಆಮವಾತವನ್ನು ಹಾಗೂ ಅದರಿಂದ ಉಂಟಾಗುವ ರೋಗಗಳು ದೂರಾಗುತ್ತವೆ.

**ಗಂಟಲು ಬೇನೆಗೆ :** ಶುಂಠಿ, ಕಹಿಪಡುವಲ ಸೊಪ್ಪು, ಬೇವಿನ ಚಕ್ಕೆ, ನೆಲಬೇವು, ಗಂಗುಂಗೆ ಬೀಜ, ಮುಂಡಗಳ್ಳಿ, ಆಡುಸೋಗೆ, ಹಿಪ್ಪಲಿ, ಮೋಡಿ, ನುಗ್ಗೆಬೀಜ, ಬಜೆ, ಶಿವನಿಬೇರು, ಚಿತ್ರಮೂಲ, ಹೆಗ್ಗುಳ್ಳ, ಮಗ್ಗಾರೆಕಾಯಿ, ಕಟುಕುರೋಹಿಣಿ, ತುರಚನಬೇರು, ಅರಿಶಿನ, ಹೊಂಗೆಬೀಜ, ತ್ರಿಫಲ, ಇವುಗಳ ಚೂರ್ಣವನ್ನು ಜೇನುತುಪ್ಪದೊಡನೆ ಕೊಟ್ಟರೆ ಆನೆಯ ಗಂಟಲು ಬೇನೆ ನಾಶವಾಗುತ್ತವೆ.

**ವಾಯು ತೊಂದರೆಗೆ** : ಅಶ್ವಗಂಧಿ, ಓಪ್ಪಲಿ, ಅರಶಿಣ, ವಾಯುವಿಳಂಗ, ಕೆಂಪು ಬೂರಗ, ಕಾಡು ಉದ್ದು, ಕಾಡು ಹೆಸರು, ಬಜೆ, ಬೆಳ್ಳುಳ್ಳಿ ಇವೆಲ್ಲವನ್ನೂ ಒಂದೊಂದನ್ನು ಎಂಟೆಂಟು ತೂಕ, ಅತ್ತಿ ಚಕ್ಕೆ ಒಂದು ತೂಕ ಪ್ರಮಾಣಕ್ಕೆ ಬೆರಸಿ ಆನೆಗೆ ಹೊಟ್ಟೆಯೊಳಗೆ ಕೊಟ್ಟರೆ ಆನೆಗೆ ಬಂದ ವಾಯು ತೊಂದರೆಯು ನಾಶಮಾಡುತ್ತದೆ.

**ಮೈಮೇಲಿನ ಗಾಯಗಳ ನಿವಾರಣೆಗೆ** : ಕರಿಎಳ್ಳು, ಬೇವಿನ ಎಲೆ, ಮತ್ತು ಅರಿಶಿಣಗಳನ್ನು ಚೆನ್ನಾಗಿ ಅರೆದು ಜೇನುತುಪ್ಪ ಬೆರೆಸಿ ಹುಣ್ಣುಗಳಿಗೆ ಹಾಕಿದರೆ ಗಾಯವು ವಾಸಿಯಾಗುತ್ತವೆ.

**ಆನೆಗೆ ಗಾಯ ಆದರೆ** : ಪ್ರತಿದಿನ ಗಾಯವನ್ನು ಬಿಸಿ ನೀರಿನಲ್ಲಿ ತೊಳೆದು, ನೇರಳೆ ಮರದ ಚಕ್ಕೆಯನ್ನು ಕೆತ್ತಿ ತಂದು ಕೆಂಡದಲ್ಲಿ ಸುಟ್ಟು, ಪುಡಿಮಾಡಿ ಆ ಪುಡಿಯನ್ನು ಬೇವಿನ ಎಣ್ಣೆ ಜೊತೆ ಗಾಯಕ್ಕೆ ದಿನಕ್ಕೆ ಎರಡು ಬಾರಿ ಹಚ್ಚುತ್ತಾರೆ. ಗಾಯ ಎರಡು ಮೂರು ದಿನಗಳಲ್ಲಿ ವಾಸಿಯಾಗುತ್ತದೆ.

**ಹೊಟ್ಟೆ ನೋವು ನಿವಾರಣೆಗೆ** : ಆನೆಗೆ ಹೊಟ್ಟೆ ನೋವು ಬಂದಾಗ ಹೊಟ್ಟೆಯು ಊದಿಕೊಳ್ಳುತ್ತದೆ. ಅದು ಮೇವನ್ನು ತಿನ್ನವುದಿಲ್ಲ. ಆಗ ಹಸಾರು ಮರದ ಚಕ್ಕೆಯನ್ನು ಬೇಯಿಸಿ ರಸವನ್ನು ಕುಡಿಸುತ್ತಾರೆ. ಆಗ ಹೊಟ್ಟೆ ನೋವು ವಾಸಿಯಾಗುತ್ತದೆ. ನಂತರ ಆಹಾರವನ್ನು ತಿನ್ನಲು ಪ್ರಾರಂಭಿಸುತ್ತದೆ.

**ಕಣ್ಣು ನೋವು, ತಲೆ ನೋವು ನಿವಾರಣೆಗೆ** : ಆನೆಗೆ ಕಣ್ಣು ನೋವು, ತಲೆನೋವು ಇದ್ದಾಗ ಕಣ್ಣಲ್ಲಿ ನೀರು ಇಳಿಯುತ್ತದೆ. ಆಗ ತಲೆಗೆ, ಕಿವಿಗೆ ಕೈಯೆಣ್ಣೆ (ಹರಳೆಣ್ಣೆ) ಹಚ್ಚುತ್ತಾರೆ.

**ಸರಪಳಿ ಗಾಯ** : ಕಾಲಿನ ಚೈನು ಯಾವಾಗಲೂ ಎಳೆದು ಕಾಲು ಗಾಯವಾಗಿರುತ್ತದೆ. ಅದಕ್ಕೆ ಪ್ರತಿದಿನ ಎರಡು ಸಲ ಬೇವಿನ ಎಣ್ಣೆಯನ್ನು ಮತ್ತು ಕೈಯೆಣ್ಣೆಯನ್ನು ಹಚ್ಚುತ್ತಾರೆ.

**ಹಲ್ಲಿನ ಆರೈಕೆ** : ಹಲ್ಲಿಗೆ ಪ್ರತಿದಿನ ಬೇವಿನೆಣ್ಣೆಯನ್ನು ಹಚ್ಚುತ್ತಾರೆ.

**ಕಣ್ಣಿನ ರೋಗ ನಿವಾರಣೆಗೆ** : ಚಿಲ್ಲದ ಬೀಜ, ಲೋಂದ್ರದ ಚಕ್ಕೆ, ಅತಿ ಮಧುರ, ಕೆಂಪು ಚಂದನ, ಕೊನ್ನಾರಿ ಗಡ್ಡೆ, ಕಬ್ಬು, ಮಂಜಿಷ್ಠೆ, ಮುಡಿವಾಳ, ಲಾವಂಚದ ಬೇರುಗಳನ್ನು ಅರೆದು ಅದರಿಂದ ಬಂದ ರಸವನ್ನು ಆನೆಗಳ ಕಣ್ಣಿಗೆ ಹಚ್ಚಿದರೆ ಕಣ್ಣಿನ ರೋಗ ವಾಸಿಯಾಗುತ್ತದೆ.

**ಇತರೆ ಪ್ರಾಣಿಗಳ ಚಿಕಿತ್ಸಾ ವಿಧಾನಗಳು**

**ಗಾಯ** : ಎತ್ತಿನ ಹೆಗಲಿಗೆ ಗಾಯವಾದಾಗ ತೊಂಡೆ ಹಂಬನ್ನು ತೇಯ್ದು ಹಾಕುವುದು. ಹಸುವಿಗೆ ಗಾಯವಾಗಿದ್ದರೆ ಗರಿಕೆ ಜೊತೆಗೆ ಆಲೆ ಬೇರನ್ನು ಬೆರೆಸಿ ಕೊಡಬೇಕು. ಹೊಟ್ಟೆಯಲ್ಲಿ ಹುಳು ಇದ್ದರೆ ಇದನ್ನು ಅರೆದು ರಸ ಕುಡಿಸಬೇಕು.

**ಗಾಯದಲ್ಲಿ ಹುಳು** : ದನಗಳಿಗೆ ಗಾಯವಾಗಿದ್ದರೆ ಗಾಯದಲ್ಲಿ ಹುಳು ಇದ್ದರೆ, ಬನ್ನಿಸೊಪ್ಪು, ಸೂರ್ಯದೇವಕುಡಿ ದಾಸಕೊಬ್ಬಳದ ಕುಡಿಯನ್ನು ಹಾಕಿ ಹುಲ್ಲಿನ ಜೊತೆ ತಿನ್ನಿಸಬೇಕು ಗಾಯ

ವಾಸಿಯಾಗುತ್ತದೆ. ದನಗಳಿಗೆ ಗಾಯಗಳಾಗಿ ಹುಳಗಳು ಬಿದ್ದಾಗ ದೊಡ್ಡಮಾಗಳಿ ಬೇರು (ದೊಡ್ಡಕಂಬಳ ಹಂಬು) ಜೊತೆಗೆ ಹುಲ್ಲು ಸೇರಿಸಿ ತಿನ್ನಿಸಬೇಕು.

**ಜ್ವರ** : ದನಗಳಿಗೆ ಸೆಲೆ (ಜ್ವರ) ರೋಗ ಬಂದರೆ ಬುಗಡಿ ಗಿಡದ ಕಾಯಿಯನ್ನು ದನದ ಕುತ್ತಿಗೆಗೆ ಕಟ್ಟುತ್ತಾರೆ

**ಹೇನು** : ದನಗಳಲ್ಲಿ ಹೇನು ಹೆಚ್ಚಿದಾಗ ಇದರ ಬೇರನ್ನು ಬೆಂಕಿಯಲ್ಲಿ ಹಾಕಿ ಹೊಗೆ ಕೊಡತ್ತಾರೆ.

**ಹೊಟ್ಟೆಯಲ್ಲಿ ಹುಳು** : ಹಸುವಿಗೆ ಹೊಟ್ಟೆಯಲ್ಲಿ ಹುಳು ಇದ್ದರೆ ಆಲೆ ಬೇರನ್ನು ಅರೆದು ರಸ ಕುಡಿಸಬೇಕು.

**ಹೊಟ್ಟೆ ಉಬ್ಬರ** : ಮುರುಕದ ಮರದ ಗಂಟಿನಲ್ಲಿರುವ ನೀರನ್ನು ಹೊಟ್ಟೆ ಉಬ್ಬರಿಸಿರುವ ದನಗಳಿಗೆ ಕುಡಿಸಿದರೆ ಹೊಟ್ಟೆ ಉಬ್ಬರ ವಾಸಿಯಾಗುತ್ತದೆ.

**ಕೋಳಿಗಳಿಗೆ ಚಿಕಿತ್ಸೆ** : ಮುಂಡು ಸೀಗೆ ಸೊಪ್ಪಿನ ಚಿಗುರು ಮತ್ತು ಭಂಗಿ ಸೊಪ್ಪನ್ನು ಅರೆದು ರಾಗಿಯಲ್ಲಿ ನೆನೆಸಿ ಕೋಳಿಗೆ ತಿನ್ನಿಸಿದರೆ ಕೋಳಿಗೆ ಯಾವ ರೋಗವು ಬರುವುದಿಲ್ಲ.

ಹೀಗೆ ಮನುಷ್ಯ ಹಾಗೂ ತಮ್ಮ ಸಂಪರ್ಕದಲ್ಲಿರುವ ಆನೆಯಂತಹ ಪ್ರಾಣಿಗಳ ಔಷದೋಪಚಾರದ ಬಗ್ಗೆ ತಮ್ಮ ಅನುಭವದಲ್ಲಿ ದೊರೆತ ಪರಂಪರೆಯಿಂದ ತಿಳಿದ ಔಷಧಿಯನ್ನು ತಯಾರಿಸುವ ಮತ್ತು ಬಳಸುವ ಕ್ರಮವನ್ನು ಜೇನುಕುರುಬರು ಮಾಡುತ್ತಿದ್ದಾರೆ. ಈ ವೈದ್ಯ ಪದ್ಧತಿ ಕೇವಲ ಪುರುಷರಿಗೆ ಮಾತ್ರ ಸೀಮಿತವಾಗಿಲ್ಲ. ವಿಶೇಷವಾಗಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಖಾಯಿಲೆಗಳಿಗೆ ಜೇನುಕುರುಬ ಮಹಿಳೆಯರು ಔಷದೋಪಚಾರವನ್ನು ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ ( ಮಾ: ಅಣ್ಣಯ್ಯ, ಮತ್ತಿಗೋಡು ಆನೆ ಕ್ಯಾಂಪ್)

**ಮಹಿಳೆಯರ ಪಾತ್ರ** : ಆನೆ ಪಳಗಿಸುವುದು ಪುರುಷರೇ ಆದರೂ, ಮಾವುತ, ಕಾವಾಡಿಗಳ ಕುಟುಂಬಕ್ಕೆ ಆನೆಯೂ ಒಬ್ಬ ಸದಸ್ಯನಿದ್ದಂತೆ. ಆಹಾರ ತಯಾರಿಕೆ ಅವುಗಳ ಆರೈಕೆ ಮೊದಲಾದ ವಿಷಯಗಳಲ್ಲಿ ಮಹಿಳೆಯರು ಎಂದೂ ಹಿಂದೆ ಬಿದ್ದಿಲ್ಲ.

**ಆಧುನಿಕತೆ** : ಪಾರಂಪರಿಕ ಜ್ಞಾನಕ್ಕೆ ಪ್ರಮಾಣ ಪತ್ರಗಳಿರುವುದಿಲ್ಲ. ಇಂದಿನ ಜಾಗತಿಕ ಸ್ಪರ್ಧಾಲೋಕಕ್ಕೆ ಪ್ರಮಾಣ ಪತ್ರಗಳೇ ಊರುಗೋಲುಗಳಾಗಿವೆ. ಇವುಗಳ ಕೊರತೆಯೇ ಜೇನುಕುರುಬರನ್ನು ಆನೆಗಳಿಂದ ದೂರ ಸರಿಯುವಂತೆ ಮಾಡಿದೆ.

### ೬. ೨೨. ಮಾಂತ್ರಿಕ ವಿದ್ಯೆ

ಜೇನುಕುರುಬರಲ್ಲಿ ಮನುಷ್ಯ ಸತ್ತ ನಂತರವೂ ಆತ್ಮಗಳಾಗಿ ತಮ್ಮ ಬದುಕಿನಲ್ಲಿ ಬರುತ್ತವೆ ಎಂದು ಭಾವಿಸುತ್ತಾರೆ ಮತ್ತು ಅವುಗಳೊಂದಿಗೆ ಸಂವಾದವನ್ನೂ ಸಹ ಮಾಡುತ್ತಾರೆ. ಇದಕ್ಕಾಗಿಯೇ

ಹಾಡಿಯಲ್ಲಿ ಪೂಜಾರಿಯೊಬ್ಬರು ಇರುತ್ತಾರೆ. ಇವರು ಸತ್ತ ವ್ಯಕ್ತಿಯ ಆತ್ಮವನ್ನು ಬೇರೊಬ್ಬರ ದೇಹದಲ್ಲಿ ಆಹ್ವಾನಿಸುತ್ತಾರೆ. ಅವರು ಜೀವಿತಾವಧಿಯಲ್ಲಿ ಅನುಭವಿಸಿದ ಕಷ್ಟ ಸುಖಗಳನ್ನು ಕೇಳುತ್ತಾರೆ. ಅವರು ಬದುಕಿದ್ದಾಗ ಬಾಕಿಯಾದ ಬಯಕೆಯನ್ನು ಕೇಳುತ್ತಾರೆ. ಈಡೇರಿಸುವಂತಹ ಬಯಕೆಯಾಗಿದ್ದರೆ ಅವುಗಳನ್ನು ಈಡೇರಿಸಲು ಪ್ರಯತ್ನಿಸುತ್ತಾರೆ.

ಸಾಮನ್ಯವಾಗಿ ಆತ್ಮಗಳು ವ್ಯಕ್ತಿ ಸಾಯಲು ಕಾರಣವಾದ ಅಂಶವನ್ನು ತಿಳಿಸುತ್ತವೆ. ತಮ್ಮ ಆಹಾರದ ಬಯಕೆಯನ್ನು ತಿಳಿಸಿ ಅವುಗಳನ್ನು ಈಡೇರಿಸಿಕೊಳ್ಳುತ್ತವೆ. ವ್ಯಕ್ತಿ ಸತ್ತ ಕುಟುಂಬದವರು ಸರ್ವೆ ಸಾಮಾನ್ಯವಾಗಿ ಅವರ ಆತ್ಮವನ್ನು ಆಹ್ವಾನಿಸಲು ಅಣಿಯಾಗುತ್ತಾರೆ. ಇದಕ್ಕೆ ಕಾರಣ ಅವರ ಬಯಕೆಯನ್ನು ತೀರಿಸದೇ ಇದ್ದರೆ ಅವರು ನಮ್ಮ ಕುಟುಂಬಕ್ಕೆ ಸಮಸ್ಯೆಗಳನ್ನು ಉಂಟು ಮಾಡುತ್ತವೆ ಎಂಬ ಬಲವಾದ ನಂಬಿಕೆ ಇವರಲ್ಲಿದೆ.

ಕಾಲ ಕ್ರಮೇಣ ಆದುನಿಕತೆಯ ಪ್ರಭಾವದಿಂದಾಗಿ ಮಾಂತ್ರಿಕ ವಿದ್ಯೆಯ ಆಚರಣಾ ಪದ್ಧತಿಯ ಮೇಲಿನ ನಂಬಿಕೆ ಕಡಿಮೆಯಾಗಿಯಾಗಿದೆ.

### ೬. ೨೩. ರೋಗರುಜಿನಗಳಿಗೆ ಬಳಕೆಯಾಗುವ ಮಾಂತ್ರಿಕ ವಿದ್ಯೆ

ಅನಾರೋಗ್ಯ ಸಂಭವಿಸಿದಾಗ ಜೇನುಕುರುಬರು ಮೊರೆ ಹೋಗುವುದೇ ಪ್ರಕೃತಿಯ ಆರಾಧನೆಗೆ. ಅಂದರೆ ನಮ್ಮಿಂದ ತಿಳಿದೋ ತಿಳಿಯದೋ ಆದ ತಪ್ಪಿಗಾಗಿ ನನಗೆ ಅನಾರೋಗ್ಯ ಸಂಭವಿಸಿದೆ ಎಂದು ಅಚಲವಾಗಿ ಇವರು ನಂಬುತ್ತಾರೆ. ಆಧುನಿಕ ಆಸ್ಪತ್ರೆಗಳ ಸಂಪರ್ಕ ಇಲ್ಲದ ಸಂದರ್ಭದಲ್ಲಿ ಮಾಂತ್ರಿಕ ವಿಧ್ಯೆಯ ಸಹಾಯದಿಂದಲೇ ತಮಗೆ ಉಂಟಾದ ಕಾಯಿಲೆ ಕಸಾಯಗಳನ್ನು ವಾಸಿ ಮಾಡಿಕೊಳ್ಳುತ್ತಿದ್ದರು.

ಆಧುನಿಕ ಕಾಲದಲ್ಲಿಯೂ ಇವರಲ್ಲಿ ಈ ಆಚರಣೆ ಅಲ್ಪ ಪ್ರಮಾಣದಲ್ಲಿ ಉಳಿದುಕೊಂಡಿರುವುದನ್ನು ಕಾಣಬಹುದಾಗಿದೆ.

### ೬. ೨೪. ಸಮಸ್ಯೆಗಳು

'ಜೇನುಕುರುಬ ಮಹಿಳೆಯರ ಪಾರಂಪರಿಕ ಜ್ಞಾನಾಧ್ಯಯನ' ಎಂಬ ಶೀರ್ಷಿಕೆಯಡಿಯಲ್ಲಿ ಜೇನುಕುರುಬರ ಅಧ್ಯಯನವನ್ನು ಕೈಗೊಂಡ ಹಿನ್ನೆಲೆಯಲ್ಲಿ ಇಡೀ ಸಮುದಾಯ ಮಹಿಳೆಯರು, ಮಕ್ಕಳು. ಒಟ್ಟಾರೆ ಸಮುದಾಯವೇ ಅನೇಕ ಸಮಸ್ಯೆಗಳನ್ನು ಪ್ರತಿನಿತ್ಯವೂ ಎದುರಿಸುತ್ತಾ ಅತಂತ್ರ ಸ್ಥಿತಿಯಲ್ಲಿ ಬದುಕನ್ನೂ ನೂಕುತ್ತಿದೆ. ಏಕೆಂದರೆ ಇಂದು ಇವರಿಗೆ ಕಾಡುತ್ತಿರುವ ಸಮಸ್ಯೆಗಳಲ್ಲಿ ಸಮಾಜದ ಎಲ್ಲಾ ಕಠಿಣವಾದ ನೀತಿಗಳು ಇವರಿಗೆ ನೇರವಾಗಿಯೋ, ಪರೋಕ್ಷವಾಗಿಯೋ ಒಂದಲ್ಲಾ ಒಂದು ವಿಧದಲ್ಲಿ ತೊಂದರೆಯನ್ನು ಅನುಭವಿಸಲು ಕಾರಣಗಳಾಗಿವೆ.

ಹಿಂದೆ ಕಾನೂನು ಕಟ್ಟಳೆಗಳ ಪ್ರಭಾವವು ಇಲ್ಲದೇ ಇದ್ದ ಕಾಲದಲ್ಲಿ ಇದ್ದಂತಹ ಮುಕ್ತ ವಾತಾವರಣ ಇಂದು ಇವರಿಗೆ ಇಲ್ಲದಾಗಿದೆ. ಇಂದಿನ ಕಾನೂನು ಸರ್ಕಾರದ ನಿಯಮಗಳು, ಸಾಮಾಜಿಕ ನಿಯಮಗಳು ಇವರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಲೆ ಇರುತ್ತವೆ. ಈ ಸಮಸ್ಯೆಗಳು ಇವರಿಗೆ ದಿನನಿತ್ಯದ ಮಂತ್ರಗಳಿದ್ದಂತೆ, ಇದರಿಂದ ಜೀವನ ಸಾಗಿಸಲು ಪ್ರತಿದಿನವೂ ಹೋರಾಟವಿದ್ದೇ ಇದೆ. ಜೊತೆಗೆ ಮಾನಸಿಕ ತೊಳಲಾಟ ಹೊರಗಿನ ಒತ್ತಡಗಳಿಗೆ ಮಣಿಯಲೇ ಬೇಕಾದ ಅಸಹಾಯಕವಾದ ಸ್ಥಿತಿಯು ಬಂದೆರಗಿದೆ. ಇಂತಹ ಅನೇಕ ಸಮಸ್ಯೆಗಳು ಈ ರೀತಿಯಾಗಿವೆ.

**ಅರಣ್ಯಾಧಾರಿತ ಸಮಸ್ಯೆಗಳು**

- ಜೇನುಕುರುಬರಿಗೂ ಅರಣ್ಯಕ್ಕೂ ಬಿಡಿಸಲಾರದ ನಂಟು. ತಿನ್ನುವ ಆಹಾರ, ಪೂಜಿಸುವ ದೇವರು, ಕುಡಿಯುವ ನೀರು, ನಡೆದಾಡುವ ಕಾಡು ಎಲ್ಲವೂ ಅವರಿಗೆ ಪೂಜಿಸಲ್ಪಡುವಂತಹವುಗಳೇ. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಅರಣ್ಯದ ಮುಖವೇ ಇಲ್ಲದಂತಾಗಿದೆ. ಅರಣ್ಯ ಮೂಲದ ವಸ್ತುಗಳಿಗೆ ಬದಲಾಗಿ ಆಧುನಿಕ ಮಾರುಕಟ್ಟೆಯ ವಸ್ತುಗಳನ್ನು ಅನಿವಾರ್ಯವಾಗಿ ಬಳಸುವಂತಾಗಿದೆ.
- ವಾಸದ ನೆಲೆ, ಧಾರ್ಮಿಕ ನೆಲೆ, ಆಹಾರದ ನೆಲೆ, ಪಾರಂಪರಿಕ ಬದುಕಿನ ನೆಲೆ ಕಳೆದುಕೊಂಡು ಪಾರಂಪರಿಕ ನೈಜ ಸತ್ಯ ಇಲ್ಲದಂತಾಗಿದೆ.
- ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ ೨೦೦೬ (೨೦೦೭ ರ ೨) ಮತ್ತು ನಿಯಮಗಳು, ೨೦೦೮ (ನಿಯಮಗಳ ತಿದ್ದುಪಡಿ ೨೦೧೨ ರ ಕಾಯಿದೆಯು ಜೇನುಕುರುಬರನ್ನು ಒಳಗೊಂಡು ಇತರೆ ಎಲ್ಲಾ ಬುಡಕಟ್ಟುಗಳ ಮೂಲ ಪಾರಂಪರಿಕ ನೆಲೆಗಳನ್ನು ಉಳಿಸಿಕೊಳ್ಳಲು ಸಹಕಾರಿಯಾಗಿರುವ ಈ ಕಾಯಿದೆಯ ಅಡಿಯಲ್ಲಿ ಅರಣ್ಯವಾಸಿಗಳಿಗೆ ಪಾರಂಪರಿಕ ನೆಲೆಗಳನ್ನು ಉಳಿಸಿಕೊಳ್ಳುವುದರೊಂದಿಗೆ ಆಧುನಿಕ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದರೂ ಈ ಕಾಯಿದೆಯ ಸಮರ್ಪಕ ಅನುಷ್ಠಾನವಾಗದೇ ಇರುವುದರಿಂದ ಅರಣ್ಯ ಮತ್ತು ಜೇನುಕುರುಬರ ಅಂತರ ಹೆಚ್ಚುತ್ತಿದೆ.
- ಅರಣ್ಯದಿಂದ ಒಕ್ಕಲೆಬ್ಬಿಸುವ ಸಲುವಾಗಿ ಅನೇಕ ಆಮಿಷಗಳನ್ನು ಒಳಗೊಂಡಿರುವ ಪ್ಯಾಕೇಜ್‌ಗಳನ್ನು ಘೋಷಿಸಿ ಜೇನುಕುರುಬರನ್ನು ಅರಣ್ಯದಿಂದ ಹೊರದಬ್ಬಲಾಗುತ್ತದೆ. ಇದರಿಂದ ತಮ್ಮ ಮೂಲ ನೆಲೆಗಳಿಗೆ ಇವರೇ ಪರಕೀಯರಾಗುವಂತಾಗಿದೆ.

**ದಾಖಲೆ ಪತ್ರಗಳ ಕೊರತೆಯ ಸಮಸ್ಯೆ**

- ಜೇನುಕುರುಬರು ಅರಣ್ಯದೊಳಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೆಲೆಗಳನ್ನು ಬದಲಾಯಿಸುತ್ತಿರುತ್ತಾರೆ. ಅರಣ್ಯದ ಕಾಡ್ಗಿಚ್ಚು ಆಹಾರನ್ವೇಷಣೆ ದೈವಶಕ್ತಿಗಳ ಕೋಪದಿಂದ ಮೇಲಿಂದ ಮೇಲೆ ತೊಂದರೆ ಆಗುತ್ತಿದೆ ಎಂಬ ಭಾವನೆಗಳು, ಈ ಆಂತರಿಕ ವಲಸೆಗೆ ಕಾರಣಗಳಾಗಿರುತ್ತವೆ. ಇಂತಹ ವಲಸೆಯಿಂದ ಸ್ಪಷ್ಟವಾಗಿ ಇವರ ಜನಸಂಖ್ಯೆಯ ಮಾಹಿತಿಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಇವರು ಯಾವ ಲೆಕ್ಕಕ್ಕೂ ಸಿಗುವುದಿಲ್ಲ. ಸರ್ಕಾರವು ಸ್ಪಷ್ಟ ಮಾಹಿತಿ ಪಡೆದು ಇವರ ಕುಂದು ಕೊರತೆ ಆಲಿಸಿ ಅದಕ್ಕೆ ಸೂಕ್ತ ಪರಿಹಾರ ಒದಗಿಸಲು ಇದು ತೊಂದರೆಯಾಗುತ್ತಿದೆ.
- ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಂತೆ ಲೈನ್ ಮನೆಗಳಲ್ಲಿ ವಾಸಿಸುವ ಜೇನುಕುರುಬರನ್ನು ಅಲ್ಲಿಯ ಎಸ್ಟೇಟ್ ಮಾಲೀಕರ ಅಪ್ಪಣೆ ಇಲ್ಲದೆ ಭೇಟಿಯಾಗುವಂತಿಲ್ಲ. ಇದರಿಂದ ಇವರೂ ಸಹ ಮೂಲಭೂತ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ.
- ಸರ್ಕಾರ ನೀಡುವ ಮೂಲಭೂತ ದಾಖಲೆಗಳ ಅನಿವಾರ್ಯತೆ ಇಂದು ಸೃಷ್ಟಿಯಾಗಿದ್ದು, ರೇಷನ್ ಕಾರ್ಡ್, ಆಧಾರ ಕಾರ್ಡ್‌ಗಳನ್ನು ಪಡೆಯುವಲ್ಲಿಯೂ ವಂಚಿತರಾಗುತ್ತಿದ್ದಾರೆ.
- ದಾಖಲೀಕರಣ ಸಮಯದಲ್ಲಿ ನಡೆಯುವ ಅಕ್ಷರಗಳ ದೋಷಗಳೂ ಕೂಡ ಮೂಲಭೂತ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡುತ್ತವೆ.
- ಒಂದೊಂದು ಕಡೆ ಒಂದೊಂದು ಹೆಸರು ದಾಖಲಾಗಿರುತ್ತದೆ. ಇದರಿಂದ ಯಾವ ಸೌಲಭ್ಯವೂ ದೊರೆಯುವುದಿಲ್ಲ.
- ಪಾರಂಪರಿಕ ಮೂಲದಲ್ಲಿ ಎಲ್ಲಿಯೂ ಕಾಗದ ಪತ್ರಗಳ ಬಗೆಗೆ ದಾಖಲಾತಿ ವ್ಯವಸ್ಥೆ ಇವರ ಪರಂಪರೆಯಲ್ಲಿಯೇ ಇಲ್ಲ. ಇಂದಿನ ಕಾಗದ ಪತ್ರಗಳ ಅನಿವಾರ್ಯತೆಯ ಮಾಹಿತಿ ಇನ್ನು ಇವರಿಗೆ ಸ್ಪಷ್ಟವಾಗುತ್ತಿಲ್ಲ.
- ಜೇನುಕುರುಬರ ಮುಗ್ಧ ಮನೋಭಾವನೆ ಪಾರಂಪರಿಕ ಗುಂಗಿನಲ್ಲಿಯೇ ಇದ್ದು, ಆಧುನಿಕ ಜ್ಞಾನದ ಒಲವಿನ ಅನಾಸಕ್ತಿ ಕೂಡ ದಾಖಲೆ ಪತ್ರಗಳ ಮಹತ್ವದ ಕೊರತೆಯನ್ನು ಹೆಚ್ಚಿಸುತ್ತದೆ.

**ಪುನರ್ವಸತೀಕರಣದಿಂದಾದ ಸಮಸ್ಯೆಗಳು**

ಅರಣ್ಯಗಳಲ್ಲಿ ವಾಸಿಸುವ ಜೇನುಕುರುಬರನ್ನು ಬೇರೆ ಬೇರೆ ವಿಧದ ಆಮಿಷಗಳನ್ನು ತೋರಿಸಿ ಅರಣ್ಯಗಳಿಂದ ಹೊರಭಾಗಕ್ಕೆ ಪುನರ್ವಸತೀಕರಣಗೊಳಿಸುತ್ತಿರುವುದರಿಂದ ಸಾಕಷ್ಟು ಸಮಸ್ಯೆಗಳನ್ನು ಜೇನುಕುರುಬರು ಎದುರಿಸುವಂತಾಗಿದೆ.

- ಪುನರ್ವಸತೀಕರಣದಿಂದಾಗಿ ಇವರ ಅಜ್ಜಯ್ಯನ ನೆಲೆ ಇವರಿಂದ ದೂರವಾಗಿದೆ
- ವಾಸದ ಸರಹದ್ದುಗಳನ್ನು ಕಳೆದುಕೊಂಡು ಅದರಾಚೆಗೆ ಜೀವಿಸುವಂತಾಗಿದೆ
- ಪಾರಂಪಾರಿಕ ಆಹಾರವಾದ ಗೆಡ್ಡೆ ಗೆಣಸು, ಸೊಪ್ಪು ಅಣಬೆ ಔಷಧಿಯ ನಾರು ಬೇರು ಇವರಿಗೆ ಸಿಗುತ್ತಿಲ್ಲ
- ಪ್ರಾಣಿ–ಪಕ್ಷಿಗಳ ಗಿಡಮರಗಳ ಒಡನಾಟವೂ ಇಲ್ಲವಾಗಿದೆ
- ಮೂಲ ಭಾಷೆಯು ಅವನತಿಗೆ ಬಂದಿದೆ
- ಬಲವಂತವಾಗಿ ಇತರೆ ಸಮುದಾಯಗಳ ಸಂಸ್ಕೃತಾನುಕರಣ (Sanskritization ) ಕ್ಕೆ ಒಳಗಾಗುತ್ತಿದ್ದಾರೆ
- ಮೂಲ ವೃತ್ತಿಗಳನ್ನು ಬಿಟ್ಟು ಜೀವನೋಪಾಯಕ್ಕೆ ಪರಕೀಯರ ಬಳಿ ಕೂಲಿ ಮಾಡುವಂತಾಗಿದೆ
- ಪಾರಂಪರಿಕ ಹಾಡಿ, ಗುಡಿಸಲಿನ ಸಂರಚನೆ (Structure) ಯ ಪರಿಕಲ್ಪನೆ ಮಾಯವಾಗುತ್ತಿದೆ
- ಕಾಂಕ್ರೀಟ್ ಬದುಕಿಗೆ ಒಗ್ಗಿಕೊಳ್ಳುವಂತಾಗಿದೆ
- ಹೊರ ಜಗತ್ತಿನ ಜನರೊಂದಿಗೆ ಬೆರೆಯಲಾಗದೆ ಮೂಲ ಸಂಸ್ಕೃತಿ ಅನುಸರಿಸಲಾಗದೆ ಮನದಾಳದಲ್ಲಿ ತಿಕ್ಕಾಟ ನಡೆದು ಗೊಂದಲದಲ್ಲಿ ಸಿಲುಕಿದ್ದಾರೆ
- ಪಾರಂಪರಿಕ ಶಿಕ್ಷಣಕ್ಕೆ ಅವಕಾಶವಿಲ್ಲ. ಪರಿಸರ ಪೂಜಿಸುವ ಇವರು ಮೂಲ ದೈವದ ಪರಿಕಲ್ಪನೆಗೆ ಬದಲಾಗಿ ಇತರೆ ಸಮುದಾಯದವರು ಪೂಜಿಸುವ ದೇವರುಗಳನ್ನು ಆರಾಧಿಸುವ ಅನಿವಾರ್ಯತೆ ಒದಗಿದೆ
- ಪಾರಂಪರಿಕ ಬದುಕಿನಲ್ಲಿ ವಸತಿನೆಲೆಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳುತ್ತಿದ್ದರು. ಅಂತಹ ಸರ್ವ ಸ್ವತಂತ್ರವನ್ನು ಪ್ರಕೃತಿ ದತ್ತವಾಗಿಯೇ ಪಡೆದಿದ್ದರು. ಬದಲಾದ ಪರಿಸ್ಥಿತಿಯಲ್ಲಿ ಒತ್ತಾಯ ಪೂರ್ವಕ ನೆಲೆಯಲ್ಲಿ ಸೀಮಿತ ಸ್ಥಳದಲ್ಲಿ ಬದುಕುವಂತಾಗಿದೆ
- ಜೇನುಕುರುಬರ ಸ್ವಚ್ಛಂದ ಬದುಕಿನ ಕಲ್ಪನೆ ಮರೆಯಾಗುತ್ತಿದೆ
- ಅನಿವಾರ್ಯವಾಗಿ ಹೈಬ್ರೀಡ್ ಆಹಾರದ ಸೇವನೆಯಿಂದ ಆರೋಗ್ಯದ ಮೇಲೆ ಹೆಚ್ಚು ಪರಿಣಾಮ ಬೀರಿ ಅನಾರೋಗ್ಯದ ಸಮಸ್ಯೆಯಿಂದ ಬಹಳಷ್ಟು ಜನ ಬಳಲುತ್ತಿದ್ದಾರೆ
- ಪಾರಂಪರಿಕ ವೈದ್ಯ ಪದ್ಧತಿ ಅತಿ ವಿರಳವಾಗಿದೆ

- ಪಾರಂಪರಿಕ ಉಡುಗೆ-ತೊಡುಗೆ ಕಣ್ಮರೆಯಾಗುತ್ತಿದೆ
- ಹಣದ ವಹಿವಾಟು ಇರುವುದರಿಂದ ಇಲ್ಲದ ಚಟಗಳಿಗೆ ದಾಸರಾಗುತ್ತಿದ್ದಾರೆ. ವಸ್ತು ವಿನಿಮಯ ವ್ಯವಸ್ಥೆ (Barter System) ಹಂಚಿ ತಿನ್ನುವ (Sharing System) ಅಭ್ಯಾಸ ಮರೆಯಾಗುತ್ತಿದೆ
- ಏಕನಾಯಕತ್ವ ಪದ್ಧತಿ ಅಳಿವಿನಂಚಿನಲ್ಲಿದೆ
- ಬಾಹ್ಯ ಸಂಪರ್ಕದಿಂದ ಮೂಲ ಪಾರಂಪರಿಕ ಬದುಕು ತನ್ನ ಮೌಲ್ಯ ಕಳೆದುಕೊಳ್ಳುತ್ತಿದೆ

ಒಟ್ಟಾರೆಯಾಗಿ ಹೇಳುವುದಾದರೆ ಪಾರಂಪರಿಕ ಜ್ಞಾನವು ಅಳಿದುಳಿದು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಉಳಿದುಕೊಂಡು ಬರಲು ಮಹಿಳೆಯರು ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಇಂದಿಗೂ ಪಾರಂಪರಿಕ ಬದುಕನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವಲ್ಲಿ ಮಹಿಳೆಯರು ಅಗ್ರ ಸ್ಥಾನವನ್ನು ಹೊಂದಿದ್ದಾರೆ. ಬಿಟ್ಟೂ ಬಿಡದೆ ಕಾಡುತ್ತಿರುವ ಆಧುನಿಕ ಅರಣ್ಯ ನೀತಿಗಳು, ಪರಂಪರಾಗತವಾಗಿ ಬದುಕಿ ಬಂದ ಇವರ ಕಾಡಿನ ಭದ್ರ ಬುನಾದಿಗಳನ್ನು ಕಿತ್ತುಕೊಂಡಿವೆ. ಸಂಪೂರ್ಣ ಪಾರಂಪರಿಕ ಜ್ಞಾನ ಅದರಲ್ಲೂ ಮಹಿಳಾ ಜ್ಞಾನವು ನಶಿಸಿ ಹೋಗಲು ಆಳುವ ಸರ್ಕಾರಗಳು ಮತ್ತು ನಾಗರೀಕರೆಂದು ಕರೆದುಕೊಳ್ಳುವ ಸಮಾಜ ಕಾರಣವಾಗಿದೆ.

ಪರಂಪರೆಯನ್ನೇ ಕಾಡು ಮತ್ತು ಕಾಡು ಪ್ರಾಣಿಗಳೊಂದಿಗೆ ಕಳೆದಿರುವ ಜೇನುಕುರುಬರಿಗೆ ಅವುಗಳು ತಮ್ಮ ಬದುಕಿನ ಅವಿಭಾಜ್ಯ ಅಂಗಗಳಾಗಿದ್ದವು. ಸದಾ ಅವುಗಳ ಒಡನಾಟದಲ್ಲಿದ್ದರೂ ತಮ್ಮ ಉಳಿವನ್ನು ಕಾಡಿನಲ್ಲಿಯೇ ಕಾಯ್ದುಕೊಂಡಿದ್ದರು.

ಒಂದು ಕಾಡು ಪ್ರಾಣಿ ನಾಡಿಗೆ ನುಗ್ಗಿದರೆ ಅಲ್ಲೋಲ ಕಲ್ಲೋಲವೇ ಸೃಷ್ಟಿಯಾಗಿ ಬಿಡುತ್ತದೆ. ಅಂಥದ್ದರಲ್ಲಿ ತಮ್ಮ ಜೀವನವನ್ನೇ ಕಾಡು ಪ್ರಾಣಿ ಪಕ್ಷಿಗಳೊಂದಿಗೆ ಹಂಚಿಕೊಂಡು ಬದುಕುತ್ತಿರುವ ವಿಶೇಷವಾಗಿ ಜೇನುಕುರುಬರ ಮಹಿಳೆಯರು ತಮ್ಮ ಪಾರಂಪರಿಕ ಜ್ಞಾನದಿಂದ ಶ್ಲಾಘನೀಯರೆನಿಸಿದ್ದಾರೆ.

**ಮಾಹಿತಿದಾರರು**

ಅಣ್ಣಯ್ಯ, ಆನೆಮಾವುತ, ಮತ್ತಿಗೋಡು ಆನೆಕ್ಯಾಂಪ್, ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ.

ಕುಮಾರ್ ಎಂ ಟ , ಮರಳುಕಟ್ಟೆ ಹಾಡಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ಭೋಜಮ್ಮ, ಮರಳು ಕಟ್ಟೆ ಎ ಹಾಡಿ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.

ಲಕ್ಷ್ಮಿ ಜೆ ಎಸ್, ಬೊಮ್ಮಾಡು ಸಂಪಿಗೆ ಕೊಲ್ಲಿ, ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ.

ಸಾವಿತ್ರಿ, ಕೊಳಂಗೇರಿ ಹಾಡಿ, ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ.

ಅಧ್ಯಾಯ ಏಳು..........

# ಉಪಸಂಹಾರ

# ಅಧ್ಯಾಯ ಏಳು

# ಉಪಸಂಹಾರ

೭. ೧. ಅಧ್ಯಯನದ ಫಲಿತಗಳು

೭. ೨. ಸಲಹೆಗಳು

೭. ೩. ಅಧ್ಯಯನದ ಮುಂದಿನ ಸಾಧ್ಯತೆಗಳು

# ಅಧ್ಯಾಯ ಏಳು

# ಉಪಸಂಹಾರ

ಸಮುದಾಯಗಳ ಅಧ್ಯಯನವೆಂಬುದು ಕೇವಲ ಮಾನವಶಾಸ್ತ್ರಜ್ಞರ ಸ್ವತ್ತೆಂದು ಭಾವಿಸಲಾಗುತ್ತಿದ್ದ ಕಾಲವೊಂದಿತ್ತು. ಇಂದು ಅಧ್ಯಯನಗಳ ಸ್ವರೂಪ ಭಿನ್ನವಾಗುತ್ತಿದೆ. ಮಾನವ ಶಾಸ್ತ್ರಜ್ಞರಿಗಿಂತ ಭಿನ್ನವಾಗಿ ಮಾನವ ಸಮಾಜವನ್ನು ಅಧ್ಯಯನಕ್ಕೆ ಒಳಪಡಿಸುತ್ತಿದೆ. ಈ ನಿಟ್ಟಿನಲ್ಲಿ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ಪ್ರಸ್ತುತ ಸಾಕಷ್ಟು ಅಧ್ಯಯನಗಳು ಜರುಗುತ್ತಿವೆ.

ಜೇನುಕುರುಬ ಬುಡಕಟ್ಟಿನ ಕುರಿತು ಹತ್ತು ಹಲವು ಲೇಖನಗಳು, ಅಧ್ಯಯನಗಳು ಬಂದಿವೆಯಾದರೂ ಅಮೂಲಾಗ್ರವಾಗಿ ಮಹಿಳಾ ದೃಷ್ಟಿಕೋನದಲ್ಲಿ ಅಷ್ಟಾಗಿ ಜೇನುಕುರುಬರ ಕುರಿತು ಅಧ್ಯಯನಗಳು ನಡೆಯದಿರುವುದು ಕಂಡು ಬರುತ್ತಿದೆ. ಈ ನಿಟ್ಟಿನಲ್ಲಿ ಈ ಅಧ್ಯಯನವು ಮಹತ್ವದ್ದೆಂದು ಭಾವಿಸಲಾಗಿದೆ.

ಜೇನುಕುರುಬರು ಈ ನಾಡಿನ ಮೂಲಿಗರು ಎಂದು ಹೇಳಲಾಗುತ್ತದೆ. ಹೀಗಾಗಿಯೇ ಜೇನುಕುರುಬರನ್ನು ಆದಿಮ ಬುಡಕಟ್ಟೆಂದು ಗುರುತಿಸಲಾಗುತ್ತಿದೆ.

ಕರ್ನಾಟಕದ ನಾನಾ ಭಾಗಗಳಲ್ಲಿ ಇವರು ನೆಲೆಸಿರುವುದಾಗಿ ಜನಗಣತಿ ವರದಿ ಹೇಳುವುದಾದರೂ ಇವರ ಮೂಲ ನೆಲೆ ಮೈಸೂರು, ಕೊಡಗು, ಚಾಮರಾಜನಗರದ ನಿತ್ಯ ಹರಿದ್ವರ್ಣ ಕಾಡುಗಳಾಗಿವೆ. ಜೇನು ಬೇಟೆಯನ್ನೇ ಮುಖ್ಯ ಕಸುಬಾಗಿಸಿಕೊಂಡಿರುವ ಜೇನುಕುರುಬರ ಜೀವನ ವಿಧಾನ ಇತರ ಬುಡಕಟ್ಟುಗಳಿಗಿಂತ ಭಿನ್ನವಾಗಿದೆ. ಇಂದು ಅರಣ್ಯಕಾಯ್ದೆ, ಅಭಯಾರಣ್ಯಗಳ ನೆಪವನ್ನು ಹೇಳುತ್ತ ಜೇನುಕುರುಬರನ್ನು ಕಾಡಿನಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಕಾಡನ್ನು ಪ್ರೀತಿಸುವ ಕಾಡಿನ ಪ್ರಾಣಿಗಳೊಂದಿಗೆ ಸಹಜೀವನ ಮಾಡುವ ಜೇನುಕುರುಬರು ಸರ್ವಚೇತನವಾದಿಗಳು. ಇವರು ಮೂಲತಃ ಬೆಟ್ಟಗುಡ್ಡಗಳು, ಕಾಡನ್ನೇ ಅವಲಂಬಿಸಿ ಜೀವನ ನಿರ್ವಹಣೆ ಮಾಡುವಂಥವರು. ಇವರ ಹಿರಿಯರೇ ಇವರ ದೈವಗಳು, ಆ ದೈವಗಳೊಂದಿಗೆ ಜೇನುಕುರುಬರು ಬುರುಡೆ ಕರೆಯುವ ಮೂಲಕ ಮಾತನಾಡಬಲ್ಲೆವೆಂಬ ಅಚಲವಾದ ನಂಬಿಕೆಯನ್ನು ಹೊಂದಿದ್ದಾರೆ.

ಕರ್ನಾಟಕದಲ್ಲಿ ಕೊರಗ ಬುಡಕಟ್ಟಿನ ಜೊತೆಗೆ ಆದಿಮ ಬುಡಕಟ್ಟುಗಳಲ್ಲಿ ಒಂದೆಂದು ಗುರುತಿಸಲಾಗಿರುವ ಜೇನುಕುರುಬರು ವಿಶಿಷ್ಟವಾದ ಸಂಸ್ಕೃತಿ, ಜೀವನ ಶೈಲಿಯನ್ನು ಹೊಂದಿದವರು. ಜೇನುಕುರುಬರನ್ನು ಮಹಿಳಾ ದೃಷ್ಟಿಕೋನದಲ್ಲಿ ಮಹಿಳೆಯರನ್ನೇ ಅನುಲಕ್ಷಿಸಿ ಈ ಅಧ್ಯಯನವನ್ನು ಮಾಡಲಾಗಿದೆ. ಈ ಅಧ್ಯಯನದಲ್ಲಿ ಜೇನುಕುರುಬರ ಮುಖ್ಯವಾಗಿ ಮಹಿಳೆಯರ ಪಾರಂಪರಿಕ

ಜ್ಞಾನವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಾಗಿದೆ.

ಅಧ್ಯಾಯ ಒಂದರಲ್ಲಿ ಜೇನುಕುರುಬ ಸಮುದಾಯವನ್ನು ಕುರಿತು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು, ಸಮುದಾಯವನ್ನು ಕುರಿತು ಮಾನವ ಶಾಸ್ತ್ರಜ್ಞರುಗಳ ವಿಶ್ಲೇಷಣೆ, ಸಮಾಜ ಶಾಸ್ತ್ರಜ್ಞರುಗಳ ಅವಲೋಕನವನ್ನು ಕುರಿತು ತಿಳಿಸಲಾಗಿದೆ. ಈ ಸಮುದಾಯವನ್ನು ಕುರಿತ ಅಧ್ಯಯನದಲ್ಲಿ ಮಹಿಳಾ ಅಧ್ಯಯನದ ಚಿಂತನೆಯನ್ನು ಓರೆಗೆ ಹಚ್ಚಲಾಗಿದೆ. ಅಧ್ಯಯನವು ಹೊಂದಿರುವಂತಹ ಉದ್ದೇಶಗಳನ್ನು ತಿಳಿಸಲಾಗಿದೆ. ಅಧ್ಯಯನದ ಪ್ರಮೇಯ (Hypothesis) ವನ್ನು ಸಂಪೂರ್ಣವಾಗಿ ಸಮುದಾಯದ ವಕ್ತೃಗಳೊಂದಿಗೆ ಚರ್ಚಿಸಿ, ವಿಶ್ಲೇಷಿಸಿ ಅದರ ಫಲಿತಾಂಶವನ್ನು ತಿಳಿಸಲಾಗಿದೆ. ಸಮುದಾಯದ ಅಧ್ಯಯನದ ವ್ಯಾಪ್ತಿಯನ್ನು ನಮೂದಿಸಿ, ಈ ವ್ಯಾಪ್ತಿಯೊಳಗಿನ ಜೇನುಕುರುಬರ ಜೀವನ, ಮಹಿಳಾ ಪಾರಂಪರಿಕ ಜ್ಞಾನದ ಎಲ್ಲಾ ಆಯಾಮಗಳನ್ನು ಚರ್ಚೆಗೆ ಒಳಪಡಿಸಿ ವಿವರಿಸಲಾಗಿದೆ. ಈ ರೀತಿ ಮಹಿಳಾ ಅಧ್ಯಯನದ ಮಹತ್ವದ ಅವಶ್ಯಕತೆ ಕುರಿತು ತಿಳಿಸಲಾಗಿದೆ.

ಅಧ್ಯಯನವನ್ನು ಕೈಗೊಳ್ಳುವಲ್ಲಿ ಕೈಗೊಂಡ ಸಮೀಕ್ಷೆ, ಇಲ್ಲಿಯವರೆಗೂ ಸಮುದಾಯದ ಕುರಿತು ಪ್ರಕಟವಾದ ಪುಸ್ತಕಗಳು, ಕೃತಿಗಳು, ಲೇಖನಗಳನ್ನು ಓದಿ ಈ ಅಧ್ಯಯನಕ್ಕೆ ಬೇಕಾದ ಪೂರಕ ಮಾಹಿತಿಯನ್ನು ಬಳಸಲಾಗಿವೆ.

ಮೊದಲನೇ ಅಧ್ಯಾಯವು ಜೇನುಕುರುಬರ ಅಧ್ಯಯನವನ್ನು ಕೈಗೊಳ್ಳುವ ಸಂಶೋಧಕರಿಗೆ ತಳಹದಿಯಾದ ಹಾಗೂ ಮಾರ್ಗದರ್ಶಿಯಾದ ಎಲ್ಲಾ ಅಂಶಗಳನ್ನು ಒಳಗೊಂಡು ಅವರ ಅಧ್ಯಯನಕ್ಕೆ ಪೂರಕವಾಗಿದೆ.

ಅಧ್ಯಾಯ ಎರಡರಲ್ಲಿ ಜೇನುಕುರುಬರ ಇತಿಹಾಸವನ್ನು ಕುರಿತು ಸೂಕ್ಷ್ಮವಾಗಿ ವಿಶ್ಲೇಷಿಸಲಾಗಿದೆ. ಇವರ ಮೂಲ ಮಾಹಿತಿ, ಸೃಷ್ಟಿ ಪುರಾಣಗಳು, ಜೇನುಕುರುಬ ಸಮುದಾಯ ಉಗಮವಾದ ಬಗೆಗೆ ಅವರ ಹಿರಿಯ ವ್ಯಕ್ತಿಗಳಲ್ಲಿರುವ ದಂತ ಕಥೆಗಳು, ಇತಿಹಾಸದ ಕುರಿತು ಮಾಹಿತಿಗಳು, ಅವರ ದೇಹದ ರಚನೆ, ಭೌಗೋಳಿಕವಾಗಿ ಅವರು ವಾಸಿಸುವ ನೆಲೆಗಳನ್ನು ಕುರಿತು ತಿಳಿಸಲಾಗಿದೆ. ಈ ಸಮುದಾಯದ ಜನರು ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ವಾಸಿಸುವ ಅಂಶವನ್ನು ಸೂಕ್ಷ್ಮವಾಗಿ ತಿಳಿಸುವ ಮುಖಾಂತರ, ಕರ್ನಾಟಕದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿನ ವ್ಯಾಪ್ತಿಯಲ್ಲಿ ಬರುವ ಈ ಸಮುದಾಯವನ್ನು ಅವುಗಳ ಭೌಗೋಳಿಕ ನೆಲೆಯಲ್ಲಿ ಅವರು ವಾಸಿಸುವ ಕಾಡಿನ ಪರಿಚಯ, ಹಾಡಿಗಳ ರಚನೆ, ಗುಡಿಸಲಿನ ಮಾದರಿ, ಜನಸಂಖ್ಯೆಯ ವಿವರ, ಒಟ್ಟು ಜನಸಂಖ್ಯೆ ಪುರುಷರು, ಮಹಿಳೆಯರು, ಮಕ್ಕಳು, ವೃದ್ಧರುಗಳ ಅಂಕಿ ಅಂಶಗಳನ್ನು ಸಮೀಕ್ಷೆಯ ಮೂಲಕ ತಿಳಿಸಲಾಗಿದೆ.

ಈ ಅಧ್ಯಾಯವು ಕರ್ನಾಟಕದಲ್ಲಿ ಜೇನುಕುರುಬರು ಹೊಂದಿರುವ ಮೂಲ ನೆಲೆಗಳ ಮಾಹಿತಿಯ ಜೊತೆಗೆ ಸಂಖ್ಯಾತ್ಮಕವಾಗಿ ಸಮುದಾಯದ ವಿವರವನ್ನು ತಿಳಿಸುತ್ತದೆ. ವಿಶೇಷವಾಗಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನಲ್ಲಿ ಹಾಡಿಗಳ ಜೊತೆಗೆ ಪೈಸಾರಿ ಮನೆಗಳು, ಲೈನ್ ಮನೆಗಳಲ್ಲಿ ವಾಸಿಸುವ ಜೇನುಕುರುಬರ ಮಾಹಿತಿಯನ್ನು ಒಳಗೊಂಡಿದೆ.

ಸಮೀಕ್ಷೆಗೆ ಒಳಪಟ್ಟ ಜೇನುಕುರುಬರ ನೆಲೆಗಳನ್ನು ತಾಲೂಕುವಾರು, ಜಿಲ್ಲಾವಾರು ಮಾಹಿತಿಯನ್ನು ಅಗತ್ಯವಿರುವ ಕಡೆ ಭೂಪಟಗಳು, ಕೋಷ್ಟಕ ಪಟ್ಟಿಗಳ ಮೂಲಕ ಮಾಹಿತಿಯನ್ನು ತಿಳಿಸಲಾಗಿದೆ.

ಮಹಾ ಪ್ರಬಂಧದ ಮೂರನೇ ಅಧ್ಯಾಯವು ಜೇನುಕುರುಬರ ಪಾರಂಪರಿಕ ಸಾಮಾಜಿಕ ಜೀವನವಾಗಿದ್ದು, ಬಹಳ ಹಿಂದೆ ಇವರ ಕುಟುಂಬ ವ್ಯವಸ್ಥೆ ಇದ್ದ ವಿಧಾನ, ಇವರಲ್ಲಿನ ಕುಲ/ಬೆಡಗು/ಬಳಿಗಳು ಅವುಗಳ ಮಧ್ಯೆ ಇದ್ದ ನಿಷೇಧಗಳು (Taboos) ಸಾಮಾಜಿಕ ಜೀವನದ ಏಣಿ ಶ್ರೇಣಿ (Hyrorcey) ಮುಂತಾದವುಗಳನ್ನು ತಿಳಿಸಲಾಗಿದೆ.

ನೆರಳು ಕರೆಯುವ ಗುಡ್ಡರು ಸತ್ತ ವ್ಯಕ್ತಿಯ ಆತ್ಮವನ್ನು ಆಹ್ವಾನಕ್ಕೆ ಒಳಪಡಿಸುವ ವಿಧಾನ, ಮಾಟವನ್ನು ಹೊರ ತೆಗೆಯುವ, ಜೇಟಿ ಹೊಡೆಯುವ ಗುಡ್ಡರ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ವಿವಾಹದ ವಿಧಾನ, ಅಂತರ್ ಸಮುದಾಯಗಳ ನಡುವೆ ನಡೆಯುವ ವಿವಾಹ, ವಿಧವಾ ವಿವಾಹ, ಮಗು ಹುಟ್ಟಿದಾಗ ಆಚರಿಸುವ ಆಚರಣೆಗಳು, ಸೂತಕದ ಆಚರಣೆ, ಸಾವಿನ ನಂತರ ನಡೆಯುವ ಸಂಪ್ರದಾಯಗಳು, ವಾರ್ಷಿಕವಾಗಿ ಆಚರಿಸುವ ಹಬ್ಬಗಳು, ಜಾತ್ರೆಗಳು, ಜಾತಿ ಪಂಚಾಯ್ತಿಯ ಸ್ಥಾನ ಇದರೊಂದಿಗೆ ರಾಜಕೀಯ ಸ್ಥಿತಿಯಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಯನ್ನು, ಪಾರಂಪರಿಕ ಶಿಕ್ಷಣದಿಂದ ಮುಂದುವರೆದು ಆಧುನಿಕ ಶಿಕ್ಷಣದ ಕಡೆಗೆ ಆಗಿರುವ ಬದಲಾವಣೆ, ಸಂಘಟಿತರಾಗಿ ಪಾರಂಪರಿಕ ಜ್ಞಾನವನ್ನು ಉಳಿಸಲು ನಡೆಸುತ್ತಿರುವ ಹೋರಾಟಗಳನ್ನು ಕುರಿತು ತಿಳಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಜೇನುಕುರುಬರ ಪಾರಂಪರಿಕ ಸಾಂಸ್ಕೃತಿಕ ಜೀವನವನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಸಮುದಾಯದವರು ಪೂಜಿಸುವ ದೈವದ ನೆಲೆಗಳನ್ನು ವಿವರವಾಗಿ ತಿಳಿಸಲಾಗಿದೆ.

ಜೇನುಕುರುಬರು ಮಾತನಾಡುವ ಭಾಷೆ ಜೇನುನುಡಿ. ಸಮುದಾಯೇತರ ಜನರೊಂದಿಗೆ ಮಾತನಾಡುವ ಭಾಷೆಯ ಬಗೆಗೂ ವಿಶ್ಲೇಷಿಸಲಾಗಿದೆ.

ಸಾಮಾನ್ಯವಾಗಿ ಇವರು ಸ್ಥಳೀಯವಾಗಿ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಮಾತನಾಡುವ ಕನ್ನಡ ಭಾಷೆ, ಗಡಿಭಾಗದಲ್ಲಿ ಮಾತನಾಡುವ ತಮಿಳು, ಮಲಯಾಳಿ ಭಾಷೆಯನ್ನು ಸುಲಭವಾಗಿ ಮಾತನಾಡುವ ಕಲೆಯನ್ನು ಹೊಂದಿದ್ದಾರೆಂಬುದನ್ನು ತಿಳಿಸಲಾಗಿದೆ.

ಜನಪದ ಸಾಹಿತ್ಯದ ಗಣಿಯನ್ನೇ ಇವರು ಹೊಂದಿದ್ದಾರೆ. ಹಬ್ಬ ಹರಿದಿನಗಳಲ್ಲಿ ಜೇನುನುಡಿಯಲ್ಲಿಯೇ ಹಾಡುಗಳನ್ನು ಹಾಡುತ್ತಾ, ಪಾರಂಪರಿಕ ನೃತ್ಯವನ್ನು ಮಾಡುತ್ತಾ, ಜನರನ್ನು ರಂಜಿಸುವ ಕಲೆಯನ್ನು ಹೊಂದಿದ್ದಾರೆ. ಮಕ್ಕಳು ಕಾಡಿನಲ್ಲಿ ಸಿಗುವ ಬಿದಿರು, ವಿವಿಧ ಮರಗಳಲ್ಲಿ ಸಿಗುವ ಬೀಜ, ಕಾಯಿ, ಹಣ್ಣು ಮತ್ತು ಎಲೆಗಳನ್ನು ಉಪಯೋಗಿಕೊಂಡು ಆಟ ಆಡುವ ವಿಧಾನವನ್ನು ತಿಳಿಸಲಾಗಿದೆ.

ಕೋಲಾಟ ಜೇನುಕುರುಬ ಸಂಸ್ಕೃತಿಯ ಒಂದು ಭಾಗವಾಗಿದೆ. ಕೆಲಸ ಕಾರ್ಯಗಳಿಂದ ಬಿಡುವಿನ ಸಮಯದಲ್ಲಿ ಸಾಮೂಹಿಕವಾಗಿ ಆಡುತ್ತಾರೆ. ಕೋಲಾಟಕ್ಕೆ ಸಂಬಂಧಿಸಿದ ಪರಿಕರಗಳನ್ನು ಕಾಡಿನಲ್ಲಿಯೇ ಸಿಗುವ ಮರಗಳಿಂದ ತಯಾರಿಸಿ ನೃತ್ಯ ಮಾಡುತ್ತಾ ಕೋಲಾಟ ಆಡುವ ವಿಧಾನ ತಿಳಿಸಲಾಗಿದೆ.

ಇಂದು ಈ ಸಮುದಾಯವು ಸಮಾಜದಲ್ಲಿ ಬದಲಾದ ಪರಿಸ್ಥಿತಿಗೆ ಹೊರತಾಗದೆ ಎಲ್ಲರೊಳಗೊಂದಾಗುವಂತಹ ಸ್ಥಿತಿ ಬಂದೊದಗಿದೆ. ಸ್ಥಳೀಯ ಕ್ರೈಸ್ತ ಪಾದ್ರಿಗಳು ಜೇನುಕುರುಬರ ಹಾಡಿಗಳನ್ನೂ ಬಿಟ್ಟಿಲ್ಲ. ಅವರ ಹಾಡಿಗಳಿಗೆ ತೆರಳಿ ಮನವೊಲಿಸಿ ಮತಾಂತರಕ್ಕೆ ಒಳಪಡಿಸುತ್ತಿದ್ದಾರೆ. ಬಹುತೇಕ ಕಡೆ ಈ ರೀತಿ ಮತಾಂತರ ಹೊಂದಿದವರು ಜೇನುಕುರುಬ ಸಂಸ್ಕೃತಿಯಿಂದ ಸ್ವಲ್ಪ ಸ್ವಲ್ಪವಾಗಿಯೇ ದೂರವಾಗುತ್ತಿದ್ದಾರೆ. ಇಂತಹ ಬದಲಾವಣೆಯು ಜೇನುಕುರುಬರ ಪಾರಂಪರಿಕ ಜ್ಞಾನಕ್ಕೆ ಪೆಟ್ಟು ಕೊಟ್ಟಾಂತಾಗಿದೆ. ಇಂತಹ ಬದಲಾವಣೆ ಮುಂದುವರೆದರೆ ಮುಂದಿನ ಒಂದು ಎರಡು ದಶಕಗಳಲ್ಲಿ ಪಾರಂಪರಿಕ ಜ್ಞಾನದ ಕಲೆಯನ್ನು ಇವರ ಬಗೆಗೆ ಮಾಹಿತಿ ಸಂಗ್ರಹಿಸಿದ ಪುಸ್ತಕಗಳಿಂದ ಮಾತ್ರವೇ ವಿಷಯ ತಿಳಿಯಬೇಕೇ ವಿನಃ ಇವರಲ್ಲಿರುವ ಜ್ಞಾನ ಈ ರೀತಿಯ ಹೊರಗಿನ ಶಕ್ತಿಯ ಪ್ರಭಾವದಿಂದ ಮರೆಯಲಾಗುವುದರಲ್ಲಿ ಸಂಶಯವಿಲ್ಲ.

ಪ್ರಬಂಧದ ಐದನೇ ಅಧ್ಯಾಯ ಜೇನುಕುರುಬರ ಪಾರಂಪರಿಕ ಆರ್ಥಿಕ ಜೀವನವಾಗಿದ್ದು, ಇಂದು ಇವರು ತಮ್ಮ ಮೂಲ ಪಾರಂಪರಿಕ ವೃತ್ತಿಯನ್ನು ಶೇಕಡಾ ೨೭% ರಷ್ಟು ಮಾತ್ರ ಉಳಿಸಿಕೊಂಡಿದ್ದಾರೆ. ಶೆಕಡಾ ೭೩% ಜನರು ಸರ್ಕಾರದ ನೀತಿ, ಅರಣ್ಯದ ಕಾನೂನು ಕಟ್ಟಳೆಗಳಿಂದ ಮೂಲ ವೃತ್ತಿಯನ್ನು ಬಿಟ್ಟು ಜೀವನೋಪಾಯಕ್ಕಾಗಿ ಇತರೆ ವೃತ್ತಿಗಳಿಗೆ ಹೊಂದಿಕೊಳ್ಳುವ ವಾತಾವರಣ ಸೃಷ್ಟಿಯಾಗಿದೆ.

ಕಾಡಿನ ಹೃದಯ ಭಾಗದಲ್ಲಿದ್ದ ಜೇನುಕುರುಬರ ಹಾಡಿಗಳನ್ನು ಇಂದು ಕಾಡಿನಿಂದ ಆಚೆಗೆ ಎಸೆಯಲಾಗುತ್ತಿದೆ. ಹಂತ ಹಂತವಾಗಿ ಇವರನ್ನು ಪುನರ್ವಸತಿ ಕೇಂದ್ರಗಳಿಗೆ ತಂದು ಬಿಡುತ್ತಿದ್ದಾರೆ.

ಇದರ ಪರಿಣಾಮ ಕಾಡಿನಲ್ಲಿ ತಮಗೆ ಹಸಿವಾದಾಗ ಅಥವಾ ಅಗತ್ಯವಿದ್ದಾಗ ಹಣ್ಣುಗಳು, ಸೊಪ್ಪುಗಳನ್ನು, ಗೆಡ್ಡೆಗೆಣಸುಗಳನ್ನು ಹುಡುಕುತ್ತಿದ್ದ ಸಮುದಾಯ ಹೀಗೆ ಕಾಡಿನಿಂದ ಹೊರ ಬಿದ್ದ ಮೇಲೆ ದಿನ ನಿತ್ಯದ ಆಹಾರಕ್ಕೆ ಅಗತ್ಯವಾದ ವಸ್ತುಗಳನ್ನು ಸಂಗ್ರಹಿಸುವ ಸಂಪ್ರದಾಯ ಇಂದು ಬೆಳೆಯುತ್ತಿದೆ. ಆದಿವಾಸಿಗಳಲ್ಲಿ ಅಂದಿನ ಜೀವನೋಪಾಯಕ್ಕೆ ಬೇಕಾಗಿದ್ದನ್ನು ಅಂದೇ ಹೊಂದಿಸಿಕೊಳ್ಳುತ್ತಿದ್ದವರು ಇಂದು ಸಮುದಾಯೇತರರು ಬದುಕುವ ಜೀವನ ವಿಧಾನವನ್ನು ಅನುಸರಿಸುವಂತಾಗಿದೆ. ಇವರು ಇಂದು ಪಾರಂಪರಿಕ ವೃತ್ತಿಯಿಂದ ಬೇರೆ ಬೇರೆ ವೃತ್ತಿಗಳ ಕಡೆಗೆ ಮುಖ ಮಾಡಿದ್ದಾರೆ. ಇಂತಹ ಅಂಶಗಳನ್ನು ವೃತ್ತ ಚಿತ್ರ, ಲಂಬ ಚಿತ್ರ, ಕೋಷ್ಟಕಗಳ ಬಳಕೆಯಿಂದ ತಿಳಿಸಲಾಗಿದೆ.

ಮಹಾಪ್ರಬಂಧದ ಆರನೇ ಅಧ್ಯಾಯವು ಪಾರಂಪರಿಕ ಜ್ಞಾನ ಮತ್ತು ಆಧುನಿಕ ಪ್ರಭಾವವನ್ನು ಕುರಿತದ್ದಾಗಿದೆ.

ಕ್ಷೇತ್ರಾಧ್ಯಯನ ಕೈಗೊಂಡಾಗ ಜೇನುಕುರುಬರಲ್ಲಿ ಪಾರಂಪರಿಕ ಕಸುಬು, ವೃತ್ತಿ, ಬೇಟೆ, ಹಬ್ಬ ಆಚರಣೆ, ಸಂಸ್ಕೃತಿ ಬಗೆಗೆ ಮಹತ್ವದ ಅಂಶಗಳು ಕಂಡು ಬಂದವು. ಅವರಲ್ಲಿರುವ ಅಗಾಧವಾದ ಪಾರಂಪರಿಕ ಹಿನ್ನೆಲೆಯಿಂದಾಗಿಯೇ ಅವರನ್ನು 'ಆದಿಮ ಬುಡಕಟ್ಟು' ಎಂದು ಪರಿಗಣಿಸಲು ಮಾನದಂಡವಾಗಿದೆ ಎಂದು ತಿಳಿದು ಬಂತು.

ಕಾಡಿನ ಬಗ್ಗೆ ಇವರಿಗಿರುವ ಜ್ಞಾನ ಅಪರಿಮಿತವಾದದ್ದು. ಕಾಡಿನಲ್ಲಿ ಜೀವಿಸುವ ಸಂದರ್ಭದಲ್ಲಿ ದಿನನಿತ್ಯದ ಜೀವನ ನಿರ್ವಹಣೆಯಲ್ಲಿ ಅವರು ಅನುಸರಿಸುವ ಪಾರಂಪರಿಕ ತಿಳುವಳಿಕೆ ವೈಜ್ಞಾನಿಕ ಪ್ರಪಂಚಕ್ಕೆ ಸವಾಲೆಸೆಯುವಂತದ್ದು. ಅವರು ಬೆಂಕಿಯನ್ನು ಉತ್ಪಾದಿಸುವ ವಿಧಾನ ಅಚ್ಚರಿ ಎನಿಸುವಂತಿದೆ.

ಜೇನುಕುರುಬರಿಗೆ ಅರಣ್ಯದ ಬಗೆಗೆ ಸಂಪೂರ್ಣ ಜ್ಞಾನವಿದೆ. ಮಳೆಯಾಗುವ ಸಂಭವನೀಯತೆಯನ್ನು ಗಿಡಗಳ ಬೀಜಗಳಿಂದಲೇ ತಿಳಿಯುವ ಜ್ಞಾನವಂತರು. ಆದರೆ ನಾಗರೀಕ ಜಗತ್ತಿನಲ್ಲಿ ಇಂದು ಮಳೆ ಬರುವುದನ್ನು ತಿಳಿಯಲು ಹವಾಮಾನ ಇಲಾಖೆಯ ವರದಿಯನ್ನು ಮಾಧ್ಯಮಗಳ ಮೂಲಕ ತಿಳಿಯುತ್ತಿರುವ ಅಕ್ಷರ ಜ್ಞಾನ ಹೊಂದಿರುವ ಬುದ್ಧಿಜೀವಿಗಳಿಗೂ ಈ ಕೆಲಸ ಸಾಧ್ಯವಿಲ್ಲವೆಂದು ತಿಳಿಯುತ್ತದೆ ಜೇನುಕುರುಬರ ಮೇಧಾವಿತನ.

ದಟ್ಟ ಕಾಡಿನ ಮಧ್ಯೆ ವಾಸಿಸುವ ಇವರಿಗೆ ಎಷ್ಟೋ ಸಲ ಸೂರ್ಯನ ಕಿರಣಗಳು ಭೂಮಿಯನ್ನು ತಲುಪಲು ಸಾಧ್ಯವಿರುವುದಿಲ್ಲ ಅಂತಹ ಸಂದರ್ಭದಲ್ಲಿ ಪಕ್ಷಿಗಳ ಕೂಗು, ಕಲರವ ಮುಂತಾದವುದಳಿಂದ ಸಮಯದ ಜ್ಞಾನವನ್ನು ಹೊಂದಿದ್ದಾರೆ.

ಕಾಡಿನಲ್ಲಿ ವಾಸಿಸುವ ನೂರಾರು ಬಗೆಯ ಪ್ರಾಣಿ ಪಕ್ಷಿಗಳ ಕೂಗು, ಚಲನವಲನಗಳನ್ನು ಬಹಳ ದೂರದಲ್ಲಿರುವಾಗಲೇ ಗುರುತಿಸುವ ಸೂಕ್ಷ್ಮ ಗ್ರಾಹಿಗಳಿವರು. ಕಾಡು ಪ್ರಾಣಿಗಳಿಂದ ರಕ್ಷಿಸಿಕೊಂಡು

ಬದುಕಲು ಕೇವಲ ಮರಗಳ ಪೊಟರೆ, ಪೊದೆಯನ್ನು ಅವಲಂಬಿಸಿದ್ದಾರೆ. ಆದರೆ ಬುಡಕಟ್ಟೇತರರು ಒಂದು ಪ್ರಾಣಿ ಕಾಡಿನಿಂದ ನಾಡಿಗೆ ಬಂದರೆ ಅದರಿಂದ ರಕ್ಷಿಸಿಕೊಳ್ಳಲು ಅರಣ್ಯ ಇಲಾಖೆ, ಪೊಲೀಸ್ ಇಲಾಖೆಯ ಸಿಬ್ಬಂದಿಯನ್ನು ತಡಕಾಡುವಂತಾಗಿರುವ ಈ ಕಾಲದಲ್ಲಿ ಬಹಳ ಹಿಂದಿನಿಂದಲೇ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅವರ ಪಾರಂಪರಿಕ ಜ್ಞಾನವನ್ನು ಅನುಸರಿಸುತ್ತಿರುವ ಇವರು ಧೈರ್ಯಶಾಲಿಗಳು ಮತ್ತು ಇತರರಿಗಿಂತ ಮೇಲು ಎಂಬುದು ತಿಳಿಯುತ್ತದೆ.

ಸಾಮಾಜಿಕವಾಗಿ ತುಂಬಾ ಹಿಂದುಳಿದಿರುವ ಜೇನುಕುರುಬರು ಇಂದಿಗೂ ತುಂಬಾ ಮುಗ್ಧರಾಗಿದ್ದಾರೆ. ಇವರ ಮುಗ್ಧತೆಯೇ ಇವರಿಗೆ ಶಾಪವಾಗಿದೆ. ಎಷ್ಟೋ ಜೇನುಕುರುಬರಿಗೆ ಆದಿಮ ಬುಡಕಟ್ಟು ಅದಕ್ಕೆ ದೊರೆಯುವ ವಿಶೇಷ ಸೌಲಭ್ಯಗಳು ಮುಂತಾದವುಗಳ ಕುರಿತಾದ ತಿಳುವಳಿಕೆ ಇಲ್ಲ. ಪಡೆಯಬೇಕೆಂಬ ಆಸಕ್ತಿಯೂ ಇವರಿಗಿಲ್ಲ. ಇದನ್ನೇ ಅಸ್ತ್ರವಾಗಿಸಿಕೊಂಡು ಇತರ ಸಮುದಾಯಗಳು ಇವರ ಹೆಸರನ್ನು ಬಳಸಿಕೊಂಡು ಸೌಲಭ್ಯಗಳ ಲಾಭ ಪಡೆಯುತ್ತಿವೆ. ಕಾಡಿನೊಂದಿಗೆ ಬದುಕನ್ನು ಕಟ್ಟಿಕೊಂಡ ಜೇನುಕುರುಬರನ್ನು, ಇಲ್ಲದ ಕಾಯ್ದೆಯನ್ನು ಸೃಷ್ಟಿಸಿ ಕಾಡಿನಿಂದ ಹೊರ ತಳ್ಳಲಾಗುತ್ತಿದೆ. ಇದು ಮೀನನ್ನು ನೀರಿನಿಂದ ಹೊರಹಾಕಿದಷ್ಟೇ ಪಾಪದ ಕೆಲಸವೆಂದು ಸರ್ಕಾರಕ್ಕಾಗಲಿ, ಅಧಿಕಾರಿ ವರ್ಗಕ್ಕಾಗಲಿ, ಕಾನೂನು ಕಾಯ್ದೆಗಳನ್ನು ರೂಪಿಸುವವರಿಗಾಗಲಿ ಅರ್ಥವಾಗುತ್ತಿಲ್ಲ. ಇಲ್ಲಿ ಜೇನುಕುರುಬರು ಬದಲಾವಣೆಗೊಳ್ಳದೆ ಮೂಲ ಸ್ಥಿತಿಯಲ್ಲಿರಲಿ ಎಂದೇನೂ ವಾದಿಸುತ್ತಿಲ್ಲ. ಅವರ ಪರಿಸರದಲ್ಲಿ ಅವರನ್ನು ಬಿಟ್ಟು ಅವರ ಮೂಲ ಪಾರಂಪರಿಕ ಬದುಕಿಗೆ ಹೊಂದುವಂತಹ ವ್ಯವಸ್ಥೆ ಕಲ್ಪಿಸಿದರೆ ಜೇನುಕುರುಬರು ಹೆಚ್ಚು ಸ್ಪಂದಿಸಬಲ್ಲರು ಎಂಬುದಷ್ಟೇ ವಾದ. ಇದನ್ನು ಅರ್ಥ ಮಾಡಿಕೊಳ್ಳುವ ಪ್ರಜ್ಞಾವಂತಿಕೆ ಇತರ ಸಮಾಜಕ್ಕೆ, ಆಡಳಿತರೂಢ ವ್ಯವಸ್ಥೆಗೆ ಇರಬೇಕು.

### ೭. ೧. ಅಧ್ಯಯನದ ಫಲಿತಗಳು

- ಜೇನುಕುರುಬ ಮಹಿಳೆಯರಲ್ಲಿ ಅಪಾರವಾದ ಪಾರಂಪರಿಕ ಜ್ಞಾನ ಇರುವುದು.
- ಸಾಮಾಜಿಕ ಜೀವನದಲ್ಲಿ ಮಹಿಳೆಯರು ಪಾರಂಪರಿಕ ಜ್ಞಾನವನ್ನು ಬಳಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾರೆ.
- ಮಹಿಳೆಯರು ಪಾರಂಪರಿಕ ಜ್ಞಾನದಿಂದ ಆರ್ಥಿಕವಾಗಿ ಸ್ವತಂತ್ರರಾಗಿರುವವರು.
- ಪಾರಂಪರಿಕ ಜ್ಞಾನದಿಂದ ತಮ್ಮ ಸಂಸ್ಕೃತಿಯ ಅಂಗಗಳಾದ ದೈವಗಳ ಆಚರಣೆ, ಹಬ್ಬಹರಿದಿನಗಳ ಆಚರಣೆ, ಕುಶಲಕಲೆ, ಪಾರಂಪರಿಕ ಬೇಟೆ ಮುಂತಾದವುಗಳನ್ನು ಅನುಸರಿಸುತ್ತ ಸಂತೃಪ್ತಿ ಪಡೆದಿದ್ದಾರೆ.
- ಸಮುದಾಯದಲ್ಲಿ ಮಹಿಳೆಯರು ಪಾರಂಪರಿಕ ಜ್ಞಾನದ ಸ್ವತ್ವವನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ.

- ಕಾಡಿನಲ್ಲಿ ಸಿಗುವ ಗಿಡಮರಗಳ ಬೇರು, ತೊಗಟೆ, ಎಲೆ, ಚಿಗುರು, ಕಾಯಿ ಮುಂತಾದವುಗಳನ್ನು ಬಳಸಿಕೊಂಡು ಔಷಧೀಯ ಜ್ಞಾನವನ್ನು ಹೊಂದಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಸಫಲರಾಗಿದ್ದಾರೆ.
- ಪುನರ್ವಸತೀಕರಣಕ್ಕೆ ಒಳಪಟ್ಟವರು ಕಾಡಿನಿಂದ ದೂರ ಉಳಿಯುತ್ತಿರುವುದರಿಂದ ಪಾರಂಪರಿಕ ಜ್ಞಾನ ನಶಿಸುತ್ತಿದೆ.
- ಕಾಡಿನೊಳಗೆ ವಾಸವಿರುವವರು ಪಾರಂಪರಿಕ ಜ್ಞಾನವನ್ನು ಉಳಿಸಿಕೊಂಡಿದ್ದಾರಾದರೂ ಕೂಡ ಅರಣ್ಯನೀತಿ, ಹೊರಗಿನ ಜನರ ಪ್ರಭಾವದಿಂದ ಇವರಿಗೆ ಪಾರಂಪರಿಕ ಜೀವನ ನಡೆಸಲು ತೊಂದರೆಯಾಗುತ್ತಿದೆ.

### ೭. ೨. ಸಲಹೆಗಳು

ಜೇನುಕುರುಬರು ಅನುಭವಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಅಗತ್ಯವಿದೆ. ಕಾಡಿನಲ್ಲಿ ಕಣ್ಣಳತೆವರೆಗು ಭೂಮಿಯನ್ನು ಜೀವನೋಪಾಯಕ್ಕಾಗಿ ಬಳಸುತ್ತಾ, ಆ ಭೂಮಿ ಫಲವತ್ತತೆ ಕಳೆದುಕೊಂಡ ಮೇಲೆ ಮತ್ತೊಂದು ಕಡೆ ಗುಡಿಸಲುಗಳನ್ನು ನಿರ್ಮಿಸಿಕೊಂಡು ಅಲ್ಲಿಯ ಭೂಮಿಯನ್ನು ಕೃಷಿ ಯೋಗ್ಯವನ್ನಾಗಿ ಮಾಡುತ್ತಾ, ಜೀವಿಸಲು ಅಗತ್ಯವಿರುವ ಆಹಾರ ಧಾನ್ಯಗಳನ್ನು ಬೆಳೆದು ತಿನ್ನುತ್ತಾ ಕಾಲ ಕಳೆಯುತ್ತಿದ್ದ ಜೇನುಕುರುಬರನ್ನು ಒಕ್ಕಲೆಬ್ಬಿಸಿದರು. ಬೃಹತ್ ಅಣೆಕಟ್ಟುಗಳನ್ನು ಕಟ್ಟುವಾಗ ಅವುಗಳ ಸುತ್ತ ಮುತ್ತ ಜೀವಿಸುವ ಗಿರಿಜನ ಹಾಡಿಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ಕಾಡಿನಿಂದ ಹೊರಗೆ ನೂಕಿದ ಪರಿಣಾಮ ಇವರ ಬದುಕು ದಿಕ್ಕು ತಪ್ಪಿದಂತಾಗಿದೆ.

ಇಂತಹ ಸಮಸ್ಯೆಗಳಿಗೆ ಈ ಮುಂದಿನ ಅಂಶಗಳನ್ನು ಪಾಲಿಸುವುದರಿಂದ ಪರಿಹಾರ ದೊರಕಬಹುದು.

- ✓ ಜೇನುಕುರುಬ ಮಹಿಳೆಯಲ್ಲಿರುವ ಪಾರಂಪರಿಕ ಜ್ಞಾನವನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಿ, ಬರವಣಿಗೆ ರೂಪದಲ್ಲಿ ದಾಖಲೀಕರಿಸುವ ಅವಶ್ಯಕತೆ ಇದೆ.
- ✓ ಅನಾದಿ ಕಾಲದಿಂದಲೂ ಅರಣ್ಯಾಶ್ರಿತರಾಗಿರುವ ಜೇನುಕುರುಬ ಬುಡಕಟ್ಟನ್ನು ವಿಭಿನ್ನ ಕಾರಣಗಳಿಂದಾಗಿ ಅರಣ್ಯದಿಂದ ಹೊರ ದಬ್ಬಲಾಗುತ್ತಿರುವುದನ್ನು ನಿಲ್ಲಿಸಬೇಕಾಗಿದೆ.
- ✓ ಜೇನುಕುರುಬ ಮಹಿಳೆಯರಲ್ಲಿರುವ ಪ್ರಾಣಿ ಪಕ್ಷಿಗಳ ಕುರಿತು ಇರುವ ಜ್ಞಾನವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ಇವರ ಇಚ್ಛೆಯಂತೆ ಅರಣ್ಯದಲ್ಲಿಯೇ ನೆಲೆ ನಿಲ್ಲಿಸುವ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

- ✓ ಅರಣ್ಯದಲ್ಲಿನ ಗಿಡ ಮರಗಳು, ಪ್ರಾಣಿ ಪಕ್ಷಿಗಳ ಮತ್ತು ಜೇನುಕುರುಬರ ನಡುವಿನ ಸಂಬಂಧ ಬಿಡಿಸಲಾರದ್ದು. ಇದನ್ನು ಹೊರ ನಾಗರೀಕ ಸಮಾಜ ಇವರುಗಳ ನಡುವಿನ ಒಡನಾಟವನ್ನು ತಪ್ಪಿಸಬಾರದು.
- ✓ ಜೇನುಕುರುಬ ಮಹಿಳೆಯರ ಪಾರಂಪರಿಕ ವೃತ್ತಿಯಾದ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಶೇಖರಣೆ ಮತ್ತು ಮಾರಾಟಕ್ಕೆ ಮುಕ್ತ ಅವಕಾಶ ಕಲ್ಪಿಸಿ, ಸೂಕ್ತ ಮಾರುಕಟ್ಟೆ ವ್ಯವಸ್ತೆ ಮತ್ತು ಯೋಗ್ಯ ಬೆಲೆಯನ್ನು ದೊರಕಿಸಿ ಕೊಡಬೇಕು.
- ✓ ಜೇನುಕುರುಬರು ಅರಣ್ಯ ನಾಶ ಮಾಡುವವರಲ್ಲ. ಇವರು ಅರಣ್ಯ ರಕ್ಷಕರು ಇವರನ್ನು ಅರಣ್ಯಾಧಾರಿತ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚಾಗಿ ಬಳಸಿಕೊಳ್ಳಲು ಸಾಧ್ಯವಾಗಬೇಕು. ಉದಾ: ಕಾಡಿಗೆ ಬೆಂಕಿ ಬಿದ್ದಾಗ ಅದನ್ನು ನಂದಿಸುವ ಮತ್ತು ಕಾಡು ಪ್ರಾಣಿಗಳು ಅಪಾಯದಲ್ಲಿ ಸಿಲುಕಿದ್ದಾಗ ಅವುಗಳನ್ನು ರಕ್ಷಿಸುವ ಜ್ಞಾನ ಇವರಿಗಿರುತ್ತದೆ.
- ✓ ಜೇನುಕುರುಬರು ತಮ್ಮ ಪಾರಂಪರಿಕ ಆಹಾರ ಪದ್ಧತಿಯಲ್ಲಿನ ಆಹಾರ ಪದಾರ್ಥಗಳನ್ನೇ ಆಹಾರವಾಗಿ ಬಳಸಲು ಮುಕ್ತ ವಾತಾವರಣ ಕಲ್ಪಿಸಿಕೊಡಬೇಕು.
- ✓ ಜೇನುಕುರುಬ ಮಹಿಳೆಯರ ಪಾರಂಪರಿಕ ವೈದ್ಯ ಪದ್ಧತಿಯನ್ನು ಮಾನ್ಯ ಮಾಡಬೇಕು ಮತ್ತು ವಿಶೇಷ ಒತ್ತುಕೊಟ್ಟು ಔಷಧಿಗಳಿಗೆ ಬೇಕಾದ ಗಿಡ ಗಂಟಿ, ಬೇರು ನಾರು, ಸೊಪ್ಪು ಸೊದೆಗಳನ್ನು ಸಂಗ್ರಹಿಸಲು, ಬೆಳೆಸಲು ಅಗತ್ಯವಿರುವ ಸಹಕಾರವನ್ನು ನೀಡಿ ಸೂಕ್ತ ವಾತಾವರಣ ಸೃಷ್ಟಿಸಿ ಕೊಡಬೇಕು.
- ✓ ಜೇನುಕುರುಬರಲ್ಲಿವ ಜಾತಿ ಪಂಚಾಯಿತಿ ವ್ಯವಸ್ಥೆಯ ಮಹತ್ವವನ್ನು ಅರಿತು ಅದನ್ನು ಉಳಿಸಿಕೊಳ್ಳಲು ಪ್ರಾಧಾನ್ಯತೆ ನೀಡಬೇಕು.
- ✓ ಕ್ಷೇತ್ರಾಧ್ಯಯನದಲ್ಲಿ ಕಂಡುಬಂದಂತೆ ಕೊಡಗಿನಲ್ಲಿರುವ ಪೈಸಾರಿ ಮತ್ತು ಲೈನ್ ಮನೆಗಳಲ್ಲಿರುವ ಜೇನುಕುರುಬರನ್ನು ಪಾರಂಪರಿಕ ನೆಲೆಗಟ್ಟಿನಲ್ಲಿ ಆರ್ಥಿಕವಾಗಿ ಸದೃಢಗೊಳಿಸುವ ಯೋಜನೆಗಳನ್ನು ರೂಪಿಸಬೇಕು.
- ✓ ಕೃಷಿ ಸಂಬಂಧಿತ ಎಲ್ಲಾ ಚಟುವಟಿಕೆಗಳನ್ನು ಬಲ್ಲವರಾದ್ದರಿಂದ ಇವರಿಗೆ ಅರಣ್ಯಗಳಲ್ಲಿಯೇ ಕುಮ್ರಿ ಬೇಸಾಯವನ್ನು ಕೈಗೊಳ್ಳಲು ಮುಕ್ತ ಅವಕಾಶ ಕಲ್ಪಿಸಿಕೊಡಬೇಕು.

- ✓ ಸರ್ಕಾರ ನೀಡುತ್ತಿರುವ ವಿಶೇಷ ಆಹಾರ ಯೋಜನೆ (Special Food Package) ಯಡಿ ನೀಡುತ್ತಿರುವ ಆಹಾರದ ಬದಲಿಗೆ ಕಾಡಿನ ಒಳಗೆ ಬೇಕಾದ ಆಹಾರ ಬೆಳೆಗಳನ್ನು ಬೆಳೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.
- ✓ ಪಾರಂಪರಿಕ ಪರಿಕಲ್ಪನೆಯಲ್ಲಿ ಹಾಡಿಗಳನ್ನು ಮತ್ತು ವಸತಿಗಳನ್ನು ನಿರ್ಮಿಡಸಿಕೊಳ್ಳಲು ವಿಶೇಷ ಒತ್ತು ನೀಡಬೇಕು.
- ✓ ಅನಾದಿ ಕಾಲದಿಂದಲೂ ಇವರು ಕಾಡಿನಲ್ಲಿ ಪೂಜಿಸುತ್ತಿದ್ದ ದೈವದ ನೆಲೆಗಳಿಗೆ ಹೋಗಿ ಬರುವ ಕಡಿವಾಣವನ್ನು ನಿಲ್ಲಿಸಿ, ಮುಕ್ತ ಅವಕಾಶ ಮಾಡಿಕೊಡಬೇಕು.
- ✓ ಅರಣ್ಯಾಧಾರಿತ ಕಾನೂನುಗಳ ರಚನೆ ಮತ್ತು ಅನುಷ್ಠಾನಗಳಲ್ಲಿ ಜೇನುಕುರುಬರ ಪಾರಂಪರಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಅಂಶಗಳನ್ನು ಕೈಬಿಡಬೇಕು.
- ✓ ಅನಿವಾರ್ಯ ಕಾರಣಗಳಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪುನರ್ ನೆಲೆ ಕಲ್ಪಿಸುವಾಗ ಇವರನ್ನು ಬೇರೆ ಸಮುದಾಯಗಳೊಂದಿಗೆ ಸಮೀಕರಿಸದೇ, ಅರಣ್ಯ ಅಥವಾ ಅರಣ್ಯದ ಅಂಚಿನಲ್ಲಿಯೇ ಪ್ರತ್ಯೇಕ ನೆಲೆಗಳನ್ನು ಅವರ ಇಚ್ಛೆಗೆ ಅನುಗುಣವಾಗಿ ನಿರ್ಮಿಸಿಕೊಡಬೇಕು.
- ✓ ಸಾಮಾಜಿಕ ಸ್ಥರ ವಿನ್ಯಾಸ ವ್ಯವಸ್ಥೆಯಲ್ಲಿ ವ್ಯಕ್ತಿ, ಮೇಟಿ, ತಮ್ಮಡಿ, ಯಜಮಾನ ಮತ್ತು ನಾಯಕ ಇವರುಗಳ ಕಾರ್ಯ ಮತ್ತು ಆದೇಶಗಳಿಗೆ ಸಮುದಾಉದ ಒಳಗೆ ಮತ್ತು ಹೊರಗೆ ಮಾನ್ಯತೆ ಸಿಗುವಂತಾಗಬೇಕು.
- ✓ ನಾಗರೀಕರೆಂದು ಹೇಳಿಕೊಳ್ಳುವ ಹೊರ ಸಮಾಜದ ಜನರು ಜೇನುಕುರುಬರನ್ನು ನಿಕೃಷ್ಟವಾಗಿ ನೋಡುವ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು.
- ✓ ಜೇನುಕುರುಬರು ವಾಸಿಸುವ ನೆಲೆಗಳಲ್ಲಿ ಬಾಹ್ಯ ವ್ಯಕ್ತಿಗಳ ಅಥವಾ ಅಧಿಕಾರ ಶಾಹಿಗಳ ಹಸ್ತಕ್ಷೇಪ ನಿಲ್ಲುವಂತಾಗಬೇಕು.
- ✓ ಸರ್ಕಾರೇತರ ಸಂಸ್ಥೆಗಳು ತಮ್ಮ ಲಾಭದಾಯಕ ಯೋಜನೆಗಳಿಗಾಗಿ ಇವರ ಜೀವನ ಶೈಲಿಯನ್ನು ವಿಭಿನ್ನವಾಗಿ ಬಿಂಬಿಸುವ ಪ್ರವೃತ್ತಿ ನಿಲ್ಲಿಸಬೇಕು.
- ✓ ಅರಣ್ಯ ರಕ್ಷಣೆಗಾಗಿ ಇರುವ ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಕಠಿಣ ನಿಯಮಗಳನ್ನು ಸಡಿಲಗೊಳಿಸಿ ಜೇನುಕುರುಬರಿಗೆ ವಿಶೇಷ ಪ್ರಾತಿನಿಧ್ಯ ನೀಡಬೇಕು.

✓ ಜೇನುಕುರುಬರ ನೆಲೆಗಳಲ್ಲಿ ನೀಡುತ್ತಿರುವ ಆಧುನಿಕ ಶಿಕ್ಷಣದೊಂದಿಗೆ ಪಾರಂಪರಿಕ ಶಿಕ್ಷಣವನ್ನು ಕಲಿಸಲು ವಿಶೇಷ ಅವಕಾಶ ದೊರೆಯುವಂತಾಗಬೇಕು. ಜೇನುಕುರುಬರನ್ನೇ ಶಿಕ್ಷಕರಾಗಿ ನೇಮಿಸಲು ಆದ್ಯತೆ ನೀಡಬೇಕು.

✓ ಜೇನುಕುರುಬರನ್ನೇ ಮುಖ್ಯ ಕೇಂದ್ರವಾಗಿರಿಸಿಕೊಂಡು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ದುರುಪಯೋಗಗಳನ್ನು ತಡೆಗಟ್ಟಬೇಕು.

✓ ಜೇನುಕುರುಬರ ನೆಲೆಗಳಲ್ಲಿ ಮಧ್ಯಪಾನ, ಧೂಮಪಾನ ಮೊದಲಾದ ಹಾನಿಕಾರಕ ವಸ್ತುಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕು.

✓ ಕ್ಷೇತ್ರಾಧ್ಯಯನದಲ್ಲಿ ಕಂಡುಕೊಂಡಂತೆ ಎಸ್ಟೇಟ್‌ಗಳಲ್ಲಿ ಕೂಲಿಕೆಲಸಕ್ಕೆ ಇವರನ್ನು ಕರೆದುಕೊಂಡು ಹೋಗುವ ಮೊದಲು ಮಧ್ಯಪಾನದ ಹಂಚಿಕೆಯನ್ನು ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು.

✓ ಪುರುಷರಿಗೆ ಸಮಾನವಾಗಿ ದುಡಿಯುವ ಜೇನುಕುರುಬ ಮಹಿಳೆಯರಿಗೂ ಸಮಾನ ದುಡಿಮೆಯ ಸಮಾನ ವೇತನ ದೊರೆಯುವಂತಾಗಬೇಕು.

✓ ಪಾರಂಪರಿಕ ಆಹಾರ ಸಂಗ್ರಹಣೆ, ಔಷಧಿಗಾಗಿ ಬಳಸುವ ನಾರು ಬೇರುಗಳ ಸಂಗ್ರಹಣೆಗೆ ಸ್ವಾತಂತ್ರ್ಯ ನೀಡಬೇಕು.

✓ ಪಶುಪಾಲನೆ ಮತ್ತುಅವುಗಳ ನಿರ್ವಹಣೆಗೆ ಮುಕ್ತ ಅವಕಾಶ ದೊರೆಯುವಂತಾಗಬೇಕು.

✓ ನಾಗರೀಕ ಸಮಾಜರೆನಿಸಿಕೊಂಡಿರುವ ಹೊರ ಸಮಾಜದ ಧಾರ್ಮಿಕ ಪೂಜಾ ವಿಧಿವಿಧಾನಗಳ ಬಲವಂತದ ಹೇರಿಕೆಯನ್ನು ನಿಲ್ಲಿಸಬೇಕು.

✓ ಬಾಲ್ಯ ವಿವಾಹಗಳನ್ನು ತಡೆಗಟ್ಟಿ ಅದರಿಂದಾಗುವ ಸಮಸ್ಯೆಗಳ ಬಗ್ಗೆ ತಿಳುವಳಿಕೆ ನೀಡುವಂತಹ ಅರಿವು ಕಾರ್ಯಕ್ರಮಗಳು ಹೆಚ್ಚು ಆಗಬೇಕು.

✓ ಎಗ್ಗಿಲ್ಲದೇ ಬಲವಂತಾಗಿ ನಡೆಯುತ್ತಿರುವ ಮತಾಂತರವನ್ನು ನಿಲ್ಲಿಸಬೇಕು. ವಿವಿಧ ಆಮಿಷಗಳನ್ನು ಒಡ್ಡಿ ಮತಾಂತರಗೊಳಿಸುವವರ ವಿರುದ್ಧ ಕಠಿಣ ಕ್ರಮ ಜಾರಿಯಾಗಬೇಕು.

✓ ಅನಧಿಕೃತವಾಗಿ ಹಾಡಿಗಳಲ್ಲಿ ನಿರ್ಮಾಣವಾಗಿರುವ ಮತಾಂತರ ಕೇಂದ್ರಗಳನ್ನು ತೆರವುಗೊಳಿಸಬೇಕು.

- ✓ ಅರಣ್ಯದ ಒಳಗೆ ಪ್ರವಾಸೋದ್ಯಮದ ಹೆಸರಿನಲ್ಲಿ ರೆಸಾರ್ಟ್ ಮತ್ತಿತರ ಮೋಜಿನ ಕೇಂದ್ರಗಳ ನಿರ್ಮಾಣಗಳನ್ನು ತಡೆಯಬೇಕು. ಈಗಾಗಲೇ ನಿರ್ಮಾಣವಾಗಿರುವ ಇಂತಹ ಕೇಂದ್ರಗಳ ಪರವಾನಗಿಗಳನ್ನು ರದ್ದುಗೊಳಿಸಬೇಕು.
- ✓ ಸಮೂಹ ಮಾಧ್ಯಮಗಳಲ್ಲಿ ಜೇನುಕುರುಬರನ್ನು ಹೀನ ಸ್ಥಿತಿಯಲ್ಲಿ ಬಿಂಬಿಸುವುದನ್ನು ನಿಲ್ಲಿಸಬೇಕು.
- ✓ ಸರ್ಕಾರಿ ಸೌಲಭ್ಯಗಳಿಗಾಗಿ ಪರಿಶಿಷ್ಟ ಪಟ್ಟಿಗೆ ಸೇರ್ಪಡೆಗೊಂಡಿರುವ ಆದಿವಾಸಿಯೇತರರನ್ನು ಕೂಡಲೇ ಕೈಬಿಟ್ಟು, ಜೇನುಕುರುಬ ಆದಿಮ ಬುಡಕಟ್ಟಿಗೆ ಅದರ ಮೂಲ ಪರಂಪರೆಯನ್ನು ಉಳಿಸಿಕೊಳ್ಳಲು ಪ್ರೋತ್ಸಾಹ ಮತ್ತು ಪ್ರಾತಿನಿಧ್ಯ ನೀಡಬೇಕು.
- ✓ ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ ೨೦೦೬ (೨೦೦೭ ರ ೨) ಮತ್ತು ನಿಯಮಗಳು, ೨೦೦೮ (ನಿಯಮಗಳ ತಿದ್ದುಪಡಿ ೨೦೧೨) ರ ಕಾಯಿದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು.
- ✓ ಮೂಲನೆಲೆಗಳನ್ನು ಉಳಿಸಿಕೊಳ್ಳಲು ಅವಶ್ಯಕವಿರುವ ದಾಖಲೆಗಳನ್ನು ಸಮರ್ಪಕವಾಗಿ ಒದಗಿಸಬೇಕು.
- ✓ ಹಾಡಿಗಳಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸುವ ಬದಲು ಪಾರಂಪರಿಕ ನಿರ್ಮಾಣಗಳಿಗೆ ಪ್ರೋತ್ಸಾಹ, ಅವಕಾಶ ಮತ್ತು ಒತ್ತು ನೀಡಬೇಕು.
- ✓ ಜೇನುಕುರುಬ ಮಹಿಳಾ ಪಾರಂಪರಿಕ ಜ್ಞಾನಾಭಿವೃದ್ಧಿಗೆ ಬೇಕಾಗುವ ಎಲ್ಲ ನಿಸರ್ಗಸಹಜ ಪಾರಂಪರಿಕ ಮೌಲ್ಯಗಳನ್ನು, ನಿಸರ್ಗ ಸಂಪತ್ತನ್ನು ಸಂರಕ್ಷಿಸಬೇಕು ಮತ್ತು ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಅವರ ವಿವೇಕಕ್ಕೆ ಬಿಡಬೇಕು. ಸರ್ಕಾರ, ಸಂಘ ಸಂಸ್ಥೆಗಳು, ಸಮಾಜದ ಸಹಕಾರ ಅವರು ಕೋರಿದ್ದಲ್ಲಿ ನೀಡಲು ಮುಂದಾಗಬೇಕು.
- ✓ ಜೇನುಕುರುಬ ಮಹಿಳಾ ಪಾರಂಪರಿಕ ಜ್ಞಾನ ಸಂವರ್ಧನೆಗಾಗಿ ಜೇನು ಕುರುಬರ ಸಂಘ ಸಂಸ್ಥೆಗಳಿಗೆ ಅಗತ್ಯ ನೆರವನ್ನು ಒದಗಿಸಿ ಅರಣ್ಯ ಸಂವರ್ಧನೆಯ ಹಕ್ಕನ್ನು ಇವರಿಗೆ ನೀಡುವಂತಾಗಬೇಕು.

ಆದಿಮ ಬುಡಕಟ್ಟಾಗಿರುವ ಇವರ ಕಲೆ, ಸಂಸ್ಕೃತಿ, ಪರಂಪರೆಯನ್ನು ಉಳಿಸುವ, ಬೆಳೆಸುವ, ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಹೊಣೆಗಾರಿಕೆ ಮತ್ತು ಇಡೀ ಸಮುದಾಯವನ್ನು ಒಂದು

ವೇದಿಕೆಯಡಿ ಸಂಘಟಿತಗೊಳಿಸುವುದು ನಮ್ಮೆಲ್ಲರ ಹೊಣೆಯಾಗಿದ್ದು, ಅದನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ.


## ೭. ೩. ಅಧ್ಯಯನದ ಮುಂದಿನ ಸಾಧ್ಯತೆಗಳು

- ಜೇನುಕುರುಬ ಬುಡಕಟ್ಟಿನ ಪರಂಪರೆಗೆ ವಿಶೇಷವಾಗಿ ಮಹಿಳಾ ಹಿನ್ನೆಲೆಯಲ್ಲಿ ಈ ಬುಡಕಟ್ಟಿನ ಪರಂಪರೆಯನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಅದರಾಚೆಗೆ ಅವರ ಭಾಷಾಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಜಾನಪದ ಶಾಸ್ತ್ರಗಳ ಹಿನ್ನೆಯಲ್ಲಿಯೂ ಈ ಬುಡಕಟ್ಟನ್ನು ಅಧ್ಯಯನ ಮಾಡಬಹುದಾಗಿದೆ.
- ಕಾಡನ್ನೇ ನಂಬಿಕೊಂಡು ಆ ಪರಿಸರದ ತೆಕ್ಕೆಯೊಳಗೆ ಬದುಕನ್ನು ಕಂಡುಕೊಂಡಿದ್ದ ಜೇನುಕುರುಬರು ಅನ್ಯ ಸಮುದಾಯಗಳ ಸಂಪರ್ಕ ದೊರೆತ ನಂತರ ಇವರ ಜೀವನಶೈಲಿ ನಿಧಾನವಾಗಿ ಬದಲಾವಣೆಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಸಹಭಾಗಿತ್ವದ ಅಂತರ್ ಸಂಬಂಧಗಳ ಕುರಿತೂ ಅಧ್ಯಯನ ಕೈಗೊಳ್ಳಬಹುದಾಗಿದೆ.
- ಪ್ರಸ್ತುತ ಅಧ್ಯಯನವು ಕರ್ನಾಟಕದ ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಈ ಪ್ರದೇಶದ ಜೇನುಕುರುಬರ ಹಾಗೂ ಹೊರ ರಾಜ್ಯಗಳಲ್ಲಿರುವ ಜೇನುಕುರುಬರ ಪರಂಪರೆಗಳ ಕುರಿತು ತೌಲನಿಕ ಅಧ್ಯಯನ ನಡೆಸಲು ಇರಬಹುದಾದ ಸಾಧ್ಯತೆಗಳ ಕುರಿತು ಅಧ್ಯಯನ ಮಾಡಬಹುದಾಗಿದೆ.

ಇತ್ತೀಚೆಗೆ ದೆಹಲಿಯ ಪ್ರಾಣಿ ಸಂಗ್ರಹಾಲಯದಲ್ಲಿ ವೃತ್ತಿ ಛಾಯಾ ಗ್ರಾಹಕರೊಬ್ಬರು ಪ್ರಾಣಿಗಳ ಚಲನವಲನವನ್ನು ಕುರಿತು ಭಾವ ಚಿತ್ರ ತೆಗೆದು ಅಂತರ್ಜಾಲ ತಾಣಗಳಿಗೆ ಬಿಡುತ್ತಿದ್ದ ವ್ಯಕ್ತಿಯೊಬ್ಬರು ಆಯ ತಪ್ಪಿ ಸಂಗ್ರಹಾಲಯದೊಳಗೆ ಬಿದ್ದಾಗ ಹುಲಿಯೊಂದು ಅವರನ್ನು ಕೆಣಕಿ ಕೆಣಕಿ ಎಳೆದಾಡಿಕೊಂಡು ಅವರನ್ನು ಕೊಂದು ಹಾಕಿದಾಗ ಅಲ್ಲಿದ್ದ ಸ್ಥಳೀಯರು ಆ ದೃಶ್ಯವನ್ನು ಚಿತ್ರಿಸಿಕೊಂಡು ಸಾಮಾಜಿಕ ಜಾಲತಾಣಗಳಿಗೆ ತುಂಬಿದರೇ ಹೊರತು ವ್ಯಕ್ತಿಯೊಬ್ಬನ ಜೀವ ರಕ್ಷಿಸಲು ಯಾರಿಗೂ ಸಾಧ್ಯವಾಗಲಿಲ್ಲ. ಈ ಉದಾಹರಣೆಯನ್ನು ಗಮನಿಸಿದಾಗ ದಟ್ಟ ಅರಣ್ಯದ ನಡುವೆ ವಾಸಿಸಲು ಜೇನುಕುರುಬರು ತಮ್ಮ ಜೀವ ಮಾನದಲ್ಲಿ ಕ್ರೂರ ಮೃಗಗಳ ಬಾಯಿಂದ ನೂರಾರು ಬಲಿಗಳನ್ನು ತಪ್ಪಿಸುವ ಕೆಲಸವನ್ನು ಮಾಡುತ್ತಾರೆ. ಆದರೆ ಅಂತಹ ವಿಷಯಗಳು ಬೆಳಕಿಗೆ ಬರುವುದೇ ಇಲ್ಲ.

ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ ಒಂದು ಪ್ರಾಮಾಣಿಕ ಪ್ರಯತ್ನವಾಗಿದೆ. ಇನ್ನು ಉಳಿದ ವಿಷಯಗಳ ಅಧ್ಯಯನ ಮುಂದಿನ ಅಧ್ಯಯನಕಾರರಿಗೆ ಬಿಡಲಾಗಿದೆ. ಪಾರಂಪರಿಕ ಜ್ಞಾನವನ್ನು ಹಿರಿಯರಿಂದ ಕಲಿತು ಇಂದಿಗೂ ಉಳಿಸಿಕೊಂಡಿದ್ದಾರೆ. ಅದನ್ನು ಮುಂದುವರೆಸಲು ಆಧುನಿಕ ಸರ್ಕಾರದ ಕಟ್ಟುನಿಟ್ಟಿನ ನಿಯಮಗಳು ನಿರ್ಬಂಧವನ್ನು ಹೇರಿವೆ.

ಇದರಿಂದ ಇವರಿಗೆ ಆಗಿರುವ ಆಘಾತವೆಂದರೆ ಪಾರಂಪರಿಕ ತಿಳುವಳಿಕೆ ಇದ್ದರೂ ಬಳಕೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಪ್ರವೃತ್ತಿ ಹೀಗೆಯೇ ಮುಂದುವರೆದರೆ ಈಗ ಇರುವ ಹಳೆಯ ತಲೆಮಾರಿನ ಸಮುದಾಯದ ಹಿರಿಯರ ಅವನತಿಯ ನಂತರ ಈ ಜ್ಞಾನವನ್ನು ಇವರ ಮಕ್ಕಳು, ಮೊಮ್ಮಕ್ಕಳು ಮುಂತಾದವರಿಗೆ ಪುಸ್ತಕ ರೂಪದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಮಾತ್ರ ತೋರಿಸುವ ಕಾಲ ಸನ್ನಿಹಿತವಾಗುತ್ತದೆ ಎಂದು ತಿಳಿಸಲು ನೋವಾಗುತ್ತಿದೆ. ಇನ್ನಾದರೂ ಅಳಿದುಳಿದಿರುವ ಇವರ ಪಾರಂಪರಿಕ ಜ್ಞಾನವನ್ನು ಉಳಿಸುವ, ಸಂರಕ್ಷಿಸುವ ವಾತಾವರಣ ನಿರ್ಮಾಣವಾಗಲಿ ಎಂದು ಆಶಿಸಲಾಗಿದೆ.



# ಅನುಬಂಧಗಳು

# ಅನುಬಂಧಗಳು

೧. ಸಾಂಸ್ಕೃತಿಕ ಭಾಷಾ ಶಬ್ದಕೋಶ

೨. ಪರಾಮರ್ಶನ ಗ್ರಂಥಗಳು

೩. ವಕ್ತೃ ಮಾಹಿತಿ

೪. ಭೇಟಿ ಮಾಡಿ ಚರ್ಚಿಸಿದ ವಿದ್ವಾಂಸರು.

೫. ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ

೬. ಹಾಡಿ/ಗ್ರಾಮ ವಿವರ ಅಧ್ಯಯನ ಪ್ರಶ್ನಾವಳಿ

೭. ವ್ಯಕ್ತಿ ಅಧ್ಯಯನ ಪ್ರಶ್ನಾವಳಿ ಮಾದರಿ

೮. ಸಮೀಕ್ಷೆಗೊಳಪಟ್ಟ ಅಂಕಿ ಅಂಶಗಳು

೯. ಛಾಯಾಚಿತ್ರಗಳು

## ೧. ಸಾಂಸ್ಕೃತಿಕ ಭಾಷಾ ಶಬ್ದಕೋಶ

| | | |
|---|---|---|
| ಅಟ್ಟಾಣೆ | – | ಮರ ಅಥವಾ ಬಿದಿರಿನ ಮೇಲಿನ ಗುಡಿಸಲು |
| ಅಟ್ಟೈಕಾ | – | ಜೇನು ನೊಣದ ಮರಿ |
| ಅಚ್ಚಾ | – | ಅಣ್ಣ |
| ಅಯ್ಯಾ | – | ಅಪ್ಪ |
| ಅವಲು | – | ಅವಲಕ್ಕಿ |
| ಅವ್ವೆ | – | ಅಮ್ಮ |
| ಅಸಲು | – | ಅಜ್ಜಿ |
| ಅಂದಾಗಣ್ಣು | – | ಗುಳುಕಾಯಿ, ಚಿಕ್ಕ ಟಮೋಟ |
| ಆಳಿ ಕೊಡಾಕು | – | ಹೇಳಿ ಕೊಡು |
| ಇಪ್ಪಿ | – | ಹೆದರು |
| ಎತ್ತೋಡು | – | ಎತ್ತಿಕೊಂಡು |
| ಒತ್ತೆ | – | ಹೊಗೆ ಉತ್ಪತ್ತಿ ಮಾಡಲು ಸೊಪ್ಪುಗಳನ್ನು ಒಂದಕ್ಕೊಂದು ಜೋಡಿಸಿ ಕಟ್ಟುವುದು. |
| ಕಚ್ಚುಸಕ್ಕು | – | ಹೊತ್ತಿಸಲು/ಹಚ್ಚಿಸಲು |
| ಕಳಲೆ | – | ಎಳೆ ಬಿದಿರು |
| ಕಾಗುರ | – | ಕಾಗೆ |
| ಕಿರಾಲು | – | ಆನೆ ಪಳಗಿಸುವ ಬಿದಿರಿನ ಮನೆ |
| ಕೀದೂ | – | ಕಿತ್ತು |
| ಕೀದೋಡು | – | ಕಿತ್ತುಕೊ |
| ಕುತ್ತಿ | – | ಕುಲ/ಬೆಡಗಿನ ಒಂದು ಪಂಗಡ |
| ಕೂಪು | – | ತೇಗದ ಮರಗಳನ್ನು ನೆಟ್ಟಿರುವ ಜಾಗ |
| ಕೂಳು | – | ಊಟ |
| ಕೊಟ್ಟಿ | – | ಅಳತೆ ಸೇರು |
| ಕೊಂಗಾಪಟ್ಟಿ | – | ಹೊಂಗೆ ನಾರು |

| | | |
|---|---|---|
| ಗಾಸು | – | ಗೇಣು |
| ಗ್ಯಾನ | – | ನೆನಪಿಸಿಕೊಳ್ಳುವುದು |
| ಗಿಣಿ | – | ಗಿಣಿ |
| ಗುಮ್ಮ | – | ಋತುಮತಿಯಾದ ಹೆಣ್ಣನ್ನು ಇರಿಸುವ ಗುಡಿಸಲು |
| ಗುಮ್ಮದಮ್ಮಿ | – | ಋತುಮತಿಯಾದ ಹೆಣ್ಣು |
| ಗುವಲ | – | ಗೂಬೆ |
| ಗೌಸು | – | ಹೊದಿಕೆ |
| ಜನ್ಮ | – | ಹುಟ್ಟು |
| ಜೇನು ಮಲೆ | – | ಜೇನು ಇರುವ ಬೆಟ್ಟ |
| ತಡಸಲು ಹಾಳೆ | – | ತಡಸಲು ಮರದ ಎಲೆ |
| ತಮ್ಮಡಿ | – | ಒಂದು ಪಂಗಡದ ದೇವರ ಕೆಲಸ ಕಾರ್ಯ ನಿರ್ವಹಿಸುವ ಮುಖ್ಯಸ್ಥ |
| ತಳಗಿಕೋತ್ತಿನಾ | – | ಮಲಗಿಕೊಳ್ಳುತ್ತೇನೆ |
| ತಿತ್ತಿನಿ | – | ತಿನ್ನುತ್ತೇನೆ |
| ತುಡೆ ತಟ್ಟಿ | – | ಜೇನು ಹುಟ್ಟು |
| ತೆಗೆದೋಡು | – | ತೆಗೆದುಕೊಂಡು |
| ತೊಳದೋಡು | – | ತೊಳೆದುಕೊಂಡು |
| ಧೂಪ | – | ದೀಪ |
| ನವುಲು | – | ನವಿಲು |
| ನೇಕೆ | – | ತೊಟ್ಟಿಲು (ಸೀರೆಯಿಂದ ಮಾಡಿದ್ದು) |
| ನಂಗ | – | ನನ್ನ |
| ಪಾಳೆ | – | ಅಜ್ಜನ ವಾಸದ ನೆಲೆ |
| ಬಡು | – | ಉಡ |
| ಬಳಸೋಡು | – | ಬಳಸಿಕೊಂಡು |
| ಬಾಸಣಿಕೆ | – | ಬಾಚಣಿಗೆ |

| | | |
|---|---|---|
| ಬೋಡೆ | – | ಸೋರೆ ಬುರುಡೆ |
| ಬೂಡೆಮರ | – | ಬೀಟೆಮರ |
| ಬೋಕ | – | ಕಾಡು ನಾಯಿ |
| ಮಕ್ಕ | – | ಮಕ್ಕಳು |
| ಮಾರನೆ | – | ಬೆಳಿಗ್ಗೆ |
| ಮೇಟಿ | – | ಮನೆಯ ಹಿರಿಯ ವ್ಯಕ್ತಿ |
| ಮದುಮಲೆ | – | ಜೇನು ಇರುವ ಬೆಟ್ಟ |
| ಮರಳೆ ಹಂಬು | – | ಕಾಡು ಮಲ್ಲಿಗೆ ಬಳ್ಳಿ |
| ವೀಸೂ | – | ಬೀಸೂ |
| ಸಕ್ಕಳಗಾದಿ | – | ಆನೆಯ ಬೆನ್ನ ಮೇಲೆ ಹಾಕುವ ಹಾಸಿಗೆ |
| ಸಟ್ಟುಗ | – | ಸೌಟು |
| ಸಣ್ಣೆ | – | ಅಳಿಲು |
| ಸಾಪೆ | – | ಚಾಪೆ |
| ಸಿಪ್ಪು | – | ಚಿಪ್ಪು |
| ಸುಟ್ಟೋಡು | – | ಸುಟ್ಟುಕೊಂಡು |
| ಸೇಬು | – | ಕೆಸವಿನ ದಂಟು |
| ಸೇಲ್ ಸರಗ್ | – | ಸೀರೆ ಸೆರಗು |
| ಹಣಿಗೆ | – | ಸೀರಣಿಗೆ (ಮರದಿಂದ ಮಾಡಿದ ತಲೆಯ ಹೇನು, ಸೀರು ತೆಗೆಯುವ ಸಾಧನ) |
| ಹಾಡಿ | – | ಜೇನುಕುರುಬರು ವಾಸಿಸುವ ಗುಡಿಸಲುಗಳ ಸಮೂಹ (ಹಳ್ಳಿ) |
| ಹಂಬು | – | ಬಳ್ಳಿ |

## ೨. ಪರಾಮಾರ್ಶನ ಗ್ರಂಥಗಳು


— ಅನ್ನಪೂರ್ಣೇಶ್ವರಿ ಎನ್, ೨೦೦೨, *ಮಹಿಳಾ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ*, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು.

— ಇಂದಿರಾ ಆರ್, ೨೦೦೨, *ಮಹಿಳೆ ಸಮಾಜ ಸಂಸ್ಕೃತಿ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಉಮಾಪತಿ ಜಿ.ಇ., (ಲೇ), ೧೯೭೯, *ಪರಿಶಿಷ್ಟ ಬುಡಕಟ್ಟುಗಳು, ಜಾತಿಗಳು*, ನಾಯಕ ಹಾ.ಮಾ.(ಪ್ರ ಸಂ), ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

— ಕೃಷ್ಣಯ್ಯ ಡಿ ಎನ್., ೧೯೭೪ *ಕೊಡಗಿನ ಇತಿಹಾಸ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

— ಕ್ಷೀರಸಾಗರ, ೨೦೦೮, *ಜೇನು ಆಕಾಶದ ಅರಮನೆಯೊ*, ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

— ಕ್ಷೀರಸಾಗರ, ೨೦೧೩, *ಕಾಡಿನ ನಾಡಿ ಮಿಡಿದವರು*, ಆದಿವಾಸಿ ಜೀವನ ಶಿಕ್ಷಣ ಕೇಂದ್ರ, ಶಿರ್ವಾ, ಉಡುಪಿ.

— ಗಣಪತಿ ಬಿ ಡಿ., ೧೯೮೧, *ಕೊಡವರು-ಜೀವನ ಪದ್ಧತಿಗಳು*, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

— ಗಂಗಾಧರ ದೈವಜ್ಞ, ೨೦೦೦, *ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಚಂದ್ರಶೇಖರ ಟಿ ಆರ್, ೧೯೯೯, *ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ಸಾಮಾಜಿಕ ನೆಲೆಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಚಂದ್ರಶೇಖರ ಟಿ ಆರ್, ೨೦೦೦, *ಮಹಿಳೆ: ಆರ್ಥಿಕತೆ, ಅಭಿವೃದ್ಧಿ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಜಗದೀಶ್ ಕೆ ಕೆ, ೨೦೦೮, *ಡುಂಗ್ರಿ ಗರಾಸಿಯಾ*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

— ಜೋಗನ್ ಶಂಕರ್, ೧೯೯೩, *ಗ್ರಾಮ ಸಮಾಜ*, ಜೀವ ಪ್ರಕಾಶನ, ಮೈಸೂರು.

— ನಂಜಮ್ಮಣ್ಣಿ ಎಂ, ೧೯೭೪, *ಸಮಾಜಶಾಸ್ತ್ರ ಪರಿಚಯ ಭಾಗ ೧*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

— ನಾರಾಯಣ ಕಿಕ್ಕೇರಿ, ೨೦೧೧, *ಜೇನುಕುರುಬ ಬುಡಕಟ್ಟು ಜನಾಂಗದ ಅವ್ಯಕ್ತ ಪರಂಪರೆ,* ನ್ಯಾಷನಲ್ ಫಕ್‌ಲೋರ್ ಸಪೋರ್ಟ್ ಸೆಂಟರ್, ಚೆನ್ನೈ

— ನಾರಾಯಣ ಕಿಕ್ಕೇರಿ, ೨೦೧೧, *ಜೇನು ನುಡಿ,* ನ್ಯಾಷನಲ್ ಫಕ್‌ಲೋರ್ ಸಪೋರ್ಟ್ ಸೆಂಟರ್, ಚೆನ್ನೈ

— ನಾರಾಯಣ ಕಿಕ್ಕೇರಿ, ೨೦೧೧, *ಬುಡಕಟ್ಟು ಸಂಸ್ಕೃತಿ,* ಅರಹು ಕುರುಹು, ಮೈಸೂರು.

— ಪಾರ್ವತಮ್ಮ ಸಿ, ೨೦೦೭, *ಆದಿವಾಸಿ ಸಮುದಾಯಗಳ ಅಭಿವೃದ್ಧಿ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಪಾಟೀಲ್ ಸಿ ಡಿ, ರಾಜಗೋಪಾಲ್ ಪಿ ಕೆ, ಸೋಮಶೇಖರ್ ಎಸ್ ರುಳಿ, ಸುರೇಶ್ ವೆಂ ಕುಲಕರ್ಣಿ, *ಸಸ್ಯ ಸಂಪುಟ, ಕರ್ನಾಟಕ ರಾಜ್ಯ ಕೋಶ – ೧,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಪುರುಷೋತ್ತಮ ಬಿಳಿಮಲೆ, ೧೯೯೩, *ಕೊರಗರ ಸಂಸ್ಕೃತಿ,* ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

— ಪ್ರಭಾಕರ ಎ ಎಸ್, ೨೦೦೦, *ಬುಡಕಟ್ಟು ಬದುಕಿನ ಸ್ಥಿತ್ಯಂತರ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಪ್ರಭಾಕರ ಎ ಎಸ್, ೨೦೦೪, *ಬುಡಕಟ್ಟು ಅಭಿವೃದ್ಧಿ ಮಿಮಾಂಸೆ,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಪ್ರಭಾಕರ ಎ ಎಸ್, ೨೦೦೬, *ಆದಿವಾಸಿ ಆಖ್ಯಾನ,* ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ.

— ಪ್ರೀತಿ ಶುಭಚಂದ್ರ, ೨೦೦೨, *ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಬೋರಲಿಂಗಯ್ಯ ಹಿ ಚಿ., ೨೦೦೦, ಬುಡಕಟ್ಟು ದೈವಾರಾಧನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

— ಮಧು ಗುಂಡ್ಲುಪೇಟೆ, ೨೦೦೯, *ಬುಡಕಟ್ಟು ಜನಾಂಗಗಳ ಒಂದು ಅವಲೋಕನ,* ಚಾಮರ ಪ್ರಕಾಶನ, ಮೈಸೂರು.

— ಮೈತ್ರಿ ಕೆ ಎಂ., ೨೦೦೨, *ಬುಡಕಟ್ಟು ಕುಲಕಸುಬುಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ರಾಮಕೃಷ್ಣ ಆರ್, ೨೦೦೭, *ಕರ್ನಾಟಕದ ಬುಡಕಟ್ಟುಗಳು*, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ರಾಮಮನೋಹರ ಲೋಹಿಯಾ, ೧೯೮೯, *ಜಾತಿಪದ್ಧತಿ*, ಪತ್ರಿಕೆ ಪ್ರಕಾಶನ, ಬೆಂಗಳೂರು.
- ಲಕ್ಕಪ್ಪಗೌಡ ಎಚ್ ಜೆ., (ಪ್ರ ಸಂ), ೧೯೯೮, *ಕರ್ನಾಟಕ ಬುಡಕಟ್ಟುಗಳು, ಸಂಪುಟ ೧*, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಲಲಿತ ಎ ಸಿ, ೧೯೯೩, *ಕಾಡುಕುರುಬರ ಮತ್ತು ಜೇನುಕುರುಬರ ಸಂಸ್ಕೃತಿ*, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ವಿಜಯ ಪೂಣಚ್ಚ ತಂಬಂಡ, ೨೦೦೦, *ಆಧುನಿಕ ಕೊಡಗು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವಿಜಯ ಪೂಣಚ್ಚ ತಂಬಂಡ, (ಸಂ), ೨೦೦೨, *ಕೊಡಗು ವಿವರಣೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವೀರಭದ್ರ ನಾಯ್ಕ ಪಿ, ೨೦೧೧, *ಶಿಕ್ಷಣ ವಂಚಿತ ಬುಡಕಟ್ಟು ಮಕ್ಕಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ವೆರಿಯರ್ ಯಲ್ವಿನ್, ೧೯೬೫, *ಆದಿವಾಸಿಗಳ ಹಿತರಕ್ಷಣೆ* (ಅನು: ಕೊಡ್ಕಣಿ ಎಸ್ ಆರ್) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಶಂಕರರಾವ್ ಚ.ನ, ೧೯೯೭, *ಸಾಮಾಜಿಕ ಸಂಶೋಧನೆಯ ಕೈಪಿಡಿ*, ಜೈ ಭಾರತ ಪ್ರಕಾಶನ, ಮಂಗಳೂರು.
- ಶಂಕರರಾವ್ ಚ ನ., ೨೦೦೨, *ಸಮಕಾಲೀನ ಹಿಂದೂ ಸಮಾಜದ ಅಧ್ಯಯನ*, ಜೈ ಭಾರತ ಪ್ರಕಾಶನ, ಮಂಗಳೂರು.
- ಶಂಕರ ರಾವ್ ಚ ನ, ೨೦೧೧, *ಸಮಾಜ ಶಾಸ್ತ್ರ ದರ್ಶನ, ಭಾಗ ೨*, ಜೈ ಭಾರತ್ ಪ್ರಕಾಶನ, ಮಂಗಳೂರು,
- ಶಿವರಾಮ್ ವಿ ಎಸ್, ೧೯೮೯, *ಜನಪದ ವೈದ್ಯ*, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಸವಿತಾ ನಾಯಕ, ೨೦೦೧, *ಬುಡಕಟ್ಟು ಮಹಿಳೆಯರ ಪ್ರದರ್ಶನ ಕಲೆ*, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಸಿದ್ಧಲಿಂಗಯ್ಯ, *ಸದನದ ಭಾಷಣಗಳು,* (ಗಿರಿಜನರ ದುರಂತ ಬದುಕು), ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.
- ಸೂರ್ಯನಾಥ ಕಾಮತ್, (ಸಂ), ೧೯೮೦, *ಕೊಡಗಿನ ಇತಿಹಾಸ: ವಿಚಾರ ಸಂಕಿರಣ,* (ಸ್ಮರಣ ಸಂಚಿಕೆ) ವಿರಾಜಪೇಟೆ.
- ಸೂರ್ಯನಾಥ ಕಾಮತ್, (ಸಂ) ೧೯೮೪, *ಕರ್ನಾಟಕ ರಾಜ್ಯ ಗ್ಯಾಸಟೀಯರ್,* ಕರ್ನಾಟಕ ಸರ್ಕಾರ, ಬೆಂಗಳೂರು.
- ಹನುಮಂತಪ್ಪ ತಾರಿಹಳ್ಳಿ, ೨೦೧೦, *ಕರ್ನಾಟಕದ ಬುಡಕಟ್ಟು ಸಮುದಾಯಗಳು,* ಕನ್ನಡ ವಿಶ್ವವಿದ್ಯಾಲಯ, ಹಂಪಿ


**English Books**


- Ananthakrishna Iyer, L.K., 1998, ,*The Mysore Tribes and Castes,* (The Mysore University, Mysore New Delhi: Mittal Publications), 5 Vol.
- Aziz, Abdul, 2005, *Karnataka Human Development Report*, Government of Karnataka, Bangalore.
- Buchanan F A, 1807, *Journey from Madras through the Countries of Mysore, Canara and Malbar*, Oxford University Press, London.
- Censes Report 2011, Government of Karnataka, Bangalore
- Dumont Lovies 1986, *A South Indian Sub Castes*, Oxford University Press, Delhi.
- Edgar Thurstan & Rangachar K, 1987, *Caste and Tribes of South India,* Asian Educational Services, Delhi.
- Enthoven R E,1922,*Kuruba, Tribes and Castes of Bombay*, Vol. II, Bombay .
- Huffon J K, 1977, *Castes in India*, Oxford University Press, Delhi.
- Luiz A A D,1962, *Kurumbas (Kuruman), Tribes of Kerala*, Bhartiya Adimjati Sewak Sangh, New Delhi.
- Luiz A A D, 1962, *Kurumba (Pulayan), Tribes of Kerala* Bhartiya Adimjati Sewak Sangh, New Delhi.
- Mishra P.K., 1983, *Tribal Mobilisation in Southern India.*

- Nanjundayya, H V, & Iyer L K Ananthakrishna, 1931, *Kuruba, Mysore Tribes & Castes*, Vol. IV, Mysore.
- Nanjundayya, H V, & Iyer L K Ananthakrishna, 1935, *Kuruba, Mysore Tribes & Castes*, Vol.1, Mysore.
- Singh K S (ed),*Tribal Movements in India. Vol.2*, Manohar, New Delhi.
- Shashi S S, 1978, *The Shepherds of India'A Socio-Cultural Study of Sheep and Cattle rearing Communities'*, Sandeep Prakashan, Delhi.
- Sherring M A, 1987, *The Hindu Tribes and Castes*, Oxford University Press, Delhi.
- Sherring M A, 1872, *Kuruba, Hindu Tribes & Castes as represented in Benaras*, Vol.III, Calcutta.
- Sherring M A, 1872, *Kurumba, Hindu Tribes & Castes as represented in Benaras*, Vol.III, Calcutta.
- Thusrston E, 1909, *Kadu Kurumba, Castes & Tribes of Southern India*, Vol. I, Madras.
- Karnataka State Gazetter, 1992, Kodagu District.
- Internet Information: www.google.co.inhttp://www.google.co.in

**ನಿಯತ ಕಾಲಿಕೆಗಳು**

- ಆನಶಕ್ತಿ ಪುರವಾಣಿ (ನಿಯತಕಾಲಿಕೆ) ರಾಜ್ಯ ಸಂಪನ್ಮೂಲಕೇಂದ್ರ ಮೈಸೂರು, ಸಂಪುಟ-೧ ಸಂಚಿಕೆ-೪, ಜನವರಿ ೧೯೯೨,
- ಜಾನಪದ ಅಧ್ಯಯನ ಪತ್ರಿಕೆ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಕ್ಷೀರಸಾಗರ, *ಶೋಷಣೆಯ ಸುಳಿಯಲ್ಲಿ ಗಿರಿಜನ ಜೀತಗಾರರು* (ಲೇಖನ), ಸಂಯುಕ್ತ ಕರ್ನಾಟಕ, ೨೮-೧೦-೧೯೮೬.
- ಬುಡಕಟ್ಟು ಅಧ್ಯಯನ ಪತ್ರಿಕೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಮಹಿಳಾ ಅಧ್ಯಯನ ಪತ್ರಿಕೆ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ೩. ವಕ್ತೃ ಮಾಹಿತಿ

| ಹೆಸರು ಮತ್ತು ವಿಳಾಸ | ವಯಸ್ಸು | ಕಸುಬು | ಭೇಟಿ ಮಾಡಿದ ಸಮಯ |
|---|---|---|---|
| ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ. | | | |
| ಅಕ್ಕಮ್ಮ ಇ/ಹೆ ಅಣ್ಣಯ್ಯ<br>ಮತ್ತಿಗೋಡು | ೫೦ | ಆನೆ ಕೆಲಸ | ೦೮/೦೫/೨೦೧೩ |
| ಅಕ್ಕಮ್ಮ ಇ/ಹೆ ಬಸವ<br>ಗೋಣಿಗದ್ದೆ ಹಾಡಿ, | ೮೫ | ವಯೋವೃದ್ಧರು | ೧೮/೦೪/೨೦೧೪ |
| ಅಣ್ಣಯ್ಯ ಇ/ಮ ಸಣ್ಣಪ್ಪ<br>ಮತ್ತಿಗೋಡು ಆನೆ ಕ್ಯಾಂಪ್, | ೭೦ | ಆನೆ ಮಾವುತ | ೦೮/೦೫/೨೦೧೩ |
| ಅಪ್ಪು ಇ/ಮ ಗಣೇಶ<br>ನಾಗರಹೊಳೆ ಗದ್ದೆ ಹಾಡಿ | ೬೦ | ಕೂಲಿ | ೧೫/೦೫/೨೦೧೪ |
| ಅಂಬಿಕಾ ಇ/ಮ ರಾಜು<br>ಅನಸಗೆ ಪೈಸಾರಿ, | ೨೫ | ನರ್ಸ್ | ೨೪/೦೫/೨೦೧೫ |
| ಆನಂದ<br>ಬೊಮ್ಮಾಡು ಹಾಡಿ | ೭೫ | ವಯಸ್ಸಾಗಿದೆ | ೨೪/೧೦/೨೦೧೩ |
| ಕಡ್ಡಿ ಜೆ ಕೆ, ಇ/ಮ ಮರಿ ಜೆ ಕೆ<br>ಕೊಲ್ಲಿ ಹಾಡಿ, | ೪೫ | ಕೂಲಿ | ೧೮/೧೦/೨೦೧೫ |
| ಕಾಳ ಜೆ ಕೆ ಇ/ಮ ಲೇಟ್ ಕುಮಾರ<br>ನಾಣಚ್ಚಿಗದ್ದೆ ಹಾಡಿ | ೫೦ | ಕೂಲಿ | ೧೯/೦೫/೨೦೧೩ |
| ಕಾಳ ಬಿ ಕೆ,<br>ದೊಡ್ಡರೇಷ್ಮೆ ಹಾಡಿ, | ೫೪ | ಕೂಲಿ | ೨೪/೦೫/೨೦೧೬ |
| ಕಾಳಪ್ಪ ಬಿ ಕೆ,<br>ಕಾರೆಅಡ್ಲು ಹಾಡಿ, | ೫೮ | ಕೂಲಿ | ೨೪/೦೫/೨೦೧೬ |
| ಕುಳ್ಳ ಬಿನ್ ಲಿಂಗ<br>ಫಾರಂ ಹಾಡಿ, | ೫೦ | ಕೂಲಿ | ೨೧/೧೦/೨೦೧೪ |
| ಕೆಂಪ ಇ/ಮ ಕರಿಯ<br>ಕೋಡಂಗೆಹಾಡಿ | ೫೫ | ಕೂಲಿ | ೨೯/೦೪/೨೦೧೪ |
| ಗುಲಾಬಿ ಇ/ಹೆ ವಿಜಯ್<br>ಮಜ್ಜಿಗೆ ಹಳ್ಳ ಹಾಡಿ. | ೩೨ | ಸಮಾಜ ಸೇವೆ | ೧೪/೦೫/೨೦೧೩ |
| ಗೋಪಾಲ್ ಇ/ಮ ಲೇಟ್ ಭೀಮಾ<br>ನಾಣಚ್ಚಿಗದ್ದೆ ಹಾಡಿ | ೫೦ | ಕೂಲಿ | ೨೦/೦೫/೨೦೧೩ |
| ಗೌರಮ್ಮ ಇ/ಹೆ ಲೇಟ್ ಸಲ್ಲ<br>ಮಜ್ಜಿಗೆ ಹಳ್ಳ, | ೭೦ | ವಯೋವೃದ್ಧರು ದಾದಿ | ೧೧/೦೫/೨೦೧೩ |
| ಗೌರಿ ಇ/ಹೆ ರಾಮ<br>ಗೋಣಿಗದ್ದೆ ಹಾಡಿ. | ೬೫ | ವಯೋವೃದ್ಧರು | ೨೦/೦೫/೨೦೧೪ |

| | | | |
|---|---|---|---|
| ಗೌರಿ ಇ/ಹೆ ಲಕ್ಷ್ಮಣ<br>ಕಲ್ಲು ಕೋರೆ ಕಳತ್ತಮಾಡ | ೫೭ | ಕೂಲಿ | ೧೯/೧೦/೨೦೧೩ |
| ಚಂದ್ರಪ್ಪ ಟಿ ಟಿ ಇ/ಮ ತಿಮ್ಮ<br>(ಭಾಗವತ್) ನಾಗರಹೊಳೆ ಗದ್ದೆಹಾಡಿ | ೫೯ | ಕೂಲಿ | ೨೦/೦೫/೨೦೧೪ |
| ಜಿಮ್ಮಿ ಇ/ಹೆ ರಾಮಕೃಷ್ಣ<br>ನಾಣಚ್ಚಿಗದ್ದೆ ಹಾಡಿ | ೨೬ | ಕೂಲಿ | ೧೮/೦೫/೨೦೧೩ |
| ತಿಮ್ಮ ಜೆ ಕೆ ಇ/ಮ ಕೆಂಚ<br>ನಾಗರಹೊಳೆ ಹಾಡಿ, | ೪೮ | ಸಮಾಜ ಸೇವೆ | ೦೨/೦೫/೨೦೧೩ |
| ತಿಮ್ಮಪ್ಪ ಇ/ಮ ಜೆಸಿವಾರ್<br>ನಾಣಚ್ಚಿಗದ್ದೆ ಹಾಡಿ | ೬೦ | ಕೂಲಿ | ೨೫/೦೪/೨೦೧೪ |
| ನೀಲಿ ಇ/ಹೆ ಗಿಣಿಯಾ<br>ನಾಣಚ್ಚಿಗದ್ದೆ ಹಾಡಿ | ೭೫ | ವಯೋವೃದ್ಧರು | ೦೮/೦೫/೨೦೧೪ |
| ಪಾರ್ವತಿ ಇ/ಹೆ ರಾಮ<br>ಕಲ್ಲು ಕೋರೆ ಕಳತ್ತಮಾಡ | ೪೧ | ಕೂಲಿ | ೧೬/೧೦/೨೦೧೩ |
| ಪುಷ್ಪ ಇ/ಹೆ ರವಿ<br>ಕಾರೆಹಡ್ಲು ಹಾಡಿ | ೩೮ | ಸಮಾಜ ಸೇವೆ | ೨೬/೦೫/೨೦೧೫ |
| ಬಸಪ್ಪ<br>ಕೊಡಂಗೆ ಹಾಡಿ | ೬೦ | ಕೂಲಿ | ೨೫/೧೦/೨೦೧೩ |
| ಮರಿ ಇ/ಮ ಸಣ್ಣಪ್ಪ<br>ತಟ್ಟೆಕೆರೆಹಾಡಿ, | ೮೦ | ವಯಸ್ಸಾಗಿದೆ | ೧೮/೧೦/೨೦೧೪ |
| ಮಲ್ಲಿಗೆ ಇ/ಹೆ ರಾಜು<br>ಲೈನ್ ಮನೆ, ಪಾಲತೋಮ ಎಸ್ಟೇಟ್ | ೨೭ | ಕೂಲಿ | ೧೭/೦೫/೨೦೧೫ |
| ಮಿಥುನ್ ಇ/ಮ ರವಿ<br>ನಾಣಚ್ಚಿಗದ್ದೆ ಹಾಡಿ | ೨೩ | ವಿದ್ಯಾರ್ಥಿ | ೧೨/೧೦/೨೦೧೩ |
| ಮುತ್ತ<br>ಕೋಡಂಗೆಹಾಡಿ | ೫೦ | ಕೂಲಿ | ೦೨/೦೫/೨೦೧೪ |
| ಮುತ್ತು ಇ/ಹೆ ಜೆ ಕೆ ಸುಬ್ಬ<br>ನಾಣಚ್ಚಿಗದ್ದೆ ಹಾಡಿ | ೫೫ | ಮನೆಕೆಲಸ | ೨೧/೦೫/೨೦೧೩ |
| ರಾಮ<br>ಮಜ್ಜಿಗೆ ಹಳ್ಳ | ೪೯ | ಆನೆಮಾವುತ | ೨೦/೧೦/೨೦೧೪ |
| ರಾಮಕೃಷ್ಣ ಇ/ಮ ಸಣ್ಣಪ್ಪ ಜೆ ಆರ್<br>ನಾಣಚ್ಚಿಗದ್ದೆ ಹಾಡಿ | ೩೦ | ಕೂಲಿ | ೧೮/೦೫/೨೦೧೩ |
| ರಾಮಿ ಇ/ಹೆ ಲೇಟ್ ಲಿಂಗ<br>ದೊಡ್ಡ ರೇಷ್ಮೆ ಹಾಡಿ, | ೭೫ | ವಯೋವೃದ್ಧರು | ೧೬/೦೪/೨೦೧೪ |

| | | | |
|---|---|---|---|
| ಲಕ್ಷ್ಮಿ ಜೆ ಎಸ್,<br>ಬೊಮ್ಮಾಡು ಸಂಪಿಗೆ ಕೊಲ್ಲಿ, | ೫೩ | ಕೂಲಿ | ೧೭/೦೫/೨೦೧೪ |
| ಲಕ್ಷ್ಮಿ ಇ/ಹೆ ಲೇಟ್ ಸಣ್ಣಪ್ಪ<br>ನಾಗರಹೊಳೆ ಗದ್ದೆ ಹಾಡಿ | ೪೭ | ಕೂಲಿ | ೧೬/೦೫/೨೦೧೪ |
| ಶಾಂತಿ ಇ/ಹೆ ತಿಮ್ಮಪ್ಪ ಜೆ ಜೆ<br>ನಾಣಚ್ಚಿಗದ್ದೆ ಹಾಡಿ | ೬೦ | ಸಂಘಟನೆ | ೨೪/೦೫/೨೦೧೩ |
| ಸರಸು ಇ/ಹೆ ರವಿ<br>ಕೋಡಂಗೆಹಾಡಿ | ೪೨ | ಕೂಲಿ | ೦೪/೦೫/೨೦೧೪ |
| ಸಾವಿತ್ರಿ (ರಾಣಿ) ಇ/ಹೆ ಅಣ್ಣಯ್ಯ<br>ಕೊಳಂಗೇರಿ ಹಾಡಿ | ೪೨ | ಕೂಲಿ | ೦೭/೦೫/೨೦೧೨ |
| ಸೀತಮ್ಮ<br>ಲೈನ್‌ಮನೆ ಪ್ರಕಾಶ್‌ಎಸ್ಟೇಟ್(ನಾಲ್ಕೇರಿ) | ೩೨ | ಕೂಲಿ | ೧೬/೦೫/೨೦೧೫ |
| ಸುಬ್ಬ ಜೆ ಕೆ ಇ/ಮ ಲೇಟ್ ಬೊಳ್ಳು<br>ನಾಣಚ್ಚಿಗದ್ದೆ ಹಾಡಿ | ೬೫ | ಕೂಲಿ | ೨೪/೦೫/೨೦೧೩ |
| ಸುಬ್ಬ ಜೆ ಎಸ್ ಇ/ಮ ಸಣ್ಣು<br>ಕಲ್ಲು ಕೋರೆ ಕಳ್ತಮಾಡ | ೩೫ | ಕೂಲಿ | ೧೪/೧೦/೨೦೧೩ |
| ಸುಶೀಲಾ ಇ/ಹೆ ಅಪ್ಪು<br>ನಾಣಚ್ಚಿಗದ್ದೆ ಹಾಡಿ | ೩೫ | ಕೂಲಿ | ೦೬/೦೫/೨೦೧೪ |
| ಸುಶೀಲ ಇ/ಹೆ ಕೊದಲರಾಜು<br>ನಾಣಚ್ಚಿಗದ್ದೆ ಹಾಡಿ | ೩೦ | ಕೂಲಿ | ೦೮/೦೫/೨೦೧೪ |
| ಸುಶೀಲ ಇ/ಹೆ ಸಣ್ಣಪ್ಪ<br>ಕಲ್ಲು ಕೋರೆ ಕಳ್ತಮಾಡ | ೫೧ | ಕೂಲಿ | ೧೯/೧೦/೨೦೧೩ |
| ಸುಶೀಲ ಇ/ಹೆ ಸಣ್ಣಪ್ಪ<br>ನಾಣಚ್ಚಿಗದ್ದೆ ಹಾಡಿ | ೬೦ | ಕೂಲಿ | ೦೯/೦೫/೨೦೧೪ |
| ಸೋಮಯ್ಯ ಜೆ ಕೆ ಇ/ಮ ಮರಿ<br>ಸಂಪಿಗೆ ಕೊಲ್ಲಿ ಹಾಡಿ. | ೫೦ | ಸಮಾಜ ಸೇವೆ | ೨೪/೧೦/೨೦೧೩ |
| ಹರೀಶ್ ಜೆ ಕೆ ಇ/ಮ ಕರಿಯ<br>ಗೋಣಿಗದ್ದೆ ಹಾಡಿ | ೫೫ | ಕೂಲಿ | ೨೧/೧೦/೨೦೧೩ |
| ಹೊನ್ನಿ ಇ/ಹೆ ಲೇಟ್ ಕುಮಾರ<br>ನಾಣಚ್ಚಿಗದ್ದೆ ಹಾಡಿ | ೮೨ | ವಯೋವೃದ್ಧರು | ೧೯/೦೫/೨೦೧೩ |
| ಹೊನ್ನಿ ಇ/ಹೆ ಮುತ್ತು<br>ದೊಡ್ಡರೇಷ್ಮೆ ಹಾಡಿ | ೮೫ | ವಯೋವೃದ್ಧರು | ೨೧/೦೪/೨೦೧೪ |
| | | | |

| ಸೋಮವಾರಪೇಟೆ ತಾಲೂಕು, ಕೊಡಗು ಜಿಲ್ಲೆ. | | | |
|---|---|---|---|
| ಆನಂದ್ ಜೆ ಕೆ ಇ/ಮ ರಾಮ<br>ಸಿದ್ದಾಪುರ ಹಾಡಿ, | ೬೦ | ಕೂಲಿ | ೨೪/೧೦/೨೦೧೩ |
| ಈರಮ್ಮ<br>ಕಡ್ಲೆಮಕ್ಕಿ | ೩೭ | ಕೂಲಿ | ೦೫/೦೫/೨೦೧೬ |
| ತಮ್ಮಣ್ಣ<br>ಗೋಣಿ ಮಾರೂರು | ೪೫ | ಕೂಲಿ | ೧೦/೦೫/೨೦೧೬ |
| ಧರ್ಮ<br>ಬಾಣಾವರಕಾಡ ಹಾಡಿ | ೪೫ | ಸಂಘಟನೆ | ೦೮/೦೫/೨೦೧೬ |
| ನೀಲಮ್ಮ<br>ಆಲೂರು ಸಿದ್ದಾಪುರ ಹಾಡಿ | ೩೪ | ಆಶಾ ಕಾರ್ಯಕರ್ತೆ | ೨೫/೧೦/೨೦೧೫ |
| ಮಾಸ್ತಿ<br>ಸಜ್ಜಳ್ಳಿ | ೫೫ | ಕೂಲಿ | ೧೨/೦೫/೨೦೧೬ |
| ರಾಜು<br>ಸಿದ್ದಾಪುರ ಹಾಡಿ, | ೨೦ | ಕೂಲಿ | ೨೫/೧೦/೨೦೧೪ |
| ರಾಜು ಜೆ ಪಿ ಇ/ಮ ಪುಟ್ಟ<br>ಮಾವಿನಹಳ್ಳ ಹಾಡಿ | ೬೨ | ಸಮಾಜ ಸೇವೆ | ೦೮/೦೫/೨೦೧೬ |
| ವಿಶಾಲಾಕ್ಷಿ<br>ಕಲ್ಲೂರು ಹಾಡಿ | ೨೪ | ಕೂಲಿ | ೦೧/೦೫/೨೦೧೬ |
| ವಿಷ್ಣು ಇ/ಮ ರಾಜು<br>ಸಿದ್ದಾಪುರ ಹಾಡಿ, | ೧೮ | ಕೂಲಿ | ೨೪/೧೦/೨೦೧೪ |
| ಶೋಭ<br>ಮಾವಿನಹಳ್ಳ ಹಾಡಿ | ೨೫ | ನರ್ಸ್ | ೦೩/೦೫/೨೦೧೬ |
| ಸೀತೆ<br>ನಾಕೂರು ಸಿರಂಗಾಲ | ೨೫ | ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ. | ೦೬/೦೫/೨೦೧೬ |
| ಸೋಮಕ್ಕ<br>ದೊಡ್ಡಮಳ್ತೆ ಹೊಸ ಹಾಡಿ | ೪೧ | ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ | ೨೬/೧೦/೨೦೧೫ |
| ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ. | | | |
| ಚಲುವ<br>ಚಿಲಕಹಳ್ಳಿ ಹಾಡಿ. | ೪೫ | ಕೂಲಿ | ೨೨/೧೦/೨೦೧೫ |
| ಭೀಮ<br>ವೆಂಕಟಗಿರಿ ಹಾಡಿ. | ೪೩ | ಗ್ರಾಮ ಪಂಚಾಯಿತಿ ಉಪಾಧ್ಯಕ್ಷ | ೨೨/೧೦/೨೦೧೫ |

| | | | |
|---|---|---|---|
| **ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ.** | | | |
| ಆಶಾ<br>ನೇರಳ ಕುಪ್ಪೆಹಾಡಿ. | ೨೫ | ಆಶ್ರಮಶಾಲೆ<br>ಅಡುಗೆ ಕೆಲಸ | ೦೮/೦೮/೨೦೧೨ |
| ಜಯಮ್ಮ<br>ನಾಗಪುರ ಹಾಡಿ | ೪೦ | ಕೂಲಿ | ೨೨/೦೫/೨೦೧೨ |
| ಅಕ್ಕಮ್ಮ ಇ/ಹೆ ಬಸವರಾಜು<br>ಆಲದ ಕಟ್ಟೆ ಹಾಡಿ | ೬೦ | ಕೂಲಿ | ೦೨/೦೫/೨೦೧೩ |
| ಕುಮಾರ್ ಎಂ ಟಿ ಇ/ಮ ಲೇ॥ ತಮ್ಮಣ್ಣ<br>ಮರಳುಕಟ್ಟೆ ಹಾಡಿ. | ೩೪ | ಅಧ್ಯಕ್ಷರು,<br>ಲ್ಯಾಂಪ್ಸ್<br>ಹುಣಸೂರು | ೦೫/೦೫/೨೦೧೩ |
| ಜಾನಕಮ್ಮ ಇ/ಹೆ ಲೇ॥ ಕರಿಯ<br>ಅಬ್ಬಳತಿ | ೬೦ | ಸಮಾಜ ಸೇವೆ | ೦೪/೦೫/೨೦೧೩ |
| ಪುಟ್ಟಮ್ಮ ಇ/ಹೆ ಚಿತ್ತಣ್ಣ<br>ಆಲದ ಕಟ್ಟೆ ಹಾಡಿ. | ೮೦ | ವಯೋವೃದ್ಧರು | ೦೧/೦೫/೨೦೧೩ |
| ಬೋಜಮ್ಮ ಇ/ಹೆ ರಾಮಯ್ಯ<br>ಮರಳು ಕಟ್ಟೆ ಎ ಹಾಡಿ. | ೭೩ | ವಯೋವೃದ್ಧರು | ೦೫/೦೫/೨೦೧೩ |
| ಮಮತ ಇ/ಮ ದಿನೇಶ್<br>ಮರಳು ಕಟ್ಟೆ ಹಾಡಿ | ೧೪ | ವಿದ್ಯಾರ್ಥಿ | ೦೫/೦೫/೨೦೧೩ |
| ಯಶೋಧ ಇ/ಹೆ ಲೇಟ್ ತಮ್ಮಣ್ಣ<br>ಮರಳು ಕಟ್ಟೆಹಾಡಿ | ೫೫ | ಕೂಲಿ | ೩೦/೦೪/೨೦೧೩ |
| ವಾಸಂತಿ ಇ/ಹೆ ಎಂ ಟಿ ಕುಮಾರ್<br>ಮರಳು ಕಟ್ಟೆಹಾಡಿ | ೩೫ | ನರ್ಸ್ | ೧೨/೦೫/೨೦೧೩ |
| ವಿನು ಇ/ಮ ಸಣ್ಣಮುತ್ತು<br>ಮರಳು ಕಟ್ಟೆ ಹಾಡಿ | ೨೭ | ವಿದ್ಯಾರ್ಥಿ | ೦೧/೦೫/೨೦೧೩ |
| **ಹುಣಸೂರು ತಾಲೂಕು, ಮೈಸೂರು ಜಿಲ್ಲೆ.** | | | |
| ಆಶಾ<br>ನೇರಳ ಕುಪ್ಪೆಹಾಡಿ, | ೨೫ | ಆಶ್ರಮಶಾಲೆ<br>ಅಡುಗೆ ಕೆಲಸ | ೦೮/೦೮/೨೦೧೨ |
| ಇಂದ್ರಾಮಣಿ<br>ಕೆರೆಹಾಡಿ | ೩೦ | ಕೂಲಿ | ೦೪/೦೫/೨೦೧೩ |
| ಗೆಜ್ಜ<br>ಮಲಗನಕೆರೆ ಹಾಡಿ. | ೪೫ | ಕೂಲಿ | ೨೩/೧೦/೨೦೧೫ |
| ಜಯಮ್ಮ<br>ನಾಗಪುರ ಹಾಡಿ | ೪೦ | ಕೂಲಿ | ೨೨/೦೫/೨೦೧೨ |
| ಪಾರ್ವತಿ<br>ನಾಗಪುರ | ೬೦ | ಕೂಲಿ | ೧೯/೦೫/೨೦೧೨ |

| | | | |
|---|---|---|---|
| ಭೋಜಿ<br>ಭಾರತವಾಡಿ | ೭೦ | ವಯೋವೃದ್ಧರು | ೨೧/೦೫/೨೦೧೨ |
| ರತಿ ಕುಮಾರಿ<br>ನಾಗಪುರಹಾಡಿ | ೨೯ | ಅಂಗನವಾಡಿ ಕಾರ್ಯಕರ್ತೆ | ೧೪/೦೫/೨೦೧೨ |
| ಸರಸ್ವತಿ<br>ವೀರನ ಹೊಸಳ್ಳಿ ಹಾಡಿ | ३೮ | ಮನೆಕೆಲಸ | ೧೪/೦೫/೨೦೧೨ |
| **ಹೆಚ್ ಡಿ ಕೋಟೆ ತಾಲೂಕು, ಮೈಸೂರು ಜಿಲ್ಲೆ.** | | | |
| ಅಮ್ಮಾಣಮ್ಮ ಇ/ಹೆ ಲೇ॥ ಕೋಸಪ್ಪ<br>ಮೇಟಕುಪ್ಪೆ ಹಾಡಿ | ೭೦ | ಕೂಲಿ | ೨೫/೦೪/೨೦೧೨ |
| ಅಮ್ಮಾನಿ ಇ/ಹೆ ದೊಡ್ಡಕುಳ್ಳ<br>ಮೆಟಕುಪ್ಪೆ ಹಾಡಿ | ೪೫ | ಮನೆಕೆಲಸ | ೨೪/೦೪/೨೦೧೨ |
| ಇಂದ್ರ<br>ಮಜ್ಜನಕುಪ್ಪೆ ಹಾಡಿ. | ೨೫ | ಕೂಲಿ | ೧೯/೦೪/೨೦೧೫ |
| ಕಾಳಪ್ಪ ಇ/ಮ ಲೇ॥ ಬಂಗಳ್ಳಿ<br>ಮೇಟಕುಪ್ಪೆ ಹಾಡಿ | ೬೦ | ಕೂಲಿ | ೨೪/೦೪/೨೦೧೨ |
| ಕೆವುಡಮ್ಮ ಇ/ಹೆ ಲೇ॥ ಜಡಿಯ<br>ದಮ್ಮನ ಕಟ್ಟೆ ಹಾಡಿ | ೬೪ | ವಯೋವೃದ್ಧರು | ೦೬/೦೫/೨೦೧೨ |
| ಚಿಕ್ಕಯ್ಯ ಇ/ಮ ಕಾಳ ಚಿಕ್ಕನ ಕಾಳ<br>ಕೆಬ್ಬೆಪುರ ಹಾಡಿ | ೭೦ | ಸಮಾಜ ಸೇವೆ | ೧೬/೧೨/೨೦೧೨ |
| ತಾಯಮ್ಮ ಇ/ಹೆ ನಾಗ<br>ಎಲೆಹುಂಡಿ (ಚಿಕ್ಕಕಾಳೇಗೌಡನ ಪುರ) | ೪೮ | ಕೂಲಿ | ೨೧/೦೪/೨೦೧೫ |
| ನಾಗಮ್ಮ<br>ಮೇಟಕುಪ್ಪೆ ಹಾಡಿ | ೪೦ | ಕೂಲಿ | ೨೬/೦೪/೨೦೧೨ |
| ನಿಂಗಮ್ಮ ಇ/ಹೆ ನಾಗರಾಜು<br>ಸೊಳ್ಳೆಪುರ ಹಾಡಿ | ೪೦ | ಸಮಾಜ ಸೇವೆ | ೦೧/೧೨/೨೦೧೨ |
| ನೂರಾಳಿ ಇ/ಹೆ ಕಾಳಿಂಗ<br>ಕೆರೆಹಾಡಿ | ೮೦ | ವಯೋವೃದ್ಧರು | ೦೧/೦೫/೨೦೧೨ |
| ಪ್ರಭು ಇ/ಮ ದೊಡ್ಡರಾಮ<br>ಬಸವನಗಿರಿ ಹಾಡಿ | ೨೨ | ಅರಣ್ಯ ಇಲಾಖೆ ಡ್ರೈವರ್ | ೦೬/೦೭/೨೦೧೨ |
| ಪುಟ್ಟಪ್ಪ<br>ಮೇಟಿಕುಪ್ಪೆ ಹಾಡಿ | ೬೦ | ಕೂಲಿ | ೨೫/೦೪/೨೦೧೨ |
| ಪುಟ್ಟಮ್ಮ ಇ/ಹೆ ಲೇ॥ ಲಿಂಗ<br>ಮೇಟಿಕುಪ್ಪೆ ಹಾಡಿ | ೬೦ | ಕೂಲಿ | ೨೫/೦೪/೨೦೧೨ |
| ಪುಟ್ಟಮ್ಮ ಇ/ಹೆ ನಾಗರಾಜು | ३೧ | ಗ್ರಾಮ | ೦೪/೦೫/೨೦೧೫ |

| | | | |
|---|---|---|---|
| ಪೆಂಜಳ್ಳಿ | | ಪಂಚಾಯಿತಿ ಸದಸ್ಯರು, | |
| ಪುಟ್ಟಮ್ಮ ಇ/ಹೆ ಷಣ್ಮುಖ ಸೀಗೂರು ಹಾಡಿ | ೩೫ | ಕೂಲಿ | ೦೩/೦೫/೨೦೧೨ |
| ಪುಟ್ಟಮ್ಮ ವಡ್ಡರಗುಡಿ ಹಾಡಿ. | ೩೦ | ಗ್ರಾಮ ಪಂಚಾಯಿತಿ ಅಧ್ಯಕ್ಷೆ | ೨೬/೧೦/೨೦೧೪ |
| ಬಸಮ್ಮ ಇ/ಹೆ ಲೇ॥ ತಿಮ್ಮ ಮೇಟಕುಪ್ಪೆ ಹಾಡಿ | ೮೦ | ವಯೋವೃದ್ಧರು | ೨೧/೦೫/೨೦೧೨ |
| ಭಾಗ್ಯ ಇ/ಹೆ ತಿಮ್ಮ ದಮ್ಮನಕಟ್ಟೆ ಹಾಡಿ. | ೨೮ | ಗ್ರಾಮ ಪಂಚಾಯಿತಿ ಸದಸ್ಯರು | ೦೬/೦೫/೨೦೧೫ |
| ಭಾಸ್ಕರ್ ಇ/ಮ ಬೋಳ ಸೊಳ್ಳೆಪುರ ಹಾಡಿ. | ೩೫ | ವಾಚರ್ | ೦೬/೦೬/೨೦೧೨ |
| ಮಹದೇವಮ್ಮ ಇ/ಹೆ ಲೇ॥ ರಾಜಯ್ಯ ಸೋನಳ್ಳಿ | ೩೩ | ಕೂಲಿ | ೨೯/೦೪/೨೦೧೫ |
| ಮೀನಾಕ್ಷಿ ಇ/ಹೆ ಚಿನ್ನಪ್ಪ ಜೆ ಎಂ ಹಳ್ಳಿ. | ೩೨ | ಗ್ರಾಮ ಪಂಚಾಯಿತಿ. ಸದಸ್ಯರು | ೦೩/೦೫/೨೦೧೫ |
| ಯಡಚ. ಇ/ಮ ದಾಸ ಚಾಮಿಯಾನಹುಂಡಿ "ಎ" ಹಾಡಿ. | ೪೩ | ಕೂಲಿ | ೧೩/೦೫/೨೦೧೫ |
| ರಾಜು ಬಿ ಇ/ಮ ಲೇ॥ ಬಸವ ದಮ್ಮನಕಟ್ಟೆ ಹಾಡಿ | ೬೦ | ಕೂಲಿ | ೦೬/೦೫/೨೦೧೨ |
| ಶಾಂತಿ ಇ/ಹೆ ಶಿವಣ್ಣ ಪ್ರಭಾನಗರ | ೩೨ | ಕೂಲಿ | ೨೬/೦೪/೨೦೧೫ |
| ಶಾಂತಿ ಇ/ಹೆ ಮಾದಯ್ಯ ಚಾಮಿಯಾನಹುಂಡಿ "ಎ" ಹಾಡಿ | ೨೪ | ಕೂಲಿ | ೧೩/೦೫/೨೦೧೫ |
| ಸೋಮ್ಮಣ್ಣ ಇ/ಮ ಲೇ॥ ಕುನ್ನಯ್ಯ ಮೊತ್ತಹಾಡಿ | ೬೦ | ಸಮಾಜ ಸೇವೆ | ೦೨/೧೨/೨೦೧೨ |

ಈ ಮೇಲಿನ ವಕ್ತೃಗಳನ್ನು ಮೊದಲ ಬಾರಿಗೆ ಭೇಟಿ ಮಾಡಿದ ದಿನಾಂಕವನ್ನು ಮಾತ್ರ ನಮೂದಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಒಂದಕ್ಕಿಂತ ಹೆಚ್ಚು ಬಾರಿ ಭೇಟಿಮಾಡಲಾಗಿರುತ್ತದೆ.

## ಭೇಟಿ ಮಾಡಿ ಚರ್ಚಿಸಿದ ವಿದ್ವಾಂಸರು

**ಕಾವೇರ ಬಿ,** ಪ್ರಧಾನ ಕಾರ್ಯದರ್ಶಿ, ಆದಿವಾಸಿ ರಕ್ಷಣಾ ಪರಿಷತ್, ಮೈಸೂರು.

**ಚಿಕ್ಕೇರಿ ನಾರಾಯಣ,** ಸಿಐಐಎಲ್, ಮೈಸೂರು. ದೂ ಸಂ: ೯೪೪೮೯ ೧೦೦೮೬

**ಕೃಷ್ಣಮೂರ್ತಿ ಕೆ ವಿ,** ವಿಶ್ರಾಂತ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು. ದೂ ಸಂ: ೯೪೪೮೦ ೪೯೪೭೩.

**ಕ್ಷೀರ ಸಾಗರ,** ಫೆಡೀನಾ ವಿಕಾಸ ಸಂಸ್ಥೆ ಹೆಚ್.ಡಿ.ಕೋಟೆ ತಾಲೂಕು, ಮೈಸೂರು ಜಿಲ್ಲೆ. ದೂ ಸಂ: ೯೪೮೧೩ ೨೧೨೪೬

**ಜಕ್ಕಾ ಪಾರ್ಥಸಾರಥಿ,** ಉದಕ ಮಂಡಲ, ಮಾನವ ಶಾಸ್ತ್ರಜ್ಞರು, ದೂ ಸಂ: ೯೪೪೩೨ ೫೭೬೩೮

**ತಮ್ಮಯ್ಯ,** ಕವನ ಸಂಸ್ಥೆ, ಗೋಣಿಕೊಪ್ಪ, ಕೊಡಗು ಜಿಲ್ಲೆ.

**ದಯಾನಂದ್,** ಮೈರಡ ಸಂಸ್ಥೆ, ನಿರ್ದೇಶಕರು, ಹ್ಯಾಂಡ್‌ಪೋಸ್ಟ್, ಹೆಚ್.ಡಿ.ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ದೇಶಮಾನೆ ಸಮತಾ ಬಿ,** ಪ್ರಾಧ್ಯಾಪಕರು ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ. ದೂ ಸಂ: ೯೮೮೦೬ ೦೪೧೧೪

**ಪೊನ್ನಮ್ಮ,** ಅಡುಗೆ ಸಿಬ್ಬಂದಿ, ಆಶ್ರಮ ಶಾಲೆ ತಿತಿಮತಿ, ಕೊಡಗು ಜಿಲ್ಲೆ. ದೂ ಸಂ: ೯೯೪೫೫ ೧೧೫೦೬

**ಬಸವನಗೌಡ ಟಿ ಟಿ,** ನಿರ್ದೇಶಕರು, ಕರ್ನಾಟಕ ಗಿರಿಜನ ಸಂಶೋಧನಾ ಸಂಸ್ಥೆ, ಮೈಸೂರು. ದೂ ಸಂ: ೯೮೪೪೩ ೬೮೨೫೦

**ರಾಯ್ ಡೇವಿಡ್,** ಕಾರ್ಡ್ ಸಂಸ್ಥೆ, ಕುಶಾಲನಗರ, ಕೊಡಗು ಜಿಲ್ಲೆ.

**ವತ್ಸಲಾ,** ವಿವೇಕಾನಂದ ಯೂತ್‌ಮೂವ್‌ಮೆಂಟ್, ಸರಗೂರು, ಹೆಚ್.ಡಿ.ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶಾಂತಿ,** ಜೇನುಕುರುಬ ಸಮುದಾಯದ ಬಗ್ಗೆ ಸಂಶೋಧನೆ ಕೈಗೊಂಡ ಮೊದಲ ಮಹಿಳೆ

**ಶೀಲಾವತಿ,** ಮುಖ್ಯಶಿಕ್ಷಕಿ ಗಿರಿಜನ ಆಶ್ರಮಶಾಲೆ, ವೀರನ ಹೊಸಳ್ಳಿಹಾಡಿ, ಹುಣಸೂರುತಾಲೂಕು, ಮೈಸೂರು ಜಿಲ್ಲೆ.

**ಶ್ರೀಕಾಂತ್,** ಡೀಡ್ ಸಂಸ್ಥೆ ಹುಣಸೂರು ತಾಲೂಕು, ಮೈಸೂರು ಜಿಲ್ಲೆ. ದೂ ಸಂ: ೯೪೪೮೧ ೩೫೨೫೬

**ಶ್ರೀಧರ್,** ಬಿ.ಎ.ಎಂ.ಎಸ್, ಭುವಿಆಯುರ್ವೇಧ ಆಸ್ಪತ್ರೆ, ಕುವೆಂಪು ನಗರ, ತುಮಕೂರು.

**ಸೋಮಣ್ಣ,** ಬುಡಕಟ್ಟು ಸಮುದಾಯದ ಸಂಘಟಕರು, ಮೊತ್ತಹಾಡಿ, ಹೆಚ್ ಡಿ ಕೋಟೆತಾಲೂಕು, ಮೈಸೂರು ಜಿಲ್ಲೆ. ದೂ ಸಂ: ೯೯೦೧೮ ೨೦೯೭೨

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ- ೫೮೩ ೨೭೬

## ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ

## ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ

೧ ಸಾಮಾನ್ಯ ಮಾಹಿತಿ

ಎ. ಸಮೀಕ್ಷೆಯ ದಿನಾಂಕ

ಬಿ. ಬುಡಕಟ್ಟು

ಸಿ. ಬೆಡಗು:

ಡಿ. ಮಾತೃಭಾಷೆ

ಇ. ಮನೆದೇವರು:

ಎಫ್. ಕುಲಚಿಹ್ನೆ

ಜಿ. ಮನೆತನದ ಹೆಸರು

ಎಚ್. ಗ್ರಾಮ/ ಪಟ್ಟಣ/ ನಗರ

ಐ. ವಾರ್ಡ್

ಜೆ. ಪಂಚಾಯತಿ

ಕೆ. ಮನೆ ಸಂಖ್ಯೆ:

ಎಲ್. ತಾಲೂಕು/ ಮಂಡಲ

ಎಂ. ಜಿಲ್ಲೆ ರಾಜ್ಯ :

ಎನ್. ಮಾತನಾಡುವ ಇತರ ಭಾಷೆಗಳು:

ಒ. ಭೂಹಿಡುವಳಿ (ಎಕರೆಗಳಲ್ಲಿ)

1. ಒಣ : 2. ನೀರಾವರಿ

ಪಿ. ನಿವೇಶನ, ಮನೆ ಇದೆ:

ಕ್ಯೂ ನಿವೇಶನ ಇದೆ, ಮನೆ ಇಲ್ಲ:

ಆರ್. ನಿವೇಶನ : ಅ. ಸ್ವಂತದ್ದು ಆ. ಸರ್ಕಾರದ್ದು

ಎಸ್. ಮನೆ : ಅ. ಸ್ವಂತದ್ದು ಆ. ಸರ್ಕಾರದ್ದು

ಟಿ. ವಿದ್ಯುತ್ : ಅ. ಸ್ವಂತದ್ದು ಆ. ಸರ್ಕಾರದ್ದು

II. ವೈಯಕ್ತಿಕ ಮಾಹಿತಿ

| ಕ್ರ.ಸಂ | ಕುಟುಂಬದ ಸದಸ್ಯರ ಹೆಸರುಗಳು | ಸಂಬಂಧ | ಲಿಂಗ | ವಯಸ್ಸು | ಶಿಕ್ಷಣ | ವೈವಾಹಿಕ ಸ್ಥಾನಮಾನ | ಕಸುಬು | ಕುಟುಂಬ ಯೋಜನೆ | ಪಾರಂಪರಿಕ ಉಡುಪು | ಸರ್ಕಾರಿ ಸೌಲಭ್ಯಗಳು ( ) | | | |
|---|---|---|---|---|---|---|---|---|---|---|---|---|---|
| | | | | | | | | | | ಓಟಿನಕಾರ್ಡ್ | ವಿಧವಾ ವೇತನ | ಅಂಗವಿಕಲ | ಶಿಷ್ಯವೇತನ |
| ೧ | | | | | | | | | | | | | |
| ೨ | | | | | | | | | | | | | |
| ೩ | | | | | | | | | | | | | |
| ೪ | | | | | | | | | | | | | |
| ೫ | | | | | | | | | | | | | |
| ೬ | | | | | | | | | | | | | |
| ೭ | | | | | | | | | | | | | |
| ೮ | | | | | | | | | | | | | |
| ೯ | | | | | | | | | | | | | |
| ೧೦ | | | | | | | | | | | | | |
| ೧೧ | | | | | | | | | | | | | |
| ೧೨ | | | | | | | | | | | | | |

ಯು. ಜಾನುವಾರುಗಳು: ಸಂಖ್ಯೆಗಳಲ್ಲಿ

೧ ಎತ್ತು, ಹೋರಿ :

೨ ಆಕಳು, ಕರು

೩ ಎಮ್ಮೆ, ಕೋಣ :

೪ ಕುರಿ :

೫ ಮೇಕೆ :

೬ ಕೋಳಿ

ವಿ. ಮನೆ ವಿವರ

೧ ಗುಡಿಸಲು

೨ ಟಿನ್‌ಮನೆ

೩ ದಾಬಾ ಮಾಳಿಗೆ

೪ ಆರ್.ಸಿ.ಸಿ

೫ ಹಂಚಿನ ಮನೆ

೬ ಆಶ್ರಯ ಮನೆ

೭ ಬಾಡಿಗೆ ಮನೆ

ಡಬ್ಲ್ಯೂ ಇತರೆ ಸೌಲಭ್ಯಗಳು

೧ ಪಡಿತರ ಚೀಟಿ

೨ ಗ್ಯಾಸ್

೩ ನಳ್ಳಿ

೪ ಶೌಚಾಲಯ

೫ ಸ್ನಾನಗೃಹ

೬ ಸೈಕಲ್

೭ ರೇಡಿಯೋ

೮ ಟೇಪ್ ರೆಕಾರ್ಡರ್

೯ ಟಿ.ವಿ

೧೦ ದೂರವಾಣಿ

೧೧ ಮೋಟರ್ ಸೈಕಲ್

೧೨ ಇತರೆ

ಮಾರ್ಗದರ್ಶಕರು

ಡಾ ಕೆ ಎಂ ಮೇತ್ರಿ, ಪ್ರಾಧ್ಯಾಪಕರು

ಸಂಶೋಧಕರು

ಟಿ ಆರ್ ರಾಧಾಮಣಿ

ಮಾಹಿತಿ ದಾಖಲೆದಾರರ ಸಹಿ ಮತ್ತು ವಿಳಾಸ

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬುಡಕಟ್ಟು ಅಧ್ಯಯನ ವಿಭಾಗ, ಸಮಾಜ ವಿಜ್ಞಾನಗಳ ನಿಕಾಯ, ವಿದ್ಯಾರಣ್ಯ೫೮೩ ೨೭೬

## ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ

## ಗ್ರಾಮ / ಹಾಡಿ ವಿವರ ಅಧ್ಯಯನ ಪ್ರಶ್ನಾವಳಿ

| | | |
|---|---|---|
| ೧. | ಹಾಡಿಯ ಹೆಸರು : | |
| ೨. | ತಾಲೂಕು : | ೩. ಜಿಲ್ಲೆ : |
| ೪. | ಒಟ್ಟು ಕುಟುಂಬಗಳ ಸಂಖ್ಯೆ : | ೫. ಜನಸಂಖ್ಯೆ : |
| ೬. | ಜೇನುಕುರುಬ ಕುಟುಂಬಗಳ ಸಂಖ್ಯೆ : | ೭ ಜನಸಂಖ್ಯೆ : |
| ೮. | ಜೇನು ಕುರುಬರನ್ನು ಹೊರತು ಪಡಿಸಿ ಉಳಿದ ಸಮುದಾಯಗಳು & ಕುಟುಂಬಗಳ ಸಂಖ್ಯೆ<br>೧. ೨. ೩. | |
| ೯. | ಹಾಡಿ ಇರುವುದು.<br>೧. ಕಾಡಿನ ಒಳಗೆ೨. ಕಾಡಂಚಿನಲ್ಲಿ೩. ಕಾಡಿನ ಹೊರಗೆ | |
| ೧೦. | ಸಾಂಸ್ಕೃತಿಕ ಆಚರಣೆಗಳು, ಹಬ್ಬ ಹರಿದಿನಗಳ ಆಚರಣೆ ಉಳಿದಿವೆಯೇ?ಹೌದು / ಇಲ್ಲ | |
| ೧೧. | ಕಳೆದುಕೊಂಡಿರುವ ಆಚರಣೆಗಳು, ಹಬ್ಬ ಹರಿದಿನಗಳು<br>೧. ೨. ೩. | |
| ೧೨. | ಪಾರಂಪರಿಕ ವೃತ್ತಿ ಮಾಡುವವರ ಸಂಖ್ಯೆ | |
| ೧೩. | ಮಾಡುವ ಇನ್ನಿತರೆ ವೃತ್ತಿಗಳು<br>೧. ೨. ೩. | |
| ೧೪. | ಸ್ವಂತ ನಿವೇಶನ ಹೊಂದಿರುವ ಜೇನುಕುರುಬ ಕುಟುಂಬಗಳ ಸಂಖ್ಯೆ . | |
| ೧೫. | ಸ್ವಂತ ಮನೆ ಹೊಂದಿರುವ ಜೇನುಕುರುಬ ಕುಟುಂಬಗಳ ಸಂಖ್ಯೆ | |
| ೧೬. | ಸ್ವಂತ ನಿವೇಶನ ಮತ್ತು ಮನೆ ಇಲ್ಲದಿರುವ ಜೇನುಕುರುಬ ಕುಟುಂಬಗಳ ಸಂಖ್ಯೆ . | |
| ೧೭. | ಅರಣ್ಯ ಹಕ್ಕು ಕಾಯಿದೆಯಡಿಯಲ್ಲಿ ಹಕ್ಕುಪತ್ರ ಹೊಂದಿರುವ ಜೇನುಕುರುಬ ಕುಟುಂಬಗಳ ಸಂಖ್ಯೆ . | |
| ೧೮. | ಅರಣ್ಯ ಹಕ್ಕು ಕಾಯಿದೆಯಡಿಯಲ್ಲಿ ಹಕ್ಕುಪತ್ರ ಪಡೆಯದಿರುವ ಜೇನುಕುರುಬ ಕುಟುಂಬಗಳ ಸಂಖ್ಯೆ | |
| ೧೯. | ಅಂತರ್ಜಾತಿ ವಿವಾಹವಾದ ಜೇನುಕುರುಬ ಕುಟುಂಬಗಳ ಸಂಖ್ಯೆ<br>ಯಾವ ಸಮುದಾಯಗಳೊಂದಿಗೆ<br>೧. ೨. ೩. | |

| | |
|---|---|
| ೨೦. | **ಜೇನುಕುರುಬ ಸರ್ಕಾರಿ ನೌಕರರ ವಿವರಗಳು**<br>ಹೆಸರುವೃತ್ತಿ<br>೧.<br>೨.<br>೩.<br>೪.<br>೫.<br>೬. |
| ೨೧. | **ಜೇನುಕುರುಬರ ವಿದ್ಯಾಭ್ಯಾಸ ವಿವರ**<br>೧. ಎಸ್.ಎಸ್.ಎಲ್.ಸಿ ಮುಗಿಸಿರುವವರುಗಂಡು ಹೆಣ್ಣು<br>೨. ಪದವಿ ಮುಗಿಸಿರುವವರುಗಂಡು ಹೆಣ್ಣು<br>೩. ಉನ್ನತ ಶಿಕ್ಷಣ ಮುಗಿಸಿರುವವರುಗಂಡು ಹೆಣ್ಣು |

**ಮಾಹಿತಿದಾರರು / ಹಾಡಿಯ ಪ್ರಮುಖರ ವಿವರ**

ಹೆಸರು ಸಂಪರ್ಕ ಸಂಖ್ಯೆ ಸಹಿ

೧.

೨.

೩.

**ಡಾ. ಕೆ.ಎಂ.ಮೇತ್ರಿ**
**ಮಾರ್ಗದರ್ಶಕರು**

**ರಾಧಾಮಣಿ ಟಿ ಆರ್**
**ಸಂಶೋಧಕರು**

# ಕನ್ನಡ ವಿಶ್ವವಿದ್ಯಾಲಯ, ಹಂಪಿ

### ಬುಡಕಟ್ಟು ಅಧ್ಯಯನ ವಿಭಾಗ, ಸಮಾಜ ವಿಜ್ಞಾನಗಳ ನಿಕಾಯ, ವಿದ್ಯಾರಣ್ಯ೫೮೩ ೨೭೬

## ಜೇನುಕುರುಬ ಆದಿಮ ಬುಡಕಟ್ಟಿನ ಮಹಿಳಾ ಪಾರಂಪರಿಕ ಜ್ಞಾನಾಧ್ಯಯನ

## ವ್ಯಕ್ತಿ ಅಧ್ಯಯನ ಪ್ರಶ್ನಾವಳಿ

**ಹಾಡಿ ಹೆಸರು** ..............................**ತಾಲೂಕು** .............................. **ಜಿಲ್ಲೆ** ....................................

೧. ಹೆಸರು ಮತ್ತುವಿಳಾಸ:

೨. ವಯಸ್ಸು:

೩. ತವರು ಮನೆ (ವಾಸಸ್ಥಳ):

೪. ಗಂಡನ ಮನೆ:

- ಗಂಡನ ಕುಲ:

೫. ಉದ್ಯೋಗ:

೬. ಹಿಂದಿನ ಜೀವನ ಚರಿತ್ರೆ(ಮದುವೆಯಾದ ದಿನದಿಂದ ಇಲ್ಲಿಯವರೆಗೂ)

೭. ಗೆಲುವಿನ ಮಾದರಿಗಳು

೮. ಭವಿಷ್ಯದ ಯೋಜನೆಗಳು

- ಮಹಿಳೆಯರ ಪಾತ್ರ

೯. ಮನೆಯಲ್ಲಿ ನಿರ್ವಹಿಸುವ ಕೆಲಸಗಳು

೧೦. ಓದುತ್ತಿರುವ ಹೆಣ್ಣುಮಕ್ಕಳ ಮಾಹಿತಿ

೧೧. ಅಡುಗೆ ಕೆಲಸ ಮತ್ತು ಅರಣ್ಯ ಉತ್ಪನ್ನಗಳ ಸಂಗ್ರಹಿಸುವಿಕೆ

೧೨. ಆರ್ಥಿಕ ಸಂಘಟನೆಗಳು

೧೩. ಸಾಮಾಜಿಕ ಸಂಘಟನೆಗಳು (ಸಾಂಪ್ರದಾಯಕತೆಯಿಂದ ಆಧುನಿಕತೆವರೆಗೆ)

೧೪. ಜೀವನ ಚಕ್ರದ ಆಚರಣೆಗಳು

- ಗರ್ಭಿಣಿಯರ ಸ್ಥಿತಿ
- ಗರ್ಭಧಾರಣೆ
- ಮಗುವಿನ ಆರೈಕೆ
- ನಾಮಕರಣ ಸಮಾರಂಭ
- ವಯಸ್ಕರಾಗುವಿಕೆ (ಋತುಮತಿ)

- ಮದುವೆ
- ಸಾವು

೧೫. ರಾಜಕೀಯ ಸಂಘಟನೆಗಳು

೧೬. ಸಮುದಾಯದ ಒಳಗೆ-ಹೊರಗೆ ನಡೆಸುವ ಆಚರಣೆಗಳು

೧೭. ಸಂಜಿಕೆಯ ವ್ಯವಸ್ಥೆ-ಧರ್ಮ

೧೮. ಭವಿಷ್ಯದ ಯೋಜನೆಗಳು-ಅಭಿವೃದ್ಧಿಯ ಯೋಜನೆಗಳು ಸಾಕ್ಷರತೆ, ಮಾರುಕಟ್ಟೆ, ಸ್ವಉದ್ಯೋಗಗಳು

- ಸರ್ಕಾರದ ಪಾತ್ರ
- ಸರ್ಕಾರೇತರ ಸಂಸ್ಥೆಗಳ ಪಾತ್ರ

೧೯. ವಿಶ್ವದ ದೃಷ್ಟಿ ಭವಿಷ್ಯದ ದೃಷ್ಟಿ

೨೦. ಸಮುದಾಯದ ಉಳಿಯುವಿಕೆ

೨೧. ಗೃಹಿಣಿ

೨೨. ಉದ್ಯೋಗಸ್ಥರು/ಸಾಕ್ಷರರು

೨೩. ಆಯಾ (ದಾದಿಯರು)

೨೪. ಬೇಟೆಗಾರಿಕೆ

೨೫. ನಾಯಕಿಯರು/ರಾಜಕಾರಣಿಗಳು

೨೬. ವೈದ್ಯಪದ್ಧತಿ ಗೊತ್ತಿರುವ ಮಹಿಳೆ

೨೭. ವಿಧವೆ ಜೀವನ/ವಿಚ್ಛೇದನೆ

೨೮. ಕಲೆಗಾರರು

೨೯. ವಿಧಿ ಆಚರಣೆಗಳು

೩೦. ನೃತ್ಯಗಾರರು

೩೧. ಹಾಡುಗಾರರು

೩೨. ಕಥೆ ಹೇಳುವವರು

೩೩. ಕೃಷಿ ಕಾರ್ಯ ಮಾಡುವವರು

೩೪. ಅರ್ಚಕರು/ದೇವಸ್ಥಾನದ ಮಹಿಳೆಯರು

೩೫. ಕ್ರೀಡೆಯ ಆಸಕ್ತಿ ಹೊಂದಿದ ಮಹಿಳೆಯರು (ಅವರ ಸಾಧನೆಗಳು)

ಮಾಹಿತಿದಾರರಸಹಿ. ಸಂಶೋಧಕಿಯ ಸಹಿ

## List of SCHEDULED TRIBES in KARNATAKA

1. Adiyan
2. Barda
3. Bavacha, Bamcha
4. Bhil, Bhil Garasia, Dholi Bhil, Dungri Bhil, Dungri Garasia, Mewasi Bhil, Rawal Bhil, Tadvi Bhil, Bhagalia, Bhilala, Pawra, Vasava, Vasave
5. Chenchu, Chenchwar
6. Chodhara
7. Dubla, Talavia, Halpati
8. Gamit, Gamta, Gavit, Mavchi, Padvi, Valvi
9. Gond, Naikpod, Rajgond
10. Gowdalu
11. Hakkipikki
12. Hasalaru
13. Irular
14. Iruliga
15. Jenu Kuruba
16. Kadu Kuruba
17. Kammara (in South Canara, Udupi districts and Kollegal taluk of Chamarajanagara district)
18. Kanivan, Kanyan (in Kollegal taluk of Chamarajanagara district)
19. Kathodi, Katkari, Dhor Kathodi, Dhor Katkari, Son Kathodi, Son Katkari
20. Kattunayakan
21. Kokna, Kokni, Kukna
22. Koli Dhor, Tokre Koli, Kolcha, Kolgha
23. Konda Kapus
24. Koraga
25. Kota
26. Koya, Bhine Koya, Rajkoya
27. Kudiyam Melekudi
28. Kuruba (in Coorg district)
29. Kurumans
30. Maha Malasar
31. Malaikudi
32. Malasar
33. Malayekandi
34. Maleru
35. Maratha (in Coorg district)
36. Marati (in South Canara, Udupi district)
37. Meda
38. Naikda, Nayaka, Chollivala Nayaka, Kapadia Nayaka, Mota Nayaka, Nana Nayaka, Naik Nayak, Beda, Bedar, and Valmiki
39. Palliyan
40. Paniyan
41. Pardhi, Advichincher, Phanse Pardhi
42. Patelia
43. Rathawa
44. Sholaga
45. Soligaru
46. Toda
47. Varli
48. Vitolia, kotwalia, barodia
49. Yerava
50. Siddi (in Uttar Kannada district)

# ಕರ್ನಾಟಕ ಪರಿಶಿಷ್ಟ ವರ್ಗಗಳ ಜನಸಂಖ್ಯೆ (೨೦೧೧)

| ಕ್ರಸಂ. | ಬುಡಕಟ್ಟಿನ ಹೆಸರು | ಪ್ರದೇಶ | ಶೇಕಡ | ಒಟ್ಟು ಜನಸಂಖ್ಯೆ | | |
|---|---|---|---|---|---|---|
| | | | | ಒಟ್ಟು | ಗಂಡು | ಹೆಣ್ಣು |
| | | ಒ | ೧೦೦ | ೪೨,೪೮,೯೮೭ | ೨೧,೩೪,೭೫೪ | ೨೧,೧೪,೨೩೩ |
| | | ಗ್ರಾ | | ೩೪,೨೯,೭೯೧ | ೧೭,೨೩,೭೬೨ | ೧೭,೦೬,೦೨೯ |
| | | ನ | | ೮,೧೯,೧೯೬ | ೪,೧೦,೯೯೨ | ೪,೦೮,೨೦೪ |
| ೦೧ | ಅಡಿಯನ್ | ಒ | ೦.೦೧ | ೭೫೮ | ೩೭೩ | ೩೮೫ |
| | | ಗ್ರಾ | | ೨೨೯ | ೧೨೦ | ೧೦೯ |
| | | ನ | | ೫೨೯ | ೨೫೩ | ೨೭೬ |
| ೦೨ | ಬಾರ್ಡ್ | ಒ | ೦ | ೨೬೬ | ೧೩೯ | ೧೨೭ |
| | | ಗ್ರಾ | | ೮೧ | ೪೪ | ೩೭ |
| | | ನ | | ೧೮೫ | ೯೫ | ೯೦ |
| ೦೩ | ಬಾವಚ, ಬಾಮ್ಚ | ಒ | ೦.೦೨ | ೯೬೦ | ೪೮೧ | ೪೭೯ |
| | | ಗ್ರಾ | | ೭೮೫ | ೩೮೯ | ೩೯೬ |
| | | ನ | | ೧೭೫ | ೯೨ | ೮೩ |
| ೦೪ | ಭಿಲ್, ಭಿಲ್ ಗರಾಸಿಯ, ಡುಂಗ್ರಿ ಭಿಲ್, ಡುಂಗ್ರಿ ಗರಾಸಿಯ... | ಒ | ೦.೧೪ | ೬,೨೦೪ | ೩,೧೩೬ | ೩,೦೬೮ |
| | | ಗ್ರಾ | | ೩,೩೧೮ | ೧,೭೧೯ | ೧,೫೯೯ |
| | | ನ | | ೨,೮೮೬ | ೧,೪೧೭ | ೧,೪೬೯ |
| ೦೫ | ಚೆಂಚು, ಚೆಂಚುವಾರ್ | ಒ | ೦.೦೨ | ೯೫೪ | ೪೬೫ | ೪೮೯ |
| | | ಗ್ರಾ | | ೮೪೬ | ೪೧೧ | ೪೩೫ |
| | | ನ | | ೧೦೮ | ೫೪ | ೫೪ |
| ೦೬ | ಚೋಧರಾ | ಒ | ೦ | ೧೧೭ | ೭೨ | ೪೫ |
| | | ಗ್ರಾ | | ೩೮ | ೨೧ | ೧೭ |
| | | ನ | | ೭೯ | ೫೧ | ೨೮ |
| ೦೭ | ಡುಬ್ಲ, ಹಲ್ಪತಿ, ತಲವಿಯ | ಒ | ೦ | ೨೬೪ | ೧೪೩ | ೧೨೧ |
| | | ಗ್ರಾ | | ೧೫೫ | ೮೧ | ೭೪ |
| | | ನ | | ೧೦೯ | ೬೨ | ೪೭ |
| ೦೮ | ಗಾಮಿಟ್, ಗಾಮ್ಟ, ಗಾವಿಟ್, ಮಾವ್ಚಿ, ಪಡ್ವಿ, ವಾಳ್ವಿ | ಒ | ೦.೦೧ | ೫೧೬ | ೨೬೪ | ೨೫೨ |
| | | ಗ್ರಾ | | ೩೮೧ | ೧೯೬ | ೧೮೫ |
| | | ನ | | ೧೩೫ | ೬೮ | ೬೭ |
| ೦೯ | ಗೊಂಡ್, ನೈಯ್ಕಪೋಡ್, ರಾಜ್‌ಗೊಂಡ್ | ಒ | ೩.೭೨ | ೧,೫೮,೨೪೩ | ೮೦,೬೯೧ | ೭೭,೫೫೨ |
| | | ಗ್ರಾ | | ೧,೪೧,೬೭೮ | ೭೨,೨೦೮ | ೬೯,೪೭೦ |
| | | ನ | | ೧೬,೫೬೫ | ೮,೪೮೩ | ೮,೦೮೨ |
| ೧೦ | ಗೌಡಲು | ಒ | ೦.೨ | ೮,೬೧೭ | ೪,೨೮೨ | ೪,೩೩೫ |
| | | ಗ್ರಾ | | ೭,೭೧೮ | ೩,೮೦೪ | ೩,೯೧೪ |
| | | ನ | | ೮೯೯ | ೪೭೮ | ೪೨೧ |
| ೧೧ | ಹಕ್ಕಿಪಿಕ್ಕಿ | ಒ | ೦.೨೭ | ೧೧,೮೯೨ | ೬,೦೩೯ | ೫,೮೫೩ |
| | | ಗ್ರಾ | | ೯,೯೫೨ | ೫,೦೬೩ | ೪,೮೮೯ |
| | | ನ | | ೧,೯೪೦ | ೯೭೬ | ೯೬೪ |

| | | | | | | |
|---|---|---|---|---|---|---|
| ೧೨ | ಹಸಲರು | ಒ | ೦.೫೭ | ೨೪,೪೬೬ | ೧೧,೮೪೯ | ೧೨,೬೧೭ |
| | | ಗ್ರಾ | | ೨೩,೭೮೦ | ೧೧,೫೩೦ | ೧೨,೨೫೦ |
| | | ನ | | ೬೮೬ | ೩೧೯ | ೩೬೭ |
| ೧೩ | ಇರುಳರ್ | ಒ | ೦.೦೧ | ೭೦೩ | ೩೬೦ | ೩೪೩ |
| | | ಗ್ರಾ | | ೫೮೦ | ೨೯೬ | ೨೮೪ |
| | | ನ | | ೧೨೩ | ೬೪ | ೫೯ |
| ೧೪ | ಇರುಳಿಗ | ಒ | ೦.೨೪ | ೧೦,೨೫೯ | ೫,೨೬೭ | ೪,೯೯೨ |
| | | ಗ್ರಾ | | ೯,೭೦೧ | ೪,೯೬೯ | ೪,೭೩೨ |
| | | ನ | | ೫೫೮ | ೨೯೮ | ೨೬೦ |
| ೧೫ | ಜೇನು ಕುರುಬ | ಒ | ೦.೮೪ | ೩೬,೦೭೬ | ೧೭,೯೪೮ | ೧೮,೧೨೮ |
| | | ಗ್ರಾ | | ೩೫,೧೩೬ | ೧೭,೪೫೧ | ೧೭,೬೮೫ |
| | | ನ | | ೯೪೦ | ೪೯೭ | ೪೪೩ |
| ೧೬ | ಕಾಡು ಕುರುಬ | ಒ | ೦.೨೮ | ೧೧,೯೫೩ | ೫,೯೮೪ | ೫,೯೬೯ |
| | | ಗ್ರಾ | | ೮,೫೨೬ | ೪,೨೪೫ | ೪,೨೮೧ |
| | | ನ | | ೩,೪೨೭ | ೧,೭೩೯ | ೧,೬೮೮ |
| ೧೭ | ಕಮ್ಮಾರ (ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ, ಕೊಳ್ಳೇಗಾಲ ತಾಲೂಕಿನಲ್ಲಿ) | ಒ | ೦.೦೨ | ೯೪೯ | ೪೯೩ | ೪೫೬ |
| | | ಗ್ರಾ | | ೯೦೨ | ೪೭೩ | ೪೨೯ |
| | | ನ | | ೪೭ | ೨೦ | ೨೭ |
| ೧೮ | ಕಣಿಯನ್, ಕಣ್ಯನ್ (ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ) | ಒ | ೦ | ೪೧೩ | ೨೦೪ | ೨೦೯ |
| | | ಗ್ರಾ | | ೧೬೯ | ೭೯ | ೯೦ |
| | | ನ | | ೨೪೪ | ೧೨೫ | ೧೧೯ |
| ೧೯ | ಕಾಥೋಡಿ, ಕಾತಕರಿ, ಧೋರ್‌ಕಾಥೋಡಿ, ಧೋರ್ ಕಾತಕರಿ, ಸೋನ್ ಕಾಥೋಡಿ, ಸೋನ್ ಕಾತಕರಿ | ಒ | ೦ | ೨೭೪ | ೧೪೩ | ೧೩೧ |
| | | ಗ್ರಾ | | ೧೭೭ | ೯೨ | ೮೫ |
| | | ನ | | ೯೭ | ೫೧ | ೪೬ |
| ೨೦ | ಕಾಟ್ಟುನಾಯಕನ್ | ಒ | ೦ | ೧೬೮ | ೮೩ | ೮೫ |
| | | ಗ್ರಾ | | ೭೨ | ೩೨ | ೪೦ |
| | | ನ | | ೯೬ | ೫೧ | ೪೫ |
| ೨೧ | ಕೊಕಣಾ, ಕೊಕಣಿ, ಕುಕಣಾ | ಒ | ೦ | ೩೨ | ೧೫ | ೧೭ |
| | | ಗ್ರಾ | | ೨೧ | ೧೧ | ೧೦ |
| | | ನ | | ೧೧ | ೪ | ೭ |
| ೨೨ | ಕೋಳಿ ಧೋರ್, ಟೋಕ್ರೆ ಕೋಳಿ, ಕೊಲ್ಹಾ, ಕೊಲ್ಹಾ | ಒ | ೨.೬೪ | ೧,೧೨,೧೯೦ | ೫೭,೩೦೪ | ೫೪,೮೮೬ |
| | | ಗ್ರಾ | | ೯೯,೯೯೦ | ೫೧,೦೮೭ | ೪೮,೯೦೩ |
| | | ನ | | ೧೨,೨೦೦ | ೬,೨೧೭ | ೫,೯೮೩ |
| ೨೩ | ಕೊಂಡ ಕಾಪುಸ್ | ಒ | ೦.೧೭ | ೭,೪೩೮ | ೩,೯೮೮ | ೩,೪೫೦ |
| | | ಗ್ರಾ | | ೨.೪೭೭ | ೧.೨೬೦ | ೧.೨೧೭ |
| | | ನ | | ೪.೯೬೧ | ೨.೭೨೮ | ೨.೨೩೩ |
| ೨೪ | ಕೊರಗ | ಒ | ೦.೩೪ | ೧೪,೭೯೪ | ೭,೨೧೦ | ೭,೫೮೪ |
| | | ಗ್ರಾ | | ೯.೬೯೩ | ೪.೭೪೪ | ೪.೯೪೯ |
| | | ನ | | ೫.೧೦೧ | ೨.೪೬೬ | ೨.೬೩೫ |

| | | | | | | |
|---|---|---|---|---|---|---|
| ೨೫ | ಕೋಟ | ಒ | ೦ | ೧೨೧ | ೭೦ | ೫೧ |
| | | ಗ್ರಾ | | ೬೨ | ೩೪ | ೨೮ |
| | | ನ | | ೫೯ | ೩೬ | ೨೩ |
| ೨೬ | ಕೋಯ, ಭೀನೆ ಕೋಯ, ರಾಜ್ ಕೋಯ | ಒ | ೦ | ೩೬೫ | ೧೯೮ | ೧೭೨ |
| | | ಗ್ರಾ | | ೨೪೨ | ೧೨೬ | ೧೧೬ |
| | | ನ | | ೧೨೩ | ೬೭ | ೫೬ |
| ೨೭ | ಕುಡಿಯ, ಮೇಲಕುಡಿ | ಒ | ೦.೦೫ | ೨,೧೬೯ | ೧,೧೦೧ | ೧,೦೬೮ |
| | | ಗ್ರಾ | | ೨,೦೪೭ | ೧,೦೩೮ | ೧,೦೦೯ |
| | | ನ | | ೧೨೨ | ೬೩ | ೫೯ |
| ೨೮ | ಕುರುಬ (ಕೊಡಗು ಜಿಲ್ಲೆಯಲ್ಲಿ) | ಒ | ೦.೦೭ | ೩,೧೧೧ | ೧,೫೪೭ | ೧,೫೬೪ |
| | | ಗ್ರಾ | | ೨,೯೬೪ | ೧,೪೬೨ | ೧,೫೦೨ |
| | | ನ | | ೧೪೭ | ೮೫ | ೬೨ |
| ೨೯ | ಕುರುಮನ್ಸ್ | ಒ | ೦ | ೩೪೭ | ೧೮೩ | ೧೬೪ |
| | | ಗ್ರಾ | | ೧೦೧ | ೫೫ | ೪೬ |
| | | ನ | | ೨೪೬ | ೧೨೮ | ೧೧೮ |
| ೩೦ | ಮಹಾ ಮಲಸರ್ | ಒ | ೦ | ೩೬ | ೨೬ | ೧೦ |
| | | ಗ್ರಾ | | ೨೪ | ೧೬ | ೮ |
| | | ನ | | ೧೨ | ೧೦ | ೨ |
| ೩೧ | ಮಲೈಕುಡಿ | ಒ | ೦.೨೧ | ೯,೨೩೬ | ೪,೫೩೫ | ೪,೭೦೧ |
| | | ಗ್ರಾ | | ೯,೦೦೦ | ೪,೪೧೭ | ೪,೫೮೩ |
| | | ನ | | ೨೩೬ | ೧೧೮ | ೧೧೮ |
| ೩೨ | ಮಲಸರ್ | ಒ | ೦ | ೮೨ | ೪೦ | ೪೨ |
| | | ಗ್ರಾ | | ೪೧ | ೨೫ | ೧೬ |
| | | ನ | | ೪೧ | ೧೫ | ೨೬ |
| ೩೩ | ಮಲಯೇಕಂಡಿ | ಒ | ೦ | ೧೧೬ | ೬೧ | ೫೫ |
| | | ಗ್ರಾ | | ೧೦೧ | ೫೫ | ೪೬ |
| | | ನ | | ೧೫ | ೬ | ೯ |
| ೩೪ | ಮಲೇರು | ಒ | ೦.೦೧ | ೪೪೦ | ೨೨೭ | ೨೧೩ |
| | | ಗ್ರಾ | | ೨೧೮ | ೧೦೫ | ೧೧೩ |
| | | ನ | | ೨೨೨ | ೧೨೨ | ೧೦೦ |
| ೩೫ | ಮರಾಠ (ಕೊಡಗು ಜಿಲ್ಲೆಯಲ್ಲಿ) | ಒ | ೦.೦೭ | ೩,೩೯೬ | ೧,೬೪೫ | ೧,೭೫೧ |
| | | ಗ್ರಾ | | ೩,೧೮೮ | ೧,೫೩೭ | ೧,೬೫೧ |
| | | ನ | | ೨೦೮ | ೧೦೮ | ೧೦೦ |
| ೩೬ | ಮರಾಟಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ) | ಒ | ೧.೯೪ | ೮೨,೪೪೭ | ೪೦,೯೫೪ | ೪೧,೪೯೩ |
| | | ಗ್ರಾ | | ೭೦,೩೮೦ | ೩೫.೦೨೨ | ೩೫.೩೫೮ |
| | | ನ | | ೧೨,೦೬೭ | ೫.೯೩೨ | ೬,೧೩೫ |
| ೩೭ | ಮೇದ, ಮೇದಾರಿ, ಗೌರಿಗ, ಬುರುಡ, ಮೇದಾರ | ಒ | ೧.೦೩ | ೪೪,೧೬೦ | ೨೨,೧೦೦ | ೨೨,೦೬೦ |
| | | ಗ್ರಾ | | ೧೫.೧೯೩ | ೭.೫೯೪ | ೭.೫೯೯ |
| | | ನ | | ೨೮.೯೬೭ | ೧೪.೫೦೬ | ೧೪.೪೬೧ |

| | | | | | | |
|---|---|---|---|---|---|---|
| ೩೮ | ನೈಯ್ಕಡಾ, ನಾಯಕಾ, ಚೋಳಿವಾಲಾ ನಾಯಕಾ, ಕಪಾಡಿಯ ನಾಯಕಾ, ಮೋಟ ನಾಯಕಾ, ನಾನಾ ನಾಯಕಾ, | ಒ | ೭೭.೫೭ | ೩೨,೯೬,೩೫೪ | ೧೬,೫೬,೮೫೯ | ೧೬,೩೯,೪೯೫ |
| | | ಗ್ರಾ | | ೨೭,೩೬,೧೬೭ | ೧೩,೭೬,೦೩೩ | ೧೩,೬೦,೧೩೪ |
| | | ನ | | ೫,೬೦,೧೮೭ | ೨,೮೦,೮೨೬ | ೨,೭೯,೩೬೧ |
| ೩೯ | ಪಳ್ಳಿಯನ್ | ಒ | ೦ | ೨೨೬ | ೧೧೨ | ೧೧೪ |
| | | ಗ್ರಾ | | ೧೧೫ | ೫೪ | ೬೧ |
| | | ನ | | ೧೧೧ | ೫೮ | ೫೩ |
| ೪೦ | ಪಣಿಯನ್ | ಒ | ೦.೦೧ | ೪೯೫ | ೨೩೭ | ೨೫೮ |
| | | ಗ್ರಾ | | ೪೭೮ | ೨೨೯ | ೨೪೯ |
| | | ನ | | ೧೭ | ೮ | ೯ |
| ೪೧ | ಪಾರ್ಧಿ, ಅಡ್ವಿಚಿಂಚೇರ್, ಫಾನ್ಸೆ ಪಾರ್ಧಿ, ಹರಣ್‌ಶಿಕಾರಿ | ಒ | ೦.೨೫ | ೧೦,೭೪೬ | ೫,೪೧೫ | ೫,೩೩೧ |
| | | ಗ್ರಾ | | ೫,೨೨೨ | ೨,೬೮೯ | ೨,೫೩೩ |
| | | ನ | | ೫,೫೨೪ | ೨,೭೨೬ | ೨,೭೯೮ |
| ೪೨ | ಪಟೇಲಿಯ | ಒ | ೦ | ೫೭ | ೩೪ | ೨೩ |
| | | ಗ್ರಾ | | ೨೦ | ೧೫ | ೫ |
| | | ನ | | ೩೭ | ೧೯ | ೧೮ |
| ೪೩ | ರಾಠವಾ | ಒ | ೦ | ೪೫ | ೨೭ | ೧೮ |
| | | ಗ್ರಾ | | ೨೧ | ೧೩ | ೮ |
| | | ನ | | ೨೪ | ೧೪ | ೧೦ |
| ೪೪ | ಶೋಲಗ | ಒ | ೦ | ೫೨ | ೨೮ | ೨೪ |
| | | ಗ್ರಾ | | ೧೮ | ೧೦ | ೮ |
| | | ನ | | ೩೪ | ೧೮ | ೧೬ |
| ೪೫ | ಸೋಲಿಗರು | ಒ | ೦.೭೯ | ೩೩,೮೧೯ | ೧೬,೮೬೦ | ೧೬,೯೫೯ |
| | | ಗ್ರಾ | | ೩೦,೨೩೯ | ೧೫,೦೨೨ | ೧೫,೨೧೭ |
| | | ನ | | ೩,೫೮೦ | ೧,೮೩೮ | ೧,೭೪೨ |
| ೪೬ | ತೋಡ | ಒ | ೦ | ೧೪೭ | ೬೬ | ೮೧ |
| | | ಗ್ರಾ | | ೧೨೩ | ೫೫ | ೬೮ |
| | | ನ | | ೨೪ | ೧೧ | ೧೩ |
| ೪೭ | ವಾರ್ಲಿ | ಒ | ೦ | ೫೮ | ೩೮ | ೨೦ |
| | | ಗ್ರಾ | | ೩೪ | ೨೨ | ೧೨ |
| | | ನ | | ೨೪ | ೧೬ | ೮ |
| ೪೮ | ವಿಟೋಲಿಯ. ಕೊಟ್ವಾಲಿಯ, ಬರೋಡಿಯ | ಒ | ೦ | ೨೩ | ೮ | ೧೫ |
| | | ಗ್ರಾ | | ೧೧ | ೪ | ೭ |
| | | ನ | | ೧೨ | ೪ | ೮ |
| ೪೯ | ಯೆರವ | ಒ | ೦.೭೧ | ೩೦,೩೫೯ | ೧೪,೮೬೨ | ೧೫,೪೯೭ |
| | | ಗ್ರಾ | | ೨೯,೩೭೬ | ೧೪,೩೫೫ | ೧೫,೦೨೧ |
| | | ನ | | ೯೮೩ | ೫೦೭ | ೪೭೬ |
| ೫೦ | ಸಿದ್ದಿ (ಉತ್ತರ ಕನ್ನಡ ಜಿಲ್ಲೆಯಲ್ಲಿ) | ಒ | ೦.೨೪ | ೧೦,೪೭೭ | ೫,೧೬೪ | ೫,೩೧೩ |
| | | ಗ್ರಾ | | ೧೦,೧೪೧ | ೪,೯೯೮ | ೫,೧೪೩ |
| | | ನ | | ೩೩೬ | ೧೬೬ | ೧೭೦ |



ಸೋಮವಾರ ಪೇಟೆ ತಾಲೂಕು ದೊಡ್ಡಮಳ್ತೆ ಹಾಡಿಯ ಜೇನುಕುರುಬ ಕುಡಿಗಳು



ಸ್ವಂತವಾಗಿ ಇಟ್ಟಿಗೆಗಳನ್ನು ತಯಾರಿಸಿಕೊಂಡು ಪಾರಂಪರಿಕ ವಸತಿ ನಿರ್ಮಾಣದಲ್ಲಿ ನಿರತರಾಗಿರುವ ನಾಗರಹೊಳೆ ಹಾಡಿಯ ಲಿಂಗ ರವರು



ಬಿಲ್ಲು ಬೇಟೆಗಾಗಿ ಉರುಳೆ ತಯಾರಿಕೆಯಲ್ಲಿರುವ ಜೇನುಕುರುಬ ಕುಡಿಗಳು



ಕೊಳಂಗೇರಿ ಹಾಡಿಯ ಅಂಗನವಾಡಿ ಕೇಂದ್ರದ ಅವ್ಯವಸ್ಥೆ



ಮೊಮ್ಮಕ್ಕಳೊಂದಿಗೆ ಜೇನುಕುರುಬ ಮಹಿಳೆ ಗೋಣಿಮರೂರು ಹಾಡಿ



ಆನೆಗೆ ಆಹಾರ ನೀಡುತ್ತಿರುವ ಕಾವಾಡಿ ರಾಜು, ಮತ್ತಿಗೋಡು ಆನೆ ಕ್ಯಾಂಪ್



ಸೊಪ್ಪು ಸೋಸುತ್ತಿರುವ ಜೇನುಕುರುಬ ವೃದ್ಧೆ, ಮಾಲಂದಿ ಹಾಡಿ



ನಾರಾ ಗಾಸು ಸುಟ್ಟು ತಿನ್ನಲು ಅಣಿಗೊಳಿಸುತ್ತಿರುವ ಪಾರ್ವತಿ, ನಾಣಚ್ಚಿ ಗದ್ದೆ ಹಾಡಿ



ನಾರಾ ಗಾಸು ಅಗೆದು ತೆಗೆಯುತ್ತಿರುವ ರಮೇಶ, ನಾಗರಹೊಳೆ ಹಾಡಿ



ಸಾಂಪ್ರದಾಯಿಕ ಸಂಗೀತ ಪರಿಕರಗಳು



ಆನೆ ಅಂಕುಶದೊಂದಿಗೆ ಜೇನುಕುರುಬ ಬಾಲಕಿ, ಮತ್ತಿಗೋಡು ಆನೆ ಕ್ಯಾಂಪ್



ಸಾಂಪ್ರದಾಯಕ ಮಕ್ಕಳ ಆಟಿಕೆಗಳು



ಕುದುರೆ ಹಬ್ಬದಲ್ಲಿ ಕಡಜದ ಗೂಡನ್ನು ಹೊತ್ತಿರುವ ಜೇನುಕುರುಬ ಯುವಕ, ದೇವರಕಾಡು



ನಾಗರಹೊಳೆ ಹಾಡಿ



ಗೋಣಗದ್ದೆ ಹಾಡಿ ಅರಣ್ಯದಲ್ಲಿರುವ ಪಾರಂಪರಿಕ ಬುಡ ದೈವ



ಸೋಮವಾರಪೇಟೆ ತಾಲೂಕು ಪಂಚಾಯಿತಿ ಸದಸ್ಯೆ ಸೋಮಕ್ಕ ರೊಂದಿಗೆ ಬಸವನಹಳ್ಳಿ ಲ್ಯಾಂಪ್ಸ್ ಸಹಕಾರ ಸಂಘದ ಉಪಾಧ್ಯಕ್ಷ ಉದಯ ಕುಮಾರ್ ಮತ್ತು ಗಂಗಾಧರ ಅವರೊಂದಿಗೆ ಸಂಶೋಧಕಿ



ಬುಂಡೆ ಕರೆಯುವ ಶಾಸ್ತ್ರದ ಬಗ್ಗೆ ಮಾಹಿತಿ ನೀಡುತ್ತಿರುವ ಆನಗಟ್ಟೆ ಹಾಡಿಯ ಸಣ್ಣಪ್ಪ ನವರೊಂದಿಗೆ ಸಂಶೋಧಕಿ



ನಾಗರಹೊಳೆ ಹಾಡಿ ಕ್ಷೇತ್ರ ಕಾರ್ಯದಲ್ಲಿ ತಾಯಿ ಗಂಗಮ್ಮ  ಹಾಗೂ ಹಾಡಿಯ ಮುಖ್ಯಸ್ಥ ತಿಮ್ಮಣ್ಣ ರವರೊಂದಿಗೆ ಸಂಶೋಧಕಿ



ಕ್ಷೇತ್ರ ಕಾರ್ಯದಲ್ಲಿ ಮಾಹಿತಿ ಸಂಗ್ರಹಿಸುತ್ತಿರುವುದು. ಕೊಳಂಗೇರಿ ಹಾಡಿ



ಕ್ಷೇತ್ರ ಕಾರ್ಯದಲ್ಲಿ ಧರ್ಮ ರವರಿಂದ ಮಾಹಿತಿ ಪಡೆಯುತ್ತಿರುವ ಸಂಶೋಧಕಿ ಬಾಣಾವರ ಕಾಡ ಹಾಡಿ



ಕ್ಷೇತ್ರಕಾರ್ಯದಲ್ಲಿ ಗುಲಾಬಿ ಮತ್ತು ಗೌರಮ್ಮರವರೊಂದಿಗೆ ಸಂಶೋಧಕಿ, ಮಜ್ಜಿಗೆ ಹಳ್ಳ ಹಾಡಿ



ಜೇನುಕುರುಬ ಮಹಿಳೆ ಅಕ್ಕಮ್ಮ, ಆಲದ ಕಟ್ಟೆ ಹಾಡಿ